
ಕರ್ನಾಟಕ ಸರ್ಕಾರ

ವಿಜಯನಗರ ಅಧ್ಯಯನ

ಸಂಪುಟ-೧೮



ಸಂಪಾದಕರು

ಡಾ. ಸಿ.ಜಿ. ಬೆಟಸೂರಮಠ

ಡಾ. ಆರ್. ಗೋಪಾಲ್

ಟಿ.ಎಸ್. ಗಂಗಾಧರ

ಪ್ರಾಚ್ಯವಸ್ತು, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ

ಮೈಸೂರು

೨೦೧೪

ವಿಜಯನಗರ ಅಧ್ಯಯನ

ಸಂಪುಟ - 18

ಸಂಪಾದಕರು

ಡಾ. ಸಿ.ಜಿ. ಬೆಟಸೂರಮಠ

ಡಾ. ಆರ್. ಗೋಪಾಲ್

ಟಿ.ಎಸ್. ಗಂಗಾಧರ

ಪ್ರಾಚ್ಯವಸ್ತು, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ
ವಸ್ತುಪ್ರದರ್ಶನ ಆವರಣ, ಮೈಸೂರು - 570 010
2014

ವಿಜಯನಗರ ಅಧ್ಯಯನ
ಸಂಪುಟ – 18

ಪ್ರಕಾಶಕರು:
ಆಯುಕ್ತರು
ಪ್ರಾಚ್ಯವಸ್ತು, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ
ವಸ್ತುಪ್ರದರ್ಶನ ಆವರಣ, ಮೈಸೂರು – 570 010. ದೂರವಾಣಿ – 0821–2424673, 2424674

ಮೊದಲ ಮುದ್ರಣ 2014

ಪುಟಗಳು 248

ಪ್ರತಿಗಳು 500

ಬೆಲೆ: ₹ 200.00

ಮುಖಪುಟ ಚಿತ್ರ: ವಿಜಯ ವಿಠಲ ದೇವಾಲಯ

ಮುಖಪುಟ ವಿನ್ಯಾಸ: ಮೇಲುಕೋಟೆ ಎನ್. ಮುರಳೀಧರ್
ಅಕ್ಷರ ಜೋಡಣೆ: ಹೇಮಲತಾ, ಗೋಕುಲಂ, ಮೈಸೂರು
ಮುದ್ರಣ: ಸುಹಾಸ್ ಗ್ರಾಫಿಕ್ಸ್, ಬೆಂಗಳೂರು

✦✦✦✦✦✦✦

VIJAYANAGARA ADHYAYANA
Vol - 18

Publisher:
Commissioner
Department of Archaeology, Museums and Heritage
Exhibition Complex, Mysore - 570 010 Ph: 0821-2424673, 2424674

First Edition 2013

Copies: 500

Pages: 248

Price: ₹ 200.00

Cover Photo: Vijaya Vittala Temple

Cover Page Design: Melukote N. Muralidhar
DTP & Page Layout: Hemalatha, Gokulam, Mysore
Printed at: Suhaas Graphics, Bangalore

ಉಮಾಶ್ರೀ
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ,
ವಿಕಲಚೇತನರ ಮತ್ತು ಹಿರಿಯ ನಾಗರೀಕರ
ಸಬಲೀಕರಣ, ಕನ್ನಡ ಮತ್ತು ಸಂಸ್ಕೃತಿ ಹಾಗೂ
ಬೀದರ್ ಜಿಲ್ಲಾ ಉಸ್ತುವಾರಿ ಸಚಿವರು

ದೂರವಾಣಿ ಕಛೇರಿ : 22255282
22033469
ಕೊಠಡಿ ಸಂಖ್ಯೆ : 252, 2ನೇ ಮಹಡಿ
ವಿಧಾನಸೌಧ, ಬೆಂಗಳೂರು

ಸಂ.ಮಮಅಕಸಂಸ/2292/2013

ದಿನಾಂಕ : 26-12-2013

ಸಂದೇಶ

ವಿಜಯನಗರ, ವಿದ್ಯಾನಗರ ಎಂದು ಕರೆಸಿಕೊಂಡಿದ್ದ ಇಂದಿನ ಹಂಪಿಯ ಕರ್ನಾಟಕ ಸಾಮ್ರಾಜ್ಯದ ರಾಜಧಾನಿಯಾಗಿ ವಿದೇಶಿಯರ ಪ್ರವಾಸಿ ಸ್ವರ್ಗವಾಗಿ ಹೆಸರು ಮಾಡಿತ್ತಲ್ಲದೆ, ವಿದೇಶಿಯರ ಆಕರ್ಷಣೆಯ ಕೇಂದ್ರವಾಗಿ, ವಿಶ್ವಪರಂಪರೆಯ ತಾಣವಾಗಿ ರೂಪುಗೊಂಡಿದೆ. ಇದು ಸಾಮ್ರಾಜ್ಯವೊಂದರ ಸ್ಮಾರಕಗಳ ಸಾಂಸ್ಕೃತಿಕ ತಾಣವಾಗಿ ಇಂದು ಕಂಡುಬರುತ್ತಿದೆ. ಆದರೆ ಸಾಮ್ರಾಜ್ಯದಾದ್ಯಂತ ಹರಡಿದ್ದ ಸಂಸ್ಕೃತಿಯನ್ನು ಈ ಮಾಲಿಏಇ ಕಳೆದ ಹದಿನೆಂಟು ವರ್ಷಗಳಿಂದ ಸತತವಾಗಿ ಪ್ರಕಟಿಸುತ್ತಿರುವುದು ಭಾರತದ ಮತ್ತಾವ ರಾಜ್ಯದಲ್ಲಿಯೂ ನೆರವೇರದಿರುವುದು ವಿಶೇಷವೆನಿಸುತ್ತದೆ. ನಮ್ಮ ರಾಜ್ಯದ ಪ್ರಾಚ್ಯವಸ್ತು, ಸಂಗ್ರಹಾಲಯ ಮತ್ತು ಪರಂಪರೆ ಇಲಾಖೆಯು ಈ ಕಾರ್ಯವನ್ನು ಪ್ರಯತ್ನಪೂರ್ವಕವಾಗಿ ಕಳೆದ ಹದಿನೆಂಟು ವರ್ಷದಿಂದ ಮುಂದುವರೆಸಿಕೊಂಡು ಬರುತ್ತಿರುವುದು ಮಹತ್ವದ ವಿಚಾರವಾಗಿದೆ.

ಸಾಮ್ರಾಜ್ಯದ ಪ್ರಾರಂಭದಿಂದ ಆರಂಭ ಮಾಡಿ ಅವನತಿಯವರೆಗಿನ ಇತಿಹಾಸವನ್ನು ನೋಡಿದಾಗ ಅದರ ಅಗಾಧತೆ ಆ ಕಾಲದಲ್ಲಿ ಅವರು ಸಾಧಿಸಿದ್ದ ಭೌಗೋಳಿಕ ವ್ಯಾಪ್ತಿ, ಹೊರಡಿಸಿದ್ದ ಶಾಸನಗಳು, ಪ್ರೋತ್ಸಾಹಿಸಿದ್ದ ಧರ್ಮಗಳು, ಪಂಥಗಳು ಬಹುಭಾಷೆಯಲ್ಲಿ ರಚನೆಯಾದ ಸಾಹಿತ್ಯ ರಾಶಿ, ನಿರ್ಮಾಣಗೊಂಡ ಅಗ್ರಹಾರಗಳು, ದೇವಾಲಯಗಳು, ಪುನನಿರ್ಮಾಣಗೊಂಡ ನಗರಗಳು, ಪಟ್ಟಣಗಳು, ನೂತನವಾಗಿ ಪ್ರಾರಂಭಗೊಂಡ ನೀರಾವರಿ ವ್ಯವಸ್ಥೆ, ನಿರ್ಮಾಣಗೊಂಡ ಅಣೆಕಟ್ಟೆ, ಕಾಲುವೆಗಳು, ಕೆರೆ-ಬಾವಿ ಇತ್ಯಾದಿಗಳು ಸಾಮ್ರಾಜ್ಯವೊಂದರ ಸಮೃದ್ಧಿಯನ್ನು ಪ್ರತಿಬಿಂಬಿಸುತ್ತವೆ ಮತ್ತು ಪ್ರತಿನಿಧಿಸುತ್ತವೆ.

ಕರ್ನಾಟಕ ಸಾಮ್ರಾಜ್ಯವೆಂದು ಕರೆಸಿಕೊಂಡಿದ್ದ ನಾವು ವಿಜಯನಗರ ಸಾಮ್ರಾಜ್ಯವೆಂದು ಕರೆಯುತ್ತಿರುವ ಸಾಮ್ರಾಜ್ಯವು ಮೇಲೆ ಹೇಳಿದ ಎಲ್ಲಾ ಕ್ಷೇತ್ರಗಳಲ್ಲಿ ಮಹತ್ವದ ಸಾಧನೆಯನ್ನು ಮಾಡಿ ಮತ್ತೆ ಯಾರೂ ಸಾಧಿಸಲಾಗದ ಔನ್ನತ್ಯವನ್ನು ಸಾಧಿಸಿ ಖ್ಯಾತವಾಗಿದೆ. ಇಂತಹ ಸಾಮ್ರಾಜ್ಯವೊಂದರ ಬಗ್ಗೆ ಕಳೆದ ಹದಿನೆಂಟು ವರ್ಷದಿಂದ ಹೊರತರುತ್ತಿರುವ ಈ ಮಾಲಿಕೆಯು ಸಾಧಿಸಿರುವ ಪ್ರಗತಿ ಮತ್ತು ಅದು ಸಾಗಿ ಬಂದ ಮಾರ್ಗ ಮಹತ್ವವಾದುದು. ಅದನ್ನು ಸಾಧಿಸಲು ಅನುವಾದ ಇಲಾಖೆಯ ಎಲ್ಲ ಅಧಿಕಾರಿಗಳನ್ನು ಅಭಿನಂದಿಸಿ, ಪ್ರಸ್ತುತ ಸಂಪುಟವನ್ನು ತಾಂತ್ರಿಕ ಮತ್ತು ಆಡಳಿತಾತ್ಮಕ ವ್ಯತ್ಯಯಗಳ ನಡುವೆಯೂ ನಿಲ್ಲದಂತೆ ಗಮನಹರಿಸಿ ಆಸಕ್ತಿಯಿಂದ ಉತ್ತಮವಾಗಿ ಹೊರತಂದಿರುವ ಇಲಾಖೆಯ ಪ್ರಯತ್ನಕ್ಕೆ ಶುಭಾವಾಗಲೆಂದು ಹಾರೈಸುತ್ತೇನೆ.

ಈ ಸಂಪುಟವನ್ನು ಇತರ ಸಂಪುಟದಂತೆಯೇ ಇತಿಹಾಸಕ್ತರೂ ಮತ್ತು ಅಧ್ಯಯನಿಗಳೂ ಆದರದಿಂದ ಬರಮಾಡಿಕೊಳ್ಳಲೆಂದು ಹಾರೈಸುತ್ತೇನೆ.

(ಉಮಾಶ್ರೀ)

ಮುನ್ನುಡಿ

ವಿಜಯನಗರ ಸಾಮ್ರಾಜ್ಯ ಎರಡು ನೂರು ಮೂವತ್ತು ವರ್ಷಗಳ ಕಾಲ ತುಂಗಭದ್ರಾ ನದಿಯ ದಕ್ಷಿಣ ಭಾಗಗಳನ್ನು ಮುಸ್ಲಿಂ ಧಾಳಿಯಿಂದ ಯಶಸ್ವಿಯಾಗಿ ರಕ್ಷಿಸಿದ ಪ್ರಬಲ ರಾಜಕೀಯ ಶಕ್ತಿಯಾಗಿ ಮೆರೆದಿದೆ. ಇಂತಹ ಮಹಾ ಸಾಮ್ರಾಜ್ಯವೊಂದು ಅನಿರೀಕ್ಷಿತವಾಗಿ ಶತ್ರುಧಾಳಿಯಿಂದ ನಿರ್ನಾಮವಾಯಿತೆಂಬುದು ಐತಿಹಾಸಿಕ ಸತ್ಯ. ಈ ಘಟನೆಯಿಂದ ರಾಜಕೀಯ ಶತ್ರುತ್ವ, ರಾಜ್ಯದಾಹ, ಮತದ್ವೇಶ ಮುಂತಾದ ಅನಾಗರಿಕ ನಡವಳಿಕೆಗಳು ಯಾವರೀತಿಯಲ್ಲಿ ಶಾಂತಿಯುತ ನಾಗರಿಕ ಜೀವನವನ್ನು ನಾಶಪಡಿಸುತ್ತದೆ ಎಂಬ ಅಂಶ ವೇದ್ಯವಾಗುತ್ತದೆ. ಅನಾದಿಕಾಲದಿಂದ ನಿರಂತರವಾಗಿ ಮುಂದುವರೆಯುತ್ತಾ ಬಂದಿರುವ ಭಾರತೀಯ ಇತಿಹಾಸದಲ್ಲಿ ವಿಜಯನಗರ ಸಾಮ್ರಾಜ್ಯದ ಇತಿಹಾಸ ಒಂದು ಇತ್ತೀಚಿನ ಅಧ್ಯಾಯ. ವಿಜಯನಗರ ಸಾಮ್ರಾಜ್ಯ ತನ್ನ ಹಿರಿಮೆಯಿಂದಾಗಿ ಯೂರೋಪ್, ಏಷ್ಯ, ಚೀನಾ ಮುಂತಾದ ಭಾಗಗಳೊಂದಿಗೆ ನಿಕಟ ಸಂಪರ್ಕ ಹೊಂದಿತ್ತು. ಅಂತರರಾಷ್ಟ್ರೀಯ, ರಾಷ್ಟ್ರೀಯ ವ್ಯಾಪಾರ ವ್ಯವಹಾರಗಳು ದೈನಂದಿನ ವಿಷಯಗಳಾಗಿದ್ದವು. ವಿದೇಶದಿಂದ ವಿಜಯನಗರಕ್ಕೆ ಬರುವ ಪ್ರವಾಸಿಗರು, ವರ್ತಕರು, ಯಾತ್ರಿಕರು ಬಹಳವಾಗಿದ್ದರು. ಹೀಗಾಗಿ ವಿಜಯನಗರ ಸಾಮ್ರಾಜ್ಯ ಅಂತರ್ರಾಷ್ಟ್ರೀಯ ಖ್ಯಾತಿಯನ್ನು ಪಡೆದಿತ್ತು.

ಸಮಕಾಲೀನವಾಗಿ ಪ್ರಖ್ಯಾತವಾಗಿದ್ದ ವಿಜಯನಗರ ಸಾಮ್ರಾಜ್ಯ ಪ್ರಸ್ತುತ ನಾಶವಾಗಿದ್ದರೂ ಅದರ ಸಂಸ್ಕೃತಿಯ ಪಳೆಯುಳಿಕೆಗಳು ಸಾಮ್ರಾಜ್ಯದ ಉದ್ದಗಲಕ್ಕೂ ಕಾಣಬರುತ್ತಿವೆ. ಈ ಪಳೆಯುಳಿಕೆಗಳು ಬಹುರೂಪಿಯಾದದ್ದು ಹಾಗು ಬೃಹದ್ರೂಪಿಯಾದದ್ದು. ವಿಜಯನಗರದ ಅಧ್ಯಯನಕ್ಕೆ ವೈವಿಧ್ಯಮಯವಾದ ಸ್ವದೇಶೀ ಆಧಾರಗಳು, ವಿದೇಶೀ ಬರವಣಿಗೆಗಳು ಅಗಾಧಪ್ರಮಾಣದಲ್ಲಿ ದೊರಕುತ್ತವೆ. ಈ ಎಲ್ಲಾ ಆಕರಗಳ ಸಮಗ್ರ ಅಧ್ಯಯನ ಈಗ ನಮ್ಮ ಮುಂದೆ ಇರುವ ಸವಾಲಾಗಿದೆ. ಸುಮಾರು ಒಂದುನೂರು ವರ್ಷಗಳಿಗೂ ಮಿಗಿಲಾದ ಇತಿಹಾಸವುಳ್ಳ ವಿಜಯನಗರ ಅಧ್ಯಯನಸಂಶೋಧನಾ ಮಾಲೆಗೆ ಇನ್ನೂ ಬಹಳ ದೀರ್ಘ ಭವಿಷ್ಯವಿದೆ. ಪ್ರತಿದಿನವು ಒಂದಲ್ಲಾ ಒಂದು ರೀತಿಯ ಹೊಸವಸ್ತುಗಳು, ವಿಷಯಗಳು ವಿಜಯನಗರದ ಬಗ್ಗೆ ಹೊರಬರುತ್ತಲೇ ಇವೆ. ಹೀಗಾಗಿ ವಿಜಯನಗರದ ಬಗ್ಗೆ ಸಂಶೋಧನೆ, ಅಧ್ಯಯನಮಾಡುವ ವಿದ್ವಾಂಸರಿಗೆ ಈ ಕ್ಷೇತ್ರ ಒಂದು ಅಕ್ಷಯ ಪಾತ್ರೆ ಎನಿಸಿದೆ. ಆಳ ಇಳಿದಷ್ಟೂ ವಿಸ್ತರಿಸುತ್ತಾ ಹೋಗುವ ಐತಿಹಾಸಿಕ ವಿಷಯಗಳ ಅರ್ಣವ ಇದಾಗಿದೆ. ವಿಜಯನಗರದ ಬಗ್ಗೆ ಈಗ ತಿಳಿದಿರುವ ವಿಚಾರ, ತಿಳಿಯಬೇಕಾಗಿರುವ ಅಂಶಗಳ ಮುಂದೆ ತೀರಾ ಅಲ್ಪವೆಂದೇ ಎಲ್ಲಾ ವಿದ್ವಾಂಸರ ಅಭಿಪ್ರಾಯ

ವಿಜಯನಗರ ಇತಿಹಾಸ ಮತ್ತು ಸಂಸ್ಕೃತಿಯ ಆಳ, ಆಯಾಮಗಳನ್ನು ಅರಿತ ಕರ್ನಾಟಕ ರಾಜ್ಯ ಪ್ರಾಚ್ಯವಸ್ತು ಸಂಗ್ರಹಾಲಯ ಮತ್ತು ಪರಂಪರೆ ಇಲಾಖೆಯು ಸುಮಾರು ಎರಡು ದಶಕಗಳಿಂದ ವಿಜಯನಗರ ಅಧ್ಯಯನವನ್ನು ಪ್ರೋತ್ಸಾಹಿಸುವ ಸಲುವಾಗಿ ವಿವಿಧ ಪ್ರಯತ್ನಗಳನ್ನು ಮಾಡುತ್ತಾ ಬಂದಿದೆ. ವಾರ್ಷಿಕ ವಿಚಾರ ಸಂಕಿರಣಗಳನ್ನು ಏರ್ಪಡಿಸಿ, ವಿದ್ವಾಂಸರನ್ನು ಆಮಂತ್ರಿಸಿ, ಹೊಸ ಹೊಸ ಸಂಶೋಧನಾ ಪ್ರಬಂಧಗಳನ್ನು ಬರೆಯಲು ಪ್ರೇರೇಪಿಸಿ, ಅವುಗಳೆಲ್ಲವನ್ನು ವರ್ಷ–ವರ್ಷಾನುಗುಣವಾಗಿ ಸಂಪುಟೀಕರಿಸಿ, ಪ್ರಕಟಿಸುವ ಜವಾಬ್ದಾರಿಯನ್ನು ಹೊರುತ್ತಾ ಬರುತ್ತಿದೆ. ಈವರೆಗೆ ಹದಿನೇಳು ಸಂಪುಟಗಳು ಪ್ರಕಟಗೊಂಡು ಹದಿನೆಂಟನೇ ಸಂಪುಟ ಈಗ ಪ್ರಕಟಣೆಗೆ ಸಿದ್ದವಾಗಿದೆ. ಪ್ರತಿಯೊಂದು ಸಂಪುಟದಲ್ಲೂ ನಾಡಿನ, ದೇಶೀಯ ಹಾಗೂ ವಿದೇಶೀಯ ವಿದ್ವಾಂಸರುಗಳಿಂದ ಬರೆಯಲ್ಪಟ್ಟಿರುವ ಸಂಶೋಧನಾ ಲೇಖನಗಳು ಪ್ರಕಟಗೊಂಡಿವೆ.

ವಿಜಯನಗರ ಸಾಮ್ರಾಜ್ಯ, ಅದರ ಕಾಲ, ಸಂಸ್ಕೃತಿ, ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ವ್ಯವಹಾರಗಳು ವಾಸ್ತುಶಿಲ್ಪ ಕೃತಿಗಳು, ಧಾರ್ಮಿಕ, ಸಾಹಿತ್ಯಕ ವಿಷಯಗಳು ಅಲ್ಲದೆ ಇವುಗಳೆಲ್ಲವುಗಳಿಗೂ ಒಂದಲ್ಲಾ ಒಂದು ರೀತಿಯಲ್ಲಿ ಸಂಬಂಧಿಸಿದ ಹೊಸ ವಿಚಾರಗಳು, ಸಂಶೋಧನೆಗಳು, ವಿವರಣೆಗಳು, ವಾಖ್ಯಾನಗಳು, ಅಭಿಪ್ರಾಯಗಳು ಇತ್ಯಾದಿ, ಈ ಸಂಪುಟಗಳಲ್ಲಿವೆ. ಸರಾಸರಿ ಸುಮಾರು ಐವತ್ತಕ್ಕೂ ಹೆಚ್ಚು ಲೇಖನಗಳನ್ನು ಹೊಂದಿರುವ ಈ ಎಲ್ಲಾ ಸಂಪುಟಗಳ ಲೇಖನಗಳ ಸಂಖ್ಯೆ

ಸುಮಾರು ಒಂದು ಸಾವಿರ ಮುಟ್ಟಬಹುದು ಅಥವಾ ಮೀರಬಹುದು. ಈ ಲೇಖನಗಳ ಸಂಖ್ಯೆ ಕೇವಲ ವಿಜಯನಗರ ಅಧ್ಯಯನಕ್ಕೆ ಮಾತ್ರ ಸೀಮಿತವಾದದ್ದು ಎಂಬ ಅಂಶ ಗಮನೀಯ. ಇವಲ್ಲದೆ ಬೇರೆ ಬೇರೆ ಸಂಪುಟಗಳಲ್ಲಿ, ನಿಯತಕಾಲಿಕೆಗಳಲ್ಲಿ, ಭಾಷೆಗಳಲ್ಲಿ, ರಾಜ್ಯಗಳಲ್ಲಿ, ದೇಶಗಳಲ್ಲಿ ಪ್ರಕಟಗೊಂಡಿರುವ ಲೇಖನಗಳಿಗೆ ಲೆಕ್ಕವಿಲ್ಲ ಇಷ್ಟು ಅಗಾಧಪ್ರಮಾಣದ ಸಂಶೋಧನಾ ಲೇಖನಗಳು ಭಾರತದ ಯಾವುದೇ ಸಾಮ್ರಾಜ್ಯದ ಬಗ್ಗೆ ಪ್ರಕಟವಾಗಿರುವುದು ವಿರಳವೇ ಸರಿ.

ಅಪಾರ ಸಂಖ್ಯೆಯ ಸಂಶೋಧನಾ ಲೇಖನಗಳ ಮೂಲಕ ವಿಜಯನಗರ ಸಾಮ್ರಾಜ್ಯದ ಇತಿಹಾಸ ಸಂಸ್ಕೃತಿಯನ್ನು ವಿದ್ವಾಂಸರು ಪ್ರಸ್ತುತ ಪಡಿಸಿದ್ದರೂ ಎಲ್ಲಾ ಸಂಶೋಧಕರ ಏಕಕಂಠದ ಅಭಿಪ್ರಾಯವೆಂದರೆ, “ವಿಜಯನಗರದ ಬಗ್ಗೆ ಈಗ ನಾವು ತಿಳಿದಿರುವುದು ಅತ್ಯಲ್ಪ, ತಿಳಿಯಬೇಕಾಗಿರುವುದು ಇನ್ನೂ ಅಗಾಧವಾಗಿದೆ” ಎಂದೇ. ಇಷ್ಟು ಬೃಹತ್ತಾದ ವಿಸ್ತೀರ್ಣ, ವ್ಯಾಪ್ತಿ, ಆಯಾಮಗಳನ್ನು ಹೊಂದಿರುವ ವಿಜಯನಗರ ಅಧ್ಯಯನವನ್ನು ಮಾಡಲು ಹೊರಟಿರುವ ನಮ್ಮ ಪ್ರಯತ್ನ, ಮಹಾಕವಿ ಕಾಳಿದಾಸನ ಉಕ್ತಿಯಂತೆ "ಒಂದು ಸಣ್ಣ ತೆಪ್ಪದ ಮೇಲೆ ಕುಳಿತು ಮಹಾಸಾಗರವನ್ನು ದಾಟಲು ಪ್ರಯತ್ನಿಸಿದಂತೆ".

(ತಿತೀರ್ಷುರ್ದುಸ್ತರಂ ಮೋಹಾದುಡುಪೇನಾಸ್ಮಿ ಸಾಗರಂ). ಆದರೂ ನಾವು ಮಾತ್ರ ನಮ್ಮ ಪ್ರಯತ್ನವನ್ನು ನಿಲ್ಲಿಸಬಾರದು, ನಿಲ್ಲದಂತೆ ನೋಡಿಕೊಳ್ಳಬೇಕು. ಯುವ ಹಾಗೂ ಉತ್ಸಾಹೀ ಸಂಶೋಧಕರನ್ನು ತಯಾರಿಸಬೇಕು ಮತ್ತು ಪ್ರೋತ್ಸಾಹಿಸಬೇಕು. ಆಗ ವಿಜಯನಗರದ ಸಂಶೋಧನೆಗೆ ಹೆಚ್ಚು ವ್ಯಾಪ್ತಿ ಅರ್ಥ ಆಯಾಮ ಬಂದೊದಗುತ್ತದೆ. ಇದಲ್ಲದೆ ನಾವು ಪ್ರಸ್ತುತ ನಡೆಸುತ್ತಿರುವ ಕೆಲವು ಸಂಶೋಧನಾ ಮಾರ್ಗ ಹಾಗೂ ವಿಧಾನಗಳನ್ನು ಕಾಲ, ವೈಜ್ಞಾನಿಕ ಪ್ರಗತಿಗೆ ಅನುಗುಣವಾಗಿ ಬದಲಿಸಿಕೊಳ್ಳಬೇಕು. ಅವುಗಳಲ್ಲಿ ಒಂದನ್ನು ಮಾತ್ರ ನಾನು ಇಲ್ಲಿ ಉದಹರಿಸ ಬಯಸುತ್ತೇನೆ. ವಿಜಯನಗರ ವಾಸ್ತು ಅಧ್ಯಯನದ ವಿಚಾರವಾಗಿ ಹೇಳುವುದಾದರೆ ನಾವು ಈಗ ಅನುಸರಿಸುತ್ತಿರುವ ಮಾರ್ಗ ಹಿಂದಿನ ಪಾಶ್ಚಾತ್ಯ ವಿದ್ವಾಂಸರು ತಿಳಿಯಪಡಿಸಿದ ಅಥವಾ ಅನುಸರಿಸಿದ ಮಾರ್ಗ. ಇದು ತಪ್ಪಲ್ಲದಿದ್ದರೂ ಅಸಮರ್ಪಕ ಎಂಬುದಂತೂ ಸತ್ಯ. ಹಿಂದೂ ವಾಸ್ತು ಮತ್ತು ಶಿಲ್ಪಕಲೆಗಳನ್ನು ಹಿಂದೂ ಗ್ರಂಥಗಳು ನಿಷ್ಕರ್ಷೆಮಾಡಿ ರಚಿಸಿದ ರೀತಿಯಲ್ಲಿ ನಾವು ಅಧ್ಯಯನ ಮಾಡಬೇಕೇ ವಿನಃ ಪಾಶ್ಚಾತ್ಯ ವಿಧಾನದಿಂದಲ್ಲ. ಹಿಂದೂ ದೇವಾಲಯಗಳ ವರ್ಣನೆಗೆ ಹಿಂದೂ ಪದಸೂಚಿ ಮಾರ್ಗದರ್ಶಿಯಾಗಬೇಕೇ ವಿನಃ ಪಾಶ್ಚಾತ್ಯ ಪದ ಪುಂಜಗಳಲ್ಲ ದೇಸೀ ವಿಧಾನದಿಂದ ನಾವು ಹಿಂದೂ ವಾಸ್ತುವಿನ ಮೂಲ ಉದ್ದೇಶ, ಅರ್ಥ, ಮತ್ತು ನಿರ್ಮಾಣ ವಿಧಾನಗಳನ್ನು, ವೈವಿಧ್ಯತೆಗಳನ್ನು ಸಮರ್ಪಕವಾಗಿ ತಿಳಿಯಬಹುದು, ಇತರರಿಗೆ ತಿಳಿಯ ಪಡಿಸಬಹುದು.

ಈ ಪ್ರಯತ್ನವನ್ನೇ ರಾಜ್ಯದ ಪ್ರಾಚ್ಯವಸ್ತು ಸಂಗ್ರಹಾಲಯ ಮತ್ತು ಪರಂಪರೆ ಇಲಾಖೆ ನಿರಂತರವಾಗಿ ಮಾಡಿಕೊಂಡು ಬರುತ್ತಿದೆ. ಪ್ರಾಚ್ಯವಸ್ತು ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಗೆ ಮುಖ್ಯ ಆಯುಕ್ತರು ಬರುತ್ತಿರುತ್ತಾರೆ, ಬದಲಾಗುತ್ತಿರುತ್ತಾರೆ. ಪ್ರಸ್ತುತ ಇಲಾಖೆಯ ಮುಖ್ಯ ಆಯುಕ್ತರಾಗಿರುವ ಶ್ರೀ ಡಾ. ಸಿ.ಜಿ. ಬೆಟಸೂರಮಠ ರವರು ಇಲಾಖೆಯ ಎಲ್ಲಾ ಶೈಕ್ಷಣಿಕ ಕಾರ್ಯಕ್ರಮಗಳನ್ನು ಪ್ರೋತ್ಸಾಹಿಸುತ್ತಿರುವುದಲ್ಲದೆ ಸಕ್ರಿಯವಾಗಿ ಭಾಗವಹಿಸುತ್ತಾ ಬಂದಿದ್ದಾರೆ. ಆಯುಕ್ತರುಗಳ ದಕ್ಷ ಮಾರ್ಗದರ್ಶನದಲ್ಲಿ, ಪ್ರೋತ್ಸಾಹದಲ್ಲಿ ಡಾ.ಆರ್. ಗೋಪಾಲ್ ಮತ್ತು ಶ್ರೀ ಟಿ.ಎಸ್. ಗಂಗಾಧರ್ ರವರು ಛಲಬಿಡದೆ ವಿಜಯನಗರ ವಿಚಾರಸಂಕಿರಣವನ್ನು ಅನೇಕ ವರ್ಷಗಳಿಂದ ನಡೆಸಿಕೊಂಡು ಬರುತ್ತಿರುವುದು ಸಂತೋಷದ ಸಂಗತಿ. ಇಲಾಖೆಯ ನಿರ್ದೇಶನದಲ್ಲಿ ಪ್ರಕಟಗೊಂಡಿರುವ ಎಲ್ಲಾ ವಿಜಯನಗರ ಅಧ್ಯಯನ ಸಂಪುಟಗಳು ಸವಿವರವಾಗಿ, ಸಚಿತ್ರವಾಗಿ, ಸುಂದರವಾಗಿ ಪ್ರಕಟವಾಗಿವೆ. ಈ ಸಮಯದಲ್ಲಿ ಸಂಪುಟ ಪ್ರಕಟಣೆಗೆ ಸಂಬಂಧಿಸಿದವರೆಲ್ಲರನ್ನು ನಾನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ. ಹಾಗೂ ಇದೇ ರೀತಿಯ ವಿಚಾರ ಸಂಕಿರಣಗಳು ನಿರಂತರ ನಡೆಯಲಿ ಸಂಶೋಧನಾ ಲೇಖನಗಳು ಪ್ರಸ್ತುತವಾಗಲಿ ಮತ್ತು ಎಲ್ಲಾ ಲೇಖನಗಳೂ ಆಯಾ ವರ್ಷದ ಸಂಪುಟಗಳಲ್ಲಿ ಪ್ರಕಟವಾಗಲಿ ಎಂದು ಹಾರೈಸುತ್ತೇನೆ.

ಎಂ. ಎಸ್. ಕೃಷ್ಣಮೂರ್ತಿ
ನಿವೃತ್ತ ಪ್ರೊಫೆಸರ್ ಮತ್ತು ಪ್ರೊಫೆಸರ್ಎಮೆರಿಟಸ್
ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

ಪ್ರಸ್ತಾವನೆ

ವಿಜಯನಗರ ಅಧ್ಯಯನ ಮಾಲಿಕೆ ಪ್ರಾರಂಭವಾಗಿ ಹದಿನೆಂಟು ಸಂವತ್ಸರಗಳು ತುಂಬುತ್ತಿದೆ. ಅಲ್ಲದೆ ಕರ್ನಾಟಕ ಸಾಮ್ರಾಜ್ಯದ ಬಗೆಗಿನ ಅಧ್ಯಯನ ಪ್ರಾರಂಭವಾಗಿ ಶತಮಾನವೇ ಕಳೆದಿದ್ದರೂ ಸಾಮ್ರಾಜ್ಯದ ಬಗೆಗಿನ ಅಧ್ಯಯನ, ಸಂಶೋಧನೆ, ಹೊಸ ಆವಿಷ್ಕಾರಗಳಿಗೆ ಆಸ್ಪದವಿಲ್ಲವೆಂದು ಹೇಳಲು ಸಾಧ್ಯವಿಲ್ಲದರ ಮಟ್ಟಿಗೆ ಇಂದಿಗೂ ಹಲವಾರು ನೂತನ ಶಾಸನಗಳು, ದೇವಾಲಯಗಳು, ಸ್ಮಾರಕಗಳು ಮತ್ತು ನಾಣ್ಯಗಳು ವರದಿಯಾಗುತ್ತಲೇ ಇವೆ. ಇವುಗಳ ಅಧ್ಯಯನ ಮತ್ತು ವಿಮರ್ಷೆ ಸಹ ಮುಂದುವರಿಯುತ್ತಿದೆ. ಇದು ಸಾಮ್ರಾಜ್ಯವೊಂದರ ವ್ಯಾಪ್ತಿ ಮತ್ತು ಅದು ಸಾಧಿಸಿದ್ದರ ಮಹತ್ವವನ್ನು ಅನಾವರಣಮಾಡುತ್ತದೆ. ಇಂತಹ ಸಾಮ್ರಾಜ್ಯವೊಂದರ ಇತಿಹಾಸ, ಧರ್ಮ, ಪರಂಪರೆ, ಜಾನಪದ ಮುಂತಾದುವನ್ನು ಜನಸಾಮಾನ್ಯರಿಗೆ ತಿಳಿಸುವ ಮಹತ್ವದ ಉದ್ದೇಶದೊಂದಿಗೆ ಕರ್ನಾಟಕ ಸಾಮ್ರಾಜ್ಯದ ರಾಜಧಾನಿಯಾಗಿ ಮೆರೆದ ಅಂದಿನ ವಿಜಯನಗರ ಅಥವಾ ವಿದ್ಯಾನಗರ ಅಂದರೆ ಇಂದಿನ ಹಂಪೆಯಲ್ಲಿ ಕರ್ನಾಟಕ ಸರ್ಕಾರವು ಹಂಪಿ ಉತ್ಸವವನ್ನು ಆಚರಿಸಲು ಉದ್ದೇಶಿಸಿತು. ಇದರ ಪ್ರತಿಫಲವಾಗಿ ಇಂದು ಹಂಪಿ ವಿಶ್ವದ ಪ್ರವಾಸಿತಾಣಗಳಲ್ಲಿ ಮಹತ್ವದ ಮತ್ತು ಅಗ್ರಮಾನ್ಯ ತಾಣವಾಗಿ ರೂಪುಗೊಂಡಿದೆ. ಅಲ್ಲದೆ ಸಹಸ್ರಾರು ವಿದೇಶಿಯರು ಪ್ರತಿವರ್ಷ ಇಲ್ಲಿನ ಸ್ಮಾರಕಗಳ ವೀಕ್ಷಣೆಗೆ ಆಗಮಿಸುವಂತಾಗಿದೆ.

ಇದೇ ಹಿನ್ನೆಲೆಯಲ್ಲಿ ರಾಜ್ಯ ಪುರಾತತ್ವ, ವಸ್ತುಸಂಗ್ರಹಾಲಯ ಮತ್ತು ಪರಂಪರೆ ಇಲಾಖೆಯು ಹದಿನೆಂಟು ವರ್ಷಗಳ ಹಿಂದೆ ಸಾಮ್ರಾಜ್ಯದ ಬಗೆಗಿನ ಅಧ್ಯಯನವನ್ನು ಮತ್ತು ಸಂಶೋಧನೆಯನ್ನು ಜನರ ಮುಂದಿಡಲು ವಿಜಯನಗರ ಅಧ್ಯಯನ ಮಾಲಿಕೆಯನ್ನು ಪ್ರಾರಂಭಿಸಿತು. ಇಂದು ದೇಶೀಯ ವಿದ್ವಾಂಸರು ಮತ್ತು ಸ್ಥಳೀಯರಲ್ಲಿ ಸಾಮ್ರಾಜ್ಯದ ಸ್ಮಾರಕಗಳನ್ನು ಸಂರಕ್ಷಿಸುವ ಮತ್ತು ಅಧ್ಯಯನ ಮಾಡುವ ಪ್ರಜ್ಞೆ ಜಾಗೃತವಾಗಿರುವುದರ ಮಾನದಂಡವಾಗಿ ರೂಪುಗೊಂಡಿದೆ.

ಕಳೆದ ಸಾಲಿನಲ್ಲಿ ಆಡಳಿತಾತ್ಮಕ ಕಾರಣಗಳಿಂದಾಗಿ ಹಂಪಿ ಉತ್ಸವವನ್ನು ನೆರವೇರಿಸಲಾಗಲಿಲ್ಲ. ಇದೇ ಸಂದರ್ಭಲ್ಲಿ ನೆರವೇರುವ ಈ ಮಾಲಿಕೆಯ ವಿಚಾರಸಂಕಿರಣವನ್ನು ನೆರವೇರಿಸಲು ಸಾಧ್ಯವಾಗಲಿಲ್ಲ.

ಇಲಾಖೆಯು ಕರ್ನಾಟಕ ಸಾಮ್ರಾಜ್ಯದ ಅಧ್ಯಯನದಲ್ಲಿ ಆಗಿರುವ ಪ್ರಗತಿಯನ್ನು ವಿವಿಧ ಆಯಾಮಗಳಲ್ಲಿ ಅಧ್ಯಯನ ಮಾಡುತ್ತಿರುವ ವಿದ್ವಾಂಸರನ್ನು ಪ್ರತಿವರ್ಷವೂ ಈ ವಿಚಾರ ಸಂಕಿರಣಕ್ಕೆ ಆಹ್ವಾನಿಸುವ ಸಂಪ್ರದಾಯ ಹೊಂದಿದೆ. ಇದೇ ಸಂಪ್ರದಾಯವನ್ನು ಅನುಸರಿಸಿ ಪ್ರಸ್ತುತ ಮಾಲಿಕೆ ನಿಲ್ಲಬಾರದೆಂಬ ಸದಾಶಯದೊಂದಿಗೆ ತಜ್ಞರಿಗೆ ತಮ್ಮ ಇತ್ತೀಚಿನ ಸಂಶೋಧನೆಯನ್ನು ಮಾಲಿಕೆಯಲ್ಲಿ ಪ್ರಕಟಿಸಲು ಕಳುಹಿಸಿಕೊಡಲು ಕೋರಿಕೊಳ್ಳಲಾಯಿತು. ಅದಕ್ಕೆ ಸ್ಪಂಧಿಸಿದ ಮೂವತ್ತಕ್ಕೂ ಹೆಚ್ಚು ವಿದ್ವಾಂಸರು ತಮ್ಮ ಸಂಶೋಧನೆಯ ಸಾರವನ್ನು ಮಾಲಿಕೆಯಲ್ಲಿ ಪ್ರಕಟಿಸಲು ಲೇಖನ ರೂಪದಲ್ಲಿ ಕಳುಹಿಸಿರುತ್ತಾರೆ.

ಪ್ರಸ್ತುತ ಸಂಪುಟದಲ್ಲಿ ಅಡಕವಾಗಿರುವ ಲೇಖನಗಳು ಹೊಸ ಶಾಸನಗಳು, ಪರಿಷ್ಕೃತ ಹೊಸ ಶಾಸನ ಪಾಠಗಳು, ಶಾಸನಾಧ್ಯಯನಗಳು, ಸಾಮ್ರಾಜ್ಯದ ಉದಯದ ಜಿಜ್ಞಾಸೆ, ದೇವಾಲಯಗಳು ಮತ್ತು ಅವುಗಳ ವಿಮರ್ಶೆ, ಸಾಮಾಜಿಕ ಮತ್ತು ಧಾರ್ಮಿಕ ವಿಷಯಗಳನ್ನು ಆಧರಿಸಿದ ಲೇಖನಗಳನ್ನೊಳಗೊಂಡು ಅತ್ಯುತ್ತಮ ಸಂಪುಟವಾಗಿ ರೂಪುಗೊಂಡಿದೆ. ವಿಚಾರಸಂಕಿರಣ ನಡೆಯಲಿಲ್ಲವೆಂಬ ಕೊರಗು ಕಾಡುತ್ತದೆಯೇ ಹೊರತು ವಿಷಯ ವೈವಿಧ್ಯತೆಯಲ್ಲಿ ಸಂಪುಟ ನೂತನವಾಗಿ ಮೂಡಿಬಂದಿದೆ. ವಿದ್ವಾಂಸರು ಒಂದೆಡೆ ಸೇರಿ ಚಿಂತನ–ಮಂಥನ ನಡೆಸಿ ನೂತನ ವಿಷಯಗಳನ್ನು ಚರ್ಚಿಸಿ ವಿದ್ವಾಂಸರಿಗೆ, ಸಾಮಾನ್ಯರಿಗೆ ಜ್ಞಾನವನ್ನು ವರ್ಗಾಯಿಸಲಾಗಲಿಲ್ಲವೆಂಬ ಕೊರಗನ್ನು ಈ ಲೇಖನಗಳು ನೀಗಿಸಿವೆ. ಅಲ್ಲದೆ ಈ ಎಲ್ಲ ಲೇಖನಗಳು ಅತ್ಯಂತ ಮಹತ್ವದ ವಿಷಯಗಳನ್ನು ಒಳಗೊಂಡು ವಿಚಾರಪ್ರದವಾದ ಸಂಪುಟವಾಗಿ ಮೂಡಿಬರುಲು

ಸಹಕಾರಿಯಾಗಿದೆ. ಹಾಗಾಗಿ ವಿಜಯನಗರ ಅಧ್ಯಯನ ಮಾಲಿಕೆಯ ಪ್ರಸ್ತುತ ಸಂಪುಟವು ಈ ಮೇಲೆ ಉಲ್ಲೇಖಿಸಿದ ವಿಷಯಗಳನ್ನು ಆಧರಿಸಿದ ಮೂವತ್ತಕ್ಕೂ ಹೆಚ್ಚು ಲೇಖನಗಳನ್ನು ಅಡಕಮಾಡಿಕೊಂಡು ಸಂಗ್ರಹಯೋಗ್ಯವಾಗಿ ಮೂಡಿಬಂದಿದೆ.

ಪ್ರಸ್ತುತ ಸಂಪುಟವನ್ನು ಸಂಪಾದಿಸಿ ಹೊರತರುವಲ್ಲಿ ಇಲಾಖೆಯ ಅಧಿಕಾರಿಗಳು ಹಾಗೂ ಹಲವಾರು ವಿದ್ವಾಂಸರು ಸಹಕರಿಸಿರುತ್ತಾರೆ. ಅವರೆಲ್ಲರ ಸಹಕಾರ ಮತ್ತು ಸಹಾಯದಿಂದಾಗಿ ಈ ಸಂಪುಟ ಅತ್ಯಂತ ಆಕರ್ಷಕವಾಗಿ ರೂಪುಗೊಂಡಿದೆ. ಈ ಗ್ರಂಥವನ್ನು ಹೊರತರಲು ಕನ್ನಡ ಮತ್ತು ಸಂಸ್ಕೃತಿ ಹಾಗೂ ವಾರ್ತಾ ಇಲಾಖೆಯ ಕಾರ್ಯದರ್ಶಿಗಳಾದ ಶ್ರೀ ಕೆ.ಆರ್. ನಿರಂಜನ್, ಭಾ.ಆ.ಸೇ.ರವರು ಪ್ರೋತ್ಸಾಹಿಸಿರುತ್ತಾರೆ. ಅವರಿಗೆ ಈ ಸಂದರ್ಭದಲ್ಲಿ ಮನಃಪೂರ್ವಕವಾಗಿ ವಂದನೆಗಳನ್ನು ಸಲ್ಲಿಸುತ್ತೇನೆ. ನಮ್ಮ ಇಲಾಖೆಯ ಹಿಂದಿನ ಆಯುಕ್ತರುಗಳಾಗಿದ್ದ ಶ್ರೀಯುತ ಕೆ.ಆರ್. ರಾಮಕೃಷ್ಣ ಮತ್ತು ಶ್ರೀಯುತ ವಸ್ತ್ರದ್‌ರವರು ಹಾಗೂ ಇಂದಿನ ಆಯುಕ್ತರಾಗಿರುವ ಡಾ॥ ಬೆಟ್‌ಸೂರ್‌ಮಠರವರು ಅಪಾರವಾದ ಸಹಕಾರ ನೀಡಿರುತ್ತಾರೆ. ಅವರುಗಳು ನೀಡಿರುವ ಸಹಕಾರಕ್ಕೆ ಮತ್ತು ಮಾರ್ಗದರ್ಶನಕ್ಕೆ ಋಣಿಯಾಗಿದ್ದೇನೆ.

ಕರಡು ತಿದ್ದುವ ಕಾರ್ಯದಲ್ಲಿ ಮೈಸೂರು ವಿಶ್ವವಿದ್ಯಾಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಭಾಷಾಂತರಕಾರರಾಗಿ ಕಾರ್ಯನಿರ್ವಹಿಸಿ ನಿವೃತ್ತರಾಗಿರುವ ಶ್ರೀಯುತ ಎಸ್.ಎನ್. ಶಾರದಾ ಪ್ರಸಾದ್‌ರವರು ಮತ್ತು ಮೈಸೂರಿನ ಡಾ. ಲ.ನ. ಸ್ವಾಮಿಯವರು ಸಹಕರಿಸಿರುತ್ತಾರೆ. ಇವರುಗಳೆಲ್ಲರಿಗೆ ಇಲಾಖೆಯು ಆಭಾರಿಯಾಗಿದೆ.

ಈ ಗ್ರಂಥದ ಅಕ್ಷರ ಜೋಡಣೆಯಲ್ಲಿ ಡಿ.ಟಿ.ಪಿ.ಯನ್ನು ಕಾಂಪ್ಟೆಕ್ ಕಂಪ್ಯೂಟರ್ ಸಿಸ್ಟಂಮ್ಸ್‌ನ ಶ್ರೀಮತಿ ಹೆಚ್.ಎಸ್. ಹೇಮಲತಾ ನೆರವೇರಿಸಿರುತ್ತಾರೆ. ಮುಖಪುಟ ವಿನ್ಯಾಸವನ್ನು ಬೆಂಗಳೂರಿನ ಸುಹಾಸ್ ಗ್ರಾಫಿಕ್ಸ್‌ನ ಶ್ರೀ ಮುರಳೀಧರ್ ಇವರು ಮಾಡಿಕೊಟ್ಟಿರುತ್ತಾರೆ. ಇವರೆಲ್ಲರಿಗೂ ನನ್ನ ವಂದನೆಗಳನ್ನು ಸಲ್ಲಿಸುತ್ತೇನೆ.

ಈ ಗ್ರಂಥವನ್ನು ಕನ್ನಡಿಗರು ಆದರದಿಂದ ಬರಮಾಡಿಕೊಳ್ಳುವರೆಂದು ಆಶಿಸುತ್ತೇನೆ.

ಡಾ. ಆರ್. ಗೋಪಾಲ್
ಟಿ.ಎಸ್. ಗಂಗಾಧರ್

ಪರಿವಿಡಿ

ಸಂದೇಶ

ಮುನ್ನುಡಿ

ಪ್ರಸ್ತಾವನೆ

1. ಕುಗ್ವೆಯ ವೀರಗಲ್ಲು ಶಾಸನ ಮತ್ತು ವಿಜಯನಗರ ಸ್ಥಾಪನಾ ಕಾಲ ವಿಚಾರ
   ಡಾ॥ ಪಿ.ಎನ್. ನರಸಿಂಹಮೂರ್ತಿ 1
2. ಮಲಪನಗುಡಿಯ ಅಪ್ರಕಟಿತ ಶಿಲಾಶಾಸನ
   ಎಸ್. ನಾಗರಾಜಪ್ಪ 7
3. ಬೆಂಗಳೂರು ಜಿಲ್ಲೆ ಆನೇಕಲ್ ತಾಲ್ಲೂಕು ಮಾಯಸಂದ್ರ ಶಾಸನದ ಪರಿಷ್ಕೃತ ಪಾಠ ಮತ್ತು ವಿಶ್ಲೇಷಣೆ
   ಎಸ್. ಕಾರ್ತಿಕ್ 12
4. ಶ್ರೀ ಶೃಂಗೇರಿ ಶಂಕರನಾರಾಯಣ ಜೋಯಿಸರ ಸಂಗ್ರಹದಲ್ಲಿದ್ದ ಹಸ್ತಪ್ರತಿಯಲ್ಲಿ ದಾಖಲಾಗಿರುವ ಅಪ್ರಕಟಿತ ವಿಜಯನಗರ ಶಾಸನಗಳು
   ಡಾ॥ ಕೆಳದಿ ವೆಂಕಟೇಶ್ ಜೋಯಿಸ್ – ಡಾ॥ ಕೆಳದಿ ಗುಂಡಾಜೋಯಿಸ್ 22
5. ವಿಜಯನಗರ ಸಾಮ್ರಾಜ್ಯ ಸಂಸ್ಥಾಪನಾಚಾರ್ಯ ಶ್ರೀ ವಿದ್ಯಾರಣ್ಯರು : ಇನ್ನಷ್ಟು ಚಿಂತನೆ
   ಡಾ॥ ಎಸ್.ಕೆ. ಜೋಶಿ 26
6. ಮಹಾನವಮಿ ದಿಬ್ಬದಿಂದ ಬನ್ನಿಮಂಟಪಕ್ಕೆ ಸಾಗಿಬಂದ ದಸರಾ
   ಡಾ॥ ಲ.ನ. ಸ್ವಾಮಿ 32
7. ಸಾಳುವರ ಕಾಲದ ವಾಸ್ತು ರಚನೆಗಳು
   ಡಾ॥ ಎಸ್.ಎನ್. ಶಿವರುದ್ರಸ್ವಾಮಿ 44
8. ವಿಜಯನಗರ ಕಾಲದ ಶಿಲ್ಪಕಲೆ ಮತ್ತು ಚಿತ್ರಕಲೆ : ಸಾಂಸ್ಕೃತಿಕ ನೋಟ
   ಡಾ॥ ಎನ್. ಚಿನ್ನಸ್ವಾಮಿ ಸೋಸಲೆ 48
9. ನೀತಿಗೆರೆ ಗ್ರಾಮದ ಶಾಸನೋಕ್ತ ವೀರಭದ್ರ ದೇವಾಲಯ ಮತ್ತು ಸ್ಮಾರಕಗಳು
   ಯೋಗಾನಂದ ಎಸ್. ಕೆ 63
10. ವಿಜಯನಗರ ಕಾಲದಲ್ಲಿ ಶಾಕ್ತ ದೇವಾಲಯಗಳ ಮೇಲೆ ನಡೆದ ದಾಳಿ
    ಡಾ॥ ವಾಸುದೇವ ಬಡಿಗೇರ 69
11. ಕೋಳಿವಾಡದ ಶಾಸನೋಕ್ತ ಮಾದವಜನಾರ್ದನ ದೇವಾಲಯ
    ಸುರೇಶ ಕೆ. ಹಾನಗಲ್ಲ 74
12. ಚನ್ನಗಿರಿ ತಾಲೂಕಿನ ದೇವಾಲಯಗಳು – ಒಂದು ಅಧ್ಯಯನ
    ಮಂಜನಾಯ್ಕ ಆರ್. 77
13. ಚಾಮರಾಜನಗರ ಜಿಲ್ಲೆಯ ದೇವಾಲಯಗಳು – ಒಂದು ನೋಟ
    ಡಾ॥ ಸುರೇಶ ಎ.ಎನ್. 89
14. ಕಾಲಕಾಲೇಶ್ವರದ ಬೆಟ್ಟದಲ್ಲಿರುವ 'ಆನೆಗುಂದಿ ಬಸವಣ್ಣ'
    ಡಾ॥ ಮಲ್ಲಿಕಾರ್ಜುನ ಕುಂಬಾರ 96
15. ಕೋಲಾರದ ಸೋಮೇಶ್ವರ ದೇವಾಲಯ : ಒಂದು ಅಧ್ಯಯನ
    ಡಾ॥ ಜಿ. ಮನೋಜ್ 98

16. ಆನೆಗೊಂದಿಯಲ್ಲಿಯ ವಿಜಯನಗರ ಕಾಲದ ಕಾರಾಗೃಹ
ಡಾ॥ ಶರಣಬಸಪ್ಪ ಕೋಲ್ಕಾರ 109
17. ವಿಜಯನಗರ ಕಾಲದ ರಕ್ಷಣಾ ವಾಸ್ತು ಶೈಲಿ
ಡಾ॥ ಎಸ್. ತಿಪ್ಪೇಸ್ವಾಮಿ 116
18. ಮುಳಬಾಗಿಲು ಕೋಟೆ – ಒಂದು ಅಧ್ಯಯನ
ಎಸ್. ಪ್ರವೀಣ್ ಕುಮಾರ್ 121
19. ಹಂಪಿ ಪರಿಸರದ ವರಾಹ ಶಿಲ್ಪಗಳು
ಡಾ॥ ಸಿ. ಎಸ್. ವಾಸುದೇವನ್ 126
21. ಹಂಪಿ ಪರಿಸರದಲ್ಲಿ ವೈಷ್ಣವ ಧರ್ಮದ ಪ್ರಭಾವ
ಶ್ರೀಮತಿ ಪದ್ಮಜಾ ದೇಸಾಯಿ 138
22. ಮಂಡ್ಯ ಜಿಲ್ಲೆಯ ಇಮ್ಮಡಿ ದೇವರಾಯನ ಕಾಲದ ಶಾಸನಗಳಲ್ಲಿ ದಾನದತ್ತಿಗಳು
ಡಾ॥ ಎಸ್.ಶಿವರಾಮು 141
23. ಸದಾಶಿವಮಹಾರಾಯನ ಧಾರ್ಮಿಕ ಶಾಸನಗಳು (ಕ್ರಿ.ಶ. 1542–1570)
ಡಾ॥ ಡಿ.ಎಂ. ನಾಗರಾಜು 145
24. ಮಹಾಪ್ರಧಾನಿ ಬೈಚಯದಂಡನಾಯಕ ಮತ್ತು ಅವನ ವಂಶೀಯರು
ಶ್ರೀಮತಿ ಎಸ್. ಗಂಗಾಂಬಿಕೆ 152
25. ವಿಜಯನಗರ ಕಾಲದ ಭೂಹಿಡುವಳಿ ವ್ಯವಸ್ಥೆ
ಡಾ॥ ಎಚ್.ಈ. ಬಸವರಾಜಪ್ಪ 167
26. ಮಹಾದಂಡನಾಯಕ ಲಕ್ಕಣ್ಣ ದಂಡೇಶ ಕವಿ – ಒಂದು ಅಧ್ಯಯನ
ಜಯದೇವಪ್ಪ ಜೈನಕೇರಿ 173
27. ಹರಪನಹಳ್ಳಿ ತಾಲ್ಲೂಕಿನ ಕೆರೆ, ಬಾವಿ ಇತ್ಯಾದಿ
ಡಾ॥ ಹರಿಹರ ಶ್ರೀನಿವಾಸರಾವ್ 181
28. ಪ್ರೌಢದೇವರಾಯನ ನೂರೊಂದು ವಿರಕ್ತರು
ಬಿ.ಎಂ. ಚಂದ್ರಶೇಖರಯ್ಯ 187
29. ಹಂಪಿ ಪರಿಸರದಲ್ಲಿ ವಿಜಯನಗರ ಕಾಲದ ಮತ್ತಷ್ಟು ಉಪನಗರಗಳು
ಡಾ॥ ಸಿ. ಮಹದೇವ 192
30. ವಿಜಯನಗರ ಸೆಕ್ಸೆಂಟಿನರಿ ಕಮೆಮೊರೇಷನ್ ವಾಲ್ಯೂಮ್: ಅವಲೋಕನ
ರಮೇಶ ನಾಯಕ 197
31. ಪಿ.ಬಿ. ದೇಸಾಯಿಯವರ ಅರವೀಡು ಮನೆತನದಾಳ್ವಿಕೆ ಕುರಿತ ಇತಿಹಾಸ ಲೇಖನ ಕಲೆ
ಡಾ॥ ಬಿ.ಸಿ. ರಾಕೇಶ್ 204
32. ವಿಜಯನಗರ – ಸುರಪುರ ಸಂಸ್ಥಾನದ ಸಂಬಂಧ
ಡಾ॥ ಅಮರೇಶ ಯತಗಲ್ 210
33. ವಿಜಯನಗರಕಾಲದ ತಾಂಬೂಲ
ಡಾ॥ ಎನ್. ನಂದೀಶ್ವರ 215
34. ಹಿರೇಗುತ್ತಿ ಭೋಜರ ಆಳ್ವಿಕೆ ಮತ್ತು ನಾಡಗುತ್ತಿಯ ರಾಜಾ ಹರಿಹರನ ವಿದ್ಯಾನಗರಿ ರಾಜ್ಯ ಸ್ಥಾಪನೆ
ಗಣಪತಿ ಕೆರೆಮನೆ 223
35. ಹಾಸನ ತಾಲ್ಲೂಕಿನ ವಿಜಯನಗರ ಕಾಲದ ಶಾಸನಗಳು
ಕೆ.ಎಸ್. ಮಲ್ಲೇಶಪ್ಪ 229

1. ಕುಗ್ವೆಯ ವೀರಗಲ್ಲು ಶಾಸನ ಮತ್ತು ವಿಜಯನಗರ ಸ್ಥಾಪನಾ ಕಾಲ ವಿಚಾರ

ಡಾ॥ ಪಿ.ಎನ್. ನರಸಿಂಹಮೂರ್ತಿ

ಶಿವಮೊಗ್ಗ ಜಿಲ್ಲೆ, ಸಾಗರ ತಾಲ್ಲೂಕಿನ ತಾಳಗುಪ್ಪ ಹೋಬಳಿಯ ಕುಗ್ವೆಯಲ್ಲಿ ವಿಜಯನಗರ ಕಾಲೀನ ಕೆಲವು ಶಿಲಾಶಾಸನಗಳು ದೊರೆತಿವೆ.[1] ಅಲ್ಲಿ ಹರಿಹರನ ಉಲ್ಲೇಖ ಇರುವ ಎರಡು ಶಾಸನಗಳನ್ನು[2] ಪ್ರಸಕ್ತ ಪರಿಶೀಲನೆಗೆ ಆಯ್ದುಕೊಳ್ಳಲಾಗಿದೆ. ಈ ಎರಡೂ ವೀರಗಲ್ಲು ಶಾಸನಗಳು. ಇವುಗಳಲ್ಲಿ ಒಂದು[3] ವಿಜಯನಗರ ಸ್ಥಾಪನಾ ಕಾಲ ನಿರ್ಧಾರಕ್ಕೆ ತುಂಬಾ ಸಹಕಾರಿಯಾಗಿದೆ. ಇದನ್ನು ಇಲ್ಲಿ ವಿಶೇಷ ಪರಿಶೀಲನೆಗೆ ಒಳಪಡಿಸಲಾಗಿದೆ.

ಒಂದನೆಯ ವೀರಗಲ್ಲು :

ಇದು ತುಂಬಾ ತ್ರುಟಿತವಾಗಿದೆ.[4] ತುರುಕಾಳಗವೊಂದರಲ್ಲಿ ಸನ್ನಪಗೌಡನ ಮಗ ವೀರಪಗೌಡನು ಸ್ವರ್ಗಸ್ಥನಾದ. ಈತನ ಜ್ಞಾಪಕಾರ್ಥ ನೆಟ್ಟ ಸ್ಮಾರಕ ಇದು. ಇಲ್ಲಿ ರಾಜ ಹರಿಹರನನ್ನು "ಸ್ವಸ್ತಿ ಶ್ರೀಮನ್ಮಹಾರಾಜಾಧಿರಾಜ (ರಾಜಪರ) ಮೇಸ್ವರ ಶ್ರೀ ವೀರಪ್ರತಾಪ ಹರಿಹರ ದೇವ ಮಹಾರಾಯ ಸಾಂಬ್ರಾಜ್ಯಂ ..." ಎಂದು ಉಲ್ಲೇಖಿಸಲಾಗಿದೆ. ತೇದಿವಿವರ ಇರುವ ಬರಹ ಬಹಳ ಹಾಳಾಗಿದ್ದು ಅಸ್ಪಷ್ಟವಾಗಿದೆ. ಇದು ಪ್ರಾಯಶಃ (131)4 ಆಂಗೀರಸ (ಸಂವತ್ಸ)ರದ (ವೈಶಾಖ ಬ) 12 ಆದಿವಾರ. ಈ ವಿವರ ಕ್ರಿ.ಶ. 1392ರ ಮೇ 29 ಭಾನುವಾರಕ್ಕೆ ಸರಿಹೊಂದುತ್ತದೆ. ಶಾಸನದಲ್ಲಿರುವ ಪ್ರಶಸ್ತಿ ಮತ್ತು ತೇದಿ ವಿವರ ಎರಡೂ ಇಮ್ಮಡಿ ಹರಿಹರನ ಕಾಲಕ್ಕೆ ತಾಳೆಹೊಂದುವುದರಿಂದ ಇಲ್ಲಿ ಉಲ್ಲೇಖಿತವಾಗಿರುವ ರಾಜ ಇಮ್ಮಡಿ ಹರಿಹರ. ಶಾಸನದಲ್ಲಿ ಉಳಿದ ವಿವರಗಳೆಲ್ಲಾ ನಷ್ಟವಾಗಿದೆ.

ಎರಡನೆಯ ವೀರಗಲ್ಲು

ಹನ್ನೊಂದು ಸಾಲು ಬರಹ ಇರುವ ಈ ಶಾಸನ[5] ಸುಸ್ಥಿತಿಯಲ್ಲಿದೆ. ಹಾಗಾಗಿ ಶಾಸನದ ಪೂರ್ಣ ಪಾಠ ಲಭ್ಯವಾಗಿದೆ. ಪ್ರಾಯಶಃ ತುರುಕಾಳಗವೊಂದರಲ್ಲಿ ವೈರಿಗಳ ವಿರುದ್ಧ ಕಾದಾಡುವಾಗ ಕೋಗುವೆಚೀಲದ ಬೊಮ್ಮೆಯನು ಮಡಿದ. (ಸುದ್ದಿ ತಿಳಿದ) ಆತನ ಪತ್ನಿ ಚಿಯಕ್ಕ ಪ್ರಾಣತ್ಯಾಗ ಮಾಡಿ ಮಹಾಸತಿಯಾದಳು. ಈ ಈರ್ವರಿಗೂ ಬೊಮ್ಮೆಯಗೌಡನ ಚೆನಿಯಗನು ಸ್ಮಾರಕ ಶಿಲೆ ಹಾಕಿಸಿದ.

ಶಾಸನದಲ್ಲಿ ಹರಿಹರನ ಉಲ್ಲೇಖ "ಶ್ರೀ ವೀರಹರಿಹರ ವೊಡೆಯರು"[6] ಎಂದಷ್ಟೇ ಇದೆ. ಇದರಲ್ಲಿ ತೇದಿ ವಿವರ "ಪ್ರಮಾಥಿ ಸಂವತ್ಸರದ ವೈಶಾಖ ಸುಇಆ ..."[7] ಎಂದಿದೆ. ಶಕವರ್ಷದ ಉಲ್ಲೇಖವಿಲ್ಲ. ಲಿಪಿ ಆಧಾರದಲ್ಲಿ ಹದಿನಾಲ್ಕನೆಯ ಶತಮಾನದ ಪೂರ್ವಾರ್ಧಕ್ಕೆ ಸೇರುವ ಈ ಶಾಸನ ಪ್ರಾಯಶಃ ಶಕ 1261ಕ್ಕೆ ಸೇರುತ್ತದೆ. ಈ ಆಧಾರದಲ್ಲಿ ಇದರ ತೇದಿ ವಿವರ ಕ್ರಿ.ಶ. 1339 ಏಪ್ರಿಲ್ 13ಕ್ಕೆ ಸರಿಹೊಂದುತ್ತದೆ. ಆದರೆ ವಾರ ಮಾತ್ರ ಮಂಗಳವಾರ (ಆದಿವಾರವಲ್ಲ). ತೇದಿ ವೈಶಾಖ ಶು2 ಮಾತ್ರ ಏಪ್ರಿಲ್ 11 ಭಾನುವಾರ ಮತ್ತು 12ನೇ ಸೋಮವಾರ – ಎರಡೂ ದಿನ ಇತ್ತು. ಪ್ರಾಯಶಃ ವೈಶಾಖ ಶು 2 ಈ ಶಾಸನದ ನಿಜ ಕಾಲ ಇರಬಹುದು. ಕೆತ್ತುವ ದೋಷದಿಂದ ಶು3 ಆಗಿದೆ. ಇದನ್ನು ಸರಿಪಡಿಸಿದಲ್ಲಿ ಆಗ ಶಾಸನದ ತೇದಿ ವಿವರ ಕ್ರಿ.ಶ. 1339 ಏಪ್ರಿಲ್ 11 ಭಾನುವಾರ (ಆದಿವಾರ)ಕ್ಕೆ ಸರಿಹೊಂದುತ್ತದೆ.

ಇಲ್ಲಿ ರಾಜನನ್ನು ಬಹಳ ಸರಳವಾಗಿ "ಶ್ರೀ ವೀರಹರಿಹರವೊಡೆಯ" ಎಂದಷ್ಟೇ ಉಲ್ಲೇಖಿಸಿದೆ. ಇದು ಮತ್ತು ತೇದಿ ವಿವರ ಎರಡೂ ಒಂದನೆಯ ಹರಿಹರನ ಕಾಲಕ್ಕೆ ಸರಿಹೊಂದುತ್ತದೆ. ಒಂದನೆಯ ಹರಿಹರನ ಯಾವ ಶಾಸನದಲ್ಲೂ ಸಾರ್ವಭೌಮ ಸೂಚಕ ಪ್ರಶಸ್ತಿ ಇಲ್ಲ, ಈ ಎಲ್ಲ ಆಧಾರಗಳಿಂದ ಕುಗ್ವೆಯ ಎರಡನೆಯ ವೀರಗಲ್ಲು ಶಾಸನ ಒಂದನೆಯ ಹರಿಹರನ ಕಾಲಕ್ಕೆ ಸೇರಿದ್ದಾಗಿದೆ. ಅಷ್ಟೇ ಅಲ್ಲ. ಇದು ಅವನ ಆಳ್ವಿಕೆಯನ್ನೂ ಉಲ್ಲೇಖಿಸಿದೆ. "ಶ್ರೀ ವೀರಹರಿಹರವೊಡೆಯರು

ಪೃಥುವೀರಾಜ್ಯವನಾಳುವ ಕಾಲದಲ್ಲಿ"[8] ಎಂಬ ಉಲ್ಲೇಖ ಸ್ಪಷ್ಟವಾಗಿದೆ. ಅಂದರೆ ಕ್ರಿ.ಶ. 1339ರ ಪ್ರಾರಂಭಕ್ಕೆ ಒಂದನೆಯ ಹರಿಹರ ರಾಜ್ಯವನ್ನಾಳುತ್ತಿದ್ದ.

ಒಂದನೆಯ ಹರಿಹರ ವಿಜಯನಗರ ರಾಜ್ಯದ ಪ್ರಥಮ ರಾಜ ಹಾಗೂ ಸ್ಥಾಪಕ ಎಂಬ ವಿಚಾರ ಅದರ ಇತಿಹಾಸದಿಂದ ತಿಳಿಯುತ್ತದೆ. ಈತ ರಾಜ್ಯಸ್ಥಾಪನೆ ಮಾಡಿದ ಕಾಲದ ಬಗ್ಗೆ ಏಕೋ ಇನ್ನೂ ವಿದ್ವಾಂಸರಲ್ಲಿ ಗೊಂದಲವಿದೆ. ಕುಗ್ವೇಯ ಶಾಸನ ಈ ಗೊಂದಲ ನಿವಾರಣೆಗೆ ಎಷ್ಟು ಸಹಕಾರಿ ಎಂಬುದರ ವಿವೇಚನೆ ಇಲ್ಲಿದೆ.

ಕ್ರಿ.ಶ. 1339ರ ಏಪ್ರಿಲ್ 11ರಂದು ಹಾಕಿರುವ ಕುಗ್ವೇಯ ಈ ವೀರಗಲ್ಲು ಅದಕ್ಕೆ ಸ್ವಲ್ಪ ಮೊದಲು ನಡೆದ ಪ್ರಾಯಶಃ ತುರುಕಾಳಗದಲ್ಲಿ ಮಡಿದ ಈ ವೀರಯೋಧನನ್ನು ಮತ್ತು ಆಗ ಹರಿಹರನ ಆಳ್ವಿಕೆ ಇದ್ದುದನ್ನೂ ಉಲ್ಲೇಖಿಸಿದೆ. ಪಶ್ಚಿಮ ಕರಾವಳಿಗೆ ಅತಿ ಸಮೀಪ ಇರುವ ತಾಳಗುಪ್ಪ ಹೋಬಳಿಯ ಗ್ರಾಮವೊಂದರಲ್ಲಿ ದೊರೆತಿರುವುದು ವಿಜಯನಗರದ ಈ ಅತ್ಯಂತ ಪ್ರಾಚೀನ ಶಿಲಾಶಾಸನ. ಅಂದರೆ ಆ ವೇಳೆಗೆ ಪಶ್ಚಿಮ ಕರಾವಳಿವರೆಗೆ ವಿಜಯನಗರದ ಆಡಳಿತ ಹರಡಿತ್ತು. ಈ ಕಾರ್ಯಸಾಧನೆ ಆಗಬೇಕಾದರೆ ಕ್ರಿ.ಶ. 1339ಕ್ಕೂ ಮುಂಚೆ ಹರಿಹರನ ಆಡಳಿತ ಅಸ್ತಿತ್ವಕ್ಕೆ ಬಂದಿರಲೇಬೇಕು. ಹಂಪೆಯ ಪರಿಸರವನ್ನೇ ಕೇಂದ್ರವಾಗಿರಿಸಿಕೊಂಡು ಹುಟ್ಟಿದ ಈ ರಾಜ್ಯದ ಅಧಿಕಾರ ದೂರದ ಪಶ್ಚಿಮ ಭಾಗಕ್ಕೆ ಹರಡಲು ಸ್ವಲ್ಪ ಸಮಯವಾದರೂ ಬೇಕು. ಪಶ್ಚಿಮ ಕರಾವಳಿ ಪ್ರದೇಶವು ಆರ್ಥಿಕ ದೃಷ್ಟಿಯಿಂದ ಬಹಳ ಪ್ರಮುಖವಾಗಿದ್ದ ಕಾರಣ ಅದನ್ನು ತನ್ನ ಅಧಿಕಾರವ್ಯಾಪ್ತಿಯಲ್ಲಿ ತಂದು ಅಲ್ಲಿ ವ್ಯವಸ್ಥಿತ ಆಡಳಿತ ಸ್ಥಾಪಿಸುವುದು ಬಹಳ ಮುಖ್ಯವಾದ ವಿಷಯ. ವಿಜಯನಗರ ಪ್ರಾರಂಭಿಕ ಕಾಲದಿಂದಲೆ ಕರಾವಳಿಯನ್ನು ಆಡಳಿತಾತ್ಮಕವಾಗಿ ವಿಭಜಿಸಿ ಮಂಗಳೂರು ಮತ್ತು ಬಾರಕೂರು ರಾಜ್ಯಗಳೆಂಬ ಎರಡು ಪ್ರಾಂತ್ಯಗಳನ್ನು ಮಾಡಿ ಅವುಗಳಿಗೆ ಸಾಮ್ರಾಜ್ಯದ ನೇರ ಪ್ರತಿನಿಧಿಯಾಗಿ ರಾಜ್ಯಪಾಲರನ್ನು ನೇಮಿಸಿರುವುದನ್ನು ಕಂಡರೆ – ಆ ಭಾಗವನ್ನು ವಶಪಡಿಸಿಕೊಳ್ಳುವ ಕಾರ್ಯ ಬಹಳ ಬೇಗ ನಡೆದಿದೆ. ಕರಾವಳಿಯಲ್ಲಿ ಆಗ ಆಳುಪ ಮತ್ತು ಹೊಯ್ಸಳರ ಆಡಳಿತ ನೆಲೆಗೊಂಡಿತ್ತು. ಹೊಯ್ಸಳ ಮೂರನೆಯ ಬಲ್ಲಾಳನ ರಾಣಿ ಚಿಕ್ಕಯಿತಾಯಿಯ ನೇರ ಆಳ್ವಿಕೆ ಇಲ್ಲಿ ನೆಲೆಗೊಂಡಿತ್ತು. ಅದರೊಂದಿಗೆ ವಿಜಯನಗರ ಆಡಳಿತವೂ ಇಲ್ಲಿ ನೆಲೆಗೊಳ್ಳಬೇಕಾದರೆ ಅದಕ್ಕೆ ಹೊಯ್ಸಳರ ಸಹಕಾರ ಅಪಾರವಾಗಿರಲೇಬೇಕು. ಮೂರನೆಯ ಬಲ್ಲಾಳನ ಪಾತ್ರ ಮತ್ತು ದೂರದರ್ಶಿತ್ವ ಇದರಲ್ಲಿ ಬಹಳಷ್ಟಿದೆ. ಅಂದಿನ ರಾಜಕೀಯ ಪರಿಸ್ಥಿತಿಯ ಸವಾಲನ್ನು ಎದುರಿಸಲು ಸೂಕ್ತವಾದ ಯೋಜನೆಗಳನ್ನು ರೂಪಿಸಿಕೊಂಡು ಆಯಕಟ್ಟಿನ ಸ್ಥಳಗಳಲ್ಲಿ ಯೋಗ್ಯ ಮತ್ತು ಸಮರ್ಥ ಅಧಿಕಾರಿ ಸಾಮಂತರನ್ನು ಸ್ವತಂತ್ರ ಅಧಿಕಾರದೊಂದಿಗೆ ನೇಮಿಸಿಕೊಂಡು ಕಾರ್ಯಪ್ರವೃತ್ತನಾಗಿದ್ದ ವೀರಬಲ್ಲಾಳ ಎಂದು ಪಿ.ಬಿ. ದೇಸಾಯಿ ಹೇಳುತ್ತಾರೆ.[9] ಹೀಗೆ ಸ್ವತಂತ್ರ ಅಧಿಕಾರ ಪಡೆದವರಲ್ಲಿ ಹರಿಹರ ಪ್ರಮುಖನಾದವ.

"The year around 1336 A.D. was a critical juncture in the freedom struggle of Ballala. Though successful, he was yet to win the last war by conquering the territory under the occupation of their Muslim governor of Madura. In the north the Delhi Sultan was striving to keep under his control of Hampi Anegondi region which had revolted against his rule. To a man nearing the age of seventy five, that was Ballala, it was beyond possibility to effectively extend his authority to these father limits".

"Hence, carrying his measure of decentralisation of power to the extreme, Ballala appears to have conferred upon Harihara not only full freedom of action, but even autonomy over the areas under his jurisdiction. Harihara in the meanwhile succeeded in pacifying the rebellious chiefs in the Hampi territory, who were glad to accept him as their ruler.[10]

ಇದರಿಂದ ಹುಟ್ಟಿತು ವಿಜಯನಗರ ಎಂಬ ಹೆಸರಿನಿಂದ ಮುಂದೆ ಕರೆಯಲ್ಪಟ್ಟ ಒಂದು ಹೊಸ ರಾಜ್ಯ.

"Thus, came into being the new state of Vijayanagara in the last decade of Ballala III's reign. It was the cumulative product of broad vision, farsighted diplomacy and political generosity of a great monarch and patriotic fervour, spirit of freedom and sacrifice and loyalty to the cause evinced by his official ranks and popular leaders."[11]

ಹೀಗೆ ಹುಟ್ಟಿಕೊಂಡ ಹೊಸ ರಾಜ್ಯ ಬಲುಬೇಗ ಪೂರ್ವ-ಪಶ್ಚಿಮ ಸಮುದ್ರಗಳ ನಡುವಿನ ಇಡೀ ಭೂಪ್ರದೇಶಕ್ಕೆ ಹರಡಿತು.

"Within four years from 1336 A.D., invested with powers of an autonomous prince, Harihara, aided by his younger brothers Kampanna and Bukka, rescued the northern territories from east to west, from the hands of the enemy and assumed the title, Lord of the Eastern and Western seas, along with the specific Vijayanagara epithets like Arirayavibhada and Bhashege-tappuva-rayara-ganda."[12]

ನಾಲ್ಕು ವರ್ಷಗಳಲ್ಲಿ ಹರಿಹರನು ಮಾಡಿದ ಸಾಧನೆಯನ್ನು ವಿವರಿಸುತ್ತಾ ವಿಜಯನಗರ ಹುಟ್ಟಿದ್ದು 1336ರಲ್ಲಿ ಎಂದು ಪಿ.ಬಿ. ದೇಸಾಯಿ ಹೇಳುತ್ತಾರೆ. ಈ ಹೇಳಿಕೆಗೆ ಕುಗ್ವೆಶಾಸನ ಸೂಕ್ತ ಆಧಾರವೊದಗಿಸುತ್ತದೆ. ಕ್ರಿ.ಶ. 1336ರಲ್ಲಿ ಹೊಸರಾಜ್ಯ ಉದಯವಾಗದಿದ್ದರೆ ಅದರ ಸ್ಥಾಪಕ ಅರಸನನ್ನು ಕುಗ್ವೆಶಾಸನದಲ್ಲಿ ಉಲ್ಲೇಖಿಸುವ ಪ್ರಮೇಯವೇ ಇರಲಿಲ್ಲ. ಹರಿಹರನ ಆಳ್ವಿಕೆ ಆ ವೇಳೆಗೆ ಕರಾವಳಿಯವರೆಗೆ ವಿಸ್ತರಿಸಿದ್ದರ ಪರಿಣಾಮವೇ ಸಾಗರ ತಾಲ್ಲೂಕಿನ ಈ ಪ್ರಥಮ ವಿಜಯನಗರ ಶಾಸನದಲ್ಲಿ ಹರಿಹರನ ಆಳ್ವಿಕೆ ಉಲ್ಲೇಖಗೊಳ್ಳುವಂತಾದುದು ಮತ್ತು ಆ ಭಾಗದ ಜನ ಮತ್ತು ಅಧಿಕಾರಿಗಳು ಅದನ್ನು ಮಾನ್ಯ ಮಾಡಿದ್ದರು.

ಕ್ರಿ.ಶ. 1336ರಲ್ಲಿ ಹೊಯ್ಸಳ ರಾಜನಿಂದ ತನಗೆ ದತ್ತವಾದ ಅಧಿಕಾರ ಮತ್ತು ಸ್ವಾತಂತ್ರ್ಯವನ್ನು ಬಹಳ ಜತನದಿಂದ ಕಾಯ್ದುಕೊಂಡು ಆ ವೇಳೆಗೆ ದೆಹಲಿ ಸುಲ್ತಾನರ ಧಾಳಿಗೆ ಸಿಲುಕಿ ಛಿದ್ರವಾಗಿದ್ದ ಕರ್ನಾಟಕದ ರಾಜಕೀಯ ವ್ಯವಸ್ಥೆಯನ್ನು ತಹಬದಿಗೆ ತಂದು ಅಲ್ಲೆಲ್ಲಾ ವ್ಯವಸ್ಥಿತ ಆಡಳಿತವನ್ನು ಜಾರಿಗೆ ತಂದು, ಶಾಂತಿ ಕಾಪಾಡಿ ಹಿಂದಿನ ಅಧಿಕಾರಿ ಮನೆತನಗಳನ್ನು ಪುನರುದ್ದೀಪನಗೊಳಿಸಿ ಆಡಳಿತದ ಕೊಂಡಿಗಳನ್ನು ಬಲಗೊಳಿಸುವುದರ ಮೂಲಕ ತನ್ನ ಅಧಿಕಾರವನ್ನು ಎಲ್ಲೆಡೆ ವಿಸ್ತರಿಸಿದ ಒಂದನೆಯ ಹರಿಹರ. ಇದಕ್ಕೆ ಬಾದಾಮಿಯ ತಟ್ಟುಕೋಟೆ ಶಾಸನ ಒಂದು ಪ್ರಮುಖ ಆಧಾರವಾಗಿ ನಿಲ್ಲುತ್ತದೆ.[13] ಈ ಶಾಸನ ಹರಿಹರನನ್ನು "ಮಹಾಮಂಡಲೇಸ್ವರಂ ಅರಿರಾಯ ವಿ(ಭಾಡ;) ಭಾಸೆಗೆ ತಪ್ಪುವ ರಾಯರಗಂಡ ಪೂರ್ವಪಶ್ಚಿಮ ಸಮುದ್ರಾಧಿಪತಿ ಶ್ರೀವೀರ ಹರಿಯಪ್ಪವೊಡೆಯ" ಎಂದು ಉಲ್ಲೇಖಿಸಿದೆ. ಈತ ಇಲ್ಲಿ ಕೋಟೆಯೊಂದನ್ನು ಕಟ್ಟಿಸಿ ಹಲವು ದಾನಗಳನ್ನು ಮಾಡಿದ ಎಂದು ಶಾಸನ ತಿಳಿಸುತ್ತದೆ. (ಇದರ ಕಾಲ ಕ್ರಿ.ಶ. 1340.)

ಈ ಶಾಸನ ಕೊಡುವ ಮಾಹಿತಿ ಅತಿ ಮುಖ್ಯವಾದುದು. ಪ್ರಾಯಶಃ ಕುಗ್ವೆ ಶಾಸನದ ಆಧಾರದಲ್ಲಿ ತಟ್ಟುಕೋಟೆ ಶಾಸನದ ವಿಶ್ಲೇಷಣೆ ಈವರೆಗೆ ಸರಿಯಾಗಿ ಆಗಿಲ್ಲ ಎಂದು ಕಾಣುತ್ತದೆ. ಹರಿಹರ ಶಾಸನ ಕಾಲಕ್ಕೆ ಮಹಾಮಂಡಲೇಶ್ವರನಾಗಿದ್ದು ಪೂರ್ವ-ಪಶ್ಚಿಮ ಸಮುದ್ರಾಧಿಪತಿಯಾಗಿದ್ದ. ಈತ ಹೊಯ್ಸಳ ಬಲ್ಲಾಳನ ಮಹಾಮಂಡಲೇಶ್ವರನಾಗಿದ್ದ ಎಂದು ಬೇರೆ ಹೇಳಬೇಕಾಗಿಲ್ಲ. ಏಕೆಂದರೆ ಆಗ ಇಡೀ ದಕ್ಷಿಣ ಭಾಗಕ್ಕೆ ಇದ್ದ ಒಬ್ಬನೇ ಪ್ರತಿಷ್ಠಿತ ರಾಜನೆಂದರೆ ಹೊಯ್ಸಳ ವೀರಬಲ್ಲಾಳ. ಈ ಹಿರಿತನದ ಅಧಿಕಾರ ಹೊಂದಿದ ರಾಜ (ಹರಿಹರ) 'ಪೂರ್ವಪಶ್ಚಿಮ ಸಮುದ್ರಾಧಿಪತಿಯೂ ಆಗಿದ್ದ'. ಇದೇನೂ ಕೇವಲ ಹೊಗಳಿಕೆಯ ಮಾತಾಗಿರಲಿಲ್ಲ, ಅನಂತರದ ಕಾಲದ ಶಾಸನದಲ್ಲೂ ಇದು ಧ್ವನಿತವಾಗಿದೆ.[14]

ಅಂದರೆ ಪ್ರಕ್ಷುಬ್ಧ ರಾಜಕೀಯ ಪರಿಸ್ಥಿತಿಯನ್ನು ನಿವಾರಿಸಿ ಅಲ್ಲಿ ಶಾಂತಿ ನೆಲೆಸುವಂತೆ ಮಾಡಿ, ಪೂರ್ವ-ಪಶ್ಚಿಮ ಸಮುದ್ರಗಳ ನಡುವಿನ ವಿಶಾಲವಾದ ಭೂ ಪ್ರದೇಶದಲ್ಲಿ ತನ್ನ ಆಳ್ವಿಕೆಯನ್ನು ಹರಿಹರ ಆ ವೇಳೆಗೆ ನೆಲೆಗೊಳಿದ್ದ ಎಂಬುದು ಇಲ್ಲಿ ಪ್ರತಿಧ್ವನಿಸಿದೆ. ಇದೇನೂ ಸಾಮಾನ್ಯ ಸಾಧನೆಯಲ್ಲ. ಇದನ್ನು ಪುಷ್ಟೀಕರಿಸುತ್ತದೆ. ಶಾಸನದಲ್ಲಿರುವ ಈತನ ಪ್ರಶಸ್ತಿ – "ಅರಿರಾಯ ವಿಭಾಡಭಾಸೆಗೆ ತಪ್ಪುವ ರಾಯರಗಂಡ". ಇವುಗಳ ಸಾಧನೆ ನಿಜವಾದ ಒಬ್ಬ ಶೂರನ ಕಾರ್ಯಗಳಾಗಿವೆ. ಇದನ್ನು ಸಾಧಿಸಲು ಹರಿಹರನಿಗೆ 3–4 ವರ್ಷಗಳ ಅವಧಿ ಇಲ್ಲದಿದ್ದರೆ ಆಗುತ್ತಿರಲಿಲ್ಲ. ಈ ನೆಲೆಯಲ್ಲಿ ವಿಜಯನಗರದ ಉದಯ ಕ್ರಿ.ಶ. 1336ರಲ್ಲಾಯಿತು ಎಂದು ನಿರ್ಧರಿಸಬಹುದು.

ಇತ್ತೀಚೆಗೆ ಬೆಳಕಿಗೆ ಬಂದಿರುವ ಹಲ್ಕಾವಟಿಗೆ ತಾಮ್ರಶಾಸನ[15] ಈ ಬಗ್ಗೆ ಇದ್ದ ಸಂಶಯ ನಿವಾರಿಸಿದೆ. ಕ್ರಿ.ಶ. 1336ರಲ್ಲಿ ರಾಜ್ಯ ಸ್ಥಾಪನಾ ಕಾರ್ಯದ ಜ್ಞಾಪಕಾರ್ಥ ಹರಿಹರ ಕೆಲವು ದಾನಗಳನ್ನು ಮಾಡಿದ ಎಂದು ಈ ಶಾಸನ ತಿಳಿಸುತ್ತದೆ. ಈ ತಾಮ್ರ ಶಾಸನದ ಕಾಲ ಕ್ರಿ.ಶ. 1336 ಏಪ್ರಿಲ್ 18, ಈ ದಿನದಂದು ಹರಿಹರ ಪಟ್ಟಾಭಿಷಿಕ್ತನಾದ ಎಂದು ಶಾಸನ ತಿಳಿಸುತ್ತದೆ.

14ನೆಯ ಶತಮಾನದ ಪೂರ್ವಾರ್ಧದಲ್ಲಿದ್ದ ನಂದಿನಾಗರಿ ಲಿಪಿ ಇಲ್ಲಿ ಬಳಕೆಯಾಗಿದೆ. ಹೊಯ್ಸಳರ ಉತ್ತರ ಕಾಲೀನ ತಾಮ್ರಪಟಗಳೊಂದಿಗೆ ಇದರ ಹೋಲಿಕೆ ಇದೆ.[16] ಇಲ್ಲಿ "ಕೂಟ ಶಾಸನ" ಎಂದು ವರ್ಗೀಕರಿಸಬಹುದಾದ ಯಾವ ಅಂಶವೂ ಇಲ್ಲ. ಪೂರ್ವಗ್ರಹ ದೃಷ್ಟಿಯಿಂದ ಇಲ್ಲಿ ವಿದ್ಯಾರಣ್ಯರ ಹೆಸರಿದೆ ಎಂಬ ಕಾರಣಕ್ಕಾಗಿ ಇದನ್ನೊಂದು ಕೃತಕಸೃಷ್ಟಿ[17] ಎಂದು ಹೇಳುವಲ್ಲಿ ಅಡಗಿರುವ ತರ್ಕವಾದರೂ ಏನು? ವಿದ್ಯಾರಣ್ಯರನ್ನು ಉಲ್ಲೇಖಿಸುವ ಹಲವಾರು ಶಿಲಾಶಾಸನಗಳು ಮಲೆನಾಡು ಮತ್ತು ಪಶ್ಚಿಮ ಕರಾವಳಿಯಲ್ಲಿ ಲಭ್ಯವಾಗಿದೆ.[18] ಹೀಗಿರುವಲ್ಲಿ ಕ್ರಿ.ಶ. 1336ರ ಶಾಸನದಲ್ಲೇ ವಿದ್ಯಾರಣ್ಯರ ಉಲ್ಲೇಖ ಇದೆ ಎಂಬ ವಿಚಾರವನ್ನು ಸ್ವಾಗತಾರ್ಹ ಎಂದೇ ಪರಿಗಣಿಸಬೇಕು.

ಹಲ್ಕಾವಟಿಗೆ ತಾಮ್ರಪಟಗಳ ಪರಿಶೀಲನೆ ಮಾಡಿರುವ ಡಾ॥ ಸೂರ್ಯನಾಥ ಕಾಮತರು ಹೇಳಿರುವ ಮಾತುಗಳು ಇಲ್ಲಿ ಬಹಳ ಪ್ರಸ್ತುತವಾಗಿದೆ:

"Vidyaranya urged the establishment of Vijayanagara empire and he crowned Harihara I on 19th of April 1336. (A'stapances'u yugalaika sankhaya samyute sakanrpasva - vatsare Dhatna madhavalavaksa saptami. This saka era 1258, cyclic year Dhatru 7th day of Vaishaka month). This has been proved by the recently discovered Halkavatigi copper plates, found in the village Halkavtigi (near Navali) in Lingasugur taluk, Raichur District."[19]

ವಿಜಯನಗರ ಸ್ಥಾಪನಾ ಕಾರ್ಯಗಳಲ್ಲಿ ವಿದ್ಯಾರಣ್ಯರ ಪಾತ್ರವನ್ನು ಮತ್ತು ಆ ಬಗೆಗಿನ – ಈವರೆಗಿನ ವಾದ-ವಿವಾದಗಳನ್ನು ಇವರು ಪರಿಶೀಲಿಸಿ ಅದರಲ್ಲಿರುವ ಜೊಳ್ಳು ಮತ್ತು ಗಟ್ಟಿತನಗಳನ್ನು ತೋರಿಸಿದ್ದಾರೆ.[20] ಕೊನೆಯಲ್ಲಿ ಕಾಮತರು ಹೇಳಿರುವ ಮಾತುಗಳು ವಿವೇಚನಾರ್ಹವಾಗಿವೆ.

"Vidyaranya not only helped founding the empire but also gave an ideological and intellectual frame work to the rulers. Emperor Harihara II's copper plate dated 1384 says that "he secured such treasure house of knowledge" from Vidyaranya which no other king could have secured. Later, on the demise of Vidyaranya in 1386, Harihara II created Vidyaranyapura Agrahara in his memory".[21]

ಈ ಹಿಂದೆ ದೊರೆತಿದ್ದ ಬೆಸ್ತರಪಲ್ಲಿ[22] ಮತ್ತು ಕಾಪಲೂರು[23] ಶಾಸನಗಳೊಂದಿಗೆ ಈಗ ದೊರೆಗಿರುವ ಹಲ್ಕಾವಟಿಗೆ ತಾಮ್ರಪಟಗಳ ಆಧಾರದಲ್ಲಿ ವಿಜಯನಗರ ಸ್ಥಾಪನಾ ಕಾಲ ಕ್ರಿ.ಶ. 1336 ಏಪ್ರಿಲ್ 18 ಎಂಬುದನ್ನು ಸೂರ್ಯನಾಥಕಾಮತರು ಪುರಸ್ಕರಿಸಿ ಹೇಳಿರುವ ಮಾತುಗಳು ಈ ಬಗೆಗಿನ ವಿವಾದಕ್ಕೆ[24] ಇನ್ನಾದರೂ ತೆರೆ ಎಳೆಯಬಹುದು. ಈ ಆಧಾರದಲ್ಲೇ 1336–1340ರ ನಾಲ್ಕು ವರ್ಷಗಳ ಅವಧಿಯಲ್ಲಿ ಹರಿಹರ ಬಹಳಷ್ಟು ಸಾಧನೆ ಮಾಡಿದ ಎಂದು ದೇಸಾಯಿಯವರು ಹೇಳಿರುವುದು[25] "ಪೂರ್ವಪಶ್ಚಿಮ ಸಮುದ್ರಾಧಿಪತಿ" ಎಂದು ಈತನನ್ನು ಉಲ್ಲೇಖಿಸಿರುವ ತಟ್ಟುಕೋಟೆ ಶಾಸನ ಇದನ್ನು ಪುಷ್ಟೀಕರಿಸುತ್ತದೆ. ಈ ನಿಟ್ಟಿನಲ್ಲಿ ಕ್ರಿ.ಶ. 1339 ಏಪ್ರಿಲ್ 11ಕ್ಕೆ ಸೇರುವ ಕುಗ್ವೆಯ ವೀರಗಲ್ಲು ಶಾಸನ ವಿಜಯನಗರದ ಪ್ರಸ್ತುತ ದೊರೆತಿರುವ ಶಿಲಾಶಾಸನಗಳಲ್ಲೇ ಪ್ರಥಮದ್ದಾಗಿದ್ದು ಐತಿಹಾಸಿಕ ಪ್ರಾಮುಖ್ಯತೆಯನ್ನು ಗಳಿಸಿಕೊಂಡಿದೆ.

ಕುಗ್ವೆ ವೀರಗಲ್ಲು (2) ಶಾಸನಪಾಠ

1 ಪ್ರಮಾದಿ ಸಂವತ್ಸರದ
2 ವೈಶಾಖ ಸು3 ಆ
3 ಶ್ರೀವೀರ ಹರಿಹರ ವೊ
4 ಡಯರು ಪೃಥುವೀ ರಾಜ್ಯವ
5 ನಾಳುವ ಕಾಲದಲ್ಲಿ ಕೊಗುವು
6 ಚೀಲದ ಬೊಮ್ಮೆಯ ಕಲೌ
7 ರಲಿ ಅನ್ಕವನು ಕಾದಿ ಮಾರಾನ್
8 . . ತರ ಕೊಂದನು ಆತನ ಮ –
9 ಹಾಸತಿ ಚಿಯಕ್ಕನು ಕಲುವೆ –
10 ಸ ಬೊಮ್ಮೆಗೌಡನ ಚೆನ್ನಿ –
11 ಯಗನು.

ಅಡಿಟಿಪ್ಪಣಿಗಳು

1. Mysore Archaeological Report for the year 1933.
2. *Ibid.,* Nos. 77 and 78.
3. *Ibid.,* No. 78.
4. *Ibid.,* No. 77.
5. *Ibid.,* No. 78.
6. *Ibid.,* Text lines 3-4.
7. *Ibid.,* Text lines 1-2
8. *Ibid.,* Text lines 3–5
9. B. Sheik Ali (Ed.), *The Hoysala Dynasty,* Mysore, 1972, pp. 329-343.
10. *Ibid.,* pp. 341-42
11. *Ibid.,* p. 342
12. *Ibid.,* p. 342
13. *Ind. Ant.,* Vol. X, No. 87; ಡಾ॥ ಆರ್. ಗೋಪಾಲ್ (ಸಂ.), ವಿಜಯನಗರ ಅಧ್ಯಯನ, ಸಂ. 14, 2010, ಪು. 29.

14. B. Sheik Ali (Ed.), *The Hoysala Dynasty,* 1972, pp. 340-41.

15. ಡಾ॥ ಆರ್. ಗೋಪಾಲ್ (ಸಂ.), ವಿಜಯನಗರ ಅಧ್ಯಯನ, 2005, ಸಂ. 10, ಪು. 16–29.

16. *Quarterly Journal of the Mythic Society, (QJMS),* Vol. XCIX, No. 1, 2008, plates pp. 55, 57, 59.

17. ಡಾ॥ ಆರ್. ಗೋಪಾಲ್ (ಸಂ.), ವಿಜಯನಗರ ಅಧ್ಯಯನ, 2006, ಸಂ. 11, ಪು. 31–32.

18. *QJMS,* Vol. XCVII, No. 2, 2006, pp. 54-69. Also K.V. Ramesh (Ed.), "Sri Pushpanjali", Vol. II, 2004, *Dr. C.R. Srinivasan Commemoration Volume,* pp. 376-78.

19. *QJMS,* Vol. XCIX, No. 1, 2008, p. 52.

20. *Ibid.,* pp. 52-60.

21. *Ibid.,* p. 58.

22. *Epigraphia Carnatica* (Rice) Vol. X, Bg. No. 70.

23. *Inscriptions of Nellore District,* 104-105.

24. ಡಾ॥ ಆರ್. ಗೋಪಾಲ್, ವಿಜಯನಗರ ಅಧ್ಯಯನ, ಸಂ. 11, ಪು. 31–32; *QJMS,* XCIX-1, pp. 52-60.

25. Sheik Ali (Ed.), 1972, *The Hoysala Dynasty,* p. 342.

2. ಮಲಪನಗುಡಿಯ ಅಪ್ರಕಟಿತ ಶಿಲಾಶಾಸನ

ಎಸ್. ನಾಗರಾಜಪ್ಪ

ಮಲಪನಗುಡಿ ಹೊಸಪೇಟೆಯಿಂದ ಹಂಪಿಗೆ ಹೋಗುವ ಮಾರ್ಗದಲ್ಲಿರುವ ಚಿಕ್ಕ ಗ್ರಾಮ. ವಿಜಯನಗರದ ಐದನೆಯ ಸುತ್ತಿನ ಕೋಟೆ ಮತ್ತು ಮಲ್ಲಿಕಾರ್ಜುನ ದೇವಾಲಯವಿರುವ ಇಲ್ಲಿ ಕಾಲಾನಂತರ ಜನವಸತಿ ನೆಲೆಗೊಂಡಿದೆ. ಮಲ್ಲಿಕಾರ್ಜುನನಿಗೆ ಜನಪದರು ಆಡುಭಾಷೆಯಲ್ಲಿ ಮಲ್ಲಪ್ಪ, ಮಲಪ ಎಂದು ಕರೆಯುವ ಪರಿಪಾಠವಿದೆ. ಈ ದೇವಾಲಯ ಕೇಂದ್ರಿತವಾಗಿ ನೆಲೆಗೊಂಡ ಜನವಸತಿ ಪ್ರದೇಶಕ್ಕೆ ದೇಗುಲದ ಹೆಸರಿನಿಂದಲೇ, ಅಂದರೆ ಮಲ್ಲಪ್ಪನಗುಡಿ, ಮಲಪನಗುಡಿ ಎಂಬ ಹೆಸರು ಬಂದಿರಬಹುದು.

ಮಲ್ಲಿನಾರ್ಜುನ ದೇವಾಲಯವನ್ನು ಯಾರು ಕಟ್ಟಿಸಿದರು ಎಂಬ ಬಗ್ಗೆ ಯಾವುದೇ ಖಚಿತ ಆಧಾರಗಳಿಲ್ಲ. ದೇವಾಲಯದ ವಾಸ್ತುಶೈಲಿಯನ್ನು ಆಧರಿಸಿ ಇದೊಂದು ವಿಜಯನಗರದ ಕಾಲದ ದೇಗುಲವೆಂದು ಗುರುತಿಸಬಹುದು. ಉತ್ತರಾಭಿಮುಖವಾಗಿರುವ ಮಲ್ಲಿಕಾರ್ಜುನ ದೇವಾಲಯದಲ್ಲಿ ಗರ್ಭಗೃಹ, ಅಂತರಾಳ, ನವರಂಗ, ಮುಖಮಂಟಪವನ್ನು ಒಳಗೊಂಡಂತೆ ದೇಗುಲದ ಸುತ್ತಲೂ ಪ್ರಾಕಾರ ಗೋಡೆಯನ್ನು ಕಾಣಬಹುದು. ಗರ್ಭಗುಡಿಯಲ್ಲಿ ಶಿವಲಿಂಗ, ನವರಂಗದಲ್ಲಿ ನಂದಿ ಮತ್ತು ನವರಂಗಕ್ಕೆ ಹೊಂದಿಕೊಂಡಂತೆ ಕಟ್ಟಿರುವ ಚಿಕ್ಕ ಗರ್ಭಗೃಹದಲ್ಲಿ ಪಾರ್ವತಿ ವಿಗ್ರಹ ಸ್ಥಾಪಿಸಿರುವರು. ಮುಖಮಂಟಪದ ಮುಂಬದಿಗೆ ನಂತರದ ಕಾಲದಲ್ಲಿ ಗೋಡೆ ಕಟ್ಟಲಾಗಿದೆ. ದೇವಾಲಯದ ನೈರುತ್ಯ ಮೂಲೆಯಲ್ಲಿರುವುದು ಕಲ್ಯಾಣ ಮಂಟಪ. ದೇವಾಲಯವನ್ನು ಸುತ್ತುವರೆದಿರುವ ಪ್ರಾಕಾರಗೋಡೆಯ ಮೇಲಿನ ಕೈಪಿಡಿ ಗೋಡೆಯಲ್ಲಿರುವ ಕೂಡುಗಳಲ್ಲಿ ಗಾರೆಯಿಂದ ರಚಿಸಿರುವ ಕಾಲಾರಿಮೂರ್ತಿ, ಸ್ವಾಭಿಷೇಕಮೂರ್ತಿ, ಕಾರ್ತಿಕೇಯ?, ವೀರಭದ್ರ, ಗರುಡಾಸೀನ ವಿಷ್ಣು ಮುಂತಾದ ಶಿಲ್ಪಗಳನ್ನು ಕಾಣಬಹುದು. ಇವುಗಳ ಬಹುಭಾಗ ಭಗ್ನವಾಗಿವೆ. ದೇವಾಲಯದ ಮುಂಬದಿಯ ಮಹಾದ್ವಾರದ ಮೇಲೆ ಮೂರು ಅಂತಸ್ತುಗಳ ಗೋಪುರವಿದೆ.

ಮಲಪನಗುಡಿಯ ಮಲ್ಲಿಕಾರ್ಜುನ ದೇವಾಲಯದ ಮುಂಬದಿಯಲ್ಲಿರುವ ಶಾಸನವೊಂದು ಬಹು ಹಿಂದೆಯೆ ಪ್ರಕಟಣೆಯಾಗಿದೆ. ಇದು ಸಂಗಮ ವಂಶದ ಅರಸ ಇಮ್ಮಡಿ ದೇವರಾಯನ ಕ್ರಿ.ಶ. 1412ರ ಕಾಲದ ಶಾಸನ. ಬುಳ್ಳನಾಯಕರ ಮಗ ಹೆಗ್ಗಡೆ ಸೋಂವಣ ಅಂಣನು ಬಿಸಿಲುಹಳ್ಳಿ ಕಣಿವೆ ಮತ್ತು ಬಡುವಲಿಯ ಕಣಿವೆಗಳು ಸಂಧಿಸುವ ಸ್ಥಳದಲ್ಲಿ ಮಾಳಿಗೆ ಕೂಪಾರಾಮವನ್ನು ಕಟ್ಟಿಸಿ, ಅಲ್ಲಿ ಅರವಟಿಗೆಯನ್ನು ಇಡಿಸಿ, ಅದರ ಪರಿಕರಗಳು ಮತ್ತು ನಿರ್ವಹಣೆಗೆ ಹಾಗೂ ಒಂದುವೇಳೆ ಬಾವಿ ಶಿಥಿಲವಾದರೆ ಅದನ್ನು ಜೀರ್ಣೋದ್ಧಾರ ಮಾಡಲು ದತ್ತಿಗಳನ್ನು ನೀಡಿದ್ದ ಬಗ್ಗೆ ಈ ಶಾಸನ ತಿಳಿಸುತ್ತದೆ. ಇದೇ ದೇವಾಲಯದಲ್ಲಿ ದೊರೆತ ಮತ್ತೊಂದು ಅಪ್ರಕಟಿತ ಶಾಸನವನ್ನು ವಿವರಿಸುವುದು ಪ್ರಸ್ತುತ ಲೇಖನದ ಮುಖ್ಯ ಉದ್ದೇಶ.

ಮಲ್ಲಿಕಾರ್ಜುನ ದೇವಾಲಯದ ಗರ್ಭಗೃಹದ ಪಶ್ಚಿಮ ದಿಕ್ಕಿನ ಹೊರಬದಿಯ ಗೋಡೆಯಲ್ಲಿ ಉತ್ತರ ದಕ್ಷಿಣಾಭಿಮುಖವಾಗಿ ಶಾಸನವನ್ನು ಕೊರೆಯಲಾಗಿದೆ. ಇದು ಅಪ್ರಕಟಿತ ಶಿಲಾಶಾಸನ. ಸರಿಸುಮಾರು 17 ಸಾಲುಗಳಿರುವ ಶಾಸನವು 16ನೇ ಶತಮಾನದ ಕನ್ನಡ ಲಿಪಿ ಮತ್ತು ಸಂಸ್ಕೃತ ಭಾಷೆಯಲ್ಲಿದೆ. ಪದಪ್ರಯೋಗದಲ್ಲಿ ಸಹ ಅಲ್ಲಲ್ಲಿ ಚಿಕ್ಕಪುಟ್ಟ ದೋಷಗಳಿರುವುದನ್ನು ತಳ್ಳಿಹಾಕುವಂತಿಲ್ಲ. ಶಾಸನದ ಪಾಠ ಈ ರೀತಿಯಿದೆ.

ಶಾಸನ ಪಾಠ

1. ಶುಭಮಸ್ತು । ಸಮಸ್ತುಂಗ ಶಿರಶ್ಚುಂಬಿ ಚಂದ್ರಚಾಮರ ಚಾರವೇ ತಯ್ರೈಲೋಕ್ಯ ನಗರಾರಂಭ ಮೂಲ ಸ್ತಂಭಾಯ ಶಂಭವೇ [॥*] ಹರೇರ್ಲ್ಲೀಲಾವರಾಹಸ್ಯದಂಷ್ಟ್ರದಂಡಃ ಸಪಾತುವಃ ಹೇಮಾದ್ರಿ ಕಲಶಾಯತ್ರಧಾತ್ರೀಛತ್ರಶ್ರೀಯಂದಧೌ

2. ದರಲು ಕಲ್ಯಾಣಯಾಸ್ತು ತತ್ ಧಾಮ ಪ್ರತ್ಯೋಹತಿಮಿರಾಪಹಂ ಯದ್ಗಜೋಪ್ಯಗಜೋದ್ಭೂತಂ ನವನೀತ ಮಪ್ಯೋದ್ಭೂತ ಮಪನೀತತಮೋ ಮಹಃ ತಸ್ಯಾಸೀತ್ತನಯಸ್ತಾ

3. ಪೋಭಿರುತುಲೈರನ್ವರ್ಥನಾಮಾಬುಧಃ ಪುಣ್ಯೈರಸ್ಯ ಪುರೂರವಾ ಭುಜಬಲ್ಯೆ ರಾಯಾರ್ದ್ವಿಷಾನ್ನಿ ಪ್ರಾತಃ ತಸ್ಯಯೂರ್ನ್ನಹುಶೋಸ್ಯ ತಸ್ಯ ಪುರುಶೋಯುಧೇ ಯಯಾತಿಃ ಕ್ಷಿತ ಉಖ್ಯಾತಸ್ತಸ್ಯ ತಥುರ್ವಸುರ್ವಸುನಿಭಃ ಶ್ರೀ ದೇವಯಾನಿಪತೇಃ ತದ್ವಂಷೇ ದೇವಕೀಜಾನಿರ್ದಿದೀಪೇ

4. ತಿಂಮಭೂಪತಿಃ ಯಷಶ್ವೀ ತುಳುವೇಂದ್ರೇಷು ಯದೋ ಕೃಷ್ಣಯುವಾನ್ವಯೇ ತತೋ ಭೂರ್ತಿ ಬುಕ್ಕಮಾಜಾಗಿರೀಶ್ವರಕ್ಷಿತಿಪಾಲಕಃ ಅತ್ರಾಸಮಗುಣಭ್ರಂಷಂ ಮೋಳಿರತ್ನಮ್ಮಹೀಭುಜಾಂ ಸುರಣಾದುದ ಭೂತಸಾಂ ಸರಸಾವನಿಪಾತಿಕಃ ದೇವಕೀನಂದನಾತ್ ಕಾಲೋ ದೇವಕೀ ನಂದನಾದಿಃ

5. ಛಾ ವಿವಿಧ ಸುಕೃತೋದ್ಧಾಮೇ ರಾಮೇಶ್ವರ ಪ್ರಮುಖೇ ಮುಹುರ್ಮುದಿತ ಹೃದಯೇ ಸ್ಥಾನೇ ಸ್ಥಾನೇ ವೇಧತ ಯಥಾವಿಧಿ । ಬುಧಪರಿಉುತೋ ನಾನಾದಾನಾನಿ ಯೋ ಭುವಿಷೋಡಷ ತ್ರಿಭುವನಜನೋದ್ಗೀತಂ ಸ್ಯಿತಂ ಯಷಃ ಪುನರುಕ್ತಯನ್ ಕಾವೇರೀ ಮಾಶು ಬಧ್ವಾ ಬ ಹಳಜಲರರ್ಯಾ ತಾಂ ವಿಲಂಘ್ಯೈವ ಶ್ರಮಂ ಜೀವಗ್ರಾಹಂ

6. ಗ್ರಿಹಿತ್ವಾ ಸಮಿತಿ ಭುಜಬಲಾತ್ತಂ ಚ ರಾಜ್ಯಂ ತದೀಯಂ ಕ್ರಿತ್ವಾ ಶ್ರೀರಂಗಪೂರ್ವಂ ತದಪಿ ನಿಜವಶೇ ಪಟ್ಟಣಂ ಯೋಬಭಸೇ ಕೀರ್ತಿಸ್ತಂಭಂ ನಿಖಾಯ ತ್ರಿಭುವನ ಭವನಸ್ತೂಯ ಮಾನಾಪಾದಾನಾಃ ಚೇರ ಚೋಳಂ ಚ ಪಾಂಡ್ಯಂತಮಪಿ ಚ ಮಧುರಾವಲ್ಲಭಂ ಮಾನಭೂಷಂ ವೀರ್ಯೋದಗ್ರಂ ತುರುಷ್ಕಂ ಗಜಪತಿನೃ

7. ಪತಿಂ ಚಾಪಿಜಿತಾ ತದಂನ್ಯಾಂನ್ ಅಂ ಗಂಗಾತೀರಲಂಕಾಪ್ರಥಮಚರಮಭೂಭ್ರುತಟಾಕಂ ನಿಶಾಂತಂ ಖ್ಯಾತಃ ಕ್ಷೋಣೀ ಪತಿನಾಂ ಸ್ರಜಮಿವ ಶಿರಸಾಂ ಶಾಸನಂ ಯೋ ವ್ಯತಾನೀತ್ ತಿಪ್ಪಾಜಿ ನಾಗಲಾದೇವ್ಯೋಃ ಕೌಸಲ್ಯಾ ಶ್ರೀ ಸುಮಿತ್ರಯೋಃ ದೇವ್ಯೋರಿವ ನೃಸಿಂಹೇಂದ್ರಾತ್ ತಸ್ಮಾತ್ವಪಂಕ್ತಿರಥಾದಿವ ವೀರೌ ವಿನಯನೌ ರಾಮಲಕ್ಷ್ಮಣಾವಿವ

8. ನಂದನೌ ಜಾತೌ ವೀರನೃಸಿಂಹೇಂದ್ರಾ ಕೃಷ್ಣರಾಯ ಮಹೀಪತೀ ವೀರಶ್ರೀ ನಾರಸಿಂಹಸ್ಯ ವಿಜೆಯನಗರೇ ರತ್ನಸಿಂಹಾಸನಸ್ತಾಃ ಕೀರ್ತ್ಯಾನೀತ್ಯಾ ನಿರಸ್ಯನ್ನೃಗನಳನಹುಷಾನಪ್ಯನಂ ನ್ಯಾಮಥಾಂ ನ್ಯಾನ್ ಆ ಸೇತೋರಾಸುಮೇರೋರವನಿಸುರನುತಹಃ ಸ್ವಯಿರ ಮಾ ಚೋದಯಾದ್ರೇರಾ ಹಶ್ಚಾತ್ಯ ಚಲಾಂತ್ತಾದಖಿಳ ಹೃದಯ

9. ಮಾರ್ವಜ್ಯ ರಾಜ್ಯಂ ಶ್ಯಶಾಸು ನಾನಾದಾನಾನ್ಯ ಕಾರ್ಷುಷಿತಕನಕಪದಸಿ ಯಃ ಶ್ರೀ ವಿರೂಪಾಕ್ಷದೇವಃಸ್ಥಾನೇ ಶ್ರೀ ಕಾಳಹಸ್ತಿ ಶಿತುರಪಿ ನಗರೇ ವೆಂಕಟಾದ್ರಾಉುಚಃ ಕಾಂಚ್ಯಾಂ ಶ್ರೀಶೈಲೇ ಶೋಣಶೈಲೇ ಮಹತಿ ಹರಿಹರೇ ಹೋಬಲೆ ಸಂಗಮೇ ಚ ಶ್ರೀರಂಗೇ ಕುಂಭಘೋಣೇ ಹತತಮಸಿ ಮಹಾನಂದಿತೀರ್ಥೇ ನಿಉುತೌ ಗೋಕರ್ಣೆ ರಾಮ

10. ಸೇತೌ ಜಗತಿ ತದಿತರೇಷ್ಯಪ್ಯಶೇಶೇಷು ಪುಣ್ಯಸ್ಥಾನೇ ಷ್ವಾರಬ್ಧನಾನಾವಿಧ ಬಹಳ ಮಹಾದಾನಾವಾರಿ ಪ್ರವಾಹೈ ಯೆ ಸ್ಯೇಂದಂ ಚತುಕಂಗ ಪ್ರಕರಖುರರಜಃ ಶುಷ್ಯದಂ ಭೋದಿಮಗ್ನಕ್ಷ್ಮಾಬೃತ್ಪಕ್ಷಬಿದ್ಯೋಕ್ಯತ ತಿರಕುಲಿಶ ಧರೋತ್ಕರಿಂತಾ ಕುಂಠೀತಾಭೂತ್ ಬ್ರಹ್ಮಾಂಡಂ ವಿಶ್ವಚಕ್ರಂ ಘ

11. ಟಮುದಿತಮಹಾಭೂತಕಂ[ರ*]ತ್ನಧೇನುಂ ಸಪ್ತಾಂಭೋಧ್ವಿಂ ಚ ಕಲ್ಪಕ್ಷಿತಿರುಹಲತಿಕೇ ಕಾಂಚನೀಂ ಕಾಮಧೇನುಂ ಸ್ವರ್ನ್ನಕ್ಷ್ಮಾಂ ಯೋ ಹಿರಣ್ಯಶ್ವ ರಥಮಪಿ ತುಲಾಪುರೂಷಂ ಗೋಸಹಸ್ರಂ ಹೇಮಾಶ್ವಂ

12. ಹೇಮಗರ್ಭಂ ಕನಕಕರಿರಥಂ ದ್ವಿಪಂಚಲಾಂಗಲ್ಯಯತಾನೀತ್ ಪ್ರಾಜ್ಯಂ ಪ್ರಾಶಾಸ್ಯ(ಂ) ನಿರ್ವಿಘ್ನಂ ರಾಜ್ಯ ದ್ಯಾಮಿನ ಶ್ಯಾಶಿತುಂ ತಸ್ಮಿನ್ ಗುಣೇನ ವಿಖ್ಯಾತೇ ಕ್ಷಿತಿರಿಂದ್ರೇ ದಿವಂಗತೇ ತತೋಪ್ಯವಾರ್ಯ್ಯವೀರ್ಯ್ಯಃ ಶ್ರೀ ಕೃಷ್ಣರಾಯಮಹೀಪತಿಃ ಬಿಭರ್ತಿ ಮಣಿ

13. ಕೆಯ್ಯೂರ ನಿರ್ವಿಶೇಷಂ ಮಹಿಂ ಭುಜೇ ಕೀರ್ತ್ಯಾಯಸ್ಯ ಸಮಂತತುಃ ಪ್ರಸೃತಯಾ ವಿಶಂ ರು ಚೈಕ್ಯಂ ವಜ್ರೇ ದಿತ್ಯಾಶಂಕ್ಯ ಪುರಾ ಪುರಾರಿರಭವತ್ ಭಾಲೇಕ್ಷಣಃ ಪ್ರಾಯಶಃ ಪದ್ಮಾಕ್ಷೋಪಿ ಚತುರ್ಭುಜೋಜನಿ ಚತುರ್ವ್ವಕ್ತ್ರೋ ಭವತ್ಪದ್ಮಭೂಃ

14. ಕಾಳೀ ಖಡ್ಗಮಧಾದ್ರಾಮಾ ಚ ಕಮಲಂ ವೀಣಾಂ ಚ ವಾಣೀಕರೇ ಚ ಶತೃಣಾಂ ವಾಸಮೇತೇ ದದತಃ
ತಿರುಶಾಕಿಂ ನು ಸಪ್ತಾಂಬುರಾಸಿನ್ ನಾನಾಸೇನಾತುರಂಗತೃಟಿತವಸುಮೇತಿಧೂಳಿ–ಕಾಪಾಳಿಕಾಭಿಃ
ಸಂಶೋಷ್ಯಸ್ಫೀತಮೇತತ್ ಪ್ರಾತಿನಿಧಿಜಲಧ್ಧಿಶ್ರೇಣಿಕಾ ಯೋ ವಿಧತೇ ಬ್ರಂಹ್ಮಾಂಡ
ಸ್ವರ್ನ್ನಮೇರುಪ್ರಮುಖನಿಜಮಹಾದಾನತೋಯೈರಮೇಯೈ ಮದ್ದತಾಮರ್ಥಿ ಸಾರ್ಥಾ[ಃ*] ಶ್ರೀಯ

15. ಮಿಹಾಂ ಶುಚಿರಂ ಭುಜಂತಾಮಿತ್ಯವೇತ್ಯಪ್ರಾಯಃ ಪ್ರತ್ಯೋಹಹೇತೋಸ್ತಪನರಥಗತೇರಾಲಯಾಂನ್ ದೇವತಾನಾಂ ತತಧಿಃ ಚೈತ್ರಪ್ರಿತ್ಯಾಪಿ ಚ ಬಿರುಧಪದ್ಯೈರಂಕಿತಾನ್‌ಸ್ತತ್ರತಶ್ವಸ್ತಣಭಾಂಜಾತಪ್ರತಿಷ್ಠಾಂ ವ್ಯತನುತ ಭುವಿ ಯೋ ಭೂಭೃದಭ್ರಂ ಕಷಾಂಗಾಂ ಕಾಂಚೀ ಶ್ರೀಶೈಲ ಶೋಣಾಚಲ ಕನಕಸಭಾ ವೆಂಕಟದ್ರಿಪ್ತ ಭಖಷ್ರುವತ್ಯಣತ್ಯಸ

16. ವ್ವೇಷ್ವತನುತ ವಿಧಿವತ್ ಭೂಯಸೇ ಶ್ರೇಯಸೇಯೇಃ ದೇವಸ್ಥಾನೇಷು ತೀರ್ಥೆಷ್ವ ಪಿ ಕನಕತುಲಾಪುರುಷಾವನಿ ನಾದನೆಷೆಂಪನ್ಯೆರಪಿ ಸಮಮಖಿಲಯಿರಾಗಮೋಕ್ತಾನಿತ್ದಾನಿರೋಪ್ರಾಕೃತಪ್ರರತಿ ಪಾರ್ತೀವದಂಡಃ ಶೇಷಭುಜಃ ಕ್ಷಿತಿರಕ್ಷಣ ಶೌಂಡ ಭಾಷೆಗೆತಪ್ಪುವ ರಾಯರಗಂಡ ಸ್ತೋಶಕೃದರ್ಥ್ಥಿಶುಯೋರಣಚಂಡಃ ರಾಜಾಧಿರಾಜ ಇ

17. ಜಃ ಜಯಃ ಜ

ಪ್ರಸ್ತುತ ಶಾಸನವು ಅಪೂರ್ಣವಾಗಿದ್ದು, ಕೃಷ್ಣದೇವರಾಯನ ಕಾಲಕ್ಕೆ ಸಂಬಂಧಪಟ್ಟಿದೆ. ತುಳುವ ವಂಶದ ಪ್ರಶಸ್ತಿ ಭಾಗ ಮಾತ್ರವಿರುವ ಈ ಶಾಸನದಲ್ಲಿ ಕಾಲದ ಉಲ್ಲೇಖವಿಲ್ಲ. ಈ ಶಾಸನವು ಶುಭಮಸ್ತು ಮತ್ತು ನಮಸ್ತುಂಗ ಶಿರಶ್ಚುಂಬಿ ಚಂದ್ರ ಚಾಮರ ಚಾರವೇ ತ್ರೈಲೋಕ್ಯ ನಗರಾರಂಭ ಮೂಲ ಸ್ತಂಭಾಯ ಶಂಭವೇ ಎಂಬ ಶೈವ ಶ್ಲೋಕದಿಂದ ಪ್ರಾರಂಭವಾಗುತ್ತದೆ. ವಿಜಯನಗರದ ಮೂರನೇ ಅರಸು ಮನೆತನ ತುಳುವ ವಂಶದ ಪ್ರಶಸ್ತಿಯನ್ನು ಇದು ಉಲ್ಲೇಖಿಸುತ್ತದೆ. ಚಂದ್ರ, ಬುಧ, ನಹುಷ, ಆಯಷ, ಯಯಾತಿ ಮುಂತಾದ ಕಾಲ್ಪನಿಕ ವ್ಯಕ್ತಿಗಳನ್ನು ತುಳುವ ವಂಶದವರೆಂದು ಉಲ್ಲೇಖಿಸುತ್ತದೆ. ಆದರೆ ತುಳುವ ವಂಶದವರ ಐತಿಹಾಸಿಕ ವಂಶಾವಳಿ ಪ್ರಾರಂಭವಾಗುವುದು ತಿಮ್ಮಭೂಪನ ನಂತರ ಮಾತ್ರ. ಇವನ ಮಗ ನರಸನನ್ನು ಶ್ರೀರಂಗಪಟ್ಟಣವನ್ನು ವಶಪಡಿಸಿಕೊಂಡು ಚೋಳ, ಚೇರ ಮತ್ತು ಪಾಂಡ್ಯರನ್ನು ಮಧುರಾ(ಮಥುರಾ)ದ ಅರಸ ಮಾನಭೂಶ, ಒರಿಸ್ಸಾದ ಗಜಪತಿಗಳು ಮತ್ತು ತುರುಷ್ಕ(ಸುಲ್ತಾನ)ರನ್ನು ಸೋಲಿಸಿದ್ದ ಬಗ್ಗೆ ಉಲ್ಲೇಖಿಸುತ್ತದೆ.


ನರಸನಿಗೆ ತಿಪ್ಪಾಂಬ ಮತ್ತು ನಾಗಲಾದೇವಿ ಎಂಬ ಪತ್ನಿಯರಿದ್ದು, ಇವರಿಗೆ ಕ್ರಮವಾಗಿ ವೀರನರಸಿಂಹ ಮತ್ತು ಕೃಷ್ಣದೇವರಾಯ ಎಂಂಬ ಇಬ್ಬರು ಮಕ್ಕಳಿದ್ದರು. ಇವರನ್ನು ರಾಜಾಯಣದ ನಾಯಕ ಶ್ರೀರಾಮ ಮತ್ತು ಅವನ ಸಹೋದರ ಲಕ್ಷ್ಮಣರೊಡನೆ ಹೋಲಿಸಲಾಗಿದೆ. ಕೃಷ್ಣದೇವರಾಯ ವೀರನರಸಿಂಹನ ನಂತರ ಸಿಂಹಾಸನಾರೂಢನಾದ

ಬಗ್ಗೆ ಶಾಸನ ತಿಳಿಸುತ್ತದೆ. ಕೃಷ್ಣದೇವರಾಯ ಕಂಚಿ, ಕಾಳಹಸ್ತಿ, ವೆಂಕಟಾದ್ರಿ, ಶ್ರೀಶೈಲಂ, ಅಹೋಬಿಲ, ಶ್ರೀರಂಗಂ, ಕುಂಭಕೋಣಂ, ಅರುಣಾಚಲಂ, ಸಂಗಮ, ಹರಿಹರ, ರಾಮಸೇತು ಮತ್ತು ಗೋಕರ್ಣ ಮುಂತಾದ ಪವಿತ್ರ ಯಾತ್ರಾಸ್ಥಳಗಳಲ್ಲಿ ವಿವಿಧ ದಾನಗಳನ್ನು ಮಾಡಿದನು. ಹಾಗೆಯೇ ಗೋಸಹಸ್ರ, ಹೇಮಾಶ್ವ, ಬ್ರಹ್ಮಾಂಡ, ವಿಶ್ವಚಕ್ರ ಮುಂತಾದ ಮಹಾದಾನಗಳನ್ನು ಉಲ್ಲೇಖಿಸುತ್ತದೆ. ಶಾಸನದಲ್ಲಿ ಅರಸನ ಬಿರುದುಗಳ ಉಲ್ಲೇಖ ಪ್ರಾರಂಭವಾಗುತ್ತಿದ್ದಂತೆ ಶಾಸನವನ್ನು ಅರ್ಧಕ್ಕೆ ನಿಲ್ಲಿಸಿ ಅಂತ್ಯಗೊಳಿಸಲಾಗಿದೆ. ದೇವಾಲಯವನ್ನು ಸರಿಸುಮಾರು ಮೂರು ಅಡಿ ಎತ್ತರದ ಅಧಿಷ್ಠಾನದ ಮೇಲೆ ಕಟ್ಟಿರುವುದರಿಂದ ಗರ್ಭಗೃಹದ ಗೋಡೆ ಅಲ್ಲಿಗೆ ಕೊನೆಗೊಳ್ಳುತ್ತದೆ. ಹಾಗಾಗಿ ಪಶ್ಚಿಮ ಗೋಡೆಯಲ್ಲಿ ಶಾಸನ ಕೊರೆಯಲು ಬೇಕಾದ ಸ್ಥಳದ ಅಭಾವ ಉಂಟಾಗಿ ಶಾಸನವನ್ನು ಅರ್ಧಕ್ಕೆ ನಿಲ್ಲಿಸಿದಂತೆ ತೋರುತ್ತದೆ. ಶಾಸನ ಕೃಷ್ಣದೇವರಾಯನಿಗೆ ಸಂಬಂಧಿಸಿರುವುದರಿಂದ ಶಾಸನದ ಕಾಲ ನಿರ್ಧರಿಸಲು ಸಹಾಯಕವಾಗಿದ್ದು ಕ್ರಿ.ಶ. 16ನೇ ಶತಮಾನದ ಪ್ರಾರಂಭಿಕ ಕಾಲದ ಶಾಸನವೆಂದು ಗುರುತಿಸಬಹುದು.

ವಿಜಯನಗರದ ಅರಸರಾದ ಕೃಷ್ಣದೇವರಾಯ ಮತ್ತು ಅಚ್ಯುತರಾಯನ ಕಾಲದ ಕೆಲವು ಶಿಲಾ ಮತ್ತು ತಾಮ್ರಶಾಸನಗಳಲ್ಲಿ ಇದೇ ಮಾದರಿಯ ಪ್ರಶಸ್ತಿಯನ್ನು ಸಾಧಾರಣವಾಗಿ ಕಾಣಬಹುದು. ಪ್ರಸ್ತುತ ಶಾಸನ ಅಪೂರ್ಣವಾಗಿರುವುದರಿಂದ ಐತಿಹಾಸಿಕ ಮಹತ್ವ ಹೊಸ ಸಂಗತಿಗಳನ್ನೇನು ಉಲ್ಲೇಖಿಸುವುದಿಲ್ಲ. ಹಾಗಾಗಿ ಈ ಶಾಸನವನ್ನು ವಿಜಯನಗರ ಕಾಲದ ಶಾಸನಗಳ ಪಟ್ಟಿಗೆ ಸೇರುವ ಒಂದು ಹೊಸ ಸೇರ್ಪಡೆ ಎನ್ನಬಹುದಷ್ಟೆ.

ಆಧಾರ ಗ್ರಂಥಗಳು

1. ದೇವರಕೊಂಡಾರೆಡ್ಡಿ (ಸಂ.), *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–1*, 1998, ಬಳ್ಳಾರಿ ಜಿಲ್ಲೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
2. ಪರಮಶಿವಮೂರ್ತಿ ಡಿ.ವಿ (ಸಂ.), *ಕೃಷ್ಣದೇವರಾಯನ ಶಾಸನಗಳು*, ಸಂಪುಟ–1, 2010, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
3. ಮಹದೇವ. ಸಿ, ಸುಬ್ಬಣ್ಣ ರೈ ಎ., ಮಾಧವ ಪೆರಾಜೆ, *ಹೊಸಪೇಟೆ ತಾಲ್ಲೂಕು ದರ್ಶನ*, 2002, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
4. ಸುರೇಶ್ ಕೆ.ಎಮ್., ವಾಸುದೇವ ಬಡಿಗೇರ, ಮಾಡಲಗೇರಿ ಕೊಟ್ರೇಶ್, ಸೋಮಶೇಖರ್ ಎಸ್.ವೈ., *ಕರ್ನಾಟಕ ದೇವಾಲಯ ಕೋಶ*, 1999, ಬಳ್ಳಾರಿ ಜಿಲ್ಲೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.



ಮಲಪನಗುಡಿಯ ಮಲ್ಲಿಕಾರ್ಜುನ ದೇವಾಲಯದಲ್ಲಿದ ಶಾಸನ

3. ಬೆಂಗಳೂರು ಜಿಲ್ಲೆ ಆನೇಕಲ್ ತಾಲ್ಲೂಕು ಮಾಯಸಂದ್ರ ಶಾಸನದ ಪರಿಷ್ಕೃತ ಪಾಠ ಮತ್ತು ವಿಶ್ಲೇಷಣೆ

ಎಸ್. ಕಾರ್ತಿಕ್

ವಿಜಯನಗರ ಸಾಮ್ರಾಜ್ಯದ ಅರಸರು ಭಾರತದಾದ್ಯಂತ ಖ್ಯಾತಿ ಪಡೆದವರು. ಈ ಸಾಮ್ರಾಜ್ಯವನ್ನು ಆಳಿದ ಸಂಗಮ ವಂಶದ ಪ್ರಸಿದ್ಧ ಅರಸರಲ್ಲಿ ಒಂದನೆಯ ದೇವರಾಯನು ಪ್ರಮುಖನಾದವನು. ಈತನ ಆಳ್ವಿಕೆಯ ಕಾಲ ಕ್ರಿ.ಶ. 1406–1422. ಈತನ ಶಾಸನಗಳು ಬಹುವಾಗಿ ದೊರೆತಿವೆ. ಅಂತಹ ಶಾಸನಗಳಲ್ಲಿ ಕರ್ನಾಟಕ ರಾಜ್ಯದ ಬೆಂಗಳೂರು ಜಿಲ್ಲೆ ಆನೇಕಲ್ ತಾಲ್ಲೂಕು ಮಾಯಸಂದ್ರದಲ್ಲಿ ದೊರೆತು ಪ್ರಕಟವಾಗಿರುವ ಶಾಸನವೂ ಒಂದಾಗಿದೆ.[1] ಈ ಶಾಸನವು ಮೊದಲ ಬಾರಿಗೆ ಬೆಂಜಮಿನ್ ಲೂಯಿ ರೈಸ್ ಅವರಿಂದ ಸಂಪಾದಿತವಾಗಿ 1905ರಲ್ಲಿ ಪ್ರಕಟವಾದ ಬೆಂಗಳೂರು ಜಿಲ್ಲೆಯ ಶಾಸನ ಸಂಪುಟವಾದ ಎಪಿಗ್ರಾಫಿಯಾ *ಕರ್ಣಾಟಿಕಾ*, ಸಂಪುಟ–9ರಲ್ಲಿ ಮುದ್ರಿತವಾಗಿದೆ.[2] ಅಂದಿನ ಕಾಲದ ಮುದ್ರಣ, ಭೌಗೋಳಿಕ ಪರಿಸ್ಥಿತಿ, ಕ್ಷೇತ್ರಕಾರ್ಯಕ್ಕೆ ಇದ್ದ ಅನುಕೂಲ, ಅನಾನುಕೂಲ ಇತ್ಯಾದಿ ಇತಿಮಿತಿಗಳ ಹಿನ್ನೆಲೆಯಲ್ಲಿ ಶಾಸನಪಾಠವು ತಕ್ಕಮಟ್ಟಿಗೆ ತೃಪ್ತಿಕರವೆಂದು ತೋರುವ ರೀತಿಯಲ್ಲಿಯೇ ಮುದ್ರಿತವಾಗಿದೆ. ಆದರೂ ಅನೇಕ ಕಡೆ ಲಿಪಿ ಸಾದೃಶ್ಯಗಳಿಂದಾದ ಓದುವಿಕೆಯ ದೋಷಗಳು ಹಾಗೂ ಇತರ ಗೊಂದಲಗಳು ಕಂಡುಬರುತ್ತಿವೆ. ಈ ಶಾಸನವು ಎರಡನೆಯ ಬಾರಿಗೆ 2004 ರಲ್ಲಿ ಶ್ರೀನಿವಾಸ ರಿತ್ತಿ ಮತ್ತು ಬಾ. ರಾ. ಗೋಪಾಲ್ ಅವರ ಸಂಪಾದಕತ್ವದಲ್ಲಿ ಪ್ರಕಟವಾಗಿರುವ *Inscriptions of the Vijayanagara Rulers* ಸಂಪುಟದಲ್ಲಿ ಪ್ರಕಟವಾಗಿದೆ.[3] ಇದರಲ್ಲಿ ಎಪಿಗ್ರಾಫಿಯಾ *ಕರ್ಣಾಟಿಕಾ* ಸಂಪುಟದ ರೋಮನ್ ಲಿಪ್ಯಂತರ ಪಾಠವನ್ನು ಮೂಲ ಪಾಠವಾಗಿ ಅಂಗೀಕರಿಸಲಾಗಿದೆ. ಆದರೂ ಎರಡು ಕಡೆ ಪಾಠವ್ಯತ್ಯಾಸಗಳಿವೆ. ಇವುಗಳಿಗೆ ಯಾವುದೇ ಆಧಾರಗಳನ್ನು ಸೂಚಿಸಿಲ್ಲ. ಎಪಿಗ್ರಾಫಿಯಾ *ಕರ್ಣಾಟಿಕಾ* ಸಂಪುಟದಲ್ಲಿ ರೋಮನ್ ಲಿಪ್ಯಂತರ ಪಾಠಕ್ಕೂ, ಕನ್ನಡ ಲಿಪಿಯ ಪಾಠಕ್ಕೂ ಅನೇಕ ಕಡೆ ವ್ಯತ್ಯಾಸಗಳಿವೆ. ಇವುಗಳನ್ನು ಯಾರೂ ಸರಿಯಾಗಿ ಗಮನಿಸಿಲ್ಲ. ಇವೆರಡರ ತೌಲನಿಕ ಪರಿಶೀಲನೆಯಿಂದ ಶಾಸನದ ಮೂಲಪಾಠವನ್ನು ಗೊತ್ತುಮಾಡಬೇಕು. ಶಾಸನದಲ್ಲಿ ಉಲ್ಲೇಖವಾಗಿರುವ ಕಾಲದ ಬಗೆಗೆ ಗೊಂದಲ ಉಂಟಾಗಿದೆ. ಈ ಕಾರಣಗಳಿಂದಲೂ ಶಾಸನದ ಉತ್ತಮ ಛಾಯಾಚಿತ್ರ ಲಭ್ಯವಾದ ಕಾರಣದಿಂದಲೂ ಇತರ ಬಾಹ್ಯಾಧಾರಗಳ ನೆರವಿನಿಂದಲೂ ತೃಪ್ತಿಕರವಾದ ಪರಿಷ್ಕೃತ ಪಾಠವನ್ನು ನೀಡಲು ಪ್ರಯತ್ನಿಸಲಾಗಿದೆ. ಪ್ರಕೃತ ಲೇಖಕನು ನೀಡಿರುವ ಪಾಠಕ್ಕೂ ಎಪಿಗ್ರಾಫಿಯಾ *ಕರ್ಣಾಟಿಕಾ* ಸಂಪುಟದಲ್ಲಿ ಪ್ರಕಟವಾಗಿರುವ ಪಾಠಕ್ಕೂ ಅನೇಕ ವ್ಯತ್ಯಾಸಗಳಿವೆ. ಈ ವ್ಯತ್ಯಾಸಗಳನ್ನು ರೈಸ್ ಪರಿಷ್ಕರಣದ ಪಾಠ ಎಂಬರ್ಥದಲ್ಲಿ ರೈಸ್ ಎಂಬ ಹೆಸರಿನ ಮುಂದೆ ಶಾಸನಪಾಠದ ಅಡಿಯಲ್ಲಿಯೇ ಸೂಚಿಸಲಾಗಿದೆ. ಅಲ್ಲಿಯೇ ಅಗತ್ಯವಿರುವೆಡೆಗಳಲ್ಲಿ ಚರ್ಚೆಗಳನ್ನೂ ಕಿರುಟಿಪ್ಪಣಿಗಳನ್ನೂ ಕೊಡಲಾಗಿದೆ. ಶಾಸನಪಾಠದೊಳಗೆ [] ಚೌಕಕಂಸವನ್ನು ಪಾಠ ಸಂಪೂರ್ಣವಾಗಿ ತ್ರುಟಿತವಾದೆಡೆ ಮತ್ತು ಕಂಡರಣೆ ಮಾಡುವಾಗ ಅಕ್ಷರಗಳು ಬಿಟ್ಟುಹೋಗಿರುವೆಡೆ ಬಳಸಿದ್ದು, [*] ಈ ಚಿಹ್ನೆಯನ್ನು ಅಕ್ಷರಗಳು ಅಸ್ಪಷ್ಟವಾಗಿ ತೋರುತ್ತಿರುವೆಡೆ ಬಳಸಿದೆ. { } ಪುಷ್ಪಾವರಣವನ್ನು ಅನಗತ್ಯ ಪಾಠವನ್ನು ಸೂಚಿಸಲು ಬಳಸಿದೆ. ಮೊದಲು ಈ ಶಾಸನದ ಪರಿಷ್ಕೃತ ಶಾಸನ ಪಾಠವನ್ನು ನೀಡಲಾಗಿದೆ. ಕೊನೆಗೆ ಈ ಶಾಸನದ ಬಗೆಗೆ ಕಿರಿದಾಗಿ ವಿಶ್ಲೇಷಣೆಯನ್ನು ಮಾಡಲಾಗಿದೆ.

ಶಾಸನದ ಪರಿಷ್ಕೃತಪಾಠ

ಶಾಸನದ ಮುಂಭಾಗ

1 ಶ್ರೀ[1]ಮ{ಂ}ನ್[1] [ಮ]ಹಾರಾಜಾಧಿರಾಜ ರಾಜಪರಮೇಶ್ವರ
2 [2]ಶ್ರೀ ವೀರಹರಿಹರ[2] ಮಹಾರಾಯನ ಕುಮಾರ ದೇವ
3 ರಾಯ [3]ಒಡೆಯರು[3] [4]ಪ್ರುಥ್ವಿರಾಜ್ಯಂಗೆಯಿವ[4] ಶಕವ
4 ರುಷ [5]1335ನೆಯ[5] ನಂದನ ಸಂವತ್ಸರದ [6]ಮಾರ್ಗ್ಗಸಿರ ಸು 11 [ಶಿ * ಆ][6]
5 ಶ್ರೀ[7]ಮ{ಂ}ನ್[7] ಮಹಾಮೂವರು ರಾಯರ ಗಂಡ [8]ಜುಂಜೋಬೆಯ ನಾಯ್ಕ
6 ರ[8] ಮಕ್ಕಳು ಹಿರಿಯ [9]ಮುದ್ದೆಯನಾಯ್ಕರು[9] [10]ನಂಮ[10] ನಾಯ್ಕತನಕ್ಕೆ ಸ
7 ಲುವ [11]ಮೊರಸುನಾಡ[11] [12]ಸೋಮಗೊಂಡಿನಹಳ್ಳಿಯಲೂ ಮಂಗಳವಾರ[12]
8 [13]ಸಂಥೆಯನೂ[13] ಕಟ್ಟಿಸಿ ಆ [14]ಮೊರಸುನಾಡ ಪ್ರಬು[14] ಚೊಕ್ಕದೇವ ಮಾರದೇವ
9 [15]ನೇಮನಾಥ[15] ಕೇತಪ್ಪ [16]ಗಂಗಿದೇವನೊಳಗಾದ ಪ್ರಬುಗಳು[16] ಅಯಿವತ್ತಾಱು
10 ದೇಶದ ಹಲರಿಗೆ ಮುಖ್ಯರಾದ [17]ಗುಂಡಿಸೆಟ್ಟಿ ತಾಳಮು ತಿರುಮಲೆ ಸೆಟ್ಟಿ
11 ಸಹದೇವಿ ಸೆಟ್ಟಿಯ ಮಂಚಿಸೆಟ್ಟಿ ಒಳಗಾದ[17] ಸಮಸ್ತ ನಾಡೂ [18]ಹಲ
12 ರೂ ಕೂಡಿ[18] ಪಟ್ಟಣಸಾಮಿತನವನೂ ಮಾರಿಸೆಟ್ಟಿಯ ಮಕ್ಕಳು ದಂಡಿಸೆ
13 ಟ್ಟಿ ತಿರುಮಲೆ ಸೆಟ್ಟಿಗಳಿಗೆ ಕೊ[ಟ್ಟು*] ಸಲಿಸುವ ಮಾನ್ಯ ಹೊಲ [19]ಹದಿನಯ ಗು
14 ಳ[19]ಗದ್ದೆ [20]ತತ್ತನಕೆಱೆಯ[20] ಕೆಳಗೆ [21]ಹದಿನು ಗುಳ ಬೆಳ್ಳವಾರಣದ

ಶಾಸನದ ಹಿಂಭಾಗ

15 [ಕೆ]ಱೆಯ[21] ಕೆಳಗೆ ಹತ್ತು ಕೊಳಗ [22]ಅಂನು[22] ಗದ್ದೆ [23]ಖಂಡುಗದೆ ಅಯಿದು ಗುಳ[23]
16 [24]ಸಂತೆಯ ಆಯ ತಂಮ ಮನೆ ಪಟ್ಟದೆ ಹೇಱು ಹತ್ತು[24] ಕತ್ತೆ [25]ಕುದುರೆ[25] ತೊತ್ತು
17 [26]ಮದುವೆಯ ಸುಂಕ ಸರ್ವ್ವ ಮಾ{ಂ}ನ್ಯವಾಗಿ ಆಚಂದ್ರಾರ್ಕ್ಕಸ್ಥಾಯಿಯಾಗಿ ಸಲಿಸಿ[26]
18 ಕೊಡುವೆಲೂ ಯೀ [27]ಶಾಸನಕ್ಕೆ[27] ಆರೊಬ್ಬರು [28]ಅಳುಪಿದವರು[28] ನಾಡಿಗೂ ಹಲರಿ
19 ಗೂ ತಪ್ಪಿದವರು ಗಂಗೆಯ ತಡಿಯಲಿ ಕಪಿಲೆಯ ಕೊಂದ [29]ಪಾಪದಲ್ಲಿ[29] ಹೋಹ
20 ರು [30]ಯಿ ಮರಿಯಾದೆಯಲಿ[30] ಸುಖದಿಂ ಭೋಗಿಸುವಂತಾಗಿ [31]ನಾಡೂ ಹಲ
21 ರೂ[31] ಕೊಟ್ಟ ಶಾಸನ ಮಂಗಳ ಮಹಾ ಶ್ರೀ ಶ್ರೀ ಶ್ರೀ ಶ್ರೀ
22 [32]ಮಂಚಿಸೆಟ್ಟಿ ಸಹಿತ[32] ಮೂಱುಬಾಗವಾಗಿ [33]ಆನುಬೋಗಿಸು
23 ವರು[33] ಯಿವರಿಗೆ ಮನೆ ಹತ್ತು [34]ಅಂಕಣವನೂ ಸಲಿಸಿಪಿ
24 ಹೆಲೂ[34] ಶ್ರೀ ಶ್ರೀ ಶ್ರೀ[35] ॥

ಶಾಸನದಲ್ಲಿ ಉಲ್ಲೇಖಿಸಲಾದ ಅಡಿ ಟಿಪ್ಪಣಿ ಸಂಖ್ಯೆಯ ವಿವರಗಳು

1. ರೈಸ್ : ಮನ್ಮ [ಶಾಸನದಲ್ಲಿ ನ ಕಾರಕ್ಕೆ ಮ ಒತ್ತು ಇಲ್ಲ. ಶ್ರೀಮಂನ್ ಹಾ ಎಂದು ಪಾಠವಿದ್ದು ಕಂಡರಣೆ ಮಾಡುವಾಗ ಮ ಬಿಟ್ಟುಹೋಗಿದೆ]
2. ರೈಸ್ : ವೀರಹರಿಹರ
3. ರೈಸ್ : ವೊಡೆಯರು
4. ರೈಸ್ : ಪೃಥ್ವೀ (ವಿ) ರಾಜ್ಯಂಗೆಯುವ

5. ರೈಸ್ : 1332ನೆಯ [ಶಾಸನದಲ್ಲಿ 1335 ಎಂದು ಸ್ಪಷ್ಟವಾಗಿ ಕಾಣಿಸುತ್ತಿದೆ]
6. ರೈಸ್ : ಮಾರ್ಗಶಿರ ಸು . . . [ಶಾಸನದಲ್ಲಿ 11 ಎಂಬ ಅಂಕೆಗಳನ್ನು ತೀರಾ ಒತ್ತಾಗಿ ಕಂಡರಿಸಲಾಗಿದೆ. ಮುಂದಿನ ಅಕ್ಷರಗಳನ್ನು ಶಿ ಆ ಎಂದು ಅಸ್ಪಷ್ಟವಾಗಿ ಓದಲು ಆಸ್ಪದವಿದೆ. ಈ ಭಾಗವನ್ನು ಶಾಸನತಜ್ಞರಾದ ಡಾ. ದೇವರಕೊಂಡಾರೆಡ್ಡಿಯವರು ಸೂಕ್ಷ್ಮವಾಗಿ ಗಮನಿಸಿ ಪಾಠವನ್ನು ಪುನಾರಚಿಸುವಲ್ಲಿ ನೆರವು ನೀಡಿದ್ದಾರೆ]
7. ರೈಸ್ : ಮನ್ನ
8. ರೈಸ್ : ಜುಂಜೋಜಿ ನಾಯ್ಕರ (ರೋಮನ್ ಲಿಪ್ಯಂತರದಲ್ಲಿ 'ಜುಂಜೋಜಿ ನಾಯಕರ' ಎಂದಿದೆ)
9. ರೈಸ್ : ಮುದಿಯನಾಯ್ಕರು (ರೋಮನ್ ಲಿಪ್ಯಂತರದಲ್ಲಿ 'ಮುದಿಯ ನಾಯಕರು' ಎಂದಿದೆ)
10. ರೈಸ್ : ನಮ್ಮ ನಾಯ್ಕತನಕ್ಕೆ (ರೋಮನ್ ಲಿಪ್ಯಂತರದಲ್ಲಿ 'ನಮ್ಮ ನಾಯಕತನಕ್ಕೆ' ಎಂದಿದೆ)
11. ರೈಸ್ : ಹಿರಸುನಾಡ [ಶಾಸನದಲ್ಲಿ ಮೊರಸುನಾಡ ಎಂಬ ಪಾಠವೇ ಇದ್ದರೂ ಮೊ ಎಂಬುದನ್ನು ಹಿ ಎಂದು ಕೂಡ ಓದಲು ಸಾಧ್ಯವಿದೆ]
12. ರೈಸ್ : ಸೋಮಗೊಂಡನಹಳ್ಳಿಯಲು . . . [ಶಾಸನದಲ್ಲಿ ಸೋಮಗೊಂಡಿನಹಳ್ಳಿಯಲೂ ಎಂಬುದರ ನಂತರ ಸ್ಪಷ್ಟವಾಗಿ ಮಂಗಳವಾರ ಎಂಬುದು ಕಾಣುತ್ತಿದೆ. *Inscriptions of Vijayanagara Rulers* ಸಂಪುಟದಲ್ಲಿ somagaomdanahalliyalu ಎಂಬ ಪಾಠವಿದೆ]
13. ರೈಸ್ : ಸಂಥೆನೂ [=ಸಂತೆಯನ್ನು]
14. ರೈಸ್ : ಹಿರಸುನಾಡ ಪ್ರಭು [ಶಾಸನದಲ್ಲಿ ಮೊರಸುನಾಡ ಎಂಬ ಪಾಠವೇ ಇದ್ದರೂ ಮೊ ಎಂಬುದನ್ನು ಹಿ ಎಂದು ಕೂಡ ಓದಲು ಸಾಧ್ಯವಿದೆ. ಶಾಸನದಲ್ಲಿನ ಪ್ರಬು ಎಂಬುದು ಪ್ರಭು ಎಂಬುದರ ಅಪಲಿಖಿತ]
15. ರೈಸ್ : ನಿಮಿನಾಡ [ಶಾಸನದಲ್ಲಿ ಸ್ಪಷ್ಟವಾಗಿ ನೇಮನಾಥ ಎಂದೇ ಇದೆ]
16. ರೈಸ್ : ಗಂಗಿದೇವನೊಳಗೌಡಪ್ರಭುಗಳು {ಶಾಸನದಲ್ಲಿನ ಪ್ರಬು ಎಂಬುದು ಪ್ರಭು ಎಂಬುದರ ಅಪಲಿಖಿತ. ರೋಮನ್ ಲಿಪ್ಯಂತರದಲ್ಲಿ 'ಗಂಗಿದೇವನ್ . . . .' ಎಂದಿದೆ. *Inscriptions of Vijayanagara Rulers* ಸಂಪುಟದಲ್ಲಿ ರೈಸ್ ಸಂಪುಟದ ರೋಮನ್ ಲಿಪ್ಯಂತರದಲ್ಲಿ ನೀಡಿರುವ ತ್ರುಟಿತ ಭಾಗವನ್ನು ಗಮನಿಸಿ gamdidevanola [gada] gauda ಎಂಬ ಪಾಠವನ್ನು ನೀಡಲಾಗಿದೆ. ಕನ್ನಡ ಲಿಪಿ ಪಾಠವನ್ನು ಗಮನಿಸದೆ ಇರುವುದರಿಂದ ಈ ಪಾಠ ಸಮರ್ಥನೀಯವಲ್ಲ}
17. ರೈಸ್ : ಗುಂಡಿಶೆಟ್ಟಿ ತಾರಮು ತಿರುಮಲ್ಲಶೆಟ್ಟಿ ಸಹದೇವಿಶೆಟ್ಟಿಯ ಮಂಚಿಶೆಟ್ಟಿವೊಳಗಾದ
18. ರೈಸ್ : ಹಲಯ ಕೋಟೆ
19. ರೈಸ್ : ಹದಿನೈದುನಯಿಗುಳ
20. ರೈಸ್ : ತತ್ತನಕೆಜೀ
21. ರೈಸ್ : ಸಾವಿರಯಿಗುಳ ಬೆಳಿವಾರಣದ . . ಕೆಜೀಯ [ಕೆಜೀಯ ಶಬ್ದದಲ್ಲಿನ ಕೆ ಅಕ್ಷರ ಇರುವ ಭಾಗದಲ್ಲಿ ಕಲ್ಲು ಒಡೆದಿದೆ]
22. ರೈಸ್ : ಅಂತೂ
23. ರೈಸ್ : ಖಂಡಗದ ಅಯಿದುಕೊ
24. ರೈಸ್ : ಸಂತಿಯ ಆಯ ನಂಮನೆ ಪಟ್ಟಡಿ ಹಜುವತ್ತು (ರೋಮನ್ ಲಿಪ್ಯಂತರದಲ್ಲಿ 'ಸಂತೆಯ ಆಯ ನಂಮನೆ ಮನೆ ಪಟ್ಟಡಿ ಹಸು ಎತ್ತು' ಎಂದಿದೆ)
25. ರೈಸ್ : ಕುದರೆ
26. ರೈಸ್ : ಮದಿವೆಯ ಸುಂಕ ಸರ್ವಮಾನ್ಯವಾಗಿ ಆ ಚಂದ್ರಾರ್ಕಸ್ಥಾಯಿಯಾಗಿ ಸಲಿಸು
27. ರೈಸ್ : ಶಾಸನಕ್ಕೆ
28. ರೈಸ್ : ಅಳಪಿದವರು
29. ರೈಸ್ : ಪಾಪದಲ್ಲಿ
30. ರೈಸ್ : ಯೀ ಮರಿಯಾದೆಯಲ್ಲಿ
31. ರೈಸ್ : ನಾಡು ಹಲ . . . . ರೂ
32. ರೈಸ್ : ಮಂಚಶೆಟ್ಟಿ ಸಮೇತ
33. ರೈಸ್ : ಅನುಭವಿಸುವರು
34. ರೈಸ್ : ಅಂಕಣವನೂ ಸಲಿಸಿದೆಲು
35. ರೈಸ್ : ಶ್ರೀ

ಶಾಸನದ ಕಾಲ: ಶಾಸನದಲ್ಲಿ ಶಕವರ್ಷ 1335ನೆಯ ನಂದನ ಸಂವತ್ಸರ ಮಾರ್ಗಶಿರ ಶುದ್ಧ 11 [ಶಿ ಆ]ದಿವಾರ ಎಂದು ಸ್ಪಷ್ಟವಾಗಿ ನಮೂದಾಗಿದೆ. ಆದರೆ ರೈಸ್ ಅವರ ಸಂಪುಟದಲ್ಲಿ ಶಕವರ್ಷ 1332 ಎಂದು ಅಚ್ಚಾಗಿದೆ. ಆದರೆ ಶಾಸನ ಪಾಠದ ಸಾರಾಂಶವನ್ನು ನೀಡುವಾಗ ಕ್ರಿ.ಶ. 1412 ಎಂದು ಮುದ್ರಿತವಾಗಿದೆ. ಇದರಿಂದಾಗಿ ಶಕ 1332 ಎಂಬುದನ್ನು ಸಸಂದೇಹವಾಗಿ ಓದಿರುವುದು ಸ್ಪಷ್ಟವಾಗುತ್ತದೆ. ಆದರೆ ತಿಥಿ, ವಾರದ ಉಲ್ಲೇಖವಿರುವ ಭಾಗದಲ್ಲಿ ಅಕ್ಷರ ಅಸ್ಪಷ್ಟವಾಗಿರುವುದರಿಂದ ತ್ರುಟಿತವೆಂದು ತೋರಿಸಲಾಗಿದೆ. *Inscriptions of the Vijayanagara Ruler* ಸಂಪುಟದಲ್ಲಿ 'ಶಾಸನದಲ್ಲಿ ಶಕ 1332 ಎಂಬುದು ಶಕ 1334 ಬದಲಾಗಿ ತಪ್ಪು ಬಿದ್ದಿದೆ. ತಿಥಿಯ ಉಲ್ಲೇಖವಿರುವ ಭಾಗ ತ್ರುಟಿತವಾಗಿದೆ. ಮಾರ್ಗಶಿರ ಶುದ್ಧ ಎಂಬ ಉಲ್ಲೇಖವಿರುವ ಕಾರಣ ಶಾಸನದ ಕಾಲವನ್ನು ಕ್ರಿ.ಶ. 1412, ನವೆಂಬರ್ 5ರಿಂದ ನವೆಂಬರ್ 18ರೊಳಗೆ ಎಂದು ಹೇಳಬಹುದು' ಎಂಬುದಾಗಿ ಬರೆಯಲಾಗಿದೆ. *Inscriptions of the Vijayanagara Rulers* ಸಂಪುಟದಲ್ಲಿನ ಕಾಲಗಣನೆ ಜೂಲಿಯನ್ ಪಂಚಾಂಗದ ರೀತಿಯದ್ದಾಗಿದೆ. ಬಿ. ಆರ್. ಗೋಪಾಲ್ ಅವರು *Vijayanagara Inscriptions* ಸಂಪುಟದಲ್ಲಿ ಶಕ 1332, ನಂದನ, ಮಾರ್ಗಶಿರ ಶುದ್ಧ = ಕ್ರಿ.ಶ. 1412 ನವೆಂಬರ್ ಎಂದು ದಾಖಲಿಸಿದ್ದಾರೆ.[4] ಇದು ರೈಸ್ ಸಂಪುಟದಲ್ಲಿನ ಶಕವರ್ಷ ಮತ್ತು ರೈಸ್ ಅವರು ಸಾರಾಂಶಭಾಗದಲ್ಲಿ ನೀಡಿರುವುದನ್ನು ಸರಿಯಾಗಿ ಅರ್ಥಮಾಡಿಕೊಳ್ಳದೆ ಆಗಿರುವ ದೋಷವಾಗಿದೆ. ಆದರೆ ಶಾಸನದಲ್ಲಿ ಸ್ಪಷ್ಟವಾಗಿ ಶಕ 1335 ಎಂದೇ ಇದೆ. ಶಾಸನದಲ್ಲಿ ತಿಥಿ, ವಾರವನ್ನು ಹೇಳುವಾಗ 11[ಶಿ ಆ] ಎಂದಿದೆ. 11ನ್ನು ತೀರಾ ಒತ್ತಾಗಿ ಕಂಡರಿಸಲಾಗಿದೆ. ಶಿ ಆ ಎಂಬ ಅಕ್ಷರಗಳನ್ನು ಅಸ್ಪಷ್ಟಾಕ್ಷರ ಸಂದರ್ಭದ ಆಧಾರದ ಮೇಲೆ ಓದಲಾಗಿದೆ. ಈ ಆಧಾರಗಳಿಂದ ಶಾಸನೋಕ್ತ ಕಾಲದ ಪರಿಷ್ಕೃತ ಪಾಠ **'ಶಕವರ್ಷ 1335ನೆಯ ನಂದನ ಸಂವತ್ಸರ ಮಾರ್ಗಶಿರ ಶುದ್ಧ 11 [ಶಿ ಆ]'ದಿವಾರ** ಎಂದು ಖಚಿತವಾಗುತ್ತದೆ. ಆದರೆ ನಂದನ ಸಂವತ್ಸರವು ಶಕ 1335ರಲ್ಲಿ ಬರುವುದಿಲ್ಲ. ಶಕ 1334ರಲ್ಲಿ ಬರುತ್ತದೆ. ಆದ ಕಾರಣ ಶಾಸನೋಕ್ತ ಶಕ 1335ನ್ನು ವರ್ತಮಾನ ವರ್ಷವೆಂದು ಪರಿಗಣಿಸಬೇಕು. ಇದು ಜೂಲಿಯನ್ ಪಂಚಾಂಗದಂತೆ [=ಚಾಂದ್ರಮಾನ ಪದ್ಧತಿಯಂತೆ] ಕ್ರಿ.ಶ. 14–11–1412, ಭಾನುವಾರಕ್ಕೆ ಸರಿಹೊಂದುತ್ತದೆ.

ಶಾಸನದ ಲಿಪಿ, ಕಂಡರಣೆ ಮತ್ತು ಶಾಸನದ ಭಾಷೆ : ಶಾಸನವನ್ನು ಕನ್ನಡ ಲಿಪಿಯಲ್ಲಿ ಕಲ್ಲಿನ ಎರಡೂ ಬದಿಗಳಲ್ಲಿ ಬರೆಯಲಾಗಿದೆ. ಶಾಸನದ ಮೇಲ್ಭಾಗದಲ್ಲಿ ಶಾಸನದ ಬಲಗಡೆಯಿಂದ ಎಡಗಡೆಗೆ ಚಂದ್ರ, ಸೂರ್ಯ, ತ್ರಿಶೂಲ, ಡಮರು, ಬಸವ ಇವುಗಳನ್ನು ಕೆತ್ತಲಾಗಿದೆ. ಬಸವನ ನಂತರ ಇದೇ ರೀತಿ ಕೆತ್ತಲಾಗಿರುವ ಭಾಗದಲ್ಲಿ ಕಲ್ಲು ಒಡೆದುಹೋಗಿದೆ. ಆದರೆ ಶಾಸನಪಾಠಕ್ಕೆ ಮಾತ್ರ ಯಾವುದೇ ರೀತಿಯಿಂದಲೂ ಧಕ್ಕೆಯಾಗಿಲ್ಲ. ಅಕ್ಷರಗಳನ್ನು ಆಳವಾಗಿಯೂ ಬಹುಪಾಲು ದುಂಡಾಗಿಯೂ ಕಂಡರಿಸಲಾಗಿದೆ. ಆದರೆ ಮೊದಲ ಮೂರು ಸಾಲುಗಳ ಅಕ್ಷರಗಳ ಗಾತ್ರ ದೊಡ್ಡದಾಗಿದ್ದು ನಂತರದ ಅಕ್ಷರಗಳ ಗಾತ್ರ ಸಣ್ಣದಾಗುತ್ತಾ ಹೋಗಿದೆ. ಶಾಸನದ ಬಲಭಾಗದ ಮೊದಲ ಅಕ್ಷರಗಳು ದೊಡ್ಡದಾಗಿದ್ದು ನಂತರದ ಅಕ್ಷರಗಳ ಗಾತ್ರ ಕಿರಿದಾಗುತ್ತಾ ಹೋಗಿದೆ. ಇದರಿಂದಾಗಿ ಕೆಲವು ಕಡೆ ತೀರಾ ಒತ್ತಾಗಿ ಅಕ್ಷರಗಳನ್ನು ಕಂಡರಣೆ ಮಾಡಲಾಗಿದೆ. ಇದರಿಂದಾಗಿ ಕೆಲವೆಡೆ ಒಂದು ಅಕ್ಷರಕ್ಕೆ ಬದಲಾಗಿ ಮತ್ತೊಂದು ಅಕ್ಷರವನ್ನು ಓದಲು ಆಸ್ಪದವಾಗಿದೆ. ಈ ಲಿಪಿ ಸಾದೃಶ್ಯದಿಂದ ಕೆಲವು ಕಡೆ ಗೊಂದಲವೂ ಉಂಟಾಗುತ್ತಿದೆ. ಉದಾಹರಣೆಗೆ ಮೊರಸು ನಾಡು ಎಂದಿರುವೆಡೆ ಹಿರಸುನಾಡು ಎಂದು ಓದಲು ತೀರಾ ಒತ್ತಾಗಿ ಕಂಡರಣೆ ಮಾಡಿರುವುದು, ಇದರಿಂದ 'ಮ' ಕಾರಕ್ಕೂ 'ಹ' ಕಾರಕ್ಕೂ ಲಿಪಿ ಸಾದೃಶ್ಯ ಉಂಟಾಗಿರುವುದು ಗಮನಿಸಬೇಕಾದ ಅಂಶ. ಶಾಸನದ ಕಲ್ಲು ಸುಮಾರು ಒಂದೇ ಪ್ರಮಾಣದ ಅಳತೆಯಲ್ಲಿದ್ದು ಉತ್ತಮವಾದುದಾಗಿದೆ. ಅಕ್ಷರಗಳನ್ನು ಸಮಪ್ರಮಾಣದಲ್ಲಿ ಕಂಡರಣೆ ಮಾಡಿದ್ದರೂ ಎಲ್ಲೆಡೆ ಎಂದು ಹೇಳಲಾಗುವುದಿಲ್ಲ. ಹೊಯ್ಸಳರ ಶಾಸನಗಳ ಅಚ್ಚುಕಟ್ಟನ್ನು ಇಲ್ಲಿ ಕಾಣಲು ಸಾಧ್ಯವಿಲ್ಲ. ಶಾಸನವನ್ನು ಕನ್ನಡ ಭಾಷೆಯಲ್ಲಿ ಬರೆಯಲಾಗಿದೆ. ಭಾಷೆಯಲ್ಲಿ ಯಾವುದೇ ಪ್ರೌಢಿಮೆ ಇರದೆ ಜನಸಾಮಾನ್ಯರಿಗೂ ಅರ್ಥವಾಗುವಂತೆ ಬರೆಯಲಾಗಿದೆ. ಕೆಲವು ಶಬ್ದಗಳಲ್ಲಿ ಶಕಟರೇಫದ ಬಳಕೆಯಾಗಿದೆ ಉದಾಹರಣೆಗೆ ಮೂಱು, ಅಯಿವತ್ತಾಱು, ಕೆಱೆ, ಹೇಱು ಎಂಬ ಶಬ್ದಗಳನ್ನು ಗಮನಿಸಬಹುದು. ಅನೇಕ ಕಡೆ ಕಂಡರಣೆ ಮತ್ತು ಇತರ ಕಾರಣಗಳಿಂದ ಉಂಟಾಗುವ ದೋಷಗಳಿಂದ ಅಕ್ಷರಸ್ಖಾಲಿತ್ಯಗಳು ಮತ್ತು

ಅಪಲಿಖಿತ ಶಬ್ದಗಳು ರೂಪುಗೊಂಡಿವೆ. ಉದಾಹರಣೆಗೆ ಕೆಲವನ್ನು ನೋಡಬಹುದು. ಇಲ್ಲಿ ಕ್ರಮವಾಗಿ ಶಾಸನೋಕ್ತ ಅಪಶಬ್ದಗಳು ಮತ್ತು ಶುದ್ಧರೂಪಗಳನ್ನು ನೀಡಲಾಗಿದೆ. ಮೂಱುಬಾಗವಾಗಿ–ಮೂಱುಭಾಗವಾಗಿ, ಪ್ರಬು–ಪ್ರಭು, ಪ್ರುಥ್ವಿರಾಜ್ಯಂಗೆಯಿವ–ಪೃಥ್ವೀರಾಜ್ಯಂಗೆಯಿವ, ಆಂಕಣವನೂ–ಅಂಕಣವನೂ, ಹದಿನಯಿ ಗುಳ, ಹದಿನಯ ಗುಳ, ಹದಿನೈದು ಗುಳ ಇತ್ಯಾದಿ. ಸಜಾತೀಯ ದ್ವಿತ್ವವು ಮಾರ್ಗ್ಗಸಿರ, ಆಚಂದ್ರಾರ್ಕ್ಕ, ಸರ್ವ್ವ ಎಂಬಂತಹ ಕಡೆ ಮಾತ್ರ ಬಳಕೆಯಾಗಿದೆ. ಒತ್ತಕ್ಷರಗಳ ಬದಲು ಅನುಸ್ವಾರದ ಬಳಕೆಯೇ ಹೆಚ್ಚು. ಹಲವು ಶಬ್ದಗಳು ಸ್ವರಾಂತಗಳಾಗಿವೆ. ಉದಾಹರಣೆಗೆ ಕೊಡುವೆಉ, ಸಲಿಸಿಪಿಹೆಉ ಎಂಬುದನ್ನು ಗಮನಿಸಬಹುದು. ಇಂತಹ ಸ್ಖಾಲಿತ್ಯಗಳನ್ನೆಲ್ಲಾ ಆ ಕಾಲದ ಭಾಷಾರೂಪಗಳೆಂದು ಗ್ರಹಿಸುವುದು ಸಮರ್ಥನೀಯವಲ್ಲ.

ಶಾಸನೋಕ್ತ ಸ್ಥಳನಾಮ ಮತ್ತು ಕೆರೆಗಳು : ಶಾಸನದಲ್ಲಿ ಮೊರಸುನಾಡ ಸೋಮಗೊಂಡಿನಹಳ್ಳಿ ಎಂಬ ಹೆಸರು ಉಲ್ಲೇಖಗೊಂಡಿದೆ. ಇದು ಯಾವುದೆಂದು ಗುರುತಿಸಲು ಸಾಧ್ಯವಾಗುತ್ತಿಲ್ಲ. ಮೊರಸುನಾಡು ಎಂಬುದೊಂದು ಪ್ರಾದೇಶಿಕ ವಿಭಾಗವಾಗಿದ್ದು ಗಂಗಱುಸಾಸಿರ ಪ್ರದೇಶವೇ ಮೊರಸುನಾಡೆಂದು ದೇವರಕೊಂಡಾರೆಡ್ಡಿ ಅವರು ಅಭಿಪ್ರಾಯಪಟ್ಟಿರುತ್ತಾರೆ.[5] ಈ ಅಭಿಪ್ರಾಯದ ಪ್ರಕಾರ ಮೊರಸುನಾಡಿನ ವ್ಯಾಪ್ತಿ ಸ್ಪಷ್ಟವಾಗಿ ಇಂದಿನ ಬೆಂಗಳೂರು ತಾಲ್ಲೂಕಿನ ಕೆಲವು ಪ್ರದೇಶಗಳು, ಹೊಸಕೋಟೆ, ಆನೇಕಲ್, ಧರ್ಮಪುರಿ ಜಿಲ್ಲೆಯ ಹೊಸೂರು, ಡೆಂಕಣಿಕೋಟೆ ತಾಲ್ಲೂಕುಗಳು, ಕೋಲಾರ ಜಿಲ್ಲೆಯ, ಪಶ್ಚಿಮ ಮತ್ತು ದಕ್ಷಿಣ ಪ್ರದೇಶಗಳಾಗಿವೆ. ಇದರ ಹಿನ್ನೆಲೆಯಲ್ಲಿ ಹೇಳುವುದಾದರೆ ಶಾಸನ ಲಭ್ಯವಾದ ಮಾಯಸಂದ್ರವು ಮೊರಸುನಾಡಿನ ಮಧ್ಯಭಾಗದಲ್ಲಿದೆ. ಸೋಮಗೊಂಡಿನಹಳ್ಳಿಯು ಇಂದಿನ ಮಾಯಸಂದ್ರದ ಪೂರ್ವ ಹೆಸರೇ ಎಂಬುದು ಕೂಡ ಯೋಚಿಸಬೇಕಾದ ಅಂಶ. ಈ ಅಂಶವನ್ನು ಮೊದಲೇ ಪಿ.ವಿ. ಕೃಷ್ಣಮೂರ್ತಿ ಅವರು ಗಮನಿಸಿರುತ್ತಾರೆ.[6] ಎಪಿಗ್ರಾಫಿಯಾ ಕರ್ಣಾಟಿಕಾ ಸಂಪುಟದಲ್ಲಿ ಮಾಯಿಸಂದ್ರ ಎಂದು ಅಚ್ಚಾಗಿದೆ. ಶಾಸನದಲ್ಲಿ ತತ್ತನಕೆಱೆ, ಬೆಳ್ಳವಾರಣದ ಕೆಱೆ ಎಂಬ ಹೆಸರುಗಳು ಉಲ್ಲೇಖವಾಗಿವೆ. ಇವು ಸ್ಥಳನಾಮಗಳೇ ಇಲ್ಲವೇ ಕೆರೆಗಳೇ ಎಂದು ಸ್ಪಷ್ಟವಾಗಿ ತಿಳಿಯುವುದಿಲ್ಲ. ಆನೇಕಲ್ ತಾಲ್ಲೂಕಿನಲ್ಲಿಯೇ, ಪ್ರಕೃತ ಶಾಸನವಿರುವ ಗ್ರಾಮ ಮಾಯಸಂದ್ರಕ್ಕೆ ಸಮೀಪದಲ್ಲಿಯೇ ತತ್ತನಹಳ್ಳಿ (ತಟ್ಟನಹಳ್ಳಿ) ಎಂಬ ಗ್ರಾಮವಿದೆ. ತತ್ತನಕೆಱೆ ಎಂಬುದು ಈ ಗ್ರಾಮದ ಕೆರೆಯನ್ನು ಕುರಿತು ಹೇಳಿರುವುದೇ ವಿಚಾರಣೀಯ. ಆನೇಕಲ್ ತಾಲ್ಲೂಕಿನಲ್ಲಿಯೇ ಬಿಲವಾರದಹಳ್ಳಿ ಎಂಬ ಹೆಸರಿನ ಗ್ರಾಮವಿದ್ದು ಬೆಳ್ಳವಾರಣದ ಕೆಱೆ ಎಂಬುದು ಕೂಡ ಈ ಗ್ರಾಮಕ್ಕೆ ಸಂಬಂಧಿಸಿದ ಕೆರೆಯಾಗಿರಬಹುದೇ ವಿಚಾರಾರ್ಹ. ಆದರೆ ಬಿಲವಾರದಹಳ್ಳಿ ಮಾಯಸಂದ್ರಕ್ಕೆ ತುಂಬಾ ದೂರದಲ್ಲಿದೆಯಾಗಿ ಈ ಸಮೀಕರಣವನ್ನು ಒಪ್ಪುವುದು ಕಷ್ಟಸಾಧ್ಯ. ಮಾಯಸಂದ್ರಕ್ಕೆ ಸಮೀಪದಲ್ಲಿಯೇ ಬಿದರಗೆರೆ ಎಂಬ ಮತ್ತೊಂದು ಗ್ರಾಮವಿದೆ. ಶಾಸನೋಕ್ತ ಬೆಳ್ಳವಾರಣದ ಕೆಱೆ ಎಂಬುದು ಈ ಗ್ರಾಮಕ್ಕೆ ಸಂಬಂಧಿಸಿದುದೇ ಎಂಬುದು ಯೋಚಿಸಬೇಕಾದ ಅಂಶ. ಏಕೆಂದರೆ ಈ ಗ್ರಾಮ ಮಾಯಸಂದ್ರಕ್ಕೆ ತುಂಬಾ ಹತ್ತಿರದಲ್ಲಿದೆ. ಇವಾವುವೂ ಇಲ್ಲವಾದಲ್ಲಿ ಶಾಸನೋಕ್ತ ಸ್ಥಳಗಳು ಮತ್ತು ಕೆರೆಗಳು ಬೇಚಿರಾಕ್ ಆಗಿರುವ ಇಲ್ಲವೇ ಬೇರೆ ಹೆಸರುಗಳನ್ನು ಪಡೆದಿರುವ ಸಾಧ್ಯತೆಗಳಿವೆ. ಮಾಯಸಂದ್ರದಲ್ಲಿ ಮೊದಲು ಸಂತೆ ನಡೆಯುತ್ತಿದ್ದಿತೆಂಬ ವಿಚಾರ ಗೊತ್ತಾಗುತ್ತದೆ. ಆದರೆ ಯಾವ ವಾರ ನಡೆಯುತ್ತಿತ್ತೆಂಬ ಅಂಶ ತಿಳಿಯುತ್ತಿಲ್ಲ. ಆದರೆ ಈಗ ಅಲ್ಲಿ ಸಂತೆ ನಡೆಯುತ್ತಿಲ್ಲ. ಸಂತೆಯನ್ನು ಮರುನಡೆಸಲು ಮಾಡಿದ ಪ್ರಯತ್ನಗಳು ಫಲಕಾರಿಯಾಗಿಲ್ಲವೆಂದು ತಿಳಿದುಬರುತ್ತದೆ.

ಶಾಸನೋಕ್ತ ವ್ಯಕ್ತಿಗಳು : ಶಾಸನದಲ್ಲಿ ಅನೇಕ ವರ್ತಕರ ಹೆಸರುಗಳು ದಾಖಲಾಗಿವೆ. ಅವುಗಳನ್ನು ಒಂದೊಂದಾಗಿ ಮುಂದೆ ವಿಶ್ಲೇಸಲಾಗಿದೆ.

1. **ಜುಂಜೋಬೆಯ ನಾಯ್ಕರ ಮಕ್ಕಳು ಹಿರಿಯ ಮುದ್ದೆಯನಾಯ್ಕ** : ಈ ವ್ಯಕ್ತಿಗಳು ತಮ್ಮ ನಾಯಕತನಕ್ಕೆ ಸಲ್ಲುವ ಸೋಮಗೊಂಡಿನ ಹಳ್ಳಿಯಲ್ಲಿ ಮಂಗಳವಾರ ಸಂತೆಯನ್ನು ಕಟ್ಟಿಸಿ ಅದಕ್ಕೆ ಸರ್ವಮಾನ್ಯವಾಗಿ ದಾನ ಕೊಡುತ್ತಾರೆ. ಇವರ ಉಲ್ಲೇಖ ಆನೇಕಲ್ ತಾಲ್ಲೂಕು ಸರ್ಜಾಪುರದ ಶಾಸನವೊಂದರಲ್ಲೂ ಬಂದಿದೆ.[7] ಅಲ್ಲಿ ಹಿಂಮಱನಾಡ [=ಎರುಮರೆನಾಡು. ಇದು ಇಂದಿನ ಸರ್ಜಾಪುರದ ಬಳಿಯಿರುವ ಯಮರೆ ಎಂಬ ಗ್ರಾಮವೇ ಆಗಿದೆ] ನಾಯಕತನ

ವ್ಯಕ್ತಿಗಳಾಗಿ ಉಲ್ಲೇಖಿತರಾಗಿದ್ದು ಅಲ್ಲಿಯೂ ಸಂತೆಯನ್ನು ಕಟ್ಟಿಸಿ ದಾನ ನೀಡಿದ ವಿಚಾರ ದಾಖಲಾಗಿದೆ. ಈ ಶಾಸನದ ಕಾಲ ಶಕ 1340, ವಿಳಂಬಿ ಸಂವತ್ಸರ, ಕಾರ್ತಿಕ ಶುದ್ಧ 1, ಶುಕ್ರವಾರ. ಇದು ಜೂಲಿಯನ್ ಪಂಚಾಂಗದಂತೆ ಕ್ರಿ.ಶ. 29–10–1418, ಶುಕ್ರವಾರಕ್ಕೆ ಸರಿಹೊಂದುತ್ತದೆ {ಆದರೆ ಬಾ.ರಾ. ಗೋಪಾಲ್ ಅವರು ಕ್ರಿ.ಶ. 30–9–1418 ಎಂದು ಶಾಸನದ ಕಾಲವನ್ನು ಹೇಳಿ ಶಾಸನೋಕ್ತ ಮಾಸ ಅಧಿಕ ಕಾರ್ತಿಕ ಎಂದು ದಾಖಲಿಸಿ ನಂತರ ಶಾಸನೋಕ್ತ ತಿಥಿ ಕ್ರಿ.ಶ. 30–10–1418 ಭಾನುವಾರವಿರುತ್ತದೆ, ಇದು ನಿಜಕಾರ್ತಿಕ ಮಾಸವಾಗಿರುತ್ತದೆ ಎಂದು ಹೇಳಿದ್ದಾರೆ. ಆದರೆ ಈ ವಿವರಗಳ ವಿಶ್ಲೇಷಣೆ ಅಸಮರ್ಪಕವಾಗಿದೆ}. ಕಾಲದ ದೃಷ್ಟಿಯಿಂದ ಯಾವುದೇ ತೊಂದರೆ ಇಲ್ಲದಿರುವುದರಿಂದ ಮಾಯಸಂದ್ರ ಮತ್ತು ಸರ್ಜಾಪುರ ಶಾಸನೋಕ್ತ ವ್ಯಕ್ತಿಗಳು ಅಭಿನ್ನರೆಂದು ಹೇಳಬಹುದು.

2. **ಮೊರಸುನಾಡಿನ ಪ್ರಭು ಚೊಕ್ಕನಾಥ, ಮಾರದೇವ, ನೇಮನಾಥ, ಕೇತಪ್ಪ, ಗಂಗಿದೇವ ಮುಂತಾದ ಪ್ರಭುಗಳು :** ಈ ಭಾಗದಲ್ಲಿ ಚೊಕ್ಕನಾಥ ಮಾತ್ರವೇ ಮೊರಸುನಾಡ ಪ್ರಭು ಎಂದು ಅರ್ಥೈಸಬೇಕೆಂದು ತೋರುವುದು. ಮಿಕ್ಕವರು ಕೂಡ ಬೇರೆ ಬೇರೆ ಸ್ಥಳಗಳ ಪ್ರಭುಗೌಡುಗಳಿರಬಹುದೆಂದು ತೋರುತ್ತದೆ. ಇವರ ಬಗೆಗೆ ಹೆಚ್ಚಿನ ಮಾಹಿತಿ ಲಭ್ಯವಿಲ್ಲ. ಶಾಸನಪಾಠವನ್ನು ಈ ವಿಧವಾಗಿ ಅರ್ಥೈಸುವುದೇ ಸೂಕ್ತವೆಂದು ಕಾಣುತ್ತದೆ. ಏಕೆಂದರೆ ಆನೇಕಲ್ ತಾಲ್ಲೂಕಿನ ಮಾಸ್ತೇನಹಳ್ಳಿ ಶಾಸನದಲ್ಲಿ[8] 'ಶ್ರೀಮಂನ್ಮಹಾನೂರಸೂನಾಡ ಪ್ರಭು ಚೊಕ್ಕದೇವ ಸೀಮೆನಾಡವೊಳಗಾದ ಮಹಾನಾಡು' ಎಂದಿದೆ. ಇಲ್ಲಿ ಶ್ರೀಮಂನ್ಮಹಾನೂರಸೂನಾಡ ಎಂಬುದರ ಸರಿಯಾದ ಪಾಠ ಬಹುಶಃ ಶ್ರೀಮನ್ಮಹಾನ್ಮೊರಸುನಾಡ ಎಂದಿರಬೇಕೆಂದು ತೋರುತ್ತದೆ. ಈ ಶಾಸನದಲ್ಲಿ ಚೊಕ್ಕದೇವನ ಹೆಸರು ಮಾತ್ರ ಮೊರಸುನಾಡ ಪ್ರಭುವೆಂದು ದಾಖಲಾಗಿರುವುದು ಗಮನಾರ್ಹ. ಶಾಸನದಲ್ಲಿ ಶಕ 1349, ಪರಾಭವ, ಫಾಲ್ಗುಣ ಶುದ್ಧ 1 ಎಂದಿದೆ. ಶಕ 1349ರಲ್ಲಿ ಪ್ಲವಂಗ ಸಂವತ್ಸರ ಇರುತ್ತದೆ. ಪರಾಭವ ಸಂವತ್ಸರ ಬರುವುದು ಶಕ 1348ರಲ್ಲಿ. ಆದಕಾರಣ ಶಕ 1349ನ್ನು ವರ್ತಮಾನ ವರ್ಷವಾಗಿ ಗ್ರಹಿಸಿ ಶಕ 1348, ಪರಾಭವ, ಫಾಲ್ಗುಣ ಶುದ್ಧ 1 ಎಂಬುದಾಗಿ ಶಾಸನದ ಕಾಲವನ್ನು ತಿಳಿಯಬಹುದು. ಇದರಂತೆ ಶಾಸನದ ಕಾಲ ಜೂಲಿಯನ್ ಪಂಚಾಂಗದಂತೆ ಕ್ರಿ.ಶ. 28–1–1427, ಸೋಮವಾರಕ್ಕೆ ಸರಿಹೊಂದುತ್ತದೆ. ಈ ಶಾಸನದಲ್ಲಿ ಉಲ್ಲೇಖಿತನಾದ ದೊರೆ ಇಮ್ಮಡಿ ದೇವರಾಯ. ಅಂದರೆ ಚೊಕ್ಕದೇವನು ಒಂದನೆಯ ದೇವರಾಯನ ಕಾಲದಿಂದಲೂ ಮೊರಸುನಾಡಿನ ಪಾಲಕನಾಗಿದ್ದನೆಂದು ಹೇಳಬಹುದು. ಈ ಶಾಸನದ ಜುಂಜುವೊೞ್ಬ ನಾಯಕ ಸರ್ಜಾಪುರ, ಮಾಯಸಂದ್ರದ ಶಾಸನಗಳಲ್ಲಿ ಉಲ್ಲೇಖಿತನಾದ ವ್ಯಕ್ತಿಯೇ ಆಗಿರುತ್ತಾನೆ. ಮಾಯಸಂದ್ರ ಶಾಸನದಲ್ಲಿ ಜುಂಜೋಬೆಯ ನಾಯಕನ ಹಿರಿಯ ಮಗ ಮುದ್ದೆಯ ನಾಯ್ಕನ ಉಲ್ಲೇಖವಿದ್ದರೆ ಈ ಶಾಸನದಲ್ಲಿ ಕಿರಿಯ ಮಗ ಚಿಕ್ಕತಿಮ್ಮನಾಯಕನ ಹೆಸರಿದೆ.

3. **ಗುಂಡಿಸೆಟ್ಟಿ, ತಾಳಮು ತಿರುಮಲೆಸೆಟ್ಟಿ, ಸಹದೇವಿ ಸೆಟ್ಟಿಯ ಮಂಚಿಸೆಟ್ಟಿ ಮಾರಿಸೆಟ್ಟಿಯ ಮಕ್ಕಳು ದಂಡಿಸೆಟ್ಟಿ, ತಿರುಮಲೆ ಸೆಟ್ಟಿ :** ಈ ವ್ಯಕ್ತಿಗಳಲ್ಲಿ ಐವತ್ತಾರು ದೇಶದ ಹಲರಿಗೆ ಮುಖ್ಯರಾದ ಗುಂಡಿಸೆಟ್ಟಿ, ತಾಳಮು ತಿರುಮಲೆಸೆಟ್ಟಿ, ಸಹದೇವಿಸೆಟ್ಟಿಯ ಮಗ ಮಂಚಿಸೆಟ್ಟಿ ಮುಂತಾದ ಸಮಸ್ತನಾಡೂ, ಹಲರೂ ಸೇರಿ ಮಾರಿಸೆಟ್ಟಿಯ ಮಕ್ಕಳಾದ ದಂಡಿಸೆಟ್ಟಿ ಮತ್ತು ತಿರುಮಲೆ ಸೆಟ್ಟಿಗಳಿಗೆ ಪಟ್ಟಣಸಾಮಿ ಅಧಿಕಾರವನ್ನು ನೀಡುತ್ತಾರೆ. ತಾಳಮು ತಿರುಮಲೆಸೆಟ್ಟಿಯ ಹೆಸರಿನಲ್ಲಿನ ತಾಳಮು ಎಂಬುದು ಮನೆತನದ ಹೆಸರಾಗಿರಬಹುದೇ ವಿಚಾರಣೀಯ. ಏಕೆಂದರೆ ಹಿಂದೆ ಹೇಳಿರುವ ಸರ್ಜಾಪುರದ ಶಾಸನದಲ್ಲಿ ತಾಳಮು ತಂಮಿಸೆಟ್ಟಿ ಎಂಬ ಹೆಸರು ಕಂಡುಬರುತ್ತದೆ. ಹಲರು ಎಂಬ ಹೆಸರನ್ನು ಹೊಂದಿರುವ ವರ್ತಕರು ಯಾವುದೇ ಸಂಘವನ್ನೂ ರಚಿಸಿಕೊಳ್ಳದೆ ಕೇವಲ ವಿನಿಮಯ ವರ್ತಕ ವರ್ಗಕ್ಕೆ ಸೇರಿದವರು. ಇವರ ಉಲ್ಲೇಖ ವಿಶೇಷವಾಗಿ ತುಳುನಾಡಿನ ಶಾಸನಗಳಲ್ಲಿ ಕಂಡುಬರುತ್ತದೆ. ಇದರಿಂದ ಹಲರು ಮೂಲತಃ ತುಳು ನಾಡಿಗೆ ಸೇರಿದವರು ಎಂದು ಬಿ. ಆರ್. ಹಿರೇಮಠ ಅವರು ಬರೆದಿರುತ್ತಾರೆ.[9] ಸಮಸ್ತ ನಾಡೂ ಎಂದರೆ ಬಹುಶಃ ಮೊರಸುನಾಡಿನ ಪ್ರಭುಗೌಡರು ಎಂದು ಹೇಳಬಹುದು.

ಶಾಸನೋಕ್ತ ದಾನದ ಸ್ವರೂಪ : ಪಟ್ಟಣಸಾಮಿ ಎಂದರೆ ಸಂತೆ ನಡೆಸುವ, ಪಟ್ಟಣ ಕಟ್ಟಿಸುವ ಅಧಿಕಾರವುಳ್ಳವ ಎಂದರ್ಥ. ಪಟ್ಟಣಸಾಮಿ ಅಧಿಕಾರವನ್ನು ಪಡೆದ ಮಾರಿಸೆಟ್ಟಿಯ ಮಕ್ಕಳಾದ ದಂಡಿಸೆಟ್ಟಿ ಮತ್ತು ತಿರುಮಲೆ ಸೆಟ್ಟಿಗಳಿಗೆ ನೀಡಿದ ದಾನದ ವಿವರ ಇಂತಿದೆ.

ಮಾನ್ಯಹೊಲ – ಹದಿನೈದು ಗುಳ ಗದ್ದೆ [ಬಹುಶಃ ಸೋಮಗೊಂಡಿನಹಳ್ಳಿಯಲ್ಲಿನದೇ ಇರಬೇಕು]

ತತ್ತನಕೆರೆಯ ಕೆಳಗೆ – ಹದಿನೈದು ಗುಳ

ಬೆಳ್ಳವಾರಣದ ಕೆರೆಯ ಕೆಳಗೆ – ಹತ್ತು ಕೊಳಗ ಗದ್ದೆ, ಖಂಡುಗದಲ್ಲಿ ಐದು ಗುಳ

ಸಂತೆಯ ಆಯ (ಸಂತೆಯಲ್ಲಿ ವ್ಯಾಪಾರಕ್ಕಾಗಿ ಬರುವ ಪ್ರತಿ ವಸ್ತುವಿನ ಮೇಲೆ ಹಾಕುವ ಸುಂಕ)

ತಂಮ ಮನೆ ಪಟ್ಟದೆ ಹೇಜು ಹತ್ತು {ಮನೆಸುಂಕ (?)}– ಹತ್ತು ಭಾಗ (?)

ಕತ್ತೆ, ಕುದುರೆ, ತೊತ್ತು (=ಸೇವಕ), ಮದುವೆಗಳ ಮೇಲೆ ಹಾಕುವ ಸುಂಕ

ಮೇಲಿನವುಗಳನ್ನು ಪಟ್ಟಣಸಾಮಿಗೆ ನೀಡಲಾಗಿದೆ. **ತಂಮ ಮನೆ ಪಟ್ಟದೆ ಹೇಜು** ಹತ್ತು ಎಂಬುದರ ಅರ್ಥ ಸ್ಪಷ್ಟವಿಲ್ಲ. ಬಹುಶಃ ಮಾನ್ಯದ ಹೊಲಗಳಲ್ಲದೆ ವಾಸಿಸುವ ಮನೆಯನ್ನೂ ನೀಡಿರಬಹುದೆಂದು ತೋರುತ್ತದೆ. ಶಾಸನದ ಕೊನೆಯಲ್ಲಿ ಮಂಚಿಸೆಟ್ಟಿ ಸಹಿತ ಮೂರುಭಾಗವಾಗಿ ಅನುಭೋಗಿಸುವರು ಇವರಿಗೆ ಮನೆಯಲ್ಲಿ ಹತ್ತು ಅಂಕಣವನ್ನು [=ಹತ್ತು ಅಂಕಣ ಮನೆಯನ್ನು] ಕೊಡಲಾಗಿದೆ ಎಂಬ ವಾಕ್ಯವಿದೆ. ಇದನ್ನು ಬಹುಶಃ ಪಟ್ಟಣ ಸಾಮಿಗಳಾದ ದಂಡಿಸೆಟ್ಟಿ, ತಿರುಮಲೆ ಸೆಟ್ಟಿ ಹಾಗೂ ಮಂಚಿಸೆಟ್ಟಿ ಈ ಮೂವರಿಗೂ ಮೂರುಭಾಗಗಳಾಗಿ ನೀಡಲಾಗಿದೆ ಎಂದು ತೋರುತ್ತದೆ. ಈ ರೀತಿಯ ಮರ್ಯಾದೆಯಲ್ಲಿ ಸುಖವಾಗಿ ಇರಬೇಕೆಂದು ನಾಡಿನ ಹಲರು ಕೊಟ್ಟ ಶಾಸನ ಎಂದು ಹೇಳಲಾಗಿದೆ. ಆದರೆ ಮಂಚಿಸೆಟ್ಟಿಗೂ ಭಾಗವನ್ನು ನೀಡಿರುವ ಉದ್ದೇಶ ತಿಳಿಯದು.

ಶಾಸನದ ಒಟ್ಟು ಆಶಯ : ಒಂದನೆಯ ದೇವರಾಯನು ಸಾಮ್ರಾಜ್ಯವನ್ನು ಆಳುತ್ತಿರುವಾಗ ಜುಂಜೋಬೆಯ ನಾಯಕರ ಹಿರಿಯ ಮಕ್ಕಳಾದ ಮುದ್ದೆಯನಾಯಕರು ಮೊರಸುನಾಡಿಗೆ ಸೇರುವ ಸೋಮಗೊಂಡಿನ ಹಳ್ಳಿಯಲ್ಲಿ ಮಂಗಳವಾರ ಸಂತೆಯನ್ನು ಕಟ್ಟಿಸಿ ಮೊರಸುನಾಡಿನ ಪಾಲಕನಾದ ಚೊಕ್ಕದೇವ ಹಾಗೂ ಇತರ ಪ್ರಭುಗೌಡರು, ಐವತ್ತಾರು ದೇಶದ ಹಲರಿಗೆ ಮುಖ್ಯರಾದ ಗುಂಡಿಸೆಟ್ಟಿ, ತಾಳಮು ತಿರುಮಲೆಸೆಟ್ಟಿ, ಸಹದೇವಿಸೆಟ್ಟಿಯ ಮಗ ಮಂಚಿಸೆಟ್ಟಿ ಮುಂತಾದವರ ಸಮ್ಮುಖದಲ್ಲಿ ಮಾರಿಸೆಟ್ಟಿಯ ಮಕ್ಕಳಾದ ದಂಡಿಸೆಟ್ಟಿ ಮತ್ತು ತಿರುಮಲೆ ಸೆಟ್ಟಿಗಳಿಗೆ ಪಟ್ಟಣಸ್ವಾಮಿಗಳಾಗಿ ಅಧಿಕಾರವನ್ನು ಕೊಟ್ಟು ಅವರಿಗೆ ಗದ್ದೆಗಳನ್ನು, ಸುಂಕವನ್ನು ಮುಂತಾದವುಗಳನ್ನು ಸಲ್ಲಿಸುತ್ತಾರೆ. ಜೊತೆಗೆ ಮಂಚಿಸೆಟ್ಟಿಗೂ ಭಾಗವನ್ನು ನೀಡುತ್ತಾರೆ. ಈ ಶಾಸನವನ್ನು ಯಾರು ಹಾಳುಮಾಡಿದರೂ, ನಾಡಿಗೂ, ಹಲರಿಗೂ ದ್ರೋಹಮಾಡಿದವರು ಮತ್ತು ಗಂಗೆಯ ತೀರದಲ್ಲಿ ಗೋವುಗಳನ್ನು ಕೊಂದ ಪಾಪಕ್ಕೆ ಭಾಜನರೂ ಆಗುತ್ತಾರೆ ಎಂಬ ಶಾಪಾಶಯವಿದೆ.

ಪ್ರಕೃತ ಬರಹದಲ್ಲಿ ಮಾಯಸಂದ್ರ ಶಾಸನದ ಪರಿಷ್ಕೃತ ಪಾಠವನ್ನು ದಾಖಲಿಸಿ, ಶಾಸನೋಕ್ತ ವಿಷಯವನ್ನು ಕಿರಿದಾಗಿ ವಿಶ್ಲೇಷಿಸಲಾಗಿದೆ. ನಮ್ಮ ವಿಶ್ಲೇಷಣೆಯಲ್ಲಿ ಲೋಪದೋಷಗಳೂ ಇರಬಹುದು. ಬಲ್ಲವರು ಇದನ್ನು ತಿದ್ದಬೇಕಾಗಿ ವಿನಂತಿ. ಇದರಂತೆ ಹಲವು ಶಾಸನಗಳು ಪುನರ್‌ಪರಿಷ್ಕರಣೆಗೆ ಕಾದು ಕುಳಿತಿವೆ. ಅವುಗಳನ್ನೆಲ್ಲಾ ಪರಿಷ್ಕರಿಸಿ ವಿಮರ್ಶೆಯೊಡನೆ ಪ್ರಕಟಿಸಬೇಕು. ಕ್ಷೇತ್ರಕಾರ್ಯ ಮಾಡಿದಷ್ಟೂ ಹೊಸ ಶಾಸನಗಳ ಜೊತೆಗೆ ಹಳೆಯ ಪ್ರಕಟಿತ ಶಾಸನಗಳ ಪರಿಷ್ಕರಣೆಯೂ ಸಾಧ್ಯವಾಗುತ್ತದೆ. ಈಚೆಗೆ ರೈಸರ ಶಾಸನ ಸಂಪುಟಗಳಲ್ಲಿ ಕಂಡುಬರುತ್ತಿರುವ ಲೋಪದೋಷಗಳನ್ನು ಕುರಿತು ಕೆಲಸ ನಡೆಯುತ್ತಿದ್ದರೂ ಅದು ಪೂರ್ವಗ್ರಹದಿಂದ ಕೂಡಿದೆ. ರೈಸರ ಕಾಲದ ಪರಿಸ್ಥಿತಿಗಳು, ಮುದ್ರಣದ ಸ್ಥಿತಿಗತಿಗಳು. ಭೌಗೋಳಿಕ ವಿವರಗಳು ಇವುಗಳ ಹಿನ್ನೆಲೆಯಲ್ಲಿ ಅಧ್ಯಯನ ಮಾಡಬೇಕು. ಇದರಿಂದ ಪೂರ್ವವಿದ್ವಾಂಸರ ಪರಿಶ್ರಮದ ರೀತಿ ತಿಳಿದುಬರುತ್ತದೆ. ಇದರ ಜೊತೆಗೆ ಶಾಸನೋಕ್ತ ಕಾಲಗಣನೆಯ ಬಗೆಗೆ ಸಮರ್ಪಕವಾಗಿ ಕೆಲಸ ಇದುವರೆಗೂ ನಡೆದಿಲ್ಲ. ಇಂದಿನ ದಿನ ಅಂತರ್ಜಾಲದಲ್ಲಿ ಹಲವು ತಂತ್ರಾಂಶಗಳು ಲಭ್ಯವಿವೆ. ಇವುಗಳನ್ನು ಬಳಸಿಕೊಳ್ಳಬೇಕು. ನಾವು ಇಂದು

ಸ್ವಾಮಿಕಣ್ಣು ಪಿಳ್ಳೆ ಅವರ ಇಂಡಿಯನ್ ಎಫಿಮೆರೀಸ್ ಕೃತಿಯನ್ನು ಬಳಸುತ್ತಿದ್ದರೂ ಎ. ವೆಂಕಟಸುಬ್ಬಯ್ಯ,[10] ಎಂ. ಗೋವಿಂದ ಪೈ,[11] ಎಸ್. ಶ್ರೀಕಂಠಶಾಸ್ತ್ರೀ,[12] ಎಫ್. ಕೀಲ್‌ಹಾರ್ನ್[13] ಮುಂತಾದ ವಿದ್ವಾಂಸರ ಬರಹಗಳನ್ನು ಬಳಸುತ್ತಿಲ್ಲ. ಇದರಿಂದಾಗಿ ಹಲವು ಗೊಂದಲಗಳು ಸೃಷ್ಟಿಯಾಗಿವೆ. ಜೆ.ಎಫ್. ಫ್ಲೀಟ್, ಎಲ್. ಡಿ. ಬಾರ್ನೆಟ್ ಮುಂತಾದ ವಿದ್ವಾಂಸರು ಬಹು ಹಿಂದೆಯೇ ಎಪಿಗ್ರಾಫಿಯಾ *ಕರ್ಣಾಟಿಕಾ*[14] ಸಂಪುಟಗಳಲ್ಲಿನ ಮತ್ತು ಇತರೆಡೆ ಪ್ರಕಟವಾಗಿರುವ ಶಾಸನಗಳ ಕಾಲದ ಬಗೆಗೆ ವಿಮರ್ಶಾತ್ಮಕವಾಗಿ ಚರ್ಚಿಸಿದ್ದಾರೆ.[15] ಇವುಗಳನ್ನು ಅಗತ್ಯವಾಗಿ ಗಮನಿಸಬೇಕು. ಇವುಗಳ ಬಗೆಗೆ ಅಧ್ಯಯನ ಸಮಗ್ರವಾಗಿ ನಡೆದು ಗೊಂದಲಗಳು ಪರಿಹರಿಸಿಕೊಳ್ಳಬೇಕಾದ ಅಗತ್ಯವಿದೆ. ರಾಜಕೀಯ ಇತಿಹಾಸದ ದೃಷ್ಟಿಯಿಂದ ಈ ಪರಿಷ್ಕೃತವಾಗಿರುವ ಶಾಸನ ಪ್ರಮುಖವಲ್ಲದ್ದಿರಬಹುದು. ಆದರೆ ಆರ್ಥಿಕ, ಸಾಮಾಜಿಕತೆಯ ದೃಷ್ಟಿಯಿಂದ ಪ್ರಮುಖವೆಂದು ಹೇಳಬಹುದು. ಇಂತಹ ಶಾಸನಗಳನ್ನು ಕೂಡ ಪರಿಷ್ಕರಿಸಿ ಪ್ರಕಟಿಸಬೇಕಾದ್ದು ಶಾಸನತಜ್ಞರ ಕರ್ತವ್ಯವಾಗಿದೆ. ಇದು ಆದಷ್ಟು ಬೇಗ ಕೈಗೂಡಲೆಂದು ಹಾರೈಸುತ್ತೇವೆ.[16]

ಆಧಾರಸೂಚಿ ಮತ್ತು ಟಿಪ್ಪಣಿಗಳು


1. ಈ ಶಾಸನವು ಮಾಯಸಂದ್ರ ಗ್ರಾಮಕ್ಕೆ ಪೂರ್ವದಲ್ಲಿ ಕೋಲುಕಾರ ಚಂದನ ಕೈತೋಟದಲ್ಲಿದ್ದಿತೆಂದು ಎಪಿಗ್ರಾಫಿಯಾ *ಕರ್ಣಾಟಿಕಾ*, ಸಂಪುಟ–9ರಲ್ಲಿ (ರೈಸ್ ಆವೃತ್ತಿ) ದಾಖಲಾಗಿದೆ.
2. ಆನೇಕಲ್ ತಾಲ್ಲೂಕು, ಶಾಸನ ಸಂಖ್ಯೆ–44, ಕನ್ನಡ ಲಿಪಿ ಪಾಠದ ಪುಟ 245; ರೋಮನ್ ಲಿಪ್ಯಂತರ ಪಾಠದ ಪುಟ 140; ಸಾರಾಂಶ ಭಾಗದ ಪುಟ 114.
3. Srinivasa Ritti, B.R. Gopal (Ed), *Inscriptions of the Vijayanagara Rulers,* Vol. 1, Part-3, *Kannada Inscriptions,* I.C.H.R. & Northern Book Centre, New Delhi, 2004, pp. 1047-1048, No. 440.
4. B.R. Gopal (Ed), *Vijaynagara Inscriptions,* Vol. 1, Directorate of Archaeology and Museums, Mysore-1985, p. 10, No. 22.
5. ದೇವರಕೊಂಡಾರೆಡ್ಡಿ, *ಶಾಸನಗಳ ಮೊರಸುನಾಡು*, ಮಾನವಿಕ *ಕರ್ಣಾಟಕ*, ಸಂಪುಟ–4, ಸಂಚಿಕೆ–2, 1974, ಮೈಸೂರು ವಿಶ್ವವಿದ್ಯಾನಿಲಯ, ಪು. 49–52.
6. ಶಾಸನಗಳ ಹಿನ್ನೆಲೆಯಲ್ಲಿ ಆನೇಕಲ್ ತಾಲ್ಲೂಕು, ಶಾಸನ ಮಂಥನ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು–2011, ಪು. 265–266.
7. ಎಪಿಗ್ರಾಫಿಯಾ *ಕರ್ಣಾಟಿಕಾ*, ಸಂಪುಟ–9 (ರೈಸ್ ಆವೃತ್ತಿ), ಆನೇಕಲ್ ತಾಲ್ಲೂಕು, ಶಾಸನ ಸಂಖ್ಯೆ–4, ಕನ್ನಡ ಲಿಪಿಯ ಪಾಠದ ಪು. 236.
8. ಎಪಿಗ್ರಾಫಿಯಾ *ಕರ್ಣಾಟಿಕಾ*, ಸಂಪುಟ–9 (ರೈಸ್ ಆವೃತ್ತಿ), ಆನೇಕಲ್ ತಾಲ್ಲೂಕು, ಶಾಸನ ಸಂಖ್ಯೆ–64, ಕನ್ನಡ ಲಿಪಿಯ ಪಾಠದ ಪು. 250.
9. *ಶಾಸನಗಳಲ್ಲಿ ಕರ್ನಾಟಕದ ವರ್ತಕರು*, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, 1986, ಪು. 2, 62, 63.
10. *Some Saka Dates in Inscriptions,* A. Venkatasubbiah, N.Subramaniam & Co, Chamaraja Mohalla, Mysore, 1918.
11. *ಗೋವಿಂದ ಪೈ ಸಂಶೋಧನ ಸಂಪುಟ* [(ಸಂ) ಹೆರಂಜೆ ಕೃಷ್ಣಭಟ್ಟ, ಮುರಳೀಧರ ಉಪಾಧ್ಯ ಹಿರಿಯಡಕ], ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ, ಉಡುಪಿ–1995 ; *Indiana,* Rashtrakavi Govind Pai Samshodhana Kendra, Udupi, 1997.
12. *ಪುರಾತತ್ತ್ವ ಶೋಧನೆ*, ಡಾ॥ ಎಸ್. ಶ್ರೀಕಂಠಶಾಸ್ತ್ರಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು–1960, 1975 ; *S*alivahana Era And Earliest Date, ಡಾ॥ ಎಸ್. ಶ್ರೀಕಂಠಶಾಸ್ತ್ರಿ, *Q.J.M.S* 17-4, 1927, pp.334-337 ; Salivahana Saka, ಡಾ॥ ಎಸ್. ಶ್ರೀಕಂಠಶಾಸ್ತ್ರಿ, *Q.J.M.S.,* 18-3, 1928, p. 230-231.

13. Selected Dates from the *Epigraphia Carnatica,* F. Kielhorn, *Indian Antiquary,* Vol. 26, 1897, p. 329-333.


14. ಬಿ.ಎಲ್. ರೈಸರು ಸಂಪಾದಿಸಿದ ಶಾಸನ ಸಂಪುಟಗಳ ಹೆಸರು ಎಪಿಗ್ರಾಫಿಯಾ *ಕರ್ಣಾಟಿಕಾ* ಎಂದು. ಮೈಸೂರು ವಿಶ್ವವಿದ್ಯಾನಿಲಯದಿಂದ ಪ್ರಕಟವಾಗುತ್ತಿರುವ ಪರಿಷ್ಕೃತ ಶಾಸನ ಸಂಪುಟಗಳ ಹೆಸರು ಎಪಿಗ್ರಾಫಿಯ *ಕರ್ನಾಟಿಕ* ಎಂದು. ಈ ವ್ಯತ್ಯಾಸವನ್ನು ಗಮನದಲ್ಲಿರಿಸಿಕೊಳ್ಳಬೇಕು.

15. ಇವುಗಳ ಬಗೆಗೆ ಹೆಚ್ಚಿನ ಮಾಹಿತಿಗೆ ನೋಡಿ : "ಕರ್ನಾಟಕದ ಶಾಸನಗಳಲ್ಲಿ ಕಾಲಗಣನೆ", ಪಿ.ವಿ. ಕೃಷ್ಣಮೂರ್ತಿ, *ಗುಣಮಧುರ,* {ಡಾ.ದೇವರಕೊಂಡಾರೆಡ್ಡಿ ಅಭಿನಂದನ ಗ್ರಂಥ, (ಸಂ) ಪಿ.ವಿ. ಕೃಷ್ಣಮೂರ್ತಿ, ಡಿ. ಸ್ಮಿತಾ} ಡಾ॥ ದೇವರಕೊಂಡಾರೆಡ್ಡಿ ಅಭಿನಂದನ ಸಮಿತಿ, ಬೆಂಗಳೂರು, 2010, ಪು. 291–301 ; *ಶಾಸನ ಮಂಥನ,* ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು, 2011, ಪು. 72–88; *ಕರ್ನಾಟಕದ ಶಾಸನಗಳಲ್ಲಿನ ಕಾಲಗಣನೆ,* ಎಂ.ವಿ. ವಿಶ್ವೇಶ್ವರ ಮತ್ತು ಎಸ್. ಕಾರ್ತಿಕ್, *ಇತಿಹಾಸ ದರ್ಶನ,* 28, 2013, ಪು. 85–94.

16. ಈ ಶಾಸನದ ಪಾಠವನ್ನು ಮೊದಲು ಸಿದ್ಧಪಡಿಸಿದವರೂ ಛಾಯಾಚಿತ್ರವನ್ನು ನೀಡಿದವರೂ ಆದ ಡಾ ॥ ಪಿ.ವಿ. ಕೃಷ್ಣಮೂರ್ತಿ ಅವರಿಗೆ ಕೃತಜ್ಞತೆಗಳು. ಪಿ.ವಿ. ಕೃಷ್ಣಮೂರ್ತಿ ಅವರು ಸಿದ್ಧಪಡಿಸಿದ ಪಾಠವನ್ನು ರೈಸರ ಪಾಠದೊಂದಿಗೆ ತಾಳೆನೋಡಿ ಸಂಪೂರ್ಣವಾಗಿ ಪರಿಷ್ಕೃತ ಪಾಠವನ್ನು ದಾಖಲಿಸಲಾಗಿದೆ.



ಶಾಸನದ ಮುಂಭಾಗ



ಶಾಸನದ ಹಿಂಭಾಗ

4. ಶ್ರೀ ಶೃಂಗೇರಿ ಶಂಕರನಾರಾಯಣ ಜೋಯಿಸರ ಸಂಗ್ರಹದಲ್ಲಿದ್ದ ಹಸ್ತಪ್ರತಿಯಲ್ಲಿ ದಾಖಲಾಗಿರುವ ಅಪ್ರಕಟಿತ ವಿಜಯನಗರ ಶಾಸನಗಳು

ಡಾ॥ ಕೆಳದಿ ವೆಂಕಟೇಶ್ ಜೋಯಿಸ್ – ಡಾ॥ ಕೆಳದಿ ಗುಂಡಾಜೋಯಿಸ್

ಶೃಂಗೇರಿ ಶ್ರೀ ವೇದಬ್ರಹ್ಮ ಶ್ರೀ ಕುಲಪತಿ ಶಂಕರನಾರಾಯಣ ಜೋಯಿಸರ ಕುಟುಂಬದ ಹಿರಿಯರು ಸುಮಾರು 500 ವರ್ಷಗಳಿಂದ ಶೃಂಗೇರಿಯಲ್ಲಿ ನೆಲೆಸಿದವರೆಂಬ ವಿಷಯ ಅವರ ಹಿಂದಿನವರು ಬರೆದಿಟ್ಟಿರುವ 'ಗಣಿತ ಮುಕುರ' ಎಂಬ ಹಸ್ತಪ್ರತಿಯಲ್ಲಿನ ಉಲ್ಲೇಖದಿಂದ ತಿಳಿದುಬರುತ್ತದೆ. ಈ ವಂಶದವರೆಲ್ಲರೂ ಹಿಂದಿನಿಂದಲೂ ವೇದ, ಮಂತ್ರ, ಶಾಸ್ತ್ರ, ಜ್ಯೋತಿಷ ಮುಂತಾದವುಗಳಲ್ಲಿ ಪಾಂಡಿತ್ಯ ಪಡೆದುಕೊಂಡಿದ್ದವರಾಗಿದ್ದರೆಂಬುದು ಇದರಿಂದ ತಿಳಿದುಬರುತ್ತದೆ. ಈ ಕುಟುಂಬಕ್ಕೆ ಸುಪ್ರಸಿದ್ಧ ಶ್ರೀ ಶಾಂಕರ ದಾಕ್ಷಿಣಾಮ್ನಾಯ ಶೃಂಗೇರಿ ಶಾರದಾ ಪೀಠದ ಜಗದ್ಗುರು ಸಂಸ್ಥಾನದಲ್ಲಿ ಆಸ್ಥಾನ ಜ್ಯೋತಿಷ ವಿದ್ವಾಂಸರಾಗಿ ಆಶ್ರಯ ದೊರೆತಿತ್ತು. ಹಿಂದಿನಿಂದ ಈ ಕುಟುಂಬ ಭಟ್ಟರೆಂದೇ ಕರೆಸಿಕೊಳ್ಳುತ್ತಿತ್ತಾದರೂ ಅನಂತರ ವೃತ್ತಿಯ ಪ್ರಕಾರ ಜೋಯಿಸರೆಂಬ ಉಪನಾಮ ಬಳಕೆಯಲ್ಲಿ ಬಂದಿರುವುದು ತಿಳಿದುಬರುತ್ತದೆ. ವಂಶವೃಕ್ಷದಲ್ಲಿ ಮೊದಲನೆಯವರಾಗಿ ಯಜ್ಞಭಟ್ಟರೆಂಬುವವರ ಹೆಸರು ಬಂದಿದೆ. ಅಲ್ಲಿಂದ ಹತ್ತನೆಯವರೇ ಈ ಶಂಕನಾರಾಯಣ ಜೋಯಿಸರು. ಈ ವಂಶದವರಿಗೆ ಭೂಮಿ, ಮನೆಗಳು ಸರ್ವಮಾನ್ಯವಾಗಿ ವಿಜಯನಗರ ಕಾಲದಿಂದಲೂ ಲಭಿಸಿತ್ತು. ಈ ವಂಶದವರೆಲ್ಲರೂ ಶೃಂಗೇರಿಯಲ್ಲಿಯೇ ಹುಟ್ಟಿ ಬೆಳೆದು, ಪ್ರವರ್ಧಮಾನಕ್ಕೆ ಬಂದವರಾಗಿದ್ದಾರೆ.

ಶ್ರೀ ಜೋಯಿಸರ ಪೂರ್ವಿಕರೆಲ್ಲರೂ ಬಹುಶ್ರುತರೂ, ವಿದ್ವಾಂಸರೂ ಆಗಿದ್ದರು. ಇದಕ್ಕೆ ಕೆಲವು ಉದಾಹರಣೆಗಳನ್ನು ಜೋಯಿಸರು ದಾಖಲಿಸಿಟ್ಟಿದ್ದಾರೆ. ಸುಪ್ರಸಿದ್ಧ ಜ್ಯೋತಿರ್ವಿದ್ಗುರುಗಳಾದ ಭಾಸ್ಕರಾಚಾರ್ಯ, ಆರ್ಯಭಟ, ವರಾಹಮಿಹಿರಾಚಾರ್ಯರುಗಳ ಕೆಲವು ಗ್ರಂಥಗಳಿಗೆ ವ್ಯಾಖ್ಯಾನ ಬರೆದಿರುವ ಚೋಳ ದೇಶದ ಗಂಗಾಪುರಿ ಅಗ್ರಹಾರದ ಸೂರ್ಯದೇವ ಯಜ್ವಾ ಎಂಬ ಪಂಡಿತರು ರಚಿಸಿದ ಜಾತಕಾಲಂಕಾರವೆಂಬ ವ್ಯಾಖ್ಯಾನ ಸಹಿತವಾದ ಶ್ರೀಪತಿ ಪದ್ಧತಿಯನ್ನು ಓಲೆಗರಿಯಲ್ಲಿ ಶೃಂಗೇರಿ ದೇವರ ಭಟ್ಟರ ಮಗ ದೇಮಣ ಭಟ್ಟರು ಶಾ.ಶ. 1529 (ಕ್ರಿ.ಶ. 1607) ಪ್ಲವಂಗ ಸಂವತ್ಸರದ ಮಾಘ ಶುಕ್ಲ ಪಾಡ್ಯ, ಶುಕ್ರವಾರದಂದು ಬರೆದು ಮುಗಿಸಿದ್ದಾರೆ. ಇವರು ಜೋಯಿಸರ ವಂಶವೃಕ್ಷದಲ್ಲಿ ಮೂರನೆಯವರು. ಐದನೆಯವರಾದ ಶಂಕರನಾರಾಯಣ ಭಟ್ಟರು ವಾರ್ಷಿಕ ತಂತ್ರವೆಂಬ ವಿದ್ದಣಾಚಾರ್ಯರ ಗ್ರಂಥಕ್ಕೆ ಗಣಿತಗನ್ನಡಿ ಎಂಬ ಕನ್ನಡ ವ್ಯಾಖ್ಯಾನ ಬರೆದಿದ್ದಾರೆ. ಹಾಗೂ ಸೌಂದರ್ಯಲಹರಿ ಲಕ್ಷ್ಮೀಧರ ವ್ಯಾಖ್ಯಾನವನ್ನು ತಾಳೆಯೋಲೆಯಲ್ಲಿ ಬರೆದಿದ್ದಾರೆ. ಸುಪ್ರಸಿದ್ಧ ಹಾಲಾಡಿ ಪಂಚಾಂಗ ಕರ್ತರ ಹಿರಿಯರು ಸುಮಾರು 250 ವರ್ಷಗಳ ಹಿಂದೆ ಶೃಂಗೇರಿಯಲ್ಲಿ ಶಂಕರನಾರಾಯಣ ಜೋಯಿಸರ ಪರಂಪರೆಯ ಆ ಕಾಲದ ಜ್ಯೋತಿರ್ವಿದರ ಬಳಿ ಶಿಷ್ಯರಾಗಿದ್ದು ಗ್ರಹಗಣಿತವನ್ನು ಅಭ್ಯಾಸ ಮಾಡಿ ಪಂಚಾಂಗವನ್ನು ರಚಿಸಿ ಪ್ರಕಟಿಸುವ ಕ್ರಮವನ್ನು ಪ್ರಾರಂಭಿಸಿದರು. ಈ ಜೋಯಿಸರ ಪುಸ್ತಕ ಭಂಡಾರದಲ್ಲಿ ಜ್ಯೋತಿಷ್ಯ, ಧರ್ಮಶಾಸ್ತ್ರಗಳಿಗೆ ಮತ್ತು ಇತರ ಧಾರ್ಮಿಕ ವಿಷಯಗಳಿಗೆ ಸಂಬಂಧಪಟ್ಟಂತೆ ತಾಳೆಗರಿಯಲ್ಲಿ, ನಂತರ ಕಾಗದದಲ್ಲಿ ಬರೆದ ಮತ್ತು ಮುದ್ರಿತವಾದ ಅಪೂರ್ವ ಉಪಯುಕ್ತ ಗ್ರಂಥಗಳನ್ನು ಜೋಯಿಸರ ವಂಶದವರು ಕಾಪಾಡಿಕೊಂಡು ಬಂದಿದ್ದರು. ಜೋಯಿಸರು ತಮ್ಮ ಕಾಲದಲ್ಲಿಯೂ ಈ ಪುಸ್ತಕ ಸಂಗ್ರಹಕ್ಕೆ ಕೆಲವು ಮುದ್ರಿತ ಗ್ರಂಥಗಳನ್ನು ಸೇರಿಸಿದ್ದರು. ನೂರಾರು ಪುಸ್ತಕಗಳಿದ್ದ ಈ ಗ್ರಂಥಸಂಗ್ರಹದ ಬಹುತೇಕಭಾಗವನ್ನು ಜೋಯಿಸರು ಶ್ರೀ ಶ್ರೀ ಜಗದ್ಗುರು ಸನ್ನಿಧಾನಕ್ಕೆ 1988ರಲ್ಲಿ ಸಮರ್ಪಿಸಿರುವುದನ್ನು ದಾಖಲು ಮಾಡಿದ್ದಾರೆ.

ಇವರಲ್ಲಿ ಇದ್ದ ಕೆಲವು ಹಸ್ತಪ್ರತಿಗಳನ್ನು ಮಾನ್ಯ ಶ್ರೀ ಸೀತಾರಾಮ ಎಂಬುವರು ಸಂಶೋಧನೆಗೆ ತೆಗೆದುಕೊಂಡು ಹೋಗಿದ್ದು ಅದನ್ನು ವ್ಯವಸ್ಥಿತವಾಗಿ ರಕ್ಷಿಸಿಕೊಂಡು ಬರುತ್ತಿದ್ದಾರೆ. ಅಲ್ಲದೆ ಅಪ್ರಕಟಿತ ಕೃತಿಗಳನ್ನು ಹೊರತರುವ ಪ್ರಯತ್ನವನ್ನೂ

ಇವರು ಮುಂದುವರೆಸಿದ್ದಾರೆ. ಇವರ ಸಂಗ್ರಹದಲ್ಲಿ ಶ್ರೀ ಜೋಯಿಸರು ಸಂಗ್ರಹಿಸಿದ ಸುಮಾರು ನಾಲ್ಕೈದು ಹಸ್ತಪ್ರತಿಗಳಿವೆ. ಅವುಗಳಲ್ಲಿ ಒಂದು ಈಗ ಇಲ್ಲಿ ಪ್ರಸ್ತಾಪಿಸಲ್ಪಡುತ್ತಿರುವ ಹಸ್ತಪ್ರತಿಯಾಗಿದೆ. ಇದು ಸುಮಾರು 38 ಇಂಚು ಉದ್ದ ಮತ್ತು 4.8 ಇಂಚು ಅಗಲವನ್ನು ಒಳಗೊಂಡಿದೆ. ಪ್ರತಿ ಗರಿಯಲ್ಲಿ ಸುಮಾರು 6 ರಿಂದ 8 ಸಾಲುಗಳು ಬರೆಯಲ್ಪಟ್ಟಿವೆ. ಅಕ್ಷರಗಳು ಸ್ಫುಟವಾಗಿವೆ. ಇದು ತಾಮ್ರಶಾಸನದ ಪ್ರತಿಯ ಪ್ರತಿ ಇದಾಗಿದೆ. ಈ ಕಟ್ಟಿನಲ್ಲಿ ಒಟ್ಟು 65 ಗರಿಗಳಿದ್ದು ಅದೆಲ್ಲವೂ ವಿಜಯನಗರ ಇತಿಹಾಸಕ್ಕೆ ಸಂಬಂಧಿಸಿದ ಮಾಹಿತಿಯನ್ನು ಒಳಗೊಂಡಿದೆ. ಈ ಹಸ್ತಪ್ರತಿಯಲ್ಲಿ ದಾಖಲಾಗಿರುವ ಶಾಸನ ಪ್ರತಿಯಲ್ಲಿ ನಾಲ್ಕಾರನ್ನು ಇಲ್ಲಿ ಯಥಾವತ್ತಾಗಿ ದಾಖಲಿಸಲು ಪ್ರಯತ್ನಿಸಲಾಗಿದೆ. ಪೂರ್ಣ ಪಾಠವನ್ನಿಲ್ಲಿ ಕೊಟ್ಟಿರುವುದಿಲ್ಲ. ಕೇವಲ ಮೊದಲ ಗರಿಯಲ್ಲಿ ದಾಖಲಾಗಿರುವ ವಿವರವನ್ನು ಮಾತ್ರ ಇಲ್ಲಿ ಕೊಟ್ಟಿದ್ದೇವೆ.

ಗರಿ 1

1. ಶ್ರೀ ಗಣಾಧಿಪತಯೆನಮಃ । ಶ್ರೀ ಶಾರದಾಗುರುಭ್ಯೋಽನಮಃ॥ ಶ್ರುಂಗೇರಿ ವಿದ್ಯಾರಣ್ಯಪುರದ ಅಗ್ರಹಾರಕ್ಕೆ ಬರಶಿಕೊಟ್ಟ ಪಟ್ಟೆ ಪ್ರತಿ.
2. ಶ್ರುಂಗೆರ್ರಿ ವಿದ್ಯಾರಂಣ್ಯಪುರದ ಅಗ್ರಹಾರಗಳಿಗೆ । ಪೂರ್ವದಲ್ಲಿ । ಹರಿಹರ ಮಹಾರಾಯರು ವಿದ್ಯಾರಂಣ್ಯ ಶ್ರೀ ಪಾದ ಪದ್ಮಂಗಳಾನುಮತದಿಂದ ಬ್ರಾಂಹ್ಮರಿಗೆ
3. ಅಗ್ರಹಾರವಂನು ಮಾಡಿ ಶೃಂಗೆರಿ ವಿದ್ಯಾರಂಣ್ಯಪುರ ಸಹಾ ಯರಡು ಅಗ್ರಹಾರದ ಉತ್ರಿಗಳನು ಶ್ರೀ ವಿದ್ಯಾಶಂಕರ ಸ್ವಾಮಿಗಳಿಗೆ ಸಮರ್ಪಿಸಿದ ವಿವರ ।
4. ನಮಸ್ತುಂಗ ಶಿರಶ್ಚುಂಬಿ ಚಂದ್ರ ಚಾಮರ । ತ್ರೈಲೊಕ್ಯ ನಗರಾರಂಭ ಮೂಲಸ್ತಂಭಾಯ ಶಂಭವೆ । ಜಯತ್ಯನಾಡಿನಿದನಃ ।
5. ಶ್ರೀಮಾನಿಕಸ್ಪಭ್ಂದ ಸೂಕರಃ । ಯಸ್ಯ ದಂಉಷ್ಟ್ರಮ್ರುದೊಬಾಳೆನದದತ್ತೆ ಭೂತಳ ಪಂಚಕಜಂ । ಸ್ವಸ್ತಿ ಶ್ರೀ ಜ
6. ಶಕ ವರುಶ 1322ನೆ ವರ್ತಮಾನಕ್ಕೆ ಸಲುವ೩ರ ಉದ್ರಿ ಸಂವತ್ಸರದ ಮಾರ್ಗಶಿರ ಶು 1 ಸೊಮವಾರದಲೂ ಶ್ರೀಮಂನ್ಮಹಾರಾಜಾಧಿರಾಜ ರಾಜ ಪರಮೇಶ್ವ
7. ರ ಶ್ರೀವಿರಪ್ರತಾಪರಾದ ಶ್ರೀ ಹರ್ರಿಹರದೆವರಾಯರುಶ್ರೀ ಭಾರತೀ ತೀರ್ಥಂಗಳಿಗೆಸಮರ್ಪಿಸಿದ ಆರಗದ ವೇಂಠೆಯಕ್ಕೆ ಸಲುವ ಸಾಂತಳ್ಳಿಗೆ ನಾಡ-------

ಗರಿ 2

1. ಸ್ವಸ್ತಿ ಶ್ರೀ ಜಯಾಭ್ಯುದಯ ಶಾಲ್ಲಿವಾಹನಶಕ ವರುಷ 1308ನೆ ವರ್ತಮಾನಕ್ಕೆ ಸಲುವ ಕ್ಷಯ ಸಂವತ್ಸರಸ್ದ್ನ ಜೆ.ಬ.13
2. ಸ್ತಿರವಾರದಲೂ । ಶ್ರೀಮಂನ್ಮಹಾರಾಜಾದಿರಾಜ ರಾಜಪರಮೆಶ್ವರವ ಯಿದಿಕ ಮಾರ್ಗ ಪ್ರತಿಷ್ಟಾಪಕ ಶ್ರೀವೀರಪ್ರತಾಪ ಬುಕರಾಯರ ಕುಮಾರರಾದ
3. ಚಿಕಹರ್ರಿಹರ ಮಹಾರಾಯರು ಭಾರತ್ತಿ ತಿರ್ಥರುಗಳನುಮತದಿಂದ ತಂಮ ಹೆಸರಲು ದಾರ್ರೆನೆರದು ಕೊಟ ಉತ್ರಿ 1 ರ ಗ 2॥ ಯ----

ಗರಿ ಮೂರು

1. ಶಾಲಿವಾಹನ ಶಕ ವರುಶ 1328ನೆ ವರ್ತಮಾನದ । ಕ್ಷಯ ಸಂವತ್ಸರದ ದ್ವಿತ್ತಿಯ ಆಶಾಢ 2ಲು ।
2. ಮಂಗಳವಾರದಲು । ಕರ್ಕಟಿಕ ಸಂಕ್ರಾಂತಿ ಪುಂಣ್ಯಕಾಲದಲು । ಶ್ರಿ ವಿರಪ್ರತಾಪ ಹರಿಹರ ಮಹಾರಾಯರು ಶ್ರಿಮತ್ಪರಮ ।

3. ಹಂಸ ಪರ್ಿವ್ರಾಜಕಾಚಾರ್ಯ ಶ್ರಿ ವಿದ್ಯಾರಣ್ಯ । ಶ್ರಿಪಾದ ಪದ್ಮಂಗಳ ಸಂನಿಧಿಯಲು । ಚತುರ್ವೆದ ಭಾಸ್ಯ ಪ್ರವರ್ತಕರಾದ ನಾರಾಯ
4. ಣ ಸೊಮಯಾಜಿಗಳು । ನರಹರಿ ಸೊಮಯಾಜಿಗಳು । ಪಂದರಿ ದಿಕ್ಷಿತರು । ಯೀ ಮೂವರು ವಿದ್ವಾಂಸರುಗಳಿಗೆ ಕೊಟತಾಂಬರ ಶಾಸನ.
5. ವಿದ್ಯಾರಣ್ಯಪುರದ ಶಾಸನ । ನಮಸ್ತುಂಗ ಶಿರಶ್ಚುಂಬಿ ಚಂದ್ರ ಚಾಮರ ಚಾರವೆ ತ್ರೈಲೊಕ್ಯನಗರಾರಂಭ ಮೂಲ

ಗರಿ 4

2. ಸ್ತಂಬಾಯ ಶಂಭವೆ । ಸ್ವಸ್ತಿಶ್ರೀ ಜಯಾಭ್ಯುದಯ । ಶಾಲ್ಲಿವಾಹನಶಕ ವರುಶ 1308ನೆಯ ವರ್ತಮಾನಕೆ ಸಲುವ । ರಾಕ್ಷಸ ಸಂವತ್ಸರದ । ಜೆಷ್ಟ
3. ಬ 13 ಸ್ತಿರವಾರದಲೂ । ಶ್ರೀಮದ್ರಾಜಾದಿರಾಜ ರಾಜಪರಮೆಶ್ವರ । ಶ್ರೀವಿರಪ್ರತಾಪಶ್ರಿ ಬುಕದೆವರಾಯರು । ಶ್ರುಂಗೆರಿ ಗ್ರಾಮಾ
4. ಶ್ರಿತ ಮಹಾಜನಂಗಳಿಗೆಶ್ರೀ ವಿದ್ಯಾರಣ್ಯ । ಶ್ರೀಪಾದ ಪದ್ಮಂಗಸ್ಯ ನಿರೂಪದಿಂದ । ಶ್ರೀ ವಿದ್ಯಾರಂಣ್ಯ ಪುರವಾಗಿ ದಾನಧಾರ । ಪೂರ್ವಕವಾಗಿ । ಕೊಟ ಉತ್ರಿ ।
1. ಶಾಸನ 4ರ ಉತ್ತಿ । 25ಕ್ಕೆ ಕುಳಗ 1500ಕ್ಕೆ ಶಕ ವರುಶ 1437ನೆಯ ಯುವ ।
2. ಸಂವತ್ಸರದಲು । ಶ್ರುಂಗೆರಿರಾಮಚಂದ್ರ ಭಾರತ್ತಿ ಸ್ವಾಮಿಗಳಿಗೆ । ಅಶೆಶ ವಿದ್ವಾಂನುಮಹಾಜನಂಗಳಿಗ್ಯೆ ಕಾರಕಳದ ಹರಿಭ್ಯೆರರಸನು । ತಟ್ಟಿನ ।
3. ವಾವೆ ಬಸ್ರಕೊಟ್ಟು । ಶ್ರುಂಗೆರಿಗೆ ಸಲುವ ಆರುಸಾವಿರ ಸಿಮೆವಳಗೆ ಮೂರು ಸಾವಿರ ಸಿಮೆ ಕಂಬ್ರಿ ಸಿಮೆ ಕೊಟ್ಟರು ಗ 512॥ -------

ಗರಿ 5

ಕಾರಕಳದವರ ಕಟ್ಟಿನ ಬಿಂನವತ್ತಳೆ

1. ಸ್ವಸ್ತಿ ಶ್ರಿ ಜಯಾಭ್ಯುದಯ ಶಾಲ್ಲಿವಾಹನ ಶಕ ವರುಶ 1437ನೆ ವಸ್ತ್ರಮಾನಕೆ ಸಲುವ । ಧಾತು ಸಂವತ್ಸರದ ಮಶಾಖ ಶು 5 ಯು ಆದಿವಾರದಲು
1. ಶ್ರೀಮತ್ಪರಮಹಂಸ ಪರಿವ್ರಾಜಕಾಚಾರ್ಯವರ್ಯ ಪದವಾಕ್ಯ ಪ್ರಮಾಣ ಪಾರಾವಾರ ಪಾರೀಣ ಯಮನಿಯಮಾದ್ಯಷ್ಟಾಂಗಯೊಗನಿರತರಾ
2. ದ । ಶ್ರುಂಗೆರ್ರಿ । ರಾಮಚಂದ್ರಭಾರತ್ತಿವಡೆರ । ದಿವ್ಯಶ್ರಿಪಾದಪದ್ಮಂಗಳಿಗಂ ।
3. ಯಜಿನಾದಿಶಟ್ಟುಕರ್ಮನಿರತರಾದ । ಶ್ರುಂಗೆರ್ರಿಯ ಅಶೆಶವಿದ್ವಂನು ।
4. ಮಹಾಜನಂಗಳಿಗು । ಕಾರಕಳರಪದುಮಲಿದೆವಿಕಲಿಮಾರೆಬ್ಯೆರರಸನು । ಕೊಟ ಕಸ್ಟಿನ ಬಿಂನವತ್ತಳೆ ಕ್ರಮವೆಂತೆಂದರೆ------

ಗರಿ 6

1. ಶ್ರುಂಗೆಸ್ರಿ ಮೊದಲುಮನೆ ನಾರಣಭಟ್ಟರ ಪಟ್ಟೆ ಪ್ರತಿ
2. ನಮಸ್ತುಂಗ ಶಿರಶುಂಬಿಚಂದ್ರ ಚಾಮರ ಚಾರವೆ ತ್ರೈಲೊಕ್ಯ ನಗರಾಂರಂಭ ಮೂಲಸ್ತಂಭಾಯ ಶಂಭವೆ ।

3. ಜಯತ್ಯನಾದಿನಿದನಃ ಶ್ರೀಮಾಂನ್ನು ಸ್ವಸ್ಚ್ಛಂದ ಸೂಕರಃ ಯಸ್ಯದೌಷ್ಟಾಮ್ರುಣಾಳೇನ ದದೆ ಭೂತಳ ಪಂಕಜಂ । ಸ್ವಸ್ತಿ ಶ್ರೀ ಜಯಾಭ್ಯುದಯ । ಶಾಲ್ಲಿ

4. ವಾಹನ ಶಕ ವರುಶ 1574ನೆಯ ವರ್ತಮಾನಕೆ ಸಲುವ ನಂದನ ಸಂವತ್ಸರದ । ಭಾದ್ರಪತ ಶು 15 ಯು ಭ ಉಮವಾಸರದಲು।ಶ್ರೀಮತ್ಪ

ಈ ಹಸ್ತಪ್ರತಿಯಲ್ಲಿ ದಾಖಲಾಗಿರುವ ಶಾಸನಗಳು ಶಾಲಿವಾಹನ ಶಕ ವರುಷ 1308, 1437, 1574ನೆಯದ್ದಾಗಿವೆ. ಅಂದರೆ ಕ್ರಿ.ಶ. 1386, 1515, 1652ರದ್ದಾಗಿವೆ. ಇವು ಕ್ರಮವಾಗಿ ಹರಿಹರ ಮಹಾರಾಯರು ವಿದ್ಯಾರಂಣ್ಯರು, ಶ್ರೀಮಂನ್ಮಹಾರಾಜಾದಿರಾಜ ರಾಜಪರಮೆಶ್ವರ ವಯಿದಿಕ ಮಾರ್ಗ ಪ್ರತಿಷ್ಟಾಪಕ ಶ್ರೀವೀರಪ್ರತಾಪ ಬುಕರಾಯರ ಕುಮಾರರಾದ ಚಿಕ ಹರ್ರಿಹರ ಮಹಾರಾಯರು ಈ ಮೊದಲಾದ ರಾಜರ ಕಾಲಕ್ಕೆ ಸೇರುವಂತಹುವಾಗಿವೆ. ಈ ಕಾಲದಲ್ಲಿ ಜಗದ್ಗುರು ಭಾರತೀ ತೀರ್ಥ ಮಹಾಸ್ವಾಮಿಗಳು, ಶ್ರೀ ವಿದ್ಯಾಶಮ್ಕರ ಮಹಾ ಸ್ವಾಮಿಗಳು, ಶ್ರೀ ರಾಮಚಂದ್ರ ಭಾರತಿ ಮಹಾಸ್ವಾಮಿಗಳು ಮೊದಲಾದವರು ಶ್ರೀ ಶೃಂಗೇರಿ ಮಠದ ಪೀಠದಲ್ಲಿದ್ದು ಸದ್ಧರ್ಮ ಪ್ರವರ್ಧಕರಾಗಿದ್ದರೆಂದು ತಿಳಿದುಬರುತ್ತದೆ. ಈ ಹಸ್ತಪ್ರತಿಯಲ್ಲಿ ದಾಖಲಾಗಿರುವ ಶಾಸನಗಳ ಕುರಿತು ಹೆಚ್ಚಿನ ಸಂಶೋಧನೆ ನಡೆದಿದೆ.

5. ವಿಜಯನಗರ ಸಾಮ್ರಾಜ್ಯ ಸಂಸ್ಥಾಪನಾಚಾರ್ಯ ಶ್ರೀ ವಿದ್ಯಾರಣ್ಯರು : ಇನ್ನಷ್ಟು ಚಿಂತನೆ

ಡಾ॥ ಎಸ್.ಕೆ. ಜೋಶಿ

ಭೌಗೋಲಿಕ ಪರಿಸರವು ಒಂದು ಪ್ರದೇಶದ ಆರ್ಥಿಕ ಸೌಷ್ಠವತೆಗೆ ಶಕ್ತಿ ನೀಡಿದರೆ, ಅದೇ ಪ್ರದೇಶಕ್ಕೆ ದುಷ್ಕರ್ಮಿಗಳ ದಂಡಯಾತ್ರೆಗೂ ತುತ್ತಾಗುತ್ತದೆ. ಈ ಸಿದ್ಧಾಂತಕ್ಕೆ ವಾಯವ್ಯ ಭಾರತವು 10ನೆಯ ಶತಮಾನದಿಂದಲೂ ತುತ್ತಾಗಿದೆ, ಆಘಾತಗಳನ್ನು ಎದುರಿಸಿದೆ.

ಬೋಲನ್ ಖೈಬರ ಕಣಿವೆಗಳು ಮುಸ್ಲಿಂರ ದಂಡಯಾತ್ರೆಗಳಿಗೆ = ಮುಹಮ್ಮದ ಗಝನಿ, ಮಹಮ್ಮದ ಘೋರಿ, ಅಲ್ಲಾಉದ್ದೀನ ಖಿಲಜಿ, ಕುತುಬುದ್ದೀನ ಮುಂತಾದ ಆಕ್ರಮಣಕಾರಕ ಆಘಾತಗಳು ಉತ್ತರ ಭಾರತ ಬಹುಭಾಗವನ್ನು ಝೀಲಮ್, ಸತಲಜ್, ರಾವಿ, ಚೀನಾಬ್, ಸಿಂಧು ತಪ್ಪಲುಗಳನ್ನು, ಅಲ್ಲಿಯ ಶಾಂತಿಪ್ರಿಯ ಹಿಂದು ರಾಜಸ್ವವನ್ನು ವಿಹ್ವಲಗೊಳಿಸಿದವು. ಜನವೂ ಈ ವರೆಗೂ ಕಾಣದ ಪರಕೀಯರ ಕ್ರೌರ್ಯವನ್ನು ಅನುಭವಿಸಬೇಕಾಯಿತು. ಮೇಲಿಂದಮೇಲಾಗುವ ಇಂಥ ಆಕ್ರಮಣಗಳಿಗೆ ದಡ್ಡಬಿದ್ದಂತಾಯಿತು.

ಆದರೆ ಈ ಮೇಲಣ ಶತಮಾನಗಳಲ್ಲಿ ದಕ್ಷಿಣ ಭಾರತದ ರಾಜಧರ್ಮವು ತನ್ನದೇ ಆದ ರಾಜಸ್ವವನ್ನು ಹೊಂದಿತ್ತು. ಅದು ಪಾರಂಪರ್ಯದ ಹಿಂದುಮಯ ಪರಕೀಯರ – ಇಸ್ಲಾಮೀಯರ – ಆಘಾತವನ್ನು ಉಂಡಿರಲಿಲ್ಲ. ಕಾಲ ಉರುಳಿದಂತೆ ದಕ್ಷಿಣ ಭಾರತದ ಸಾಮಾಜಿಕ ಹಾಗೂ ರಾಜಕೀಯ ವ್ಯವಸ್ಥೆಗೂ ಕಲಿಗಾಲ ಕೂಡಿಬಂತು.

ಅಲ್ಲಾಉದ್ದೀನ ಖಿಲಜಿಯ ದಂಡನಾಯಕ ಮಲೀಕ್ ಕಾಫುರ್‌ನ ಕ್ರೂರ ದಂಡಯಾತ್ರೆ ವಿಂಧ್ಯವನ್ನು ದಾಟಿ ದಕ್ಷಿಣಕ್ಕೆ ಎರಗಿತು (ಕ್ರಿ.ಶ. 1298, 1300, 1310). ಆಗ, ಸಂಪತ್ತನ್ನು ಹೊತ್ತಂಥ ಹಿಂದೂ ಸಾಂಪ್ರದಾಯವನ್ನು ಸಾಂಪ್ರತ ನಡೆಸಿಕೊಂಡು ಬಾಳಿದಂಥ ದಾರಿಗಳು ಆತನ ಆಕ್ರಮಣಕ್ಕೆ ಪ್ರಪ್ರಥಮವಾಗಿ ತುತ್ತಾದವು – ದೇವಗಿರಿ ತುಳಜಾಪೂರ, ಪಂಢರಪೂರ, ಸೊನ್ನಲಾಪೂರ, ವಿದ್ಯಾಪೂರ (ಬಿಜಾಪುರ) ಬೆಳಗಾವಿ, ಧಾರವಾಡ, ಬಂಕಾಪೂರ, ಹಾನುಂಗಲ್, ಚಿತ್ರದುರ್ಗ, ಬೇಲೂರು, ಸೋಮನಾಥಪುರ, ಶೃಂಗೇರಿ, ತಂಜಾವೂರು ಇವೆಲ್ಲ ಸುಲಿಗೆಗಳಿಗೆ ಒಳಗಾದವು. ಆಗ ಎಚ್ಚೆತ್ತಿತು ದಕ್ಷಿಣ ಭಾರತ – ವಿಜಯನಗರ, ಹಿಂದೂ ಸಾಮ್ರಾಜ್ಯದಲ್ಲಿ ಶ್ರೀ ವಿದ್ಯಾರಣ್ಯರ ನೇತೃತ್ವದಲ್ಲಿ.

ಹದಿನಾಲ್ಕನೆಯ ಶತಮಾನದಲ್ಲಿ ಇಡೀ ದಕ್ಷಿಣಭಾರತವು ಯವನರ ದಾಳಿಯಿಂದ ತತ್ತರಿಸಿಹೋಗಿತ್ತು. ಸ್ವ-ಸಾಮರ್ಥ್ಯ, ವಿಸ್ಮೃತಿ ಹಾಗೂ ಅನೈಕ್ಯಗಳಿಂದ ಕಿಂಕರ್ತವ್ಯಮೂಢವಾಗಿದ್ದ ಆ ಕಾಲದ ಜನತೆಯಲ್ಲಿ ವಿದ್ಯಾರಣ್ಯರು ತಮ್ಮ ತಪೋಬಲ ಮತ್ತು ಸಂಘಟನಾ ಸಾಮರ್ಥ್ಯಗಳಿಂದ ಸ್ವಾಭಿಮಾನ, ಧರ್ಮಾಭಿಮಾನ, ರಾಷ್ಟ್ರಾಭಿಮಾನಗಳನ್ನು ಜಾಗೃತಗೊಳಿಸಿದರು. ಭುವನದ ವಿಖ್ಯಾತವಾದ ಮಹಾಸಾಮ್ರಾಜ್ಯವನ್ನು ವಿಜಯನಗರದಲ್ಲಿ ಸ್ಥಾಪಿಸುವಲ್ಲಿ ಮಹತ್ವದ ಪಾತ್ರ ವಹಿಸಿದರು (ಕ್ರಿ.ಶ. 1336).

ಈ ಮಹಾನ್ ಐತಿಹಾಸಿಕ ವ್ಯಕ್ತಿ, ವಿಭೂತಿ ವಿದ್ಯಾರಣ್ಯರ ಪೂರ್ಣ ಪರಿಚಯವು ಕನ್ನಡ ಜನತೆಗೆ ಇಲ್ಲದಿರುವುದು ಬೇಸರದ ಸಂಗತಿಯಾಗಿದೆ. ಭಾರತೀಯ ತೇಜೋರಾಶಿಯಲ್ಲಿ ಬೆಳಗುತ್ತಿರುವ ಪ್ರತಿಭೆ ಇವರು. ಇವರ ಕೀರ್ತಿ – ಶಂಕರ ಭಗವತ್ಪಾದರ ಸಮೀಪವಿದೆ. ಪ್ರತಿಭೆಯು ಬಹುಮುಖ. ವಿಜಯನಗರದ ಸ್ಥಾಪನಾ ಕಾಲದಲ್ಲಿ ಅದರ ಅಧ್ವರ್ಯು ಹಾಗೂ ರಮುರರಾಗಿದ್ದರು.

ಜ್ಞಾನ ಚಕ್ರವರ್ತಿಗಳಾದ ಅವರು ರಾರಾದಿ ಲೌಕಿಕ ವ್ಯವಹಾರವನ್ನು ಅದಷ್ಟೇ ಸಮರ್ಥವಾಗಿ, ನಡೆಸಿದ ಮಹಾನ್ ವಿಭೂತಿಪುರುಷ. ಸಕಲ ಮತ ಸಾಮರಸ್ಯವನ್ನು ನಿರೂಪಿಸಿ, ರಾಷ್ಟ್ರೀಯ ಭಾವೈಕ್ಯವನ್ನು ಸಾಧಿಸಿದ ವ್ಯಕ್ತಿ. ಈ ಮಹಾಪುರುಷ ಅವರನ್ನು ಇಂದಿನ ವಿಶಿಷ್ಟ ಸಂಕಿರಣದಲ್ಲಿ ಸ್ಮರಿಸುವುದು ಸ್ತುತ್ಯ. ಅವರು ರಾಷ್ಟ್ರವನ್ನು ಕಟ್ಟಿದುದು, ನುಡಿ ಕಟ್ಟಿದುದು, ಇವುಗಳೆಲ್ಲ ಇಂದಿಗೂ ನಮಗೆ ವಾಸ್ತವ ದಾರಿದೀಪಗಳು. ಆ ಬೆಳಕಿನಲ್ಲಿ ನಾವು ಈ ರಾಷ್ಟ್ರೀಯರು ಮುನ್ನಡೆಯೋಣ.

ಸಿಂಹನಾದ ಶ್ರೀ ವಿದ್ಯಾರಣ್ಯರಿಂದ ಹಂಪಿಯ ಗಿರಿಗಹ್ವರಗಳಲ್ಲಿ ಮೊಳಗಿತು 1336ರಲ್ಲಿ.

ಏಳು ಸಾಯಣ ಕಟ್ಟು ಗ್ರಂಥವ, ಏಳು ಪಂಪಾಕ್ಷೇತ್ರದ ಏಳು ಪುರಾಣ ಮಾತೃಕೆ.

ಪ್ರಾಯಶಃ ಈ ಸಿಂಹನಾದವು ಇದೇ ದಕ್ಷಿಣ ಭಾರತದಲ್ಲಿಯೇ ಮೊಳಗಿರಲು ಸಾಕು. ಹಾಗಾಗಿ ಸ್ವಧರ್ಮ, ಸ್ವರಾಜ್ಯ, ಸ್ವಾಭಿಮಾನಗಳ ರಕ್ಷಣೆಗಾಗಿ ನರ್ಮದೆಯ ತಡಿಯಿಂದ ಕಾವೇರಿ ಅಡಿಯವರೆಗೂ ಹಿಂದು ಸಂಘಟನೆಯ ಕ್ರಾಂತಿ ಕರೆಯಿತು. ದಕ್ಷಿಣ ಭಾರತದ ಸುರಕ್ಷತೆಯ ಕೂಗು ಇದರಲ್ಲಿದೆ; ಇವರಿಲ್ಲವಾಗಿದ್ದರೆ ಉತ್ತರದಂತೆ, ದಕ್ಷಿಣವೂ 'ಮುಸ್ಲಿಮ್ಯಾಟೈಜ್' ಆಗುತ್ತಿತ್ತು.

ಭುವನ ವಿಖ್ಯಾತವಾದ ಕರ್ನಾಟಕದ ಮಹಾಸಾಮ್ರಾಜ್ಯವನ್ನು ವಿಜಯನಗರದಲ್ಲಿ, ಹಕ್ಕ ಬುಕ್ಕರ ಶಕ್ತಿಯೊಂದಿಗೆ ಸ್ಥಾಪಿಸುವಲ್ಲಿ (1336) ಮಹತ್ವದ ಪಾತ್ರ ವಿದ್ಯಾರಣ್ಯರು ವಹಿಸಿದರು. ಇಂಥ ಐತಿಹಾಸಿಕ ಪುರುಷನ ಜೀವನ ಚರಿತ್ರೆಯು ಇನ್ನೂ ಮಸುಕಾಗಿದೆ. ಅದರ ಬಗ್ಗೆ ಇನ್ನೂ ಹೆಚ್ಚಾಗಿ ಸಂಶೋಧನೆ ಆಗಬೇಕಾಗಿದೆ.

ಶ್ರೀ ವಿದ್ಯಾರಣ್ಯರ ಜೀವನದ ಬಗ್ಗೆ ಹೇಳಬೇಕಾದರೆ ಇವರ ತಂದೆ ತಾಯಿಗಳು ಕಾಂಚೀಪುರದವರು. ಅಲ್ಲಿಯೇ ಇರುವ ವರದರಾಜಸ್ವಾಮಿ ದೇವಾಲಯದ ಅಭಿಷೇಕ ಮಂಟಪದ ಹತ್ತಿರದ ಬಂಡೆಯೊಂದರ ಮೇಲೆ ಇರುವ ಶಿಲಾಶಾಸನವು ಈ ರೀತಿ ಹೇಳುತ್ತಿದೆ. ವಿದ್ಯಾರಣ್ಯರ ತಂದೆತಾಯಿ, ಸೋದರ ಸೋದರಿಯರ ಬಗೆಗೆ, ಗೋತ್ರಾದಿಗಳ ಬಗೆಗೆ ತಿಳಿಸುವ ವಿಷಯವು 'ಪರಾಶರ ಮಾಧವೀಯ' ಗ್ರಂಥದಲ್ಲಿದೆ. (ಡಾ॥ ವೇಣಿ ಮಾಧವ ಶಾಸ್ತ್ರಿ, 'ವಿದ್ಯಾರಣ್ಯ ಮತ್ತು ವಿಜಯನಗರ ಸಾಮ್ರಾಜ್ಯ' ಲೇಖನ).

ಕಾಂಚೀಪುರ ಶಿಲಾಲೇಖ ಅವರ ಬಗ್ಗೆ ಹೀಗೆ ಹೇಳಬರುತ್ತದೆ. "ಶ್ರೀ ಮಾಯಿ ಶ್ರೀ ಜನನೀ, ಪಿತಾ ತವಮುನಿ ಬೋಧಾಯನೋ ಮಾಯಣ / ಜೇಷ್ಟೋ ಮಾಧವ ಭಟ್ಟ ಭೂಷಣರನುಜ ಶ್ರೀ ಭೋಗನಾಥೋ ಕವಿ / ಸ್ವಾಮಿ ಸಂಗಮ ಭೂಪತಿ ಕವಿವರ ಶ್ರೀ ಕಂಠನಾಥೋ ಗುರು / ಭಾರದ್ವಾಜ ಕುಲೇಶ ಸಾಯಣ ಗುಣ್ಯೈ ತತ್ ತ್ವಮೇವಾದಾ" ಎಂದು ಹೇಳಿದೆ.

ಈ ಮೇಲಿನ ಶ್ಲೋಕ ಮೊದಲಾದವುಗಳಿಂದ ಅವರ ಕೌಟುಂಬಿಕ ವಿವರಗಳು ದೊರೆಯುವುವಾದರೂ ಅವರ ಜನ್ಮಕಾಲದ ಬಗ್ಗೆ ಬೇರೆ ಬೇರೆ ಅಭಿಪ್ರಾಯಗಳು ಕಂಡುಬರುತ್ತವೆ. ಮಾಧವಾಚಾರ್ಯರು ಒಬ್ಬರೇ ಇದ್ದರೆಂದು ಕೆಲವರ ವಿಚಾರವೂ ಇದೆ. ಡಿ.ವ್ಹಿ. ಗುಂಡಪ್ಪರನ್ನೊಳಗೊಂಡು, ನೈಜ ಸ್ಥಿತಿಯು ಮೇಲಣ ಶ್ಲೋಕವೇ ಸತ್ಯಸ್ಯಾಸತ್ಯ ಎಂದು ಡಾ॥ ಜಿ.ಎಸ್. ದೀಕ್ಷಿತ, ಡಾ॥ ವೇಣಿ ಮಾಧವ ಶಾಸ್ತ್ರಿ, ಶತಾವಧಾನಿ ಆರ್. ಗಣೇಶರು, (ಕೃತಿ: 'ವಿಭೂತಿ ಪುರುಷ ವಿದ್ಯಾರಣ್ಯ') ಮುಂತಾದವರು ಒಪ್ಪುತ್ತಾರೆ. ಸಾಮಾನ್ಯವಾಗಿ ವಿದ್ವಾಂಸರು ಒಪ್ಪಿಕೊಂಡ ವಿದ್ಯಾರಣ್ಯರ ಕಾಲಘಟ್ಟವು (1290–1386) ಎಂದು ತಿಳಿದುಬಂದು ಇದು ಅನೇಕ ಗ್ರಂಥಗಳಲ್ಲಿ ತಿಳಿಸಲಾಗಿದೆ.

ಶ್ರೀ ಮಾಧವಾಚಾರ್ಯರ (ವಿದ್ಯಾರಣ್ಯರ ಪೂರ್ವಾಶ್ರಮದ ಹೆಸರು) ವಿದ್ಯಾಭ್ಯಾಸವು ಅವರ ತಂದೆ ಮಾಧವ ಭಟ್ಟರಲ್ಲಿ, ಪ್ರೌಢ ವ್ಯಾಖ್ಯಾನವು ಅವರ ಗುರುಗಳಲ್ಲಿ ದೊರೆಯಿತು. ಶ್ರೀ ವಿದ್ಯಾರಣ್ಯರು ತಮ್ಮ ಸೋದರ

ಸಾಯಣಾಚಾರ್ಯರೊಂದಿಗೆ ಶ್ರೀ ಶಂಕರಾನಂದರು, ಶ್ರೀ ವಿದ್ಯಾತೀರ್ಥರು, ಶ್ರೀ ಭಾರತೀಕೃಷ್ಣ ತೀರ್ಥರು, ಶ್ರೀ ಶ್ರೀಕಂಠನಾಥರು, ಗುರುಗಳಲ್ಲಿ ವಿದ್ಯೆ ಪಡೆದು ಮಹಾನ್ ವಿದ್ಯಾರಣ್ಯರಾದರು. ನಾಡಿನ ಪ್ರಭೆಗಳೂ ಆದರು, ವಿದ್ಯಾಸಾಗರರೂ ಆದರು.

ಸಾಧನೆಗಳು

1. ಮೇಲಣವೆಲ್ಲವೂ ಶ್ರೀ ವಿದ್ಯಾರಣ್ಯರು ಜ್ಞಾನಕ್ಕಾಗಿ ಸನ್ಯಾಸಪೂರ್ವದಲ್ಲಿ ಸಾಧಿಸಿದ ಪ್ರಕ್ರಿಯೆಗಳು. ಕರ್ನಾಟಕ ಸಿಂಹಾಸನ ಪ್ರತಿಷ್ಠಾಪನಾಚಾರ್ಯರಾಗಿಯೂ ಸಾಧನೆಗೈದರು. ಜ್ಞಾನಗಳಿಕೆ, ಸಾಧನಗಳನ್ನು ಸಾಧಿಸುವ ಮಹದ್ ಅಭಿಲಾಷೆ ಹೊತ್ತು 'ಹಕ್ಕ ಬುಕ್ಕ'ರೆಂಬ ಯುವ ಸಹೋದರರನ್ನು ಕಟ್ಟಿಕೊಂಡು ಹಂಪಿಯ ಕಲ್ಲುಬಂಡೆಗಳ ಬಯಲಲ್ಲಿ ತುಂಗ–ಭದ್ರೆಯ ದಡದಲ್ಲಿ, ವಿಜಯನಗರ ಸಾಮ್ರಾಜ್ಯವನ್ನು ಸಂಸ್ಥಾಪಿಸಿದರು. 'ಹಿಂದೂ ಸಾಮ್ರಾಜ್ಯ'ವೆಂದು ಗಟ್ಟಿಯಾಗಿ ಭಾರತದ ಇತಿಹಾಸದಲ್ಲಿಯೇ ಸಾರಿದ್ದು ಇದು ಪ್ರಥಮ ಸಿಂಹನಾದ.

2. ಹಿಂದೂ ರಾಜ್ಯ ಪ್ರತಿಷ್ಠಾಪನಾಚಾರ್ಯರಾದ ಶ್ರೀ ವಿದ್ಯಾರಣ್ಯರು ತಮ್ಮ ತಪಸಿನ ಫಲ, ಏಕನಿಷ್ಠೆ, ದೇಶಪ್ರೇಮ, ಪರಂಪರೆಯ ಪ್ರೀತಿಗಳನ್ನು ಈ ರಾಜ್ಯ ಕಟ್ಟುವಲ್ಲಿ ಧಾರೆಯೆರೆದರು. ರಾಜ್ಯವನ್ನು ಸಂರಕ್ಷಿಸುವ ವಿಶಿಷ್ಟ ಶಕ್ತಿ, ಜನಸಂಗ್ರಹ ಯೋಜನೆ, ಇತ್ಯಾದಿ ವ್ಯಾವಹಾರಿಕ ಆಕರಗಳನ್ನು ಸ್ವತಃ ತಾವು ಅಳವಡಿಸಿದರು. ವ್ಯಾವಹಾರಿಕವಾಗಿ ರಾಜ್ಯಸ್ಥಾಪನೆಯ ನಂತರ ಮಂತ್ರಿಗಳಾಗಿಯೂ ಕಾರ್ಯಕೈಕೊಂಡರು.

3. ಕ್ರಿ.ಶ. 1336ರಿಂದ ಸುಮಾರು ಐದು ಶತಕಗಳವರೆಗೆ ಅಂದರೆ, ಕ್ರಿ.ಶ. 1385ರವರೆಗೆ, ಈ ಸಾಮ್ರಾಜ್ಯದ ಏಳ್ಗೆಗಾಗಿ ದುಡಿದರು. ಆ ಗುರುಗಳ ಕಾಲಘಟ್ಟದಲ್ಲಿ, ಒಂದನೇ ಬುಕ್ಕರಾಯ, ಎರಡನೇ ಬುಕ್ಕರಾಯ, ಒಂದನೇ ಸಂಗಮ, ಎರಡನೇ ಸಂಗಮ, ಒಂದನೇ ವಿರೂಪಾಕ್ಷ, ಒಂದನೇ ಹರಿಹರ (1372–1404) – ಇವರೆಲ್ಲ ರಾಜರುಗಳು ಆಗಿ ಹೋಗಿದ್ದಾರೆ. ಇವರೆಲ್ಲರಿಗೂ ವಿದ್ಯಾರಣ್ಯರ ರಾಜಸ್ವಮಾರ್ಗದರ್ಶನ ದೊರೆಯಿತು. ಈ ಸಮಯದಲ್ಲಿ ರಾಜಕೀಯ ಮಾರ್ಗದರ್ಶಕರಾಗಿ ಸುತ್ತಲಿನ ನಾಯಕರುಗಳನ್ನೂ, ಗಾವುಂಡರನ್ನೂ, ಚಿಕ್ಕಪುಟ್ಟ ಆಡಳಿತಗಾರರನ್ನೂ, ಮಂಡಳಗಳ ಒಡೆಯರನ್ನೂ ಕೇಂದ್ರೀಕರಿಸಿ ಮುಖ್ಯ ಸಾಮ್ರಾಜ್ಯ ಕೇಂದ್ರವಾದ ವಿಜಯನಗರಕ್ಕೆ ಜೋಡಿಸಿದರು. ಅದು ಮುಂದೆ ಬಹು ದೊಡ್ಡ ಸಾಮ್ರಾಜ್ಯವಾಗಿ ಕೃಷ್ಣದೇವರಾಯನ ಕಾಲಕ್ಕೆ (1510–30) ದಕ್ಷಿಣಭಾರತವನ್ನೇ ಆಕ್ರಮಿಸಿದ ಮಹಾನ್ ಐತಿಹಾಸಿಕ ಸಾಮ್ರಾಜ್ಯವಾಗಿ ಪರಿಣಮಿಸಿತು. ಎಂದೂ ಕಾಣದ ದಕ್ಷಿಣ ಭಾರತದ ಬೃಹದ್ ಸಾಮ್ರಾಜ್ಯ ಇದಾಯಿತು. (ಚಿತ್ರ ನೋಡಿ)

4. ರಾಜ್ಯಭಾರದ ಒತ್ತಡ ಕಡಿಮೆಯಾದಂತೆ, ಕ್ರಿ.ಶ. 1380–86ರವರೆಗೆ ಸಮೃದ್ಧ ಸಾಹಿತ್ಯ ನಿರ್ಮಿಸಿದರು. ಅವರು ರಚಿಸಿದ ಗ್ರಂಥಗಳು, ಆಧ್ಯಾತ್ಮ ಹಾಗೂ ರಾಜಸ್ವದಲ್ಲಿ ಮೈಲುಗಲ್ಲಾಗಿವೆ:

1 ಪರಾಶರ ಮಾಧವೀಯ

2 ಜೈಮಿನಿಯ ನ್ಯಾಯಮಾಲ

3 ವೈಯಾಸಿಕ ನ್ಯಾಯಮಾಲ

4 ಕಾಲ ಮಾಧವೀಯ/ಕಾಲನಿರ್ಣಯ

5 ಪಂಚದಶೀ

6 ವಿವರಣ ಪ್ರಮೇಯ ಸಂಗ್ರಹ

7 ಬೃಹದಾರಣ್ಯಕ ವಾರ್ತಿಕ ಸಾರ

8 ಅನುಭೂತಿ ಪ್ರಕಾಶ

9 ಐತ್ತರೋಪನಿಷದ್ ದೀಪಿಕಾ

10 ನರಸಿಂಹ ತಾಪ ನಿಯೋಪ ನಿಷಿದ್ಧಿಕಾ

11 ದೃಗಸ್ಯವಿವೇಕ

12 ಜೀವನ್ಮುಕ್ತಿ ವಿವೇಕ

13 ಬ್ರಹ್ಮವಿದ್ಯಾಶೀರ್ವಾದ ಪದ್ಧತಿ

14 ಸಂಗೀತ ಸಾರ

15 ದೇವ್ಯ ಪದಾದಕ್ಷ ಮಾಪನ ಸ್ತೋತ್ರ

ಇವು ಮೂಲಗ್ರಂಥಗಳಾದರೆ, 'ಪಂಚದಶಿ'ಯು ಬಹಳ ಕೀರ್ತಿ ಹೊಂದಿದೆ. ಅದರ ಬಗ್ಗೆ ವಿವರಣೆ ಇಲ್ಲಿ ವಿಶೇಷ. ಪಂಚದಶೀ ಗ್ರಂಥದಲ್ಲಿ ಶ್ಲೋಕಗಳು 1570, ಹಾಗೂ ಪ್ರಕರಣಗಳು 15 ಇವೆ. ಅದಾಗಿ 10+5 ಪಂಚದಶಿ ಎಂದು ಹೆಸರು ಬಂದಿದೆ, ಉಕ್ತವಾಗಿದೆ.

ವಿವೇಕ ಪಂಚಕ

1. ತತ್ವ ವಿವೇಕ ಪ್ರಕರಣ, 2. ಪಂಚಭೂತವಿವೇಕ ಪ್ರಕರಣ, 3. ಪಂಚಕೋಶ ವಿವೇಕ ಪ್ರಕರಣ, 4. ದ್ವೈತ ವಿವೇಕ ಪ್ರಕರಣ, 5. ಮಹಾಕಾವ್ಯ ವಿವೇಕ ಪ್ರಕರಣ

ದೀಪ ಪಂಚಕ

6. ಚಿತ್ರದೀಪ ಪ್ರಕರಣ, 7. ತೃಪ್ತಿದೀಪ ಪ್ರಕರಣ, 8. ಕೂಟಸ್ಥ ದೀಪ ಪ್ರಕರಣ, 9. ಧ್ಯಾನದೀಪ ಪ್ರಕರಣ, 10. ನಾಟಕ ದೀಪ ಪ್ರಕರಣ

ಹಾಗೂ ಆನಂದ ಪಂಚಕ

11. ಯೋಗಾನಂದ ಪ್ರಕರಣ, 12. ಆತ್ಮಾನಂದ ಪ್ರಕರಣ, 13. ಅದ್ವೈತಾನಂದ ಪ್ರಕರಣ, 14. ವಿದ್ಯಾನಂದ ಪ್ರಕರಣ, 15. ವಿಜಯಾನಂದ ಪ್ರಕರಣ.

ಇಡಿಯಾಗಿ, ವಿಶ್ಲೇಷಣೆ ಮಾಡಿದರೆ, ಲೋಕದಲ್ಲಿ ಜೀವ+ಈಶ್ವರ ಎಂಬ ವಿಶೇಷ್ಯಗಳು ವ್ಯವಹಾರದಲ್ಲಿ ಎಲ್ಲರನ್ನೂ ಕಾಡಿಸಿವೆ. ಅವು ಕಲ್ಪಿತವೇ ಅಥವಾ ವಾಸ್ತವಗಳೇ ? ಎಂಬ ಚಿಂತನೆಗೆ ಎಡೆಮಾಡಿದೆ. ಇವುಗಳ ತುಡಿತವು ಬ್ರಹ್ಮಜ್ಞಾನದ ಕಡೆಗೆ ಒಯ್ಯುತ್ತಿದೆ.

ಅಂತಃ ಶ್ರೀ ವಿದ್ಯಾರಣ್ಯರು ಭಾರತದ ಆಧ್ಯಾತ್ಮಿಕ ಹಾಗೂ ರಾಷ್ಟ್ರೈಕ್ಯದ ಸಾಧನೆಗಳಲ್ಲಿಯ ಒಂದು ಮೈಲುಗಲ್ಲು. ಲೌಕಿಕ ವ್ಯವಹಾರ, ರಾಷ್ಟ್ರೀಯ ಭಾವೈಕ್ಯ, ಹಾಗೂ ದೈವಚೈತನ್ಯದ ಶಕ್ತಿಯನ್ನು ಒಂದುಗೂಡಿಸಿ ಕರ್ನಾಟಕ ಸಾಮ್ರಾಜ್ಯ, ವಿಜಯನಗರವನ್ನು, ಸಂಸ್ಥಾಪಿಸಿದ ಹೆಗ್ಗಳಿಕೆ ಇವರದು.


ಸ್ವಾಭಿಮಾನ, ಘನತೆ, ಗೌರವ, ಸನಾತನ ಧರ್ಮ, ರಾಜಧರ್ಮ ತೋರಿದ ಮಹಾಪುರುಷರು ಇವರ ಕೌಟಿಲ್ಯನ ರಾಜನೀತಿ, ಆದಿಶಂಕರರ ಏಕೋಭಾವದ ರಾಷ್ಟ್ರಮಟ್ಟದ ಕಲೆ, ಶ್ರೀ ರಾಮದಾಸಸ್ವಾಮಿಗಳ ಹಿಂದೂ ರಾಷ್ಟ್ರ ಕಟ್ಟುವ ಸಂಕಲ್ಪ ಇವರಲ್ಲಿ ಒಗ್ಗೂಡಿ, ಹುಕ್ಕ, ಬುಕ್ಕರ ಧೀರತೆಯಲ್ಲಿ ಮಹಾನ್ ಕರ್ನಾಟಕ ಸಾಮ್ರಾಜ್ಯ ಕಟ್ಟುವ ಕೆಲಸದಲ್ಲಿ ಅಡಿಗಲ್ಲನ್ನು ಹಾಕಿದ ಮಹಾಮಹಿಮರು ವಿದ್ಯಾರಣ್ಯರು. ಎಂದೂ ಮರೆಯಲಾಗದ ಇತಿಹಾಸ ಪುರುಷರು.

ಆಧಾರ ಗ್ರಂಥಗಳು

1. ವಿದ್ವಾನ್ ಕೃಷ್ಣಶರ್ಮ ಜೋಶಿ, ವಿದ್ಯಾರಣ್ಯ ಯಶೋವೈಭವ, ಧಾರವಾಡ, 2007.
2. ಶ್ರೀ ಜಿ.ಆರ್. ಪಾಟೀಲ, ಪಂಚದಶಿಯ ವಿವೇಚನೆ.
3. ಪಂ. ವೇಣುಮಾಧವಶಾಸ್ತ್ರಿ ಜೋಶಿ, ವಿದ್ಯಾರಣ್ಯರು ಮತ್ತು ಅವರ ಕೃತಿಗಳು.
4. ಡಾ॥ ಮಹೇಶ ಹಂಪಿಹೋಳಿ, ಶ್ರೀಮದ್ ವಿದ್ಯಾರಣ್ಯ ಮುನಿವಿರಚಿತ ಜೀವನ್ಮುಕ್ತಿ ವಿವೇಕ.
5. ವಿದ್ಯಾ ಪಂಡಿತ ಕೃಷ್ಣಶರ್ಮ ಜೋಶಿ, ದೃಗ್‌ದೃಶ್ಯವಿವೇಕ – ಒಂದು ಚಿಂತನೆ.
6. ಶ್ರೀಮತಿ ಸುಜಾತಾ ಎಂ.ಎನ್., ಶ್ರೀ ವಿದ್ಯಾರಣ್ಯ ವಿರಚಿತ ವೇದಾಂತ ಪಂಚದಶಿ – ಒಂದು ಸಮೀಕ್ಷೆ.
7. ವಿದ್ವಾನ್ ಕೃಷ್ಣಶರ್ಮ ಜೋಶಿ, ಯೋಗ ಶಾಸ್ತ್ರಕ್ಕೆ ಶ್ರೀ ವಿದ್ಯಾರಣ್ಯರ ಕೊಡುಗೆ.
8. ಪ್ರೊ. ನಂಜನಗೂಡು ಬಾಲಸುಬ್ರಹ್ಮಣ್ಯ, ಲೋಕ ಹಿತೈಷಿ ಶ್ರೀ ಶಂಕರರು, ಮೈಸೂರು, ಮೈಸೂರು ಜಿಲ್ಲೆ.
9. ವಿದ್ವಾನ್ ಬ್ರಹ್ಮಶ್ರೀ ರಾಮಚಂದ್ರ ಶಾಸ್ತ್ರಿ, ಅದ್ವೈತ ತತ್ವ ಪ್ರಕಾಶಿಕಾ, ಅದ್ವೈತ ಪ್ರಬೋಧಕ ಸಂಘ, ಧಾರವಾಡ.

ಕರ್ನಾಟಕ ಸಾಮ್ರಾಜ್ಯ ಸಿಂಹಾಸನ ಪ್ರತಿಷ್ಠಾಪನಾಚಾರ್ಯ ಶ್ರೀಮದ್ ವಿದ್ಯಾರಣ್ಯರು
(ಕ್ರಿ.ಶ. 1295–1390)





6. ಮಹಾನವಮಿ ದಿಬ್ಬದಿಂದ ಬನ್ನಿಮಂಟಪಕ್ಕೆ ಸಾಗಿಬಂದ ದಸರಾ

ಡಾ॥ ಲ.ನ. ಸ್ವಾಮಿ

ಹಜಾರರಾಮಮಂದಿರದ ಗೋಡೆಯ ಮೇಲಿರುವ ಮತ್ತು ಮಹಾನವಮಿ ದಿಬ್ಬದ ಗೋಡೆಯ ಮೇಲಿರುವ ಉಬ್ಬುಶಿಲ್ಪಗಳು ಅತ್ಯಂತ ಸುಂದರವಾದ ದಸರಾ ವೈಭವದ ಮೆರವಣಿಗೆಯನ್ನು ನಮ್ಮ ಮುಂದೆ ತಂದು ನಿಲ್ಲಿಸುತ್ತವೆ. ವಿಜಯನಗರದಲ್ಲಿ ದೇವಿಯ ಆರಾಧನೆಯಾಗಿ ಪ್ರಾರಂಭವಾದ ದಸರಾ, ಆನಂತರದ ದಿನಗಳಲ್ಲಿ ಚಕ್ರವರ್ತಿಯು ತನ್ನ ವೈಭವ, ಸಂಪತ್ತು, ಶೌರ್ಯ, ಶಕ್ತಿಗಳನ್ನು ಪ್ರದರ್ಶಿಸುವ, ಆಪ್ತರನ್ನು, ಅಧಿಕಾರಿಗಳನ್ನು, ಸಾಮಂತರನ್ನು ಸೈನಿಕ ಅಧಿಕಾರಿಗಳನ್ನು ಗೌರವಿಸುವ ಮತ್ತು ತನ್ನ ಆಶ್ರಿತರಿಂದ ಸಾಮ್ರಾಜ್ಯಕ್ಕೆ ಸಂದಾಯವಾಗಬೇಕಾದ ತೆರಿಗೆಯನ್ನು ಸಂಗ್ರಹಿಸುವ ಪರ್ವವಾಗಿ ಹಾಗೂ ಅದರೊಂದಿಗೆ ದೇವಿಯನ್ನು ಆರಾಧಿಸುವ ಸಂಭ್ರಮಾಚರಣೆಯಾಗಿ ಪರಿವರ್ತಿಸಿದರು. ಈ ಎಲ್ಲಾ ಆಚರಣೆಗಳನ್ನು ಮಹಾನವಮಿ ದಿಬ್ಬದ ಹಾಗೂ ಹಜಾರರಾಮಸ್ವಾಮಿ ದೇವಾಲಯದ ಹೊರಗೋಡೆಯ ಮೇಲಿರುವ ಉಬ್ಬುಶಿಲ್ಪಗಳು ಪ್ರತಿನಿಧಿಸುತ್ತವೆ. ವೈಭವದ ದಿನಗಳನ್ನು ಪುನಃ ನೆನಪಿಗೆ ತರುವಲ್ಲಿ ಈ ಶಿಲ್ಪಗಳು ಮಹತ್ತರ ಪಾತ್ರ ವಹಿಸುತ್ತವೆ.

ವಿದ್ಯಾನಗರ ಮುಸಲ್ಮಾನರ ಧಾಳಿಗೆ ಈಡಾದ ತರುವಾಯ, ಇಲ್ಲಿನ ರಾಜಧಾನಿ ಪೆನುಗೊಂಡೆಗೆ ವರ್ಗವಾಯಿತು. ದಸರೆಯನ್ನು ವಿಜಯನಗರದ ಪ್ರಾಂತ್ಯಾಧಿಕಾರಿಗಳು ಪ್ರಾರಂಭಿಸಿದರು. ಅಂದಿನ ವಿಜಯನಗರ ಸಾಮ್ರಾಜ್ಯದ ಪ್ರಾಂತ್ಯವೊಂದರ ಕೇಂದ್ರವಾದ ಶ್ರೀರಂಗಪಟ್ಟಣ ಸಹ ಇದಕ್ಕೆ ಹೊರತಾಗಿರಲಿಲ್ಲ. ಅಲ್ಲಿ ಸಹ ದಸರಾ ಹಬ್ಬವನ್ನು ವೈಭವವಾಗಿ ನೆರವೇರಲಾರಂಭಿಸಿದರು.

ವಿಜಯನಗರದ ಸಾಮ್ರಾಜ್ಯದ ಬೆಳವಣಿಗೆಯೊಂದಿಗೆ ತನ್ನ ಬೆಳವಣಿಗೆಯನ್ನು ಕಂಡುಕೊಂಡ ಬೃಹತ್ ಸ್ಮಾರಕ ಮಹಾನವಮಿ ದಿಬ್ಬ. ಇದು ಪ್ರಾರಂಭದ ಹಂತದಲ್ಲಿ ವಿವಿಧ ಅಳತೆಯ ಬಾಹುಗಳನ್ನು ಹೊಂದಿದ ಚೌಕಾಕಾರದಲ್ಲಿ ನಿರ್ಮಿತವಾಗಿದೆ. ಈ ಸ್ಮಾರಕದ ಕೆಳಹಂತದ ಅಳತೆ ಹೀಗಿದೆ. ಪೂರ್ವದಲ್ಲಿ ದಕ್ಷಿಣೋತ್ತರವಾಗಿ 29 ಮೀಟರ್, ಉತ್ತರದಲ್ಲಿ ಪೂರ್ವ, ಪಶ್ಚಿಮವಾಗಿ 33.2 ಮೀಟರ್, ಪಶ್ಚಿಮ ಭಾಗದಲ್ಲಿ ಉತ್ತರ–ದಕ್ಷಿಣವಾಗಿ 38.5 ಮೀಟರ್ ಹಾಗೂ ದಕ್ಷಿಣದಲ್ಲಿ ಪೂರ್ವ–ಪಶ್ಚಿಮವಾಗಿ 35 ಮೀಟರ್ ಉದ್ದವಾಗಿವೆ.[1] ಈ ಮೇಲಿನ ಅಳತೆಯನ್ನು ಗಮನಿಸಿದರೆ ಸ್ವಾಭಾವಿಕ ಬಂಡೆಯನ್ನು ಬಳಸಿಕೊಂಡು ಅದರ ರಚನೆಗೆ ತಕ್ಕಂತೆ ಅಥವಾ ಅದಕ್ಕಿಂತ ಪೂರ್ವದ ಕಟ್ಟಡವನ್ನು ಆಧರಿಸಿ ಅಥವಾ ಅದನ್ನು ಸ್ಮಾರಕದ ಒಳಗೆ ಸೇರಿಸಿಕೊಂಡು ರಚಿಸಿರುವುದರಿಂದ ಈ ಬಗೆಯ ಅನಿರ್ದಿಷ್ಟ ಆಕಾರಕ್ಕೆ ಕಾರಣವಾಗಿರಬಹುದು.

ಮೇಲಿನ ಸ್ತರದಲ್ಲಿ ಅಂದರೆ ಪೂರ್ಣ ತುತ್ತ–ತುದಿಯಲ್ಲಿ ಮಹಾನವಮಿ ಮಂಟಪವು ಉತ್ತರ–ದಕ್ಷಿಣವಾಗಿ 22 ಮೀಟರ್ ಮತ್ತು ಪೂರ್ವ–ಪಶ್ಚಿಮವಾಗಿ 22.8 ಮೀಟರ್ ಅಳತೆಯನ್ನು ಹೊಂದಿದೆ. ನೆಲಮಟ್ಟದಿಂದ ಮೇಲಿನವರೆಗೆ ಸುಮಾರು ಹತ್ತು ಮೀಟರ್‌ಗಳಷ್ಟು ಎತ್ತರವಾಗಿದೆ. ಮೊದಲ ಹಂತದ ಸ್ಮಾರಕವು 3.5 ಮೀಟರ್ ಎತ್ತರವಾಗಿದ್ದರೆ ಎರಡನೇ ಹಂತದಲ್ಲಿ 1.5 ಮೀಟರ್ ಮತ್ತು ಮೂರನೇ ಹಂತದಲ್ಲಿ ಎರಡು ಸ್ತರಗಳಿವೆ. ಮೂರನೇ ಹಂತದ ಮೊದಲಸ್ತರ 2.9 ಮೀಟರ್ ಮತ್ತು ಎರಡನೇ ಸ್ತರ 1.7 ಮೀಟರ್ ಎತ್ತರವಾಗಿದೆ. ಒಟ್ಟಾರೆಯಾಗಿ ಭೂಮಟ್ಟದಿಂದ 9.6 ಮೀಟರ್ ಎತ್ತರವಾಗಿದೆ.

ಮೊದಲ ಹಂತದಲ್ಲಿ ಸ್ಮಾರಕದ ಮೇಲಕ್ಕೇರಲು ಅನುಕೂಲವಾಗುವಂತೆ ಸ್ಮಾರಕದ ದಕ್ಷಿಣದಲ್ಲಿ ಪಶ್ಚಿಮಕ್ಕೆ ಮುಖಮಾಡಿದ ಪಾವಟಿಗೆಗಳಿವೆ. ಇವು ಮೊದಲಹಂತದಿಂದ ಎರಡನೇ ಹಂತಕ್ಕೆ ತಲುಪಿಸುತ್ತವೆ. ಎರಡನೇ ಹಂತವನ್ನು ಸೀಳಿ ಪೂರ್ವದಲ್ಲಿ ಮೂರನೇ ಹಂತದ ಮಾಳಿಗೆಗೆ ಸಾಗಲು ಮೆಟ್ಟಿಲುಗಳಿದ್ದು ಅವು ಕಟ್ಟಡ ಒಳಭಾಗದ ಪಾವಟಿಗೆಗಳಾಗಿದ್ದು ಕೇವಲ

ಒಂದು ಪ್ರವೇಶ ದ್ವಾರದ ರೀತಿ ಕಂಡುಬರುತ್ತದೆ. ಅಲ್ಲಿ ಉತ್ತರದಲ್ಲಿ ಮತ್ತು ದಕ್ಷಿಣದಲ್ಲಿ ಪಾವಟಿಗೆಗಳಿದ್ದು ಅವು ಮೂರನೇ ಹಂತದ ಮೇಲಕ್ಕೆ ಕೊಂಡೊಯ್ಯುತ್ತವೆ.

ಮಹಾನವಮಿ ದಿಬ್ಬದ ಮೇಲಿನ ಸ್ತರದ ಕೇಂದ್ರದಲ್ಲಿ ಪೂರ್ವ ಮತ್ತು ಪಶ್ಚಿಮದ ಪಾವಟಿಗೆಗಳನ್ನು ಸಂಧಿಸುವ ಸ್ಥಳದಲ್ಲಿ 4 ಮೀಟರ್ ಅಂತರದ ಪಥವಿದೆ. ಈ ಮೇಲೆ ಹೇಳಿದ ಪಥವನ್ನು ಕೇಂದ್ರದಲ್ಲಿ ದಕ್ಷಿಣೋತ್ತರವಾಗಿ ಸಂಧಿಸುವ, ಮೂರು ಮೀಟರ್ ಅಳತೆಯ ಪಥವಿದೆ. ದಕ್ಷಿಣೋತ್ತರ ಪಥದ ಪೂರ್ವಕ್ಕೆ ಆರುಸಾಲು ಕಂಬಗಳನ್ನು ಇರಿಸುವಂತೆ ಕಂಬಗಳ ಪಾದಗಳಿವೆ. ಈ ಕಂಬಗಳ ಪಾದಗಳ ನಡುವಿನ ಅಂತರ ಒಂದು ಮೀಟರ್‌ನಿಂದ ಒಂದೂವರೆ ಮೀಟರ್‌ಗಳಿಷ್ಟಿದೆ. ಮಧ್ಯ ಪಥದ ಅಂದರೆ ದಕ್ಷಿಣೋತ್ತರ ಪಥದ ಪಶ್ಚಿಮಕ್ಕೆ ಆರು ಸಾಲು ಕಂಬಗಳ ಪಾದಗಳಿದ್ದು ಅವುಗಳ ನಡುವಿನ ಅಂತರಗಳ ಒಂದು ಮೀಟರ್‌ನಿಂದ ಒಂದೂವರೆ ಮೀಟರ್‌ಗಳಿಷ್ಟಿದೆ. ಒಟ್ಟಾರೆಯಾಗಿ ಪೂರ್ವ ಪಶ್ಚಿಮವಾಗಿ ಕೆಲವೆಡೆ 12 ಸಾಲು ಕೆಲವೆಡೆ 13 ಸಾಲು ಕಂಬಗಳ ಪಾದಗಳು ಕಂಡುಬರುತ್ತದೆ. ದಕ್ಷಿಣೋತ್ತರವಾಗಿ 12 ಸಾಲು, ಕಂಬಗಳ ಪಾದಗಳಿವೆ. ಅವುಗಳ ನಡುವಿನ ಅಂತರವೂ 0.8 ಮೀಟರ್‌ನಿಂದ 1.5 ಮೀಟರ್‌ವರೆಗಿದೆ. ಮೇಲಿನ ಚೌಕವನ್ನು ನಾಲ್ಕು ಭಾಗವಾಗಿ ವಿಭಾಗಿಸಿದರೆ, ಪ್ರತಿಯೊಂದು ಭಾಗದಲ್ಲಿ 36 ಕಂಬಗಳ ಪಾದಗಳಿವೆ. ಒಟ್ಟಾರೆ 144 ಕಂಬಗಳಿವೆ.

ಪ್ರಾಚೀನತೆ

ಮಹಾನವಮಿ ದಿಬ್ಬ ಪ್ರದೇಶದಲ್ಲಿ ಎರಡು ಶಾಸನಗಳು ದೊರಕಿವೆ. ಒಂದು ಶಾಸನ ಬಹಳ ಹಿಂದೆಯೇ ಎ.ಆರ್.ಎಸ್.ಐ.ಇ. ವರದಿಯಲ್ಲಿ ಮತ್ತು ಎಸ್.ಐ.ಐ. ಶಾಸನ ಸಂಪುಟದಲ್ಲಿ ಪ್ರಕಟವಾಗಿದ್ದು ಶಾಸನದ ಕಾಲವು ಕ್ರಿ.ಶ. 1008ಕ್ಕೆ ಸರಿಹೊಂದುತ್ತದೆ.[2] ಶಾಸನದ ಪಾಠವು ಶ್ರೀಮಳಧಾರಿ ಮುನಿಯು ಸ್ವರ್ಗಸ್ಥರಾದ ವಿವರವನ್ನು ಒಳಗೊಂಡಿದೆ. ಮಹಾನವಮಿ ದಿಬ್ಬದ ಮುಂದಿರುವ ಮತ್ತೊಂದು ಕಲ್ಲಿನ ಮೇಲಿರುವ ಶಾಸನವು ಕ್ರಿ.ಶ. 1076ಕ್ಕೆ ಸೇರಿದ್ದು, ಮಹಾಪ್ರಧಾನ ದಂಡನಾಯಕ ಸೋಮೇಶ್ವರ ಭಟ್ಟೋಪಾಧ್ಯಾಯರು ಚಾಳುಕ್ಯ ವಿಕ್ರಮಾದಿತ್ಯ ಶಕೆಯ ಪ್ರಥಮ ವರ್ಷದ ಭಾದ್ರಪದ ಮಾಸದ ಬಹುಳ ಭಾನುವಾರ, ಪುರಾಣ ವ್ಯಾಖ್ಯಾನ ಮಾಡುವ ಉಪಾಧ್ಯಾಯನಿಗೆ ಎಂಬತ್ತು ಲೊಕ್ಕಿಗದ್ಯಾಣವನ್ನು ದಾನ ನೀಡಿದ್ದನ್ನು ದಾಖಲಿಸುತ್ತದೆ.[3] ಈ ಎರಡು ಶಾಸನಗಳು, ಮಹಾನವಮಿ ದಿಬ್ಬದ ಪ್ರದೇಶ ಕ್ರಿ.ಶ. ಹನ್ನೊಂದನೆ ಶತಮಾನದಿಂದಲೇ ಧಾರ್ಮಿಕ ಕೇಂದ್ರವಾಗಿದ್ದಂತೆ ತಿಳಿಸುತ್ತವೆ.

ಹಂಪಿಯ ಮಹಾನವಮಿ ದಿಬ್ಬದಲ್ಲಿ ಧಾರ್ಮಿಕ ಕಾರ್ಯಗಳು ಬಹಳ ಹಿಂದಿನಿಂದಲೇ ನೆರವೇರುತ್ತಿದ್ದಿತಾದರೂ ಕರ್ನಾಟಕ ಸಾಮ್ರಾಜ್ಯದ ಸ್ಥಾಪನೆಯ ನಂತರ ವಿಜಯನಗರದ ದಸರಾ ಮಹೋತ್ಸವದ ಉತ್ಸವಗಳು ಇಲ್ಲಿ ಪ್ರಾರಂಭವಾಯಿತೆಂದು ಖಚಿತವಾಗಿ ತಿಳಿದುಬರುತ್ತದೆ. ಪ್ರಪ್ರಥಮ ಭಾರಿಗೆ ಈ ಸ್ಮಾರಕವನ್ನು ಲಾಂಗ್‌ಹರ್ಸ್ಟ್ ಮಹಾನವಮಿ ದಿಬ್ಬವೆಂದು ಕರೆದಿದ್ದಾರೆ. ಅದಕ್ಕೆ ಅವರು ವಿಜಯನಗರವನ್ನು ಸಂದರ್ಶಿಸಿದ ವಿದೇಶೀಯರ ಬರವಣಿಗೆಯನ್ನು ಮತ್ತು ಮಹಾನವಮಿ ದಿಬ್ಬದ ಮೇಲಿರುವ ಉಬ್ಬುಶಿಲ್ಪಗಳನ್ನು ಆಧರಿಸಿ ನಿರ್ಧರಿಸಿದ್ದಾರೆಂದು ಜಾರ್ಜ್ ಮಿಷಲ್ ಅಭಿಪ್ರಾಯ ಪಡುತ್ತಾರೆ. ಹಂಪೆಯ ಮಹಾನವಮಿ ದಿಬ್ಬವು ಮೂರು ಅಥವಾ ನಾಲ್ಕು ಕಾಲಘಟ್ಟಗಳಲ್ಲಿ ನಿರ್ಮಾಣಗೊಂಡಿದೆ ಎಂದು ಇತ್ತೀಚಿನ ಸಂಶೋಧನೆಗಳು ಖಚಿತಪಡಿಸುತ್ತವೆ.

ನಿರ್ಮಾಣದ ಹಂತಗಳು

1984ರಲ್ಲಿ ಪ್ರಕಟವಾದ ಜಾರ್ಜ್ ಮಿಷಲ್, ಜಾನ್ ಫ್ರಿಡ್ಜ್ ಮತ್ತು ಎಂ.ಎಸ್. ನಾಗರಾಜ ರಾವ್‌ರವರು ಬರೆದಿರುವ *ದಿ ರಾಯಲ್ ಸೆಂಟರ್ ಆಫ್ ವಿಜಯನಗರ* ಗ್ರಂಥದಲ್ಲಿ ಮಹಾನವಮಿ ದಿಬ್ಬವು ಮೂರು ಹಂತಗಳಲ್ಲಿ ರಚನೆಗೊಂಡಿದೆ ಎಂದು ಬರೆಯುತ್ತಾರೆ.[4] 2010ರಲ್ಲಿ ಪ್ರಕಟವಾದ *ದಿ ಗ್ರೇಟ್ ಪ್ಲಾಟ್‌ಫಾರಂ ಆಫ್ ವಿಜಯನಗರ* ಕೃತಿಯಲ್ಲಿ ಈ ಮಹಾನವಮಿ ದಿಬ್ಬ ನಾಲ್ಕು ಹಂತಗಳಲ್ಲಿ ರಚನೆಗೊಂಡಿದೆ ಎಂದು ದಾಖಲಿಸುತ್ತಾರೆ.[5]

ಈ ನಾಲ್ಕು ಹಂತಗಳನ್ನು ಯಾವ ಯಾವ ಕಾಲದಲ್ಲಿ ನಿರ್ಮಿಸಲಾಯಿತೆಂದು ನಿಖರವಾದ ಯಾವುದೇ ಕಾಲ ನಿರ್ದೇಶನಮಾಡಬಲ್ಲ ದಾಖಲೆಗಳು ಇದುವರೆವಿಗೆ ದೊರೆಯದ ಕಾರಣ ಈ ಮಹಾನವಮಿ ದಿಬ್ಬದ ಹಂತಗಳು ಯಾವ ಯಾವ ಕಾಲದಲ್ಲಿ ನಿರ್ಮಾಣಗೊಂಡಿವೆಯೆಂದು ಕೇವಲ ಆನುಷಂಗಿಕ ಆಕರಗಳ ಹಿನ್ನೆಲೆಯಲ್ಲಿ ಅಂದರೆ ನಿರ್ಮಾಣದ ಶೈಲಿಯನ್ನು ಆಧರಿಸಿ ಕಾಲವನ್ನು ನಿರ್ಧರಿಸಬೇಕಾಗಿದೆ.

ಮಹಾನವಮಿ ದಿಬ್ಬದ ಮೊದಲ ಹಂತದ ನಿರ್ಮಾಣದಲ್ಲಿ ಕೆತ್ತಿರುವ ಶಿಲ್ಪಗಳು ಈ ಸ್ಮಾರಕಗಳಲ್ಲಿ ನೆರವೇರುತ್ತಿದ್ದ ಮಹಾನವಮಿ ಆಚರಣೆಗಳನ್ನು ಪ್ರತಿನಿಧಿಸುತ್ತವೆ. ಗ್ರಾನೈಟ್ ಶಿಲೆಯಲ್ಲಿ ನಿರ್ಮಾಣವಾಗಿರುವ ಈ ದಿಬ್ಬದ ಪಶ್ಚಿಮದಲ್ಲಿ ನಾಲ್ಕನೇ ಹಂತದ ಪುನರ್‌ನಿರ್ಮಾಣ ಹಂತದಲ್ಲಿ ಇಟ್ಟಿಗೆ ಗಾರೆಯನ್ನು ಬಳಸಿ, ಗ್ರಾನೈಟ್ ಶಿಲೆಯಲ್ಲಿ ನಿರ್ಮಿಸಲಾದ ಮೊದಲ ಮೂರು ಹಂತಗಳಿಗೆ ಜೋಡಿಸಲಾಗಿದೆ. ಈ ಅಲಂಕರಣಕ್ಕೆ ವಿಜಯನಗರ ವಾಸ್ತುಶೈಲಿಗೆ ಒಗ್ಗದ ಬಳಪದ ಕಲ್ಲನ್ನು ಬಳಸಲಾಗಿದೆ.

ಮೊದಲ ಹಂತದ ನಿರ್ಮಾಣವು ವಿಜಯನಗರ ಸಾಮ್ರಾಜ್ಯದ ಪ್ರಾರಂಭದ ಹಂತದಲ್ಲಿಯೇ ನಿರ್ಮಾಣವಾಗಿದೆಯೆಂದು ನಿರ್ಧರಿಸಲಾಗಿದೆ. ಎರಡನೆಯ ಹಂತವು ಮೊದಲ ಹಂತದ ನಿರ್ಮಾಣದ ನಂತರದ ತುಸು ದಿನಗಳ ನಂತರದಲ್ಲಿ ನಿರ್ಮಾಣಗೊಂಡಿದೆ. ಅಂದರೆ ಹದಿನಾಲ್ಕನೆಯ ಶತಮಾನದ ಎರಡನೇ ಪಾದದಿಂದ ನಾಲ್ಕನೇ ಪಾದದ ನಡುವೆ ನಿರ್ಮಾಣಗೊಂಡಿದೆ. ಮೂರನೆಯ ಹಂತವು ಹದಿನೈದನೆಯ ಶತಮಾನದಲ್ಲಿ ನಿರ್ಮಾಣಗೊಂಡಿದೆ.

ನಾಲ್ಕನೇ ಹಂತವು ನಿರ್ಮಾಣವು ಕೃಷ್ಣರಾಯನ ಒರಿಸ್ಸಾ ಧಾಳಿಯ ನಂತರ ನೇರವೇರಿರಬೇಕೆಂದು ಅಭಿಪ್ರಾಯಪಡಲಾಗಿದೆ. ಈ ನಿರ್ಮಾಣವು ವಿಠಲ ದೇವಾಲಯದ ಮುಖಮಂಟಪದ ಅಧಿಷ್ಠಾನವನ್ನು ಹೋಲುತ್ತದೆ. ಹಾಗಾಗಿ ವಿಠಲ ದೇವಾಲಯದ ಮುಖ ಮಂಟಪದ ನಿರ್ಮಾಣಕಾಲ ಮತ್ತು ನಾಲ್ಕನೇ ಹಂತದ ನಿರ್ಮಾಣ ಕಾರ್ಯವನ್ನು ಹದಿನಾರನೇ ಶತಮಾನದ ಪ್ರಾರಂಭದ ದಿನಗಳಲ್ಲಿ ಅಂದರೆ 1514ರಲ್ಲಿ ಕೃಷ್ಣರಾಯನಿಂದ ನಿರ್ಮಾಣಗೊಂಡಿದೆಂದು ಹೇಳಬಹುದು.

ಮಹಾನವಮಿ ದಿಬ್ಬದ ಮೊದಲ ಹಂತದ ನಿರ್ಮಾಣ ಕಟ್ಟಡಗಳ ಅಥವಾ ಕೋಟೆ ಗೋಡೆಯ ಮಾದರಿಯ ನಿರ್ಮಾಣವಾಗಿದ್ದು, ಅಲ್ಲಿಂದ ನೈಸರ್ಗಿಕ ಬಂಡೆಯನ್ನು ಆಧರಿಸಿಕೊಂಡು ನಿರ್ಮಿಸಲಾಗಿದೆ. ಹಾಗಾಗಿ ಕಟ್ಟಡ ನಿರ್ಮಾಣದಲ್ಲಿ ದೇವಾಲಯದಲ್ಲಿ ಕಂಡುಬರುವ ಅಧಿಷ್ಠಾನದ ಅಲಂಕರಣ ಅಥವಾ ಅಂಗಗಳು ಕಂಡುಬರುವುದಿಲ್ಲ. ಎರಡನೇ ಹಂತದ ಮಹಾನವಮಿ ದಿಬ್ಬವನ್ನು ಮೊದಲ ಹಂತದ ಅಂತಿಮ ಸ್ತರದಲ್ಲಿ ಮೊದಲ ಹಂತದ ಅಂಚಿನಿಂದ ಒಳಭಾಗಕ್ಕೆ ಸುಮಾರು 1.5 ಮೀಟರ್‌ನಷ್ಟು ತಳ್ಳಿ ಅಗಲವಾದ ಪ್ರದಕ್ಷಿಣಾ ಪಥವನ್ನು ಒದಗಿಸುವಂತೆ ನಿರ್ಮಿಸಲಾಗಿದೆ. ಹಾಗಾಗಿ ಈ ಹಂತದಲ್ಲಿ ಮಹಾನವಮಿ ದಿಬ್ಬವು ಸುಮಾರು 29 ಮೀಟರ್ ಚೌಕಾಕಾರದ ಕಟ್ಟಡವಾಗಿ ಪರಿವರ್ತಿತವಾಗುತ್ತದೆ.

ಮೂರನೆಯ ಹಂತವನ್ನು ಎರಡು ಶೈಲಿಯ ಅಧಿಷ್ಠಾನಗಳನ್ನು ಒಂದರ ಮೇಲೆ ಒಂದರಂತೆ ರಚಿಸಿ ನಿರ್ಮಿಸಲಾಗಿದೆ. ಈ ರಚನೆಯನ್ನು ಗಮನಿಸಿದರೆ ಪ್ರಾಯಶಃ ಈ ಹಂತದ ಎರಡು ಬಗೆಯ ಅಧಿಷ್ಠಾನಗಳು ಒಂದಾದರ ಮೇಲೆ ಒಂದರಂತೆ ನಿರ್ಮಾಣ ಹೊಂದಿರುವ ಬಗ್ಗೆ ಅನುಮಾನ ಉಂಟಾಗುತ್ತದೆ. ಅಂದರೆ ಇವು ಬೇರೆ ಬೇರೆ ಕಾಲಘಟ್ಟಗಳಲ್ಲಿ ರಚನೆಯಾಗಿರುವ ಬಗ್ಗೆ ಯಾವುದೇ ಶಾಸನಾಧಾರಗಳಾಗಲೀ ಅಥವಾ ಸಾಹಿತ್ಯಕ ಆಧಾರಗಳಾಗಲೀ ಲಭ್ಯವಿಲ್ಲದ ಕಾರಣ ಸದ್ಯದ ಸಂಶೋಧನೆಯ ಹಿನ್ನೆಲೆಯಲ್ಲಿ ಅವು ಒಂದೇ ಕಾಲಘಟ್ಟದಲ್ಲಿ ನಿರ್ಮಾಣವಾಗಿರುವ ಅಭಿಪ್ರಾಯವನ್ನು ಒಪ್ಪಿಕೊಂಡು ಮುಂದುವರೆಯುವುದು ಸೂಕ್ತ.

ಮೂರನೇ ಹಂತದ ಪ್ರಾರಂಭದ ಅಂದರೆ ಕೆಳಗಿನ ಅಧಿಷ್ಠಾನವು ಕೆಳಗಿನ ಉಪಾನ, ಮೇಲಿನ ಉಪಾನ, ಪದ್ಮ, ಪಟ್ಟಿಗ ಮತ್ತು ಗಳವನ್ನು ಹೊಂದಿದೆ. ಮೂರನೇ ಹಂತದ ಮೇಲಿನ ಅಧಿಷ್ಠಾನವು ಕೆಳಗಿನ ಉಪಾನ, ಮೇಲಿನ ಉಪಾನ,

ಪದ್ಮ ತ್ರಿಪಟ್ಟ ಕುಮುದ, ಹೊರ ಭಾಗಕ್ಕೆ ಉಬ್ಬಿದ ಕೆಳಗಿನ ಕಂಠ ಮತ್ತು ಕಪೋತ ಹೊರಭಾಗಕ್ಕೆ ಉಬ್ಬಿದ ಮೇಲಿನ ಕಂಠವನ್ನು ಹೊಂದಿದೆ.

ಪಶ್ಚಿಮ ಪಾರ್ಶ್ವದಲ್ಲಿ ನಿರ್ಮಿಸಲಾಗಿರುವ ನಾಲ್ಕನೇ ಹಂತದ ಅಲಂಕರಣಕ್ಕೆ ಹಸಿರು ಬಣ್ಣದ ಬಳಪದ ಕಲ್ಲನ್ನು ಬಳಸಲಾಗಿದೆ. ಈ ಕಲ್ಲುಗಳು ಪ್ರಾಚೀನ ದೇವಾಲಯವೊಂದರ ಭಾಗಗಳಾಗಿದ್ದು, ಅವುಗಳನ್ನು ಪುನರ್ ಬಳಕೆಮಾಡಿಕೊಂಡು ಈ ಹಂತವನ್ನು ನಿರ್ಮಿಸಲಾಗಿದೆ. ಮೊದಲ ಹಂತದಿಂದ ಮೂರನೇ ಹಂತದ ಮೇಲಿನ ಸ್ತರದವರೆಗೆ ಪಶ್ಚಿಮ ಭಾಗವನ್ನು ಅಲಂಕರಿಸಲು ಈ ಹಂತದ ನಿರ್ಮಾಣವಾಗಿದ್ದು, ಇದಕ್ಕೆ ಇಟ್ಟಿಗೆ, ಸುಣ್ಣದ ಗಾರೆ ಹಾಗೂ ಕಲ್ಲಿನ ಚೂರುಗಳನ್ನು ಬಳಸಿ ಹಳೆಯ ಅಧಿಷ್ಠಾನಕ್ಕೆ ಹೊಸ ಅಲಂಕರಣವನ್ನು ಬಂಧಿಸಿದ್ದಾರೆ. ಹಾಗಾಗಿ ಈ ಮೊದಲು ನಿರ್ಮಿಸಲಾಗಿರುವ ಮಹಾನವಮಿ ದಿಬ್ಬದ ಪ್ರಥಮ, ದ್ವಿತೀಯ ಮತ್ತು ತೃತೀಯ ಹಂತದ ಪ್ರಥಮ ಹಾಗೂ ಅಂತಿಮ ಹಂತದ ಭಾಗಗಳನ್ನು ಮುಚ್ಚಲು ಮಾಡಿದ ಅಲಂಕರಣವನ್ನು ಕೆಳಗಿನಿಂದ ಮೇಲಿನವರೆಗೆ ನಾಲ್ಕು ಹಂತಗಳೆಂದು ವಿಭಾಗಿಸಿ ಅವುಗಳಲ್ಲಿ ಕಂಡುಬರುವ ಅಂಗಗಳನ್ನು ಈ ಕೆಳಗಿನಂತೆ ಗುರುತಿಸಲಾಗಿದೆ.

ನಾಲ್ಕನೇ ಹಂತದ ನಿರ್ಮಾಣದ ಪ್ರಥಮ ಭಾಗದಲ್ಲಿ ಕೆಳಗಿನ ಉಪಾನ, ಮೇಲಿನ ಉಪಾನ ಪದ್ಮ, ಜಗತಿ, ಕೆಳಗಿನ ಗಳ, ಪಟ್ಟಿಕ, ಮೇಲಿನ ಗಳ, ಕಪೋತ ಹಾಗೂ ತಪ್ಪಾಗಿ ರೂಪಿಸಿದ ಪದ್ಮವನ್ನು ಹೊಂದಿದೆ.

ನಾಲ್ಕನೇ ಹಂತದ ನಿರ್ಮಾಣದ ಎರಡನೆಯ ವಿಭಾಗದಲ್ಲಿ ಕೆಳಗಿನ ಉಪಾನ, ಮೇಲಿನ ಉಪಾನ, ಪದ್ಮ, ಪಟ್ಟಿಕ, ಗಳ, ಕಪೋತ, ಅಧೋಮುಖ ಪದ್ಮವನ್ನು ಹೊಂದಿದೆ. ಈ ಹಂತದಲ್ಲಿ ಮುಂಚಾಚಿದ ಕೋಷ್ಟಗಳು ಮತ್ತು ಅವುಗಳಲ್ಲಿ ಅಲಂಕರಣ ಮೂರ್ತಿಗಳು ಕಂಡುಬರುತ್ತವೆ.

ನಾಲ್ಕನೇ ಹಂತದ ನಿರ್ಮಾಣದ ಮೂರನೇ ವಿಭಾಗದಲ್ಲಿ ಉಪಾನ, ಪದ್ಮ, ಕುಮುದ, ಕಂಠ, ಮತ್ತು ಅಧೋಮುಖ ಪದ್ಮ ಹಾಗೂ ಗಳವನ್ನು ಹೊಂದಿದೆ. ಈ ಹಂತದಲ್ಲಿ ಅಲ್ಲಲ್ಲಿ ಕುಂಭ ಪಂಜರಗಳು, ಲತಾ ಪಂಜರಗಳು ಸುಂದರವಾದ ಮತ್ತು ಮೂರ್ತಿಗಳನ್ನೊಳಗೊಂಡ ಕೋಷ್ಠಗಳು ಕಂಡುಬರುತ್ತವೆ.

ಕೊನೆಯ ಅಥವಾ ಅಂತಿಮ ವಿಭಾಗದಲ್ಲಿ ಉಪಪೀಠ, ಅಧಿಷ್ಠಾನ ಕೋಷ್ಠ, ಕಪೋತ, ಬೋಧಿಗೆ ಅಥವಾ ಚಿತ್ರಸುತ್ತು ಮತ್ತು ಶಾಲಾವನ್ನು ಹೊಂದಿದೆ.

ನಾಲ್ಕನೇಯ ಹಂತದ ನಿರ್ಮಾಣದಲ್ಲಿ ಬಳಸಲಾದ ಹಸಿರು ವರ್ಣದ ಬಳಪದ ಕಲ್ಲು ಅಥವಾ ಕ್ಲೋರೈಟಿಕ್ ಸಿಸ್ಟ್ ಅನ್ನು ಕಲ್ಯಾಣಿ ಚಾಲುಕ್ಯರ ಅಥವಾ ಹೊಯ್ಸಳರ ಹಾಳಾದ ಹೊರಗಿನ ದೇವಾಲಯದಿಂದ ತಂದು ಬಳಸಿದ್ದಾರೆಂದು ಕೆಲವು ವಿದ್ವಾಂಸರ ಅಭಿಪ್ರಾಯವಾಗಿದೆ. ಆದರೆ ರಾಜಪ್ರಾಂಗಣದಲ್ಲೇ ಕಂಡುಬರುವ ಪಿಸುಮಾತಿನ ಕೋಣೆ ಅಥವಾ ನೆಲಮಾಳಿಗೆ ಎಂದು ಕರೆಯುವ ಸ್ಮಾರಕ ಮತ್ತು ಅದರ ಮುಂದಿನ ಪುಷ್ಕರಣಿಯನ್ನು ಹಾಗೂ ಅವುಗಳ ರಚನೆಯನ್ನು ಗಮನಿಸಿದರೆ ಈ ಮೇಲಿ ವಿದ್ವಾಂಸರ ಅಭಿಪ್ರಾಯವನ್ನು ಪುನರವಲೋಕಿಸುವುದು ಸೂಕ್ತ ಎನಿಸುತ್ತದೆ. ಲಾಂಗ್‌ಹರ್ಸ್ಟ್‌ರವರು ಈ ಸ್ಮಾರಕವನ್ನು ದೇವಾಲಯವಾಗಿತ್ತೆಂದು ಬಹಳ ಹಿಂದೆಯೇ ಈ ರೀತಿ ಉಲ್ಲೇಖಿಸಿದ್ದಾರೆ:

There seems little doubt that, originally this chamber was an underground shrine or private chapel provided with a procession path around the main shrine.[6]

ಪುಷ್ಕರಣಿಯ ಪ್ರಥಮ ಹಂತದ ನಿರ್ಮಾಣ ಹಾಗೂ ಅನಂತರದ ನಿರ್ಮಾಣವನ್ನು ಸೂಕ್ಷ್ಮವಾಗಿ ಗಮನಿಸಿದಾಗ ತಮ್ಮ ಅರಿವಿಗೆ ಬರುವುದೆಂದರೆ ಲಾಂಗ್‌ಹರ್ಸ್ಟ್ ಹೇಳುವಂತೆ ಪ್ರಾಚೀನ ದೇವಾಲಯದ ನೀರಿನ ಅವಶ್ಯಕತೆಯನ್ನು ಪೂರೈಸಲು ಈ ಪುಷ್ಕರಣಿಯನ್ನು ನಿರ್ಮಿಸಿದ್ದರೆಂಬುದು ಖಚಿತವಾಗುತ್ತದೆ. ಇಂದು ನೆಲಮಾಳಿಗೆ ಅಥವಾ ಮಂತ್ರಾಲೋಚನಾ ಮಂದಿರವೆಂದು ಕರೆಯುವ ದೇವಾಲಯಕ್ಕೆ ನೀರಿನ ಆಶ್ರಯವಾಗಿ ಈ ಪುಷ್ಕರಣಿಯ ಪ್ರಾಥಮಿಕ ಹಂತ

ಕಾರ್ಯನಿರ್ವಹಿಸುತ್ತಿತ್ತು. ಆನಂತರ ಜಗನ್ಮೋಹನ ಸಭಾಂಗಣ ರಚನೆಯ ಕಾಲದಲ್ಲಿಯೇ ದೇವಾಲಯವನ್ನು ತೆರವುಗೊಳಿಸಿ ದೇವಾಲಯಗಳ ಭಾಗವನ್ನು ಬಳಸಿಕೊಂಡು ಪುಷ್ಕರಣಿಯನ್ನು ಹಾಗೂ ಮಹಾನವಮಿ ಮಂಟಪದ ಪಶ್ಚಿಮದ ಭಾಗದ ಅಲಂಕರಣವನ್ನು ನಿರ್ಮಿಸಿರುವ ಸಾಧ್ಯತೆಯನ್ನು ತಳ್ಳಿಹಾಕಲಾಗುವುದಿಲ್ಲ. ಇಂದಿಗೂ ಮಹಾನವಮಿ ಮಂಟಪ ಆಸುಪಾಸಿನಲ್ಲಿ ಪ್ರಾಚೀನ ದೇವಾಲಯದ ಹಲವು ಕಲ್ಲುಗಳು, ಭಿತ್ತಿಯ ಅಲಂಕರಣಗಳು, ಕೈಪಿಡಿ ಕಲ್ಲುಗಳು, ಪ್ರನಾಳ ಮುಂತಾದವು ಬಿದ್ದಿರುವುದನ್ನು ಕಾಣಬಹುದು. ವಿದ್ವಾಂಸರು ಹೇಳಿದಂತೆ ಹೊರಗಿನಿಂದ ದೇವಾಲಯದ ಭಾಗಗಳನ್ನು ತಂದು ಪುಷ್ಕರಣಿಯನ್ನು ನಿರ್ಮಿಸಿದ್ದರೆ ಅನುಪಯುಕ್ತವಾದ ಭಾಗಗಳನ್ನು ಸಾಗಿಸಿ ತಂದು ಅವನ್ನು ರಾಜ ಪ್ರಾಂಗಣದಲ್ಲಿ ಬಳಸದೇ ಎಸೆಯುವ ಪ್ರಯತ್ನವಾಗುತ್ತಿರಲಿಲ್ಲ. ಬದಲಿಗೆ ಯಾವುದೋ ಉಪಯುಕ್ತವೋ ಅದನ್ನು ಮಾತ್ರ ಸಾಗಿಸಿ ತಂದು ತಮ್ಮ ಕಾರ್ಯವನ್ನು ಪೂರ್ಣಗೊಳಿಸುತ್ತಿದ್ದರು. ಎರಡನೆಯದಾಗಿ ಪುಷ್ಕರಣಿಯ ಮೊದಲನೆಯ ಹಂತವು ದೇವಾಲಯದ ಅಂದಿನ ಭೂ ಮಟ್ಟಕ್ಕಿಂತ ಕೆಳಭಾಗದಲ್ಲಿದೆ. ಅಲ್ಲದೇ ಪುಷ್ಕರಣಿಯ ಕೆಳಹಂತದ ರಚನೆಯು ಅತ್ಯಂತ ಸರಳವಾಗಿದ್ದು, ದೇವಾಲಯದ ಭಾಗಗಳನ್ನು ಬಳಸಿ ರಚಿಸಿದ್ದಲ್ಲ. ಈ ಎಲ್ಲಾ ಸಂದೇಹಗಳನ್ನು ನಿವಾರಿಸಿಕೊಳ್ಳಲು ಗುಪ್ತ ಸಮಾಲೋಚನಾ ಮಂದಿರದ ಸುತ್ತಲು ಭೂ ಸಂಶೋಧನೆ ಅವಶ್ಯಕ. ಇದಕ್ಕೆ ಪೂರಕವಾಗಿ ಈ ಪ್ರದೇಶದಲ್ಲಿ ದೊರೆತ 11ನೇ ಶತಮಾನದ ಎರಡು ಶಾಸನಗಳನ್ನು ಉಲ್ಲೇಖಿಸಬಹುದು. ಇದಲ್ಲದೇ ಇವಕ್ಕೆ ಪೂರಕವಾಗಿ ಹತ್ತಿರದಲ್ಲೇ ಇರುವ ಯಲ್ಲಮ್ಮ ದೇವಿ ದೇವಾಲಯವು ಇಂದಿನ ಭೂಮಟ್ಟದಿಂದ ಸುಮಾರು ನಾಲ್ಕು ಮೀಟರ್ ಕೆಳಭಾಗದಲ್ಲಿದೆ. ಅಲ್ಲದೇ ಅದಕ್ಕೂ ಹಿಂದಿನ ತ್ರುಟಿತ ಶಾಸನಗಳನ್ನು ಹೊಂದಿರುವ ಈ ದೇವಾಲಯದ ಕಲ್ಲುಗಳು ಇದೇ ಆವರಣದಲ್ಲಿ ದೊರೆತಿರುವುದರಿಂದ ಕ್ರಿ.ಶ. 11ನೇ ಶತಮಾನದ ಅಂತ್ಯಕಾಲದಲ್ಲಿ ಇಲ್ಲಿ ಧಾರ್ಮಿಕ ಚಟುವಟಿಕೆ ನೆರವೇರುತ್ತಿತ್ತೆಂದು ಅಭಿಪ್ರಾಯಪಡಬಹುದು. ಈ ದಿಶೆಯಲ್ಲಿ ಮತ್ತಷ್ಟು ಸಂಶೋಧನೆಯ ಅವಶ್ಯಕತೆ ಕಂಡುಬರುತ್ತದೆ.

ಉಬ್ಬುಶಿಲ್ಪಗಳು

ಪ್ರಥಮ ಹಂತದ ನಿರ್ಮಾಣದಲ್ಲಿರುವ ಉಬ್ಬುಶಿಲ್ಪಗಳು ನವರಾತ್ರಿ ಉತ್ಸವದ ಕಾಲದಲ್ಲಿ ನೆರವೇರುತ್ತಿದ್ದ ವಿವಿಧ ಪ್ರದರ್ಶನಗಳನ್ನು ಮತ್ತು ಉತ್ಸವಗಳನ್ನು ದಾಖಲಿಸುತ್ತವೆ. ನವರಾತ್ರಿ ಕಾಲದ ಉತ್ಸವದ ಚಿತ್ರಗಳನ್ನು ಈ ಹಂತದಲ್ಲಿ ಯಥಾವತ್ತಾಗಿ ಚಿತ್ರಿಸಿದ್ದಾರೆ. ಅವುಗಳಲ್ಲಿ ಮುಖ್ಯವಾಗಿ ಸೈನ್ಯದ ತುಕಡಿಗಳು ಮೆರವಣಿಗೆಗಳಲ್ಲಿ ಪಾಲ್ಗೊಳ್ಳುತ್ತಿರುವಂತೆ ಚಿತ್ರಿಸಲಾಗಿದೆ. ಆನೆ, ಒಂಟೆ, ಅಶ್ವದಳ ಹಾಗೂ ಕಾಲ್ದಳದ ತುಕಡಿಗಳನ್ನು ಕಾಣಬಹುದು. ಈ ಹಂತದಲ್ಲಿ ಹೆಚ್ಚು ವಿವರವಾಗಿ ದಾಖಲಾಗಿರುವ ಸನ್ನಿವೇಶವೆಂದರೆ ಬೇಟೆಯ ಶಿಲ್ಪಗಳು.

ಬೇಟೆಗಾರರು ಕಾಡಿನಲ್ಲಿ ಪ್ರಾಣಿಗಳನ್ನು ಬೇಟೆಗಾಗಿ ಹಿಂಬಾಲಿಸಿರುವಂತೆ ಅವರೊಂದಿಗಿರುವ ನಾಯಿಗಳು ಪ್ರಾಣಿಗಳನ್ನು ಹೆದರಿಸಿ ಓಡಿಸುತ್ತಿರುವಂತೆ ಅಪರೂಪಕ್ಕೆ ಕಾಡಿನ ಪ್ರಾಣಿಗಳು ಬೇಟೆಗಾರರನ್ನೇ ಹೆದರಿಸಿದ್ದರಿಂದ ಆತ್ಮರಕ್ಷಣೆಗೆ ಬೇಟೆಗಾರರು ಮರಗಳಲ್ಲಿ ಆಶ್ರಯ ಪಡೆದಿರುವಂತೆ ಹಾಗೂ ಹುಲಿ, ಸಿಂಹ ಮುಂತಾದ ಕಾಡುಮೃಗಗಳ ಬೇಟೆ ಹಾಗೂ ಇತರ ಬೇಟೆಯ ಚಿತ್ರಗಳು ಈ ಹಂತದಲ್ಲಿ ಅಧಿಕವಾಗಿ ಕಂಡುಬರುತ್ತವೆ.

ಇವುಗಳಲ್ಲದೇ ಮೆರವಣಿಗೆಯಲ್ಲಿ ಸಾಗುತ್ತಿರುವ ಆನೆಯ ಸಾಲು, ಕುದುರೆಸವಾರರು, ಒಂಟೆ, ಅಲಂಕರಣಗೊಂಡ ಆನೆಗಳು, ಒಂಟೆ ಸವಾರರು ಮತ್ತು ಅದರ ಸೇವಕರು, ಪ್ರಾಣಿಗಳ ಬೇಟೆಯ ದೃಶ್ಯ, ಕಾಡಿನ ದೃಶ್ಯ, ಕೈಪಿಡಿಯಲ್ಲಿನ ಯಾಳಿ, ಆನೆ, ಬೇಟೆಗಾರರು ಕಾಡಿನಲ್ಲಿ ಬೇಟೆಯಲ್ಲಿ ನಿರತರಾಗಿರುವ ಬೇಟೆಗಾರರು, ಹಂದಿ ಮತ್ತು ಜಿಂಕೆಯ ಬೇಟೆ, ಸಿಂಹವನ್ನು ಶೂಲದಿಂದ ಇರಿಯುತ್ತಿರುವ ದೃಶ್ಯ, ಹುಲಿಬೇಟೆ, ಬೇಟೆಗಾರರೊಂದಿಗೆ ಬೇಟೆಯಲ್ಲಿ ತೊಡಗಿರುವ ನಾಯಿಗಳು, ಕಾಡಿನ ದೃಶ್ಯಗಳು, ಕೋತಿಗಳು, ವಿವಿಧ ವನ್ಯಮೃಗಗಳು, ಪರಸ್ಪರ ಹೋರಾಟದಲ್ಲಿ ತೊಡಗಿರುವ ಹುಲಿ ಸಿಂಹಗಳು, ಮುಖ್ಯವಾಗಿ ಕಂಡುಬರುತ್ತವೆ.

ಇವುಗಳಲ್ಲದೆ ವಸಂತೋತ್ಸವದ ಆಚರಣೆಯ ಶಿಲ್ಪಗಳು ಉತ್ತಮವಾಗಿ ಪ್ರತಿನಿಧಿತವಾಗಿವೆ. ಕೋಲಾಟದಲ್ಲಿ ನಿರತರಾಗಿರುವ ಸ್ತ್ರೀಯರ ತಂಡ ಮತ್ತು ಪಿಚಕಾರಿಯಿಂದ ಬಣ್ಣವನ್ನು ಪರಸ್ಪರ ಎರಚಾಡುತ್ತಿರುವ ಸ್ತ್ರೀಯರ ಗುಂಪು

ಸಹ ಗಮನಸೆಳೆಯುತ್ತದೆ. ಇದಲ್ಲದೇ ಕೆಲವು ಪುರಾಣಕಥೆಗಳು ಅದರಲ್ಲೂ ಮತ್ಸ್ಯೇಂದ್ರನಾಥನು ಸಿಂಹದ ಮೇಲೆ ಕುಳಿತಿರುವಂತೆ ಮತ್ತು ಚಂಚು ಲಕ್ಷ್ಮಿ ನರಸಿಂಹನ ಪ್ರಣಯದ ಪ್ರಸಂಗಗಳು ಪ್ರಮುಖವಾಗುತ್ತವೆ.

ಎರಡನೇ ಹಂತದ ಶಿಲ್ಪಗಳು ಪ್ರಾಕೃತಿಕ ದೃಶ್ಯಗಳು, ದರ್ಬಾರಿನ ದೃಶ್ಯಗಳು, ಬೇಟೆಯ ದೃಶ್ಯಗಳು, ವಿದೇಶೀಯರು, ವಿದೇಶಿಯ ಸಂಗೀತ ಮತ್ತು ನೃತ್ಯ ತಂಡ, ದೇಶಿಯ ಸಂಗೀತ ಮತ್ತು ನೃತ್ಯತಂಡ, ಪಟ್ಟದ ಕುದುರೆ, ದಸರಾ ಮೆರವಣಿಗೆಯ ಸಾಲು, ನರ್ತಕಿಯರು, ರಾಜನನ್ನು ಸಂದರ್ಶಿಸುತ್ತಿರುವ ವಿದೇಶೀಯರು ಮತ್ತು ದೇಶೀಯ ಚಿತ್ರಗಳು ಪ್ರಮುಖವಾಗಿ ಗಮನಸೆಳೆಯುತ್ತವೆ. ಈ ಹಂತಗಳಲ್ಲಿ ಇವುಗಳಿಗೆಲ್ಲಕ್ಕಿಂತ ಪಟ್ಟದ ಕುದುರೆಯ ಶಿಲ್ಪ ಪ್ರಮುಖವಾಗಿ ಗಮನ ಸೆಳೆಯುತ್ತದೆ. ಸಾಲಂಕೃತ ಕುದುರೆಯ ಮೇಲೆ ಛತ್ರಿಯನ್ನು ಕಂಡರಿಸಿ ಪಟ್ಟದ ಕುದುರೆಯನ್ನು ವಿಶೇಷವಾಗಿ ಗುರುತಿಸಲಾಗಿದೆ.

ಮೂರನೇಯ ಹಂತದಲ್ಲಿನ ಶಿಲ್ಪಗಳು ಮಾಳಿಗೆಯನ್ನು ಏರಲು ನಿರ್ಮಿತವಾಗಿರುವ ಮೆಟ್ಟಿಲುಗಳ ಕೊಠಡಿಗೆ ಸೀಮಿತವಾಗಿವೆ. ಅವುಗಳಲ್ಲಿ ಪ್ರಮುಖವಾದವು ಮೆರವಣಿಗೆಯಲ್ಲಿ ಸಾಗುತ್ತಿರುವ ಸಾಲಂಕೃತ ಆನೆ, ನರ್ತಕಿಯರು, ಮಧ್ಯಪ್ರಾಚ್ಯದ ವರ್ತಕರು, ನರ್ತಕರು ಮತ್ತು ಕುದುರೆ ವ್ಯಾಪಾರಿಗಳು. ಪ್ರಮುಖ ಶಿಲ್ಪಗಳೆನಿಸುತ್ತವೆ. ಅಧಿಷ್ಠಾನದ ಭಾಗದಲ್ಲಿ 8 ರಿಂದ 32 ದಳಗಳ ಕಮಲಗಳು, ಆನೆಗಳು, ಕೋಷ್ಠಗಳು, ಅರೆಕಂಬಗಳಿಂದ ಆವೃತವಾದ ಪೂರ್ಣ ಕುಂಭಗಳು ಮತ್ತು ಲತ ಕುಂಭಗಳು ಮುಂತಾದ ಅಲಂಕರಣಿಕೆಯನ್ನು ಕಾಣಬಹುದು.

ನಾಲ್ಕನೇ ಹಂತದಲ್ಲಿಯೂ ಮೂರನೇ ಹಂತದಲ್ಲಿ ಕಂಡುಬರುವ ಶಿಲ್ಪಗಳ ಅಂದರೆ ಅಧಿಷ್ಠಾನದ ಭಾಗದಲ್ಲಿ 8 ರಿಂದ 32 ದಳಗಳ ಕಮಲಗಳು, ಆನೆಗಳು, ಶಿಲ್ಪಸಹಿತ ಕೋಷ್ಠಗಳು, ರಾಜನ ಶಿಲ್ಪಗಳು ಮತ್ತು ರಾಜನ ಆಸ್ಥಾನದ ಪ್ರಮುಖ ಅಧಿಕಾರಿಗಳನ್ನು ಬೇಟೆ ಮಾಡುತ್ತಿರುವ ಸಾಮಾನ್ಯರ ಮತ್ತು ವ್ಯಾಪಾರಿಗಳ ಶಿಲ್ಪಗಳು, ಅರೆಕಂಬಗಳಿಂದ ಆವೃತವಾದ ಪೂರ್ಣ ಕುಂಭಗಳು ಮತ್ತು ಲತ ಕುಂಭಗಳು ಮುಂತಾದ ಅಲಂಕರಣಿಕೆಯನ್ನು ಕಾಣಬಹುದು.

ಆದರೆ ಇವೆಲ್ಲವು ಒಂದು ವ್ಯವಸ್ಥೆಯನ್ನು ಹೊಂದಿರುವಂತೆ ಕಂಡುಬರುವುದಿಲ್ಲ. ಇವೆಲ್ಲ ನವರಾತ್ರಿಯ ಕಾಲದಲ್ಲಿ ನೆರವೇರುತ್ತಿದ್ದು ಆಚರಣೆಯನ್ನು ಯಥಾವತ್ತಾಗಿ ಪ್ರತಿಬಿಂಬಿಸುತ್ತವೆ.

ವಿಜಯನಗರ ಅರಸರು ನೆರವೇರಿಸುತ್ತಿದ್ದ ದಸರಾ ಆಚರಣೆಯ ಕುರುಹಾಗಿ ಇಂದಿಗೂ ಹಂಪೆಯಲ್ಲಿ ಸಾಕ್ಷಿ ಒದಗಿಸುತ್ತಿರುವುದು ಅಲ್ಲಿಯ ಮಹಾನವಮಿ ದಿಬ್ಬ. ಈ ದಿಬ್ಬ ನಾಲ್ಕು ಕಾಲಘಟ್ಟಗಳಲ್ಲಿ ನಿರ್ಮಾಣಗೊಂಡಿದೆ. ಪ್ರತೀತಿಯಂತೆ ಅರಸನು ಈ ವೇದಿಕೆಯ ಮೇಲೆ ಸಿಂಹಾಸನಾರೂಢನಾಗಿ ಮಹಾನವಮಿ ಉತ್ಸವವನ್ನು ವೀಕ್ಷಿಸುತ್ತಿದ್ದನು. ಮಹಾನವಮಿ ದಿಬ್ಬದ ಭಿತ್ತಿಯಲ್ಲಿನ ಉಬ್ಬುಶಿಲ್ಪಗಳು ವಿಜಯದಶಮಿ ಉತ್ಸವದ ಚಿತ್ರವನ್ನು ನಮ್ಮ ಮುಂದೆ ತೆರೆದಿಡುತ್ತವೆ. ಉದಾಹರಣೆಗೆ ಗಜಸೈನ್ಯ, ರಾವುತರು, ಒಂಟೆಯನ್ನೇರಿ ಹೊರಡುವ ಸೈನಿಕರು. ಕಾಲ್ದಳ ಮುಂತಾದ ಸೈನಿಕ ಅಂಗಗಳ ಜೊತೆಗೆ ಮನರಂಜನೆಯ ವಿವಿಧ ಪ್ರಕಾರಗಳ ನರ್ತಕ ನರ್ತಕಿಯರು ಕಂಡುಬರುತ್ತಾರೆ. ಇದಲ್ಲದೆ ಇದರ ಹತ್ತಿರದಲ್ಲಿರುವ ಹಜಾರರಾಮ ದೇವಾಲಯದ ಪ್ರಾಕಾರದ ಗೋಡೆಯಲ್ಲಿ ಸಹ ಈ ಬಗೆಯ ಚಿತ್ರಣ ಕಾಣಬಹುದು. ಇವೆಲ್ಲವೂ ಗತಕಾಲದ ವೈಭವವನ್ನು ಪುನಃ ನಮ್ಮ ಮುಂದೆ ತೆರೆದಿಡುತ್ತವೆ.

ವಿಜಯನಗರದಲ್ಲಿ ದಸರಾ ಆಚರಣೆಗಳು ಸಾಮ್ರಾಜ್ಯದ ಉದಯದ ನಂತರದ ದಿನಗಳಲ್ಲಿ ಪ್ರಾರಂಭವಾಯಿತು ಎಂದು ಖಚಿತವಾಗಿ ತಿಳಿದುಬರುತ್ತದೆ. ಈ ಆಚರಣೆಗಳು ವಿದ್ಯಾನಗರ ಮುಸಲ್ಮಾನರ ಧಾಳಿಗೆ ಬಳಿಸಾಗುವವರೆಗೆ ಮತ್ತು ರಕ್ಕಸಗಿ–ತಂಗಡಗಿ ಯುದ್ಧದನಂತರ ಕರ್ನಾಟಕ ಸಾಮ್ರಾಜ್ಯದ ರಾಜಧಾನಿ ಪೆನುಗೊಂಡೆ ಆನಂತರ ಚಂದ್ರಗಿರಿಗೆ ಬದಲಾಗುವವರೆಗೆ ನಿರಾತಂಕವಾಗಿ ಸಾಗಿದವು. ತಿರುಮಲನು ರಾಜಧಾನಿಯನ್ನು ಬದಲಾಯಿಸುವವರೆಗೆ ನಿರಾತಂಕವಾಗಿ ಸಾಗಿದವು. ತಿರುಮಲನು ರಾಜಧಾನಿಯನ್ನು ಬದಲಾಯಿಸಿದನಂತರ ಹಾಗೂ ರಾಜ್ಯಾಭಿಷೇಕ ನೆರವೇರಿದನಂತರ ಚಂದ್ರಗಿರಿಯಲ್ಲಿ ಹಾಗೂ ಪೆನುಗೊಂಡೆಯಲ್ಲಿ ದಸರಾ ಆಚರಣೆಗಳನ್ನು ಜಾರಿಗೆ ತಂದನೆಂದು ಭಾವಿಸಲು ಅವಕಾಶಗಳಿವೆ.

ಇದೇ ಸಮಯದಲ್ಲಿ ಚಕ್ರವರ್ತಿ ತಿರುಮಲನು ತನ್ನ ಮಕ್ಕಳನ್ನು ಕರ್ನಾಟಕ ಸಾಮ್ರಾಜ್ಯದ ಮೂರು ರಾಜ್ಯಗಳಿಗೆ ರಾಜಪ್ರತಿನಿಧಿಗಳಾಗಿ ನೇಮಿಸಿದನು.[7]

ಚಕ್ರವರ್ತಿ ತಿರುಮಲನ ಮಕ್ಕಳಲ್ಲಿ ಹಿರಿಯನಾಗಿದ್ದ ಒಂದನೇ ಶ್ರೀರಂಗನನ್ನು ಪೆನುಗೊಂಡೆಯನ್ನು ರಾಜಧಾನಿಯಾಗಿ ಹೊಂದಿದ ತೆಲುಗು ಪ್ರದೇಶಗಳನ್ನು ಒಳಗೊಂಡ ಆಂಧ್ರಪ್ರದೇಶಕ್ಕೆ ರಾಜ್ಯಪಾಲನಾಗಿ ನೇಮಕಗೊಂಡನು. ಎರಡನೆಯ ಪುತ್ರ ರಾಮರಾಜಯ್ಯನು ಶ್ರೀರಂಗಪಟ್ಟಣವನ್ನು ರಾಜಧಾನಿಯಾಗಿ ಹೊಂದಿದ ಕರ್ನಾಟಕ ರಾಜ್ಯದ ರಾಜ್ಯಪಾಲನಾಗಿ, ಹಾಗೂ ವೆಂಕಟನನ್ನು ಚಂದ್ರಗಿರಿಯನ್ನು ರಾಜಧಾನಿಯಾಗಿ ಹೊಂದಿದ ತಮಿಳು ರಾಜ್ಯದ ರಾಜ್ಯಪಾಲನಾಗಿ ನೇಮಿಸಲಾಯಿತು. ಈ ಕಾರ್ಯ ಕ್ರಿ.ಶ. 1571ರಲ್ಲಿ ತಿರುಮಲನ ಪಟ್ಟಾಭಿಷೇಕದೊಂದಿಗೆ ಜರುಗಿರುವ ಎಲ್ಲಾ ಸಾಧ್ಯತೆಗಳಿವೆ. ಕಾರಣ ತಿರುಮಲನು ಆಂತರಿಕ ದಂಗೆಯನ್ನು ಅಡಗಿಸುವ ಕಾರ್ಯವನ್ನು ತನ್ನ ಪುತ್ರರಿಗೆ ವಹಿಸಿ ಬಾಹ್ಯ ಶತ್ರುಗಳನ್ನು ಎದುರಿಸುವ ಕಾರ್ಯವನ್ನು ತಾನೇ ನಿರ್ವಹಿಸಿರಬೇಕು. ಆತನ ಕೆಲವು ಶಾಸನಗಳಲ್ಲಿ ಈ ಬಗೆಯ ಮಾಹಿತಿ ಲಭ್ಯವಿರುವುದನ್ನು ಹೆರಾಸ್, ಹಯವದನರಾವ್ ಮತ್ತು ಇತರರು ದಾಖಲಿಸಿದ್ದಾರೆ.[8]

ಈ ಹಂತದಲ್ಲಿ ಶ್ರೀರಂಗಪಟ್ಟಣದ ಅಂದಿನ ವಸ್ತುಸ್ಥಿತಿಯನ್ನು ಅರಿಯುವುದು ಮುಖ್ಯವಾಗುತ್ತದೆ. ಕ್ರಿ.ಶ. 1512–13ರ ಕೃಷ್ಣರಾಯನ ಉಮ್ಮತ್ತೂರು ಧಾಳಿಯ ನಂತರ ಶ್ರೀರಂಗಪಟ್ಟಣದ ಸೀಮೆಯಲ್ಲಿ ಹಲವಾರು ಸಣ್ಣ ಪಾಳೆಯ ಪಟ್ಟುಗಳು ಅಸ್ತಿತ್ವಕ್ಕೆ ಬಂದವು. ಇವು ಕೃಷ್ಣರಾಯನ ನಂತರವೂ ಯಾವ ಬದಲಾವಣೆಯಿಲ್ಲದೆ ತಿರುಮಲನ ರಾಜ್ಯಾಭಿಷೇಕದವರೆಗೆ ಮುಂದುವರಿಯಿತು. ಹಾಗಾಗಿ ಕ್ರಿ.ಶ. 1513 ರಿಂದ 1571ರವರೆಗೆ ಶ್ರೀರಂಗಪಟ್ಟಣ ಕೇವಲ ಸಾಮಾನ್ಯ ಚತುರ್ವೇದಿಮಂಗಲದ ಕೇಂದ್ರವಾಗಿ ತೀರ್ಥಕ್ಷೇತ್ರವಾಗಿ ಮಾತ್ರ ಮುಂದುವರಿಯಿತು.

ವಿಜಯನಗರದ ಪತನದ ನಂತರ ತಿರುಮಲನು ವಿಜಯನಗರದ ಚಕ್ರವರ್ತಿಯಾದ ನಂತರ ತನ್ನ ಸಾಮ್ರಾಜ್ಯವನ್ನು ತನ್ನ ಮೂವರು ಮಕ್ಕಳಲ್ಲಿ ಮೂರು ರಾಜ್ಯಗಳಾಗಿ ವಿಭಾಗಿಸಿ ಅವರುಗಳನ್ನು ಒಂದೊಂದು ಪ್ರಾಂತ್ಯಕ್ಕೆ ರಾಜ್ಯಪ್ರತಿನಿಧಿಯಾಗಿ ನೇಮಿಸಿದನು. ಆ ಕಾಲದಲ್ಲಿ – ಅಂದರೆ 1571ರಲ್ಲಿ ಶ್ರೀರಂಗಪಟ್ಟಣ – ಪ್ರಾಂತೀಯ ರಾಜಧಾನಿಯಾಗಿ ಪರಿವರ್ತಿತವಾಯಿತು. ಚಕ್ರವರ್ತಿ ತಿರುಮಲನ ಪುತ್ರ ರಾಮರಾಜಯ್ಯನು ರಾಜಕುಮಾರನಾಗಿ ರಾಜ್ಯದ ಆಗುಹೋಗುಗಳನ್ನು ನೋಡಿಕೊಳ್ಳಲು ನಿಯೋಜಿತನಾದನು. ಶ್ರೀರಂಗಪಟ್ಟಣ ಸುತ್ತಮುತ್ತಲಿನ ಪಾಳೆಯಗಾರರು ಹೊಸ ಮನೆತನದ ಚಕ್ರವರ್ತಿಯನ್ನು ಅನುಸರಿಸಲು ಸಿದ್ಧರಿರಲಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಶ್ರೀರಂಗಪಟ್ಟಣದ ಪ್ರಾಂತೀಯ ರಾಜಧಾನಿಯಲ್ಲಿ ಚಕ್ರವರ್ತಿಯ ಪ್ರತಿನಿಧಿಯಾಗಿ, ಸಾಮ್ರಾಜ್ಯದ ಸಾಮಂತರ ಮನಸ್ಸನ್ನು ಗೆಲ್ಲುವ ಮತ್ತು ಸಾಮ್ರಾಜ್ಯದ ನಿಷ್ಠರಾಗಿ ಪರಿವರ್ತಿಸುವ ಜವಾಬ್ದಾರಿಯನ್ನು ರಾಮರಾಜಯ್ಯನು ನಿಭಾಯಿಸಬೇಕಾಗಿ ಬಂದಿತು. ಈ ಕಾರ್ಯವನ್ನು ರಾಮರಾಜಯ್ಯನು ಅತ್ಯಂತ ಯಶಸ್ವಿಯಾಗಿ ನೆರವೇರಿಸಿದನೆಂದು ಆನಂತರದ ಈ ಪ್ರದೇಶದ ಶಾಸನಗಳು ಹಾಗೂ ಸಾಹಿತ್ಯ ಕೃತಿಗಳು ಖಚಿತಪಡಿಸುತ್ತವೆ.

ಈ ಹಿನ್ನೆಲೆಯಲ್ಲಿ ಶ್ರೀರಂಗಪಟ್ಟಣ ಸೀಮೆಯಲ್ಲಿ ದೊರೆಯುವ ರಾಮರಾಜಯ್ಯನ ಪ್ರಾಚೀನ ಶಾಸನ, ಕ್ರಿ.ಶ. 1571ಕ್ಕೆ ಸೇರಿದುದಾಗಿದೆ. ಆ ಶಾಸನದಲ್ಲಿ ರಾಮರಾಜಯ್ಯನು ಬೇರೆ ಯಾವ ವಿಶೇಷಣಗಳಿಲ್ಲದೆ ಕೇವಲ ಚಕ್ರವರ್ತಿ ತಿರುಮಲನ ಪುತ್ರನೆಂದು ಮಾತ್ರ ದಾಖಲಿಸುತ್ತದೆ. ಈ ಮೇಲೆ ಉಲ್ಲೇಖವಾದ ಶಾಸನದ ಪಾಠ:

ಶ್ರೀ ಮಂ.ಮಹಾರಾಜಾಧಿರಾಜ ರಾಜಪರಮೇಶ್ವ
ರ ಶ್ರೀ ವೀರ ಪ್ರತಾಪ ಶ್ರೀ ತಿರುಮಲ ದೇವನು
ಹಾರಾಯನ ಕೊಮಾರರು ರಾಮರಾಜಯ ಅರ್ಸರು....[9]

ಈ ಶಾಸನವು ರಾಮರಾಜಯ್ಯನನ್ನು ಅರಸು ಎಂದು ಸಂಬೋಧಿಸುತ್ತದೆಯಾದರೂ ರಾಜತ್ವಸೂಚಕವಾದ ಯಾವ ಬಿರುದುಗಳನ್ನು ಉಲ್ಲೇಖಿಸಿಲ್ಲ. ಅಲ್ಲದೆ ಆತನು ಎಷ್ಟು ವರ್ಷಗಳ ಕಾಲ ಶ್ರೀರಂಗಪಟ್ಟಣ ರಾಜಧಾನಿಯಲ್ಲಿ

ರಾಜಪ್ರತಿನಿಧಿಯಾಗಿದ್ದನು ಹಾಗೂ ಯಾವಾಗ ಗತಿಸಿದನೆಂದು ತಿಳಿದುಬರುವುದಿಲ್ಲ. ಆದರೆ ರಾಮರಾಜಯ್ಯನು ಗತಿಸಿದಾಗ, ಆತನ ಮಕ್ಕಳಾದ ಹಾಗೂ ಅನಂತರ ರಾಜಪ್ರತಿನಿಧಿಯಾದ ತಿರುಮಲ ಮತ್ತು ಅವನ ಸಹೋದರರು ಇನ್ನೂ ಅಪ್ರಾಪ್ತರಾಗಿದ್ದರಿಂದ, ಒಂದನೆ ಶ್ರೀರಂಗನು ರಾಜಪುತ್ರರನ್ನು ರಾಜಧಾನಿಗೆ ಕರೆಸಿಕೊಂಡು, ದಳವಾಯಿ ರೇಮಟಿ ವೆಂಕಟನನ್ನು ರಾಜ್ಯದ ಆಗುಹೋಗುಗಳನ್ನು ನೋಡಿಕೊಳ್ಳಲು ನೇಮಿಸಿದನು. ಪ್ರಾಯಶಃ ಇವೆಲ್ಲಾ ಚಟುವಟಿಕೆಗಳು ಅಂದರೆ, ರಾಮರಾಜಯ್ಯನ ಮರಣ, ರಾಜಪುತ್ರರ ಪೆನುಗೊಂಡೆ ಪ್ರಯಾಣ, ರೇಮಟಿ ವೆಂಕಟನನ್ನು ರಾಜ್ಯದ ಆಡಳಿತ ನೋಡಿಕೊಳ್ಳಲು ನೇಮಿಸಿದುದು ಕ್ರಿ.ಶ. 1574ರ ಆಸುಪಾಸಿನಲ್ಲಿ ನಡೆದಿದೆ ಎಂದು ಭಾವಿಸಬಹುದಾಗಿದೆ.

ರಾಮರಾಜಯನ ವಿಶೇಷಣರಹಿತ ಶಾಸನ ಹಾಗೂ ಆತನ ಪುತ್ರನಾದ ತಿರುಮಲನ ವಿಶೇಷಣಸಹಿತ ಶಾಸನಗಳು ನಮಗೆ ಒಂದು ಸಂಗತಿಯನ್ನು ಖಚಿತಪಡಿಸುತ್ತವೆ. ರಾಮರಾಜಯ್ಯನು ಶ್ರೀರಂಗಪಟ್ಟಣದ ಸೀಮೆಯ ಪಾಳೆಯಗಾರರನ್ನು ಸಮಾಧಾನಪಡಿಸಿ, ಸಾಮ್ರಾಜ್ಯದ ನಿಷ್ಠಾವಂತರನ್ನಾಗಿ ಪರಿವರ್ತಿಸುವಲ್ಲಿ ಸಫಲನಾದರೂ ಆತನು ಯಾವ ಬಿರುದುಗಳನ್ನು ಹಾಗೂ ಅಧಿಕಾರವನ್ನು ಹೊಂದಿರಲಿಲ್ಲವೆಂದು ಭಾವಿಸಬೇಕಾಗುತ್ತದೆ. ಅಲ್ಲದೆ, ಆತನ ಪುತ್ರರು ಅಪ್ರಾಪ್ತರಾಗಿದ್ದರಿಂದ ಅವರು ಪ್ರಾಪ್ತವಯಸ್ಕರಾದ ಮೇಲೆ ರಾಜ್ಯಪಾಲರಾಗಿ ನಿಯೋಜನೆಗೊಂಡಿದ್ದಾರೆ.

ತಿರುಮಲನ ಪ್ರಥಮ ಶಾಸನ ಕ್ರಿ.ಶ. 1584ರಲ್ಲಿ ಹೊರಡಿಸಿದುದು. ಅದರಲ್ಲಿ ಆತನನ್ನು ಮಹಾಮಂಡಲೇಶ್ವರನೆಂದು ಸಂಬೋಧಿಸಲಾಗಿದೆ. ಈ ವಿಷಯವನ್ನು ತಿರುಮಲನ, ಪಾಂಡವಪುರ ತಾಲ್ಲೂಕಿನ ಮೇನಾಗರ ಗ್ರಾಮದ ಕ್ರಿ.ಶ. 1584ರ ಶಾಸನ ಹಾಗೂ ನರಿಹಳ್ಳಿಯ ಕ್ರಿ.ಶ. 1584ರ ಶಾಸನ ಖಚಿತಪಡಿಸುತ್ತವೆ.[10] ತಿರುಮಲನ ಮೇನಾಗರದ 1584ರ ಶಾಸನವು ಆತನ ತಂದೆಗೆ ಪುಣ್ಯಲೋಕಪ್ರಾಪ್ತಿಯಾಗಲು ನೀಡಿದ ಭೂದಾನವನ್ನು ದಾಖಲಿಸುತ್ತದೆ.

ತಿರುಮಲನು ಶ್ರೀರಂಗಪಟ್ಟಣದ ರಾಜ್ಯಪಾಲನಾಗಿ ಅಧಿಕಾರ ವಹಿಸಿಕೊಂಡನಂತರ ಅವನ ಆಸ್ಥಾನವನ್ನು ಸಂದರ್ಶಿಸಿದ ತಲಕಾಡಿನ ನಂಜೇಂದ್ರ, ಹದಿನಾಡಿನ ರಾಜರಾಜೇಂದ್ರ, ಪಿರಿಯಾಪಟ್ಟಣದ ರುದ್ರಗಣಭೂಪ, ಕೆರೆಯೂರ ತಿಮ್ಮನಾಯಕ, ಇತರರು. ಮೈಸೂರು ಸಂಸ್ಥಾನವು ಬೆಟ್ಟದ ಚಾಮರಾಜ ಒಡೆಯರು ನಂತರ ರಾಜ ಒಡೆಯರ ಕಾಲದಲ್ಲಿ ಬೆಳೆದ ಬಗೆಯನ್ನು ಮತ್ತು ರಾಮರಾಜಯ್ಯನು ಮೈಸೂರಿನವರಿಂದ ಕಂದಾಯ ಬಾಕಿ ವಸೂಲಿಗಾಗಿ ಮೈಸೂರನ್ನು ಮುತ್ತಿ ಅವರಿಂದ ಸೋತ ವಿಷಯಗಳನ್ನು ತಿರುಮಲನಿಗೆ ತಿಳಿಸಿ, ಆತನನ್ನು ಮೈಸೂರಿನ ಸಂಸ್ಥಾನದ ವಿರುದ್ಧ ಕಾರ್ಯಾಚರಣೆ ಕೈಗೊಳ್ಳಲು ಸಿದ್ಧಪಡಿಸಿದರು. ಕೆಸರೆಯ ಯುದ್ಧಪೂರ್ವದಲ್ಲಿ ನಡೆದ ಸಭೆಯೊಂದರಲ್ಲಿ ಸಹ ಇದೇ ಬಗೆಯ ಶತ್ರುತ್ವವನ್ನು ಬೆಳೆಸಿದರು. ತಿರುಮಲಾರ್ಯನ ಚಿಕ್ಕದೇವರಾಜ ವಂಶಾವಳಿಯ ತಿರುಮಲನು ಮಹಾನವಮಿಯ ಸಮಯದಲ್ಲಿ ಶ್ರೀರಂಗಪಟ್ಟಣಕ್ಕೆ ಸೇನೆಯನ್ನು ತರಲು ತನ್ನ ಸಾಮಂತರರಿಗೆ ತಿಳಿಸಿದನೆಂದು ದಾಖಲಿಸುತ್ತದೆ. ಅಂದರೆ ತಿರುಮಲನು ಶ್ರೀರಂಗಪಟ್ಟಣದಲ್ಲಿ ದಸರಾ ಆಚರಿಸುತ್ತಿದ್ದನೆಂಬುದು ಖಚಿತವಾಗುತ್ತದೆ. ಚಕ್ರವರ್ತಿ ತಿರುಮಲನ ಮರಣದ ತರುವಾಯ ಆತನ ಹಿರಿಯ ಪುತ್ರ ಅಥವಾ ಆತನ ಮಕ್ಕಳನ್ನು ಸಿಂಹಾಸನಕ್ಕೆ ತರದೆ ಚಕ್ರವರ್ತಿಯ ತಮ್ಮನೇ ಅಧಿಕಾರಕ್ಕೆ ಬಂದನು. ರಾಜಪ್ರತಿನಿಧಿ ತಿರುಮಲ ಮತ್ತು ಚಕ್ರವರ್ತಿ ಶ್ರೀರಂಗನ ನಡುವಿನ ಭಿನ್ನಾಭಿಪ್ರಾಯಕ್ಕೆ ಕಾರಣವಾಗಿ, ಶ್ರೀರಂಗಪಟ್ಟಣದ ಸೀಮೆಯ ಅಧಿಕಾರ ಬಂದ ತಕ್ಷಣ ತನ್ನ ಎಲ್ಲಾ ಸಾಮಂತರುಗಳನ್ನು ತನ್ನ ಅಂಕೆಯಲ್ಲಿ ಇಟ್ಟುಕೊಳ್ಳಲು, ಹಾಗೂ ಅವರುಗಳನ್ನು ಒಟ್ಟುಗೂಡಿಸಲು ಹಾಗು ಅವರು ಆತನಿಗೆ ನಿಷ್ಠರಾಗಿರುವಂತೆ ಮಾಡಿಕೊಳ್ಳಲು ಮಹಾನವಮಿಯ ಆಚರಣೆಯನ್ನು ಜಾರಿಗೆ ತಂದನೆಂದು ಭಾವಿಸಬಹುದಾಗಿದೆ. ತಿರುಮಲನ ಪ್ರಥಮ ಶಾಸನ ಕ್ರಿ.ಶ. 1584ರ ಮಾರ್ಚ್‌ನಲ್ಲಿ ಹೊರಡಿಸಿದುದಾಗಿದೆ. ಹೀಗಾಗಿ ರಾಜಪ್ರತಿನಿಧಿಯಾಗಿ ತಿರುಮಲನು 1584ರ ಮಾರ್ಚ್‌ಗೆ ಮುಂಚಿತವಾಗಿ ನೇಮಕಗೊಂಡಿದ್ದಾನೆ. ಅಲ್ಲದೆ, ಅದೇ ವರ್ಷ, ಆತನು ತನಗೆ ಸಿಕ್ಕ ಸ್ಥಾನಿಕ ರಾಜಕೀಯ ಮಾಹಿತಿಯನ್ನು ಆಧರಿಸಿ, ರಾಜ್ಯವನ್ನು ಸರಿದಾರಿಗೆ ತರುವ ಪ್ರಯತ್ನದಲ್ಲಿ ಹಾಗೂ ತನ್ನ ನಿಷ್ಠರ ಪಡೆಯನ್ನು ರಚಿಸಲು ಅದೇ ವರ್ಷ ಆಶ್ವೀಜಮಾಸದಲ್ಲಿ ನವರಾತ್ರಿಯನ್ನು ಪ್ರಾರಂಭ ಮಾಡಿದನೆಂದು ಭಾವಿಸುವುದು ಅತ್ಯಂತ ಸೂಕ್ತ.

ಶ್ರೀರಂಗಪಟ್ಟಣದಲ್ಲಿ ಮಹಾಮಂಡಲೇಶ್ವರನಾಗಿ ಅಧಿಕಾರ ಸ್ವೀಕರಿಸಿದ ತಿರುಮಲನು ಅಂದರೆ ಕ್ರಿ.ಶ. 1584ರಲ್ಲಿ ತನ್ನ ಸ್ಥಾನಿಕರನ್ನು ಸನ್ಮಾನಿಸಲು ಹಾಗೂ ಅವರೊಂದಿಗಿನ ಸಂಬಂಧವನ್ನು ಉತ್ತಮಪಡಿಸಲು, ರಾಜಧಾನಿ, ಪೆನುಗೊಂಡೆ ಮತ್ತು ಅದಕ್ಕೆ ಪೂರ್ವದಲ್ಲಿ ವಿಜಯನಗರದಲ್ಲಿ ನೆರವೇರುತ್ತಿದ್ದ ದಸರಾ ಮಹೋತ್ಸವವನ್ನು ಕ್ರಿ.ಶ. 1584ರಲ್ಲಿಯೇ ಪ್ರಾರಂಭಿಸಿದ್ದಾನೆಂದು ಖಚಿತವಾಗಿ ಹೇಳಬಹುದು. ಈ ಹಂತದಲ್ಲಿ ಶ್ರೀರಂಗಪಟ್ಟಣ ಕರ್ನಾಟಕ ರಾಜ್ಯದ ರಾಜಧಾನಿಯಾಗಿ ಪರಿವರ್ತಿತವಾಯಿತು. ಆ ಕಾಲದಲ್ಲಿ ರಾಜಪ್ರತಿನಿಧಿಗಳು ಶ್ರೀರಂಗಪಟ್ಟಣದಲ್ಲಿಯೇ ನವರಾತ್ರಿಯನ್ನು ಆಚರಿಸಲು ಪ್ರಾರಂಭಿಸಿದರು. ಅದರ ಆಚರಣೆಗಾಗಿ ಕೋಟೆಯ ಹೊರಭಾಗದಲ್ಲಿ ಪೂರ್ವ ದಿಕ್ಕಿನಲ್ಲಿ ವಿಶಾಲವಾದ ಬಯಲಿನಲ್ಲಿ ಮಹಾನವಮಿ ಮಂಟಪವನ್ನು ನಿರ್ಮಿಸಿಕೊಂಡರು.

ಕಂಠೀರವ ನರಸರಾಜ ವಿಜಯ, ತಿರುಮಲಾರ್ಯನ ಚಿಕ್ಕದೇವರಾಜ ವಂಶಾವಳಿ, ತಿಮ್ಮಕವಿಯ ಚಿಕ್ಕದೇವರಾಯ ವಂಶಾವಳೀ ಕೃತಿಗಳು ಮಹಾನವಮಿ ಮಂಟಪದ ರಚನೆಯ ಬಗ್ಗೆ ಹಾಗೂ ಅದನ್ನು ರಾಜಒಡೆಯರು ಅಥವಾ ಅವರ ನಂತರದ ರಾಜರು ನಿರ್ಮಿಸಿದರೆಂದು ದಾಖಲಿಸುವುದಿಲ್ಲ. ಹೀಗಾಗಿ ರಾಜಒಡೆಯರು ಮಹಾನವಮಿ ಆಚರಣೆ ಆರಂಭಿಸುವುದಕ್ಕೆ ಮೊದಲೇ ಮಹಾನವಮಿ ಮಂಟಪವಿತ್ತೆಂದಾಗುತ್ತದೆ. ಹೀಗಾಗಿ ಅದನ್ನು ತಿರುಮಲನೇ ನಿರ್ಮಿಸಿ ಆಚರಣೆ ಪ್ರಾರಂಭಿಸಿದನೆನ್ನಬಹುದು.

ಶ್ರೀರಂಗಪಟ್ಟಣದ ಬನ್ನಿಮಂಟಪ

ಕ್ರಿ.ಶ. 2010ರಲ್ಲಿ ಶ್ರೀರಂಗಪಟ್ಟಣದಲ್ಲಿ ಹಿಂದೆ ರಾಜಧಾನಿಯಾಗಿದ್ದಾಗ ನೆರವೇರುತ್ತಿದ್ದ ದಸರಾ ಕಾರ್ಯಕ್ರಮಗಳ ಪರಂಪರೆಯನ್ನು ಮುಂದುವರಿಸುವ ಸಲುವಾಗಿ ಜಂಬೂಸವಾರಿ ಮತ್ತು ಇತರೆ ಕಾರ್ಯಕ್ರಮಗಳನ್ನು ಆಯೋಜಿಸುವ ಪ್ರಯತ್ನಕ್ಕೆ ನಾಂದಿ ಹಾಡಲಾಯಿತು. ಅದೇ ವರ್ಷ ಸ್ಥಳೀಯವಾಗಿ ದಸರಾ ಮಹೋತ್ಸವದ ಆಚರಣೆಯನ್ನು ಮತ್ತು ಜಂಬೂಸವಾರಿಯನ್ನು ನೆರವೇರಿಸಿದರು.

ಅದಾದನಂತರ 2011ರಲ್ಲಿ ಆನೆಗಳನ್ನು ಬರಮಾಡಿಕೊಂಡು ಅದ್ಧೂರಿಯಾಗಿ ಜಂಬೂಸವಾರಿಯನ್ನು ನೆರವೇರಿಸಿದರಲ್ಲದೆ ಸರ್ಕಾರ ಧನಸಹಾಯವನ್ನು ನೀಡಿ, ಈ ಕಾರ್ಯಕ್ರಮಕ್ಕೆ ಮನ್ನಣೆಯನ್ನು ಮತ್ತು ಆಯೋಜನೆಗೆ ಅಂಗೀಕಾರವನ್ನು ನೀಡಿ ಸರ್ಕಾರದ ಪ್ರಾಯೋಜಿತ ಕಾರ್ಯಕ್ರಮವಾಗುವಂತೆ ನೋಡಿಕೊಂಡಿತು.

ಈ ಕಾರ್ಯಕ್ರಮಗಳ ಹಿನ್ನೆಲೆಯಲ್ಲಿ ಶ್ರೀರಂಗಪಟ್ಟಣದಲ್ಲಿದ್ದ ಪ್ರಾಚೀನ ಶಮಿ ಮಂಟಪ ಅಥವಾ ಮಹಾನವಮಿ ಮಂಟಪವನ್ನು ಪತ್ತೆಹಚ್ಚುವ ಕಾರ್ಯ ಸ್ಥಳೀಯ ಉತ್ಸಾಹಿ ಸಂಶೋಧಕರಿಂದ ನೆರವೇರಿತು. ಸ್ಥಳೀಯರು ಶ್ರೀರಂಗಪಟ್ಟಣದ ಉತ್ತರ ದಿಕ್ಕಿಗಿರುವ ಕಿರಂಗೂರು ಮತ್ತು ಬಾಬುರಾಯನ ಕೊಪ್ಪಲು ಗ್ರಾಮಗಳ ಎಲ್ಲೆಯಲ್ಲಿರುವ ಪುರಾತನ ಮಂಟಪವೊಂದನ್ನು ಶ್ರೀರಂಗಪಟ್ಟಣದ ಪುರಾತನ ಶಮಿ ಮಂಟಪ ಅಥವಾ ಮಹಾನವಮಿ ಮಂಟಪವೆಂದು ಗುರುತಿಸಿ ಅದಕ್ಕೆ ಸ್ಮಾರಕದ ಸ್ಥಾನವನ್ನು ನೀಡಿದ್ದಾರೆ. ಅಲ್ಲದೆ ಆ ಪ್ರದೇಶದ ರಕ್ಷಣೆಗಾಗಿ, ಜಿಲ್ಲಾಡಳಿತವೂ ಮುಂದಾಗಿದೆ. ಈ ಹಿನ್ನೆಲೆಯಲ್ಲಿ ಶ್ರೀರಂಗಪಟ್ಟಣದ ಪ್ರದೇಶದಲ್ಲಿ ಪ್ರಾಚೀನ ಕಾಲದಲ್ಲಿ ಅಂದರೆ ವಿಜಯನಗರದ ರಾಜಪ್ರತಿನಿಧಿಗಳ ಕಾಲದಲ್ಲಿ ಹಾಗೂ ರಾಜ ಒಡೆಯರಿಂದ ಪ್ರಾರಂಭ ಮಾಡಿ ಎರಡನೆ ಕೃಷ್ಣರಾಜ ಒಡೆಯರ ಕಾಲದವರೆಗೆ ಯಾವ ಪ್ರದೇಶದಲ್ಲಿ ಶಮಿ ಮಂಟಪವಿತ್ತೆನ್ನುವುದನ್ನು ಗುರುತಿಸುವ ಪ್ರಯತ್ನ ಮಾಡಬೇಕಾಗಿದೆ.

ಇತಿಹಾಸದ ಆಕರಗಳು ಈ ಮೇಲೆ ಗುರುತಿಸಲಾಗಿರುವ ಶಮಿ ಮಂಟಪಕ್ಕೆ ಬದಲಾಗಿ ವಿಭಿನ್ನ ಸ್ಥಳದಲ್ಲಿ ಶಮಿ ಮಂಟಪವಿತ್ತೆಂದು ಗುರುತಿಸುತ್ತದೆ. ಆ ವಿವರಗಳನ್ನು ಈ ಮುಂದಿನ ಕೆಲವು ದಾಖಲೆ ಉಲ್ಲೇಖಗಳು ಖಚಿತಪಡಿಸುತ್ತವೆ.

ಶ್ರೀರಂಗಪಟ್ಟಣದ ನಿಖರವಾದ ಹಾಗೂ ಪ್ರಾಚೀನವಾದ ವರ್ಣನೆ ನಮಗೆ ದೊರೆಯುವುದು ಗೋವಿಂದ ವೈದ್ಯನ 'ಕಂಠೀರವ ನರಸರಾಜ ವಿಜಯ' ಕೃತಿಯಲ್ಲಿ. ಗೋವಿಂದ ವೈದ್ಯನು ಈ ಕೃತಿಯ ಇಪ್ಪತ್ತೆರಡನೇ ಸಂಧಿಯಲ್ಲಿ ಕಂಠೀರವ ನರಸರಾಜನು ನೆರವೇರಿಸುತ್ತಿದ್ದ ದಸರಾ ಉತ್ಸವ ಮತ್ತು ಅದರ ಇತರ ವಿವರಗಳನ್ನು ದಾಖಲಿಸಿದ್ದಾನೆ.[11]

ಶ್ರೀರಂಗನಾಥನ ದೇವಾಲಯದ ಮುಂದಿದ್ದ ಅರಮನೆಯಿಂದ ಪ್ರಾರಂಭವಾಗುತ್ತಿದ್ದ ದಸರಾ ಮೆರವಣಿಗೆಯು ಕೋಟೆಯ ಪೂರ್ವದ್ವಾರದೆಡೆಗೆ ಸಾಗಿ ಕೋಟೆಯ ದ್ವಾರವನ್ನು ದಾಟಿ ಅಶ್ವದಿಂದ ಇಳಿದು, ಪಟ್ಟದಾನೆಯನ್ನು ಏರಿ ಬನ್ನಿಮಂಟಪವನ್ನು ಸೇರುತ್ತಿದ್ದಂತೆ ತಿಳಿದುಬರುತ್ತದೆ. ಈ ಕ್ರಮವನ್ನು ವಿಜಯನಗರದ ಅರಸರು ಅನುಸರಿಸುತ್ತಿದ್ದರೆಂದು ರತ್ನಾಕರವರ್ಣಿಯ *ಭರತೇಶವೈಭವ* ಕೃತಿಯ ವಿವರಣೆಯಿಂದ ತಿಳಿದುಕೊಳ್ಳಬಹುದಾಗಿದೆ. ಭರತೇಶವೈಭವದ ದಸರಾ ಮೆರವಣಿಗೆಯ ವಿವರಗಳನ್ನು ವಿಜಯನಗರದ ದಸರಾ ವೈಭವದ ವರ್ಣನೆಗಳೆಂದು ವಿದ್ವಾಂಸರು ಒಪ್ಪಿಕೊಂಡಿದ್ದಾರೆ.[12]

ಶ್ರೀರಂಗಪಟ್ಟಣದ ಕೋಟೆಯ ರಚನೆಯನ್ನು ಅಭ್ಯಸಿಸಿರುವವರಿಗೆ ಈ ಸಂಗತಿ ತಕ್ಷಣಕ್ಕೆ ಅರಿವಾಗುತ್ತದೆ. ಶ್ರೀರಂಗಪಟ್ಟಣ ಕೋಟೆಯ ದ್ವಾರಗಳು ಟೀಪುಸುಲ್ತಾನನಿಗೆ ಪೂರ್ವದಲ್ಲಿ ಆನೆಗಳು ಪ್ರವೇಶಿಸುವಷ್ಟು ಎತ್ತರವಾಗಿರಲಿಲ್ಲ. ಅಲ್ಲದೆ ಕಂಠೀರವ ನರಸರಾಜ ವಿಜಯದ ಕೆಲವು ಪದ್ಯಗಳು ಶ್ರೀರಂಗಪಟ್ಟಣದ ಗಜಶಾಲೆಯು ಕೋಟೆಯ ಪೂರ್ವದ್ವಾರದ ಹೊರಗೆ ಹಾಗೂ ಮೈಸೂರು ದ್ವಾರದ ಹೊರಭಾಗದಲ್ಲಿದ್ದುದಕ್ಕೆ (ದಕ್ಷಿಣದ ದ್ವಾರ) ಸಾಕ್ಷಿಯಾಗುತ್ತವೆ.[13]

ಪ್ರಾಯಶಃ ಶ್ರೀರಂಗಪಟ್ಟಣದ ಕೋಟೆಯ ಒಳ ಆವರಣಕ್ಕೆ ಆನೆಗಳು ಪ್ರವೇಶವಾದದ್ದು ಕ್ರಿ.ಶ. 1792ರ ನಂತರವೇ ಎನಿಸುತ್ತದೆ. ಕಾರಣ ಟೀಪು ಪ್ರಾಚೀನ ಕೋಟೆಯ ದ್ವಾರಗಳನ್ನು ಮುಚ್ಚಿ ಹೊಸದಾಗಿ ಆನೆಗಳು ಪ್ರವೇಶಿಸಬಹುದಾದ ಎತ್ತರವಾದ ಪ್ರವೇಶದ್ವಾರಗಳನ್ನು ಪೂರ್ವ ದಿಕ್ಕಿನಲ್ಲಿ ಮತ್ತು ದಕ್ಷಿಣ ದಿಕ್ಕಿನಲ್ಲಿ ನಿರ್ಮಿಸಿದನು. ಹಾಗಾಗಿ, ದಕ್ಷಿಣ ದಿಕ್ಕಿನಲ್ಲಿರುವ ನೂತನ ಪ್ರವೇಶದ್ವಾರಕ್ಕೆ ಆನೆಕೋಟೆ ಬಾಗಿಲು ಎಂದು ಹೆಸರಾಯಿತು. ಈ ಪ್ರವೇಶದ್ವಾರವನ್ನು ಕಂಠೀರವ ನರಸರಾಜ ವಿಜಯವು ಮೈಸೂರು ದ್ವಾರವೆಂದು ಗುರುತಿಸುತ್ತದೆ. ಅಲ್ಲದೆ, ಅಳಿವೆಗಳನ್ನು/ಕಂದಕಗಳನ್ನು ದಾಟಲು ತಾತ್ಕಾಲಿಕ ಸೇತುವೆಗಳಿದ್ದುದಕ್ಕೆ ಆ ಕಾಲದಲ್ಲಿ ರಚಿತವಾದ ಕೆಲವು ತೈಲಚಿತ್ರಗಳು ಹಾಗೂ ಲೀಥೋಗ್ರಾಪ್‌ಗಳು ಸಹಾಯ ಮಾಡುತ್ತವೆ.

ನವರಾತ್ರಿಯಲ್ಲಿ ಕೆಲವು ವೇಳೆ ಹಿಂಗಾರು ಮಳೆಯ ಬೀಳುತ್ತಿತ್ತು. ಹಾಗಾಗಿ ಇಂದು ನಾವು ಗುರುತಿಸಿರುವ ಶಮಿ ಮಂಟಪಕ್ಕೆ ಸಾಗಲು ನದಿಯನ್ನು ದಾಟಬೇಕಾಗುತ್ತದೆ. 1804ಕ್ಕೆ ಹಿಂದೆ ಆ ಭಾಗದಲ್ಲಿ ಸೇತುವೆಯಿರಲಿಲ್ಲ. ಅಲ್ಲದೆ ಅಲ್ಲಿಂದ ಸುಮಾರು ಎರಡು ಕಿ.ಮೀ. ಮೇಲೆ ಪಶ್ಚಿಮಕ್ಕೆ ದೆಹಲಿ ಸೇತುವೆಯವರೆಗೆ ಕ್ರಮಿಸಿ, ಕಾವೇರಿ ನದಿಯ ಉತ್ತರ ತೀರವನ್ನು ಸೇರಿ ಅಲ್ಲಿಂದ ಪೂರ್ವಕ್ಕೆ ತಿರುಗಿ ಸುಮಾರು ಮೂರು ಕಿ.ಮೀ. ಸಾಗಿ ಈ ಬನ್ನಿಮಂಟಪವನ್ನು ಸೇರಬೇಕಾಗಿತ್ತು. ಈ ಯಾವ ವಿವರಗಳು ಆ ಕಾಲದ ಕೃತಿಗಳಲ್ಲಿ ಉಲ್ಲೇಖವಾಗಿಲ್ಲ. ಗೋವಿಂದ ವೈದ್ಯನ ಕೃತಿಯಲ್ಲಿ ಎಲ್ಲಿಯೂ ನದಿಯನ್ನು ದಾಟಿ ದಸರಾ ಉತ್ಸವದ ಮೆರವಣಿಗೆ ಶಮಿ ಮಂಟಪವನ್ನು ಸೇರಿದಂತೆ ನಮೂದಿತವಾಗಿಲ್ಲ. ಈ ಎಲ್ಲ ಕಾರಣಗಳಲ್ಲದೆ ನವರಾತ್ರಿಯು ಹಿಂಗಾರಿನ ಮಳೆಗಾಲದ ದಿನಗಳಾಗಿರುವ ಹಿನ್ನೆಲೆಯಲ್ಲಿ ಒಂದು ದೊಡ್ಡ ಮಳೆ ಆ ದಿನಗಳಲ್ಲಿ ನದಿಯ ಪ್ರವಾಹದ ಗತಿಯನ್ನೇ ಬದಲಿಸುತ್ತಿತ್ತು. ಈ ಎಲ್ಲ ಕಾರಣಗಳಿಂದಾಗಿ ಪ್ರಸ್ತುತ ಗುರುತಿಸಿರುವ ಶಮಿ ಮಂಟಪವು ಶ್ರೀರಂಗಪಟ್ಟಣವು ರಾಜಧಾನಿಯಾಗಿದ್ದಾಗ ದಸರಾ ಆಚರಣೆಯ ಕಾಲದಲ್ಲಿ ಬಳಸಿದ ಪ್ರಾಚೀನ ಶಮಿ ಮಂಟಪವಲ್ಲ ಎಂದಾಗುತ್ತದೆ. ಇದು ಕೇವಲ ಒಂದು ಪುರಾತನ ದೇವಾಲಯದ ಅವಶೇಷವಷ್ಟೆ. ಪ್ರಾಯಶಃ ಶ್ರೀರಂಗಪಟ್ಟಣದಿಂದ ಮೇಲುಕೋಟೆಗೆ ರಾಜಮುಡಿ, ವೈರಮುಡಿ ಆಭರಣಗಳನ್ನು ಸಾಗಿಸುವಾಗ ಗ್ರಾಮಸ್ಥರು ಅವುಗಳನ್ನು ಅಲ್ಪಕಾಲ ಈ ಮಂಟಪದಲ್ಲಿ ಇರಿಸಿ ಪೂಜೆ ನೆರವೇರಿಸಲು ಅನುವು ಮಾಡಿಕೊಟ್ಟಿರಬೇಕೆನಿಸುತ್ತದೆ. ಆನಂತರ ದೇವರ ಉತ್ಸವ ಇತ್ಯಾದಿ ಕೈಂಕರ್ಯಗಳಿಗೆ ಬಳಸಿರಬಹುದು.

ಈ ಹಂತದಲ್ಲಿ ಶ್ರೀರಂಗಪಟ್ಟಣದಲ್ಲಿ ಶಮಿಮಂಟಪ ಎಲ್ಲಿತ್ತೆಂದು ಹುಡುಕುವ ಮತ್ತು ಗುರುತಿಸುವ ಪ್ರಯತ್ನವನ್ನು ಮತ್ತೆ ಮಾಡಬೇಕಾಗಿದೆ. ಈ ದಿಸೆಯಲ್ಲಿ ನಮಗೆ ಅಂದಿನ ಕಾಲದ ಆಕರಗಳು ಅದರಲ್ಲೂ ಕಂಠೀರವ ನರಸರಾಜ ವಿಜಯ ಹಾಗೂ ಇತರ ಆಕರಗಳು ಸಹಾಯ ಮಾಡುತ್ತವೆ.

ಕಂಠೀರವ ನರಸರಾಜ ವಿಜಯದ 22ನೇ ಸಂಧಿಯಲ್ಲಿ ನಮಗೆ ಶಮಿಮಂಟಪ ಶ್ರೀರಂಗಪಟ್ಟಣದ ಯಾವ ಭಾಗದಲ್ಲಿತ್ತೆನ್ನುವ ಮಾಹಿತಿಯನ್ನು ನೀಡುತ್ತದೆ. ಮುಂದುವರಿದು ರೈಸರು ಬರೆದಿರುವ ಮೈಸೂರು ಗೆಜೆಟಿಯರ್ ಕೃತಿಯಲ್ಲಿ

ಸಹ ಈ ಬಗ್ಗೆ ದಾಖಲಾಗಿದೆ. ಈ ಎಲ್ಲ ಮಾಹಿತಿಯನ್ನು ಕ್ರೋಡೀಕರಿಸಿ, ಶ್ರೀರಂಗಪಟ್ಟಣದಲ್ಲಿನ ಪ್ರಾಚೀನ ಶಮಿ ಮಂಟಪ ಅಥವಾ ಮಹಾನವಮಿ ಮಂಟಪದ ಸ್ಥಳವನ್ನು ನಿಖರವಾಗಿ ಗುರುತಿಸಲು ಪ್ರಯತ್ನಿಸಲಾಗಿದೆ.

ಅರಮನೆಯಿಂದ ಹೊರಡುತ್ತಿದ್ದ ಜಂಬೂಸವಾರಿಯನ್ನು ಗೋವಿಂದ ವೈದ್ಯನು ತನ್ನ ಕೃತಿಯಲ್ಲಿ ವಿವರಿಸಿದ್ದಾನೆ. ಅದನ್ನು ಹೀಗೆ ಗುರುತಿಸಬಹುದು.

ಕಂಠೀರವನು ಅರಮನೆಯ ಮುಂಭಾಗದಲ್ಲಿ ಅಶ್ವವನ್ನೇರಿ ಪೂರ್ವದ ಕೋಟೆಯ ದ್ವಾರವನ್ನು ದಾಟಿ ಅಶ್ವವನ್ನು ಇಳಿದು ಅಲ್ಲಿ ಗಜವನ್ನೇರಿ ಮಹಾನವಮಿ ಮಂಟಪಕ್ಕೆ ತೆರಳುತ್ತಿದ್ದುದನ್ನು ಈ ಕೆಳಗಿನ ಪದ್ಯ ವಿವರಿಸುತ್ತದೆ:

ತುರಗವನಿಳಿದು ಪಟ್ಟದ ಮದದಾನೆಯ
ಸಿರಕೆ ಲಂಘಿಸಿ ತೂಳಿಸುತ
ಹರುಷದೆ ಬೀದಿವರಿಸಿ ಸಂತೋಷವ
ಪಿರಿತು ಪುಟ್ಟಿಸಿದ ನೋಳ್ಪರಿಗೆ ॥ 22/92

ಇದಕ್ಕೆ ಪೂರಕವಾಗಿ, ಕೋಟೆಯ ಪೂರ್ವದಿಕ್ಕಿನಲ್ಲಿ ಶಮೀಮಂಟಪವಿತ್ತೆಂದು ಸಹ ಕಂಠೀರವ ನರಸರಾಜ ವಿಜಯ ಸಾರುತ್ತದೆ:

ಪುರದ ಬಹಿರ್ಭಾಗದ ಪೂರ್ವದೆಸೆಯಲಿ
ಪಿರಿದಪ್ಪ ಶಮಿಯ ಮಂಟಪವ
ಪರಿಪರಿಯಲಿ ಬಹುಸಿಂಗರ ಗೈಸಿದ
ಧುರಧೀರ ಲಿಂಗೆಯಗೌಡ ॥ 22/71

ಈ ಎರಡು ಪದ್ಯಗಳು ಶ್ರೀರಂಗಪಟ್ಟಣದ ಕೋಟೆಯ ಹೊರಭಾಗದಲ್ಲಿ, ಅದರಲ್ಲೂ ಮುಖ್ಯವಾಗಿ ಪೂರ್ವ ದಿಕ್ಕಿನಲ್ಲಿಯೇ ಶಮಿ ಮಂಟಪವಿತ್ತೆನ್ನುವುದನ್ನು ದೃಢಪಡಿಸುತ್ತವೆ.

ಈ ಪ್ರಾಚೀನ ಆಕರಗಳನ್ನು ಆಸರೆಯಾಗಿಟ್ಟುಕೊಂಡು ಇತ್ತೀಚಿನ ಕೃತಿಗಳನ್ನು ಈ ದಿಸೆಯಲ್ಲಿ ಸಮೀಕ್ಷಿಸಿದಾಗ ಬಿ.ಎಲ್. ರೈಸ್‌ರ *ಮೈಸೂರು ಗೆಜೆಟಿಯರ್‌*ನ ಪ್ರಥಮ ಸಂಪುಟದಲ್ಲಿ ನಮಗೆ ಇದರ ಬಗ್ಗೆ ಮಾಹಿತಿ ಲಭ್ಯವಾಗುತ್ತದೆ. ಬಿ.ಎಲ್. ರೈಸ್ ಅವರು ಹೈದರಾಲಿಯು ಸರ್ವಾಧಿಕಾರಿಯಾಗುವುದಕ್ಕೆ ಪೂರ್ವದ ದಿನಗಳಲ್ಲಿ ಶ್ರೀರಂಗಪಟ್ಟಣದಲ್ಲಿ ಉಂಟಾದ ಸೈನಿಕ ಗೊಂದಲವನ್ನು ನಿವಾರಿಸಲು ಎರಡನೆಯ ಕೃಷ್ಣರಾಜ ಒಡೆಯರಿಗೆ ಸಹಕರಿಸಲು ಶ್ರೀರಂಗಪಟ್ಟಣದಲ್ಲಿ ಬೀಡು ಬಿಟ್ಟಿದ್ದಾಗ ನಡೆದ ಸೈನಿಕ ಕಾರ್ಯಾಚರಣೆಯನ್ನು ವಿವರಿಸುವಾಗ ಇಂದಿನ ದರಿಯಾ ದೌಲತ್ ಅರಮನೆಯಿರುವ ಪ್ರದೇಶದಲ್ಲಿ ಮಹಾನವಮಿ ಮಂಟಪವಿದ್ದುದನ್ನು ನಿರ್ಣಾಯಕವಾಗಿ ಹೇಳುವುದರಿಂದ ಅಲ್ಲದೆ ಜಂಬುಸವಾರಿಯ ವರ್ಣನೆಯಲ್ಲಿ ಬರುವ ವರ್ಣನೆಗಳು, ಇಂದು ದರಿಯಾ ದೌಲತ್ ಅರಮನೆಯಲ್ಲಿ ಶಮಿ ಮಂಟಪವಿದ್ದುದು ಖಚಿತವಾಗುತ್ತದೆ.[14] ಹೀಗೆ ಗುರುತಿಸಲು ಆ ಪ್ರದೇಶವು ಹೊಂದಿರುವ ನೀರಿನ ಸೌಕರ್ಯ ಮತ್ತು ಇತರ ವ್ಯವಸ್ಥೆಗಳು ಕಾರಣವಾಗುತ್ತವೆ.

ಕಂಠೀರವ ನರಸರಾಜರು ಕಾವೇರಿ ನದಿಗೆ ಅಡ್ಡಲಾಗಿ ಕಟ್ಟೆಯನ್ನು ಕಟ್ಟಿ ಅಲ್ಲಿಂದ ಕಾಲುವೆಯ ಮೂಲಕ ನದಿಯ ನೀರನ್ನು ಅರಮನೆಯ ಆವರಣಕ್ಕೆ, ರಂಗನಾಥನ ದೇವಾಲಯಕ್ಕೆ ಹಾಗೂ ಶ್ರೀರಂಗಪಟ್ಟಣದ ಇತರ ಪ್ರದೇಶಗಳಿಗೆ ವ್ಯವಸಾಯಕ್ಕೆ ನೀರೊದಗಿಸಲು ಬಂಗಾರದೊಡ್ಡಿ ಕಾಲುವೆಯನ್ನು ನಿರ್ಮಿಸಿದರು. ಇದರ ಬಗೆಗೂ ಕಂಠೀರವ ನರಸರಾಜ ವಿಜಯದಲ್ಲಿ ಉಲ್ಲೇಖಗಳಿವೆ. ಅಲ್ಲದೆ ಈ ಕಾಲುವೆಯ ಒಂದು ಉಪನಾಲೆ ದರಿಯಾ ದೌಲತ್ ಪ್ರದೇಶಕ್ಕೆ ನೀರೊದಗಿಸುತ್ತದೆ. ಅಲ್ಲದೆ ಇದು ಗೌರಿ ಕಡಹುವಿನಲ್ಲಿ ಕಾವೇರಿ ನದಿಯ ಉತ್ತರದ ಕವಲನ್ನು ದಾಟಿ ಸೇರಬಹುದಾದ ಪ್ರದೇಶವಾಗಿದ್ದರಿಂದ,

ದಸರೆಯ ಉತ್ಸವವನ್ನು ವೀಕ್ಷಿಸಲು ಬರುತ್ತಿದ್ದ ಜನರಿಗೆ, ಅಲ್ಲಿ ನೆರೆಯುತ್ತಿದ್ದ ಸೈನಿಕರಿಗೆ, ಮಾಂಡಲೀಕರಿಗೆ, ಸಾಮಂತರಿಗೆ ಬಿಡಾರದ ವ್ಯವಸ್ಥೆ ಮಾಡಲು ಪ್ರಶಸ್ತವಾದ ಸ್ಥಳವಾಗಿದ್ದರಿಂದ ಇಲ್ಲೇ ಶಮಿಮಂಟಪವಿತ್ತೆಂದು ನಂಬಬೇಕಾಗುತ್ತದೆ. ಅಲ್ಲದೆ ಇದರ ಸಮೀಪದಲ್ಲಿಯೇ ಮೂರನೆ ಮೈಸೂರು ಯುದ್ಧದ ಸಂಧಿ ನೆರವೇರಿತೆಂದು ಹೇಳುವ ಪ್ರದೇಶವನ್ನು ಕೌಲ್ ಬಜಾರ್ ಎಂದು ಗುರುತಿಸಲಾಗಿದೆ. ಈ ಎಲ್ಲ ವ್ಯವಸ್ಥೆಯನ್ನು ಗಮನಿಸಿದಾಗ, ಮೈಸೂರು ಅರಸರು ಶ್ರೀರಂಗಪಟ್ಟಣದಲ್ಲಿ ಕ್ರಿ.ಶ. 1610ರಿಂದ 1782ರ ವರೆಗೆ ಇಂದಿನ ದರಿಯಾ ದೌಲತ್ ಅರಮನೆಯಿರುವ ಪ್ರದೇಶದಲ್ಲಿದ್ದ ಶಮಿ ಮಂಟಪದಲ್ಲಿ ಅಥವಾ ಮಹಾನವಮಿ ಮಂಟಪದಲ್ಲಿ ದಸರಾ ಮಹೋತ್ಸವಸಂಬಂಧೀ ಪೂಜೆ ಮತ್ತು ಇತರ ಕೈಂಕರ್ಯಗಳನ್ನು ನೆರವೇರಿಸುತ್ತಿದ್ದರೆಂದು ಒಪ್ಪಿಕೊಳ್ಳಬೇಕಾಗುತ್ತದೆ.

ತಿರುಮಲನು ಪ್ರಾರಂಭಿಸಿದ ದಸರಾ ಮಹೋತ್ಸವವನ್ನು ರಾಜ ಒಡೆಯರು ತಮ್ಮ ಮನೆತನದ ಉತ್ಸವವಾಗಿ 1610ರಿಂದ ಮುಂದುವರಿಸಿಕೊಂಡು ಬಂದರು. ಶೃಂಗೇರಿ, ವಿಜಯನಗರ, ಪೆನುಗೊಂಡೆ, ಶ್ರೀರಂಗಪಟ್ಟಣ ಆನಂತರ ಮೈಸೂರಿಗೆ ದಸರಾ ಆಚರಣೆ ಸಾಗಿಬಂದಿತು. ವಿದ್ಯಾರಣ್ಯರಿಂದ ಆಶೀರ್ವದಿಸಲ್ಪಟ್ಟ, ಹಲವು ಮಹಿಮಾನ್ವಿತರ ಪ್ರೇರಣೆ ಪಡೆದು, ಸಾಮ್ರಾಜ್ಯದ ಪ್ರತೀಕವಾಗಿ, ಪ್ರಾಂತ್ಯದ ಹಿರಿಮೆಯಾಗಿ, ನಂತರ ಸಂಸ್ಥಾನದ ವೈಭವದ ಪ್ರತೀಕವಾಗಿ ಮೆರೆದು, ಏಳುಬೀಳು ಹಾಗೂ ಮಾರ್ಪಾಡುಗಳಿಗೆ ಬಗ್ಗಿ ಮುಂದುವರಿಯುತ್ತಿರುವುದು ಇಂದಿನ ಮೈಸೂರು ದಸರಾ.

ಪರಾಮರ್ಶನಗಳು

1. George Michell, 2010, Architectural Features, in *The Great Platform at Vijayangara,* Anna L. Dallapiccola, Manohar Publishers and Distributors, Delhi, pp.7-18.
2. ARSIE-1893, 585-1008 C.E; SII, Vol. 5, No. 221-1008 C.E.
3. ದೇವರಕೊಂಡಾರೆಡ್ಡಿ, 2000, ಹಂಪಿ ಶಾಸನಗಳು, *ಕ.ವಿ.ಶಾ.ಸಂ. 3,* ಶಾಸನ 255, ಕ್ರಿ.ಶ. 1076.
4. John M. Fritz, George Michell and M.S. Nagaraj Rao, 1984, *The Royal Centre at Vijayanagara Preliminary Report,* Melbourne, Australia, pp.99-103.
5. George Michell, 2010, *Op. Cit,* pp.7-18.
6. Longhurst, A.H., 1917 Rp.1982, *Hampi Ruins, Described and Illustrated,* Asian Educational Services, Madras, pp. 68-70.
7. Henry Heras, 1927, *The Aravidu Dynasty of Vijanayagar,* B.G.Paul & Co., Publishers, Madras, pp. 248-263.
8. *ಅದೇ,* ಹಾಗೂ Hayavadana Rao, 1930, *History of Mysore,* Bangalore, Vol.I., pp.44-80.
9. *ಎ.ಕ.,* ಸಂ.6, ಶ್ರೀರಂಗಪಟ್ಟಣ 6, ಕ್ರಿ.ಶ. 1571.
10. *ಎ.ಕ.,* ಸಂ.6, ಪಾಂಪು., 223, ಕ್ರಿ.ಶ. 1574, ಪಾಂಪು., 230 ಕ್ರಿ.ಶ. 1585
11. ಗೋವಿಂದವೈದ್ಯ, 1971, *ಕಂಠೀರವ ನರಸರಾಜ ವಿಜಯ,* ಆರ್. ಶಾಮಶಾಸ್ತ್ರಿ (ಸಂ.), ಮೈಸೂರು, ಪು. 27–45.
12. ಲ. ನ. ಸ್ವಾಮಿ, ಮತ್ತು ಆರ್. ಗೋಪಾಲ್, 2010, *ನಾಡಹಬ್ಬ ಮೈಸೂರು ದಸರ,* ಮೈಸೂರು, ಪು. 38–39.
13. L.N.Swamy, 1996, *History of Srirangapattana,* Harman Publishing House, New Delhi, pp.30-42.
14. Rice, B.L. 1897, *Gazetteer of Mysore,* London, Vol.I, pp. 378.

7. ಸಾಳುವರ ಕಾಲದ ವಾಸ್ತು ರಚನೆಗಳು

ಡಾ॥ ಎಸ್.ಎನ್. ಶಿವರುದ್ರಸ್ವಾಮಿ

ವಿಜಯನಗರ ಸಾಮ್ರಾಜ್ಯವನ್ನು ಸ್ಥಾಪಿಸಿದ ಸಂಗಮ ವಂಶದ ಅರಸರು ಆಳ್ವಿಕೆಯನ್ನು ವೈಭವದಿಂದ ಹಾಗೂ ಉತ್ತಮವಾಗಿ ಆರಂಭಿಸಿ, ಮುನ್ನಡೆಸಿದರು. ಹದಿನೈದನೇ ಶತಮಾನದ ಕೊನೆಯ ಪಾದದ ವೇಳೆಗೆ ಸಾಮ್ರಾಜ್ಯದ ಆಡಳಿತ ವ್ಯವಸ್ಥೆ ಕುಸಿಯಿತು. ಅರಸರು ಜ್ಞಾತಿಹತ್ಯೆಯಲ್ಲಿ ತೊಡಗಿದರು. ಇದರಿಂದ ಆಡಳಿತ ಮತ್ತಷ್ಟು ಹದಗೆಟ್ಟಿತು. ಬಾಹ್ಯ ಮತ್ತು ಆಂತರಿಕ ಸಮಸ್ಯೆಗಳಿಂದ ವಿಜಯನಗರ ಸಾಮ್ರಾಜ್ಯದಲ್ಲಿ ಅರಾಜಕತೆ ತೀವ್ರವಾಗತೊಡಗಿತು. ಸಂಗಮ ವಂಶದ ಕೊನೆಯ ಅರಸನಾದ ವೀರ ವಿರೂಪಾಕ್ಷರಾಯನು ಇಂತಹ ದುರ್ಬರ ಸ್ಥಿತಿಗೆ ಕಾರಣನಾದ ವ್ಯಕ್ತಿ. ಇವನನ್ನು ಇವನ ಹಿರಿಯ ಮಗನೇ ಕೊಂದುಹಾಕಿದ. ಅರಸನಾಗಿ ಅಧಿಕಾರವಹಿಸಿಕೊಂಡ ಇವನ ಇನ್ನೊಬ್ಬ ಮಗ ಪ್ರೌಢದೇವರಾಯನು ತಂದೆಯಷ್ಟೇ ದುರ್ಬಲನಾದವನು ಹಾಗೂ ದುಷ್ಕೃತ್ಯದಲ್ಲಿ ತೊಡಗಿದ. ಸಾಮ್ರಾಜ್ಯದ ಆಡಳಿತ ವಿಕೋಪಕ್ಕೆ ಹೋದಾಗ, ಚಂದ್ರಗಿರಿಯ ಪ್ರಾಂತಾಧಿಕಾರಿ ಸಾಳುವ ನರಸಿಂಹನು ವಿಜಯನಗರಕ್ಕೆ ಬಂದು ಅಧಿಕಾರವನ್ನು ವಹಿಸಿಕೊಂಡ. ಪ್ರೌಢದೇವರಾಯನು ಅರಮನೆಯಿಂದ ಓಡಿಹೋದ. ನರಸಿಂಗನು ಅವನನ್ನು ಬೆನ್ನಟ್ಟಿ ಹತ್ಯೆಮಾಡಲಿಲ್ಲ. ಇದನ್ನು ಇತಿಹಾಸಕಾರರು ತಿಳಿಸುವಂತೆ ಸಾಮ್ರಾಜ್ಯದ ಅಧಿಕಾರದ ಮೊದಲ ಅಪಹರಣವಾಗಿರಲಿಲ್ಲ. ವಾಸ್ತವವಾಗಿ ಅಧಿಕಾರದ ಅಪಹರಣ ನಡೆದದ್ದು ಸಾಳುವರಿಂದ ತುಳುವ ಅರಸರು ಅಧಿಕಾರವನ್ನು ಕಸಿದುಕೊಂಡಾಗ. ಅಧಿಕಾರದ ಅಪಹರಣದೊಂದಿಗೆ ಹತ್ಯೆಯೂ ನಡೆಯಿತು. ಅಲ್ಲಿಂದ ಮುಂದೆ ತುಳುವರ ಕಾಲದಲ್ಲಿ ಉತ್ತರಾಧಿಕಾರಿಗಳು ಅಧಿಕಾರವನ್ನು ಪಡೆದ ಬಗ್ಗೆ ಎಂದೂ ಸುಗಮವಾಗಿರಲಿಲ್ಲ ಹಾಗೂ ಪ್ರಕ್ಷುಬ್ಧತೆಯಿಂದ ಕೂಡಿತ್ತು. ಮುಂದೆ ನಡೆದ ಸಾಮ್ರಾಜ್ಯದ ನಾಶಕ್ಕೆ ಇದೂ ಒಂದು ಪ್ರಮುಖವಾದ ಕಾರಣ.

ಸಾಳುವ ನರಸಿಂಗನು ಒಂದನೇ ನರಸಿಂಗರಾಯ (1485–1490) ಎಂದು ಹೆಸರಾಗಿದ್ದಾನೆ. ಇವನು ಆಳ್ವಿಕೆ ನಡೆಸಿದ್ದು ಅತ್ಯಲ್ಪ ಕಾಲ. ಇವನು ಸಾಯುವ ಕಾಲಕ್ಕೆ ಇವನ ಮಕ್ಕಳು ಪ್ರಬುದ್ಧರಾಗಿರಲಿಲ್ಲ. ಆದ್ದರಿಂದ ನರಸಿಂಗರಾಯ ಮತ್ತು ಅವನ ಮಕ್ಕಳು ಮಂತ್ರಿ ಈಶ್ವರನಾಯಕ ಮತ್ತು ಅವನ ಮಗ ನರಸನಾಯಕರನ್ನು (ಇವನೇ ಕೃಷ್ಣದೇವರಾಯನ ತಂದೆ) ಅವಲಂಬಿಸಬೇಕಾಯಿತು. ನರಸನಾಯಕ ಮತ್ತು ಅವನ ಮಗ ವೀರನರಸಿಂಹನ ಪಿತೂರಿಯಿಂದ ಸಾಳುವ ನರಸಿಂಗರಾಯನ ಮಗ ಹತ್ಯೆಯಾದನು. ಸಾಳುವ ಎರಡನೇ ನರಸಿಂಗರಾಯನು ಸೇರಿದಂತೆ ಸಾಳುವರ ಆಳ್ವಿಕೆ ವಾಸ್ತವ ಅರ್ಥದಲ್ಲಿ ಕೇವಲ ಹದಿನೈದು ವರ್ಷಗಳು. ಎರಡನೆ ನರಸಿಂಗರಾಯನು ತನ್ನ ಕೊನೆಯ ಐದಾರು ವರ್ಷಗಳ ಆಳ್ವಿಕೆಯಲ್ಲಿ ವೀರನರಸಿಂಹನ ಬಂಧಿಯಾಗಿದ್ದ. ಈ ಕಾಲದಲ್ಲಿ ವಿಜಯನಗರದ ಆಡಳಿತ ಭದ್ರವಾದ ನೆಲೆಗಟ್ಟಿನ ಮೇಲಿರಲಿಲ್ಲ; ಗೊಂದಲದಿಂದ ತುಂಬಿತ್ತು. ಇವರ ಕಾಲದಲ್ಲಿ ಯಾವುದೇ ಉನ್ನತ ವಾಸ್ತು ನಿರ್ಮಾಣವಾಗಲಿಲ್ಲ. ಉನ್ನತ ದೇವಾಲಯಗಳು ಅರಸರ ವೈಭವದ ಪ್ರತೀಕವಾಗಿದ್ದವು. ಉನ್ನತ ದೇವಾಲಯಗಳ ನಿರ್ಮಾಣಕ್ಕೆ ಚಾಲನೆ ನೀಡಿದವರು ತುಳುವ ಅರಸರೆಂದು ಜಾರ್ಜ್ ಮಿಷಲ್ ಹೇಳಿದರೂ, ಅದನ್ನು ಒಪ್ಪುವುದು ಕಷ್ಟವೇ.[1] ಉನ್ನತ ವಾಸ್ತು ನಿರ್ಮಾಣ ಆರಂಭವಾದದ್ದು ಇಮ್ಮಡಿ ದೇವರಾಯನ ಕಾಲದಲ್ಲಿ. ಹಂಪಿಯ ವಿರೂಪಾಕ್ಷ ದೇವಾಲಯದ ಮುಂದಿನ ಬೃಹತ್ ಗೋಪುರದ ಕರ್ತೃ ಇಮ್ಮಡಿ ದೇವರಾಯನೇ.[2] ಸಾಳುವರ ಪ್ರಕ್ಷುಬ್ಧ ಪರಿಸ್ಥಿತಿಯಲ್ಲಿ ನಡೆದ ವಾಸ್ತು ನಿರ್ಮಾಣದ ಚಟುವಟಿಕೆಗಳನ್ನು ಅವಲೋಕಿಸೋಣ.

ವಿಜಯನಗರ ಸಾಮ್ರಾಜ್ಯದ ಕೇಂದ್ರ ಹಂಪಿ ಅಥವಾ ವಿಜಯನಗರ ಪಟ್ಟಣ. ಹಂಪಿಯ ಕೇಂದ್ರ ವಿರೂಪಾಕ್ಷ ದೇಗುಲ. ಸಂಗಮ ವಂಶ ಅಥವಾ ವಿಜಯನಗರದ ಅರಸರು ವಿರೂಪಾಕ್ಷನ ಹೆಸರಿನಲ್ಲಿ ಆಡಳಿತ ನಡೆಸಿದರು. ಇವರು ದಾನಧರ್ಮ ಕೈಂಕರ್ಯಗಳನ್ನು ನಡೆಸಿದ್ದು ಹಂಪೆಯ ವಿರೂಪಾಕ್ಷನ ಸನ್ನಿಧಿಯಲ್ಲಿ. ವಿರೂಪಾಕ್ಷ ದೇಗುಲ ಸಾಮ್ರಾಜ್ಯದ

ಆಡಳಿತ ಮತ್ತು ಧಾರ್ಮಿಕ ಕೇಂದ್ರವಷ್ಟೇ ಆಗಿರದೆ, ಸಾಮ್ರಾಜ್ಯದ ವಾಸ್ತು ನಿರ್ಮಾಣದ ನೆಲೆಯೂ ಆಗಿತ್ತು. ಇಲ್ಲಿ ನಡೆದ ವಾಸ್ತು ಪ್ರಯೋಗಗಳು ಅಂಗೀಕೃತವಾಗಿ ಸಾಮ್ರಾಜ್ಯದ ಎಲ್ಲೆಡೆ ಪ್ರಸಾರವಾದವು. ವಿರೂಪಾಕ್ಷ ದೇಗುಲ ಒಬ್ಬ ಅರಸನ ಕಾಲದಲ್ಲಿ ನಿರ್ಮಾಣವಾಗಿರದೆ, ಸಾಮ್ರಾಜ್ಯದ ಕಾಲದ ಉದ್ದಕ್ಕೂ ಅದರ ಸಂಕೀರ್ಣ ರಚನೆಯಾಯಿತು. ವಿರೂಪಾಕ್ಷ ದೇಗುಲದ ಗರ್ಭಗೃಹ ವಿಜಯನಗರ ಪೂರ್ವಕಾಲದ್ದು. ಅದರ ಪ್ರದಕ್ಷಿಣಪಥ ಮತ್ತು ಅಂತರಾಳ ಹದಿನಾಲ್ಕನೇ ಶತಮಾನದಲ್ಲಿ ರಚನೆಯಾಗಿದೆ. ಅದರ ನಾಲ್ಕು ಸ್ತಂಭಗಳ ರಂಗಮಂಟಪವನ್ನು ಅರಸ ವಿರೂಪಾಕ್ಷನ ಪ್ರಮುಖ ಮಂತ್ರಿಯಾಗಿದ್ದ ಸಾಳುವ ನರಸಿಂಹನು ನಿರ್ಮಿಸಿದಂತೆ ಕಾಣುತ್ತದೆ. ರಂಗಮಂಟಪದ ಉತ್ತರ ದಿಕ್ಕಿನ ಅಧಿಷ್ಠಾನದ ಮೇಲೆ 'ಸಾಳುವ ಮಂತ್ರಿ ನರಸಯ್ಯ' ಎಂಬ ಆಲೇಖವಿದೆ (Label inscription).[3] ಇವನು ಸಾಳುವ ನರಸಿಂಗರಾಯನೇ. ಈ ರಂಗಮಂಟಪ ನಿಶ್ಚಯವಾಗಿ ಹದಿನೈದನೇ ಶತಮಾನದ ವಾಸ್ತು ರಚನೆ ಆಗಿರುವಂತೆ ಕಾಣುತ್ತದೆ. ರಾಜಧಾನಿಯಲ್ಲಿ ಇದು ಸಾಳುವರ ಕೊಡುಗೆ ಆಗಿದೆ. ಅನಂತರ ಈ ರಂಗಮಂಟಪದ ಮುಂದೆ ಕೃಷ್ಣದೇವರಾಯನು ವಿಶಿಷ್ಟವಾಗಿ ಅಲಂಕೃತಗೊಂಡ ಹಾಗೂ ಸಂಯುಕ್ತ ಸ್ತಂಭಗಳಿಂದ ಕೂಡಿದ ಮಹಾರಂಗಮಂಟಪವನ್ನು ಕಟ್ಟಿಸಿದ. ಅಂದಿನಿಂದ ವಿಸ್ತೃತವಾಗಿ ರಚನೆಗೊಂಡ ಮಹಾರಂಗಮಂಟಪಗಳ ನಿರ್ಮಾಣಕಾರ್ಯ ಆರಂಭವಾಯಿತು. ಅವನೇ ಈ ದೇವಾಲಯಕ್ಕೆ ನೂರ್ಕಾಲಮಂಟಪವನ್ನು ನಿರ್ಮಿಸಿ ದೇವಾಲಯವನ್ನು ವಿಸ್ತರಿಸಿದ.[4]

ತಮಿಳು ನಾಡಿನ ಉತ್ತರ ಆರ್ಕಾಟ್ ಜಿಲ್ಲೆಯ ಚೆಯ್ಯರ್ ತಾಲ್ಲೂಕಿನ ತಿರುವತ್ತೂರಿನಲ್ಲಿರುವ ಕನ್ನಡ ಶಾಸನವು ಅಲ್ಲಿನ ದೇವಾಲಯದ ಪುನರ್ ನಿರ್ಮಾಣದ ಆಸಕ್ತಿದಾಯಕವಾದ ಮಾಹಿತಿಯನ್ನು ನೀಡುತ್ತದೆ.[5] ತಿರುವತ್ತೂರು ಗ್ರಾಮದಲ್ಲಿ ಕ್ರಿ.ಶ. 1470ರಲ್ಲಿ ಪ್ರವಾಹ ಬಂದು ಅಲ್ಲಿನ ದೇವಾಲಯ ನಾಶವಾಯಿತು. ಅದನ್ನು ಚನ್ನಯ್ಯನ ಮಗ ಮಾದಿರಾಜನು ಮಹಾಮಂಡಲೇಶ್ವರ ಸಾಳುವ ನರಸಿಂಗಯ್ಯನಲ್ಲಿ ನಿವೇದಿಸಿದ. ನರಸಿಂಗನು ಆ ಗ್ರಾಮದಿಂದ ವಿವಿಧ ತೆರಿಗೆಗಳಿಂದ ಬರಬೇಕಿದ್ದ ನೂರೈವತ್ತು ಹೊನ್ನನ್ನು ನೀಡಿ, ಅಲ್ಲಿ ವೇದಪುರೀಶ್ವರ ದೇವಾಲಯದ ಪುನರ್ ನಿರ್ಮಾಣಕ್ಕೆ ಆದೇಶವನ್ನು ಹೊರಡಿಸಿದ. ದೇವರಿಗೆ ರಥೋತ್ಸವ ಇನ್ನೂ ಮುಂತಾದ ಹಬ್ಬಗಳನ್ನು ಆಚರಿಸಲು ತಿಳಿಸುತ್ತಾನೆ.

ಮಂಡ್ಯ ಜಿಲ್ಲೆ ನಾಗಮಂಗಲ ತಾಲ್ಲೂಕಿನ ದೇವಲಾಪುರ ಗ್ರಾಮದ ಲಕ್ಷ್ಮೀನಾರಾಯಣ ದೇವಾಲಯ ಹದಿನಾಲ್ಕು-ಹದಿನೈದನೇ ಶತಮಾನದ ಕಟ್ಟಡ.[6] ಮಹಾಮಂಡಲೇಶ್ವರ ನರಸಿಂಗಯ್ಯ ಮಹಾ ಅರಸರ ಅಧಿಕಾರಿ ಚಿಕ್ಕ ಅಲ್ಲಪ್ಪ ನಾಯಕನು ಕ್ರಿ.ಶ. 1472ರಲ್ಲಿ ಈ ದೇವಾಲಯಕ್ಕೆ ಬಾಗಿಲವಾಡ ಮತ್ತು ದೀಪಸ್ತಂಭವನ್ನು ನಿರ್ಮಿಸಿಕೊಟ್ಟ.[7] ಆಳುವ ವಿಜಯನಗರದ ಅರಸ ವಿರೂಪಾಕ್ಷನಾದರೂ, ಸಾಳುವ ನರಸಿಂಹನನ್ನು ಮಹಾರಾಜನೆಂದು ಸಂಬೋಧಿಸಲಾಗಿದೆ. ಈ ಸಂಗತಿಯನ್ನು ಮಂಡ್ಯ ಜಿಲ್ಲೆಯ ಇನ್ನಿತರ ಶಾಸನಗಳಲ್ಲೂ ಕಾಣಬಹುದು.[8] ಅರಸ ವಿರೂಪಾಕ್ಷ ಅಧಿಕಾರಕ್ಕೆ ಬಂದ ಕೆಲ ವರ್ಷಗಳಾಗಿದ್ದಾಗಲೇ, ಅವನ ಮಂಡಲೇಶ್ವರ ನರಸಿಂಗನು ಅವನಿಗೆ ಸಮನಾಂತರವಾಗಿ ಬೆಳೆಯುತ್ತಿರುವುದನ್ನು ಗಮನಿಸಬಹುದು.

ಕ್ರಿ.ಶ. 1485 ಮತ್ತು 1486ರ ವೇಳೆಗೆ ಸಾಳುವ ವಂಶದ ನರಸಿಂಗರಾಯನು ವಿಜಯನಗರದ ಅರಸನಾಗಿ ಅಧಿಕಾರವನ್ನು ಪಡೆದುಕೊಂಡಿದ್ದ. ಅನಂತಪುರ ಜಿಲ್ಲೆಯ ಮಡಕಸಿರಾ ತಾಲ್ಲೂಕಿನ ರಾಮಪುರಂನಲ್ಲಿರುವ ರಾಮಸ್ವಾಮಿ (ರಾಮಚಂದ್ರ) ದೇಗುಲದ ಮುಂದಿರುವ ಶಾಸನವು ಈ ದೇವಾಲಯಕ್ಕಾಗಿ ಕಾಲುವೆಯನ್ನು ನಿರ್ಮಿಸಿದ ಸಂಗತಿಯನ್ನು ತಿಳಿಸುತ್ತದೆ.[9] ಈ ಕಾಲದಲ್ಲಿ (1485ರಲ್ಲಿ) ಬಯರಾಜದೇವ ಚೋಳಮಹಾ ಅರಸನ ಮಗ ರಾಯಪ್ಪರಾಜನಿಗೆ ರಾಯದುರ್ಗದ ನಾಯಕತನ ಪ್ರಾಪ್ತವಾಗಿತ್ತು. ಇವನು ದೇವಾಲಯದ ಪಕ್ಕದಲ್ಲಿದ್ದ ಕಣಿವೆ ಪ್ರದೇಶವನ್ನು ಕೊಂಡು ಕಾಲುವೆಯನ್ನು ನಿರ್ಮಿಸಿದ. ಇದನ್ನು ಶಂಕರದೇವ ಕಾಲುವೆ ಎಂದು ಹೆಸರಿಸಲಾಯಿತು. ಇದರಿಂದ ಕಣಿವೆಯನ್ನು ಕೆರೆಯನ್ನಾಗಿ ಪರಿವರ್ತಿಸಿ, ಆಳುವ ಅರಸನ ಹೆಸರಿನಲ್ಲಿ ನರಸಾಂಬುಧಿ ಎಂದು ಕರೆಯಲಾಯಿತು. ಇದನ್ನು ರಾಮಚಂದ್ರ ದೇಗುಲಕ್ಕೆ ಮತ್ತು ಮಧುಸೂಧನಪುರದ ದಶಗ್ರಂಥಿ ನರಸಿಂಹ ಸೋಮಯಾಜಿಯ ಮೂವರು ಮಕ್ಕಳಾದ ನರಸಿಂಹ ಸೋಮಯಾಜಿ,

ಪ್ರಸನ್ನ ಸೋಮಯಾಜಿ ಮತ್ತು ಲಕ್ಷ್ಮಣ ಸೋಮಯಾಜಿಯರಿಗೆ ರಾಯಪ್ಪರಾಜನು ನೀಡಿದ. ಇಲ್ಲಿ ಕೆರೆ ಮತ್ತು ಕಾಲುವೆಯನ್ನು ನಿರ್ಮಿಸಿದ ಸಂಗತಿಯು ಪ್ರಧಾನವಾದುದು.

ಸಾಳುವ ಒಂದನೆ ನರಸಿಂಗರಾಯನು ಸಾಯುವ ವೇಳೆಗೆ (1490) ಅವನ ಮಕ್ಕಳು ವಯಸ್ಕರಾಗಿರಲಿಲ್ಲ. ಅವರಲ್ಲಿ ಯಾರನ್ನು ಅಧಿಕಾರಕ್ಕೆ ತರಬೇಕೆಂಬುದರ ಬಗ್ಗೆ ಗೊಂದಲ–ವಿವಾದಗಳಾದವು. ಸಾಳುವ ಒಂದನೇ ನರಸಿಂಗರಾಯನ ವಿಶ್ವಾಸದ ಮಂತ್ರಿಯಾಗಿದ್ದ ತುಳುವ ನರಸನಾಯಕನು ನರಸಿಂಗನ ಎರಡನೇ ಮಗನನ್ನು ಅಧಿಕಾರಕ್ಕೆ ತಂದ. ಅವನ ಮೊದಲನೇ ಮಗ ಈ ವೇಳೆಗಾಗಲೇ ಕೊನೆಯಾಗಿದ್ದ. ನರಸಿಂಗನ ಎರಡನೇ ಮಗನು ಇಮ್ಮಡಿ ನರಸಿಂಗರಾಯನೆಂದು ಹೆಸರಾಗಿದ್ದಾನೆ. ನರಸನಾಯಕನು 'ರಾಷ್ಟ್ರಕರ್ತ'ನಾಗಿ ಎಲ್ಲ ಅಧಿಕಾರವನ್ನು ಕೈಗೆ ತೆಗೆದುಕೊಂಡ. ಇಮ್ಮಡಿ ನರಸಿಂಗನಾಯಕನು ಕೇವಲ ಹೆಸರಿಗಷ್ಟೇ ಅರಸ. ಮುಂದೆ ಇಮ್ಮಡಿ ನರಸಿಂಗರಾಯನ ನರಸನಾಯಕನ ಮಗ ವೀರನರಸಿಂಹನ ಕೈಲಿ ಕೊಲೆಗೀಡಾದ.

ಇಮ್ಮಡಿ ನರಸಿಂಗರಾಯನ ಕಾಲದಲ್ಲೂ ವಾಸ್ತು ಅಥವಾ ದೇಗುಲಗಳ ನಿರ್ಮಾಣ ಗಣನೀಯವಾಗಿ ನಡೆಯಲಿಲ್ಲ. ಇದಕ್ಕೆ ಅಂದಿನ ಅಸ್ಥಿರ ರಾಜಕೀಯ ಪರಿಸ್ಥಿತಿ ಕಾರಣವಾಗಿತ್ತು. ಇವನ ಕಾಲದಲ್ಲಿ – 1492ರಲ್ಲಿ – ಉಡುಪಿ ಜಿಲ್ಲೆಯ ಅದೇ ತಾಲ್ಲೂಕಿನ ಹಂದಾಡಿ ಗ್ರಾಮದಲ್ಲಿ ಹೊಸಬಣ್ಣ ಶೆಟ್ಟಿಯ ಅಳಿಯ ಸಂಕುಹೆಗ್ಗಡೆಯು ಗೋಪಿನಾಥ ದೇವಾಲಯವನ್ನು ನಿರ್ಮಿಸಿದ.[10] ವಿಜಯನಗರದ ಅಧಿಕಾರಿ ಆಗಿದ್ದ ಬಾರಕೂರು ರಾಜ್ಯವನ್ನು ಆಳುತ್ತಿದ್ದ ಹೊನ್ನ ಕಳಸರಾಯನ ಮಗ ತ್ರಿಯಂಬಕನು ಈ ದೇವರ ಶ್ರೀಬಲಿ ಸೇವೆಗಾಗಿ 200 ಗದ್ಯಾಣಗಳನ್ನು ದಾನವಾಗಿ ನೀಡಿದ.

ಕೋಲಾರ ಜಿಲ್ಲೆಯ ಮಾಲೂರು ತಾಲ್ಲೂಕಿನ ಬೆಳ್ಳೂರು ಗ್ರಾಮದ ಕಣವೇಶ್ವರ ದೇವಾಲಯದ ಮಂಟಪವೊಂದನ್ನು ಇಮ್ಮಡಿ ಸಾಳುವ ನರಸಿಂಗನ ಕಾಲದಲ್ಲಿ ಕಟ್ಟಿಸಲಾಯಿತು.[11] ಅಂದು ಈ ದೇವಾಲಯವನ್ನು ಸೋಮಯ ದೇವಾಲಯ ಎಂದು ಕರೆಯಲಾಗುತ್ತಿತ್ತು. ವಿಜಯನಗರದ ಇಮ್ಮಡಿ ನರಸಿಂಗನ ಅಧಿಕಾರಿ ಪೆರುಮಳದೇವನ ಮಗ ತಿಮ್ಮಯ್ಯನು ಸೋಮಯದೇವಾಲಯದ ಗರ್ಭಗೃಹದ ಮುಂದೆ ಮಂಟಪವನ್ನು ನಿರ್ಮಿಸಿದ ಹಾಗೂ ಮರದ ರಥವನ್ನು ಮಾಡಿಸಿ, ರಥೋತ್ಸವಕ್ಕೆ ನೀಡಿದ. ಬೆಳ್ಳೂರು ಅಥವಾ ಶಾಸನದಲ್ಲಿರುವಂತೆ ಬೆಳಿಯೂರನ್ನು ವಿಷ್ಣುವರ್ಧನ ಚತುರ್ವೇದಿಮಂಗಲವೆಂದು ಕರೆಯಲಾಗುತ್ತಿತ್ತು. ಈ ಕೈಂಕರ್ಯವನ್ನು ಮುಳವಾಗಿಲ ನರಸಣ್ಣರಾವುತನ ಮಗ ರಾಮಪ್ಪರಾವುತನಿಗೆ ಪುಣ್ಯವಾಗಲೆಂದು ಮಾಡಲಾಯಿತು.

ಇಮ್ಮಡಿ ನರಸಿಂಗರಾಯನು ಕ್ರಿ.ಶ. 1506ರ ವೇಳೆಗೆ ಕೊಲೆಯಾದನೆಂಬುದು ಇತಿಹಾಸಕಾರರ ಅಭಿಪ್ರಾಯ.[12] ಆದರೆ ಉಡುಪಿ ಜಿಲ್ಲೆಯಲ್ಲಿ ದೊರೆಯುವ ಎರಡು ಶಾಸನಗಳು ಅವನು 1508 ಮತ್ತು 1509ರವರೆಗೆ ಜೀವಿಸಿದಂತೆ ತಿಳಿದುಬರುತ್ತದೆ. ಉಡುಪಿ ಜಿಲ್ಲೆಯ ಕುಂದಾಪುರ ತಾಲ್ಲೂಕಿನ ಬೈಂದೂರಿನ ಶಯನೇಶ್ವರ ದೇಗುಲದ ಶಾಸನವು ಅವನ ಕಾಲ 1508 ಎಂದು ತಿಳಿಸುತ್ತದೆ.[13] ಇದೇ ಸಮಯದಲ್ಲಿ ಬಾರಕೂರಿನಲ್ಲಿ ಅರಾಜಕತೆ ಉಂಟಾಯಿತು. ಅಲ್ಲಿನ ದೇವಾಲಯಗಳು ಮತ್ತು ಬ್ರಾಹ್ಮಣರಿಗೆ ನೀಡಿದ ದಾನಗಳ ರಕ್ಷಣೆ ಮಾಡುವುದಕ್ಕಾಗಿ ಅರಸನು ತನ್ನ ಅಧಿಕಾರಿ ಬಸವರಸ ಒಡೆಯನನ್ನು ಕಳುಹಿಸಿದ. ಈ ಕಾಲದಲ್ಲಿ ಕೋಟೆ ತಿಮ್ಮಯ್ಯಸೆಟ್ಟಿಯ ಕುಟುಂಬಕ್ಕೆ ಸೇರಿದ ದುಗ್ಗಣಸೆಟ್ಟಿ ಎಂಬುವನು ಬೈಂದೂರಿನಲ್ಲಿ ಮಠವನ್ನು ನಿರ್ಮಿಸಿ ಭೂದಾನವನ್ನು ನೀಡಿದ. ಇಮ್ಮಡಿ ನರಸಿಂಗನ ಅಧಿಕಾರಿ ಮಹಾಮಂಡಲೇಶ್ವರ ಸಂಗೀರಾಯ ಒಡೆಯನ ಮಗ ಇಂಡಗರಸ ಒಡೆಯನು ಹಾಡುವಳ್ಳಿಯನ್ನು ಆಳುತ್ತಿದ್ದ. ಉಡುಪಿ ತಾಲ್ಲೂಕಿನ ಮತ್ತೊಂದು ಶಾಸನವು ಹೊಸಾಳ ಗ್ರಾಮದಲ್ಲಿ 1509ರಲ್ಲಿ ಶಿವಾಲಯವನ್ನು ನಿರ್ಮಿಸಿದ್ದರ ಬಗ್ಗೆ ತಿಳಿಸುತ್ತದೆ.[14] ಇದು ವಿಜಯನಗರದ ಅರಸ ಭುಜಬಲರಾಯನೆಂದು ಶಾಸನವು ತಿಳಿಸುತ್ತದೆ. ಇದು ಸಾಳುವ ಇಮ್ಮಡಿ ನರಸಿಂಗರಾಯನ ಬಿರುದು. ಅಜರನಾರಣಸೆಟ್ಟಿಯ ಅಳಿಯ ಬಸವಿಸೆಟ್ಟಿಯು ಹೊಸಾಳದಲ್ಲಿ ಶಿವಾಲಯವನ್ನು ನಿರ್ಮಿಸಿ, ಭೂದಾನವನ್ನು ನೀಡಿದ. ಭೂದಾನದ ಎಲ್ಲೆಗಳನ್ನು

ವಿಸ್ತೃತವಾಗಿ ಶಾಸನದಲ್ಲಿ ತಿಳಿಸಲಾಗಿದೆ. ಇವೆರಡು ಶಾಸನಗಳನ್ನು ವಾಸ್ತವವಾಗಿ 1506ರಲ್ಲಿ ಹೊರಡಿಸಿರುವ ಸಾಧ್ಯತೆ ಇದೆ.

ಸಾಳುವ ವಂಶ ವಿಜಯನಗರ ಸಾಮ್ರಾಜ್ಯದಲ್ಲಿ ಆಳ್ವಿಕೆ ನಡೆಸಿದ್ದು ಕೇವಲ 20 ವರ್ಷಗಳು (1485–1506). ಅದರಲ್ಲೂ ಅವರ ಆಳ್ವಿಕೆ ನೈಜವಾಗಿ ನಿರ್ವಹಣೆ ಆದದ್ದು ಮೊದಲ ಐದು ವರ್ಷಗಳಲ್ಲಿ, ಒಂದನೇ ನರಸಿಂಗರಾಯನ ಕಾಲದಲ್ಲಿ. ಅವನ ಮಕ್ಕಳು ಅಪ್ರಾಪ್ತರು; ಸಹಜವಾಗಿಯೇ ದುರ್ಬಲರು. ಸುತ್ತಲೂ ಇದ್ದವರು ಬಲಿಷ್ಠರಾದ ಸ್ವಾರ್ಥಪರರಾದ ಅಧಿಕಾರಿಗಳು. ತುಳುವ ನರಸನಾಯಕನ ಕೃಪಾಶ್ರಯದಲ್ಲಿ ಒಂದನೇ ನರಸಿಂಗರಾಯನ ಮಗ ಅಧಿಕಾರ ನಡೆಸಬೇಕಾಯಿತು. ನರಸನಾಯಕನೇ ವಾಸ್ತವವಾಗಿ ವಿಜಯನಗರದ ಅರಸನಾಗಿದ್ದ. ಇಮ್ಮಡಿ ನರಸಿಂಗರಾಯ ಕೇವಲ ನಾಮಾಂಕಿತ ಅರಸ. ಇದರಿಂದ ರಾಜಕೀಯ ಅಭದ್ರತೆ ವಿಜಯನಗರ ಸಾಮ್ರಾಜ್ಯದಲ್ಲಿ ವ್ಯಾಪಿಸಿತ್ತು. ರಾಜರ ವೈಭವವನ್ನು ಪ್ರತಿನಿಧಿಸುವ ಕಟ್ಟಡಗಳು ಈ ಕಾಲದಲ್ಲಿ ನಿರ್ಮಾಣ ಆಗಲೇ ಇಲ್ಲ. ವಾಸ್ತು ನಿರ್ಮಾಣದ ದೃಷ್ಟಿಯಿಂದ ಸಾಳುವರ ಕಾಲ ನೀರಸವಾಗಿತ್ತು. ದೇವಾಲಯಗಳ ನಿರ್ಮಾಣ, ಕೆರೆ ಕಾಲುವೆಗಳು ಮುಂತಾದ ಕಟ್ಟಡಗಳ ರಚನೆ ಸ್ಥಗಿತವಾಯಿತು. ಇದಕ್ಕೆ ಅಂದಿನ ರಾಜಕೀಯ ಪರಿಸ್ಥಿತಿಯೇ ನೇರವಾಗಿ ಕಾರಣ. ಈ ಶಾಸನಗಳ ಸಮೀಕ್ಷೆಯಲ್ಲಿ ಸಾಳುವ ನರಸಿಂಗನು ವಿಜಯನಗರದ ಇತಿಹಾಸದಲ್ಲಿ ಹಂತಹಂತವಾಗಿ ಪ್ರಬಲವಾಗಿರುವುದು ತಿಳಿಯುತ್ತದೆ. ಸಂಗಮ ವಂಶದ ಕಡೆಯ ಅರಸ ವಿರೂಪಾಕ್ಷನ ಆಳ್ವಿಕೆಯ ಆರಂಭದಲ್ಲೇ ಅವನ ಮಂತ್ರಿಯಾಗಿದ್ದ ಸಾಳುವ ನರಸಿಂಗನು ಪ್ರಬಲ ವ್ಯಕ್ತಿಯಾಗಿದ್ದ. ಸಂಗಮರ ಆಳ್ವಿಕೆಯ ಕಾಲದಲ್ಲೇ ಅವರ ರಾಜ್ಯವನ್ನು ನರಸಿಂಗನ ರಾಜ್ಯ ಎಂದು ಕೆಲ ಶಾಸನಗಳಲ್ಲೇ ಕರೆಯಲಾಗಿದೆ. ವಿರೂಪಾಕ್ಷನನ್ನು ಅವನ ಮಗ ಕೊಲೆ ಮಾಡಿದಾಗಲೇ ಸಂಗಮ ವಂಶ ತನ್ನ ಅಸ್ತಿತ್ವವನ್ನು ಕಳೆದುಕೊಂಡಿತು. ಸಹಜವಾಗಿ ಪ್ರಬಲನಾಗಿದ್ದ ಸಾಳುವ ನರಸಿಂಗನು ಸುಲಭವಾಗಿ ಅಧಿಕಾರವನ್ನು ಪಡೆದುಕೊಂಡ. ಅವನ ಮಗ ಅಷ್ಟೇ ಸುಲಭವಾಗಿ ದಿಕ್ಕಿಲ್ಲದೆ ರಾಜ್ಯವನ್ನು ಕಳೆದುಕೊಂಡ.

ಅಡಿ ಟಿಪ್ಪಣಿಗಳು

1. Michell, George, *Temple Building under Vira Narasimha and Krishnadevaraya and formation of An Imperial Architectural Style in Sri Krishnadevaraya,* (Ed.) R. Gopal, 2010, pp. 133-141.
2. ಶಿವರುದ್ರಸ್ವಾಮಿ, ಎಸ್.ಎನ್., "ಹಂಪಿಯ ವಿರೂಪಾಕ್ಷ ದೇಗುಲದ ರಾಯಗೋಪುರ ಮತ್ತು ರಥವೀಧಿ", *ಇತಿಹಾಸ ದರ್ಶನ*, ಸಂ. 17, 2007. ಪು. 163–166.
3. *K.U.E.S.*, Vol. III, 33, pp. 22-23; Fillozat, V., "Two Small Inscriptions from Hampi", *Memory of Dr. D.C. Sircar.*
4. *ARIE,* 1889, 29; *SII,* IV, 258.
5. *ARIE,* 1929-30, 598; *SII,* XXVII, 144.
6. *MAR,* 1940, pp. 46-47.
7. *EC,* VII, (1979), Ng. 158.
8. *EC,* VII (1979), Md. 39 & Mu. 24.
9. *ARIE,* 1917, 710; *SII,* XXVII, 472.
10. *ARIE,* 1929-30, 598; *SII,* XXVII, 156.
11. *EC,* XVII, Mr. 147.

8. ವಿಜಯನಗರ ಕಾಲದ ಶಿಲ್ಪಕಲೆ ಮತ್ತು ಚಿತ್ರಕಲೆ : ಸಾಂಸ್ಕೃತಿಕ ನೋಟ

ಡಾ॥ ಎಸ್. ಚಿನ್ನಸ್ವಾಮಿ ಸೋಸಲೆ

ಸಾಮಾನ್ಯವಾಗಿ ಯಾವುದೇ ಹೊಸ ಸಾಮ್ರಾಜ್ಯವಾಗಲಿ ಅಥವಾ ಸಂಸ್ಥಾನವಾಗಲಿ ಸ್ಥಾಪನೆಯಾದಮೇಲೆ ಮೊದಲು ಕೈಗೊಳ್ಳುತ್ತಿದ್ದಂತಹ ಕಾರ್ಯವೆಂದರೆ ದೇವಾಲಯಗಳ ನಿರ್ಮಾಣ. ಇಲ್ಲವೇ ಆಗಲೇ ಅಸ್ತಿತ್ವದಲ್ಲಿದ್ದಂತಹ ದೇವಾಲಯಗಳಿಗೆ ದತ್ತಿಗಳನ್ನು ಕೊಡುವುದು, ಜೀರ್ಣೋದ್ಧಾರ ಮಾಡಿಸುವ ಕಾರ್ಯದಲ್ಲಿ ತೊಡಗುತ್ತಿದ್ದರು. ಏಕೆಂದರೆ ಹೊಸ ಅರಸರಿಗೆ ಇದರಿಂದ ಸಾಮಾನ್ಯ ಜನತೆಯು ಉತ್ತಮ ಬೆಂಬಲ ನೀಡಲೆಂದು ಕೈಗೊಳ್ಳುತ್ತಿದ್ದಂತಹ ತಂತ್ರವಿರಬಹುದೆನ್ನಬಹುದಾಗಿದೆ. ಇದರ ಜೊತೆಗೆ ತಮ್ಮ ರಾಜಕೀಯ ಚಟುವಟಿಕೆಗಳಿಗೆ ಜನಸಾಮಾನ್ಯರ ಬೆಂಬಲ ಪಡೆಯಲು ಮಾಡುತ್ತಿದ್ದಂತಹ ಯುಕ್ತಿಯೆಂದು ಹೇಳಿದರೆ ತಪ್ಪಾಗದು. ಈ ಮೇಲಿನ ತಂತ್ರಕ್ಕೆ ವಿಜಯನಗರದರಸರು ಹೊರತಾಗಿರಲಿಲ್ಲ. ಸಾಮ್ರಾಜ್ಯದ ಪ್ರಾರಂಭದ ವಂಶದವರಾದಂತಹ ಸಂಗಮರು ಈ ಮೇಲಿನ ತಂತ್ರ ಹಾಗೂ ಉಪಯೋಗವನ್ನು ಹೆಚ್ಚಿನ ಪ್ರಮಾಣದಲ್ಲಿಯೇ ಪಡೆದರೆನ್ನಬಹುದು. ಮೊದಲಿಗೆ ಇವರು ಈಗಾಗಲೇ ರಾಜ್ಯದಾದ್ಯಂತ ವಿಶಾಲವಾಗಿ ತನ್ನದೆಯಾದಂತಹ ಶೈಲಿಯಲ್ಲಿ ಅವರದೇ ಆದಂತಹ ಸಂಸ್ಕೃತಿಯನ್ನು ಧಾರೆಹರಿಸಿದ್ದರು. ಇದರಿಂದಾಗಿ ಇವರೆಲ್ಲರಿಂದಲೂ ಭಿನ್ನವಾದಂತಹ, ವಿಶೇಷವಾದಂತಹ ಶೈಲಿಯ ಹುಡುಕಾಟದಲ್ಲಿ ವಿಜಯನಗರದರಸರು ತೊಡಗಿದರು. ಏಕೆಂದರೆ ಹೊಯ್ಸಳರು ತಮ್ಮ ದೇವಾಲಯಗಳನ್ನು ಬಳಪದ ಕಲ್ಲಿನಿಂದ ನಿರ್ಮಿಸಿದ್ದಾರೆ. ಈ ಕಲ್ಲು ಸ್ವಲ್ಪ ಮೃದುವಾದುದರಿಂದ ಸೂಕ್ಷ್ಮ ಕೆತ್ತನೆಗೆ ಹೆಚ್ಚಿನ ಅನುಕೂಲಕರವಾಗಿದ್ದಿತು. ಅಂದರೆ ಈ ಬಳಪದ ಕಲ್ಲು ದಕ್ಷಿಣ ಕರ್ನಾಟಕದಲ್ಲಿ ಮಾತ್ರ ಹೇರಳವಾಗಿ ದೊರಕುತ್ತಿದ್ದಿತು. ವಿಜಯನಗರ ರಾಜಧಾನಿಯ ಸುತ್ತಲೂ ಸುಲಭವಾಗಿ ದೊರಕುತ್ತಿದ್ದುದ್ದು ವರಟು ಕಲ್ಲುಗಳು ಅಥವಾ ಬೆಣಚುಕಲ್ಲು. ಇದರಿಂದಾಗಿ ಇವರಿಗೆ ಸುಮಾರು ವರ್ಷಗಳು ಯಾವ ತರಹದ ಕಲ್ಲಿನಿಂದ ದೇವಾಲಯಗಳನ್ನು ಕಟ್ಟಿಸಬೇಕೆನ್ನುವ ಪ್ರಶ್ನೆಯನ್ನು ಎದುರಿಸಬೇಕಾಯಿತು. ಕೊನೆಗೆ ದಕ್ಷಿಣ ಕರ್ನಾಟಕದಿಂದ ಬಳಪದ ಕಲ್ಲನ್ನು ಹಂಪಿಯವರೆಗೆ ಸಾಗಿಸುವುದು ಕಷ್ಟಕರವಾದ ಕೆಲಸವಾದುದರಿಂದ ನೈಸರ್ಗಿಕವಾಗಿಯೇ ತನ್ನ ಸುತ್ತಮುತ್ತಲೇ ಹೇರಳವಾಗಿ ದೊರಕುತ್ತಿದ್ದಂತಹ ಬೆಣಚುಕಲ್ಲನ್ನೇ ದೇವಾಲಯದ ನಿರ್ಮಾಣದ ಕಾರ್ಯಕ್ಕೆ ಉಪಯೋಗಿಸಲು ನಿರ್ಧರಿಸಲಾಯಿತು. ಈ ನಿರ್ಧಾರದಿಂದಾಗಿಯೇ ಇಂದಿಗೂ ನಾವು ನೋಡುತ್ತಿರುವಂತಹ, ನೋಡಲೇಬೇಕಾದಂತಹ ಬೃಹತ್ ದೇವಾಲಯಗಳು ಹಂಪಿಯಲ್ಲಿ ನಿರ್ಮಾಣವಾದದ್ದು. ಅಂದು ಕಂಗೊಳಿಸಿ ಇಂದಿಗೂ ಅದರ ಕಂಪನ್ನು, ಇತಿಹಾಸವನ್ನು ಜ್ಞಾಪಿಸುತ್ತಿರುವುದು.

ಡಾ॥ ಎಸ್. ರಾಜಶೇಖರ್‌ರವರು ಹೇಳುವ ಹಾಗೆ, ವಿಜಯನಗರದರಸರಿಗಿಂತಲೂ ಹಿಂದೆಯೇ ಹಂಪಿಯ ಹೇಮಕೂಟ ಬೆಟ್ಟದ ಮೇಲೆ ಅನೇಕ ಬೆಣಚುಕಲ್ಲಿನ ದೇವಾಲಯಗಳು ನಿರ್ಮಾಣವಾಗಿದ್ದವು. ಏಕೆಂದರೆ ವಿಜಯನಗರ ಸ್ಥಾಪನೆಯ ಕೆಲವೇ ಕೆಲವು ವರ್ಷಗಳ ಹಿಂದೆಯಷ್ಟೆ ಹೇಮಕೂಟದಲ್ಲಿಯೇ ವೀರ ಕಂಪಿಲರಾಯನು ತ್ರಿಕೂಟ ದೇವಾಲಯವೊಂದನ್ನು ನಿರ್ಮಿಸಿದ್ದನು ಎಂಬುದಕ್ಕೆ ಶಾಸನಾಧಾರಗಳಿವೆ ಎಂದು ವಿವರಿಸುತ್ತಾರೆ. ಇದು ಸತ್ಯವೆನ್ನಬಹುದು. ಅವರೇ ಹೇಳುವ ಹಾಗೆ ಪ್ರಾರಂಭದಲ್ಲಿ ವಿಜಯನಗರದ ಅರಸರು ಸಾಮ್ರಾಜ್ಯದ ವಿಸ್ತರಣೆಯಲ್ಲಿ ತೊಡಗಬೇಕಾಯಿತು. ಉತ್ತರದಿಂದ ಮುಸಲ್ಮಾನರು, ಸುತ್ತಮುತ್ತಲಿನ ಸಂಸ್ಥಾನಗಳು, ಪಾಳೇಗಾರರನ್ನು ಸೋಲಿಸುವ ಸಲುವಾಗಿ ಅಪಾರವಾದಂತಹ ಹಣದ ಅವಶ್ಯಕತೆ ಇದ್ದಿತೆಂದು ಆದ್ದರಿಂದ ಕಡಿಮೆ ಖರ್ಚಿನಲ್ಲಿ ಉತ್ತಮವಾಗಿ ಬಾಳಿಕೆ ಬರುವಂತಹ ಬೆಣಚುಕಲ್ಲಿನ ದೇವಾಲಯಗಳು ಹಾಗೂ ಸ್ಮಾರಕಗಳ ನಿರ್ಮಾಣವೇ ಸರಿ ಎಂದು ನಿರ್ಧರಿಸಿ ಸಾಧ್ಯವಾಗಿಸಿದಂತೆ ಕಂಡುಬರುತ್ತದೆ. ಈ ನಡುವೆ ಕ್ರಿ.ಶ. 1348ರ ತರುವಾಯದಿಂದಲೇ ವಿಜಯನಗರದರಸರು ತಮಿಳು ಪ್ರದೇಶಗಳನ್ನು ತಮ್ಮ ಅಧೀನಕ್ಕೆ ತೆಗೆದುಕೊಂಡರೆಂದು ಹೇಳಬಹುದು. ಕ್ರಿ.ಶ. 1363ರಲ್ಲಿ ವೀರ ಕಂಪಣ್ಣನು ಸಂಭುವರಾಯ ಅರಸ ರಾಜಾನಾರಾಯಣನನ್ನು ಸೋಲಿಸಿ ಮಧುರೈಯನ್ನು ವಶಪಡಿಸಿಕೊಂಡನು. (ಇದರ ಬಗ್ಗೆ ಅವನ ಪತ್ನಿಯೇ ರಚಿಸಿರುವಂತಹ ಸಂಸ್ಕೃತ ಭಾಷೆಯ

"ವೀರ ಕಂಪಣ್ಣರಾಯಚರಿತಂ" ಮಧುರವಿಜಯಂ, ಹೆಚ್ಚಿನ ಬೆಳಕನ್ನು ಚೆಲ್ಲುತ್ತದೆ). ಇದರಿಂದಾಗಿ ಸುಮಾರು ಕ್ರಿ.ಶ. 1371ರ ಹೊತ್ತಿಗೆ ದಕ್ಷಿಣ ಭಾರತದ ಅದರಲ್ಲಿಯೂ ತಮಿಳು ಪ್ರದೇಶಗಳು ವಿಜಯನಗರದರಸರ ಆಳ್ವಿಕೆಗೆ ಒಳಪಟ್ಟಿದ್ದಿತ್ತು. ಅಲ್ಲಿ ಮೊದಲಿಗೆ ತಮಿಳುನಾಡಿನ ಅನೇಕ ದೇವಾಲಯಗಳನ್ನು ಜೀರ್ಣೋದ್ಧಾರ ಮಾಡಿಸುವ ಕಾರ್ಯವನ್ನು ಕೈಗೊಂಡು ಜನರ ಪ್ರೀತಿ ಹಾಗೂ ಸಹಾನುಭೂತಿಯನ್ನು ಸಂಪಾದಿಸಲು ಪ್ರಾರಂಭಿಸಿದರು. ಹಿಂದೆ ಇದ್ದಂತಹ ತಮಿಳುನಾಡಿನ ದೇವಾಲಯಗಳು ಚೋಳರು ಹಾಗೂ ಪಾಂಡ್ಯರಿಂದ ನಿರ್ಮಾಣವಾಗಿದ್ದವಾಗಿದ್ದು ಅವು ಸಹ ಬಹುತೇಕ ಬೆಣಚುಕಲ್ಲಿನಿಂದ ನಿರ್ಮಿತವಾದವುಗಳೇ ಆಗಿದ್ದವು. ಈ ದೇವಾಲಯಗಳ ಸೌಂದರ್ಯ, ವಿನ್ಯಾಸ ಮತ್ತು ವಿಶಿಷ್ಟ ಶೈಲಿಯಿಂದ ವಿಜಯನಗರದರಸರು, ಸಾಮಂತರು, ದಂಡನಾಯಕರು ಆಕರ್ಷಿತರಾದರು. ಅದರಿಂದಾಗಿಯೇ ವಿಜಯನಗರದ ಅರಸರು ಬೆಣಚುಕಲ್ಲಿನ ದೇವಾಲಯಗಳ ನಿರ್ಮಾಣಮಾಡಲು ನಿರ್ಧರಿಸಿದಾಗ ಸಹಜವಾಗಿಯೇ ತಮ್ಮ ದೇವಾಲಯಗಳನ್ನು ತಮಿಳು ವಾಸ್ತುಶೈಲಿ, ಎಂದರೆ ದ್ರಾವಿಡ ಶೈಲಿಯಲ್ಲಿ ನಿರ್ಧರಿಸಿದರು. ರಾಜಧಾನಿ ಹಂಪಿಯಲ್ಲಿ ಈ ಶೈಲಿಯ ದೇವಾಲಯಗಳನ್ನು ನಿರ್ಮಿಸಲು ತಮಿಳುನಾಡಿನಿಂದಲೇ ಶಿಲ್ಪಿಗಳನ್ನು ಕರೆತಂದಿರಬಹುದೆಂದು ಕೆಲವು ವಿದ್ವಾಂಸರು ಅಭಿಪ್ರಾಯಪಡುತ್ತಾರೆ.

ಮೇಲೆ ತಿಳಿಸಿದಂತೆ ವಿಜಯನಗರದ ಅರಸರ ಕಾಲದಲ್ಲಿಯೇ ಕನ್ನಡ ನಾಡಿನಲ್ಲಿ ದ್ರಾವಿಡ ಶೈಲಿಯ ದೇವಾಲಯಗಳು ನಿರ್ಮಾಣವಾಗಿರಲಿಲ್ಲ. ಅವರಿಗಿಂತಲೂ ಪೂರ್ವದಲ್ಲಿಯೇ ಅಂದರೆ ಹೊಯ್ಸಳರು, ನೊಳಂಬರು, ಚೋಳರು ಕರ್ನಾಟಕದ ಪ್ರದೇಶಗಳನ್ನು ಆಳುವಾಗ ಮೇಲ್ಕಂಡ ಶೈಲಿಯಲ್ಲಿ ಅನೇಕ ದೇವಾಲಯಗಳನ್ನು ನಿರ್ಮಾಣಗೊಳಿಸಿದ್ದಾರೆ. ಉದಾ: ಕೋಲಾರದ ಕೋಲಾರಮ್ಮ ದೇವಸ್ಥಾನ; ತಲಕಾಡಿನ ಕೀರ್ತಿನಾರಾಯಣ ದೇವಾಲಯ (ಕ್ರಿ.ಶ. 1117); ತಲಕಾಡಿನ ಈ ದೇವಾಲಯವೂ ಬೆಣಚುಕಲ್ಲಿನಿಂದಲೇ ನಿರ್ಮಿತವಾಗಿದೆ; ಕಂಬದಹಳ್ಳಿಯ ಪಂಚಕೂಟ ಬಸದಿಗಳು; ಆವನಿಯ ಲಕ್ಷ್ಮಣೇಶ್ವರ, ರಾಮೇಶ್ವರದ ದೇವಾಲಯಗಳು ದ್ರಾವಿಡ ಶೈಲಿಯಲ್ಲಿಯೇ ಇರುವುದು ಕಂಡುಬರುತ್ತದೆ. ಅಷ್ಟೇ ಅಲ್ಲದೆ ಕ್ರಿ.ಶ. 1103ರಲ್ಲಿ ಚೋಳ ಅರಸ ರಾಜೇಂದ್ರ ಚೋಳನ ದಂಡನಾಯಕನೊಬ್ಬನಿಂದ ಜೀರ್ಣೋದ್ಧಾರಗೊಂಡಂತಹ ಕೋಲಾರದ ಕೋಲಾರಮ್ಮ ದೇವಾಲಯ, ಮಾಲೂರು ಪಟ್ಟಣದಲ್ಲಿರುವ ನಾರಾಯಣ ದೇವಾಲಯ; ತಲಕಾಡಿನ ರಾಜರಾಜೇಶ್ವರಿ ದೇವಾಲಯ; ಮಾರೆಹಳ್ಳಿಯ ಲಕ್ಷ್ಮೀನರಸಿಂಹ ದೇವಾಲಯ ಮತ್ತು ಪುಂಗನೂರಿನ ಗೋಪಿಕೃಷ್ಣ ದೇವಾಲಯ; ತಿಪಟೂರಿನಲ್ಲಿರುವ ರಾಜಾಧಿರಾಜನ ಕಾಲದಲ್ಲಿ ಕಟ್ಟಿರಬಹುದಾದಂತಹ ಚೋಳೇಶ್ವರ ದೇವಾಲಯ; ಮೊದಲನೆಯ ಕುಲೋತ್ತುಂಗನ ಕಾಲದಲ್ಲಿ ನಿರ್ಮಿಸಿದ್ದಂತಹ ಕಣ್ಣಂಬಾಡಿಯ ಕಲ್ಲೇಶ್ವರ ದೇವಾಲಯ; ಯಳಂದೂರಿನ ಸೋಮೇಶ್ವರ ದೇವಾಲಯ; ಎಡತೊರೆಯ ಅರ್ಕೇಶ್ವರ ಮತ್ತು ವಿಘ್ನೇಶ್ವರ ದೇವಾಲಯ; ಉತ್ತನೂರಿನ ವರದರಾಜ ದೇವಾಲಯ; ತಿರುಮಕೂಡಲು ನರಸೀಪುರದ ಅಗಸ್ತ್ಯೇಶ್ವರ ದೇವಾಲಯ; ಸೋಸಲೆಯ ಹೊನ್ನದೇವಿ ದೇವಾಲಯಗಳೆಲ್ಲವೂ ದ್ರಾವಿಡಶೈಲಿಯ ದೇವಾಲಯಗಳೇ.

ದೇವಾಲಯಗಳ ನಿರ್ಮಾಣದಲ್ಲಿ ನಮ್ಮ ಕರುನಾಡಿನ ಸಂಸ್ಕೃತಿಯು ಹಿಂದಿನ ಕಾಲದಿಂದಲೂ ಅನುಸರಿಸಿಕೊಂಡು ಬಂದಿರುವಂತಹ ಶೈಲಿಯನ್ನು ಮೂರು ವಿಭಾಗಗಳಾಗಿ ವಿಂಗಡಿಸಬಹುದು.

1. **ನಾಗರ ಶೈಲಿ:** ಅಂದರೆ ಬುಡದಿಂದ ತುದಿಯವರೆವಿಗೂ ಚೌಕೋನವಾಗಿರುವುದು (ಕೆಳಗಿನಿಂದ ಮೇಲಿನವರೆವಿಗೂ)

2. **ದ್ರಾವಿಡ ಶೈಲಿ:** 'ಗ್ರೀವ'ದಿಂದ ಮೇಲಕ್ಕೆ ಆರು ಅಥವಾ ಎಂಟು ಮುಖಗಳಿರುವುದು (ಗರ್ಭಗುಡಿಯ ಮೇಲಿನ ಕಟ್ಟಡದಿಂದ)

3. **ವೇಸರ ಶೈಲಿ:** ದೇವಾಲಯದ ಶೈಲಿಯೇ ವೃತ್ತಾಕಾರವಾಗಿರುವುದು ('ಗ್ರೀವ'ದಿಂದ ಮೇಲೆ ವೃತ್ತಾಯತ, ಅರ್ಧವೃತ್ತ, ಗಜಪೃಷ್ಠ, ದ್ವಾಶ್ರವೃತ್ತ) ಈ ರೀತಿಯ ಎಲ್ಲಾ ದೇವಾಲಯಗಳನ್ನು ವೇಸರ ಶೈಲಿ ಎಂದು ಕರೆಯುತ್ತಾರೆ.

ಇದರಲ್ಲಿ ವಿಜಯನಗರದ ಅರಸರು ದ್ರಾವಿಡ ಶೈಲಿಯನ್ನು ಅನುಸರಿಸಿಕೊಂಡು ಬೃಹತ್ ದೇವಾಲಯಗಳನ್ನು ನಿರ್ಮಿಸಲು ಪ್ರಾರಂಭಿಸಿದರು. ಹಾಗೆಯೇ ಹಿಂದೆ ಇದ್ದಂತಹ ಹಳೇ ದೇವಾಲಯಗಳ ಜೀರ್ಣೋದ್ಧಾರದ ಕಾರ್ಯವೂ

ನಡೆಯಲು ಪ್ರಾರಂಭವಾಯಿತು. ವಿಜಯನಗರದ ಅರಸರು ದೇವಾಲಯಗಳನ್ನು ವಿಶಾಲವಾದಂತಹ ಜಾಗದಲ್ಲಿ ವಿಸ್ತಾರವಾಗಿ ನಿರ್ಮಿಸುತ್ತಿದ್ದರು. ಕಾರಣವೆಂದರೆ ಅಂದು ಪ್ರತಿಯೊಂದು ಧಾರ್ಮಿಕ ಕಾರ್ಯಾಚರಣೆಗಳು, ರಾಜ, ಯುವರಾಜರ ಪಟ್ಟಾಭಿಷೇಕಗಳು, ರಾಜಪರಿವಾರದವರ ಮದುವೆ, ಸಮಾರಂಭಗಳು, ನಾಡ ಹಬ್ಬಗಳು, ಸಂಗೀತ, ನಾಟ್ಯ ಪ್ರದರ್ಶನಗಳೆಲ್ಲವೂ ಈ ದೇವಾಲಯಗಳಲ್ಲಿಯೇ ನಡೆಸಲಾಗುತ್ತಿದ್ದುದರಿಂದ ಚಿಕ್ಕದೇವಾಲಯಗಳು ಸಾಲದಾಗುತ್ತಿತ್ತು. ಆದ್ದರಿಂದ ವಿಜಯನಗರದ ಅರಸರು ಬೃಹತ್ ದೇವಾಲಯಗಳನ್ನು ವಿಸ್ತಾರವಾಗಿ ನಿರ್ಮಿಸಲು ಎಡೆಮಾಡಿದರೆನ್ನಬಹುದು.

ಸಾಂಸ್ಕೃತಿಕ ಜೀವನದ ಮೇಲೆ ಬೆಳಕು ಚೆಲ್ಲುವ ವಾಸ್ತುಶಿಲ್ಪ ಸಂಸ್ಕೃತಿ

ಶತಮಾನಗಳಿಂದಲೂ ಕರ್ನಾಟಕದಲ್ಲಿಯೇ ಅಲ್ಲದೆ ಭಾರತ ದೇಶದಲ್ಲಿಯೇ ದೇವಾಲಯವು ಒಂದು ಸಾಮಾಜಿಕ ಸಂಸ್ಥೆಯಾಗಿ ಬೆಳೆದುಬಂದಿದೆ. ಏಕೆಂದರೆ ದೇವಾಲಯವೇ ಅಂದು ವಿದ್ಯಾಕೇಂದ್ರ, ಧಾರ್ಮಿಕ ಕೇಂದ್ರ ಹಾಗೂ ಸಂಗೀತ ಮುಂತಾದ ಲಲಿತಕಲೆಗಳಿಗೆ ಆಶ್ರಯ ನೀಡುವ ತಾಣವಾಗಿದ್ದಿತು. ಇದಕ್ಕಾಗಿಯೇ ಇವುಗಳಿಗೆ ಹೆಚ್ಚಿನ ಮಹತ್ವ ಕೊಡಲಾಗಿದ್ದಿತು. ಜೀವನಕ್ಕೆ ಅವಲಂಬಿಸಿರುವಂತಹ ಮನೆಗಳಲ್ಲಿ, ರಾಜಧಾನಿಯಲ್ಲಿ ಅರಮನೆಗಳು ಶಾಶ್ವತವಾಗಿ ಉಳಿಯಬಹುದಾದಂತಹ ಕಲ್ಲಿನ ಕಟ್ಟಡಗಳಾಗಿರಲಿಲ್ಲ. ಆದರೆ ದೇವಾಲಯಗಳನ್ನು ಮಾತ್ರ ಶಾಶ್ವತವಾಗಿ ಉಳಿಯಲು ಕಲ್ಲಿನಿಂದ ಕಟ್ಟಿಸಿದರು ಇದಕ್ಕೆ ವಿಜಯನಗರದ ಸಾಮ್ರಾಜ್ಯದ ಹಂಪಿಯಲ್ಲಿ ಕಂಡುಬರುವಂತಹ ದೇವಾಲಯಗಳೇ ಸಾಕ್ಷಿ. ಇದಕ್ಕೆ ನಿದರ್ಶನವೆಂಬಂತೆ ರಾಜರ ಅರಮನೆಗಳೆಲ್ಲವೂ ನೆಲಸಮವಾಗಿರುವುದು ಕಂಡುಬರುತ್ತದೆ.

ಇಂದು ನಾವು ದೇವಾಲಯಗಳನ್ನು ಅಧ್ಯಯನಮಾಡುವಾಗ ದೇವಾಲಯದ ಮೇಲಿರುವ ಪೂಜ್ಯತೆ ಹಾಗೂ ಭಕ್ತಿಯಿಂದಾಗಿ ಅದನ್ನು ನಮ್ಮ (ಮಾನವ) ದೇಹದ ಭಾಗಗಳೊಂದಿಗೆ ಗುರ್ತಿಸಿಕೊಳ್ಳುವುದು ವಾಡಿಕೆಯಾಗಿದೆ. ಪಾದ, ಚರಣ, ಅಂಘ್ರಿ, ಜಂಘ, ಕಟಿ, ಕುಕ್ಷಿ, ಗ್ರೀವ, ಕಂಠ, ಶಿಖರ, ಶಿರ, ಮಸ್ತಕ, ಮುಖ, ವಕ್ತ್ರ, ನಾಸಿಕ ಇತ್ಯಾದಿ ಹೆಸರುಗಳನ್ನು ಕೊಟ್ಟಿರುವುದು ಕಂಡುಬರುತ್ತದೆ. ಈ ಮೇಲಿನ ಹೆಸರುಗಳನ್ನು ಗುರ್ತಿಸುವುದಕ್ಕೂ ಮೊದಲು ಅಸ್ತಿತ್ವಕ್ಕೆ ಬಂದುದು ಕೇವಲ ಗರ್ಭಗೃಹ ಮಾತ್ರ. ದೇವರನ್ನು ಈ ಸಣ್ಣ ಕೋಣೆಯಲ್ಲಿ ಇಟ್ಟು ಪೂಜಿಸುತ್ತಿದ್ದರು. ಈ ಗರ್ಭಗೃಹದ ಮೇಲೆಯೇ ಒಂದು ಶಿಖರವನ್ನು ಎತ್ತರಿಸಿ ಕಟ್ಟುತ್ತಿದ್ದರು. ಇದಕ್ಕೆ ವಿಮಾನ ಎಂದು ಹೆಸರು. ಕಟ್ಟಡದ ತಳಹದಿಯಿಂದ ಪ್ರಾರಂಭವಾಗಿ ಭಿತ್ತಿ (ಗೋಡೆ), ಪದ (ಕಂಬ), ಬೋದಿಗೆ (ಪ್ರಸ್ತರ), ಕಂಠ (ಗ್ರೀವ) ಮತ್ತು ಶಿಖರಗಳನ್ನೊಳಗೊಂಡ ಎಲ್ಲ ಭಾಗಗಳಿಗೂ ವಿಮಾನವೆಂದು ಹೆಸರಿದೆ. ಶಿಖರದ ಮೇಲೆ ಸ್ತೂಪಿ ಇರುತ್ತದೆ. ಇದು ಕವುಚಿದ ಬೋಗುಣಿ ಅಥವಾ ಗಂಟೆಯಾಕಾರದಲ್ಲಿದ್ದು ಮೇಲುಗಡೆ ಒಂದು ಕಳಶವಿರುತ್ತದೆ. ಶಿಖರದ ಬುಡದಲ್ಲಿ ಮುಂದಕ್ಕೆ ಚಾಚಿದ ಭಾಗವಿದ್ದು ಅದರ ಮೇಲೆ ತೆರೆದ ಬಾಯಿ ನರಸಿಂಹ ಮುಖದಂತಹ ಆಕೃತಿ ಇರುತ್ತದೆ. ಇದಕ್ಕೆ ಕೀರ್ತಿಮುಖ ಎಂದು ಕರೆಯಲಾಗಿದ್ದು, ಈ ಕೀರ್ತಿಮುಖದ ಮಧ್ಯೆ ಒಮ್ಮೊಮ್ಮೆ ಶಿಲ್ಪಗಳನ್ನು ಕೆತ್ತಿರುವುದು ಕಂಡುಬರುತ್ತದೆ. ಗರ್ಭಗೃಹದ ಮುಂದಕ್ಕೆ ಹೊಂದಿಕೊಂಡಂತಿರುವುದು ಅಂತರಾಳ. ಇದು ಸಾಮಾನ್ಯವಾಗಿ ಆಯತಾಕಾರವಾಗಿರುತ್ತದೆ. ಇದನ್ನೇ ಸುಕನಾಸಿಯೆಂದೂ, ಅರ್ಧಮಂಟಪವೆಂದೂ ಕರೆಯುವ ರೂಢಿ ಇದೆ. ನವರಂಗ ಎಂಬುದು ಈ ಅಂತರಾಳದ ಮುಂದುಗಡೆಗೆ ಸೇರಿಸಲಾದ ಭಾಗ. ಮೇಲೆ ವರ್ಣಿಸಿರುವ ಎಲ್ಲಾ ರೀತಿಯ ದೇವಾಲಯಗಳೂ ವಿಜಯನಗರದ ಹಿಂದಿನ ಕಾಲದ ವಾಸ್ತುಶಿಲ್ಪದ ಕೆಲವು ಪ್ರಮುಖ ಲಕ್ಷಣಗಳೆಂದು ಹೇಳಬಹುದಾಗಿದೆ.

ವಿಜಯನಗರದರಸರ ಕಾಲದಲ್ಲಿ ಮೇಲಿನವುಗಳೆಲ್ಲ ಕೆಲವು ಬದಲಾವಣೆಗಳಾದುವಲ್ಲದೆ, ಹಲವಾರು ಹೊಸ ಹೊಸ ಅಂಶಗಳೂ ಸೇರಿಕೊಂಡು "ವಿಜಯನಗರ ಶೈಲಿ" ಎಂಬ ಹೊಸ ಶೈಲಿಯನ್ನೇ ಹುಟ್ಟುಹಾಕಿತೆನ್ನಬಹುದು. ಇತಿಹಾಸದಿಂದ ನಮಗೆಲ್ಲ ತಿಳಿದಿರುವ ಹಾಗೆ ಹಿಂದೂಧರ್ಮವನ್ನು ರಕ್ಷಿಸಲೆಂದು ಈ ಹೊಸ ಸಾಮ್ರಾಜ್ಯ ಹುಟ್ಟಿಕೊಂಡಿತು ಎಂಬುದನ್ನು, ಹಾಗೂ ಧರ್ಮಪ್ರಚಾರಕ್ಕಾಗಿ ದೇವಾಲಯಗಳನ್ನು ಮಾಧ್ಯಮಗಳಾಗಿ ಉಪಯೋಗಿಸಿಕೊಂಡಿರುವುದು ತಿಳಿದಿರುವ ವಿಷಯವೇ. ಇದನ್ನು ಗಮನಿಸಿದರೆ ಹಿಂದೂ ಸಂಸ್ಕೃತಿಯ ಎಲ್ಲ ವೈಶಿಷ್ಟ್ಯಗಳನ್ನೂ ಸಂರಕ್ಷಿಸಿ, ಪುನಶ್ಚೇತನಗೊಳಿಸಿ

ವೈಭವೋಪೇತವಾಗಿ ಮಾಡುವುದು ಅಂದಿನ ಅರಸರ ಪ್ರಮುಖ ಕರ್ತವ್ಯವಾಗಿದ್ದಿತ್ತು. ಅದಕ್ಕಾಗಿಯೇ ಸಂಗೀತ, ಲಲಿತಕಲೆ ಮುಂತಾದವುಗಳಿಗೆ ವಿಶೇಷವಾದಂತಹ ಪ್ರೋತ್ಸಾಹ ನೀಡಲಾಯಿತೆನ್ನಬಹುದು. ದೇವಾಲಯದಲ್ಲಿ ದುಃಖ ಮತ್ತು ರೌದ್ರಕರವಾದಂತಹ ಪ್ರಸಂಗಗಳನ್ನು ಚಿತ್ರಿಸಬಾರದೆಂದೂ ನಮ್ಮ ಹಿರಿಯರ ದೃಷ್ಟಿಯಲ್ಲಿ ದೇವಾಲಯಗಳು ಸಕಲ ಕಲಾ ಪ್ರದರ್ಶನ ಶಾಲೆಗಳಾದುದರಿಂದ ಅಲ್ಲಿ ಕಾಮ (ಮಿಥುನ ಶಿಲ್ಪ) ಕಲಾ ಪ್ರದರ್ಶನಕ್ಕೂ ವಿಜಯನಗರದ ಅರಸರು ಅವಕಾಶ ಕಲ್ಪಿಸಿದ್ದರು. ಹಾಗೆಯೇ ಉತ್ಕೃಷ್ಟವಾದಂತಹ ಕಲೆಯಲ್ಲಿಯೇ ನಿಜವಾದಂತಹ ದೇವಾಂಶವಿದೆ. ಇದು ಎಂದೆಂದಿಗೂ ಆನಂದದಾಯಕವಾದದ್ದು ಹಾಗೂ ನಿಷ್ಠೆಗೆ ಪ್ರಮುಖ ಸಾಧನವಾದುದೆನ್ನಬಹುದು. ಇದಕ್ಕೆ ಸಾಕ್ಷಿಯೆಂಬಂತೆ ಇಂದಿಗೂ ಹಂಪಿಯ ದೇವಾಲಯಗಳಲ್ಲಿ ಶಿಲ್ಪ, ಚಿತ್ರ, ನೃತ್ಯ, ನಾಟ್ಯಗಳು ಅವ್ಯಕ್ತ ಸೌಂದರ್ಯವನ್ನು ವ್ಯಕ್ತಗೊಳಿಸುತ್ತಾ ನಿಂತಿರುವುದೇ ಆಗಿದೆ.

ಮೊದಲು ಇಂತಹ ದೇವಾಲಯಗಳನ್ನು ನಿರ್ಮಿಸಲು, ದೇವಾನುದೇವತೆಯರನ್ನು ಕಲ್ಲಿನಲ್ಲಿ ಕಡೆದು ಸುಂದರ ರೂಪನೀಡಲು ದೇವಾಲಯದ ಪ್ರತಿಯೊಂದು ಹಂತವನ್ನು ಸುಂದರವಾದ ಕೆತ್ತನೆಯಿಂದ ನಿರ್ಮಿಸಬೇಕಾದರೆ ಶಿಲ್ಪಿಯು ವಿವಿಧ ಶಾಸ್ತ್ರಗಳ ಪ್ರವೀಣನಾಗಿರಲೇಬೇಕಾಗುತ್ತದೆ. ಉದಾಹರಣೆಗೆ:

1. ಶಿಲ್ಪಿಯು ಒಬ್ಬ ಯೋಗಿಯಾಗಿ: ಭಾರತೀಯ ಶಿಲ್ಪಿಯು ಒಬ್ಬ ಯೋಗಿ, ಶಾಂತಿಯನ್ನು ನೀಡುವ, ಆನಂದಕರವಾದಂತಹ ದೃಶ್ಯವು ಆ ಶಿಲೆಯಲ್ಲಿ ಕೆತ್ತಿ ಮೂಡಿಸುವ ಹಾಗೆ ಪರಿವರ್ತಿಸುವಲ್ಲಿ ಶಿಲ್ಪಿಯು ಸಹ ಒಬ್ಬ ಯೋಗಿಯಾಗಿರುತ್ತಾನೆ. ಅವನು ಎಲ್ಲೋ ತನ್ನ ಬಾಹ್ಯ ಸೌಂದರ್ಯವನ್ನು ಪ್ರಕಟಿಸಲು ಪ್ರಯತ್ನಿಸಬಾರದು. ಉದಾ: ಬುದ್ಧನ, ಶಿವನ ಧ್ಯಾನಮಗ್ನ ಶಿಲ್ಪಗಳನ್ನು ನಿರ್ಮಿಸುವಾಗ ಈ ಭಾವನೆಗಳು ಮೂಡುವುದು ಸಹಜವಾಗಿ ವ್ಯಕ್ತವಾಗುತ್ತದೆ.

2. ಶಿಲ್ಪಿಯು ಒಬ್ಬ ಭೂಗರ್ಭಶಾಸ್ತ್ರಜ್ಞನಾಗಿರುತ್ತಾನೆ: ತಾನು ನಿರ್ಮಿಸುತ್ತಿರುವಂತಹ ಶಿಲ್ಪಕ್ಕೆ (ಅದು ದೇವತಾಮೂರ್ತಿಯಾಗಿರಲಿ ಅಥವಾ ದೇವಾಲಯದ ಕಂಬಗಳಾಗಿರಲಿ) ಈ ಶಿಲೆಯು ಯೋಗ್ಯವಾದುದೆಂದು ಗುರುತಿಸುವಲ್ಲಿನ ಸನ್ನಿವೇಶದಲ್ಲಿ ಅವನು ಭೂಗರ್ಭಶಾಸ್ತ್ರದಲ್ಲಿ ಪ್ರವೀಣನಾಗಿರಲೇಬೇಕು. ಉದಾ: ವಿಠಲಸ್ವಾಮಿ ದೇವಾಲಯದ ಕಂಬಗಳು ಸಪ್ತಸ್ವರಗಳ ನಾದವನ್ನು ಮೀಟುವ ಹಾಗೆ ಮಾಡುವಲ್ಲಿ ಇವನ ಜಾಣ್ಮೆ ಮೂಡಿಸುತ್ತದೆ.

3. ಶಿಲ್ಪಿಯು ಒಬ್ಬ ಕವಿಯಾಗಿಯೂ ಈ ಸನ್ನಿವೇಶದಲ್ಲಿ ಕೆಲಸ ಮಾಡುತ್ತಾನೆ. ಹಾಗೂ ಸೌಂದರ್ಯವನ್ನು ಪ್ರೀತಿಸುವವನಾಗಿರುತ್ತಾನೆ.

4. ಈ ಸನ್ನಿವೇಶದಲ್ಲಿ ಶಿಲ್ಪಿಯು ಒಬ್ಬ ದಾರ್ಶನಿಕನಾಗಿ, ವಾಗ್ಮಿಯಾಗಿ, ಚಿಂತಕನಾಗಿಯೂ ಕಂಡುಬರುತ್ತಾನೆ. ಉದಾ: ಹಜಾರರಾಮ ದೇವಾಲಯದ ಗೋಡೆಯ ಮೇಲೆ ರಾಮಾಯಣ, ಮಹಾಭಾರತ, ಭಗವದ್ಗೀತೆಗಳ ಸುಂದರ ಚಿತ್ರಣವನ್ನು ಶಿಲ್ಪಿಯು ನಿರ್ಮಿಸುವಾಗ ಮೇಲಿನವೆಲ್ಲವೂ ಆಗಿರಲೇಬೇಕಲ್ಲವೆ.

5. ಶಿಲ್ಪಿಯು ವಾಸ್ತುಶಾಸ್ತ್ರಜ್ಞನಾಗಿರುವುದೂ ಮುಖ್ಯವಾಗಿರುತ್ತದೆ. ದೇವಾಲಯದ ನಿರ್ಮಾಣ ಹಾಗೂ ವಿವಿಧ ರೂಪಗಳು ಎಲ್ಲೆಲ್ಲಿ ಕಂಡುಬರಬೇಕೆಂದು ನಿರ್ಧರಿಸುವ ಸನ್ನಿವೇಶದಲ್ಲಿ ಇವನು ವಾಸ್ತುಶಾಸ್ತ್ರಜ್ಞನಾಗಿರುತ್ತಾನೆ ಎಂಬುದು ಸತ್ಯ.

ಒಬ್ಬ ಶಿಲ್ಪಿಯು ಮೇಲಿನವುಗಳನ್ನೆಲ್ಲವನ್ನು ಮೈಗೂಡಿಸಿಕೊಂಡಿದ್ದರೆ ಮಾತ್ರ ಉತ್ತಮ ದೇವಾಲಯಗಳನ್ನು ನಿರ್ಮಿಸಬಲ್ಲವನೆಂದು ಹೇಳುವುದಾದರೆ, ವಿಜಯನಗರದ ಕಾಲದ ದೇವಾಲಯಗಳನ್ನು ಗಮನಿಸಿದರೆ ಅಂದಿನ ಶಿಲ್ಪಿಗಳು ಮೇಲಿನವುಗಳೆಲ್ಲವನ್ನೂ ಮೈಗೂಡಿಸಿಕೊಂಡಿದ್ದರೆಂದು ಹೇಳಬಹುದು. ಶಿಲ್ಪಿಯ ಕಲ್ಪನೆಗೆ ಸಹಾಯಕವಾಗುವ ಧ್ಯಾನ ಶ್ಲೋಕಗಳು ನಮ್ಮ ಶಾಸ್ತ್ರಗಳಲ್ಲಿ ಬೇಕಾದಷ್ಟಿವೆ. ಉದಾ: ಶ್ರೀದೇವಿಯ ಧ್ಯಾನ ಶ್ಲೋಕವನ್ನು ಇಲ್ಲಿ ಉಲ್ಲೇಖಿಸಬಹುದು,

ಅರುಣ ಕಮಲ ಸಂಸ್ಥಾ ತದ್ರಜಃ ಪುಂಜವರ್ಣಾ
ಕರಕಮಲಧೃ ತೇಷ್ಟಾಭೀತಿಯುಗ್ಮಾಂಬುಜಾಚ
ಮಣಿ ಮಕುಟ ವಿಚಿತ್ರಾಲಂಕ್ಯಾತಾ ಕಲ್ಪಜಾಲ್ಯೈ;
ಭವತು ಭುವನಮಾತಾ ಸಂತಕಂಶ್ರೀಃ ಶ್ರೀಯೈವಃ

* ವಿಜಯನಗರದ ಕಲೆ ಮತ್ತು ಸಾಹಿತ್ಯ, ಪುಲುಮಲೆ ಶ್ಯಾಮರಾವ್ – ಸೌಭಾಗ್ಯ ಲಕ್ಷ್ಮ್ಯಪನಿಷತ್.

ಎಂದು ಸುಂದರವಾಗಿ ನಿರೂಪಿಸುವ ಈ ಶ್ಲೋಕವು ಸಂಕೇತ ವಿದ್ಯೆಗೆ ಹೆಚ್ಚಿನ ಒತ್ತು ನೀಡುತ್ತದೆ. ಈ ಸಂಕೇತ ವಿದ್ಯೆಯು ಮೂರ್ತಿಗೆ ತಕ್ಕ ರೂಪವನ್ನು ವಾತಾವರಣವನ್ನು ಕೊಡುವಲ್ಲಿ ಪ್ರಮುಖ ಪಾತ್ರವಹಿಸುತ್ತದೆ. ಸಂಕೇತ ವಿದ್ಯೆಯಿಂದ ಕಲಾವಿದರಿಗೆ ಎರಡು ರೀತಿಯಲ್ಲಿ ಸಹಾಯವಾಗುತ್ತದೆನ್ನಬಹುದು. ಒಂದನೆಯದಾಗಿ ಶಿಲ್ಪಿಯು ಸ್ಪಷ್ಟವಾಗಿ ಭಾವಿಸಿಕೊಳ್ಳುವುದಕ್ಕೂ ಹಾಗೂ ಎರಡನೆಯದಾಗಿ ಹಾಗೆ ಭಾವಿಸಿಕೊಂಡಂತಹ ವಿಧಾನವನ್ನು ಸ್ಪಷ್ಟವಾಗಿ ಶಿಲ್ಪದಲ್ಲಿ ರೂಪಿಸುವುದಕ್ಕೂ ಸಹಾಯವಾಗುವಂತೆ ಮಾಡುತ್ತದೆ. ಸಂಕೇತಗಳು ಕಲಾವಿದರಿಗೆ ಯಾವ ವಿಧದಲ್ಲೂ ಬಂಧನವಾಗುವುದಿಲ್ಲ. ಇದಕ್ಕೆ ಬದಲಾಗಿ ಅವನಿಗೆ ಸಹಕಾರಿಯೂ ಮತ್ತು ಅವಶ್ಯಕವೂ ಆಗಿರುತ್ತದೆ. ವಿಜಯನಗರ ಕಾಲದ ಶಿಲ್ಪಗಳು ಸಹ ಯಾವುದೇ ರೀತಿಯಲ್ಲಿ ಬಂಧನಕ್ಕೆ ಒಳಗಾಗದೆ ಇದ್ದುದರಿಂದಲೇ ಶಿಲ್ಪದಲ್ಲಿ ಆಧ್ಯಾತ್ಮಿಕವಾದ ಮತ್ತು ಕಲಾತ್ಮಕವಾದ ಭಾವನೆಗಳನ್ನು ಸರಿಯಾಗಿ ರೂಪಿಸುವುದಕ್ಕೆ ಕಾರಣವಾಯಿತೆನ್ನಬಹುದು. ಉದಾ: ವೇಣುಗೋಪಾಲನ ವೇಣುವಾದನದ ಬೆರಳಿನ ಮುದ್ರೆಯನ್ನು ರೂಪಿಸಬೇಕಾದರೆ ಸಂಕೇತ ವಿದ್ಯೆಯು ತಿಳಿಸುವುದೇನೆಂದರೆ "ಬೆರಳಾಟದಲ್ಲಿ ಅಭಿನಯದ ಸೌಜನ್ಯದೊಡನೆ ಮನೋಭಾವದ ದಿವ್ಯತೆಯೂ ಮಿಲನವಾಗಿಬೇಕು" ಎಂಬುದನ್ನು. ಇದಕ್ಕೆ ನಮ್ಮ ಹೊಯ್ಸಳ ಕಾಲದ ನಂತರ ವಿಜಯನಗರ ಕಾಲದ ಶಿಲ್ಪಿಗಳು ಉತ್ತಮ ನಿದರ್ಶಕರಾಗುತ್ತಾರೆ.

ಹಾಗೆ ನೋಡಿದರೆ ಪ್ರಪಂಚದ ಎಲ್ಲಾ ವಸ್ತುಗಳೂ ಅದರಲ್ಲಿಯೂ ಹಿಂದೂ ಸಂಸ್ಕೃತಿಯಲ್ಲಂತೂ ಪ್ರತಿಯೊಂದು ವಸ್ತುವೂ ಪರಮಾತ್ಮನ ಯಾವುದೋ ಒಂದು ಭಾವಕ್ಕೆ ಸಂಕೇತಗಳಾಗಿರುತ್ತವೆ. ಆದುದರಿಂದ ಶಿಲ್ಪಿಗೆ ತನ್ನ ಭಾವವನ್ನು ತಿಳಿಸುವುದಕ್ಕೆ ಆಯಾ ವಸ್ತುವಿನ ಚರಿತ್ರೆಯೇ ಸಂಕೇತವಾಗಿರುತ್ತದೆ ಎಂದು ಹೇಳಬಹುದು. ಹಿಂದೂ ದೇವತೆಗಳನ್ನು ನಿರ್ಮಿಹಿಸುವಾಗಲಂತೂ ಆ ದೇವತೆಗಳ ಸಂಕೇತವನ್ನು ಮೊದಲು ಶಿಲ್ಪಿಯು ಕರಗತಮಾಡಿಕೊಂಡಿರಬೇಕಾಗುತ್ತದೆ. ಏಕೆಂದರೆ ಆ ದೇವತೆಯನ್ನು (ಬ್ರಹ್ಮ, ವಿಷ್ಣು, ಮಹೇಶ್ವರ, ರಾಮ, ರಾವಣ, ಸೀತೆ, ಕೃಷ್ಣ, ವಿವಿಧ ರೀತಿಯ ಪುರಾಣ ಕಥೆಗಳು) ಗುರುತಿಸಬೇಕಾದರೆ ಅವರು ಧರಿಸುತ್ತಿದ್ದಂತಹ ಉಡುಪು, ಅವುಗಳು ಹಾಗೂ ಅವರ ಆಯುಧಗಳು ಸಂಕೇತವಾಗುತ್ತವೆ.

ಸಂಕೇತಗಳನ್ನು ಶಿಲ್ಪಿಯು ಪ್ರಯೋಗಿಸಬೇಕಾದರೂ ಅವನಲ್ಲಿ ಔಚಿತ್ಯವಿರಬೇಕಾಗುತ್ತದೆ. ಏಕೆಂದರೆ ಅವುಗಳನ್ನು ಅನ್ಯೋನ್ಯವಾಗಿ ಪ್ರಯೋಗಿಸಬೇಕಾಗುತ್ತದೆ. ಇಲ್ಲದಿದ್ದರೆ ಶಿಲ್ಪದಲ್ಲಿ ಸೌಂದರ್ಯ, ಸತ್ಯವಾಗಲಿ ಸಂಪೂರ್ಣವಾಗಿ ಲಭಿಸುವುದಿಲ್ಲ. ಪ್ರತಿಯಾಗಿ ಪ್ರತಿಮೆಗೆ ದೋಷಗಳು ಸಂಭವಿಸಲೂಬಹುದು. ಸಂಕೇತಗಳನ್ನು ಅಳವಡಿಸುತ್ತೇನೆಂದು ಅತಿಯಾಗಿ ಪ್ರಯೋಗಿಸಿದರೆ ಪ್ರತಿಮೆಯ ನಿಜಸ್ವರೂಪವೂ ಮಾಯವಾಗಬಹುದು. ಆದ್ದರಿಂದ ಕಲಾವಿದನು ಸಮತೂಕವಾದಂತಹ ಪ್ರಯೋಗದಿಂದ ಮಾತ್ರ ಪ್ರತಿಮೆಗೆ ಉತ್ತಮ ಸ್ವರೂಪವನ್ನು ಕೊಡಲು ಸಾಧ್ಯವಾಗುತ್ತದೆ ಎಂದು ಹೇಳಬಹುದು. ಇವುಗಳಲ್ಲೆಲ್ಲ ವಿಜಯನಗರದ ಶಿಲ್ಪಿಗಳು ಪ್ರತಿಯೊಬ್ಬರ ಮನಗೆದ್ದಿದ್ದರೆನ್ನಬಹುದು.

---

* ಅರುಣಕಮಲ ಸಂಸ್ಥಾ ತದ್ರಜಃ ಪುಂಜವರ್ಣಾ
ಕರಕಮಲಧೃತೇಷ್ಟಾಽಭೀತಿ ಯುಗ್ಮಾಂಬುಜಾ ಚ
ಮಣಿಮಕುಟವಿಚಿತ್ರಾಲಂಕೃತಾ ಕಲ್ಪಜಾಲೈಃ
ಸಕಲಭುವನ ಮಾತಾ ಸಂತತಂ ಶ್ರೀ ಶ್ರೀಯೈ ನಃ ॥
(Vol. 3, p. 469) 108 ಉಪನಿಷತ್ ಕಲ್ಪತರು

ಹಿಂದೂ ದೇವತೆಗಳಿಗೆ ಕೆಲವು ಸಂಕೇತಗಳು ಆಯುಧಗಳ ರೂಪದಲ್ಲಿರುವುದು ಕಂಡುಬರುತ್ತದೆ. ಖಡ್ಗ, ಬಾಣ, ಅಂಕುಶ, ಶೂಲ, ಖಟ್ವಾಂಗ, ತ್ರಿಶೂಲ, ಶಕ್ತಿ, ಪಾಶ, ವಜ್ರ, ಟಂಕ, ಮುಂತಾದ ಆಯುಧಗಳಲ್ಲಿ ಬೇರೆ ಬೇರೆ ದೇವತೆಗಳಿಗೆ ಅವರವರ ಗುಣಗಳಿಗೆ ಅನುಸಾರವಾದ ಆಯುಧಗಳನ್ನು ಕೊಡಲಾಗಿದೆ. ಹಾಗೆಯೇ ವಾದ್ಯಗಳಲ್ಲಿ ವೀಣೆ, ವೇಣು, ಶಂಖ, ಡಮರುಗ, ಗಂಟೆ ಮುಂತಾದವು ಸಂಕೇತವಾಗಿರುತ್ತವೆ. ಹಾಗೆಯೇ ಕಮಂಡಲ, ಕನ್ನಡಿಗಳೂ ಬೇರೆ ಬೇರೆ ದೇವತೆಗಳ ಗುಣನಿರೂಪಣೆಗೆ ಅವಶ್ಯಕವಾಗಿವೆ. ಪಶುವರ್ಗದಲ್ಲಿ ಸಿಂಹ, ಎತ್ತು, ಇಲಿ, ಆನೆ, ಕುದುರೆ, ಕೋಳಿ, ಎಮ್ಮೆ, ಆಡು, ಆಮೆ, ಮುಳ್ಳಂದಿ, ಮಕರ, ಕರಡಿ, ಜಿಂಕೆ, ಹಾವು, ಹುಲಿ ಮುಂತಾದವು ಬೇರೆ ಬೇರೆ ದೇವತೆಗಳ ನಿರೂಪಣೆಯಲ್ಲಿ ಅತ್ಯಂತ ಹೆಚ್ಚಿನ ಅವಶ್ಯಕವಾಗಿರುವುದಾಗಿವೆ. ಹಾಗೆಯೇ ಮುಖ್ಯವಾಗಿ ದೇವತಾ ಪ್ರತಿಮೆಗಳನ್ನು ಬೇರೆ ಬೇರೆ ಆಸನಗಳಲ್ಲಿ ಕುಳ್ಳಿರಿಸುವುದಕ್ಕೂ ಶಿಲ್ಪಶಾಸ್ತ್ರದ ಪ್ರಮುಖ ಆಧಾರಗಳೇ ಕಾರಣ. ಈ ಆಸನಗಳು ಆಯಾ ದೇವತೆಗಳ ಗುಣಗಳನ್ನು ಅವಲಂಬಿಸಿರುತ್ತವೆ ಎನ್ನಬಹುದು. ಪ್ರಮುಖವಾಗಿ ಕಂಡುಬರುವಂತಹ ದೇವತೆಗಳ ಆಸನಗಳೆಂದರೆ ಕೂರ್ಮಾಸನ, ಮಕರಾಸನ, ಪದ್ಮಾಸನ, ವೀರಾಸನ, ಭದ್ರಾಸನ, ಸಿಂಹಾಸನಗಳೆಂದು ಆರು ಮುಖ್ಯ ಆಸನಗಳಿರುವುದು ಕಂಡುಬರುತ್ತದೆ. ನಮ್ಮ ಸಂಸ್ಕೃತಿಯಲ್ಲಿ ಉಡುಗೆಗಳೂ ಸಹ ಪ್ರಮುಖವಾದ ಸಂಕೇತಗಳಾಗಿವೆ. ಕೆಲವು ಉಡುಗೆಗಳು ಇಂದಿನ ಸಮಾಜದ ಕೆಲವು ವರ್ಗದವರೆಂದು ಗುರ್ತಿಸುವ ಹಾಗೆ ದೇವತೆಗಳ ಮೇಲೆ ಇರುವಂತಹ ಉಡುಗೆಯಿಂದಲೂ ಸಹ ಯಾವ ದೇವತೆಯೆಂದು ಗುರ್ತಿಸಲು ಸಹಕಾರಿಯಾಗಿದೆ.

ಮೇಲೆ ಚರ್ಚಿಸಿರುವಂತಹ ಸಂಕೇತ ಕಲೆಯನ್ನು ಸಂಪೂರ್ಣವಾಗಿ ಬಳಸಿಕೊಂಡಂತಹ ವಿಜಯನಗರದ ವಾಸ್ತುಶಿಲ್ಪವನ್ನು ಪ್ರಮುಖವಾಗಿ ಎರಡು ಭಾಗಗಳಾಗಿ ವಿಂಗಡಿಸಬಹುದು. ಅವುಗಳೆಂದರೆ, 1. ಲೌಕಿಕ ವಾಸ್ತುಶಿಲ್ಪ, 2. ಧಾರ್ಮಿಕ ವಾಸ್ತುಶಿಲ್ಪ.

ಲೌಕಿಕ ಕಟ್ಟಡಗಳು ನಮಗೆ ಕಾಣುವುದು ಹಂಪಿಯಲ್ಲಿಯೇ. ಇದು ಸಾಮ್ರಾಜ್ಯದ ರಾಜಧಾನಿ. ಇಲ್ಲಿ ಅರಸರ ಅರಮನೆ, ಅದಕ್ಕೆ ಸಂಬಂಧಿಸಿದ ಇತರ ಮಂಟಪಗಳು, ಅರಸಿಯರ ಈಜುಕೊಳ, ಕಮಲ ಮಹಲ್, ಆನೆಯಲಾಯಗಳು, ಕಾವಲುಗೋಪುರ ಹಾಗೂ ದೇವಾಲಯದ ಸಮೀಪದಲ್ಲಿರುವಂತಹ ಮಾರುಕಟ್ಟೆಯ ಸ್ಥಳಗಳನ್ನು ಉದಾಹರಣೆ ನೀಡಬಹುದಾಗಿದೆ. ಏಕೆಂದರೆ ಈ ಕಟ್ಟಡಗಳ ತಳಪಾಯ ಮಾತ್ರ ಕಲ್ಲಿನಲ್ಲಿ ಕಟ್ಟಲಾಗಿದ್ದು, ಮೇಲಿನ ಸ್ತರಗಳನ್ನೆಲ್ಲ ಮರಗಳಿಂದಲೂ ಅಥವಾ ಗಾರೆಗಳಿಂದ ಕಟ್ಟಲಾಗಿದೆ. ಕಂಬಗಳಿಗೂ ಕಲ್ಲು ಅಥವಾ ಮರವನ್ನು ಉಪಯೋಗಿಸಿರುವುದು ಕಂಡುಬರುತ್ತದೆ. ಕೆಲವು ಕಂಬಗಳ ಒಳಭಾಗಗಳು ಕಲ್ಲಿನವಾಗಿದ್ದು ಅದರ ಸುತ್ತಲೂ ಇಟ್ಟಿಗೆ, ಗಾರೆಗಳನ್ನು ಬಳಸಿ ಕಂಬದ ಗಾತ್ರವನ್ನು ಹೆಚ್ಚಿಸುವ ತಂತ್ರವನ್ನು ಬಳಸಿರುವುದು ಕಂಡುಬರುತ್ತದೆ. ಕಮಾನುಗಳ ಉಪಯೋಗ ಒಂದು ವಿಶೇಷವಾಗಿದೆ.

ಹಂಪಿ ಹಾಗೂ ಸಾಮ್ರಾಜ್ಯದಾದ್ಯಂತ ಇರುವ ದೇವಾಲಯಗಳು ಧಾರ್ಮಿಕ ವಾಸ್ತುಶಿಲ್ಪಕ್ಕೆ ಉದಾಹರಣೆಗಳಾಗಿವೆ. ಇವುಗಳಲ್ಲಿ ಕಂಡುಬಂದಂತಹ ಹೊಸ ಶಿಲ್ಪಕಲೆಯಿಂದಾಗಿ ಅಂದು ಸ್ವತಂತ್ರವಾದಂತಹ "ವಿಜಯನಗರ ಶೈಲಿ" ಎಂದು ಹೆಸರು ಪಡೆಯುವಂತಾಯಿತು. ಹಂಪಿಯ ಅನೇಕ ದೇವಾಲಯಗಳಲ್ಲಿ ಸಾಮಾನ್ಯವಾಗಿ ಗರ್ಭಗೃಹ ಮತ್ತು ಅಂತರಾಳಗಳಿಗೆ ಹೊಂದಿದಂತೆ ಮುಚ್ಚಿದ ಕಂಬಗಳುಳ್ಳ ಪ್ರದಕ್ಷಿಣಾಪಥವಿರುತ್ತದೆ.* ಗರ್ಭಗೃಹ ಮತ್ತು ಅಂತರಾಳಗಳಿಗೆ ಸೇರಿದಂತೆ ಒಂದು ಅಧಿಷ್ಠಾನ. ಇದು ಪ್ರಾಕಾರಕ್ಕಿಂತ ಸ್ವಲ್ಪ ಕೆಳಮಟ್ಟದಲ್ಲಿರುತ್ತದೆ. ಕಂಬಗಳು ಆಲಂಕಾರಿಕವಾಗಿರುತ್ತವೆ. ಹಿಂದೂ ಧರ್ಮವನ್ನು ರಕ್ಷಿಸಲೆಂದು ಈ ಹೊಸ ಸಾಮ್ರಾಜ್ಯವು ಹುಟ್ಟಿಕೊಂಡಿತೆಂದು ಹೇಳುವುದಾದರೆ ಧರ್ಮದ ಪ್ರಚಾರಕ್ಕಾಗಿ ದೇವಾಲಯಗಳನ್ನು ಮಾಧ್ಯಮಗಳಾಗಿ ಉಪಯೋಗಿಸಿಕೊಳ್ಳಲಾರಂಭಿಸಿದರು. ದೇವರ ಪೂಜೆಗೆ ಸಂಬಂಧಿಸಿದಂತೆ ಹೊಸ ಹೊಸ ಉತ್ಸವಗಳನ್ನು ಅಳವಡಿಸಲಾಯಿತು. ಅಂದರೆ ಹಿಂದೂ ಸಂಸ್ಕೃತಿಯ ಎಲ್ಲಾ ವೈಶಿಷ್ಟ್ಯಗಳನ್ನು ಸಂರಕ್ಷಿಸಿ, ಪುನಶ್ಚೇತನಗೊಳಿಸಿ ವೈಭವೋಪೇತವಾಗಿ ಮಾಡುವುದು ಅಂದಿನ ಅರಸರ ಪ್ರಮುಖ ಕರ್ತವ್ಯವಾಗಿದ್ದಿತ್ತು. ಈ ದಿಕ್ಕಿನಿಂದಾಗಿ ದೇವಾಲಯಗಳು

ವಿಶೇಷವಾದ ಆಸಕ್ತಿಯನ್ನು ಪಡೆದವು. ದೇವಾಲಯಗಳ ಗೋಡೆಗಳ ಮೇಲೆ, ಕಂಬಗಳ ಮೇಲೆ ಪೌರಾಣಿಕ, ಕಾವ್ಯಾತ್ಮಕ ಕಥೆಗಳ ಪ್ರಾತ್ಯಕ್ಷಿಕೆಗಳನ್ನು ಮೂಡಿಸಲಾಯಿತು. ಇದಕ್ಕಾಗಿ ಸಾವಿರಾರು ಶಿಲ್ಪಿಗಳು, ರೂವಾರಿಗಳು, ಪರಿಣಿತರು ಹಗಲಿರುಳೂ ತಮ್ಮ ಜೀವನವನ್ನು ತೊರೆದು ಶ್ರಮಿಸಿದ್ದರು. ಜೊತೆಗೆ ವೀರತ್ವಕ್ಕೆ, ಶೌರ್ಯಕ್ಕೆ ಹೆಚ್ಚಿನ ಪ್ರೋತ್ಸಾಹ ಕೊಡಲೆಂಬಂತೆ ಆ ಗುಣಗಳೇ ಎದ್ದುಬರುವಹಾಗೆ ರಾಮ, ಹನುಮಂತ, ಕೃಷ್ಣ, ಭೀಮ, ಅರ್ಜುನ, ಮುಂತಾದವರ ಕೆತ್ತನೆಗಳನ್ನು ಶಿಲ್ಪಗಳಲ್ಲಿ ಮೂಡಿಸಲಾಯಿತು. ಈ ಮೊದಲು ಶಿಲ್ಪಗಳಿಗೆ ಇಂಥ ಕಥೆಗಳಾವುವೂ ಇಷ್ಟು ವಿಪುಲವಾಗಿ ವಸ್ತುಗಳಾಗಿರುವುದು ಕಂಡುಬರುವುದಿಲ್ಲ. ಸೈನ್ಯದ ವಿವಿಧ ಅಂಗಗಳಾದಂತಹ ಕಾಲುದಳ, ಆನೆಗಳು, ಕುದುರೆಗಳು, ಒಂಟೆಗಳು ಇತ್ಯಾದಿಗಳು, ಯುದ್ಧದ ಚಿತ್ರಗಳು, ಆಯುಧಗಳು ಸುಂದರವಾಗಿ ಶಿಲೆಯಲ್ಲಿ ಮೂಡಿಬಂದಿರುತ್ತವೆ. ಇದರಿಂದ ಪ್ರಜೆಗಳಲ್ಲಿ ವೀರ ಪೌರುಷದ ಭಾವನೆಯನ್ನು ಹೆಚ್ಚಿಸಬಹುದೆಂಬುದು ವಿಜಯನಗರದರಸರ ಭಾವನೆಯಾಗಿದ್ದಿತ್ತು. ಇವು ಪ್ರಜೆಗಳಿಗೆ ಸ್ಫೂರ್ತಿಯನ್ನು ನೀಡಿ, ಅವರು ದೇಶದ ರಕ್ಷಣೆಗಾಗಿ, ಧರ್ಮದ ರಕ್ಷಣೆಗಾಗಿ ಜೀವನವನ್ನು ಮುಡುಪಾಗಿಡಲು ಹೂಡಿದಂತಹ ತಂತ್ರವೆಂದು ಕೆಲವು ಇತಿಹಾಸಕಾರರು ಅಭಿಪ್ರಾಯಪಡುತ್ತಾರೆ. ಇದೇನೇ ಇರಲಿ, ಇಂದಂತು ಅಂದಿನ ಕಾಲದ ಸಂಸ್ಕೃತಿಯನ್ನು ಹೊರಚೆಲ್ಲುತ್ತಾ ಭರತಖಂಡದಲ್ಲಿಯೇ ಅಲ್ಲದೆ ಪ್ರಪಂಚಕ್ಕೆ ಕನ್ನಡದ ಕಂಪನ್ನು ಚೆಲ್ಲುತ್ತಾ ನಿಂತಿವೆ.

ಶಿಲ್ಪದಲ್ಲಿ ಸೌಂದರ್ಯದ ಸಂಸ್ಕೃತಿ

ನಮ್ಮ ಕಲೆಯೂ ಸಂಸ್ಕೃತಿಯೂ ತತ್ವಪ್ರಧಾನವಾದವು ಎಂದು ಹೇಳುತ್ತಾರೆ. ಆದರೆ ಇದನ್ನು ಒಪ್ಪಲು ಸಾಧ್ಯವಾಗದು. ಏಕೆಂದರೆ ಒಂದು ದೃಷ್ಟಿಯಲ್ಲಿ ಈ ಬೃಹತ್ ದೇವಾಲಯಗಳಲ್ಲಿ ಕೆಲವೇ ಕೆಲವು ವರ್ಗದವರಿಗೆ ಮಾತ್ರ ಪ್ರವೇಶ ಹಾಗೂ ಕಾರ್ಯಕ್ರಮಗಳನ್ನು ನೆರವೇರಿಸಲು ಅವಕಾಶವಿದ್ದಿತು. ಶೂದ್ರರು ಹಾಗೂ ಪಂಚಮರು (ದಲಿತರು) ದೇವಾಲಯಗಳ ಬಳಿಯೂ ಸುಳಿದಾಡುವ ಹಾಗಿರಲಿಲ್ಲ. ಈ ದೇವಾಲಯಗಳನ್ನು ನಿರ್ಮಿಸಲು ಮೇಲಿನವರ ಪೂರ್ಣಪ್ರಮಾಣದ ಶ್ರಮವು ಅತ್ಯವಶ್ಯಕವಾಗಿ ಬಳಕೆಯಾಗುತ್ತಿದ್ದಿತು. ಆದರೆ ಅವರ ಆರ್ಥಿಕ ಹಾಗೂ ಸಾಮಾಜಿಕ ಜೀವನ ಹೇಳತೀರದಾಗಿದ್ದಿತ್ತು. ಹಂಪಿಯಲ್ಲಿರುವಂತಹ ಸುಂದರವಾದಂತಹ ಬೃಹತ್ ದೇವಾಲಯಗಳನ್ನು ಸಾವಿರಾರು ಶಿಲ್ಪಿಗಳು ಶ್ರಮಿಕರ ಸಹಾಯದಿಂದ ನಿರ್ಮಿಸಿದರೇನೋ ಅಷ್ಟೇ. ಅನಂತರ ಅವರೂ ಸಹ ದೇವಾಲಯದ ಒಳಗಡೆ ಪ್ರವೇಶವನ್ನು ನಿಷೇಧಿಸಲ್ಪಡುತ್ತಿದ್ದರು. ಇಂಥ ಬೃಹತ್ ಸುಂದರ ದೇವಾಲಯಗಳನ್ನು ನಿರ್ಮಿಸಿದ್ದಂತಹ ಶಿಲ್ಪಿಗಳ ಜೀವನವೂ ಚಿಂತಾಜನಕವಾಗಿದ್ದಿತು. ಒಂದು ದೃಷ್ಟಿಯಲ್ಲಿ ಅಂದಿನ ಶಿಲ್ಪಿಗಳು ಪ್ರೀತಿ, ವಿಶ್ವಾಸದಿಂದ ಸುಂದರ ಶಿಲ್ಪಿಗಳನ್ನು ನಿರ್ಮಾಣ ಮಾಡದೆ, ರಾಜ ಹಾಗೂ ಬ್ರಾಹ್ಮಣರ ಭಯ, ಭೀತಿಯಿಂದ ಕೆಲಸ ಮಾಡುವ ಪರಿಸ್ಥಿತಿ ಉದ್ಭವವಾಗಿತ್ತೆಂದು ಹೇಳಬಹುದು. ಏಕೆಂದರೆ ಇಂಥ ಬೃಹತ್ ದೇವಾಲಯಗಳನ್ನು ನಿರ್ಮಿಸಿದ್ದರೂ ಸಹ (ಒಂದೆರಡು ದೇವಾಲಯಗಳನ್ನು ಹೊರತುಪಡಿಸಿ) ಶಿಲ್ಪಿಗಳ ಹೆಸರುಗಳು ಎಲ್ಲೂ ಕಂಡುಬರುವುದಿಲ್ಲ. ಕೇವಲ ದೇವಾಲಯ ಕಟ್ಟಿಸಿದ ರಾಜ, ರಾಣಿ, ಪುರೋಹಿತರ ಹೆಸರುಗಳ ಮಾತ್ರ ರಾರಾಜಿಸುತ್ತವೆ. ತಮ್ಮ ಜೀವನದ ಹಂಗನ್ನೇ ತೊರೆದು ಹಗಲಿರುಳೆನ್ನದೆ ದುಡಿದು ತಮ್ಮ ಬೆವರಿನ ಪ್ರತಿಯೊಂದು ಕಣದಲ್ಲಿಯೂ ಒಂದೊಂದು ಸುಂದರ ಶಿಲ್ಪಗಳನ್ನು ನಿರ್ಮಿಸಿದಂತಹ ಅಂದಿನ ಶಿಲ್ಪಿ ಮಹೋನ್ನರಿಗೆ ಇಂದಿಗೂ ಎಂದೆಂದಿಗೂ ನಾವೆಲ್ಲರೂ ಕೃತಜ್ಞರಾಗಿರಲೇಬೇಕು. ವಿಜಯನಗರದ ಚರಿತ್ರೆಯನ್ನು, ಸಂಸ್ಕೃತಿಯನ್ನು ಅಧ್ಯಯನ ಮಾಡುವಾಗ ತಕ್ಷಣ ಮೂಡುವ ಪ್ರಶ್ನೆ ಅಥವಾ ಸಂದೇಹವೆಂದರೆ "ವಿಜಯನಗರ ಸಾಮ್ರಾಜ್ಯವು ಸಾಮ್ರಾಜ್ಯದ ವಿಸ್ತರಣೆಯಲ್ಲಿ, ದೇವಾಲಯಗಳ ನಿರ್ಮಾಣದಲ್ಲಿ ಬೃಹತ್ ಸಾಮ್ರಾಜ್ಯವೆಂದು ಗುರುತಿಸಿಕೊಂಡಿತ್ತು. ಆದರೆ ಸಾಮಾಜಿಕವಾಗಿ ಇದೊಂದು ಪುಟ್ಟ ಸಂಸ್ಥಾನದಂತಿತ್ತೆಂದು" ಹೇಳುವ ಸಂದೇಹಗಳು ಸಹಜವಾಗಿಯೇ ಮೂಡುತ್ತವೆ.

ಮೇಲೆ ತಿಳಿಸಿದ ಹಾಗೆ ಶಿಲ್ಪಿಗಳು ತಮ್ಮ ಎಷ್ಟೋ ಕಷ್ಟವನ್ನು ಬದಿಗೊತ್ತಿ ಸುಂದರ ಶಿಲ್ಪಗಳನ್ನು, ಅವುಗಳಲ್ಲಿ ಸೌಂದರ್ಯದ ಭಾವನೆಗಳನ್ನು ತುಂಬಿ ನಿರ್ಮಿಸಿದ್ದಾರೆ ಎಂಬುದು ತಿಳಿದಿರುವ ವಿಷಯವೇ. ಅಂದಿನ ಶಿಲ್ಪಿಗಳಿಗೆ ಶಿಲ್ಪದಲ್ಲಿ ಸೌಂದರ್ಯದ ಅಂಗವನ್ನು ಚೆನ್ನಾಗಿ ಅಳವಡಿಸಲು ಪ್ರಾಚೀನ ಕಾಲದಲ್ಲಯೇ ಬೆಳಕಿಗೆ ಬಂದಿದ್ದಂತಹ

'ಚಿತ್ರಲಕ್ಷಣ' ಎಂಬ ಬೌದ್ಧ ಗ್ರಂಥವು ಆಧಾರವಾಗಿತ್ತೆನ್ನಬಹುದು. ಏಕೆಂದರೆ ಈ ಗ್ರಂಥವು ಶಿಲ್ಪದ ಸೌಂದರ್ಯದ ಬಗ್ಗೆ ಮಾರ್ಗದರ್ಶನ ನೀಡುವಂತಹ ಗ್ರಂಥವಾಗಿ ರೂಪಗೊಂಡಿದೆ. ಈ ಗ್ರಂಥವು ದೇವತೆಗಳಿಗೂ, ರಾಜರಿಗೂ, ಸಾಧಾರಣ ಜನರಿಗೂ, ಪ್ರಾಣಿಗಳನ್ನು ಶಿಲೆಯಲ್ಲಿ ಶಿಲ್ಪಿಯು ನಿರ್ಮಿಸುವಾಗ ಯಾವ ರೀತಿ ನಿಯಮಗಳನ್ನು ಅನುಸರಿಸಬೇಕೆಂದು ಸ್ಪಷ್ಟಪಡಿಸುತ್ತದೆ. ಅಷ್ಟೇ ಅಲ್ಲದೆ ದೇಹದ ಆಕಾರವನ್ನು ವಿಭಜಿಸಿ, ಚಿಕ್ಕಪುಟ್ಟ ಪ್ರಮಾಣಗಳನ್ನು ಕೂಡ ವಿವರಿಸುತ್ತದೆ. ಚಿತ್ರಲಕ್ಷಣವು ಹೇಳುವಂತೆ ಸುಂದರವಾದ ಮುಖವು ಎಲ್ಲಾ ದೃಷ್ಟಿಯಿಂದಲೂ ಆಕರ್ಷಕವಾಗಿರಬೇಕು. ಮುಖವು ತ್ರಿಕೋನಾಕಾರವಾಗಿಯೂ, ಸೊಟ್ಟಾಗಿಯೂ, ಅಂಡಾಕಾರವಾಗಿಯೂ, ವರ್ತುಲಾಕಾರವನ್ನು ಹೋಲುವ ಮುಖಗಳೆ ಇರಬೇಕು. ಆದರೆ ಮನುಷ್ಯರನ್ನು ರಚಿಸುವಾಗ ಆಕಾರದಲ್ಲಿ ಸ್ವಲ್ಪ ಸ್ವಾತಂತ್ರ್ಯವನ್ನು ಸಂದರ್ಭಕ್ಕೆ ತಕ್ಕಂತೆ ಪರಿವರ್ತಿಸಬಹುದೆಂದು ಹೇಳುತ್ತದೆ. ದೇವತೆಗಳಿಗೂ, ರಾಜರಿಗೂ ಸೊಗಸಾದ ನೀಲವರ್ಣದ ಗುಂಗುರುಕೂದಲು ಅವಶ್ಯಕವಾಗಿರುತ್ತದೆ. ಸ್ತ್ರೀರೂಪವು ಮನೋಹರವಾದ ಅಂಗಗಳ ಸಂಯೋಗದಿಂದ ಕೂಡಿರುವುದಾಗಿರುತ್ತದೆ. ಹಾಗೆಯೇ ಅವು ಕೋಮಲವಾಗಿಯೂ, ಯೌವನದಿಂದ ಕೂಡಿರುವಂತಹ ಲಕ್ಷಣಗಳು ಸೂಚಿಸುವಂತಿವೆ. ಇವುಗಳೆಲ್ಲದರಲ್ಲಿಯೂ ವಿಜಯನಗರದ ಶಿಲ್ಪಿಗಳು ಮನಮೋಹಕವಾದಂತಹ ತಮ್ಮ ಕೈಚಳಕ ತೋರಿಸಿದ್ದಾರೆ. ಏಕೆಂದರೆ ಅಂದಿನ ಶಿಲ್ಪಿಗಳು ತಮ್ಮ ಮನದಲ್ಲಿ "ಭಾವನಾಸಂಪತ್ತಿಲ್ಲದ ರೂಪವು ಸೌಂದರ್ಯರಹಿತವಾದುದೆಂದು" ಮನವರಿಕೆ ಮಾಡಿಕೊಂಡಿದ್ದರೆನ್ನಬಹುದು.

ಶಿಲ್ಪದ ಸೌದರ್ಯದ ಬಗ್ಗೆ ವಾತ್ಸ್ಯಾಯನ ಕಾಮಸೂತ್ರವೂ ಸಹ ಹೆಚ್ಚಿನ ಮಾಹಿತಿ ನೀಡುತ್ತದೆ. ಈ ಗ್ರಂಥವು ಹೆಚ್ಚಾಗಿ ಚಿತ್ರಕಲೆಗೆ ಹೆಚ್ಚಿನ ಮಾಹಿತಿಯನ್ನು ದೊರಕಿಸುತ್ತದೆ. ಉದಾ. ಚಿತ್ರದಲ್ಲಿ ಬಣ್ಣ ಹಚ್ಚುವಾಗ ದೇಹದ ವಿವಿಧ ಅಂಗಗಳಿಗೆ ಕೊಡಬೇಕಾದಂತಹ ಬಣ್ಣಗಳು ಯಾವುದೆಂಬುದರ ಅರಿವುಂಟಾಗುವಂತೆ ತಿಳಿಸುತ್ತದೆ. ಆದ್ದರಿಂದ ಇದು ಚಿತ್ರರಚನೆಗೆ ಮಾತ್ರ ಅನ್ವಯಿಸುತ್ತಯೇ ವಿನಾ ಶಿಲ್ಪಕ್ಕಲ್ಲ ಎನ್ನಬಹುದು. ವಿಜಯನಗರದ ನರ್ತನ ಶಾಲೆಯ ವರ್ಣನೆಯಿಂದ ಆ ಅಂಶವು ಸ್ಪಷ್ಟಗೊಳ್ಳುತ್ತದೆ.

ಶಿಲ್ಪಿಯು ತನ್ನ ಅರಿವಿನಲ್ಲಿ ಗ್ರಹಿಸಿರುವ ಹಾಗೆ (ಪುರಾಣಗಳು ಹೇಳುವ ಹಾಗೆ) ಶಿಲ್ಪವನ್ನು ನಿರ್ಮಿಸುತ್ತಿದ್ದನು. ಅವನ್ನು ನಿರ್ಮಿಸಿರುವ ಮೂರ್ತಿಗಳನ್ನು ಮೂರು ಭಾಗಗಳಾಗಿ ಗುರ್ತಿಸಬಹುದು. ಅವುಗಳೆಂದರೆ ನಾರಾಯಣ, ರಾಮ, ವಾಲಿ, ಇಂದ್ರ, ಭಾಗವತ, ಅರ್ಜುನ ಮುಂತಾದವರುಗಳು ನರಮೂರ್ತಿಗಳಾದರೆ, ಹಿರಣ್ಯಕಶಿಪು, ವೃತ್ರ, ಹಿರಣ್ಯಾಕ್ಷ, ರಾವಣ, ಕುಂಭಕರ್ಣ, ಮಹಿಷಾಸುರ, ಶರಭ, ನಿಶುಂಭ, ಜರಾಸಂಧ ಮುಂತಾದವರು ಅಸುರ ಮೂರ್ತಿಗಳಾಗಿಯೂ, ಭೈರವ, ವೀರಭದ್ರ, ಚಂಡಿ, ನರಸಿಂಹ, ವರಾಹ, ತ್ರಿವಿಕ್ರಮ ಮುಂತಾದವು ಕ್ರೂರ ಮೂರ್ತಿಗಳು, ಹಾಗೆಯೇ ಗೋಪಾಲ, ಬಾಲಕೃಷ್ಣ, ಬಾಲಗಣಪತಿ, ಕುಮಾರಸ್ವಾಮಿ ಮುಂತಾದವು ಬಾಲಮೂರ್ತಿಗಳಾದರೆ, ವಾಮನ, ಕೃಷ್ಣ ಮುಂತಾದವು ಕುಮಾರಮೂರ್ತಿಗಳಾಗಿರುತ್ತವೆ. ಮೇಲಿನ ಶಿಲ್ಪಗಳ ವೈವಿಧ್ಯತೆಯನ್ನು ನೀವು ಹಂಪಿಯ ದೇವಾಲಯಗಳಲ್ಲಿ ಸ್ಪಷ್ಟವಾಗಿ ಗಮನಿಸಬಹುದು.

ವಿಜಯನಗರದ ಶಿಲ್ಪಗಳಲ್ಲಿನ ಭಂಗಿಗಳ ಬಗ್ಗೆ ಚರ್ಚಿಸುವುದಾದರೆ ಅವುಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ ಕೆಳಕಂಡ ಭಂಗಿಗಳಲ್ಲಿ ಅವು ಇರುವುದು ಕಂಡುಬರುತ್ತದೆ. ಇವುಗಳನ್ನು ಏಕಭಂಗಿ, ದ್ವಿಭಂಗಿ, ತ್ರಿಭಂಗಿ, ಅತಿಭಂಗಿಗಳೆಂದು ಹಾಗೂ ವಿವಿಧ ಭಂಗಿಗಳೆಂದು ಗುರ್ತಿಸಬಹುದಾಗಿದೆ. ಸಾಮಾನ್ಯವಾಗಿ ವಿಷ್ಣು ಪ್ರತಿಮೆಗಳು ಸಮಭಂಗಿಯಲ್ಲಿರುತ್ತವೆ. ಶಿವ ಪ್ರತಿಮೆಗಳು ತ್ರಿಭಂಗಿಯಲ್ಲಿಯೂ ಹಾಗೆಯೇ ಅತಿಭಂಗಿಯಲ್ಲಿಯೂ ಇರುವುದು ಕಂಡುಬರುತ್ತದೆ. ಸ್ಥಾನಿಕ ದೇವಿಯರ ಪ್ರತಿಮೆಗಳು ಏಕ ಅಥವಾ ದ್ವಿತೀಯ ಭಂಗಿಯಲ್ಲಿ ಇರುವವಾಗಿರುತ್ತವೆ. ಇನ್ನೂ ಮುಂದುವರೆದು ಆಸನದ ಬಗ್ಗೆ ಗಮನಿಸಿದರೆ ತಿಳಿದುಬರುವ ಅಂಶವೆಂದರೆ ದೇವತೆಗಳು ಹಾಗೂ ಚಕ್ರವರ್ತಿಗಳು ಹೆಚ್ಚಾಗಿ ಪದ್ಮಾಸನದಲ್ಲಿರುವುದು ಕಂಡುಬರುತ್ತದೆ. ಹಾಗೆಯೇ ಹಿಂದೂ ದೇವತೆಗಳು ಧರಿಸುವ ಮುಕುಟ ಎಷ್ಟೋ ಬಗೆಯವುಗಳಿರುವುದು ಸಂಸ್ಕೃತಿಯ ಒಂದು ಭಾಗವೇ ಆಗಿದೆ. ಉದಾಹರಣೆಗೆ ಹೇಳುವುದಾದರೆ ವಿಷ್ಣು, ಆದಿರಾಜ, ಸಾರ್ವಭೌಮರಿಗೆ ಕಿರೀಟವೇ ಮುಕುಟವಾದರೆ,

ಬ್ರಹ್ಮನಿಗೆ ಜಟಾಮುಕುಟವಾಗಿರುತ್ತದೆ. ಪಾರ್ವತಿಗೆ ಮನೋನ್ಮನಿ ಮುಕುಟವಾದರೆ, ಸರಸ್ವತಿ, ಮಹಾರಾಣಿಯರು, ಸಾರ್ವಭೌಮಿಯರಿಗೆ ಕೇಶಬಂಧವೇ ಮುಕುಟವಾಗಿರುವುದು ಕಂಡುಬರುತ್ತದೆ. ಇವುಗಳ ಆಧಾರದ ಮೇಲೆಯೇ ನಾವು ಸಂಬಂಧಪಟ್ಟಂತಹ ಶಿಲ್ಪಗಳನ್ನು ಗುರುತಿಸಬಹುದಾಗಿದೆ. ಹೆಚ್ಚಾಗಿ ಕಿರೀಟಮುಕುಟವೇ ಉಪಯೋಗದಲ್ಲಿರುವುದು ಕಂಡುಬರುತ್ತದೆ. ಇನ್ನೂ ಶಿಲ್ಪಿಗಳು ಗಂಡು, ಹೆಣ್ಣು, ದೇವಾನುದೇವತೆಗಳ ಶಿಲ್ಪಗಳನ್ನು ನಿರ್ಮಿಸುವಾಗ ಮುಖ, ಕಣ್ಣು, ತುಟಿ, ಕಿವಿ, ಹುಬ್ಬು, ಕೈ, ಕಾಲು, ಎದೆ, ಹೊಟ್ಟೆಗಳ ನಿರ್ಮಾಣದಲ್ಲಿ ಅನುಸರಿಸಿರುವ ರೀತಿಗಳಂತೂ ಅದ್ಭುತವಾಗಿವೆ. ಇದರಿಂದಾಗಿಯೇ ಇವು ಅತ್ಯಂತ ಹೆಚ್ಚಿನ ಸೌಂದರ್ಯವನ್ನು ತಮ್ಮ ಮಡಿಲಿನಲ್ಲಿ ಅಡಗಿಸಿಕೊಂಡು ಮೆರೆಯುತ್ತಿವೆ ಎಂದು ಹೇಳಬಹುದು.

ವಿಜಯನಗರದ ದೇವಾಲಯಗಳು

ಹಂಪಿ ಅಥವಾ ವಿಜಯನಗರದಲ್ಲಿ ಎಲ್ಲಿ ನೋಡಿದರಲ್ಲಿ ಎಂಬಂತೆ ದೇವಾಲಯಗಳು ಕಂಡುಬರುತ್ತವೆ. ಅದಕ್ಕೆ ಇದನ್ನು ದೇವಾಲಯಗಳ ಉದ್ಯಾನವನ ಎಂದು ಕರೆದಿರುವುದು. ಚಿಕ್ಕ ಹಾಗೂ ಬೃಹತ್ ಆಕಾರದ ದೇವಾಲಯಗಳು ತಮ್ಮದೆಯಾದಂತಹ ಸಂಸ್ಕೃತಿಯನ್ನು ತಮ್ಮ ತಮ್ಮ ಮಡಿಲಿನಲ್ಲಿ ಅಡಗಿಸಿಕೊಂಡು ಬೆಚ್ಚಗೆ ಕುಳಿತಿವೆ ಎನ್ನಬಹುದು. ಹಂಪಿಯಲ್ಲಿ ಕಂಡುಬರುವ ದೇವಾಲಯಗಳನ್ನೂ, ಕೆಲವು ಪಟ್ಟಿ ಮಾಡುವುದಾದರೆ ವಿರೂಪಾಕ್ಷ, ಹಜಾರರಾಮ, ವಿಜಯವಿಠಲಸ್ವಾಮಿ ದೇವಾಲಯಗಳು, ಕೋದಂಡರಾಮ, ಯಂತ್ರೋದ್ಧಾರಕ ಆಂಜನೇಯ ದೇವಸ್ಥಾನ, ಅಚ್ಯುತರಾಯ ದೇವಸ್ಥಾನ, ಸಾಸಿವೆಕಾಳು ಮತ್ತು ಕಡಲೆಕಾಳು ಗಣೇಶ ವಿಗ್ರಹಗಳು, ಕೃಷ್ಣದೇವಸ್ಥಾನ, ವಿಷ್ಣುಪಾದ ದೇವಸ್ಥಾನ, ಲಕ್ಷ್ಮೀನರಸಿಂಹ, ಬಡವಿಲಿಂಗ, ಸರಸ್ವತಿ ಗುಡಿ, ಉದ್ದಾನ ವೀರಭದ್ರ ದೇವಾಲಯ, ಚಂಡಿಕೇಶ್ವರ ದೇವಾಲಯ, ಗಾಣಗಿತ್ತಿ ಜೈನ ದೇವಾಲಯ, ಕಮಲಾಪುರದ ಪಟ್ಟಾಭಿರಾಮ ದೇವಾಲಯ, ಅನಂತಶಯನಗುಡಿ, ಮಲ್ಲನಗುಡಿ (ಮಲಪನಗುಡಿ) ಹಾಗೂ ಹೇಮಕೂಟದಲ್ಲಿರುವ ದೇವಾಲಯಗಳ ಸಮೂಹ. ಇವುಗಳಲ್ಲಿ ಅತ್ಯಂತ ಪ್ರಸಿದ್ಧವಾಗಿರುವಂತಹ ಹಾಗೂ ಪ್ರಮುಖವಾಗಿರುವಂತಹ ದೇವಾಲಯಗಳ ವರ್ಣನೆ:

1. **ವಿರೂಪಾಕ್ಷ ದೇವಸ್ಥಾನ:** ಈ ದೇವಾಲಯವು ವಿಜಯನಗರಕ್ಕಿಂತಲೂ ಹಿಂದಿನದೆಂದು ಕಂಡುಬರುತ್ತದೆ. ಏಕೆಂದರೆ ಈ ದೇವಾಲಯದ ಆವರಣದಲ್ಲಿರುವಂತಹ ವಿವಿಧ ಭಾಗಗಳನ್ನು ಬೇರೆ ಬೇರೆ ಕಾಲದಲ್ಲಿ ರಚಿತವಾಗಿರುವುದು, ಮತ್ತೆ ಕೆಲವು ಭಾಗಗಳು ಜೀರ್ಣೋದ್ಧಾರಗೊಂಡಿರುವುದು ಕಂಡುಬರುತ್ತದೆ. ಆದರೆ ಕಲ್ಯಾಣ ಮಂಟಪ, ಹಾಗೂ ಗೋಪುರಗಳನ್ನು ನಿರ್ಮಿಸಿ ದೇವಾಲಯದ ಆವರಣದೊಳಗೇ ಇತರ ಗುಡಿಗಳನ್ನು ಕಟ್ಟಿಸಿದ ಖ್ಯಾತಿಯು ವಿಜಯನಗರದರಸರಿಗೆ ಸಲ್ಲುತ್ತದೆ. ಏಕೆಂದರೆ ಪಂಪಾಕ್ಷೇತ್ರದ ಉಲ್ಲೇಖವು ಬಾದಾಮಿ ಚಾಲುಕ್ಯರ ಅರಸನಾದಂತಹ ವಿನಯಾದಿತ್ಯನ ತಾಮ್ರ ಶಾಸನದಲ್ಲಿ ಸಿಗುತ್ತದೆ. (*ಬಳ್ಳಾರಿ ಜಿಲ್ಲೆ ಶಾಸನ ಸಂಪುಟ*, ಕನ್ನಡ ವಿಶ್ವವಿದ್ಯಾಲಯ, ಹಂಪಿ) ಅದೇ ರೀತಿಯಲ್ಲಿ ಚಾಲುಕ್ಯ ಮನೆತನದ ಐದನೆಯ ವಿಕ್ರಮಾದಿತ್ಯ ಕ್ರಿ.ಶ. 1013ನೆಯ ಶಾಸನವೊಂದರಲ್ಲಿ ಪಂಪಾಪತಿ ಎನಿಸಿದ ಮಹಾಕಾಲನಿಗೆ ಪಲ್ಲವ ವಂಶದ ವೃದ್ಧಮಬ್ಬರಸಿ ಎಂಬಾಕೆ ಭೂದಾನ ಮಾಡಿದಳೆಂದಿದೆ. ಅಂದು ಪಂಪಾಪತಿಗೆ ಮಹಾಕಾಲನೆಂಬ ಹೆಸರಿದ್ದುದು ತಿಳಿದುಬರುತ್ತದೆ. ಕ್ರಿ.ಶ. 1199ರಲ್ಲಿ ಹುಟ್ಟಿದ ನಾಗವಂಶದ ಅರಸನಾದ ಕಲಿದೇವನ ಕಾಲದ ಶಾಸನದಲ್ಲಿ ಈ ದೇವರನ್ನು ವಿರೂಪಾಕ್ಷನೆಂದೂ, ದೇವಿಯನ್ನು ಪಂಪಾದೇವಿಯೆಂದೂ ಕರೆಯಲಾಗಿದೆ. ಇವುಗಳ ಆಧಾರದ ಮೇಲೆ ಇದೊಂದು ವಿಜಯನಗರಪೂರ್ವದ ದೇವಾಲಯವೆಂದು ಹೇಳಬಹುದು.

ವಿಜಯನಗರ ಸಾಮ್ರಾಜ್ಯವು 1336ರಲ್ಲಿ ಸ್ಥಾಪನೆಯಾದಾಗ ಅಂದಿನ ರಾಜ, ಪ್ರಭು, ದೈವ ಎಲ್ಲವೂ ವಿರೂಪಾಕ್ಷನೇ ಆಗಿದ್ದನು. ಅಂದರೆ ಸಂಸ್ಥಾಪಕ ರಾಜನು ವಿರೂಪಾಕ್ಷನಿಗೆ ಮೇಲಿನ ಸ್ಥಾನ ನೀಡಿದ್ದರು ಎಂದರ್ಥ. ಪ್ರವೇಶದ್ವಾರದ ಮೇಲೆ ಸುಮಾರು 165 ಅಡಿ ಎತ್ತರದ (52.6 ಮೀಟರ್) ಒಂಬತ್ತು ಅಂತಸ್ತಿನ ಬೃಹತ್ ಗೋಪುರವಿದೆ. ಇದನ್ನು ಎರಡನೆಯ ದೇವರಾಯನ ಕಾಲದಲ್ಲಿ ನಿರ್ಮಿತವಾಗಿದ್ದುದೆಂದು ಹೇಳಲಾಗಿದೆ. ಇದಕ್ಕೆ ಇನ್ನೊಂದು ಆಧಾರದ ಪ್ರಕಾರ

ಬಿಷ್ಟಪ್ಪಯ್ಯ ಎಂಬ ಭಕ್ತನು ಕಟ್ಟಿಸಿದನೆಂದೂ ಅದಕ್ಕೆ ಇಂದು ಬಿಷ್ಟಪ್ಪಯ್ಯ ಗೋಪುರ ಎಂದು ಸಹ ಕರೆದುಕೊಂಡು ಬರುವ ರೂಢಿಯಿದೆ. ಒಳಗಡೆ ಕೃಷ್ಣದೇವರಾಯನು ಕಟ್ಟಿಸಿದ ಗೋಪುರವು ಅಷ್ಟೇನೂ ಎತ್ತರವಿಲ್ಲ. ಇದು ಮೂರಂತಸ್ತಿನ ಗೋಪುರ. ಕೃಷ್ಣದೇವರಾಯನ ಪಟ್ಟಾಭಿಷೇಕವಾದ ನೆನಪಿಗೆ ಕಟ್ಟಿಸಿದನೆಂದು ತಿಳಿದುಬರುವ ಈ ಗೋಪುರವು ರಾಯಗೋಪುರ ಎಂದೂ ಕರೆಸಿಕೊಳ್ಳುತ್ತಿದೆ.

ಒಳ ಭಾಗದಲ್ಲಿ ರಂಗಮಂಟಪವಿದ್ದು (ಕಲ್ಯಾಣಮಂಟಪ) ಇದು ವಿಜಯನಗರ ಶೈಲಿಯ ಕಲೆಗೆ ಕೈಗನ್ನಡಿಯಂತಿದೆ. ಅಂದಿನ ಕಾಲದ ಚಿತ್ರಕಲೆಯಿಂದಲೂ ಶೋಭಿಸುತ್ತಾ ನಿಂತಿದೆ.

2. ಅಚ್ಯುತರಾಯ ದೇವರಾಯ: ಸೂಳೆ ಬಜಾರು ಎಂಬ ಪೇಟೆಯ ದಕ್ಷಿಣ ತುದಿಯಲ್ಲಿ ದೊಡ್ಡದಾದ ಅಚ್ಯುತರಾಯ ದೇವಾಲಯುವಿದೆ. ಇದು 1539ರಲ್ಲಿ ವಿಜಯನಗರದ ದೊರೆ ಅಚ್ಯುತದೇವರಾಯ ಕಟ್ಟಿಸಿದನೆನ್ನಲಾಗಿದೆ. ಉತ್ತರಾಭಿಮುಖವಾಗಿರುವ ಈ ದೇವಾಲಯದಲ್ಲಿ ಅನೇಕ ಭಾಗಗಳಿದ್ದು, ಗರ್ಭಗುಡಿಯಲ್ಲಿದ್ದಂತಹ ದೇವರು ತಿರುವೇಂಗಡನಾಥನೆನ್ನಲಾಗಿದ್ದು ಈ ದೇವಸ್ಥಾನಕ್ಕೆ ತಿರುವೇಂಗಡನಾಥ ದೇವಾಲಯವೆಂದೂ ಕರೆಯಲಾಗಿದೆ. ಇಲ್ಲಿಯೂ ಸಹ ವಿಜಯನಗರ ಶೈಲಿಯ ವಾಸ್ತುಗಳಾದಂತಹ ಪೂರ್ವ, ಪಶ್ಚಿಮ ಮತ್ತು ಉತ್ತರ ದಿಕ್ಕುಗಳಲ್ಲಿ ಗೋಪುರಗಳಿವೆ (ಈಗ ಸ್ವಲ್ಪ ನಶಿಸಿವೆ). ಹೊರ ಒಳ ಅಂಗಗಳಲ್ಲಿ ಎರಡು ಬದಿಗಳಲ್ಲಿಯೂ ಕಂಬಗಳ ಮಂಟಪಗಳಿವೆ. ಪ್ರದಕ್ಷಿಣಪಥ, ಅಂತರಾಳ, ಅರ್ಧಮಂಟಪ ಹಾಗೂ ಅಲಂಕೃತ ಮಹಾಮಂಟಪಗಳು ಒಂದಕ್ಕೊಂದು ಹೊಂದಿಕೊಂಡಿರುವುದು ಕಂಡುಬರುತ್ತವೆ.

3. ವಿಜಯ ವಿಠಲ ದೇವಾಲಯ: ಹಂಪಿಗೆ ಕಲಶಪ್ರಾಯವಾಗಿರುವ ದೇವಸ್ಥಾನ ವಿರೂಪಾಕ್ಷ ದೇವಾಲಯವಾದರೆ, ತಿಲಕಪ್ರಾಯವಾಗಿರುವ ದೇವಾಲಯ ವಿಜಯ ವಿಠಲ ದೇವಾಲಯ ಎನ್ನಬಹುದು.

ಜಗತ್ತಿನಲ್ಲಿಯೇ ಖ್ಯಾತಿವೆತ್ತ ಈ ವಿಠಲಸ್ವಾಮಿ ದೇವಾಲಯವು ಕಲಾಕುಶಲತೆಯ ದೃಷ್ಟಿಯಿಂದ ಅತ್ಯಂತ ಸುಂದರವಾಗಿದ್ದಾಗಿದೆ. ಅಲ್ಲಲ್ಲಿ ಹಾಳಾಗಿದ್ದರೂ ಶಿಲ್ಪ ವೈಭವಕ್ಕೆ ಕುಂದುಬಂದಂತಿಲ್ಲ. (ಎಎಸ್ಐ ನಿಂದ ಈಗ ದೇವಾಲಯದ ಜೀರ್ಣೋದ್ಧಾರ ಕೆಲಸ ನಡೆಯುತ್ತಿದೆ.) ಕೃಷ್ಣದೇವರಾಯನು 1513ರಲ್ಲಿ ಈ ದೇವಾಲಯವನ್ನು ಕಟ್ಟಿಸಲು ತೊಡಗಿದನೆಂದು ಹೇಳಿರುವುದು ಕಂಡುಬಂದರೂ ಸಹ ಹದಿನಾಲ್ಕನೆಯ ಶತಮಾನದ ಆದಿಭಾಗದಲ್ಲಿ ಈ ದೇವಾಲಯ ಅಸ್ತಿತ್ವದಲ್ಲಿತ್ತೆಂಬುದು ಹರಿಭಟ್ಟನಿಂದ ರಚಿತವಾದ 'ಉತ್ತರ ನರಸಿಂಹ ಪುರಾಣಂ'ದಿಂದ ತಿಳಿದುಬರುತ್ತದೆ. ಆದರೆ ಅಂದು ಒಂದು ಚಿಕ್ಕ ದೇವಾಲಯವಾಗಿದ್ದನ್ನು ಕೃಷ್ಣದೇವರಾಯನು ಬೃಹತ್ ದೇವಾಲಯವನ್ನಾಗಿ ನಿರ್ಮಿಸಲು ಪಣತೊಟ್ಟು ಸುಮಾರು ಐವತ್ತು ವರ್ಷಗಳು ಸತತವಾಗಿ ಸಾವಿರಾರು ಶಿಲ್ಪಿಗಳು ಹಗಲಿರುಳು ದುಡಿಯಬೇಕಾಯಿತು. ಇದರ ಫಲವಾಗಿಯೇ ವಿಜಯನಗರದ ವಾಸ್ತುಶಿಲ್ಪವು ಇಲ್ಲಿ ಕಲ್ಲರಳಿ ಹೂವಾಗಿ ಕಂಗೊಳಿಸುತ್ತಿದೆ. ಕೃಷ್ಣದೇವರಾಯನು ಕಳಿಂಗದ ದಿಗ್ವಿಜಯದ ನಂತರ ಈ ದೇವಾಲಯವನ್ನು ಕಟ್ಟಿಸಿದನೆಂದು ಶಾಸನವು ತಿಳಿಸುತ್ತದೆ. ಈ ದೇವಾಲಯದಲ್ಲಿ ಗರ್ಭಗೃಹವಿದ್ದರೂ ಯಾವ ವಿಗ್ರಹವನ್ನು ಪ್ರತಿಷ್ಠಾಪಿಸಿರಲಿಲ್ಲವೆಂದೂ ಕಂಡುಬರುತ್ತದೆ. ಆದರೆ ಕೆಲವು ಆಧಾರಗಳ ಪ್ರಕಾರ ತಾಳಿಕೋಟೆ ಯುದ್ಧದವರೆವಿಗೂ ಇಲ್ಲಿ ಪೂಜೆಗಳು ನಡೆಯುತ್ತಿದ್ದವೆಂದು ತಿಳಿಯುತ್ತದೆ.

ಅಂಗಳದ ಸುತ್ತ ಮಂಟಪದ ಸಾಲುಗಳಿವೆ. ಕಲ್ಯಾಣ ಮಂಟಪ, ಉತ್ಸವ ಮಂಟಪ, ನೂರು ಕಂಬಗಳ ಮಂಟಪ ಮತ್ತು ಮುಂಭಾಗದಲ್ಲಿ ಕಲ್ಲಿನ ರಥ ಇವೆ. ಇಲ್ಲಿನ ಕಲ್ಲಿನ ರಥವನ್ನು ಒಂದೇ ಶಿಲೆಯಿಂದ ಕೆತ್ತಲಾಗಿದೆ. ಇದೊಂದು ಸುಂದರವಾದ ರಚನೆ. ಸಾಮಾನ್ಯವಾಗಿ ವಿಷ್ಣು ದೇವಾಲಯಗಳ ಮುಂದೆ ಗರುಡನಿಗೆಂದು ಒಂದು ಸಣ್ಣ ಗುಡಿಯನ್ನು ಕಟ್ಟುವುದು ವಾಡಿಕೆ. ಇಲ್ಲಿ ಕಲ್ಲಿನ ರಥವೇ ಗರುಡನ ಗುಡಿಯಾಗಿದೆ ಎಂದು ಇತಿಹಾಸಕಾರರ ಅಭಿಪ್ರಾಯ. ರಥದ ಗರ್ಭಗೃಹದಲ್ಲಿ ಗರುಡನ ವಿಗ್ರಹವಿದೆ. ರಥದ ಮೇಲೆ ಇಟ್ಟಿಗೆಯ ಒಂದು ವಿಮಾನವಿತ್ತೆಂದೂ ಹೇಳಬಹುದು. ಆದರೆ ಇಂದು ಸಂಪೂರ್ಣ ಕಾಣಿಕೆಯಾಗಿದೆ. ಕಲ್ಲಿನ ರಥದಲ್ಲಿ ಸೂಕ್ಷ್ಮ ಕೆತ್ತನೆಯ ಕೆಲಸವನ್ನು ನೋಡಿ, ನಮ್ಮ ಸಂಸ್ಕೃತಿಯು ಎಳೆಎಳೆಯಾಗಿ ಹೊರಹೊಮ್ಮುವಂತೆ ಮಾಡುತ್ತದೆ. ಮಹಾಮಂಟಪದಲ್ಲಿ ನಲವತ್ತು ಕಂಗಳಿದ್ದು ಅವುಗಳೆಲ್ಲವೂ

ಸಮಾನಾಂತರದಲ್ಲಿವೆ. ಒಂದೊಂದು ಕಂಬವೂ ದೊಡ್ಡ ಗಾತ್ರಕ್ಕಿದ್ದು, ಶಿಲ್ಪಕಲೆ ಅಪೂರ್ವವೆನಿಸುತ್ತದೆ. ಸಣ್ಣ ಕಂಬಗಳ ಮೇಲೆ ಮೆಲ್ಲಗೆ ತಟ್ಟಿದಾಗ ಸಂಗೀತದ ಸಪ್ತಸ್ವರಗಳು ಹೊರಹೊಮ್ಮುತ್ತವೆ. ಈ ನಾದ ಮಾಧುರ್ಯದಿಂದ ಶಿಲೆಗಳು ಸಂಗೀತ ಹಾಡುತ್ತಿವೆಯೋ ಎನ್ನುವಂತೆ ಮಾಡುತ್ತದೆ.

4. ಹಜಾರರಾಮ ದೇವಾಲಯ: ಕೃಷ್ಣದೇವರಾಯನು ಹಂಪಿಯಲ್ಲಿ ಕಟ್ಟಿಸಿದ ದೇವಾಲಯಗಳಲ್ಲಿ ಹಜಾರರಾಮ ದೇವಾಲಯವೂ ಒಂದು. ಇದನ್ನು ಅವನ ದಿಗ್ವಿಜಯದ ಸಂಕೇತವಾಗಿ ಕಟ್ಟಿಸಿದ್ದು ಎಂಬ ಅಭಿಪ್ರಾಯವಿದೆ. ಈ ದೇವಾಲಯವು ರಾಮಾಯಣಕ್ಕೆ ಸಂಬಂಧಿಸಿದ ಅನೇಕ ಚಿತ್ರಗಳನ್ನು ಹೊಂದಿರುವುದರಿಂದಲೇ ಇದಕ್ಕೆ ಹಜಾರರಾಮ ಎಂದು ಹೆಸರು ಬರಲು ಕಾರಣವೆಂದು ಇತಿಹಾಸಕಾರರು ನಂಬಿದ್ದಾರೆ. ಹಜಾರವೆಂದರೆ ತೆಲುಗಿನಲ್ಲಿ ಸಭಾಮಂಟಪ ಎಂಬ ಅರ್ಥವಿದೆ. ಹಾಗೆಯೇ ಅರಮನೆಯ ದ್ವಾರಮಂಟಪ ಎಂಬ ಇನ್ನೊಂದು ಅರ್ಥವೂ ಇದೆ. ಈ ದೇವಾಲಯವು ರಾಜರ ಅರಮನೆಯ ಹೆಬ್ಬಾಗಿಲಿನಲ್ಲಿಯೇ ಇರುವುದರಿಂದ ಈ ಹೆಸರೂ ಬಂದಿರಬಹುದೆಂದು ಕೆಲವರ ಅಭಿಪ್ರಾಯ.

ದೇವಾಲಯದ ಹೊರಗಡೆಯು ಸುಂದರವಾದ ಕಲೆಯಿಂದ ಮೈತುಂಬಿಕೊಂಡು ಅಂದಿನ ಇತಿಹಾಸವನ್ನು ಸೂಚಿಸುತ್ತಿದೆ. ದೇವಾಲಯದ ಒಳಗಡೆ ರಾಮಾಯಣ, ಭಗವದ್ಗೀತೆಗೆ ಸಂಬಂಧಿಸಿದ ಚಿತ್ರಗಳು ಕಂಗೊಳಿಸುತ್ತಿವೆ. ಅವುಗಳಲ್ಲಿ ದಶರಥನಿಗಾಗಿ ಋಷ್ಯಶೃಂಗ ಮುನಿ ಪುತ್ರಕಾಮೇಷ್ಟಿ ಯಾಗ ಮಾಡುತ್ತಿರುವುದು, ಸೀತಾ ಸ್ವಯಂವರ ಸಂದರ್ಭದಲ್ಲಿ ಜನಕಮಹಾರಾಜನ ಪರಿವಾರದವರು ಮಹಾಭಾರತದ ಶಿವಧನುಸ್ಸು ಹೊತ್ತು ತರುತ್ತಿರುವುದು. ಕಿಷ್ಕಿಂದೆಯಲ್ಲಿ ರಾಮನು ಏಳು ತಾಳೆ ವೃಕ್ಷಗಳನ್ನು ಒಂದೇ ಬಿಲ್ಲಿನಿಂದ ತುಂಡು ಮಾಡುತ್ತಿರುವುದು, ಹನುಮಂತನಿಂದ ರಾಮನಿಗೆ ಚೂಡಾಮಣಿ ಪ್ರದಾನ, ನರಸಿಂಹ ಹಾಗೂ ಅವನ ತೊಡೆಯ ಮೇಲೆ ಲಕ್ಷ್ಮೀ, ಕೃಷ್ಣನ ಲೀಲಾ ದೃಶ್ಯಗಳು, ವಾಲಿಸುಗ್ರೀವರ ಕಾಳಗ ಮೊದಲಾದವು ಕಣ್ಣಿಗೆ ಆನಂದ ತರುತ್ತವೆ. ಹೇಳುವುದಾದರೆ ಹೊರಗೋಡೆಯ ಮೇಲೆ ಎಲ್ಲ ಹಿಂದೂ ದೇವಾನುದೇವತೆಗಳ ಚಿತ್ರವಿರುವುದು ಕಂಡುಬರುತ್ತದೆ. ಬುದ್ಧನಿಗೂ ಇಲ್ಲಿ ಸ್ಥಾನ ದೊರೆತಿರುವುದು ವಿಶೇಷವಾಗಿದೆ.

ದೇವಾಲಯದ ಹೊರಗೋಡೆಗಳಲ್ಲಿಯೂ ಸಹ ಕೆತ್ತನೆಗಳಿರುವುದು ಇಡೀ ದೇವಾಲಯದ ಆನಂದವನ್ನು ಶ್ರೀಮಂತಗೊಳಿಸಿದೆ ಎನ್ನಬಹುದು. ನಮ್ಮ ಸಂಸ್ಕೃತಿಯ ಪ್ರತೀಕಗಳಾಗಿ ಇವು ಇಂದಿಗೂ ಕಂಗೊಳಿಸುತ್ತಿವೆ. ಹೊರ ಗೋಡೆಗಳಲ್ಲಿ ಐದು ಹಂತದಲ್ಲಿ ಚಿತ್ರಗಳಿದ್ದು ಆನೆಗಳು ಹಾಗೂ ಅದರ ಮೇಲೆ ಸವಾರರು, ಕುದುರೆಗಳು ಹಾಗೂ ಅವನ್ನು ಎಳೆದೊಯ್ಯುತ್ತಿರುವ ಪುರುಷರು ಇಲ್ಲವೆ ಸವಾರರು, ರಥ ಕಾಲಾಳುಗಳು ಹಾಗೂ ಈಟಿ, ಭರ್ಚಿ ಹಿಡಿದು ಸಾಗುತ್ತಿರುವ ಸೈನಿಕರು, ನೃತ್ಯಗಾರ್ತಿಯರನ್ನು ಇಲ್ಲಿನ ಉಬ್ಬು ಶಿಲ್ಪಗಳಲ್ಲಿ ಕಡೆಯಲಾಗಿದೆ. ಹಜಾರರಾಮ ದೇವಾಲಯವು ಹಿಂದೂ ಧರ್ಮದ ಸಂಸ್ಕೃತಿಯನ್ನು ಹೊರಚೆಲ್ಲುತ್ತಿರುವ ಒಂದು ಕಲೆ ಎನ್ನಬಹುದಾಗಿದೆ. ದೇವಾಲಯವು ಒಳ ಹಾಗೂ ಹೊರ ಕೆತ್ತನೆಯಿಂದಾಗಿ ಸೌಂದರ್ಯಮಯವಾಗಿದೆ.

ಹೇಮಕೂಟ: ವಿಜಯನಗರ ಸಾಮ್ರಾಜ್ಯ ಸ್ಥಾಪನೆಯಾಗುವುದಕ್ಕೂ ಹಿಂದೆಯೇ, ಆಧಾರಗಳ ಪ್ರಕಾರ ಕಂಪಿಲರಾಯನ ಕಾಲದಲ್ಲಿ ಹಂಪಿಯಲ್ಲಿ ಕೆಲವು ಕದಂಬನಾಗರ ಶೈಲಿಯ (ಸಮಕಟ್ಟಾದ ಅಂತಸ್ತುಗಳ) ದೇವಾಲಯಗಳು ರಚನೆಗೊಂಡವು. ಅವು ಇಂದಿಗೂ ಸುರಕ್ಷಿತವಾಗಿ ಉಳಿದುಕೊಂಡು ಪವಿತ್ರಕ್ಷೇತ್ರವೆನ್ನಿಸಿಕೊಂಡು ಬೆಳೆದುಬರುತ್ತಿದೆ. ಡಾ॥ ಸಿಂದಗಿ ರಾಜಶೇಖರ ಅವರು ಇವುಗಳ ಕಾಲವನ್ನು ಕ್ರಿ.ಶ. 1350ರ ಮೊದಲು ನಿರ್ಮಾಣವಾಗಿರಬೇಕೆಂದು ಸೂಚಿಸುತ್ತಾರೆ. ಇದು ಸತ್ಯವೆಂದೂ ಹೇಳಬಹುದಾಗಿದೆ. ಇಲ್ಲಿರುವ ದೇವಾಲಯಗಳು ತಮ್ಮದೇಯಾದಂತಹ ವಿಶಿಷ್ಟ ಲಕ್ಷಣಗಳನ್ನು ಹೊಂದಿವೆ. ಅವುಗಳಲ್ಲಿ ಮುಖ್ಯವಾದವು:

1. ಗರ್ಭಗೃಹ, ಅರ್ಧ ಮಂಟಪ ಮತ್ತು ಮಹಾಮಂಟಪಗಳುಳ್ಳ ಈ ಆಲಯದ ಗರ್ಭಗೃಹವನ್ನು ನೀಳವಾದ, ಆಯತಾಕಾರದ, ನುಣುಪುಗೊಳಿಸಿದ ಕಲ್ಲುಗಳಿಂದ ಕಟ್ಟಲಾಗಿದೆ.
2. ಅರ್ಧ ಮಂಟಪ ಮತ್ತು ಮಹಾಮಂಟಪಗಳಲ್ಲಿ ಘನಾಕೃತಿಯ ಭಾರವಾದ ಸರಳವಾದ ಕಂಬಗಳಿವೆ.

3. ಗರ್ಭಗೃಹದ ಮೇಲೆ ಮೆಟ್ಟಿಲು ಮೆಟ್ಟಿಲುಗಳಾಗಿ ವಿಸ್ತಾರ ಕಡಿಮೆಯಾಗುತ್ತಾ ಹೋಗುವ ಗೋಪುರಗಳಿರುವುದು.
4. ಬೆಣಚುಕಲ್ಲಿನಲ್ಲಿ ನಿರ್ಮಿಸಿದ ಈ ದೇವಾಲಯಗಳ ಅಧಿಷ್ಠಾನ ಸರಳ ಮತ್ತು ನಿರಾಲಂಕಾರವಾಗಿದೆ.
5. ಹೊರಗೋಡೆಗಳು ವೈವಿಧ್ಯವಿಲ್ಲದ, ನಿರ್ವಿಶೇಷ ಸಾದಾ ಗೋಡೆಗಳಾಗಿವೆ.
6. ಪ್ರವೇಶ ಮಂಟಪವು ಅರ್ಧತೆರೆದಿದ್ದು ಇದರಲ್ಲಿ ಕೂರಲು ಸುತ್ತಲೂ ಕಲ್ಲಿನ ಕಟ್ಟೆಯಿದೆ. ಇದರ ಮೇಲೆ ಚಿಕ್ಕ ಪ್ರಮಾಣದ ಕಂಬಗಳನ್ನು ಸೇರಿಸಲಾಗಿದೆ.

ಹೇಮಕೂಟದ ಮೇಲಿನ ಈ ದೇವಾಲಯಗಳ ಸಮೂಹ ಶೈವಮೂಲದವಾಗಿದ್ದು ಕ್ರಿ.ಶ. ಒಂಬತ್ತರಿಂದ ಹದಿನಾಲ್ಕನೆ ಶತಮಾನದ ಆರಂಭ ಕಾಲದವರೆಗಿನ ಅವಧಿಯಲ್ಲಿ ಕಟ್ಟಿಸಿರಬಹುದೆಂದು ತಿಳಿಯಬಹುದಾಗಿದೆ. ಇವು ಹಂಪಿಯ ಪರಿಸರದಲ್ಲಿ ಕಂಡುಬರುವ ಬಹುಹಿಂದಿನ ರಚನೆಗಳು ಎನ್ನಬಹುದು. ಈ ರಚನೆಯನ್ನು ಹೋಲುವಂತಹ ದೇವಾಲಯಗಳು ಕಮಲಾಪುರದ ಪ್ರವಾಸಿ ಬಂಗಲೆಯ ಸಮೀಪದಲ್ಲಿ ಕಂಡುಬರುತ್ತದೆ. ಇದನ್ನು ಇಂದು ಗಾಣಗಿತ್ತಿ ಗುಡಿ ಎಂದು ಕರೆಯಲಾಗುತ್ತಿದೆ.

ವಿಜಯನಗರದ ಚಿತ್ರಕಲೆ

ಪ್ರಾಚೀನ ಕಾಲದಿಂದಲೂ ಚಿತ್ರಕಲಾ ಸಂಸ್ಕೃತಿಯು ಮಾನವರಲ್ಲಿ ಮನೆಮಾಡಿಕೊಂಡಿತ್ತೆನ್ನಬಹುದು. ಒಂದು ದೃಷ್ಟಿಯಲ್ಲಿ ಈ ಸಂಸ್ಕೃತಿಯು ಕಣ್ಣಿಗೆ ಕಾಣದ ಕೇವಲ ಆಚರಣೆಗಳಲ್ಲಿ ಮಾತ್ರ ಮನಸ್ಸಿಗೆ ಗೋಚರವಾಗುವ ಕಲ್ಪನೆಯಾಗಿತ್ತೆನ್ನಲೂಬಹುದು. ಈ ಚಿತ್ರಕಲಾ ಸಂಸ್ಕೃತಿಯು ಸಾಮಾನ್ಯವಾಗಿ ಮಾನವ ಜನಾಂಗಗಳು ಎಲ್ಲೆಲ್ಲಿ ಒಟ್ಟೊಟ್ಟಿಗೆ ವಾಸಮಾಡಲು ಆರಂಭಿಸಿದವೋ ಅಲ್ಲೆಲ್ಲ ಬೇರೆ ಬೇರೆಯಾಗಿ, ಪ್ರಾದೇಶಿಕವಾಗಿ ಭಿನ್ನ ಭಿನ್ನ ರೀತಿಯಲ್ಲಿ ಬೆಳೆಯಲಾರಂಭಿಸಿತು. ಕಾಲ ಕಳೆದಂತೆ ಸಂಸ್ಕೃತಿಯು ನಾಗರಿಕತೆಯಾಗಿ ವಿಕಾಸಗೊಂಡಿರುತ್ತಿರುವುದು ನಮಗೆಲ್ಲ ತಿಳಿದಿರುವ ವಿಷಯವೇ. ವಿಜಯನಗರದರಸರ ಪೂರ್ವದಲ್ಲಿಯೂ ಚಿತ್ರಕಲೆ ಕಂಡುಬಂದರೂ ಮೇಲೆ ತಿಳಿಸಿದ್ದಂತೆ ಸಂಸ್ಕೃತಿಯಲ್ಲಿ ಬದಲಾವಣೆಗೊಂಡಂತಹ ವಿಜಯನಗರದ ಅರಸರು ನಾಗರಿಕತೆಯಲ್ಲಿ ಬದಲಾವಣೆ ಕಾಣಲಾರಂಭಿಸಿದ್ದರಿಂದ ಕಲೆಗಳೂ ವೈವಿಧ್ಯಮಯವಾಗಿ ಬೆಳೆಯಿತೆನ್ನಬಹುದಾಗಿದೆ. ಅಂದಿನ ಕಲೆಗಾರರು ಕಲೆಯನ್ನು ಕಲೆಗಾಗಿ ಕಲೆ, ಪ್ರವೃತ್ತಿಗಾಗಿ ಕಲೆ ಎಂದು ನಂಬಿದವರಾಗಿದ್ದರು ಎಂದರೆ ತಪ್ಪಾಗದು.

ಹಂಪಿಯ ವಿರೂಪಾಕ್ಷ ದೇವಾಲಯದ ಕಲ್ಯಾಣಮಂಟಪದ ಒಳಮಾಳಿಗೆಯ ಮೇಲೆ ಕಂಡುಬರುವಂತಹ ಶಿವಪಾರ್ವತಿಯರ ಕಲ್ಯಾಣ ವೈಭವದ ವಿವಿಧ ವರ್ಣಗಳ ಚಿತ್ರಗಳನ್ನು ಹೊರತುಪಡಿಸಿದರೆ, ಹಂಪಿಯಲ್ಲಿ ಕಂಡುಬರುವಂತಹ ಇನ್ನಾವ ದೇವಾಲಯಗಳಲ್ಲಿಯೂ ಅಥವಾ ಬೇರೆ ಎಲ್ಲೂ ವಿಜಯನಗರದ ಚಿತ್ರಕಲೆಯು ಕಂಡುಬರುವುದಿಲ್ಲ. ಆದರೆ ಹಂಪಿಗೆ ಮೂರು ಮೈಲಿಗಳ ದೂರದಲ್ಲಿರುವ ಆನೆಗುಂದಿಯ ಅರಮನೆಯಲ್ಲಿ ಮಾತ್ರ ಚಿತ್ರಕಲೆ ಇರುವುದು ಕಂಡುಬರುತ್ತದೆ. ಇದಕ್ಕೆ ಅಲ್ಲಿನ ಹುಚ್ಚಪ್ಪಯ್ಯ ಮಠ ನಿದರ್ಶನವಾಗಿದೆ. ವಿರೂಪಾಕ್ಷದೇವಾಲಯದ ಕಲ್ಯಾಣ ಮಂಟಪದಲ್ಲಿರುವ ಚಿತ್ರಕಲೆಯು ಪುರಾಣದ ವಿಷಯಗಳನ್ನು ಒಳಗೊಂಡಿದ್ದಾಗಿರುತ್ತದೆ. ಅಲ್ಲಿ ತ್ರಿಪುರ ಸಂಹಾರಿ, ಕಾಮದಹನ ಮೂರ್ತಿ ಮೊದಲಾದಂತಹ ಶಿವ ರೂಪಗಳುಳ್ಳ ಹಲವು ವರ್ಣಚಿತ್ರಗಳು, ಅರ್ಜುನನ ಮತ್ಸ್ಯಭೇದ, ಪಲ್ಲಕ್ಕಿಯಲ್ಲಿ ಕುಳಿತು ಮೆರವಣಿಗೆಯಲ್ಲಿ ಹೋಗುತ್ತಿರುವ ಸನ್ಯಾಸಿಯ ಚಿತ್ರ, ದಶಾವತಾರ, ಶಿವಪಾರ್ವತಿಯರ ಕಲ್ಯಾಣದ ವೈಭವಗಳು ಚಿತ್ರಿತವಾಗಿರುವ ಚಿತ್ರಕಲೆಯಾಗಿದೆ. ಸನ್ಯಾಸಿಯ ಚಿತ್ರದಲ್ಲಿ ಸನ್ಯಾಸಿಯು ವಿದ್ಯಾರಣ್ಯರೆಂದು ಇತಿಹಾಸಕಾರರು ತಿಳಿಸುತ್ತಾರೆ. ಈ ಚಿತ್ರಗಳು ವಿಜಯನಗರದ ಕಾಲದ ಚಿತ್ರಕಲೆಯ ಕುರುಹಾಗಿ ಇಂದಿಗೂ ಉಳಿದಿವೆ ಎನ್ನಬಹುದಾಗಿದೆ.

ವಿಜಯನಗರದ ಚಿತ್ರಕಲೆಯು ಹಂಪಿ ಹಾಗೂ ಆನೆಗುಂದಿಗಳಲ್ಲದೆ ನಾಡಿನ ವಿವಿಧ ಪ್ರದೇಶ ಹಾಗೂ ತಮಿಳುನಾಡಿನ ದೇವಾಲಯಗಳಲ್ಲಿಯೂ ಕಂಡುಬರುತ್ತದೆ. ಇದರಲ್ಲಿ ಪ್ರಮುಖವಾಗಿ ಹಿಂದೂಪುರ ತಾಲ್ಲೂಕಿನಲ್ಲಿರುವ ಲೇಪಾಕ್ಷಿಯ

ಪಾಪನಾಥೇಶ್ವರ ದೇವಾಲಯ, ಇದರ ಕಾಲವನ್ನು ಕ್ರಿ.ಶ. 1535 ಎಂದು ಪರಿಗಣಿಸಲಾಗಿದೆ. ಚಿತ್ತೂರು ಜಿಲ್ಲೆಯ ಮದನಪಲ್ಲಿ ತಾಲ್ಲೂಕಿನ ಸೋಮಪಲ್ಲಿಯ ಚೆನ್ನಕೇಶವ ದೇವಾಲಯ, ಇದರ ಕಾಲ ಕ್ರಿ.ಶ. 1550; ಕಾಂಚೀಪುರದ ವರದರಾಜಸ್ವಾಮಿ ದೇವಸ್ಥಾನದಲ್ಲಿ, ಇದರ ಕಾಲ ಕ್ರಿ.ಶ. 1509–1530; ಕಾಂಚೀಪುರದ ಹತ್ತಿರವಿರುವ ಜಿನಕಂಚಿಯ ವರ್ಧಮಾನ ದೇವಾಲಯದಲ್ಲಿ, ಇದರ ಕಾಲ 1378–1404 – ಈ ಪ್ರದೇಶಗಳಲ್ಲಿಯೂ ವಿಜಯನಗರದ ಚಿತ್ರಕಲೆಯು ಉಳಿದುಕೊಂಡು ಅಧ್ಯಯನಕ್ಕೆ ಯೋಗ್ಯವಾಗಿ ಬೆಳೆದು ಬಂದಿದೆ.

ಲೇಪಾಕ್ಷಿಯ ಪಾಪನಾಥೇಶ್ವರ ದೇವಾಲಯದಲ್ಲಿರುವ ಕೆಲವು ಚಿತ್ರಗಳು ಜೈನ ಶೈಲಿಯಲ್ಲಿ ಮತ್ತೆ ಕೆಲವುಗಳು ತಂಜಾವೂರಿನ ಶೈಲಿಯಲ್ಲಿ ರಚಿಸಲ್ಪಟ್ಟಿರುತ್ತವೆ ಎನ್ನಬಹುದಾಗಿದೆ. ಏಕೆಂದರೆ ತಂಜಾವೂರಿನ ಶೈಲಿಯಲ್ಲಿ ಬಿಡಿಸಿದ ಚಿತ್ರಗಳು ವಿರೂಪಾಕ್ಷ ದೇವಸ್ಥಾನದ ಚಿತ್ರಗಳನ್ನು ಸಂಪೂರ್ಣವಾಗಿ ಹೋಲುವುವು. ಲೇಪಾಕ್ಷಿಯ ವರ್ಣಚಿತ್ರಗಳನ್ನು ಕರಿ, ಹಸಿರು, ಬೂದಿಬಣ್ಣ, ಹಳದಿ ಮಿಶ್ರಿತ ಕಂದುಬಣ್ಣ ಮತ್ತು ಕಿರಿಮಂಚಿ ಬಣ್ಣಗಳನ್ನು ಬಳಸಿ ಚಿತ್ರಿಸಲಾಗಿದೆ. ಇವು ಇಂದಿಗೂ ಮನಮೋಹಕವಾಗಿದೆ.

ಇತಿಹಾಸಕಾರರ ಪ್ರಕಾರ ಕೃಷ್ಣದೇವರಾಯನ ಕಾಲದಲ್ಲಿ ವಿಜಯನಗರದ ಚಿತ್ರಕಲೆಯು ಉನ್ನತ ಸ್ಥಿತಿಯನ್ನು ಪಡೆದಿದ್ದಿತೆಂದೂ ಅವನ ನಂತರ ಕ್ಷೀಣಿಸತೊಡಗಿತ್ತೆಂದೂ ಅಭಿಪ್ರಾಯಪಡುತ್ತಾರೆ. 1556ರಲ್ಲಿ ವಿಜಯನಗರದ ನಿರ್ಣಾಯಕ ಯುದ್ಧದ ತರುವಾಯ ಸಾಮ್ರಾಜ್ಯದಲ್ಲಿ ಅಶಾಂತಿ ತುಂಬಿದ ಪ್ರಯುಕ್ತ ಚಿತ್ರಕಲೆಗೆ ಯಾವುದೇ ರೀತಿಯ ಪೋಷಣೆ ದೊರೆಯಲಿಲ್ಲವೆನ್ನಬಹುದು.

ಆಧಾರಗ್ರಂಥಗಳು

1. ಶ್ರೀ ಜಯತೀರ್ಥ ರಾಜಪುರೋಹಿತ ಮತ್ತು ಶ್ರೀ ಬಿ.ಎ. ಸನದಿ (ಸಂ.), *ತುಂಗಾ ತರಂಗ*, ಪ್ರಕಾಶಕರು: ತುಂಗಭದ್ರಾ ಯೋಜನೆಯ ಆಡಳಿತಾಧಿಕಾರಿಗಳು, ಕಲಬುರ್ಗಿ, 1968.
   - ಅ. *ತುಂಗವೇಣಿ*, ಪಾಂಡುರಂಗರಾವ್ ದೇಸಾಯಿ, ಕ.ವಿ.ವಿ., ಧಾರವಾಡ.
   - ಆ. *ತುಂಗಭದ್ರಾ ಸೀಮೆಯ ಜನಜೀವನ*, ಶ್ರೀ ನಾಗರಾಜು. ಶ.ಕಾಳೆ, ರಾಯಚೂರು.
   - ಇ. *ವಿಜಯನಗರದ ಕಾಲದಲ್ಲಿ ನೀರಾವರಿ ಕಾರ್ಯಗಳು*, ಡಾ. ಬಾ.ರಾ. ಗೋಪಾಲ, ಕ.ವಿ.ವಿ., ಧಾರವಾಡ.
   - ಈ. *ತುಂಗಭದ್ರಾ ಪ್ರದೇಶ ಕಲೆಯ ಕಣಜ*, ಕೆ.ವಿ. ಇರ್ನಿರಾಯ, ಐ.ಎ.ಎಸ್.
   - ಉ. *ವಿಜಯನಗರದ ಸಾಮ್ರಾಜ್ಯ ಮತ್ತು ಸಾಹಿತ್ಯ*, ವಿ. ಕೃಷ್ಣಕಟ್ಟಿ, ರಾಯಚೂರು.
   - ಊ. *ತುಂಗಭದ್ರೆಯ ಪರಿಸರದಲ್ಲಿರುವ ಐತಿಹಾಸಿಕ ಮತ್ತು ಧಾರ್ಮಿಕ ಕ್ಷೇತ್ರಗಳು*, ಧ್ರುವನಾರಾಯಣ, ರಾಯಚೂರು.
   - ಋ. *ತುಂಗಭದ್ರ ಪರಿಸರದಲ್ಲಿ ಶರಣರು*, ಸಾಧುಸಂತರು, ವೀರಶೈವ ಕವಿಗಳು, ಶ್ರೀ ಶಾಂತರಸ, ಬಿ.ಎ.ಇ.ಇಡ್.
   - ೠ. *ತುಂಗಭದ್ರಾ ತೀರದ ಇಕ್ಕೆಲಗಳಲ್ಲಿ ಹರಿದ ಹರಿದಾಸ ಸಾಹಿತ್ಯ*, ಪಿ.ಎಂ. ಗಲಗಲಿ, ಎಂ.ಎ., ರಾಯಚೂರು.
   - ಎ. *ತುಂಗಭದ್ರೆಯ ತಡಿಯಲ್ಲಿ ಧಾರ್ಮಿಕ ಮತ್ತು ಆಧ್ಯಾತ್ಮಿಕ ಬೆಳವಣಿಗೆ*, ಹೆಚ್.ಎ. ಸುಬ್ಬರಾವ್, ರಾಯಚೂರು.
2. ನಾಗೇಶ ಶಾಸ್ತ್ರಿ ವೈ. ಮತ್ತು ವೆಂಕಟೇಶಯ್ಯ, ಎಂ.ಜಿ., *ರಾಘವಾಂಕ ವಿರಚಿತ ಹರಿಶ್ಚಂದ್ರ ಕಾವ್ಯ*, 1957.
3. ಕೆ.ಕೆ. ಬಸವನಾಳ, *ಹಂಪೆಯ ಹರಿಹರ ಸೇವೆ ವಿರಚಿತ ರಕ್ಷಾಶತಕ*, 1943.
4. ವಿಷ್ಣು ತೀರ್ಥ ಪಿ., *ಪಂಪಾ ಮಹಾತ್ಮ್ಯಂ*, 1963.
5. ಆಲೂರು ವೆಂಕಟರಾವ್, *ಕರ್ನಾಟಕ ಗತ ವೈಭವ*.
6. ಮೈಸೂರು ವಿಶ್ವವಿದ್ಯಾನಿಲಯ, ಪ್ರಸಾರಾಂಗ, *ಕರ್ನಾಟಕ ಕನ್ನಡ ವಿಷಯ ವಿಶ್ವಕೋಶ*.
7. ಬಿ. ವೆಂಕೋಬರಾವ್, *ಮೈಸೂರು ದೇಶದ ವಾಸ್ತುಶಿಲ್ಪ*, 1959.

ಅ. ಚಾರಿತ್ರಿಕ ಹಿನ್ನೆಲೆ

ಆ. ವಾಸ್ತುಕಲೆ

ಇ. ಕರ್ನಾಟಕ ಶೈಲಿ

ಈ. ಶಿಲ್ಪಕಲೆ

ಉ. ವಿಜಯನಗರ

8. ಧ್ರುವ ನಾರಾಯಣ, *ನಾರಾಯಣ ದೇವರ ಕೆರೆ*, 1979.
9. ಚಿಕ್ಕೇರೂರು ಗೋವಿಂದಾಚಾರ್ಯ, *ಹರಪನಹಳ್ಳಿ ಚರಿತ್ರೆ* (ಅಪ್ರಕಟಿತ).
10. ದೇವೇಂದ್ರ ಕ್ರಿಷ್ಣಾಚಾರ್ಯ, *ನರಹರಿ ತೀರ್ಥ ಸ್ತುತಿ*.
11. ವಿ.ಸೀ., *ಪಂಪಾಯಾತ್ರೆ*.
12. ಬಾದನಾರಾಯಣ ಕೂಡ್ಲಿಗಿ, *ತಾಯೆ ತುಂಗೆ-ಭದ್ರೆ, ಚೌಪದಿ ಕಥನ ಕವನ*.
13. ಎಸ್.ಆರ್. ಕರೂರ್, *ಶ್ರೀಕೃಷ್ಣದೇವರಾಯ*.
14. ಪ್ರೊ. ಸಂ.ಶಿ. ಭೂಸನೂರ ಮಠ (ಸಂ.), ವಿಜಯ ಕಲ್ಯಾಣ (ವಿಜಯನಗರ ಸಂಸ್ಕೃತಿಯ ಸಮಗ್ರ ದರ್ಶನ)
15. ಕೆ. ವೆಂಕಟರಾಮಪ್ಪ, *ಶ್ರೀ ಕೃಷ್ಣದೇವರಾಯನ ಕಾಲದ ಕರ್ಣಾಟಾಂಧ್ರ ಸಾಹಿತ್ಯ ಸಮೀಕ್ಷೆ*, ಕನ್ನಡ ಅಧ್ಯಯನ ಸಂಸ್ಥೆ, ಮೈ.ವಿ.ವಿ., 1974.
16. ಡಾ. ಎ.ವಿ. ವೆಂಕಟರತ್ನಂ, *ವಿಜಯನಗರ ಸಾಮ್ರಾಜ್ಯದಲ್ಲಿ ಸ್ಥಳೀಯ ಸರ್ಕಾರ*, ಕನ್ನಡ ಅಧ್ಯಯನ ಸಂಸ್ಥೆ, ಮೈ.ವಿ.ವಿ., 1974.
17. ಜಿ.ಎಸ್. ದೀಕ್ಷಿತ್ (ಸಂ.), *ಸಂಗಮರ ಕಾಲದ ವಿಜಯನಗರ: ಅದರ ಇತಿಹಾಸ ಮತ್ತು ಸಂಸ್ಕೃತಿಗಳ ಅಧ್ಯಯನ*, ಬಿ.ಎಂ.ಶ್ರೀ ಪ್ರತಿಷ್ಠಾನ, ಬೆಂಗಳೂರು
18. ವಿ. ಫಿಲಿಯೋಜ, *ಅಳಿದುಳಿದ ಹಂಪೆ*, 1982.
19. ವಿ. ಫಿಲಿಯೋಜ, *ಹಂಪೆ*, 1976
20. ವಿ. ಫಿಲಿಯೋಜ, *ವಿಜಯನಗರ ಸಾಮ್ರಾಜ್ಯ ಸ್ಥಾಪನೆ*, 1980.
21. ಡಿ.ವಿ. ಗುಂಡಪ್ಪ, *ವಿದ್ಯಾರಣ್ಯರ ಸಮಕಾಲೀನರು*, 1933.
22. ಈಶ್ವರ ದತ್ತ ಕೆ., *ಜೀರ್ಣ ವಿಜಯನಗರ ಚರಿತ್ರೆ*, 1928.
23. ಎಸ್.ಬಿ. ಕೋಡದ, *ವಿಜಯನಗರ ನಿರ್ಣಾಯಕ ಯುದ್ಧ*, ಧಾರವಾಡ, 1972.
24. ಕೆ. ಕೃಷ್ಣರಾವ್, *ಕರ್ನಾಟಕ ಸಂಸ್ಕೃತಿಯ ಸಂಶೋಧನ*, ಸಂಶೋಧಾತ್ಮಕ ಲೇಖನಗಳು, ಮೈಸೂರು, 1970.
25. ಎಂ.ವಿ. ಕೃಷ್ಣರಾವ್ ಮತ್ತು ಎಂ.ಕೆ. ಭಟ್ (ಸಂ), *ಕರ್ನಾಟಕ ಇತಿಹಾಸ ದರ್ಶನ*, 1970.
26. ಜಿ.ಎಸ್. ಕುಲಕರ್ಣಿ, *ವಿಜಯನಗರ ಸ್ಮಾರಕೋತ್ಸವ*, 1939.
27. ಪಿ. ಕುಲಕರ್ಣಿ, *ಹಾಳು ಹಂಪೆ*, 1931.
28. ಜಿ.ಡಿ. ನಾಡಕರ್ಣಿ, *ಕನ್ನಡಕ್ಕೆ ಪುರಂದರದಾಸರು ನೀಡಿದ ಕೊಡುಗೆ*, ಧಾರವಾಡ, 1975.
29. ಹೆಚ್.ಎಲ್. ನಾಗೇಗೌಡ, *ಪ್ರವಾಸಿ ಕಂಡ ಇಂಡಿಯಾ*, ಭಾಗ-2, ಮೈಸೂರು ವಿಶ್ವವಿದ್ಯಾನಿಲಯ, 1966.
30. ಎ.ಎಸ್. ನಂಜುಂಡ ಸ್ವಾಮಿ, *ವಿಜಯನಗರ ಇತಿಹಾಸ*, 1972.
31. ಆರ್. ನರಸಿಂಹಾಚಾರ್ ಮತ್ತು ಇತರರು, *ಕರ್ನಾಟಕ ಕವಿ ಚರಿತ್ರೆ*, 1907.
32. ಆರ್.ಎಸ್. ಪಂಚಾಕ್ಷಿ, *ವಿರೂಪಾಕ್ಷ ವಸಂತೋತ್ಸವ ಚಂಪು*, 1953.
33. ರಾಮಸ್ವಾಮಿ ಅಯ್ಯಂಗಾರ್, *ಜೀರ್ಣ ವಿಜಯನಗರ ದರ್ಶನ*, ಮೈಸೂರು 1916.
34. ಎಸ್. ಸಧ್ಯೋಜಾತ, *ವಿಜಯನಗರ ಕಾಲದ ಧಾರ್ಮಿಕ ಜೀವನ*, 1981.

35. ಬಿ.ಎ. ಸಾಲೆತೊರೆ ಮತ್ತು ಇತರರು, *ಕನ್ನಡ ನಾಡಿನ ಚರಿತ್ರೆ*, (1969 ಮತ್ತು 1970), 1, 2, 3, ಸಂಪುಟಗಳು, ಬೆಂಗಳೂರು, 1969 ಮತ್ತು 1970.
36. ಫ.ಟಿ. ಶರ್ಮ, *ರಾಮರಾಯನ ಬಖೈರು*, ಮೈಸೂರು, 1922.
37. ಡಿ.ಎಸ್. ಶಾನಭಾಗ್ (ಸಂ.), *ಗಂಗಾ ದೇವಿಯ ಮಧುರ ವಿಜಯ*, ಧಾರವಾಡ, 1902.
38. ಸಿದ್ಧಲಿಂಗೇಶ್ವರ ಸ್ವಾಮಿ, ಸಿ.ಆರ್ (ಅನು.), *ಶ್ರೀ ಪಂಪಾ ಮಹಾತ್ಮೆ*, ಹೊಳಗುಂಡಿ, 1983.
39. ಬಿ.ಎಂ. ಶ್ರೀಕಂಠಯ್ಯ (ಸಂ.), *ಕನ್ನಡ ನಾಡಿನ ಚರಿತ್ರೆ*, 1941.
40. ಕೆ. ಶ್ರೀಕಂಠಯ್ಯ, *ವಿಜಯನಗರ ಕಾಲದ ಕನ್ನಡ ಸಾಹಿತ್ಯದಲ್ಲಿ ಜನಜೀವನ ಚಿತ್ರ*, ಮೈಸೂರು, 1983.
41. ಪಿ.ಆರ್. ಸುಬ್ಬರಾವ್, *ಕ್ರಿಯಾಶಕ್ತಿ ವಿದ್ಯಾರಣ್ಯ*, (ಒಂದು ಕಟ್ಟು ಕಥೆಯ ಸಮೀಕ್ಷೆ), ಮೈಸೂರು, 1947.
42. ಪಿ. ತಾತಾಚಾರ್ಯ (ಸಂ.), *ರಾಮರಾಯನ ಬಖೈರು*, ಮೈಸೂರು.
43. ಸಿ.ಟಿ.ಎಂ. ಕೊಟ್ರಯ್ಯ, *ಹಂಪೆ ವಿರೂಪಾಕ್ಷ ದೇವಾಲಯದ ವರ್ಣ ಚಿತ್ರಗಳು*.
44. ಪ್ರೊ. ಎಂವಿ. ಸೀತಾರಾಮಯ್ಯ ಮತ್ತು ಡಾ॥ ದಿ.ಎಸ್.ಎಸ್. ಆಚಾರ್ಯ (ಸಂ.), *ಶ್ರೀ ಕೃಷ್ಣದೇವರಾಯನ ದಿನಚರಿ*, ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ, ಬೆಂಗಳೂರು, 1983.
45. ಬೆಲ್ಲದ ಚೆನ್ನಪ್ಪ, *ಶ್ರೀ ಕಲ್ಮಟೇಶ್ವರ ದೇವಸ್ಥಾನ* ಮತ್ತು ಜಾತ್ರೆ, ಚಿತ್ತವಾಡಿಗೆ ಹೊಸಪೇಟೆ.
46. ಟಿ.ಬಿ. ಕೇಶವರಾವ್ (ಸಂಗ್ರಾಹಕರು), *1858–ಭಾರತ–1945 ಸ್ವಾತಂತ್ರ್ಯ ಸಂಗ್ರಾಮ, ಬಳ್ಳಾರಿ ಜಿಲ್ಲೆಯ ಕಾಣಿಕೆ*.
47. ಎ. ಶಿವರಾಮಪ್ಪ, *ಹೊಸಪೇಟೆ ತಾಲ್ಲೂಕು ದರ್ಶನ*, ಐ.ಬಿ.ಎಚ್. ಪಬ್ಲಿಕೇಷನ್, ಬೆಂಗಳೂರು, 1987.
48. ರಂ. ಶ್ರೀ ಮುಗಳಿ, *ಕನ್ನಡ ಸಾಹಿತ್ಯ ಚರಿತ್ರೆ*, ಮೈಸೂರು, 1960.
49. ಯು. ರಾಘವೇಂದ್ರ ರಾವ್, *ಶ್ರೀ ಕುಂಟೋಜಿ ದಾಸರು*, ಗುಲ್ಬರ್ಗಾ ವಿಶ್ವವಿದ್ಯಾಲಯ, ಗುಲ್ಬರ್ಗಾ, 1991.
50. *ಕರ್ನಾಟಕ ಚರಿತ್ರೆ*, ಸಂಪುಟ, ಭಾಗ 1–7, ಕನ್ನಡ ವಿಶ್ವವಿದ್ಯಾಲಯ, ಹಂಪಿ, 1997.
51. ಬೆಟಗೇರಿ ಕೃಷ್ಣಶರ್ಮ, *ಕರ್ನಾಟಕ ಜನ ಜೀವನ*, ಸಮಾಜ ಪುಸ್ತಕಾಲಯ, ಧಾರವಾಡ, 1955,
ಕನ್ನಡ ನಾಡಿನ ಚರಿತ್ರೆ, ಭಾಗ 1–2, ಕನ್ನಡ ಸಾಹಿತ್ಯ ಪರಿಷತ್ ಪ್ರಕಟಣೆ, ಬೆಂಗಳೂರು.
52. ಡಾ. ತಿಪ್ಪೇರುದ್ರಸ್ವಾಮಿ, *ಕರ್ನಾಟಕ ಸಂಸ್ಕೃತಿ ಸಮೀಕ್ಷೆ*, ಡಿ.ವಿ.ಕೆ. ಮೂರ್ತಿ, ಮೈಸೂರು, 4, 1968.
53. ಡಾ. ಎಂ.ಚಿದಾನಂದ ಮೂರ್ತಿ, *ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ*, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, 1966.
54. ಪ್ರೊ. ಎಂ. ಮರಿಯಪ್ಪ ಭಟ್, *ಕನ್ನಡ ಸಂಸ್ಕೃತಿ*, ಕರ್ನಾಟಕ ಸಹಕಾರಿ ಪ್ರಕಾಶನ ಮಂದಿರ, ಬೆಂಗಳೂರು, 1967.
55. ಕಟ್ಟಿ ಶೇಷಾಚಾರ್ಯ, ಕವಿ ಕನಕದಾಸರು, ಬೆಳಗಾಂ, 1938.
56. ಜಿ. ವರದರಾಜರಾವ್, ಕುಮಾರ*ರಾಮನ ಸಾಂಗತ್ಯ*ಗಳು, ಪ್ರಸಾರಾಂಗ, ಮೈಸೂರು ವಿ.ವಿ., 1966.
57. ದೇ.ಜವರೇಗೌಡ, ನಂಜುಂಡ ಕವಿ, ಸರಸ ಸಾಹಿತ್ಯ ಪ್ರಕಾಶನ, ಮೈಸೂರು, 1964.
58. ಬೆಟಗೇರಿ ಕೃಷ್ಣಶರ್ಮ, ನಮ್ಮ *ಸಂಸ್ಕೃತಿ ಪರಂಪರೆ*, ಸಮಾಜ ಪುಸ್ತಕಾಲಯ, ಧಾರವಾಡ, 1969.
59. ನಿರುಪಮ, *ಶ್ರೀ*ಕೃಷ್ಣದೇವರಾಯನ ಆಮುಕ್ತ ಮೌಲ್ಯದ, ಬೆಂಗಳೂರು, 1979.
60. ಡಾ. ಬಸವರಾಜ ಮಲಶೆಟ್ಟಿ, *ಹಂಪೆ : ಒಂದು ಪರಿಚಯ*, ಮಹಾಕವಿ ಹರಿಹರ ಸ್ಮಾರಕ ಸಂಶೋಧನಾ ಕೇಂದ್ರ, ಶ್ರೀ ಜಗದ್ಗುರು ಕೊಟ್ಟೂರು ಸ್ವಾಮಿ ಮಠ, ಹಂಪೆ, 1981.
61. ಪಿ.ಎಸ್. ದೇಸಾಯಿ, *ವಿಜಯನಗರ ಸಾಮ್ರಾಜ್ಯ*, ವಿಜಯನಗರ ಸ್ಮಾರಕೋತ್ಸವ ಮಂಡಲ, ಧಾರವಾಡ, 1936.

9. ನೀತಿಗೆರೆ ಗ್ರಾಮದ ಶಾಸನೋಕ್ತ ವೀರಭದ್ರ ದೇವಾಲಯ ಮತ್ತು ಸ್ಮಾರಕಗಳು

ಯೋಗಾನಂದ ಎಸ್. ಕೆ

ನೀತಿಗೆರೆಯು ಚನ್ನಗಿರಿ ತಾಲ್ಲೂಕಿನ ಒಂದು ಗ್ರಾಮವಾಗಿದೆ. ಇದು ಸಂತೇಬೆನ್ನೂರು ಮತ್ತು ರಾಷ್ಟ್ರೀಯ ಹೆದ್ದಾರಿಯಲ್ಲಿರುವ (ಎನ್.ಹೆಚ್. – 13) ಹೊಳಲ್ಕೆರೆ ತಾಲ್ಲೂಕಿನ ದುಮ್ಮಿಯನ್ನು ಸೇರುವ ರಸ್ತೆಯ ನಡುವೆ 11 ಕಿಲೋ. ಮೀಟರ್‌ನಲ್ಲಿ ನೀತಿಗೆರೆ ಗ್ರಾಮವು ಕಂಡು ಬರುತ್ತದೆ. ನೀತಿಗೆರೆ ಎಂಬ ಹೆಸರು ಬರಲು ಒಂದು ಐತಿಹ್ಯವಿದೆ. ಅದೇನೆಂದರೆ ವಿಷ್ಣುವು ರಾಕ್ಷಸನನ್ನು ಸಂಹರಿಸಲೆಂದು ರಾಕ್ಷಸನ ಹಿಂದೆ ಬೆನ್ನಟ್ಟುತ್ತಾನೆ. ರಾಕ್ಷಸನು ಉಡದ ಅವತಾರವನ್ನು ತಾಳಿದಾಗ ಹೀರೆ ಉಡುವಾಗುತ್ತಾನೆ. ಆ ಸ್ಥಳವೇ ಹೀರ ಉಡ ಗ್ರಾಮವಾಗಿದೆ. ಅನಂತರ ಚಿಕ್ಕ ಉಡುವಾಗುತ್ತಾನೆ, ಆ ಸ್ಥಳವೇ ಚಿಕ್ಕ ಉಡ ಗ್ರಾಮವಾಗಿದೆ. ವಿಷ್ಣು ರಾಕ್ಷಸನನ್ನು ಸಂಹರಿಸಲು ಬೆನ್ನ ಹಿಂದೆಯೆ ಓಡಿಸಿಕೊಂಡು ಹೋಗುತ್ತಾನೆ. ಆದರೆ ರಾಕ್ಷಸ ತಪ್ಪಿಸಿಕೊಳ್ಳುತ್ತಾನೆ. ಕೊನೆಗೆ ಒಂದು ಸ್ಥಳದಲ್ಲಿ ಗೆರೆಯನ್ನು ಕೊರೆದು ನೀತಿಯನ್ನು ಹೇಳುತ್ತಾನೆ. ಆ ಗ್ರಾಮವೇ ಈಗಿನ ನೀತಿಗೆರೆ ಗ್ರಾಮವಾಗಿದೆ. ಆದರೆ ಆ ನೀತಿಯನ್ನು ರಾಕ್ಷಸ ಕೇಳುವುದಿಲ್ಲ. ಆಗ ಅವನನ್ನು ಸಂಹರಿಸುತ್ತಾನೆ. ಅಲ್ಲಿಯೇ ವಿಷ್ಣು ನೆಲೆನಿಲ್ಲುತ್ತಾನೆ. ಅದುವೇ ಉಡಮರಡಿ (ದೇವರ ಹಳ್ಳಿ). ಹೀಗೆ ನೀತಿಗೆರೆ ಎಂಬ ಹೆಸರು ಬಂದಿತೆಂದು ಐತಿಹ್ಯ ಹೇಳುತ್ತದೆ. ಇಲ್ಲಿ ಶಾಸನೋಕ್ತ ವೀರಭದ್ರ ದೇವಾಲಯ ಬಾವಿ, ಮಾಸ್ತಿಗಲ್ಲು ಮತ್ತು ಪುಷ್ಕರಿಣಿಗಳಿವೆ. ಈ ಗ್ರಾಮದಲ್ಲಿ ಸಂತೇಬೆನ್ನೂರಿನಿಂದ ದುಮ್ಮಿಯ ಕಡೆಗೆ ಹಾದು ಹೋಗುವ ಊರಿನ ಮುಖ್ಯ ರಸ್ತೆಯ ಭಾಗದಲ್ಲಿ 100 ಮೀಟರ್ ನಡೆದು ಹೋದರೆ ಇರುವ ಈ ಗ್ರಾಮವು ವಿಜಯನಗರ ಸಾಮ್ರಾಜ್ಯದ ರಾಜ ಎರಡನೇ ಹರಿಹರನ ಅಧೀನಕ್ಕೆ ಸೇರಿತ್ತು. ಇವನ ಸಾಮಂತರು ದುಮ್ಮಿಯಲ್ಲಿ ನೆಲೆಸಿದ್ದರು. ದುಮ್ಮಿಯು ವಿಜಯನಗರದ ಅರಸರ ಅಧೀನದಲ್ಲಿನ ಪಾಳೇಗಾರರ ಒಂದು ಪಾಳೆಯಪಟ್ಟಾಗಿತ್ತು. ಇವರು ವಿಜಯನಗರದ ಅಧೀನದಲ್ಲಿ ದುಮ್ಮಿಯ ಪಾಳೆಯಗಾರರಾಗಿ ಆಳ್ವಿಕೆ ನಡೆಸುತ್ತಿದ್ದರು. ಇಂಥ ಪಾಳೆಪಟ್ಟಿಗೆ ಸೇರಿದಂಥ ಒಂದು ಗ್ರಾಮವೇ ನೀತಿಗೆರೆ.

ಸಂತೇಬೆನ್ನೂರಿನಿಂದ ದುಮ್ಮಿಗೆ, ಊರಿನ ಪಕ್ಕದಲ್ಲಿ ಹಾದುಹೋಗುವ ಮುಖ್ಯರಸ್ತೆಯ ಎಡ ಭಾಗದಲ್ಲಿ ಸುಮಾರು 100 ಮೀ. ಚಲಿಸಿದರೆ ವೀರಭದ್ರ ದೇವಾಲಯ ಸಿಗುತ್ತದೆ. ಈ ದೇವಾಲಯದ ಒಳಭಾಗದ ಗೋಡೆಯ ಮುಂಭಾಗದಲ್ಲಿ ಒಂದು ಕಲ್ಲಿನ ಶಾಸನ ಇದೆ. ಇದು ಕ್ರಿ.ಶ. 1404ರ ಕಾಲಮಾನದ್ದಾಗಿದ್ದು, 57 ಸಾಲುಗಳನ್ನು ಹೊಂದಿದೆ. ಇದರ ಪ್ರಮಾಣ 4x1.3. ಕನ್ನಡ ಭಾಷೆ ಮತ್ತು ಲಿಪಿಯಲ್ಲಿರುವ ಶೈವಧರ್ಮದ ದಾನ ಶಾಸನವಾಗಿದೆ. ಈ ಶಾಸನದ ಮೇಲ್ಭಾಗದ ಎಡ ಮತ್ತು ಬಲ ಭಾಗದಲ್ಲಿ ನಂದಿಗಳ ಶಿಲ್ಪಗಳಿವೆ. ಅದರ ಮೇಲೆ ಸೂರ್ಯ ಮತ್ತು ಚಂದ್ರ ಕ್ರಮವಾಗಿ ಎಡ ಮತ್ತು ಬಲಭಾಗದಲ್ಲಿವೆ. ಬಲಭಾಗದ ನಂದಿಯ ಪಕ್ಕದಲ್ಲಿ ಶಿವಲಿಂಗವಿದೆ. ಅದಕ್ಕೆ ಅಪ್ಸರೆ ಪೂಜೆಯನ್ನು ಸಲ್ಲಿಸುತ್ತಿದ್ದಾಳೆ. ವೀರ ದ್ಯಾನಾಸಕ್ತನಾಗಿ ನಿಂತಿದ್ದಾನೆ.

ಈ ಶಾಸನದಲ್ಲಿನ ವಿವರಣೆ ಏನೆಂದರೆ ಗುರುವಿಗೆ ನಮಿಸುತ್ತಾ ರುದ್ರನ ಮಗನಾದ ವೀರಭದ್ರನು ದಕ್ಷನನ್ನು ನಾಶಮಾಡಿ, ಅವನ ಕತ್ತನ್ನು ಕತ್ತರಿಸಿ ನಂತರ ಅವನ ದೇಹಕ್ಕೆ ಟಗರಿನ ತಲೆಯನ್ನು ಜೋಡಿಸಿದನು. ಆಗ ವೀರಭದ್ರ ನೀತಿಗೆರೆಯಲ್ಲಿ ನೆಲೆಸಿದ, ಹರಿಹರರಾಯ ವಿಜಯನಗರವನ್ನು ಶಾಂತಿಯುತವಾಗಿ ಆಳುವಂತಹ ಸಂದರ್ಭದಲ್ಲಿ ವಿವಿಧ ಆಯುಧಗಳನ್ನು ಹೊಂದಿರುವ ದುಮ್ಮಿಯ ಗಂಗೆಯನಾಯಕನ ಮಗನಾದ ಶ್ರೀ ರಂಗನಾಥನಾಯಕ ಶಾಂತಿಯುತವಾಗಿ ಆಳ್ವಿಕೆ ಮಾಡುತ್ತಿರುವಾಗ ನೀತಿಗೆರೆಯ ವೀರಭದ್ರ ದೇವಾಲಯವನ್ನು ಕಟ್ಟಿಸಿದನು. ಇದಕ್ಕೆ ದುಮ್ಮಿಯ ಎರಪೆಮ್ಮನಾಯಕ ಗಂಗೂರಿನ ಭೂಮಿಯನ್ನು ದೇವಾಲಯದ ಅಂಗಭೋಗ, ರಂಗಭೋಗ ಮತ್ತು ನೈವೇದ್ಯಕ್ಕೆ

ದಾನಮಾಡಿದನು. ಹಲವಾರು ವ್ಯಕ್ತಿಗಳು ನೀತಿಗೆರೆ ವೀರಭದ್ರನಿಗೆ ದಾನವನ್ನು ನೀಡಿರುವರು. ಕಲ್ಲಗೌಡ, ಮಲ್ಲೇಗೌಡ, ದೇವರಬೋಮ್ಮೆಗೌಡ – ಇವರು ದೇವಾಲಯಕ್ಕೆ ದಾನವನ್ನು ನೀಡಿದರು. ಹಾಗೆಯೇ ನೀತಿಗೆರೆ ಜನರು, ಚಿಕ್ಕಗಂಗೂರು, ಎಮ್ಮಿಗನೂರು, ಚಿಕ್ಕ ಉಡ ಉಡುಮರಡಿ (ಈಗ ದೇವರಹಳ್ಳಿ), ಗರಗ, ತಣೀಗೆರೆ ಮುಂತಾದ ಗ್ರಾಮದವರು ಬೇರೆ ಬೇರೆ ಊರುಗಳಲ್ಲಿ ಹೊಲಗಳನ್ನು ದಾನವನ್ನಾಗಿ ಕೊಟ್ಟಿರುತ್ತಾರೆ. ಈ ದಾನವನ್ನು ಅಪಹರಿಸಿದವರಿಗೆ ಹಸುಗಳನ್ನು ಕೊಂದ ಪಾಪಕ್ಕೆ ಹೋಗುತ್ತಾರೆ ಎಂದು ಶಾಪ ಹಾಕಲಾಗಿದೆ. ಈ ದೇವಾಲಯವು ಶಿಲ್ಪಿ ನಲ್ಲೋಜನ ಮಗ ಮಲ್ಲೋಜನಿಂದ ಕಟ್ಟಿಸಲ್ಪಟ್ಟಿತು.

ಈ ಶಾಸನದ ಮಹತ್ವವೆಂದರೆ ಇದು ಶಾಸನೋಕ್ತ ದೇವಾಲಯವಾಗಿದೆ. ದುಮ್ಮಿಯು ವಿಜಯನಗರದ ಅರಸರ ಅಧೀನದ ಒಂದು ಪಾಳೇಪಟ್ಟಾಗಿತ್ತು. ಅಲ್ಲಿನ ಪಾಳೆಗಾರರಾದಂತಹ ಗಂಗನಾಯಕನ ಮಗ ಶ್ರೀ ರಂಗನಾಥನಾಯಕ ಮತ್ತು ಎರಪೆಮ್ಮನಾಯಕರ ಹೆಸರುಗಳನ್ನು ಶಾಸನ ತಿಳಿಸುತ್ತದೆ. ಈ ಶಾಸನದಲ್ಲಿ ಶಾಪಾಶಯವಿದೆ. ವಿಶೇಷವೆಂದರೆ ಶಾಪಾಶಯವು ಶಾಸನದ ಕೊನೆಯ ಸಾಲಾಗಿರುತ್ತದೆ. ಆದರೆ ಈ ಹೇಳಿಕೆಗೆ ತದ್ವಿರುದ್ದವೆಂಬಂತೆ ಈ ಶಾಸನದಲ್ಲಿ ಶಾಪಾಶಯದ ನಂತರವೂ ಕೆಲವು ಸಾಲುಗಳು ಮುಂದುವರಿದಿವೆ ಮತ್ತು ದೇವಾಲಯವನ್ನು ಕಲ್ಲಗೌಡ, ಮಲ್ಲೇಗೌಡ, ದೇವರಬೋಮ್ಮೆಗೌಡ ಅವರು ದಾನವನ್ನು ನೀಡಿದರು ಮತ್ತು ಶಿಲ್ಪಿ ನಲ್ಲೋಜನ ಮಗ ಮಲ್ಲೋಜನಿಂದ ದೇವಾಲಯ ಕಟ್ಟಲ್ಪಟ್ಟಿತು ಎಂಬುದನ್ನು ಈ ಶಾಸನವು ತಿಳಿಸುವುದು ಮಹತ್ವದ ಸಂಗತಿಯಾಗಿದೆ.

ಎರಡನೇ ಹರಿಹರನ ಕಾಲದಲ್ಲಿ ವೀರಭದ್ರ ದೇವಾಲಯವನ್ನು ದುಮ್ಮಿಯ ಪಾಳೆಗಾರನಾದ ರಂಗನಾಥನಾಯಕ ಕಟ್ಟಿಸಿದನು. ಈ ದೇವಾಲಯಕ್ಕೆ ಹಿರೇಪೆಮ್ಮನಾಯಕ, ಕಲ್ಲೇಗೌಡ, ಮಲ್ಲೇಗೌಡ, ದೇವರ ಬೊಮ್ಮೇಗೌಡರ ದೇವಾಲಯಕ್ಕೆ ದಾನವನ್ನು ನೀಡಿದರು. ಆದರೆ ವಿಜಯನಗರದನಂತರ ಈ ದೇವಾಲಯ ಸಂಪೂರ್ಣವಾಗಿ ನಾಶವಾಗಿದೆ. ಇದಕ್ಕೆ ಕಾರಣವೇನೆಂದರೆ ಮುಸ್ಲಿಂರ ದಾಳಿಯಾಗಿರಬಹುದೆಂದು ಅನಿಸುತ್ತದೆ.

ಪ್ರಸ್ತುತ ದೇವಾಲಯವು ಇತ್ತೀಚೆಗೆ ಗ್ರಾಮಸ್ಥರಿಂದ ನಿರ್ಮಾಣವಾಗಿದೆ. ಆದರೆ ಐತಿಹಾಸಿಕವಾಗಿ ಉಳಿದಿರುವಂಥ ಅವಶೇಷಗಳೆಂದರೆ, ವೀರಭದ್ರ ಮೂರ್ತಿ ಶಿಲ್ಪಿ, ನಂದಿ ಮತ್ತು ದೀಪಸ್ತಂಭ ಮಾತ್ರವಾಗಿದೆ. ವೀರಭದ್ರ ಮೂರ್ತಿ ಶಿಲ್ಪವು ವೀರಾಸನದಲ್ಲಿ ಸ್ಥಾನಿಕ ರೂಪದಲ್ಲಿದೆ. ವೀರಭದ್ರನು ಕತ್ತಿನಲ್ಲಿ ರುಂಡಮಾಲೆಯನ್ನು ಧರಿಸಿದ್ದಾನೆ. ಬಲ ಮುಂಗೈಯಲ್ಲಿ ಖಡ್ಗ, ಬಲ ಹಿಂಬದಿಯ ಕೈ ಬಾಣ ಎಡ ಮುಂಗೈಯಲ್ಲಿ ಗುರಾಣಿ ಎಡ ಹಿಂಬದಿಗೈಯಲ್ಲಿ ಬಾಣವನ್ನು ಹೊಂದಿದ್ದಾನೆ. ಹಾಗೆಯೇ ಕಿರೀಟಧಾರಿ, ಯಜ್ಞೋಪವೀತ, ಕಿಂಕಣಿಕೈಗಡಗ, ಕಾಲ್ಗಡಗ, ಭುಜಬಂದಿಯನ್ನು ಧರಿಸಿ, ಕೋಪಿತನಾಗಿ ಕಾಣುತ್ತಾನೆ.

ಈ ಶಿಲ್ಪದ ಮುಂದೆ ನಂದಿಯ ವಿಗ್ರಹವಿದೆ. ಇಲ್ಲಿ ಮತ್ತೊಂದು ಐತಿಹಾಸಿಕವಾಗಿ ಉಳಿದಿರುವಂತಹದೆಂದರೆ ದೀಪಸ್ತಂಭ, ದೇವಾಲಯದ ಮುಖ್ಯ ದ್ವಾರದ ಹೊರಗಡೆ ಕಟ್ಟೆಯ ಮೇಲೆ ದೀಪಸ್ತಂಭ ನಿರ್ಮಾಣ ಮಾಡಿದ್ದರು.

ಈ ದೇವಾಲಯದ ಮಹತ್ವವೆಂದರೆ ದೇವಾಲಯವು ಸಂಪೂರ್ಣ ನಾಶವಾಗಿದ್ದರೂ ಇಲ್ಲಿರುವಂತಹ ವೀರಭದ್ರ ಮೂರ್ತಿಶಿಲ್ಪವು ಅತೀ ಸುಂದರವಾಗಿದೆ. ಇಂತಹ ಮೂರ್ತಿಶಿಲ್ಪ ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿಯೂ ಸಿಗದಂಥ ಅಪರೂಪದ ಮೂರ್ತಿಶಿಲ್ಪವಾಗಿದೆ.

ಈ ಗ್ರಾಮದಲ್ಲಿ ಕಂಡುಬರುವಂತಹ ಸ್ಮಾರಕಗಳೆಂದರೆ, ಬಾವಿ, ಮಾಸ್ತಿಗಲ್ಲು, ಪುಷ್ಕರಿಣಿಗಳಾಗಿವೆ. ಇವು ವಿಜಯನಗರದ ಕಾಲದಲ್ಲಿ ನಿರ್ಮಿಸಲಾದ ಸ್ಮಾರಕಗಳಾಗಿವೆ. ವೀರಭದ್ರ ದೇವಾಲಯಕ್ಕೆ ಹಾದುಹೋಗುವ ಸಂತೇಬೆನ್ನೂರಿನ ಮುಖ್ಯ

ರಸ್ತೆಯ ಬಲಭಾಗದಲ್ಲಿ ಬಾವಿಯನ್ನು ನಿರ್ಮಿಸಲಾಗಿದೆ. ದೇವಾಲಯ ನಿರ್ಮಾಣವಾದಂತಹ ಸಂದರ್ಭದಲ್ಲಿಯೇ ಬಾವಿಯನ್ನೂ ಕಟ್ಟಿದ್ದಾರೆ. ಬಾವಿಯ ವಿಶೇಷವೇನೆಂದರೆ ಸ್ವಲ್ಪ ತಗ್ಗಿನ ಭಾಗದಲ್ಲಿ ಇಳಿಯಲು ಮೆಟ್ಟಿಲನ್ನು ಕಲ್ಪಿಸಲಾಗಿದೆ, ನಂತರ ಅಲ್ಲಿಂದ ನೀರನ್ನು ತುಂಬಿಕೊಳ್ಳಬಹುದು. ಇದರ ಬಲಭಾಗದ ಪಕ್ಕದ ದಂಡೆಯ ಮೇಲೆ ಮಾಸ್ತಿಗಲ್ಲು ದೊರೆತಿದೆ. ಇದು ವಿಶೇಷವಾದಂತಹ ಒಕ್ಕೈ ಮಾಸ್ತಿಗಲ್ಲಾಗಿದೆ. ಇದು ಅರ್ಧಕ್ಕೆ ಮುರಿದು ಹೋಗಿದೆ. ಇದನು ವಿಜಯನಗರದ ಕಾಲದ್ದು ಎಂದು ಊಹಿಸಲಾಗಿದೆ. ಇತ್ತೀಚಿಗೆ ನಿರ್ಮಾಣವಾದ ಕಲ್ಲೇಶ್ವರ ದೇವಾಲಯ ಬಲ ಭಾಗದಲ್ಲಿ ಪುಷ್ಕರಿಣಿ ಇದೆ. ಈಗ ಅದು ಸಂಪೂರ್ಣವಾಗಿ ನಾಶವಾಗಿದೆ. ಇದು ಸಹ ವಿಜಯನಗರ ಕಾಲದಲ್ಲಿ ನಿರ್ಮಾಣವಾಗಿದೆ. ಕೇವಲ ಮೆಟ್ಟಿಲುಗಳು ಮಾತ್ರ ಉಳಿದಿವೆ. ಅದರೊಂದಿಗೆ ಮಳೆಗಾಲದಲ್ಲಿ ನೀರು ನಿಲ್ಲುವಂತಹ ದೊಡ್ಡದಾದ ವಡ್ಡು ಕಂಡುಬರುತ್ತದೆ. ಇದನ್ನು ಸ್ಥಳೀಯರು ಕೆರೆ ಎನ್ನುತ್ತಾರೆ.

ಉಪಸಂಹಾರ

ನೀತಿಗೆರೆ ಗ್ರಾಮವು ವಿಜಯನಗರ ಕಾಲದಲ್ಲಿನ ಎರಡನೇ ಹರಿಹರನ ಅಧೀನಕ್ಕೆ ಸೇರಿತ್ತು. ಈ ಪ್ರದೇಶವನ್ನು ಇವರ ಸಾಮಂತರಾದ ದುಮ್ಮಿಯ ಪಾಳೇಗಾರರು ಆಳ್ವಿಕೆ ಮಾಡುತ್ತಿದ್ದರು. ಇವರು ಶಾಸನೋಕ್ತ ವೀರಭದ್ರ ದೇವಾಲಯ, ಬಾವಿ, ಪುಷ್ಕರಿಣಿಯನ್ನು ಕಟ್ಟಿಸಿದರು. ಹಾಗೆಯೇ ಒಂದು ಮಾಸ್ತಿಗಲ್ಲು ಕಂಡುಬರುತ್ತದೆ. ಈ ಮಾಸ್ತಿಕಲ್ಲು ಬಹುಶಃ ಇವರ ಕಾಲಕ್ಕೆ ಸೇರಿರಬಹುದೆಂದು ಊಹಿಸಲಾಗಿದೆ ಆ ಕಾಲದಲ್ಲಿ ದುಮ್ಮಿ ಪಾಳೆಪಟ್ಟಿನ ಅಧೀನದಲ್ಲಿ ನೀತಿಗೆರೆ ಬರುತ್ತಿತ್ತೆಂಬುದು ವಿಶೇಷವಾದ ಸಂಗತಿಯಾಗಿದೆ. ಶಾಸನದಿಂದ ತಿಳಿದುಬಂದಿರುವ ಮಹತ್ವದ ಅಂಶವೆಂದರೆ ದುಮ್ಮಿಯ ಪಾಳೇಗಾರರಾದ ಗಂಗೆನಾಯಕ, ಶ್ರೀರಂಗನಾಥನಾಯಕ, ಎರಪೆಮ್ಮನಾಯಕರ ಹೆಸರುಗಳನ್ನು ಶಾಸನದಲ್ಲಿ ಉಲ್ಲೇಖಿಸಿರುವುದು ಮಹತ್ವದ ಅಂಶವಾಗಿದೆ. ಇದರಿಂದ ದುಮ್ಮಿಯ ಪಾಳೇಗಾರರ ಇತಿಹಾಸದ ಮೇಲೆ ಬೆಳಕನ್ನು ಚೆಲ್ಲಬಹುದು. ಒಟ್ಟಿನಲ್ಲಿ ನೀತಿಗೆರೆಯು ಮಹತ್ವವಾದಂತಹ ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿ ದುಮ್ಮಿ ಪಾಳೆಪಟ್ಟಿನಲ್ಲಿನ ಪ್ರಸಿದ್ಧ ಗ್ರಾಮವಾಗಿತ್ತೆಂದು ತಿಳಿದುಬರುತ್ತದೆ

ಶಾಸನ ಪಾಠ

ಗ್ರಾಮದ ವೀರಭದ್ರ ದೇವಾಲಯದ ಒಳ ಭಾಗದ ಗೋಡೆಯಲ್ಲಿ

ಪ್ರಮಾಣ 4x13"

1 ಶ್ರೀಗುರುವೇಸರಣುಶ್ರೀಪುಟ್ಟುತಲಾದಿರುದ್ರನಂಸತ್ಯಸಮುದ್ರನಂವೀರಭದ್ರನಾ

2 ಷ್ಟಿಗಳಿಂದನೆವಲಗೆಯಿಂದ . . . ಟರೆಂದುತಾಉಳಂಗೊಟ್ಟಿಸಿತೋಳಮಂಜಡಿಉತ್ತ .

3 . ಯೆನುತಾರ್ದ್ದಡೆಯೆ . . . . ಬಿಟ್ಟಡೆಮೂಜಗಂಪೆದಱೆಹೇಳೆ .

4 ಹಾರ್ದ್ದಡೆಸುಂಮನಿರ್ದ್ದ . ॥ ॥ ಅನತತೋಳ್ಗಳಂಕಡಿದುಪೂಸ . .

5 ದೋಱದೆಕ . ರಾಯದಕ್ಷನತಲೆಗೊಂಡನಾತಲೆ . ಗೆಮು . ತಿವಳ್ಕೆ .

6 ಡೆಗೊಟ್ಟುದೇವರಾಜನಪತಿಸಸ್ತ್ರಮಂಸೆಳೆದುಕುಪ್ಷಮ್ರುಗಾಜಿನವೆತ್ತಿ

7 ಸಿದ್ಧರುದ್ರನಸುತವೀರಭದ್ರನೆರ . . . . ಮಾಡಿದನೆಯ್ದು ಯೋಗಮಂ ॥

8 ಧುರಧೀರಂರಉದ್ರಾವತಾರಂ ದುರಿತಕುಲನಿವಾರಂಪ್ರತಾಪೈ

9 ಕಸೂರಂಹರಪುತ್ರಂಬಹುಪುತ್ರಂಸುರನರವರ . ಪುತ್ರಂ
10 ಪುಣ್ಯಂಪವಿತ್ರಂತ . ದಕ್ಷಂದಕ್ಷಸಿಕ್ಷಂತ್ರಿಭುವನಜನ
11 ರಕಂಸಿವಾಚಾರದಕ್ಷಂವೀರರಉದ್ರಂತಾನುರುದ್ರಂಕರು
12 ಣರಸಸಮುದ್ರಂಮಹಾವೀರಭದ್ರಂ ॥ ಅಮರರಾಯರಾ
13 ಯ . . ಕಂಟಕರಾಯತಳಪ್ರಹಾರಿಅರಿರಾಯವಿಭಾಡ
14 ಪರ . . ಜಗಮಸ್ತಕಸೂಲವಿರಾಟರಾಯನಿರ್ಧೂಮಕನೆಂ
15 ಬರಾಯರಣಭೈ . . . ರವಿಹಾರ್ರಅರಿರಾಯವಿತಂದ್ರ
16 . . ಕ್ಕಿ . ಉದೂರಾಯ . . . . ರಹರಿಹರೇಸ್ವರಂ ॥ ಸ್ವಸ್ತಿ
17 ಶ್ರೀಜಯಾಭ್ಯುದಯಶಕವರ್ಷ .. 25 ..... ವರ್ಥ್ಧಮಾನತಾ
18 ರ . . . . ನೀತಗೆಱೆಯಶ್ರೀವೀರಭ
19 ದ್ರದೇವರುಪ್ರತಿಷ್ಟೆ ಆಯಿತು । ಸ್ವಸ್ತಿ ಶ್ರೀಮನ್ಮಹಾರಾಜಾಧಿರಾಜಪ
20 ರಮೇಸ್ವರಪರಮಭಟ್ಟಾರಕದ್ವಾರಾವತೀಪುರವರಾಧೀಸ್ವರಶ್ರೀವೀರಬುಕ್ಕ
21 ರಾಯ . . ॥ ಸ್ವಸ್ತಿ ಶ್ರೀಮನ್ಮಹಾರಾಜಾಧಿರಾಜಪರ
22 ಮೇಸ್ವರಪರಮಭಟ್ಟಾರಕದ್ವಾರಾವತೀಪುರವರಾಧೀಸ್ವರವಿಜೆಯಾ
23 ನಗರಿಯಹಸ್ತಿನಾವತಿಯಪ್ರಾತಾಪಹರಿಹರರಾಯರುಸುಖ
24 ರಾಜ್ಯಂಗೆಯುತ್ತಮಿರಲು ॥ ಆಪ್ರತಾಪಹರಿಹರರಾಯನಹಿಂದೆಯಿ
25 . . . . . ವರಮಂ .. . ರಚಂದ್ರಾಯುಧಶಂಖಚಕ್ರಗಜಾಧಾ
26 ರ . ತುಂಬಳಗಾವಬಸ . . ರಂದಾನಮಂಡಳಿಕರಗಂಡಮಂ
27 ಮಿಯಯೆಜೆಀಗಂಗೆಯನಾಯಕರುಆಗಂಗೆಯನಾಯ್ಕರಮಗಸಿರಂ
28 ಗ್ಗನಾಥನಾಯಕರುಸುಖಸಂಕಥಾವಿನೋದದಿಂರಾಜ್ಯಂಗೆಯ್ಯುತ್ತ
29 ಮಿರಲುಅನೀತಗೆಱೆಯ . . . . . ಶ್ರೀವೀರಭದ್ರ
30 ದೇವರಿಗೆಅಮ್ರುತಪಡಿಗದ್ದೆಬೆದ್ದ . . . . . ವೂರಿಗೆಆಗ್ನೇ
31 ಯದಿಕ್ಕಿನಲುಯೆಱೆಯಭೂಮಿನಂದಾದೀವಿಗೆಕೊಟ್ಟರು . . . ಶ್ರೀವೀರಭ
32 ದ್ರದೇವರಿಗೆದುಂಮಿಯಯೆಱಪೆಮ್ಮಯನಾಯ . . . ನಾಯ್ಕರುತಂನ
33 ಯಗಂಗೂರಲಿಕೊಟ್ಟವ್ರಿತ್ತಿಊರಿಗೆ ನಯಿರುತ್ಯದಿಕ್ಕಿನ . . . ಪಡುವಹ .
34 ನೀತಗೆಱೆಯವೀರಭದ್ರದೇವರಿಗೆಕೊಡೆನಾಡರಾಮಗೌಂಡನೊಳಗಾದಸಮಸ್ತ
35 ಗೌಂಡುಪ್ರಜೆಗಳುಕೊಟ್ಟನಂದಾದೀವಿಗೆಊರಿಗೆನಯಿರಿತ್ಯದಿಕ್ಕಿನಲಿನೀತಗೆಱೆಯಸೀಮೆ
36 ವೊತ್ತಿನಿಂದದಾರಿಯಪಡುವಗದ್ದೆಮಂಣುವಿನಿಕು ಳ ॥ ನೀತಗೆಱೆಯವೀರಭದ್ರದೇವರಿಗೆಚಿಕ್ಕಗಂ
37 ಗೂರತುರುಕನಾಗಿಸೆಟ್ಟಿಯಮಗಟನಗೂಡಕೊಟ್ಟವ್ರಿತ್ತಿಬಡಗಣದಿಕ್ಕಿನಯೆಂಮಗನೂ
38 ರಹಾದಿಯಿಂದಯೆಡದಕಡೆತೆಂಕಲುಬಡಗಲುಹಸಲು ॥ ನೀತರೆಱೆಯವೀರಭ
39 ದ್ರದೇವರಿಗೆಉಡುವದದೇವರಸಕೊಡಥೆಯಬು . ದಸುವಗೂರಸಮಸ್ತಪ್ರಜೆಗಳು ಕೊಟ್ಟವ್ರಿ
40 ತ್ತಿಉಡುಮೊರಡಿಯಮೂಡಗಡೆಯಂತುಂಬುರಿಗನಹಳದಗೊಂಟಿಯಕೈನೀತಗೆಱೆಯ

41 . . . ವೊತ್ತು ॥ ನೀತಗೆಱೆಯವೀರಭದ್ರದೇವರಿಗೆಗರುಗದವೀರಪಗೌಂಡುಳುವಲಗೆ

42 . ಯಉರಿಗೆ ಯೀಸಾನ್ಯದಿಕ್ಕಿನಲಿನೀತಗೆಱೆಯಸಿ . ತಂಬುರಿಗನಹಳ್ಳ . . . ಡ

43 . . ಹಸಲು ॥ ಯಱಗಟೆಯಹಳ್ಳಿಯಮಯಿಲಗೌಂಡನೀತಗೆಱೆಯವೀರಂಣಗೆ

44 . . ಯಸೀಮೆಯ . . . ಹರಡಿತಂನಕೊಡಗಿವೊಳಗೆಕೊಟ್ಟ ॥

45 . . . . ಗೌಂಡನೀತಗೆಱೆಯ . . . ಮಹರಿಯಕೆಱೆಯವೊಳಗಣಕೈ

46 . . . . ಹಳ್ಳಿ . . . . ಯಬ್ಯೆರಗೌಂಡಿಕೊಟ್ಟ . . ನಿತು

47 . . . . . ನೀತಗೆಱೆಯಸೀಮೆ . . . ಸಮ

48 . . . . ನೀತಗೆಱೆಯವೀರಂಣಗೆತಳಿ . ನಪ್ಯೆರಗೌಂಡಕೊಟ್ಟ

49 . . . . ವೊಳಗಣ . . ನೂರ . . ವೊತ್ತು । ಚೌ . . ಮ್ಮ

50 . . . . . ನೀತಗೆಱೆಯತಂಣಗೆಱೆಯಪಡುವಣಭೂಮಿತೆಂಕ

51 . . . . ಯಹಳ್ಳದ . . ಗೌಂಡನೀತಗೆಱೆಯವೀರಂಣಂಗೆಉರಿಗೆಯ

52 . . . .

53 . . . . . ಅಳುಪಿದವ . . . . .

54 ಯತಂಗಳುಕವಿಲೆಯಕೊಂದಪಾಪಕೆಹೋದರು ॥ ಮಂಗಳಮಹಾಶ್ರೀಶ್ರೀ

55 . . . ಗೌಂಡನಮಕ್ಕಳುಕಲಗೌಂಡಮಲ್ಲಿಗೌಂಡದೇವರಬೊಮ್ಮಗೌಂಡತಮ್ಮ . . ದೇ

56 . ದಾವಾಲ್ಯಮಾಡಿಸಿದವರು ॥ ದೇವರದೇವಾಲ್ಯವಮಾಡಿ

57 ಸಿ . ಳು . . ನಹಳ್ಳಿಯ . . . ನಮಗಮಲ್ಲೋಜನು

ಅಡಿ ಟಿಪ್ಪಣಿ

1) *ಎಪಿಗ್ರಾಫಿಯಾ ಕರ್ನಾಟಿಕ*, ಸಂಪುಟ 7, ಶಿವಮೊಗ್ಗ, ಪು. 183.

2) ಸುರೇಶ ಬಿ., *ಚಿತ್ರದುರ್ಗ – ದಾವಣಗೆರೆ ಜಿಲ್ಲೆಗಳ ದೇವಾಲಯಗಳು*, ಪು. 218.

ಪರಾಮರ್ಶನ ಗ್ರಂಥಗಳು

1) ಚಿದಾನಂದ ಮೂರ್ತಿ ಎಂ., *ಕನ್ನಡ ನಾಡಿನ ಶಾಸನಗಳ ಸಾಂಸ್ಕೃತಿಕ ಅಧ್ಯಯನ*, ಸ್ವಪ್ನಬುಕ್ ಹೌಸ್, ಬೆಂಗಳೂರು, 2002.

2) ಗಿರಿಜ ಟಿ., *ದಾವಣಗೆರೆ ಇದು ನಮ್ಮ ಜಿಲ್ಲೆ*, ನಿಹಾರಿಕ ಪ್ರಕಾಶನ, ದಾವಣಗೆರೆ, 2001.

3) ನಾಡಿಗ್ ಸುಮತೀಂದ್ರ, *ಸಂತೆಬೆನ್ನೂರು ನಾಯಕರು*, ಕರ್ನಾಟಕ ರಾಜ್ಯ ಪತ್ರಾಗಾರ ನಿರ್ದೇಶನಾಲಯ, ಕರ್ನಾಟಕ ಸರ್ಕಾರ, ಬೆಂಗಳೂರು, 2008.

4) ಪರಮಶಿವ ಮೂರ್ತಿ ಡಿ.ವಿ., *ಕನ್ನಡ ಶಾಸನಶಿಲ್ಪ*, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, 1999.

5) ಸುರೇಶ್ ಬಿ., *ಚಿತ್ರದುರ್ಗ–ದಾವಣಗೆರೆ ಜಿಲ್ಲೆಗಳ ದೇವಾಲಯಗಳು*, ಸಂಶೋಧನ ಪ್ರಕಾಶನ, ಬಲೇನಹಳ್ಳಿ, ಚಳ್ಳಕೆರೆ.

6) ರೈಸ್. ಬಿ.ಎಲ್, *ಎಪಿಗ್ರಾಫಿಯಾ ಕರ್ನಾಟಿಕ* (ಸಂಪುಟ 7) ಮೈಸೂರ್ ಗವರ್ನಮೆಂಟ್ ಸೆಂಟ್ರಲ್ ಪ್ರೆಸ್, ಬೆಂಗಳೂರು, 1902.













10. ವಿಜಯನಗರ ಕಾಲದಲ್ಲಿ ಶಾಕ್ತ ದೇವಾಲಯಗಳ ಮೇಲೆ ನಡೆದ ದಾಳಿ

ಡಾ॥ ವಾಸುದೇವ ಬಡಿಗೇರ

ಹಂಪಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ದಕ್ಷಿಣ ಭಾರತದಲ್ಲಿ ಆಡಳಿತಕ್ಕೆ ಬಂದ ವಿಜಯನಗರ ಸಾಮ್ರಾಜ್ಯವು ಕ್ರಿ.ಶ. 1336ರಿಂದ 1565ರವರೆಗೆ ಅಸ್ತಿತ್ವದಲ್ಲಿತ್ತು. ಈ ಸುದೀರ್ಘವಾದ ಅವಧಿಯಲ್ಲಿ ರಾಜಕೀಯ ಮಾತ್ರವಲ್ಲದೇ ಸಾಮಾಜಿಕ, ಆರ್ಥಿಕ, ಧಾರ್ಮಿಕ ವ್ಯವಸ್ಥೆಯಲ್ಲಿ ಸುಧಾರಣೆಗಳನ್ನು ಕಾಣಬಹುದು. ಶೈವ ಮತ್ತು ವೈಷ್ಣವ ಧರ್ಮಗಳು ರಾಜಾಶ್ರಯವನ್ನು ಪಡೆದು ವಾಸ್ತುಶಿಲ್ಪ, ಆಚರಣೆಗಳ ಮೂಲಕ ಉನ್ನತ ಸ್ಥಾನಕ್ಕೇರಿದವು. ಅಲ್ಲಲ್ಲಿ ಕಂಡುಬರುವ ಶಾಕ್ತ ಸಂಪ್ರದಾಯಕ್ಕೆ ಸಂಬಂಧಿಸಿದ ದೇವಾಲಯಗಳಿಗೂ ಅನೇಕ ದಾನ–ದತ್ತಿಗಳನ್ನು ನೀಡಿದ್ದಾರೆ. ಇವುಗಳಲ್ಲಿ ಹಂಪಿಯ ಪಂಪಾಂಬಿಕೆಯನ್ನೊಳಗೊಂಡಂತೆ ಹೊಸೂರಿನ ಹೊಸೂರಮ್ಮ, ಉಚ್ಚಂಗಿದುರ್ಗದ ಉಚ್ಚಂಗೆಮ್ಮ, ಕುಕನೂರಿನ ಮಹಾಮಾಯಿ, ಶೃಂಗೇರಿಯ ಶಾರದಾಂಬೆ, ಬಾದಾಮಿಯ ಬನಶಂಕರಿ ಮೊದಲಾದ ದೇವತೆಗಳು ಸೇರುತ್ತವೆ.

ಬಾದಾಮಿಯ ಬನದ ಮಹಾಮಾಯಿ ಮತ್ತು ಕುಕನೂರಿನ ಮಹಾಮಾಯಿ ವಿಜಯನಗರ ಪೂರ್ವದಿಂದಲೂ ಶ್ರೀಮಂತಿಕೆಯನ್ನು ಮೈಗೂಡಿಸಿಕೊಂಡು ಬೆಳವಣಿಗೆಯನ್ನು ಹೊಂದಿದ್ದವು. ವಿಜಯನಗರ ಅರಸರು ಉಳಿದ ದೇವಾಲಯಗಳಂತೆ ಈ ಎರಡೂ ದೇವಾಲಯಗಳನ್ನು ಸರಿಯಾದ ರೀತಿಯಲ್ಲಿ ನೋಡಿಕೊಳ್ಳುತ್ತಿದ್ದರೆಂಬುದಕ್ಕೆ ಅವರ ಶಾಸನಗಳು ಸಾಕ್ಷಿಯನ್ನು ಒದಗಿಸುತ್ತವೆ. ಹಾಗಿದ್ದೂ ಇವು ಮುಸಲ್ಮಾನರ ದಾಳಿಗೆ ಒಳಗಾಗಿದ್ದನ್ನು ಗಮನಿಸಬಹುದು.

ವಿಜಯನಗರಕ್ಕೂ ಮೊದಲು ಹೊಯ್ಸಳ ಮತ್ತು ಯಾದವರ ಸಾಮ್ರಾಜ್ಯಗಳು ಉತ್ತರದಿಂದ ಬಂದ ಮುಸ್ಲಿಂರ ದಾಳಿಗೆ ಒಳಗಾಗಿ ಸಂಪೂರ್ಣವಾಗಿ ನಾಶಹೊಂದುತ್ತವೆ. ಮಲ್ಲಿಕಾಫರನ ದಾಳಿಯಿಂದ ಹತಾಶನಾದ ಹೊಯ್ಸಳ ಮೂರನೇ ಬಲ್ಲಾಳ ಹಂಪಿಗೆ ಬಂದು ವಿರೂಪಾಕ್ಷನ ಹೊಸ ಪಟ್ಟಣವನ್ನು ಸ್ಥಾಪಿಸಿ ತನ್ನ ಮಗನಿಗೆ ಪಟ್ಟಕಟ್ಟುತ್ತಾನೆ.

ಇದು ಬಹಳ ದಿವಸ ಉಳಿಯಲಿಲ್ಲ. ಮುಂದೆ ವಿಜಯನಗರ ಸಾಮ್ರಾಜ್ಯ ಸ್ಥಾಪನೆಯಾಗಿ ಕ್ರಮೇಣ ದಕ್ಷಿಣ ಭಾಗಕ್ಕೆಲ್ಲಾ ವ್ಯಾಪಿಸಿಕೊಂಡಿತು. ಆದರೆ ಉತ್ತರ ಭಾಗದಲ್ಲಿ ಇದು ಸಾಧ್ಯವಾಗಲಿಲ್ಲ. ಇದಕ್ಕೆ ಕಾರಣ ಕೆಲವೇ ವರ್ಷಗಳಲ್ಲಿ ಅಂದರೆ 1347ರಲ್ಲಿ ಬಹಮನಿ ರಾಜ್ಯ ತಲೆಯೆತ್ತಿತು. ಬಹಮನಿಯೊಂದಿಗೆ ನಿರಂತರವಾಗಿ ಕದನಗಳು ನಡೆಯುತ್ತಿರುವಾಗ, ಅದು ಐದು ಭಾಗಗಳಾಗಿ ಒಡೆದು ತಮ್ಮ ತಮ್ಮಲ್ಲಿ ಪೈಪೋಟಿಗೊಳಗಾಗುವಂತಾಯಿತು. ಆದರೂ ವಿಜಯನಗರಕ್ಕೆ ಇವುಗಳಿಂದ ತಪ್ಪಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಒಂದುಕಡೆ ಗುಲ್ಬರ್ಗ ಅಥವಾ ಬೀದರ್, ಇನ್ನೊಂದು ಕಡೆ ಬಿಜಾಪುರ ನಿರಂತರವಾಗಿ ವಿಜಯನಗರದೊಂದಿಗೆ ಯುದ್ಧಕ್ಕಿಳಿದವು.

ಪ್ರಾಚೀನ ಕಾಲದಿಂದಲೂ ರಾಜಕೀಯ ವೈರತ್ವದಿಂದ ನಡೆಯುತ್ತಿದ್ದ ಯುದ್ಧಗಳಿಂದ ಆರ್ಥಿಕ ಮತ್ತು ಸಾಮಾಜಿಕ ವಲಯಗಳಲ್ಲಿ ಅನೇಕ ಪರಿಣಾಮಗಳುಂಟಾಗುತ್ತಿದ್ದವು. ಆದರೆ ಇದರಿಂದ ಧಾರ್ಮಿಕ ಕ್ಷೇತ್ರವು ಸುರಕ್ಷಿತವಾಗಿರುತ್ತಿತ್ತು. ಬಾದಾಮಿ ಚಾಲುಕ್ಯರ ಕಾಲದಲ್ಲಿ ಕಂಚಿ ಪಲ್ಲವ ನರಸಿಂಹವರ್ಮ ಚಾಲುಕ್ಯರನ್ನು ಸೋಲಿಸಿ 13 ವರ್ಷಗಳ ಕಾಲ ಬಾದಾಮಿಯನ್ನು ತನ್ನ ಸುಪರ್ದಿಯಲ್ಲಿಟ್ಟುಕೊಳ್ಳುತ್ತಾನೆ. ಆದರೆ ಅಲ್ಲಿ ಪ್ರಚಲಿತವಿದ್ದ ಧರ್ಮ ಅದರ ಸಂಕೇತಗಳಾಗಿದ್ದ ದೇವಾಲಯ ಹಾಗೂ ಮೂರ್ತಿಶಿಲ್ಪಗಳಿಗೆ ಯಾವುದೇ ರೀತಿಯಲ್ಲಿ ಹಾನಿಯುಂಟಾಗಲಿಲ್ಲ. ಮುಂದೆ ವಿಕ್ರಮಾದಿತ್ಯನು ಕಂಚಿಪುರದ ಮೇಲೆ ಯುದ್ಧ ಮಾಡಿ ಪಲ್ಲವರನ್ನು ಸೋಲಿಸಿ, ಪಟ್ಟಣವನ್ನು ಕೊಳ್ಳೆಹೊಡೆಯುತ್ತಾನೆ. ಅಲ್ಲಿ ದೋಚಿದ ಸಂಪತ್ತನ್ನು ರಾಜಸಿಂಹೇಶ್ವರ ದೇವಾಲಯಕ್ಕೆ ಕೊಟ್ಟು ಬರುತ್ತಾನೆ. ಕೃಷ್ಣದೇವರಾಯ ಒರಿಸ್ಸಾದ ಮೇಲೆ ದಂಡಯಾತ್ರೆ ಕೈಗೊಂಡಾಗ ಗಜಪತಿಯನ್ನು ಸೋಲಿಸಿ ಮರಳಿ ಬರುವಾಗ ಅಲ್ಲಿಂದ ಬಾಲಕೃಷ್ಣನ ವಿಗ್ರಹವನ್ನು ರಾಜಧಾನಿಗೆ ತರುತ್ತಾನೆ. ಅದಕ್ಕೆ ದೇವಾಲಯವನ್ನು ನಿರ್ಮಿಸಿ ವ್ಯಾಸರಿಂದ ಪ್ರತಿಷ್ಠಾಪನೆ ಮಾಡಿಸುತ್ತಾನೆ.

ಶಾಹಿಸುಲ್ತಾನರ ಕಾಲದಲ್ಲಿ ಮೊದಲಿದ್ದ ವ್ಯವಸ್ಥೆಗೂ ಮತ್ತು ಅವರ ಧಾರ್ಮಿಕ ಆಚಾರ-ವಿಚಾರಗಳಿಗೂ ಬಹಳ ವ್ಯತ್ಯಾಸವಿತ್ತು. ಈ ವ್ಯತ್ಯಾಸವನ್ನು ಸರಿಪಡಿಸಲು ಸೂಫಿಸಂತರು, ತಿಂಥಣಿ ಮೌನಪಯ್ಯನಂತಹ ಮಹಾನುಭಾವರು ಪ್ರಯತ್ನಿಸಿರುವುದು ಇತಿಹಾಸದಿಂದ ಸ್ಪಷ್ಟವಾಗುತ್ತದೆ. ಧಾರ್ಮಿಕ ಕ್ಷೇತ್ರದಿಂದ ಮುಕ್ತವಾಗಿದ್ದ ಯುದ್ಧಗಳು ಸುಲ್ತಾನರ ಅವಧಿಯಲ್ಲಿ ಅದಕ್ಕೂ ವಿಸ್ತರಿಸಿಕೊಂಡಿತೆಂದು ಹೇಳಬಹುದು. ಇದರಿಂದ ಅನೇಕ ದೇವಾಲಯ-ಮೂರ್ತಿಶಿಲ್ಪಗಳು ನಾಶಗೊಂಡವು. ಕೆಲವು ಗ್ರಾಮಗಳಲ್ಲಿ ದೇವಾಲಯ ಮತ್ತು ಮೂರ್ತಿಶಿಲ್ಪಗಳನ್ನು ಮಣ್ಣಿನಲ್ಲಿ ಮುಚ್ಚಿಟ್ಟಿದ್ದಾರೆ. ಇದಕ್ಕೆ ಕಾರಣ ಅಲ್ಲಿಯ ಜನರು ಹೇಳುವಂತೆ ಮುಸಲ್ಮಾನರ ದಾಳಿಯಿಂದ ತಪ್ಪಿಸಲು ಮಣ್ಣಲ್ಲಿ ಮುಚ್ಚಲಾಗಿದೆ ಎಂದು. ಅಕ್ಕಿ ಆಲೂರಿನಲ್ಲಿದ್ದ ಇಂತಹದೊಂದು ದೇವಾಲಯವನ್ನು ಇತ್ತೀಚೆಗೆ ಮಣ್ಣನ್ನು ಹೊರಹಾಕಿ ಸ್ವಚ್ಛಗೊಳಿಸಿ ಪೂಜೆಗೆ ಅವಕಾಶ ಕಲ್ಪಿಸಲಾಗಿದೆ. ಆದರೆ ಈ ದಾಳಿಗಳು ಆಡಳಿತದ ಇಲ್ಲವೇ ರಾಜನೀತಿಯಾಗಿತ್ತೇ ಅಥವಾ ಸೈನಿಕರ ಕುಚೇಷ್ಟೆಯಾಗಿತ್ತೇ ಎಂಬುವುದು ಸ್ಪಷ್ಟವಾಗುವುದಿಲ್ಲ.

ವಿಜಯನಗರ ಕಾಲದಲ್ಲಿ ಶಾಕ್ತದೇವತೆಯ ದೇವಾಲಯಗಳಾದ ಬಾದಾಮಿಯ ಬನದ ಮಹಾಮಾಯಿ ಮತ್ತು ಕುಕನೂರಿನ ಮಹಾಮಾಯಿ ದೇವಾಲಯಗಳು ಮುಸಲ್ಮಾನರ ದಾಳಿಗೆ ಒಳಗಾಗಿದ್ದನ್ನು ಶಾಸನಗಳಲ್ಲಿ ದಾಖಲಿಸಲಾಗಿದೆ.

ಬಾದಾಮಿ ಬನಶಂಕರಿ (ಮಹಾಮಾಯಿ)

ಬಾದಾಮಿ ಹತ್ತಿರದಲ್ಲಿರುವ ಚೊಳಚಗುಡ್ಡ ಗ್ರಾಮಕ್ಕೆ ಸೇರಿದ ಪ್ರದೇಶದಲ್ಲಿ ಬನಶಂಕರಿ ದೇವಾಲಯವಿದೆ. ಇದು ಗರ್ಭಗೃಹ, ಅಂತರಾಳ, ಸಭಾಮಂಟಪ, ಮುಖಮಂಟಪ ಹಾಗೂ ವಿಶಾಲವಾದ ಪ್ರಾಕಾರ, ದೀಪಸ್ತಂಭಗಳು, ಮುಂಭಾಗ ಪುಷ್ಕರಣಿಗಳಿಂದ ಕೂಡಿದೆ. ಕ್ರಿ.ಶ. 1750ರಲ್ಲಿ ಸಾತರೆಯ ಪರಶುರಾಮ ನಾಯಕ ಅನಗಳೆ ಎಂಬುವನು ಕಟ್ಟಿಸಿದನೆಂದು ಮುಂಬೈ-ಕರ್ನಾಟಕ ಗೆಜೆಟಿಯರನಲ್ಲಿ ಉಲ್ಲೇಖಿಸಲಾಗಿದೆ. ಆದರೆ ದೇವಾಲಯ ಮರಾಠರ ಕಾಲದಲ್ಲಿ ಕಟ್ಟಿದ ಲಕ್ಷಣಗಳಿದ್ದರೂ ಕಟ್ಟಿಸಿದವರ ಬಗ್ಗೆ ಭಿನ್ನಾಭಿಪ್ರಾಯಗಳಿವೆ. ಪ್ರಸ್ತುತ ಬನಶಂಕರಿಯನ್ನು ಚಾಲುಕ್ಯ ಮನೆತನದ ದೇವತೆ ಎಂದು ಕರೆಯುವುದು ರೂಢಿಯಲ್ಲಿದೆ. ಆದರೆ ಈ ದೇವಿಯನ್ನು ಉಲ್ಲೇಖಿಸುವ ಬಾದಾಮಿ ಚಾಲುಕ್ಯರ ಮತ್ತು ರಾಷ್ಟ್ರಕೂಟರ ಕಾಲದ ಶಾಸನಗಳು ಲಭ್ಯವಾಗಿಲ್ಲ. ದೇವಾಲಯವು ನಿರಂತರ ಜೀರ್ಣೋದ್ಧಾರಕ್ಕೆ ಒಳಗಾಗಿದ್ದರಿಂದ ಮೂಲ ಕಟ್ಟಡದ ಬಗ್ಗೆ ಸ್ಪಷ್ಟವಾಗುವುದಿಲ್ಲ.

ಕಲ್ಯಾಣದ ಚಾಲುಕ್ಯರ ಕಾಲದ ಎರಡು ಶಾಸನಗಳು ಈ ಬನದ ದೇವಿಯ ಬಗ್ಗೆ ಮಾಹಿತಿಯನ್ನು ಒದಗಿಸುತ್ತವೆ. ಮುಂದೆ ವಿಜಯನಗರ, ಮರಾಠರ ಮತ್ತು ತದನಂತರದ ಇನಾಮು ಪತ್ರಗಳಲ್ಲೂ ಉಲ್ಲೇಖವಾಗಿದೆ.

ಕ್ರಿ.ಶ. 1019ರ ಶಾಸನ ಕಲ್ಯಾಣ ಚಾಲುಕ್ಯ ಅರಸ ಜಗದೇಕಮಲ್ಲನು ಆಳುತ್ತಿರುವಾಗ ಅವನ ಮಾಂಡಳಿಕ ರಾಷ್ಟ್ರಕೂಟ ಕುಳತಿಳಕ ಭೀಮದೇವ ಮತ್ತು ಸೇನಬೊವ ನಾಗವರ್ಮಯ್ಯನ ಬಿರುದುಗಳನ್ನು ವರ್ಣಿಸುತ್ತ, ಮಾತಿಳ ಚಾವೋಜಂ, ಎಡವಳ ಗೇತೋಜಂ, ಅಯ್ಯಾವಳೆ ಗೇತೋಜಂ ಮತ್ತು ಬನದ ದೇವಿಯ ದಾಸಿ ದುವ್ವೋಜಂರನ್ನು ಉಲ್ಲೇಖಿಸುತ್ತದೆ. ಈ ಶಾಸನದಲ್ಲಿ ಯಾವುದೇ ದಾನ-ದತ್ತಿಯನ್ನು ಪ್ರಸ್ತಾಪಿಸಿಲ್ಲ. ಇದರಲ್ಲಿ ಬರುವ ಬನದದೇವಿ ಮತ್ತು ನಾಲ್ಕು ಜನ ಓಜರ ಹೆಸರುಗಳನ್ನು ಹೇಳಲಾಗಿದೆ. ಬಹುಶಃ ಇವರು ದೇವಿಯ ಪೂಜಾಕಾರ್ಯವನ್ನು ನಿರ್ವಹಿಸುತ್ತಿರಬೇಕು.

ಕ್ರಿ.ಶ. 1024ರ ಚಾಲುಕ್ಯ ಜಗದೇಕಮಲ್ಲನ ಕಾಲದ ಶಾಸನದಲ್ಲಿ ಅವನ ಮಹಾಸಾಮಂತನಾದ ಕೇತಿಮಯ್ಯನೆಂಬುವನು ಬನದದೇವಿಯ ದೇವಾಲಯದ ಮುಂದೆ ಸಹಾಸಭೀಮ ಎಂಬ ಶಿಲಾಸ್ತಂಭವನ್ನು ನಿಲ್ಲಿಸುತ್ತಾನೆ. ಇದನ್ನು ತನಗೆ ಸಿಕ್ಕ ಕೀರ್ತಿಯ ಲಾಂಛನವೆಂಬಂತೆ ಸ್ಥಾಪಿಸಿದನೆಂದು ಹೇಳಲಾಗಿದೆ.

ವಿಜಯನಗರ ಅರಸ ಅಚ್ಚುತದೇವರಾಯನ ಕಾಲದಲ್ಲಿ ಈ ದೇವಾಲಯ ಮುಸಲ್ಮಾನರ (ಮಹಾರಾಜಕರು) ದಾಳಿಗೆ ಒಳಗಾಗುತ್ತದೆ. ಕ್ರಿ.ಶ. 1455ರಲ್ಲಿ ಅಚ್ಚುತದೇವ ಮಹಾರಾಜ ಮಹಾರಾಜಕರ ದಾಳಿಯಿಂದ ನಾಶವಾದ ಬಾದಾಮಿಯ ದುರ್ಗದ ಮಹಾಮಾಯಿ ಮತ್ತು ಇತರ ದೇವಾಲಯಗಳನ್ನು ಜೀರ್ಣೋದ್ಧಾರ ಮಾಡಲು ಚಿಕ್ಕಪ್ಪನಾಯಕನಿಗೆ ಹೇಳಿ

ಕಳುಹಿಸುತ್ತಾನೆ. ಸ್ವಾಮಿಯ ನಿರೂಪದಿಂದ ಚಿಕ್ಕಪ್ಪನಾಯಕನು ಅಚ್ಚುತಮಹಾರಾಯರಿಗೆ ಪುಣ್ಯವಾಗಲೆಂದು ಬಾದಾಮಿಯ ಕೋಟೆಯನ್ನು ಕಟ್ಟಿಸಿ, ಬನದ ಮರದ ಮಹಾಮಾಯಿ ದೇವಾಲಯವನ್ನು ಜೀರ್ಣೋದ್ಧಾರ ಮಾಡಿಸಿ, ಆ ದೇವತೆಯನ್ನು ಪುನಃ ಪ್ರತಿಷ್ಠಾಪನೆ ಮಾಡಿಸುತ್ತಾನೆ.

ವೀರಪ್ರತಾಪ ಸದಾಶಿವರಾಯರು ಆಳುತ್ತಿರುವಾಗ ಕ್ರಿ.ಶ. 1544ರಲ್ಲಿ ಹಡಪವಳ ಕೃಷ್ಣಪ್ಪನಾಯಕನು ಮಹಾಮಾಯಿಯ ಅಮೃತಪಡಿಗೆ, ರಂಗವೈಭವಕ್ಕೆ ಡಾಣಕಶಿರೂರ ಗ್ರಾಮವನ್ನು ದತ್ತಿ ನೀಡುತ್ತಾನೆ. ಮುಂದೆ ಮರಾಠರ ಕಾಲದಲ್ಲಿ ದೇವಾಲಯವನ್ನು ಕಟ್ಟಿಸಿದ (ಈಗಿರುವ ದೇವಾಲಯವನ್ನು ನಿರ್ಮಿಸಲಾಗಿದೆ) ಮತ್ತು ಅನೇಕ ಇನಾಮುಗಳನ್ನು ಬಿಟ್ಟ ಉಲ್ಲೇಖಗಳಿವೆ.

ಮೇಲಿನ ಅಂಶಗಳನ್ನು ಗಮನಿಸಿದಾಗ, ಈ ದೇವಾಲಯ ಒಂದು ಅವಧಿಯಲ್ಲಿ ಜೀರ್ಣೋದ್ಧಾರಕ್ಕೊಳಗಾಗಿ ಇನ್ನೊಂದು ಅವಧಿಯಲ್ಲಿ ಪುನಃ ನಿರ್ಮಾಣವಾಗಿದೆ. ಪ್ರಸ್ತುತ ದೇವಾಲಯದ ಪಕ್ಕದಲ್ಲಿ ಮಣ್ಣಲ್ಲಿ ಹೂತಿರುವ ಬಾದಾಮಿ ಚಾಲುಕ್ಯರ ಉತ್ತರಾರ್ಧ ಅಥವಾ ರಾಷ್ಟ್ರಕೂಟರ ಆರಂಭ ಕಾಲಾವಧಿಯಲ್ಲಿ ನಿರ್ಮಾಣವಾಗಿರುವ ದೇವಾಲಯವಿದೆ. ಈ ದೇವಾಲಯವನ್ನು ಗಚ್ಚಿನಿಂದ ಜೀರ್ಣೋದ್ಧಾರ ಮಾಡಿದ ಲಕ್ಷಣಗಳೂ ಕಾಣಿಸುತ್ತಿವೆ. ಈ ದೇವಾಲಯದ ಮುಂಭಾಗ ರಾಷ್ಟ್ರಕೂಟರ ಕಾಲದ ಒಂದು ದೇವಿ ಶಿಲ್ಪವನ್ನು ನೋಡಿರುವುದಾಗಿ ಡಾ. ಅ. ಸುಂದರ ಅವರು ಹೇಳುತ್ತಾರೆ. ಬಹುಶಃ ಮಹಾರಾಜಕರ ದಾಳಿಗೆ ಒಳಗಾದ ಮೂಲ ದೇವಾಲಯ ಇದೇ ಆಗಿರಬಹುದು. ಸುಂದರ ಅವರು ನೋಡಿದ ಪ್ರಾಚೀನ ಮೂರ್ತಿ ಪತ್ತೆಯಾದರೆ, ಅದರ ಲಕ್ಷಣಗಳಿಂದ ಹೆಚ್ಚಿನ ಮಾಹಿತಿ ದೊರೆಯುವ ಸಾಧ್ಯತೆ ಇದೆ.

ಇತ್ತೀಚೆಗೆ ದೇವಾಲಯದ ಮುಂದಿರುವ ಹರಿದ್ರಾತೀರ್ಥದಲ್ಲಿ ಒಂದು ಕಾಳಿ ವಿಗ್ರಹ ಪತ್ತೆಯಾಗಿದೆ. ಇದರ ಲಕ್ಷಣಗಳಿಂದ ವಿಜಯನಗರ ಕಾಲದಲ್ಲಿ ನಿರ್ಮಾಣವಾದುದೆಂದು ಹೇಳಬಹುದು. ಮರಳುಶಿಲೆಯಲ್ಲಿ ತಯಾರಿಸಲಾದ ಈ ವಿಗ್ರಹವು ಕಿರೀಟ ಮತ್ತು ರುಂಡಮಾಲೆ ಧರಿಸಿ, ಕೋರೆಹಲ್ಲುಗಳಿಂದ ಉಗ್ರರೂಪದಲ್ಲಿ ಕಾಣುತ್ತದೆ. ಬಲಕೈಗಳಲ್ಲಿ ಖಡ್ಗ, ಘಂಟೆ, ತ್ರಿಶೂಲ ಎಡಕೈಗಳಲ್ಲಿ ರುಂಡ, ಗುರಾಣಿ, ಡಮರುಗಳಿದ್ದು, ಇನ್ನೆರಡು ಕೈಗಳು ಹಾಳಾಗಿವೆ.

ಪ್ರಸ್ತುತ ಬನಶಂಕರಿ ವಿಗ್ರಹವು ಕಿರೀಟಮುಕುಟ, ರುಂಡಮಾಲಾ ಧರಿಸಿದ್ದು, ಬಲ ಕೈಗಳಲ್ಲಿ ಪದ್ಮ ?, ತ್ರಿಶೂಲ, ಘಂಟೆ, ಕತ್ತಿ ಮತ್ತು ಎಡಕೈಗಳಲ್ಲಿ ಪಾಣಿಬಟ್ಟಲು, ರುಂಡ, ಗುರಾಣಿ, ಡಮರುಗಳನ್ನು ಹಿಡಿದು ಸಿಂಹವಾಹಿನಿಯಾಗಿದ್ದಾಳೆ. ಮೇಲ್ಭಾಗ ಸುತ್ತಲು ಕೀರ್ತಿಮುಖವನ್ನೊಳಗೊಂಡ ಪ್ರಭಾವಳಿ, ಕೆಳಭಾಗ ಎರಡು ಆನೆಗಳ ಮೇಲೆ ನಿಂತಿರುವ ಸಿಂಹ, ಇಕ್ಕೆಲಗಳಲ್ಲಿ ವಾದ್ಯಕಾರರು ಮತ್ತು ಚಾಮರಧಾರಿಯರಿದ್ದಾರೆ.

ಮೇಲಿನ ಶಿಲ್ಪಗಳಲ್ಲಿಯ ಸಾಮ್ಯತೆಯನ್ನು ಗಮನಿಸಿದಾಗ ಮೂಲ ಬನಶಂಕರಿ ದೇವಾಲಯ ಈಗಿನ ದೇವಾಲಯದ ಪಕ್ಕದಲ್ಲಿತ್ತು. ಮಹಾರಾಜರಿಂದ ದಾಳಿನಡೆದದ್ದು ಅದೇ ದೇವಾಲಯದ ಮೇಲೆ. ಹಾಳಾದ ಮೂರ್ತಿಯನ್ನು ದೇವಾಲಯದ ಮುಂಭಾಗ ಇಟ್ಟಿರಬಹುದು. ಅದನ್ನೇ ಸುಂದರ ಅವರು ನೋಡಿರಬಹುದು. ಇದನ್ನು ಕೂಲಂಕಷ ಅಧ್ಯಯನಕ್ಕೆ ಒಳಪಡಿಸಬೇಕಾಗುತ್ತದೆ. ವಿಜಯನಗರ ಕಾಲದಲ್ಲಿ ಇನ್ನೊಂದು ವಿಗ್ರಹವನ್ನು ಮಾಡಿ ಪ್ರತಿಷ್ಠಾಪಿಸಲಾಯಿತು. ಆ ವಿಗ್ರಹ ಹಾಳಾದಾಗ ಅದನ್ನು ಹರಿದ್ರಾ ತೀರ್ಥದಲ್ಲಿ ಹಾಕಿದಂತೆ ಕಾಣುತ್ತದೆ.

ಮರಾಠರಿಂದ ಹಳೆ ದೇವಾಲಯದ ಪಕ್ಕದಲ್ಲಿ ಪ್ರಸ್ತುತ ದೇವಾಲಯವು ಸು. 17ನೇ ಶ.ದಲ್ಲಿ ನಿರ್ಮಾಣವಾಗಿದೆ. ಮೂಲಮೂರ್ತಿಗೆ ಯಾವುದೇ ಧಕ್ಕೆ ಬಾರದಂತೆ ಸೌಮ್ಯಾಕಾರದಲ್ಲಿ ಪ್ರಸ್ತುತ ವಿಗ್ರಹವನ್ನು ತಯಾರಿಸಲಾಗಿದೆ.

ಕುಕನೂರು ಮಹಾಮಾಯಿ

ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲೂಕಿನ ಕುಕನೂರು ಗ್ರಾಮ ಪ್ರಾಚೀನ ಕಾಲದಲ್ಲಿ 30 ಹಳ್ಳಿಗಳ ಆಡಳಿತ ಕೇಂದ್ರವಾಗಿ ಬೆಳ್ವಲ ನಾಡಿನ ಪ್ರಮುಖ ಅಗ್ರಹಾರವಾಗಿತ್ತು. ಈ ಅಗ್ರಹಾರದ ಮುಖ್ಯ ದೇವತೆ ಜೇಷ್ಠಾದೇವಿ. ಕ್ರಿ.ಶ. 1178ರ

ಶಾಸನ ಒಂಬತ್ತು ಶಿವಲಿಂಗಗಳನ್ನು ಹೆಸರಿಸುತ್ತ, ಅಂಬಿಕೆ, ಪುರಾಣಿದೇವಿ, ಚಾಮುಂಡಿ, ಮಹಾಮಾಯೆ, ತಡಗಾದಂಬಿಕೆ, ವಸಂತಾ, ಕಾಲ್ಯಂಬೆ, ಶಾಂತಿ, ಗುಪ್ತಚಾಮುಂಡಿಯರು ಇಲ್ಲಿ ನೆಲೆಗೊಂಡಿದ್ದಾರೆಂದು ಉಲ್ಲೇಖಿಸುತ್ತದೆ. ಇವರಲ್ಲಿ ಹಿರಿಯಳಾದ ಜೇಷ್ಠಾದೇವಿ ಮಧ್ಯದಲ್ಲಿ, ಪೂರ್ವಕ್ಕೆ ಬ್ರಹ್ಮೇಶ್ವರ, ದಕ್ಷಿಣಕ್ಕೆ ನಾಗೇಶ್ವರ, ಪಶ್ಚಿಮಕ್ಕೆ ಮಾಲೇಶ್ವರ ಮತ್ತು ಉತ್ತರಕ್ಕೆ ಮಲ್ಲಿಕಾರ್ಜುನರು ನೆಲೆಸಿರುವ ಬಗ್ಗೆ ಮಾಹಿತಿಯನ್ನು ನೀಡುತ್ತದೆ.

ಈ ಮಹಾಮಾಯಿಯನ್ನು ಕಾಳಿಕಾ ಜೇಷ್ಠಾದೇವಿಯಂತಲೂ ಕರೆಯಲಾಗಿದೆ. ಕಲಚುರ್ಯರ ಕಾಲದಲ್ಲಿ ಕಳೇಶ್ವರಯತಿಯು ಈ ಜೇಷ್ಠಾದೇವಿಯ ಸ್ಥಾನಾಚಾರ್ಯನಾಗಿದ್ದು, ನವಲಿಂಗದ ಸೋಮೇಶ್ವರ ದೇವರ ಮಠದ ಜವಾಬ್ದಾರಿಯನ್ನೂ ವಹಿಸಿಕೊಂಡಿದ್ದನು. ಅಲ್ಲದೇ ಮಹಾಮಂಡಳೇಶ್ವರ ಸಿಂದರಾಜ ಪೆರ್ಮಾಡಿಗೂ ಮತ್ತು ಅವನ ಮಂಡಳೇಶ್ವರ ಚಾವುಂಡನಿಗೂ ಗುರುವಾಗಿದ್ದನು. ಕಾಳಿಕಾ ಜೇಷ್ಠೆಯ ಆರಾಧಕನಾದ ಕಳೇಶ್ವರಯತಿಯು ಸೂಂಡಿಯ ನಗರೇಶ್ವರ ಕಾಳಾಮುಖಾನ್ವಯಕ್ಕೆ ಸೇರಿದವನಾಗಿದ್ದ. ಮಂತ್ರ–ತಂತ್ರ ಮತ್ತು ಅನೇಕ ಸಿದ್ಧಾಂತಗಳಲ್ಲಿ ಪರಿಣತನಾಗಿದ್ದರಿಂದ ಅವನನ್ನು ಸಿದ್ಧಾಂತಿ ಕಳೇಶ್ವರನೆಂದು ಕರೆಯಲಾಗುತ್ತಿತ್ತು.

ಕಲಚುರಿ ಸಂಕಮದೇವ ಮೊದೆನೂರಿನ ನೆಲೇಡಿನಲ್ಲಿದ್ದಾಗ ಅವನ ಸೇನಾಪತಿ ಧನ್ಯಚಮೂಪನಾಥ ಮತ್ತು ಅವನ ತಾಯಿ ಚಂಡಾಬಾಯಿ, ಅಕ್ಕ ಲಳಿಯಾದೇವಿ ಮೊದಲಾದವರು ಸೇರಿ ಅಗ್ರಹಾರ ಕುಕನೂರಿಗೆ ಬಂದು ಕಾಳಿಕಾ ಜೇಷ್ಠೆಗೆ ಪೂಜೆ ಸಲ್ಲಿಸಿ ದೇವಾಲಯದ ವಿವಿಧ ಕಾರ್ಯಗಳಿಗೆ ದತ್ತಿಯನ್ನು ಬಿಡುತ್ತಾರೆ.

ವಿಜಯನಗರ ಅರಸರ ಕಾಲದ ಕ್ರಿ.ಶ. 1379ರ ತಾಮ್ರಶಾಸನದ ಉಲ್ಲೇಖದಂತೆ ಕ್ರಿಯಾಶಕ್ತಿ ಗುರುಗಳು ಈ ದೇವಾಲಯದ ಸ್ಥಾನಾಚಾರ್ಯರಾಗಿದ್ದರು. ಅವರ ನಿರೂಪದಂತೆ ಹರಿಹರ ಮಹಾರಾಯನು ಕುಕನೂರು ಮಹಾಮಾಯಿಯ ಅಂಗರಂಗಭೋಗಕ್ಕೆ, ದೇವಾಲಯದ ಜೀರ್ಣೋದ್ಧಾರಕ್ಕೆ, ಮಹಾನೈವೇದ್ಯಕ್ಕೆ, ನಂದಾದೀಪ, ಚೈತ್ರಪವಿತ್ರಪರ್ವ, ತಿಥಿಗಳು, ನಿತ್ಯನೈಮಿತ್ತಿಕ ಮೊದಲಾದವುಗಳಿಗಾಗಿ ದಾನಬಿಟ್ಟಿದ್ದಾನೆ.

ರಾಷ್ಟ್ರಕೂಟ–ಕಲ್ಯಾಣ ಚಾಲುಕ್ಯರ ಕಾಲದಲ್ಲಿ ನಿರ್ಮಾಣವಾದ ಈ ದೇವಾಲಯ ವಿಜಯನಗರ ಕಾಲದಲ್ಲಿ ಜೀರ್ಣೋದ್ಧಾರಗೊಂಡು ವಿಸ್ತೃತರೂಪವನ್ನು ಪಡೆದುಕೊಂಡಿದೆ. ಇದು ಗರ್ಭಗೃಹ, ಅಂತರಾಳ, ಪ್ರದಕ್ಷಿಣಾಪಥ, ಸಭಾಮಂಟಪ, ವಿಶಾಲವಾದ ಆವರಣ ಹಾಗೂ ಪ್ರವೇಶದ್ವಾರಗಳಿಂದ ಕೂಡಿದೆ. ಗರ್ಭಗೃಹದಲ್ಲಿ ಮಧ್ಯ ಕ್ಷೇತ್ರಪಾಲ, ಬಲಭಾಗ ಮಹಾಮಾಯಿ ಮತ್ತು ಎಡಭಾಗದಲ್ಲಿ ಮಹಾಕಾಳಿಯ ವಿಗ್ರಹಗಳನ್ನು ಪ್ರತಿಷ್ಠಾಪಿಸಲಾಗಿದೆ. ದ್ವಾರಗಳಲ್ಲಿ ತ್ರಿಶೂಲ, ಡಮರು, ಗದೆ ಹಿಡಿದಿರುವ ಸುಮಾರು ಎಂಟು ಅಡಿ ಎತ್ತರದ ದ್ವಾರಪಾಲಕ ವಿಗ್ರಹಗಳಿವೆ. ಪ್ರದಕ್ಷಿಣಾಪಥದ ಹಿಂಬದಿಯ ಗೋಡೆಯ ಒಂದು ಗೂಡಿನಲ್ಲಿ ದಕ್ಷಿಣಾಮೂರ್ತಿ, ಇನ್ನೊಂದರಲ್ಲಿ ತ್ರಿಶೂಲ, ಡಮರು, ಖಡ್ಗ, ಭಿಕ್ಷಾಪಾತ್ರೆಯನ್ನು ಹಿಡಿದು ಕುದುರೆ ಮೇಲೆ ಕುಳಿತಿರುವ ಕಾಳಭೈರವನ ಶಿಲ್ಪವಿದೆ. ಕಾಳಭೈರವನೆಂದು ಕರೆಯಲ್ಪಡುವ ಇಂಥ ಲಕ್ಷಣಗಳನ್ನೊಳಗೊಂಡ ಶಿಲ್ಪಗಳನ್ನು ಮೈಲಾರನೆಂದು ಗುರುತಿಸಲಾಗಿದೆ. ಕರ್ನಾಟಕ ಮತ್ತು ಮಹಾರಾಷ್ಟ್ರಗಳಲ್ಲಿ ಕಂಡುಬಂದಿರುವ ಮೈಲಾರಕ್ಷೇತ್ರಗಳಲ್ಲಿ ಅಶ್ವವಾಹನನಾದ ಮೈಲಾರನು ಪೂಜೆಗೊಳ್ಳುತ್ತಿದ್ದಾನೆ.

ಅರಸ–ಮಹಾಮಂಡಲೇಶ್ವರರಿಂದ ಅನೇಕ ದಾನ–ದತ್ತಿಗಳನ್ನು ಪಡೆದು ನಿತ್ಯನಿರಂತರ ಪೂಜೆಗೊಳ್ಳುತ್ತಿರುವ ಈ ದೇವಾಲಯದ ಬಾಗಿಲನ್ನು ಕ್ರಿ.ಶ. 1561ರ ಅವಧಿಯಲ್ಲಿ ತುರುಕರು (ಮುಸಲ್ಮಾನರು) ಸುಟ್ಟು ನಾಶ ಮಾಡುತ್ತಾರೆ. ಆಗ ಆದಿಶಕ್ತಿ ಶ್ರೀ ಜೇಷ್ಠಾ ಮಹಾಲಕುಮಿದೇವಿಯರ ಸ್ಥಾನಕ್ಕೆ ಕರ್ತರಾದ ಅಲ್ಲಿಯ ಆಚಾರ್ಯರು, ಗ್ರಾಮದ ಗೌಡಭಟ್ಟಾಚಾರ್ಯನ ಮೊಮ್ಮಕ್ಕಳಾದ ಭಟ್ಟಗೌಡ, ಮಹಾದೇವಗೌಡ, ಅವನ ಮಕ್ಕಳು ಬೆನಕರಸಗೌಡ, ಅವನ ತಮ್ಮ ದೇವರಸಗೌಡ ಮೊದಲಾದವರು ಸೇರಿ ಸಂಕನಾಳ ಬಡಗಿ ಬಸವೋಜನ ಮಗ ಗುರೋಜನಿಂದ ಬಾಗಿಲನ್ನು ಮಾಡಿಸುತ್ತಾರೆ.

ಬಾದಾಮಿ ಮತ್ತು ಕುಕನೂರು ಮಹಾಮಾಯಿ ದೇವಾಲಯಗಳ ಮೇಲೆ ಏಕಕಾಲದಲ್ಲಿ ದಾಳಿ ನಡೆದಿಲ್ಲ. ಎರಡರ ಮಧ್ಯ ಒಂದು ಶತಮಾನದ ಅಂತರವಿದೆ. ಬಾದಾಮಿಯಲ್ಲಿ ಮತ್ತು ಕುಕನೂರಿನಲ್ಲಿ ಇನ್ನೂ ಪ್ರಮುಖವಾದ ದೇವಾಲಯಗಳಿವೆ.

ಅವು ಅಲ್ಲಿ ಪರಿಗಣನೆಗೆ ಬಂದಿಲ್ಲ. ಬಾದಾಮಿಯ ಶಾಸನ ಕೆಲವು ದೇವಾಲಗಳೆಂದು ಉಲ್ಲೇಖಿಸಿದರೂ ಅವು ಮಹಾಮಾಯಿ ದೇವಾಲದ ಸುತ್ತಮುತ್ತಲಿರುವ ಚಿಕ್ಕ ಗುಡಿಗಳಾಗಿರಬಹುದು.

ಭಾರತದಲ್ಲಿ ಮಾತೃದೇವತೆ ಆರಾಧನೆ ಪ್ರಾಗಿತಿಹಾಸ ಕಾಲದಿಂದಲೇ ನಡೆದುಬಂದಿರುವಂಥದ್ದು. ಇಸ್ಲಾಂ ಧರ್ಮದಲ್ಲಿ ಪಿತೃಪ್ರತೀಕವಾದ ಅಲ್ಲಾನನ್ನು ಬಿಟ್ಟರೆ ಬೇರೆ ಯಾವ ದೇವತೆಯ ಆರಾಧನೆಯೂ ಇಲ್ಲ. ಮಾತೃದೇವತೆ ಎಂಬ ಕಾರಣಕ್ಕಾಗಿ ದಾಳಿ ನಡೆಯಿತೇ ಅಥವಾ ಹೆಚ್ಚು ಜನಮನ್ನಣೆ ಪಡೆದ ದೇವತೆಗಳೆಂಬ ಕಾರಣಕ್ಕಾಗಿ ದಾಳಿ ನಡೆಯಿತೇ ಎಂಬುದು ಸ್ಪಷ್ಟವಾಗುವುದಿಲ್ಲ. ಇಲ್ಲಿ ರಾಜಕೀಯ ಅಥವಾ ಧಾರ್ಮಿಕ ಅಸಮಾಧಾನವನ್ನೂ ಅಲ್ಲಗಳೆಯಲಾಗುವುದಿಲ್ಲ. ಇದನ್ನು ಹೆಚ್ಚಿನ ಅಧ್ಯಯನಕ್ಕೂ ಒಳಪಡಿಸಲು ಅವಕಾಶಗಳುಂಟು.

ಗ್ರಂಥಋಣ

1. ಉಮಾದೇವಿ, 2012, *ಬಾದಾಮಿ ಬನಶಂಕರಿ : ಚಾರಿತ್ರಿಕ ಅಧ್ಯಯನ*, (ಅಪ್ರಕಟಿತ ಪಿಎಚ್.ಡಿ. ಮಹಾ ಪ್ರಬಂಧ), ಕನ್ನಡ ವಿಶ್ವವಿದ್ಯಾಲಯ, ಹಂಪಿ.
2. ದೇವರಕೊಂಡಾರೆಡ್ಡಿ (ಪ್ರ.ಸಂ.), ಭಟ್ಟಸೂರಿ ಕೆ.ಜಿ., ಕಲವೀರ ಮನ್ವಾಚಾರ್, ಪರಮಶಿವಮೂರ್ತಿ ಡಿ.ವಿ. (ಸಂ), 1999, *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–2*, ಕೊಪ್ಪಳ ಜಿಲ್ಲೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
3. ವೆಂಕಟ ರಂಗೋಕಟ್ಟಿ, 1893, *ಧಾರವಾಡ, ಬೆಳಗಾವಿ, ವಿಜಾಪುರ, ಕಾನಡಾ ಜಿಲ್ಲೆಗಳ ಗ್ಯಾಸೆಟಿಯರ್*, ಏಷಿಯನ್ ಎಜುಕೇಶನಲ್ ಸರ್ವಿಸಸ್, ನವದೆಹಲಿ.
4. ಶೀಲಾಕಾಂತ ಪತ್ತಾರ (ಲೇ), 2010, ಬನದೇವಿ, ಬನದ ಮಹಾಮಾಯಿ ಮತ್ತು ಬನಶಂಕರಿ, *ಇತಿಹಾಸ ದರ್ಶನ*, ಸಂಪುಟ 25, ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು.
5. ದೇವರಕೊಂಡಾರೆಡ್ಡಿ (ಪ್ರ.ಸಂ.), ಭಟ್ಟಸೂರಿ ಕೆ.ಜಿ., ಕಲವೀರ ಮನ್ವಾಚಾರ್, ಪರಮಶಿವಮೂರ್ತಿ ಡಿ.ವಿ. (ಸಂ), 2006, *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–9*, ಬಾಗಲಕೋಟೆ ಜಿಲ್ಲೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
6. ಸುರೇಶ ಕೆ.ಎಂ., ವಾಸುದೇವ ಬಡಿಗೇರ, ಸೊಮಶೇಖರ ಎಸ್.ವೈ., ಮಾಡಲಗೇರಿ ಕೊಟ್ರೇಶ್, 2001, *ಕರ್ನಾಟಕ ದೇವಾಲಯ ಕೋಶ : ಕೊಪ್ಪಳ ಜಿಲ್ಲೆ*, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

11. ಕೋಳಿವಾಡದ ಶಾಸನೋಕ್ತ ಮಾದವಜನಾರ್ದನ ದೇವಾಲಯ

ಸುರೇಶ ಕೆ. ಹಾನಗಲ್ಲ

ಪ್ರಸ್ತಾವನೆ

ಧಾರವಾಡ ಜಿಲ್ಲೆಯ ಹುಬ್ಬಳ್ಳಿ ತಾಲ್ಲೂಕಿನ ಕೋಳಿವಾಡ ಗ್ರಾಮವು ಹುಬ್ಬಳ್ಳಿಯಿಂದ ಪೂರ್ವಕ್ಕೆ 39 ಕಿ.ಮೀ. ಅಂತರದಲ್ಲಿದೆ. ಈವರೆಗೆ ಕೋಳಿವಾಡದಲ್ಲಿ ಆರು ಶಾಸನಗಳು ದೊರಕಿವೆ. ಅವುಗಳಲ್ಲಿ ಅತಿ ಪ್ರಾಚೀನ ಶಾಸನ ರಾಷ್ಟ್ರಕೂಟರ ಕಾಲಕ್ಕೆ ಸೇರಿದ ಖೊಟ್ಟಿಗನ ಕಾಲಕ್ಕೆ ಸೇರಿದುದಾಗಿದ್ದು, ಇಲ್ಲಿ ದೊರೆಯುವ ಎರಡು ಶಾಸನಗಳಿಂದ ಕೋಳಿವಾಡ ಗ್ರಾಮದ ಉಲ್ಲೇಖವನ್ನು ಕಾಣುತ್ತೇವೆ.[1] ಸ್ಥಳೀಯವಾಗಿ ಈ ಗ್ರಾಮವನ್ನು 'ಕುಕ್ಕುಟಪುರ' ಎಂಬ ಹೆಸರಿನಿಂದ ಕರೆಯುತ್ತಾರೆ. ಇದು ತನ್ನ ಮಡಿಲಿನಲ್ಲಿ ಬಹು ವಿಶಿಷ್ಟವಾದ ಪ್ರಾಚೀನ ಅವಶೇಷಗಳನ್ನೊಳಗೊಂಡಿದ್ದು, ಐತಿಹಾಸಿಕವಾಗಿ ಮಹತ್ವವನ್ನು ಪಡೆದಿದೆ. ಪ್ರಸ್ತುತ ಈ ಲೇಖನ ಶಾಸನೋಕ್ತ ಮಾಧವಜನಾರ್ಧನ ದೇವಾಲಯವಾಗಿದೆ.

ಶಾಸನೋಕ್ತ ಮಾಧವಜನಾರ್ಧನ ದೇವಾಲಯದ ಶಾಸನ ಪಾಠ.

1 ಶುಭಮಸ್ತು ಸ್ವಸ್ತಿಶ್ರೀಜಯಾಭುದಯ ಶಾಲಿವಾ
2 ಹನ ಶಕವರುಷ 1485ನೆಯ ರುಧಿರೋದ್ಗಾರಿ ಸಂವತ್ಸರದ
3 ಪುಷ್ಯಶುದ್ಧ 15 ಬುಧವಾರದಲ್ಲು ಶ್ರೀಮತು ಅಗಸ್ತ್ಯಗೋತ್ರದ ಅ
4 ಶ್ವಲಾಯನ ಸೂತ್ರದ ರುಕ್ಕುಶಾಖೆಯ **ಕೋಳಿವಾಡದ ಅಗ್ರಹಾ**
5 **ರದ ಎಜಮಾನ ಆನೆಯ ದೇವಪಯ್ಯಗಳ ಮಗ ಸೂರಪಯ್ಯಗಳು**
6 **ಶ್ರೀ ಮಾಧವಜನಾರ್ಧನಸ್ವಾಮಿಯ ಗುಡಿಯ ಪಾತ್ರಕ್ಕೆ ಸೋಮೋ**
7 **ಪರಾಗಪುಣ್ಯ** ಕಾಲದಲು ತಿರುಮಲಬೋವನ ಮಗಳು ಸೂರಿಯ.
8 ಮಾಣಿಕೆ ಎಂಬ ಹೆಂಣನು ಕಾಣಾಚಿಯ ಪಾತ್ರವಾಗಿ ಸಮರ್ಪಣೆ.
9 ಯ ಮಾಡಿದನು ಆ ಹೆಂಣಿಗೆ ಮಾಡಿಸಿದ ಸ್ವಾಸ್ಥೆ ಜೀ[ವಿ]ತ ವರುಷಕ್ಕೆ
10 ಘಟ್ಟವರಹ ಆಯನಂನಾಕ್ಷೇತ್ರಗಳ ಹಸಿಗೆಯಲಿ ಮೇಟಿಗೆ
11 ವೊಂಮನದ ಕಟ್ಟಳೆಯಲ್ಲೂ ಧ್ಯಾಂನ್ಯವನು ಬಿಟ್ಟು ಕೊಟ್ಟನು
12 ಎಂದು ಬರೆಸಿದ ಶಿಲಾ ಶಾಸನ [॥*]

ಅಗಸ್ತ್ಯ ಗೋತ್ರದ ಅಶ್ವಲಾಯನ ಸೂತ್ರದ ಋಕ್ ಶಾಖೆಯ ಕೋಳಿವಾಡದ ಅಗ್ರಹಾರದ ಯಜಮಾನ ಆನೆಯ ದೇವಪಯ್ಯಗಳ ಮಗ ಸೂರಪಯ್ಯನು ಶ್ರೀ ಮಾಧವಜನಾರ್ಧನಸ್ವಾಮಿ ಗುಡಿಯ ಪಾತ್ರಕ್ಕೆ ತಿರುಮಲಬೋವನಮಗಳು ಸೂರಿಯ ಮಾಣಿಕೆ ಎಂಬ ಹೆಣ್ಣನ್ನು ಕಾಣಬೆಯ ಪಾತ್ರವಾಗಿ ಅವಳ ಜೀವಿತ ವರ್ಷಕ್ಕೆ ಆರುಘಟ್ಟ ವರಹವನ್ನು ವಿವಿಧ ಕ್ಷೇತ್ರಗಳ ಹಸಿಗೆಯಲ್ಲಿ ಮೇಟಿಗೆ ವೊಂಮನದ ಕಟ್ಟಳೆಯಲ್ಲಿ ಬಿಟ್ಟಿರುವುದು ಈ ಶಾಸನದ ವಿಷಯವಾಗಿದೆ.[2]

ನಾರಾಯಣ ದೇವಾಲಯದ ಬಲಬದಿಯ ಕಂಬದಲ್ಲಿ ಈ ಶಾಸನವು ಇದ್ದು ಇದು ಕ್ರಿ.ಶ. 1563ರ ಕಾಲಘಟ್ಟಕ್ಕೆ ಸೇರಿದ ವಿಜಯನಗರ ಅರಸುಮನೆತನದ ಶಾಸನವಾಗಿದೆ. ಈ ಶಾಸನ ದಾನಶಾಸನವಾಗಿದ್ದು, ಶ್ರೀ ಮಾಧವಜನಾರ್ಧನಸ್ವಾಮಿಯ ಗುಡಿಯ ಪಾತ್ರಕ್ಕೆ ತಿರುಮಲಬೋವನ ಮಗಳು ಸೂರಿಯ ಮಾಣಿಕೆ ಎಂಬ ಹೆಣ್ಣು

ಮಗಳನ್ನು ದೇವಾಲಯದ ಸ್ವಚ್ಛತೆಗೆಂದು ನೇಮಕಮಾಡಿ, ಅವಳಿಗೆ ವರ್ಷಕ್ಕೆ ಆರು ಘಟ್ಟಿಯ ನಾಣ್ಯಗಳನ್ನು ಕೊಡುತ್ತಿದ್ದರೆಂಬುದು ಈ ಶಾಸನದ ವಿಶೇಷತೆಯಾಗಿದೆ.

ಪ್ರಸ್ತುತ ಧಾರವಾಡ ಜಿಲ್ಲೆಯಲ್ಲಿ ಐದು ಶಾಸನೋಕ್ತ ವೈಷ್ಣವ ದೇವಾಲಯಗಳಿವೆ. ಅವುಗಳಲ್ಲಿ ವಿಜಯನಗರ ಕಾಲಘಟ್ಟಕ್ಕೆ ಸಂಬಂಧಿಸಿದ ಮಾಧವಜನಾರ್ಧನ ದೇವಾಲಯವು ಒಂದು. ಈ ದೇವಾಲಯ ಪೂರ್ವಾಭಿಮುಖವಾಗಿದೆ. ಇದರ ತಿರ್ಯಙ್ಮುಖ ಗರ್ಭಗೃಹ, ಅಂತರಾಳ ಮತ್ತು ನವರಂಗದಿಂದ ಕೂಡಿದೆ. ಗರ್ಭಗೃಹವು ಚೌಕಾಕಾರದಿಂದ ಕೂಡಿದ್ದು, ಮಧ್ಯದಲ್ಲಿ ಪೀಠದ ಮೇಲೆ ಮಾಧವಜನಾರ್ಧನ ಸಮಭಂಗಿಯಲ್ಲಿ ನಿಂತಿರುವುದನ್ನು ಕಾಣುತ್ತೇವೆ. ಇದರ ಪ್ರವೇಶದ್ವಾರವು ಸರಳತೆಯಿಂದ ಕೂಡಿದ್ದು, ಲಲಾಟಬಿಂಬದಲ್ಲಿ ಆಧುನಿಕ ಹಿಂದಿ ಅಕ್ಷರದಿಂದ ಕೂಡಿದ "ಶ್ರೀ" ಎಂಬ ಬರಹವಿದೆ. ಜೊತೆಗೆ ಗರ್ಭಗೃಹಕ್ಕೆ ಹೊಂದಿಕೊಂಡಂತೆ ಅಂತರಾಳವಿದ್ದು, ಇದರ ದ್ವಾರಬಂಧ ತ್ರಿಶಾಖೆಗಳಿಂದ ಕೂಡಿದೆ. ಹಾಗೆಯೇ ಸರಳವಾದ ಲಲಾಟಬಿಂಬದಲ್ಲಿ ಯಾವುದೇ ಅಲಂಕರಣೆ ಇರದೆ, ಮೂಲರೂಪದಲ್ಲಿರುವುದು ವಿಶೇಷತೆಯಾಗಿದೆ. ಇದರ ಬದಿಗಳಲ್ಲಿ ಬಾಳೆದಿಂಡಿನ ಅಲಂಕಾರವಿದೆ. ಇನ್ನು ಈ ದ್ವಾರಬಂಧದ ಇಕ್ಕೆಲಗಳಲ್ಲಿ ಮೂರು ಸಾಲಿನ ಜಾಲಾಂದ್ರಗಳಿದ್ದು, ಇವುಗಳ ಗೂಡಿನಲ್ಲಿ ಪದ್ಮಗಳ ಅಲಂಕರಣೆ ಇದೆ. ಅಂತರಾಳಕ್ಕೆ ಹೊಂದಿಕೊಂಡಂತೆ ನವರಂಗವಿದ್ದು ಅದು ಸಂಪೂರ್ಣವಾಗಿ ಹಾಳಾಗಿದೆ. ಆದರೆ ಇದಕ್ಕೆ ಸಂಬಂಧಿಸಿದ ಸ್ತಂಭಗಳು ಮಹಾಮಾಯಿ ದೇವಸ್ಥಾನದ ಮುಂಭಾಗದಲ್ಲಿ ನಿಲ್ಲಿಸಲಾಗಿದೆ. ಇನ್ನು ಈ ದೇವಾಲಯದ ಊರ್ಧ್ವಮುಖದಲ್ಲಿ ಎತ್ತರವಾದ ಅಧಿಷ್ಠಾನವಿದ್ದು, ಹತ್ತಲು ಸೋಪಾನಗಳಿವೆ.[3]

ದೇವಾಲಯದಲ್ಲಿನ ಕಪ್ಪುಶಿಲೆಯಿಂದ ನಿರ್ಮಿಸಲ್ಪಟ್ಟ ದತ್ತಾತ್ರೇಯನು ಸಮಭಂಗಿಯಲ್ಲಿ ನಿಂತಿದ್ದಾನೆ. ಇವನು ಮೂರು ತಲೆಗಳನ್ನು ಮತ್ತು ಚತುರ್ಭುಜಗಳನ್ನು ಹೊಂದಿದ್ದಾನೆ. ಕೈಗಳಲ್ಲಿ ಗದಾ, ತ್ರಿಶೂಲ, ಅಕ್ಷಮಾಲ, ಡಮರು, ಮತ್ತು ಚಕ್ರವನ್ನು ಹಿಡಿದಿದ್ದಾನೆ. ಇವನನ್ನು ತ್ರಿಮೂರ್ತಿಗಳ ರೂಪದಲ್ಲಿ ಪೂಜಿಸುತ್ತಿರುವುದು ಬಹಳ ವಿಶೇಷವಾಗಿದೆ. ಮೂರ್ತಿಯ ಪೀಠದ ಕೆಳಭಾಗದಲ್ಲಿ ಬ್ರಹ್ಮನ ವಾಹನವಾದ ಹಂಸವನ್ನು, ವಿಷ್ಣುವಿನ ವಾಹನವಾದ ಗರುಡ ಮತ್ತು ಮಹೇಶ್ವರನ ವಾಹನ ನಂದಿಯನ್ನು ತೋರಿಸಿರುವುದು ಸಾಂಕೇತಿಕವಾಗಿ ವಿಶೇಷತೆಯಿಂದ ಕೂಡಿದೆ. ಅಲ್ಲದೇ ವಿಶೇಷವಾಗಿ ನಂದಿಯನ್ನು ಈ ಮೂರ್ತಿಯ ಪೀಠದ ಹಿಂಬದಿಯಲ್ಲಿ ಚಿತ್ರಿಸಿರುವುದು ಮಹತ್ವದ್ದಾಗಿದೆ.[4]

ಉಪಸಂಹಾರ

ಒಂದು ಪ್ರದೇಶದ ಇತಿಹಾಸ ಮತ್ತು ಸಂಸ್ಕೃತಿಯನ್ನು ತಿಳಿಯುವಲ್ಲಿ ಶಾಸನಗಳು ಮತ್ತು ದೇವಾಲಯಗಳು ಅತಿ ಮಹತ್ತರವಾದ ಪಾತ್ರವನ್ನು ವಹಿಸುತ್ತಿವೆ. ಕಾರಣ ಈ ಗ್ರಾಮದಲ್ಲಿ ಶಾಸನೋಕ್ತ ದೇವಾಲಯ ಬೌದ್ಧ ಆಯಕಸ್ತಂಭ, ಅನೇಕ ವೀರಗಲ್ಲು, ಮೂರ್ತಿಶಿಲ್ಪ ಮತ್ತು ಸಪ್ತಮಾತೃಕೆ, ಗಜಲಕ್ಷ್ಮಿ, ತಾರಾಭಗವತಿ, ವಿಗ್ರಹ ದೊರೆತಿವೆ. ಇಂತಹ ಗ್ರಾಮದ ಶಾಸನ ದೇವಾಲಯ ಮತ್ತು ಮೂರ್ತಿಶಿಲ್ಪಗಳನ್ನು ಅಧ್ಯಯನವನ್ನು ಮಾಡಿದಲ್ಲಿ ಸಂಸ್ಕೃತಿಯ ದರ್ಶನ ಮಾಡಿಸಿದಂತಾಗುತ್ತದೆ.

ಅಡಿಟಿಪ್ಪಣಿಗಳು

1. ಕೆ.ಐ.ಫ್ಹಿ., ಸಂ. 9, ಪು. 289
2. *ಧಾರವಾಡ ಜಿಲ್ಲಾ ಶಾಸನ ಸಂಪುಟ 1952-53*, ಕೆ.ಐ.ಫ್ಹಿ, *ಪೂರ್ವೋಕ್ತ*, ಪು. 289.
3. ಜಯಮ್ಮ ಬಿ., *ಧಾರವಾಡ ಜಿಲ್ಲೆಯ ಪುರಾತತ್ವ*, 2006, ಪು. 174-175.
4. ಸುರೇಶ ಕರಿಬಸಪ್ಪ ಹಾನಗಲ್ಲ, *ಹುಬ್ಬಳ್ಳಿ ತಾಲ್ಲೂಕಿನ ಶಾಸನಗಳು ಮತ್ತು ದೇವಾಲಯಗಳು*, ಅಪ್ರಕಟಿತ ಎಂ.ಫಿಲ್. ಸಂಪ್ರಬಂಧ, 2010, ಶಾಸನಶಾಸ್ತ್ರ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು. 89-90.



ಕೋಳಿವಾಡದ ಮಾಧವಜನಾರ್ಧನ ದೇವಾಲಯ



ಕೋಳಿವಾಡದ ಮಾಧವಜನಾರ್ಧನ ಮೂರ್ತಿ

12. ಚನ್ನಗಿರಿ ತಾಲೂಕಿನ ದೇವಾಲಯಗಳು – ಒಂದು ಅಧ್ಯಯನ

ಮಂಜನಾಯ್ಕ ಆರ್.

ಅಡಿಕೆಯ ನಾಡು ಎಂದೇ ಹೆಸರುವಾಸಿಯಾದ ಚನ್ನಗಿರಿ ಕ್ರಿ.ಶ.1870ರಲ್ಲಿ ಮೈಸೂರು ಒಡೆಯರ್ ಅವರ ಆಳ್ವಿಕೆಯ ಕಾಲದಲ್ಲಿಯೇ ಒಂದು ತಾಲೂಕು ಕೇಂದ್ರವಾಗಿ ಅಸ್ತಿತ್ವಕ್ಕೆ ಬಂದಿದೆ. ಇದು ಈ ಮೊದಲು ಶಿವಮೊಗ್ಗ ಜಿಲ್ಲೆಯ ಒಂದು ತಾಲ್ಲೂಕು ಆಗಿತ್ತು.[1] ಆದರೆ 1997ನೇ ಆಗಸ್ಟ್ 15ರಂದು ಅಂದಿನ ಮುಖ್ಯಮಂತ್ರಿ ಮಾನ್ಯ ಶ್ರೀ ಜಯದೇವಪ್ಪ ಹಾಲಪ್ಪ ಪಟೇಲ್ ಅವರು ಜಿಲ್ಲಾವಾರು ಪುನರ್ ವಿಂಗಡಣೆಯ ಸಂದರ್ಭದಲ್ಲಿ ಶಿವಮೊಗ್ಗ ಜಿಲ್ಲೆಯಿಂದ ಬೇರ್ಪಡಿಸಿ ದಾವಣಗೆರೆ ಜಿಲ್ಲೆಯ ಒಂದು ತಾಲ್ಲೂಕುಕೇಂದ್ರವಾಗಿ ಮಾರ್ಪಡಿಸಿದರು. ತಾಲ್ಲೂಕು ಕೇಂದ್ರವಾದ ಚನ್ನಗಿರಿ ಉತ್ತರ-ಪಶ್ಚಿಮ 14^0–75^0 ಅಕ್ಷಾಂಶದವರೆಗೆ ವಿಸ್ತರಿಸಿದೆ. ಇದು ಸಮುದ್ರಮಟ್ಟದಿಂದ 2171 ಅಡಿಗಳಷ್ಟು ಎತ್ತರದಲ್ಲಿದೆ. 1212 ಚದರ ಕಿ.ಮೀ. (662 ಮೀ) ವಿಸ್ತೀರ್ಣವನ್ನು ಹೊಂದಿದೆ.[2] ದಾವಣಗೆರೆಯಿಂದ ಸುಮಾರು 59 ಕಿ.ಮೀ, ಬೆಂಗಳೂರಿನಿಂದ 264 ಕಿ.ಮೀ. ದೂರದಲ್ಲಿ ಮಂಗಳೂರು–ಸೊಲ್ಲಾಪುರ ರಾಷ್ಟ್ರೀಯ ಹೆದ್ದಾರಿ ನಂ.13ರ ಮಾರ್ಗದಲ್ಲಿದೆ.

ಇತಿಹಾಸಪ್ರಸಿದ್ಧ ಚನ್ನಗಿರಿಯು ಈ ಹಿಂದೆ ಆಸಂದಿಯನ್ನಾಳುತ್ತಿದ್ದ ಗಂಗರು, ಬಾದಾಮಿ ಚಾಲುಕ್ಯರು, ಕಲ್ಯಾಣ ಚಾಲುಕ್ಯರು, ಹೊಯ್ಸಳರು, ಸೇವುಣರ ಆಳ್ವಿಕೆಗೆ ಒಳಗಾಗಿತ್ತು. ವಿಜಯನಗರ ಅರಸರ ಕಾಲಕ್ಕೆ ಉಚ್ಚಂಗಿ ವಿಭಾಗಕ್ಕೂ ನಂತರ ಸಂತೇಬೆನ್ನೂರು, ಕೆಳದಿ, ಚಿತ್ರದುರ್ಗ ನಾಯಕರ ವಶದಲ್ಲಿಯೂ ಕೆಲಕಾಲ ಬಿಜಾಪುರ ಆದಿಲ್‌ಷಾಹಿ, ಮರಾಠ ಪರಶುರಾಮ ಭಾವು ಅಲ್ಲದೆ ಮೈಸೂರಿನ ಸುಲ್ತಾನ್ ಹೈದರಾಲಿ ವಶದಲ್ಲಿ ಇದ್ದ ಈ ತಾಲ್ಲೂಕು ಭಾಗಗಳು ಬ್ರಿಟಿಷರ ಕೈವಶವಾದಾಗ ಚನ್ನಗಿರಿ ತಾಲ್ಲೂಕು ಅಸ್ತಿತ್ವಕ್ಕೆ ಬಂದಿತು.[3] ಹೀಗೆ ಚನ್ನಗಿರಿ ತಾಲೂಕಿನ ಐತಿಹಾಸಿಕತೆಯನ್ನು ನೋಡಬಹುದು.

ಕರ್ನಾಟಕವನ್ನು ಆಳ್ವಿಕೆ ಮಾಡಿದ ಅನೇಕ ರಾಜಮನೆತನಗಳಲ್ಲಿ ವಿಜಯನಗರ ಸಾಮ್ರಾಜ್ಯವು ಒಂದು ರಾಜಮನೆತನವಾಗಿದೆ. ಈ ಮನೆತನ ತನ್ನದೇ ಆದ ಕೀರ್ತಿಪತಾಕೆಯನ್ನು ಹಾರಿಸಿ ಇತಿಹಾಸದ ಪುಟಗಳಲ್ಲಿ ಪ್ರಜ್ವಲಿಸುವಂತೆ ಮಾಡಿತು.[4] ದಕ್ಷಿಣ ಭಾರತದಲ್ಲಿ ಹೊಯ್ಸಳರ ಅಧಿಪತ್ಯ ಕೊನೆಗೊಂಡ ನಂತರ ಇಸ್ಲಾಂ ದಾಳಿಯನ್ನು ತಡೆಗಟ್ಟಿ ಹಿಂದೂ ಧರ್ಮವನ್ನು ರಕ್ಷಿಸುವ ದೃಷ್ಟಿಯಿಂದ ವಿಜಯನಗರ ಸಾಮ್ರಾಜ್ಯವು ಕ್ರಿ.ಶ.1336ರಲ್ಲಿ ವಿದ್ಯಾರಣ್ಯಗುರುಗಳ ಮಾರ್ಗದರ್ಶನದಲ್ಲಿ ಸಂಗಮ ವಂಶದ ಹರಿಹರ–ಬುಕ್ಕರಿಂದ ಈ ಸಾಮ್ರಾಜ್ಯ ಸ್ಥಾಪನೆಯಾಯಿತು.[5] ಈ ಶ್ರೇಷ್ಠ ಆದರ್ಶವನ್ನಿಟ್ಟುಕೊಂಡು ಉದಯಿಸಿದ ಈ ಸಾಮ್ರಾಜ್ಯವು ಹದಿನಾಲ್ಕನೆಯ ಶತಮಾನದಲ್ಲಿ ಪ್ರಖ್ಯಾತ ಹಾಗೂ ವಿಶಾಲ ಸಾಮ್ರಾಜ್ಯವೆನಿಸಿ ಬೆಳೆಯಲಾರಂಭಿಸಿತು. ವಿಜಯನಗರ ಸಾಮ್ರಾಜ್ಯವು ಕರ್ನಾಟಕದ ಭವ್ಯಪರಂಪರೆಯನ್ನು ಸಾರಿತು. ಅದು ಕನ್ನಡಿಗರ ಸಾಹಿತ್ಯ, ಸಂಸ್ಕೃತಿ, ಸಂಗೀತ, ನೃತ್ಯ, ಜಾನಪದ ಹಾಗೂ ಶಿಲ್ಪಕಲೆಗಳ ಮಹೋನ್ನತಿಯನ್ನು ಸಾರಿದ ಸುವರ್ಣಯುಗ.[6] ವಿಜಯನಗರ ಅರಸರ ಬಗ್ಗೆ ಅನೇಕ ವಿದೇಶಿ ಪ್ರವಾಸಿಗರು ಇವುಗಳನ್ನೆಲ್ಲಾ ನೋಡಿ ಹೊಗಳಿದ್ದಾರೆ.[7] ಸುಮಾರು ಎರಡು ಶತಮಾನಗಳಿಗೂ ಹೆಚ್ಚು ಕಾಲ ರಾಜಕೀಯ ಅಸ್ಥಿರತೆಯನ್ನು ತೊಡೆದುಹಾಕಿ ವಿಜಯನಗರವು ಭಾರತದ ಇತಿಹಾಸದಲ್ಲಿ ಚಿರಸ್ಮರಣೀಯವಾಗಿದೆ.[8]

ವಿಜಯನಗರ ಸಾಮ್ರಾಜ್ಯದ ಆಡಳಿತವ್ಯಾಪ್ತಿಗೆ ದಕ್ಷಿಣ ಭಾರತದ ಸಾಕಷ್ಟು ಪ್ರದೇಶಗಳು ಸೇರಿದ್ದವು. ಅಲ್ಲೆಲ್ಲಾ ಸಾಕಷ್ಟು ವಾಸ್ತುಶಿಲ್ಪದ ಕುರುಹುಗಳನ್ನು ನಾವು ಇಂದಿಗೂ ಕಾಣಬಹುದು. ಅಂತೆಯೇ ಚನ್ನಗಿರಿ ತಾಲೂಕಿನಲ್ಲಿ ವಿಜಯನಗರ ಅರಸರು ಪ್ರತ್ಯಕ್ಷರಾಗಿ ಮತ್ತು ಪರೋಕ್ಷವಾಗಿ ತಮ್ಮ ಆಡಳಿತವನ್ನು ನಡೆಸಿದ್ದಾರೆ. ಈ ನಿಟ್ಟಿನಲ್ಲಿ ಅವರ ಕಾಲದ ದೇವಾಲಯಗಳ ವಾಸ್ತುಶಿಲ್ಪವನ್ನು ಕುರಿತು ಅಧ್ಯಯನ ಮಾಡಲಾಗಿದೆ.

1. ಈಶ್ವರ ದೇವಾಲಯ

ಊರು	:	ಚನ್ನಗಿರಿ ಟೌನ್	ಅಭಿಮುಖ	:	ಉತ್ತರಕ್ಕೆ
ಸ್ಮಾರಕ	:	ಈಶ್ವರ	ಕಾಲ	:	ಕ್ರಿ.ಶ.14–15ನೇ ಶತಮಾನ
ಸ್ಥಳ	:	ಹೆಲಿಪ್ಯಾಡ್ ಹತ್ತಿರ	ಸ್ಥಿತಿ	:	ಕನಿಷ್ಠ
ಶೈಲಿ	:	ವಿಜಯನಗರ	ಸಂರಕ್ಷಣೆ	:	--

ಈ ದೇವಾಲಯದಲ್ಲಿ ಆಯತಾಕಾರದ ಗರ್ಭಗೃಹ ಹಾಗೂ ಅದಕ್ಕೆ ಹೊಂದಿಕೊಂಡಂತೆ ಕಂಬಗಳ ತೆರೆದ ಮಂಟಪವಿದ್ದು ಗ್ರಾನೈಟ್‌ಕಲ್ಲಿನಿಂದ ನಿರ್ಮಿಸಲ್ಪಟ್ಟಿದೆ. ಭಿತ್ತಿಯ ಭಾಗವು ಸಾಧಾರಣವಾಗಿದ್ದು ಯಾವುದೇ ಅಲಂಕರಣೆಯನ್ನು ಹೊಂದಿಲ್ಲ ಹಾಗೂ ದೇವಾಲಯದ ಗರ್ಭಗುಡಿಯ ಪ್ರವೇಶದ್ವಾರದ ಪೇದ್ಯಾಭಾಗದಲ್ಲಿ ಕುಂಭಪಂಜರದ ಕೆತ್ತನೆಯಿದೆ ಹಾಗೂ ಲಲಾಟಬಿಂಬದಲ್ಲಿ ಸುಂದರವಾದ ನಂದಿ ಶಿಲ್ಪವನ್ನು ಕಾಣಬಹುದಾಗಿದೆ. ದೇವಾಲಯದ ಗರ್ಭಗುಡಿಯ ಪೂರ್ವ ಭಾಗದ ಭಿತ್ತಿಯು ಹಾಳಾಗಿದ್ದು ತೆರೆದ ಮಂಟಪದಲ್ಲಿರುವ ಕಂಬಗಳು ಚಚ್ಚೌಕಾಕಾರವಾಗಿದ್ದು, ಅದರ ಮೇಲೆ ನಾಲ್ಕು ಮುಖದ ಚೌಕ, ಅದರ ನಾಲ್ಕು ಮೂಲೆಯನ್ನು ಕತ್ತರಿಸುತ್ತಲೇ ಆದ ನಾಲ್ಕು ಮುಖಗಳು ಒಟ್ಟು ಅಷ್ಟಮುಖ ಮೂಲೆ ಮತ್ತೆ ನಾಲ್ಕು ಮುಖದ ಚೌಕ ಮತ್ತದೇ ಮುಂದುವರೆದು ಬೋದಿಗೆಯವರೆಗೆ ಮುಂದುವರೆಯುತ್ತದೆ. ಹಾಗೂ ಭುವನೇಶ್ವರಿಯು ಸಾಧಾರಣವಾಗಿದೆ. ದೇವಾಲಯದ ಗರ್ಭಗುಡಿಯಲ್ಲಿ ಯಾವುದೇ ಮೂರ್ತಿಯು ಇರುವುದಿಲ್ಲ. ಇದು ಪಾಳುದೇವಾಲಯವಾಗಿದೆ.

2. ವಿರೂಪಾಕ್ಷೇಶ್ವರ ದೇವಾಲಯ

ಊರು	:	ಬಸವಾಪಟ್ಟಣ	ಅಭಿಮುಖ	:	ಪಶ್ಚಿಮಕ್ಕೆ
ಸ್ಮಾರಕ	:	ವಿರೂಪಾಕ್ಷೇಶ್ವರ	ಕಾಲ	:	ಕ್ರಿ.ಶ.15–16ನೇ ಶತಮಾನ
ಸ್ಥಳ	:	ಗ್ರಾಮದ ಮಧ್ಯದಲ್ಲಿ	ಸ್ಥಿತಿ	:	ಉತ್ತಮ
ಶೈಲಿ	:	ಪ್ರಾದೇಶಿಕ/ವಿಜಯನಗರ	ಸಂರಕ್ಷಣೆ	:	ಗ್ರಾಮಸ್ಥರಿಂದ

ಈ ದೇವಾಲಯವು ಏಕಕೂಟ ದೇವಾಲಯವಾಗಿದ್ದು, ಗರ್ಭಗೃಹ ಮತ್ತು ಗರ್ಭಗೃಹಕ್ಕೆ ಹೊಂದಿಕೊಂಡ ಹಾಗೆ ಎರಡು ಸ್ವತಂತ್ರ ಹಾಗೂ ಎರಡು ಅರ್ಧಕಂಬಗಳನ್ನು ಹೊಂದಿರುವ ಪ್ರವೇಶಮಂಟಪವನ್ನು ಹೊಂದಿದೆ. ಈ ಮಂಟಪವನ್ನು ಪ್ರವೇಶಿಸಲು ಸೋಪಾನವಿದೆ. ಹಾಗೂ ಸೋಪಾನದ ಅಕ್ಕಪಕ್ಕದಲ್ಲಿ ಹಸ್ತಿಹಸ್ತಾ ಫಲಕಗಳಿವೆ. ಈ ದೇವಾಲಯದ ಅಧಿಷ್ಠಾನ ಭಾಗವು ಜಜ್ಜಾವನ್ನು ಹೊಂದಿದೆ. ನಂತರ ಭಿತ್ತಿಯ ಭಾಗವು ಸಾಧಾರಣವಾಗಿದೆ. ಯಾವುದೇ ಅಲಂಕಾರಗಳು ಕಂಡುಬರುವುದಿಲ್ಲ. ದೇವಾಲಯದ ಕಂಬಗಳು ನಾಲ್ಕು ಮುಖದ ಚೌಕ, ಅದರ ನಾಲ್ಕು ಮೂಲೆಯನ್ನು ಕತ್ತರಿಸುತ್ತಲೇ ಆದ ಮತ್ತೆ ನಾಲ್ಕು ಮುಖಗಳು ಒಟ್ಟು ಅಷ್ಟಮುಖ ಮೂಲೆ, ಮತ್ತೆ ನಾಲ್ಕು ಮುಖದ ಚೌಕ, ಮತ್ತದೇ ಮುಂದುವರೆದು ಬೋದಿಗೆಯವರೆಗೆ ಮುಂದುವರೆಯುತ್ತದೆ. ಹೀಗೆ ಸರಳ ರಚನೆಯ ಕಂಬಗಳಾಗಿವೆ. ಬಾಗಿಲುವಾಡವು ಮೂರು ಶಾಖೆಗಳನ್ನು ಹೊಂದಿದ್ದು ಸರಳವಾಗಿದೆ. ಲಲಾಟ ಬಿಂಬದಲ್ಲಿ ಗಜಲಕ್ಷ್ಮೀಯ ಕೆತ್ತನೆಯಿದೆ. ಬಾಗಿಲುವಾಡದ ಮೇಲ್ಭಾಗದಲ್ಲಿ ಎಲೆಯ ಕೆತ್ತನೆಯನ್ನು ಕಾಣಬಹುದು. ಗರ್ಭಗೃಹದಲ್ಲಿ ಪಾಣಿಪೀಠದ ಮೇಲೆ ಶಿವಲಿಂಗವಿದೆ. ಇದರ ಅಕ್ಕಪಕ್ಕದಲ್ಲಿ ಗಣಪತಿ ಮತ್ತು ದುರ್ಗಮ್ಮನ ಮೂರ್ತಿಯನ್ನು ಸಹ ಕಾಣಬಹುದು. ಈ ದೇವಾಲಯದ ಮುಂಭಾಗದಲ್ಲಿ ಅನೇಕ ಹಾಳಾಗಿರುವ ಮೂರ್ತಿಶಿಲ್ಪಗಳು ಹಾಗೂ ಕಂಬದಲ್ಲಿ ತ್ರುಟಿತವಾಗಿರುವ ಶಾಸನವನ್ನು ನೋಡಬಹುದು ಹಾಗೂ ಈ ದೇವಾಲಯದ ಪ್ರಾಂಗಣದಲ್ಲಿ ಗಂಗಾಧರೇಶ್ವರ ಹಾಗೂ ಕೇಶವ ದೇವಾಲಯವನ್ನು ಸಹ ನೋಡಬಹುದಾಗಿದೆ.

3. ಈಶ್ವರ ದೇವಾಲಯ

ಊರು	:	ಬೆಳಲಗೆರೆ	ಅಭಿಮುಖ	:	ಪೂರ್ವ
ಸ್ಮಾರಕ	:	ಈಶ್ವರ	ಕಾಲ	:	ಕ್ರಿ.ಶ.15–16ನೇ ಶತಮಾನ
ಸ್ಥಳ	:	ಗ್ರಾಮದಿಂದ 0.5 ಕಿ.ಮೀ. ದೂರದಲ್ಲಿ ಪಶ್ಚಿಮಕ್ಕೆ ಗದ್ದೆಯಲ್ಲಿದೆ	ಸ್ಥಿತಿ	:	ಮಧ್ಯಮ
			ಸಂರಕ್ಷಣೆ	:	ಗ್ರಾಮಸ್ಥರಿಂದ
ಶೈಲಿ	:	ಪ್ರಾದೇಶಿಕ/ವಿಜಯನಗರ			

ಈ ದೇವಾಲಯವು ಏಕಕೂಟ ದೇವಾಲಯವಾಗಿದ್ದು, ಗರ್ಭಗೃಹ, ನವರಂಗ ಮತ್ತು ಮುಖಮಂಟಪವನ್ನು ಹೊಂದಿದೆ. ಈ ದೇವಾಲಯವು ಸಂಪೂರ್ಣವಾಗಿ ಮಣ್ಣಿನಲ್ಲಿ ಮುಚ್ಚಿಕೊಂಡಿದೆ. ಹಾಗಾಗಿ ದೇವಾಲಯದ ಭಿತ್ತಿಯ ಭಾಗದ ಹಾಗೂ ಶಿಖರದ ಭಾಗವು ಮಣ್ಣಿನಲ್ಲಿ ಮುಚ್ಚಿಕೊಂಡಿದೆ. ದೇವಾಲಯದ ನವರಂಗದ ಕಂಬಗಳು ಪೀಠ ಅದರ ಮೇಲೆ ಚೌಕಾಕಾರದ ಭಾಗ ಅದರಲ್ಲಿ ಉಬ್ಬುಶಿಲ್ಪವನ್ನು ಹೊಂದಿದೆ. ನಂತರ ಆರು ಪಟ್ಟಿಕೆಗಳಿವೆ. ಅದರ ಮೇಲೆ ಕುಂಬ, ಫಲಕ, ಬೋದಿಗೆಯನ್ನು ಹೊಂದಿದೆ. ಹಾಗೂ ಭುವನೇಶ್ವರಿಯು ಅಷ್ಟಕೋನಾಕಾರದಲ್ಲಿದ್ದು ಮಧ್ಯದಲ್ಲಿ ಪದ್ಮವಿದೆ. ಗರ್ಭಗೃಹದಲ್ಲಿ ಉದ್ಭವ ಶಿವಲಿಂಗವಿದೆ. ಅದರ ಮುಂದೆ ನಂದಿಯ ಶಿಲ್ಪವಿದೆ.

4. ಮಲ್ಲಿಕಾರ್ಜುನ ದೇವಾಲಯ

ಊರು	:	ಮಾವಿನಹೊಳೆ	ಅಭಿಮುಖ	:	ಪೂರ್ವ
ಸ್ಮಾರಕ	:	ಮಲ್ಲಿಕಾರ್ಜುನ	ಕಾಲ	:	ಕ್ರಿ.ಶ. 14–15ನೇ ಶತಮಾನ
ಸ್ಥಳ	:	ಗ್ರಾಮದ ಮಹಾರುದ್ರಸ್ವಾಮಿ ದೇವಾಲಯದ ಪ್ರಾಂಗಣದಲ್ಲಿ	ಸ್ಥಿತಿ	:	ಉತ್ತಮ
ಶೈಲಿ	:	ವಿಜಯನಗರ	ಸಂರಕ್ಷಣೆ	:	ಗ್ರಾಮಸ್ಥರಿಂದ

ಈ ದೇವಾಲಯವು ಏಕಕೂಟ ದೇವಾಲಯವಾಗಿದ್ದು ಗರ್ಭಗೃಹ, ಅಂತರಾಳ, ನವರಂಗವನ್ನು ಹೊಂದಿದೆ. ದೇವಾಲಯದ ಅಧಿಷ್ಠಾನ ಭಾಗವು ಚಜ್ಜಾವನ್ನು ಹೊಂದಿದೆ. ನಂತರ ಸಾಧಾರಣವಾದ ಭಿತ್ತಿಯ ಭಾಗವನ್ನು ಹೊಂದಿದೆ. ಗರ್ಭಗೃಹದ ಪಶ್ಚಿಮ ಹಾಗೂ ಉತ್ತರ ಭಾಗದ ಭಿತ್ತಿಯಲ್ಲಿ ನಂದಿಯ ಶಿಲ್ಪವನ್ನು ಕೆತ್ತಲಾಗಿದೆ. ಶಿಖರವು ಆಧುನಿಕ ಮಾದರಿಯಲ್ಲಿ ಜೀರ್ಣೋದ್ಧಾರ ಮಾಡಿದ್ದಾರೆ.

ಈ ದೇವಾಲಯದ ಕಂಬವು ಪೀಠ ಅದರ ಮೇಲೆ ಕಾಂಡಭಾಗದಲ್ಲಿ ಚೌಕಾಕಾರದ ಭಾಗ ಅದರ ಮೇಲೆ ನಾಲ್ಕು ಮೂಲೆಯನ್ನು ಕತ್ತರಿಸಿ ಆದ ಮತ್ತೆ ಆರು ಮುಖಗಳನ್ನು ಹೊಂದಿದೆ. ನಂತರ ಮತ್ತೆ ಚೌಕಾಕಾರದ ಭಾಗ ನಂತರ ಬೋದಿಗೆಯನ್ನು ಹೊಂದಿರುವ ಸರಳ ಮಾದರಿಯ ಕಂಬಗಳಿವೆ. ಭುವನೇಶ್ವರಿಯು ಅಷ್ಟಕೋನಾಕಾರದಲ್ಲಿದ್ದು ಮಧ್ಯದಲ್ಲಿ ಪದ್ಮವಿದೆ. ನವರಂಗದ ಮಧ್ಯದಲ್ಲಿ ಗಮನಸೆಳೆಯುವ ಸುಂದರವಾದ ನಂದಿಯ ಶಿಲ್ಪವಿದೆ. ಅದರ ಮುಂದೆ ಸಣ್ಣದಾದ ಶಿವಲಿಂಗವಿದೆ. ಅಂತರಾಳ ಮತ್ತು ಗರ್ಭಗೃಹದ ಬಾಗಿಲುವಾಡವು ಸರಳವಾಗಿದ್ದು, ಉದ್ದುದ್ದನೆಯ ಮೂರು ಪಟ್ಟಿಕೆಗಳು ಕಂಡುಬರುತ್ತವೆ. ಹಾಗೂ ಲಲಾಟ ಬಿಂಬದಲ್ಲಿ ಪದ್ಮದ ಕೆತ್ತನೆಯಿದೆ. ಗರ್ಭಗೃಹವು ಚಚ್ಚೌಕಾಕಾರವಾಗಿದ್ದು ಮಧ್ಯದಲ್ಲಿ ಪಾಣಿಪೀಠದ ಮೇಲೆ ಶಿವಲಿಂಗವಿದೆ. ಈ ದೇವಾಲಯದ ಪ್ರಾಂಗಣದಲ್ಲಿ ಶ್ರೀಗುರುಮಹಾರುದ್ರಸ್ವಾಮಿ ದೇವಾಲಯವು ಸಹ ಇದೆ.

5. ಈಶ್ವರ ದೇವಾಲಯ

ಊರು	:	ಮಸಣಿಕೆರೆ	ಅಭಿಮುಖ	:	ದಕ್ಷಿಣಾಭಿಮುಖ
ಸ್ಮಾರಕ	:	ಈಶ್ವರ	ಕಾಲ	:	ಕ್ರಿ.ಶ. ಸುಮಾರು 15ನೇ ಶತಮಾನ
ಸ್ಥಳ	:	ಗ್ರಾಮದ ಮಧ್ಯದಲ್ಲಿ	ಸ್ಥಿತಿ	:	ಉತ್ತಮ
ಶೈಲಿ	:	ವಿಜಯನಗರ	ಸಂರಕ್ಷಣೆ	:	ಗ್ರಾಮಸ್ಥರಿಂದ

ಈ ದೇವಾಲಯವು ಗರ್ಭಗುಡಿ, ಅಂತರಾಳ, ನವರಂಗ, ಈ ನವರಂಗಕ್ಕೆ ಹೊಂದಿಕೊಂಡಂತೆ ಉತ್ತರ ಮತ್ತು ಪೂರ್ವಭಾಗದಲ್ಲಿ ಒಂದೊಂದು ಗರ್ಭಗುಡಿಗಳನ್ನು ಹೊಂದಿದೆ. ದೇವಾಲಯದ ಹೊರಭಾಗದ ಅಧಿಷ್ಠಾನ ಹಾಗೂ ಭಿತ್ತಿಯು ಸರಳವಾಗಿದೆ. ಭಿತ್ತಿಯ ಮೇಲ್ಭಾಗವನ್ನು ಇತ್ತೀಚೆಗೆ ನವೀಕರಿಸಿದ್ದಾರೆ. ಹಾಗೂ ದೇವಾಲಯದ ಸುತ್ತಲೂ ಪ್ರಾಕಾರಗೋಡೆಯೊಂದನ್ನು ಈಚೆಗೆ ನಿರ್ಮಿಸಿದ್ದಾರೆ. ಪಶ್ಚಿಮಭಾಗದ ಗರ್ಭಗುಡಿಯು ಚೌಕಾಕಾರವಾಗಿದ್ದು ಅದರಲ್ಲಿ ಶಿವಲಿಂಗವಿದೆ. ಇದರ ದ್ವಾರವು ಸರಳವಾಗಿದ್ದು, ಲಲಾಟ ಬಿಂಬದಲ್ಲಿ ಯಾವುದೇ ಶಿಲ್ಪಗಳಿಲ್ಲ. ನವರಂಗದ ಉತ್ತರಕ್ಕೊಂದು ಗರ್ಭಗುಡಿಯಿದ್ದು, ಅದರಲ್ಲಿ ಕೇಶವನ ಮೂರ್ತಿ ಇದೆ. ಈ ಮೂರ್ತಿಯ ಸಮೀಪವೇ ನಾಗಶಿಲ್ಪಗಳಿವೆ. ಈ ಗರ್ಭಗುಡಿಯ ದ್ವಾರವು ಅಲಂಕೃತವಾಗಿರದೇ ಸರಳವಾಗಿದೆ. ಹಾಗೂ ನವರಂಗದ ಪೂರ್ವಭಾಗಕ್ಕೊಂದು ಗರ್ಭಗುಡಿಯಿದ್ದು ಇದಕ್ಕೆ ದ್ವಾರವಿಲ್ಲ. ನವರಂಗದಲ್ಲಿ ನಾಲ್ಕು ಚೌಕ, ಆಯಾತ ಮತ್ತು ವೃತ್ತಾಕಾರದ ಕಂಬಗಳಿವೆ. ಈ ಕಂಬಗಳು ಸಾಧಾರಣವಾಗಿವೆ. ನಾಲ್ಕು ಕಂಬಗಳ ಮಧ್ಯಭಾಗದಲ್ಲಿ ನಂದಿ ಇದೆ. ಈ ಕಂಬಗಳ ಮೇಲಿನ ಭುವನೇಶ್ವರಿಯು ಚೌಕಾಕಾರದ ಪಟ್ಟಿಕೆಯಲ್ಲಿ ಅಷ್ಟದಿಕ್ಪಾಲಕರನ್ನು ವಾಹನಸಮೇತರಾಗಿ ಕೆತ್ತಲಾಗಿದೆ. ಈ ಅಷ್ಟದಿಕ್ಪಾಲಕರ ಮಧ್ಯದಲ್ಲಿ ತಾಂಡೇಶ್ವರನನ್ನು (ಶಿವ) ಕೆತ್ತಲಾಗಿದೆ. ಅದರ ಮೇಲಿನ ಪಟ್ಟಿಕೆಯ ಉತ್ತರ ಭಾಗದಲ್ಲಿ ಸುರ, ಅಸುರರು ಸಮುದ್ರಮಂಥನ ಗೈಯುತ್ತಿರುವಂತೆ ಮತ್ತು ದಕ್ಷಿಣ ಭಾಗದಲ್ಲಿ ವಿಷ್ಣು ಕಾಳಿಂಗಮರ್ದನ ಮಾಡುತ್ತಿರುವಂತೆ ಹಾಗೂ ಪಶ್ಚಿಮ ಭಾಗದಲ್ಲಿ ವಾದ್ಯಹಿಡಿದವರನ್ನು ಸುಂದರವಾಗಿ ಕೆತ್ತಿರುವುದು ಇಲ್ಲಿನ ವಿಶೇಷವಾಗಿದೆ. ಈ ಶಿಲ್ಪಗಳ ಮೇಲಿನ ಎಂಟು ಕೋನಗಳಲ್ಲಿ ಕೀರ್ತಿಮುಖ ಹಾಗೂ ಅಲ್ಲಲ್ಲಿ ಪುಷ್ಪಗಳನ್ನು ಕೆತ್ತಿರುವುದು ಆಕರ್ಷಣೀಯವಾಗಿದೆ. ಪ್ರವೇಶದ್ವಾರವು ದಕ್ಷಿಣದಿಕ್ಕಿಗಿದ್ದು, ಇಲ್ಲಿ ಶೈವ ದ್ವಾರಪಾಲಕರು ತ್ರಿಶೂಲ, ಡಮರುಗ, ಗದೆ ಹಿಡಿದು ನಿಂತಿದ್ದಾರೆ. ಬಾಗಿಲುವಾಡವು ರತ್ನ, ಪುಷ್ಪ, ಸ್ತಂಭ, ಲತಾಶಾಖೆಗಳಿಂದ ಕೂಡಿದ್ದು, ಮೊದಲಿನ ಎರಡು ಶಾಖೆಗಳು ಲಲಾಟಬಿಂಬದವರೆಗೂ ಮುಂದುವರೆದಿದೆ. ಲಲಾಟಬಿಂಬದಲ್ಲಿ ಗಜಲಕ್ಷ್ಮೀ ಶಿಲ್ಪವಿದೆ.[9]

6. ಸಿದ್ಧೇಶ್ವರ ದೇವಾಲಯ

ಊರು	:	ಸೂಳೆಕೆರೆ (ಶಾಂತಿಸಾಗರ)	ಅಭಿಮುಖ	:	ಪೂರ್ವಾಭಿಮುಖ
ಸ್ಮಾರಕ	:	ಸಿದ್ಧೇಶ್ವರ	ಕಾಲ	:	ಕ್ರಿ.ಶ. ಸುಮಾರು 1546
ಸ್ಥಳ	:	ಬಸ್‌ನಿಲ್ದಾಣದ ಹತ್ತಿರವಿರುವ ಸಣ್ಣ ಬೆಟ್ಟದ ಮೇಲೆ	ಸ್ಥಿತಿ	:	ಉತ್ತಮ
ಶೈಲಿ	:	ಕದಂಬ ನಾಗರ	ಸಂರಕ್ಷಣೆ	:	ಗ್ರಾಮಸ್ಥರಿಂದ

ಈ ದೇವಾಲಯವು ಗರ್ಭಗುಡಿ, ಅಂತರಾಳ, ನವರಂಗ ಹಾಗೂ ಮುಖಮಂಟಪಗಳನ್ನೊಳಗೊಂಡಿದೆ. ಹೊರಭಾಗದ ಅಧಿಷ್ಠಾನವು ಉಪಾನ, ಪದ್ಮ, ಕುಮುದಗಳಿಂದ ಕೂಡಿದ್ದು, ಭಿತ್ತಿಯಲ್ಲಿ ಯಾವ ಶಿಲ್ಪಗಳಿರದೇ ಸರಳವಾಗಿದೆ. ಗರ್ಭಗುಡಿಯ ಮೇಲೆ ಕದಂಬನಾಗರ ಶೈಲಿಯ ಶಿಖರವಿದ್ದು, ಶಿಖರದ ಮುಂದಿನ ಭಾಗದಲ್ಲಿ ಸುಕನಾಸಿ ಇದೆ. (ಅಂತರಾಳದ ಮೇಲ್ಭಾಗದಲ್ಲಿ) ಶಿಖರವು ಶಿಲೆಯ ಕಲಶ ಹಾಗೂ ಸ್ತೂಪಿಯನ್ನೊಳಗೊಂಡಿದೆ.

ಚೌಕಾಕಾರದ ಗರ್ಭಗುಡಿಯಲ್ಲಿ ಲಿಂಗವಿದ್ದು, ಈ ಗುಡಿಯ ದ್ವಾರ ಮತ್ತು ಲಲಾಟವು ಸಾಧಾರಣವಾಗಿದೆ. ಅಂತರಾಳವು ಆಯಾತಾಕಾರವಾಗಿದ್ದು, ಇದರ ಭುವನೇಶ್ವರಿಯಲ್ಲಿ ಪದ್ಮವಿದೆ. ಇದರ ದ್ವಾರದಲ್ಲಿ ಮೂರು ಶಾಖೆಗಳಿವೆ. ಆದರೂ ಅವುಗಳನ್ನು ಅಲಂಕರಿಸಿಲ್ಲ.

ನವರಂಗದ ಪಶ್ಚಿಮ ಭಾಗದಲ್ಲಿ (ಅಂತರಾಳ ದ್ವಾರದ ಎಡಬಲಕ್ಕೆ) ಎರಡು ಕೋಷ್ಠ ಗುಡಿಗಳಿದ್ದು, ಅವುಗಳಲ್ಲಿ ಕುದುರೆ, ಕುದುರೆಯನ್ನೇರಿದ ಸ್ತ್ರೀ–ಪುರುಷರು ಹಾಗೂ ಕೇಶವನ ಮೂರ್ತಿಗಳಿವೆ. ಈ ನವರಂಗಕ್ಕೆ ಪೂರ್ವ, ಉತ್ತರ ಮತ್ತು ದಕ್ಷಿಣದಲ್ಲಿ ಪ್ರವೇಶದ್ವಾರಗಳಿವೆ.

ಇಲ್ಲಿನ ನವರಂಗವು ಹನ್ನೆರಡು ಅಂಕಣಗಳಿಂದ ಕೂಡಿದ್ದು, ಬಳಪದಶಿಲೆಯ ಆರು ಕಂಬಗಳಿವೆ. ಈ ಆರು ಕಂಬಗಳಲ್ಲಿ ಎರಡು ಚೌಕಾಕಾರದ ಕಂಬಗಳು ಗಂಟೆ ಮತ್ತು ಕುಂಭಾಕೃತಿಯನ್ನು ಪಡೆದುಕೊಂಡಿವೆ. ಉಳಿದ ನಾಲ್ಕು ಕಂಬಗಳು ಗಾತ್ರದಲ್ಲಿ ದೊಡ್ಡ ಕಂಬಗಳಾಗಿದ್ದು, ನೋಡಲು ಸುಂದರವಾಗಿವೆ. ದ್ರಾವಿಡ ಶೈಲಿಯಲ್ಲಿರುವ ಈ ಕಂಬಗಳ ಕೆಳಭಾಗ ಚೌಕಾಕಾರವಾಗಿ ಹಾಗೂ ಅದರ ಮೇಲಿನ ಭಾಗದಲ್ಲಿ ಮೂವತ್ತೆರಡು ಕೋನಗಳಿವೆ. ಈ ನಾಲ್ಕು ಕಂಬಗಳ ಚೌಕಾಕಾರದ ಭಾಗದಲ್ಲಿ ಗಣೇಶ, ಕಾರ್ತಿಕೇಯ, ಗಿಳಿಗಳು, ಧ್ಯಾನಮಗ್ನರಾಗಿ, ನರ್ತನಗೈಯುತ್ತಿರುವ ಸ್ತ್ರೀಯರು ಮುಂದಿನ ಕಾಲೆತ್ತಿಕುಣಿಯುತ್ತಿರುವಂತೆ ಇರುವ ಅಲಂಕೃತವಾಗಿರುವ ನಂದಿ, ಕೋಲಾಟದಲ್ಲಿ ಸ್ತ್ರೀಯರು, ವೀರಭದ್ರ, ಮಹೇಶ್ವರಿ, ಧನುಸ್ಸನ್ನು ಎತ್ತಿಹಿಡಿದ ರಾಮ, ನರ್ತನಗೈಯುತ್ತಿರುವ ಹಲವು ಸ್ತ್ರೀಯರ ಶಿಲ್ಪಗಳಿದ್ದು, ಅವು ನೋಡಲು ಸುಂದರವಾಗಿವೆ. ಈ ನಾಲ್ಕು ಕಂಬಗಳ ಮಧ್ಯೆ ನಂದಿ ಇದ್ದು, ಇಲ್ಲಿನ ಭುವನೇಶ್ವರಿಯಲ್ಲಿ ಅರಳಿದ ತಾವರೆ ಇದೆ. ಹಾಗೂ ಈ ದೇವಾಲಯದ ನವರಂಗದ ಸುತ್ತಲು ಕಕ್ಷಾಸನಗಳಿವೆ. ನವರಂಗದ ಪೂರ್ವದ್ವಾರವು ಅಲಂಕರಿಸದಿರುವ ವಿವಿಧ ಶಾಖೆಗಳಿಂದ ಕೂಡಿದೆ. ಇಲ್ಲಿ ಲಲಾಟಬಿಂಬವಿಲ್ಲ, ಬದಲಾಗಿ ಉತ್ತರಾಂಗಭಾಗದ ಮಧ್ಯದಲ್ಲಿ ಗಜಲಕ್ಷ್ಮೀ ಶಿಲ್ಪವನ್ನು ಆ ಶಿಲ್ಪದ ಎರಡು ಬದಿಗೆ ಶಿಖರದ ಮಾದರಿಗಳನ್ನು ಕೆತ್ತಿರುವುದು ವಿಶೇಷ.

ಈ ದ್ವಾರದ ಮುಂಭಾಗದ ಎಡ, ಬಲ ಬದಿಗೆ ಕಕ್ಷಾಸನವಿರುವ ಮುಖಮಂಟಪವಿದೆ. ಈ ಮಂಟಪದಲ್ಲಿನ ಎರಡು ಕಂಬಗಳ ಘಟ ಮತ್ತು ಫಲಕ ಭಾಗಗಳನ್ನು ಪುಷ್ಪದಳಗಳಿಂದ ಅಲಂಕರಿಸಲಾಗಿದೆ. ಹಾಗೂ ಇಲ್ಲಿನ ಬೋದಿಗೆಗಳು ಪುಷ್ಪದಳಗಳಿಂದ ಕೂಡಿದ್ದು, ಪುಷ್ಪಬೋದಿಗೆಗಳೆನಿಸಿವೆ. ಕಕ್ಷಾಸನದ ಎರಡು ಕಡೆಯ ಹೊರಭಾಗದ ಭಿತ್ತಿಯಲ್ಲಿ ಮಿಥುನ ಶಿಲ್ಪಗಳು, ಸಿಂಹ, ಆನೆ, ಯಾಳಿ, ಹಂಸ, ಶಿಲ್ಪಗಳನ್ನು ಕೆತ್ತಲಾಗಿದೆ.

ಉತ್ತರದ ಪ್ರವೇಶದ್ವಾರದಲ್ಲಿ ಸ್ತಂಭಶಾಖೆ ಮಾತ್ರ ಅಲಂಕೃತವಾಗಿದ್ದು, ಉತ್ತರಾಂಗ ಭಾಗದಲ್ಲಿ ಶಿವ ನಾಟ್ಯ ಮಾಡುತ್ತಿರುವಂತೆ ಹಾಗೂ ಆತನ ಬದಿಯಲ್ಲಿ ಭಕ್ತರು ಅಂಜಲಿಬದ್ಧವಾಗಿರುವ ಶಿಲ್ಪಗಳನ್ನು ಕೆತ್ತಲಾಗಿದೆ. ದಕ್ಷಿಣದ್ವಾರವು ಇದೇ ರೀತಿಯ ಅಲಂಕಾರವನ್ನು ಪಡೆದುಕೊಂಡಿದ್ದರೂ ಅಲ್ಲಿ ನಾಟ್ಯಶಿವ ಮತ್ತು ಆತನ ಭಕ್ತರಿರುವ ಶಿಲ್ಪಗಳಿಲ್ಲ.

ಪೂರ್ವಪ್ರವೇಶ ದ್ವಾರದ ಮುಂದೆ ಒಂದು ಬೃಹತ್ ಗ್ರಾನೈಟ್ ಶಿಲೆಯ ದೀಪಸ್ತಂಭವಿದೆ. ಅದರಲ್ಲಿ ಭಕ್ತನೋರ್ವನ ಶಿಲ್ಪವಿದೆ. ಅದರ ಬಳಿಯೇ ಚಿಕ್ಕ ಎದುರು ಮಂಟಪವೊಂದಿದ್ದು, ದೇವಾಲಯದ ಸುತ್ತಲೂ ಪ್ರಾಕಾರಗೋಡೆ ಇದೆ. ಪ್ರವೇಶದ್ವಾರವು (ಮಹಾದ್ವಾರವು) ದಕ್ಷಿಣ ದಿಕ್ಕಿಗಿದೆ. ಈ ದೇವಾಲಯ ಹೊಯ್ಸಳ ಕಾಲದ ವಾಸ್ತು ಲಕ್ಷಣಗಳ ಆಧಾರದ ಮೇಲೆ ಕೆಳದಿ ಅರಸರ ಕಾಲದ ವಾಸ್ತು ರಚನಾ ವಿಧಾನವನ್ನು ಹೊಂದಿದೆ ಎಂದು ಹಲವಾರು ವಿದ್ವಾಂಸರು ಹೇಳಿದ್ದಾರೆ. ಆದರೆ ಇಲ್ಲಿನ ನವರಂಗದ ಮಧ್ಯದಲ್ಲಿ ನಾಲ್ಕು ದ್ರಾವಿಡ ಶೈಲಿಯ ಕಂಬಗಳು ಹಾಗೂ ದೀಪಸ್ತಂಭ, ಪ್ರಾಕಾರ ಗೋಡೆಗಳಿಗೆ ಗ್ರಾನೈಟ್ ಶಿಲೆಯ ಬಳಕೆ ಇದೆ. ಇವುಗಳು ವಿಜಯನಗರ ವಾಸ್ತು ಲಕ್ಷಣಗಳನ್ನು ನೆನಪಿಗೆ ತರುತ್ತವೆ. ಹಾಗೆಯೇ ಇಲ್ಲಿನ

ಮುಖ್ಯದ್ವಾರದ ಬಳಿ ಕ್ರಿ.ಶ. 1546ರ ಶಾಸನವೊಂದರ ಪ್ರಕಾರ ಈ ದೇವಾಲಯಕ್ಕೆ ದತ್ತಿಬಿಟ್ಟ ಉಲ್ಲೇಖ ದೊರಕುತ್ತದೆ. ಇವುಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಈ ದೇವಾಲಯ ವಿಜಯನಗರ ಕಾಲದ ಅಂತ್ಯಭಾಗದಲ್ಲಿ ರಚಿತವಾಗಿರಬೇಕೆನಿಸುತ್ತದೆ.[10]

7. ಪಾರ್ವತಿ ದೇವಾಲಯ

ಊರು	:	ಸೂಳೆಕೆರೆ (ಶಾಂತಿಸಾಗರ)	ಅಭಿಮುಖ	:	ಪೂರ್ವಾಭಿಮುಖ
ಸ್ಮಾರಕ	:	ಪಾರ್ವತಿ	ಕಾಲ	:	ಕ್ರಿ.ಶ. ಸುಮಾರು 14–15ನೇ ಶತಮಾನ
ಸ್ಥಳ	:	ಸಿದ್ಧೇಶ್ವರ ದೇವಾಲಯದ ಹಿಂಭಾಗಕ್ಕೆ	ಸ್ಥಿತಿ	:	ಉತ್ತಮ
			ಸಂರಕ್ಷಣೆ	:	ಗ್ರಾಮಸ್ಥರಿಂದ
ಶೈಲಿ	:	ವಿಜಯನಗರ			

ಸ್ಥಳೀಯರಿಂದ ಶಾಂತವ್ವನೆಂದು ಕರೆಯಲ್ಪಡುವ ಈ ದೇವಾಲಯವು ಗರ್ಭಗುಡಿ ಹಾಗೂ ಮುಖಮಂಟಪವನ್ನು ಹೊಂದಿದೆ. ದೇವಾಲಯದ ಅಧಿಷ್ಠಾನವು ಉಪಾನ, ಪದ್ಮ, ಕುಮುದಗಳಿಂದ ಕೂಡಿದೆ. ಕುಮುದವು ವೃತ್ತಾಕಾರವಾಗಿದ್ದು, ಬಳೆಯಾಕಾರದ ಅಲಂಕಾರ ಪಡೆದುಕೊಂಡಿದೆ. ಭಿತ್ತಿಯು ಸಾಧಾರಣವಾಗಿದೆ. ಭಿತ್ತಿಯ ಮೇಲಿನ ಕಪೋತವು ಸುತ್ತಲೂ ಮುಂದೆ ಚಾಚಿ ಕೆಳಕ್ಕೆ ಬಾಗಿದ್ದು ಸರಳವಾಗಿದೆ.

ಗರ್ಭಗುಡಿಯು ಚಚ್ಚೌಕಾಕಾರವಾಗಿದ್ದು, ಅದರಲ್ಲಿ ಪಾರ್ವತಿಯ ಕಾಷ್ಠಮೂರ್ತಿಯಿದೆ. ಇದರ ಭುವನೇಶ್ವರಿಯಲ್ಲಿ ಪದ್ಮವಿದೆ. ಈ ಗರ್ಭಗುಡಿಯ ದ್ವಾರವು ಸರಳವಾಗಿದೆ. ಮುಖಮಂಟಪದಲ್ಲಿ ಎರಡು ಕಂಬಗಳಿದ್ದು, ಅವು ಚೌಕ ಹಾಗೂ ಚತುರಸ್ರವಾಗಿದೆ. ಚೌಕಾಕಾರದ ಭಾಗದಲ್ಲಿ ಹಸು, ಆನೆ, ಹಂಸ, ಗಣೇಶ, ನಂದಿ ಮೊದಲಾದ ಶಿಲ್ಪಗಳನ್ನು ಆಕರ್ಷಣೀಯವಾಗಿ ಕೆತ್ತಲಾಗಿದೆ. ಇಲ್ಲಿನ ಬೋದಿಗೆಗಳ ನಾಲ್ಕು ದಿಕ್ಕಿನಲ್ಲೂ ಪದ್ಮದ ಮೊಗ್ಗು ಇಳಿಬಿದ್ದ ರೀತಿಯಲ್ಲಿದೆ. ಇದರ ಮುಚ್ಚಿಗೆಯಲ್ಲಿ ಪದ್ಮಗಳನ್ನು ಕೆತ್ತಲಾಗಿದೆ. ಈ ದೇವಾಲಯ ವಿಜಯನಗರ ಶೈಲಿಯಲ್ಲಿದೆಯೆಂದು ದೇವಾಲಯದ ವಾಸ್ತುಲಕ್ಷಣಗಳಿಂದ ಹೇಳಬಹುದು.

8. ಶ್ರೀರಂಗನಾಥ ದೇವಾಲಯ

ಊರು	:	ದೇವರಹಳ್ಳಿ	ಅಭಿಮುಖ	:	ಪೂರ್ವಾಭಿಮುಖ
ಸ್ಮಾರಕ	:	ರಂಗನಾಥ	ಕಾಲ	:	ಕ್ರಿ.ಶ. ಸುಮಾರು 14–15ನೇ ಶತಮಾನ
ಸ್ಥಳ	:	ಗ್ರಾಮದ ಬಳಿಯ ದಕ್ಷಿಣ ದಿಕ್ಕಿನ ಬೆಟ್ಟದ ಮೇಲೆ	ಸ್ಥಿತಿ	:	ಉತ್ತಮ
			ಸಂರಕ್ಷಣೆ	:	ಗ್ರಾಮಸ್ಥರಿಂದ
ಶೈಲಿ	:	ವಿಜಯನಗರ			

ಈ ದೇವಾಲಯವು ಗರ್ಭಗುಡಿ, ಅಂತರಾಳ, ನವರಂಗ ಹಾಗೂ ತೆರೆದ ಮಂಟಪಗಳನ್ನೊಳಗೊಂಡಿದೆ. ಈ ದೇವಾಲಯದ ಹೊರಭಾಗದ ಅಧಿಷ್ಠಾನವು ಸರಳವಾಗಿದೆ. ಅಲಂಕಾರರಹಿತವಾಗಿದ್ದು, ಅಧಿಷ್ಠಾನದ ಮೇಲಿನ ಭಿತ್ತಿಯಲ್ಲಿ ಕಪೋತ ಭಾಗವು ಸ್ವಲ್ಪ ಮುಂದೆಚಾಚಿದೆ. ದೇವಾಲಯಕ್ಕೆ ಶಿಖರವನ್ನು ಈಗ ಹೊಸದಾಗಿ ನಿರ್ಮಿಸಿದ್ದಾರೆ. ಮುಖಮಂಟಪದ ಎದುರಿನಲ್ಲಿ ಗರುಡನ ಚಿಕ್ಕಗುಡಿ ಹಾಗೂ ದೀಪಸ್ತಂಭಗಳಿವೆ.

ಒಳಭಾಗದ ಗರ್ಭಗುಡಿಯು ಚೌಕಾಕಾರವಾಗಿದ್ದು, ಇದರಲ್ಲಿ ಲೋಹದಿಂದ ಮಾಡಿದ ಕೇಶವನ ಮೂರ್ತಿಯಿದೆ. ಇದರ ಭುವನೇಶ್ವರಿಯಲ್ಲಿ ಪದ್ಮವಿದ್ದು, ದ್ವಾರವು ಸರಳವಾಗಿದೆ. ಇದರ ಮುಂದಿನ ಅಂತರಾಳವು ಆಯಾತಕಾರವಾಗಿದ್ದು,

ಅದರಲ್ಲಿ ಉತ್ಸವ ಮೂರ್ತಿಯಿದೆ. ಇದರ ದ್ವಾರವು ಸರಳವಾಗಿದ್ದು, ಗರುಡನ ಶಿಲ್ಪವನ್ನು ಲಲಾಟದ ಚೌಕಾಕಾರದ ಪಟ್ಟಿಕೆಯಲ್ಲಿ ಕೆತ್ತಲಾಗಿದೆ. ನವರಂಗದಲ್ಲಿ ನಾಲ್ಕು ಗ್ರಾನೈಟ್ ಶಿಲೆಯ ಕಂಬಗಳಿವೆ. ಈ ಕಂಬಗಳು ಚೌಕ ಹಾಗೂ ಚತುರಸ್ರವಾಗಿದ್ದು, ಸರಳವಾಗಿದೆ. ಈ ನವರಂಗದ ಮುಂದೆ ತೆರೆದ ಮುಖಮಂಟಪವಿದ್ದು, ಅದರಲ್ಲಿ ಹತ್ತುಚೌಕು, ಆಂಜನೇಯ ಮತ್ತು ಕೆಲವು ಭಕ್ತರ ಶಿಲ್ಪಗಳಿವೆ. ಈ ಕಂಬಗಳ ಮೇಲಿನ ಬೋದಿಗೆಯು ಪುಷ್ಪಗಳ ಅಲಂಕರಣಗಳಿಂದ ಕೂಡಿದ್ದು, ಅವುಗಳ ನಾಲ್ಕು ದಿಕ್ಕಿನಲ್ಲಿ ಕಮಲದ ಮೊಗ್ಗು ಇಳಿಬಿದ್ದ ರೀತಿಯಲ್ಲಿದೆ. ವಿಜಯನಗರ ಶೈಲಿಯಲ್ಲಿರುವ ಈ ದೇವಾಲಯಕ್ಕೆ ವಿಜಯನಗರದ ಕೊನೆಯ ಅರಸರು ದಾನನೀಡಿದ ಬಗ್ಗೆ ಶಾಸನದಲ್ಲಿ ಉಲ್ಲೇಖಿಸಲಾಗಿದೆ.

9. ಕೋಟೆರಂಗನಾಥಸ್ವಾಮಿ ದೇವಾಲಯ

ಊರು	: ಚನ್ನಗಿರಿ ಟೌನ್	ಅಭಿಮುಖ	: ಪೂರ್ವಾಭಿಮುಖ
ಸ್ಮಾರಕ	: ಕೋಟೆ ರಂಗನಾಥ	ಕಾಲ	: ಕ್ರಿ.ಶ. ಸುಮಾರು 14–15ನೇ ಶತಮಾನ
ಸ್ಥಳ	: ಚನ್ನಗಿರಿಟೌನಿನ ಕೋಟೆಯ ಮೇಲೆ	ಸ್ಥಿತಿ	: ಉತ್ತಮ
ಶೈಲಿ	: ವಿಜಯನಗರ	ಸಂರಕ್ಷಣೆ	: ಗ್ರಾಮಸ್ಥರಿಂದ

ಈ ದೇವಾಲಯವು ಏಕಕೂಟಾಚಲದ ನಿರಂದರ ಮಾದರಿಯ ದೇವಾಲಯವಾಗಿದೆ. ಈ ದೇವಾಲಯದ ಮುಖ್ಯದ್ವಾರ ಪೂರ್ವಾಭಿಮುಖವಾಗಿದೆ. ನಂತರ ಮತ್ತೊಂದು ದ್ವಾರವು ನವರಂಗದ ಉತ್ತರದ ಗೋಡೆಯಲ್ಲಿದೆ. ಈ ದೇವಾಲಯದ ಅಧಿಷ್ಠಾನವು ಯಾವುದೇ ಅಲಂಕಾರ ಇರದೆ ಸಾಧಾರಣವಾಗಿದೆ. ಹಾಗೂ ದೇವಾಲಯದ ಶಿಖರವನ್ನು ಈಗ ಹೊಸದಾಗಿ ನಿರ್ಮಿಸಿದ್ದಾರೆ.

ಈ ದೇವಾಲಯದ ನವರಂಗದ ಪ್ರವೇಶ ದ್ವಾರವು ತ್ರಿಶಾಖೆಯನ್ನು ಒಳಗೊಂಡು ಬಾಗಿಲು ಆರು ಅಡಿ ಎತ್ತರವಾಗಿದೆ. ಬಾಗಿಲುವಾಡದ ಎರಡು ಭಾಗದಲ್ಲಿ ಜಯವಿಜಯ ದ್ವಾರಪಾಲಕರನ್ನು ಒಳಗೊಂಡಿದೆ. ಬಾಗಿಲ ಶಾಖೆಯು ಅಲಂಕಾರ ರಹಿತವಾಗಿದೆ. ಬಾಗಿಲ ಅಡ್ಡಪಟ್ಟಿಕೆಯಲ್ಲಿ ಗೊಂಡೆಯಾಕಾರವಾಗಿ ಕೆಳಗಡೆ ಇಳಿಬಿದ್ದಿರುವ ರೀತಿಯ ಹೂವಿನ ಅಲಂಕಾರ ಮಾಡಲಾಗಿದೆ. ಹಾಗೂ ಬಾಗಿಲುವಾಡದ ಲಲಾಟಬಿಂಬದಲ್ಲಿ ಗಣೇಶಮೂರ್ತಿಯನ್ನು ಕೆತ್ತಲಾಗಿದೆ. ಗಣೇಶಮೂರ್ತಿಯು ನಾಲ್ಕು ಕೈ ಒಳಗೊಂಡಿದೆ. ಹಿಂಭಾಗದ ಬಲಗೈಯಲ್ಲಿ ಗದೆಯನ್ನು ಎಡಗೈಯಲ್ಲಿ ಶಂಖವನ್ನು ಕೆತ್ತಲಾಗಿದೆ. ಗಣೇಶ ಮೂರ್ತಿಯು ಕುಳಿತ ಭಂಗಿಯಲ್ಲಿದೆ.

ಈ ದೇವಾಲಯದ ಕಂಬಗಳು ಕೆಳಭಾಗ ಚಚ್ಚೌಕಾಕಾರವಾಗಿದ್ದು, ಕಂಬಗಳು ಪೀಠದಿಂದ ಸ್ವತಂತ್ರವಾಗಿ ರಚನೆಯಾಗಿ ವೃತ್ತಾಕಾರವಾಗಿದೆ. ಕಂಬದ ಮೇಲ್ಭಾಗ ಅಷ್ಟಭುಜಾಕೃತಿಯದ್ದಾಗಿದೆ. ಮೇಲೆ ಹೋದಂತೆ ಅಂದರೆ ಕಂಬದ ನಾಲ್ಕು ಮುಖದ ಕಡೆ ಚಿಕ್ಕದಾದ ಪದ್ಮವನ್ನು ಕೆತ್ತಲಾಗಿದೆ. ಇದು ಸಹ ವಿಜಯನಗರ ಕಾಲದ ಶೈಲಿಯಾಗಿದೆ. ಈ ದೇವಾಲಯದ ಭುವನೇಶ್ವರಿಯು ಚಚ್ಚೌಕಾಕಾರಕವಾಗಿದ್ದು, ಅದರಲ್ಲಿ ಎರಡು ಸುತ್ತಿನ ಕಮಲದ ದಳವನ್ನು ಹೊಂದಿದೆ. ಒಂದು ಸುತ್ತಿನಲ್ಲಿ 29 ದಳ ಮತ್ತೊಂದು ಸುತ್ತಿನಲ್ಲಿ 37 ದಳವನ್ನು ಹೊಂದಿದೆ. ಈ ದೇವಾಲಯಕ್ಕೆ ಅಂತರಾಳವಿಲ್ಲ, ಹಾಗೂ ಚಚ್ಚೌಕಾಕಾರದ ಗರ್ಭಗೃಹದ ಮಧ್ಯದಲ್ಲಿ ರಂಗನಾಥಸ್ವಾಮಿಯ ವಿಗ್ರಹವಿದೆ. ಈ ದೇವಾಲಯದ ಮುಂಭಾಗದಲ್ಲಿ ಗರುಡಗಂಬ ಕಂಡುಬಂದಿದೆ. ಇದು ಸುಮಾರು ಎಂಟು ಅಡಿ ಎತ್ತರ ಹೊಂದಿದ್ದು, ಇದು ತಳಭಾಗದಲ್ಲಿ ನಾಲ್ಕು ಮೂಲೆ ಹೊಂದಿದೆ. ಚಚ್ಚೌಕಾಕಾರದ ಒಂದು ಪೀಠದ ಮೇಲೆ ಇದೆ. ಪೀಠದ ಸುತ್ತಲೂ ನಾಲ್ಕು ಭಾಗದಲ್ಲೂ ಕೈಮುಗಿದು ನಿಂತಿರುವ ಅಂಜಲಿಮುದ್ರೆಯು ಕಂಡುಬಂದಿದೆ. ಇದರ ಒಂದು ತಳಭಾಗವು ಈಗ ನಶಿಸುವ ಹಂತಕ್ಕೆ ತಲುಪಿರುವುದು ಕಂಡುಬಂದಿದೆ.

10. ರಂಗನಾಥಸ್ವಾಮಿ ದೇವಾಲಯ

ಊರು	: ದಾಗಿನಕಟ್ಟೆ	ಅಭಿಮುಖ	: ಪೂರ್ವಾಭಿಮುಖ
ಸ್ಮಾರಕ	: ರಂಗನಾಥ	ಕಾಲ	: ಕ್ರಿ.ಶ. ಸುಮಾರು 15–16ನೇ ಶತಮಾನ
ಸ್ಥಳ	: ಗ್ರಾಮದಲ್ಲಿ	ಸ್ಥಿತಿ	: ಉತ್ತಮ
ಶೈಲಿ	: ವಿಜಯನಗರ	ಸಂರಕ್ಷಣೆ	: ಗ್ರಾಮಸ್ಥರಿಂದ

ಈ ದೇವಾಲಯವು ಏಕಕೂಟಾಚಲದ ನಿರಂದರ ಮಾದರಿಯ ದೇವಾಲಯವಾಗಿದೆ. ಈ ದೇವಾಲಯದ ಮುಖ್ಯದ್ವಾರ ಪೂರ್ವಾಭಿಮುಖವಾಗಿದೆ. ಈ ದೇವಾಲಯವನ್ನು ಪ್ರವೇಶಿಸುತ್ತಿದ್ದಂತೆ ಪ್ರವೇಶ ಮಂಟಪ, ನವರಂಗ, ಅಂತರಾಳ, ಗರ್ಭಗೃಹವನ್ನು ಹೊಂದಿದೆ. ಪ್ರವೇಶಮಂಟಪವು ಎತ್ತರವಾದ ಜಗತಿಯ ಮೇಲೆ ಕಂಬಗಳ ಪಡಸಾಲೆ (ಮಂಟಪವನ್ನು) ಹೊಂದಿದೆ. ಒಟ್ಟು 30 ಕಂಬಗಳುಳ್ಳ ಮಂಟಪ ಇದಾಗಿದೆ. ಈ ಕಂಬಗಳು ಸರಳವಾಗಿವೆ. ಈ ದೇವಾಲಯದ ಅಧಿಷ್ಠಾನ ಭಾಗವು ಸಾಧಾರಣವಾಗಿದ್ದು, ಗರ್ಭಗೃಹ ಭಿತ್ತಿಯು ಸರಳವಾಗಿದ್ದು, ಅಂತರಾಳದ ಭಿತ್ತಿಯಲ್ಲಿ ಅರ್ಧಗಂಬಗಳಿವೆ. ಅದರ ಮೇಲೆ ಚಜ್ಜಾವನ್ನು ನೋಡಬಹುದು. ಹಾಗೂ ಈ ದೇವಾಲಯದ ಶಿಖರವು ಇತ್ತೀಚೆಗೆ ನವೀನ ಮಾದರಿಯಲ್ಲಿ ನಿರ್ಮಿಸಿದ್ದಾರೆ.

ದೇವಾಲಯದ ನವರಂಗದಲ್ಲಿರುವ ಕಂಬಗಳು ಸರಳಮಿಶ್ರಿತ ಕಂಬಗಳಾಗಿವೆ. ಕಂಬದ ಪೀಠಭಾಗವು ಚೌಕಾಕಾರವಾಗಿದ್ದು, ನಾಲ್ಕು ಮೂಲೆಯಲ್ಲೂ ನಾಗಬಂಧವನ್ನು ಕಾಣಬಹುದು. ಕಾಂಡಭಾಗದಲ್ಲಿ ಅಷ್ಟಕೋನಾಕಾರದ ಚೌಕಗಳಿದ್ದು, ಅದರ ಮೇಲೆ ಮತ್ತೆ ಚೌಕಾಕಾರವಾಗಿದ್ದು ಈ ಚೌಕಾಕಾರದ ನಾಲ್ಕು ಭಾಗದಲ್ಲಿ ನರಸಿಂಹ, ಗರುಡ, ಆನೆ, ಗಿಳಿ, ನವಿಲು, ವರಾಹ ಹಾಗೂ ಮಿಥುನ ಶಿಲ್ಪಗಳನ್ನು ಕಾಣಬಹುದು. ನಂತರ ಮತ್ತೆ ಅಷ್ಟಕೋನಾಕಾರದ ಚೌಕಗಳು ಅದರ ಮೇಲೆ ವೃತ್ತಾಕಾರದ ಕುಂಬ, ಫಲಕ, ಬೋದಿಗೆಯನ್ನು ಹೊಂದಿದೆ. ಹೀಗೆ ರುದ್ರಕಾಂಡ ಕಂಬಗಳ ಮಾದರಿಯಲ್ಲಿ ಸರಳ ಕಂಬಗಳಾಗಿವೆ. ನವರಂಗದ ಮಧ್ಯೆ ಇರುವ ಭುವನೇಶ್ವರಿಯು ನಕ್ಷತ್ರಾಕಾರವಾಗಿದೆ ಹಾಗೂ ಬಾಗಿಲುವಾಡವು ತ್ರಿಶಾಖೆಗಳನ್ನು ಹೊಂದಿದೆ. ಲಲಾಟಬಿಂಬದಲ್ಲಿ ಗರುಡ ಮೂರ್ತಿಯನ್ನು ಕಾಣಬಹುದು. ಹಾಗೂ ಬಾಗಿಲಿನ ಕೆಳಭಾಗದಲ್ಲಿ ಜಯವಿಜಯ ದ್ವಾರಪಾಲಕರನ್ನು ಕಾಣಬಹುದಾಗಿದೆ.

ದೇವಾಲಯದ ಗರ್ಭಗೃಹವು ಚಚ್ಚೌಕಾರವಾಗಿದ್ದು ಮಧ್ಯದಲ್ಲಿ ರಂಗನಾಥನ ವಿಗ್ರಹವಿದೆ ಹಾಗೂ ಈ ದೇವಾಲಯದ ಪ್ರಾಂಗಣದಲ್ಲಿ ಆಂಜನೇಯ ದೇವಾಲಯ ಮತ್ತು ಮಾಸ್ತಮ್ಮ ದೇವಾಲಯವನ್ನು ಕಾಣಬಹುದಾಗಿದೆ. ಈ ದೇವಾಲಯವು ವಿಜಯನಗರ ಅರಸರ ಅಧೀನರಾದ ಬಸವಾಪಟ್ಟಣದ ನಾಯಕರು ಕಟ್ಟಿಸಿದ ದೇವಾಲಯ ಎಂದು ಹೇಳಬಹುದು.

ಹೀಗೆ ಚನ್ನಗಿರಿ ತಾಲೂಕಿನ ವಿಜಯನಗರ ಕಾಲದ ದೇವಾಲಯಗಳ ವಾಸ್ತುಶಿಲ್ಪವನ್ನು ನೋಡಬಹುದಾಗಿದೆ. ಈ ಕಿರುಲೇಖನದಲ್ಲಿ ಸುಮಾರು ಹತ್ತು ದೇವಾಲಯಗಳ ವಾಸ್ತುಶಿಲ್ಪವನ್ನು ಕುರಿತು ವಿವರಿಸಲಾಗಿದೆ. ಈ ಹತ್ತು ದೇವಾಲಯಗಳ ವಾಸ್ತುಶೈಲಿಯನ್ನು ಹಾಗೂ ಶಾಸನಗಳ ಹಿನ್ನಲೆಯನ್ನು ಆಧರಿಸಿ ವಿಜಯನಗರ ಕಾಲದ ದೇವಾಲಯಗಳೆಂದು ಗುರುತಿಸಬಹುದಾಗಿದೆ. ವಿಜಯನಗರದ ಅರಸರ ಅಧೀನದಲ್ಲಿದ್ದ ಬಸವಾಪಟ್ಟಣದ ನಾಯಕರು, ಸಂತೇಬೆನ್ನೂರು ನಾಯಕರು, ಕೆಳದಿ ಅರಸರು ಹಾಗೂ ದುಮ್ಮಿಯ ಪಾಳೆಯಗಾರರು ಈ ತಾಲೂಕಿನಲ್ಲಿ ಆಳ್ವಿಕೆಯನ್ನು ಮಾಡಿದ್ದಾರೆ ಹಾಗೂ ಇವರ ಕಾಲದಲ್ಲಿ ದೇವಾಲಯಗಳ ಜೀರ್ಣೋದ್ಧಾರ ಕಾರ್ಯವು ನಡೆದಿದೆ. ಎರಡನೇ ಹರಿಹರನ ಕಾಲದಲ್ಲಿ ನೀತಿಗೆರೆಯ ವೀರಭದ್ರ ದೇವಾಲಯವನ್ನು ಹಿರೇಪೆಮ್ಮನಾಯಕ, ಕಲ್ಲೇಗೌಡ, ಮಲ್ಲೇಗೌಡ, ದೇವರ ಬೊಮ್ಮೇಗೌಡರು


ದೇವಾಲಯಕ್ಕೆ ದಾನವನ್ನು ನೀಡಿದರ ಬಗ್ಗೆ ನೀತಿಗೆರೆ ಗ್ರಾಮದ ವೀರಭದ್ರ ದೇವಾಲಯದ ಒಳಭಾಗದಲ್ಲಿರುವ ಶಾಸನವು ತಿಳಿಸುತ್ತದೆ.[11] ಕಲ್ಕರೆ ಗ್ರಾಮದಲ್ಲಿನ ಶಾಸನವು ಆಂಜನೇಯ ದೇವಾಲಯವನ್ನು ವಿಜಯನಗರ ಸಾಮ್ರಾಜ್ಯದ ಬುಕ್ಕರಾಯನು ಕಟ್ಟಿಸಿ ಈ ದೇವಾಲಯಕ್ಕೆ ದಾನ-ದತ್ತಿಯನ್ನು ನೀಡಿದರ ಬಗ್ಗೆ ಉಲ್ಲೇಖಿಸಿದೆ.[12]

ಅಡಿ ಟಿಪ್ಪಣಿಗಳು


1. ಗಿರಿಜ ಟಿ, 2001, *ದಾವಣಗೆರೆ ಇದು ನಮ್ಮ ಜಿಲ್ಲೆ,* ಪು. 462
2. 2008-09, *ದಾವಣಗೆರೆ ಜಿಲ್ಲಾ ಅಂಕಿ ಅಂಶಗಳ ನೋಟ,* ಪು. 24
3. ಸಂತೇಬೆನ್ನೂರು ಸುಮತೀಂದ್ರನಾಡಿಗ್, *ದಾವಣಗೆರೆ ಜಿಲ್ಲೆ: ಇತಿಹಾಸದ ಕೆಲವು ಹೆಜ್ಜೆಗಳು,* ಪು. 1.
4. ದೇಸಾಯಿ ಪಿ.ಬಿ., *ಹಿಸ್ಟರಿ ಆಫ್ ಕರ್ನಾಟಕ,* ಪು. 75.
5. ಸೂರ್ಯನಾಥ ಕಾಮತ್ ಯು., *ಹಿಸ್ಟರಿ ಆಫ್ ಕರ್ನಾಟಕ,* ಪು. 156.
6. ಸೀವೆಲ್ ರಾಬರ್ಟ್, *ಎ ಫರಗಾಟನ್ ಎಂಪೈರ್,* ಪು. 122.
7. *ಅದೇ,* ಪು. 130.
8. *ಅದೇ,* ಪು. 122
9. ತಿಪ್ಪೇಸ್ವಾಮಿ, 2000, *ದಾವಣಗೆರೆ ಜಿಲ್ಲೆಯ ದೇವಾಲಯಗಳು,* (ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂಧ) ಕ.ವಿ.ವಿ., ಹಂಪಿ. ಪು. 130.
10. ಸುರೇಶ ಬಿ, 2009, *ಚಿತ್ರದುರ್ಗ-ದಾವಣಗೆರೆ ಜಿಲ್ಲೆಗಳ ದೇವಾಲಯಗಳು,* ಪು. 175.
11. *ಎಪಿಗ್ರಾಫಿಯ ಕರ್ನಾಟಿಕಾ,* ಸಂಪುಟ 7, ಚನ್ನಗಿರಿ-28, ಪು. 437.
12. *ಅದೇ,* ಚನ್ನಗಿರಿ-73, ಪು. 470.


ಚನ್ನಗಿರಿ ಕೋಟೆ ರಂಗನಾಥ ದೇವಾಲಯದ ಬಾಗಿಲುವಾಡ



ಚನ್ನಗಿರಿ ಟೌನಿನ ಹೆಲಿಪ್ಯಾಡ್ ಹತ್ತಿರ ಇರುವ ಹಾಳು ಈಶ್ವರ ದೇವಾಲಯ


ಸೂಳೆಕೆರೆಯ (ಶಾಂತಿ ಸಾಗರ) ಸಿದ್ಧೇಶ್ವರ ದೇವಾಲಯದ ಪಾರ್ಶ್ವನೋಟ



ಸೂಳೆಕೆರೆಯ (ಶಾಂತಿ ಸಾಗರ) ಸಿದ್ಧೇಶ್ವರ ದೇವಾಲಯದ ಬಾಗಿಲುವಾಡ



ಮಾವಿನ ಹೊಳೆಯ ಮಲ್ಲಿಕಾರ್ಜುನ ದೇವಾಲಯದ ಭುವನೇಶ್ವರಿ




ದಾಗಿನಕಟ್ಟೆಯ ರಂಗನಾಥಸ್ವಾಮಿ ದೇವಾಲಯದ ಪಾರ್ಶ್ವನೋಟ




ಮಾವಿನ ಹೊಳೆಯ ಮಲ್ಲಿಕಾರ್ಜುನ ದೇವಾಲಯದ ಪಾರ್ಶ್ವನೋಟ



ಬಸವಾಪಟ್ಟಣ ವಿರೂಪಾಕ್ಷೇಶ್ವರ ದೇವಾಲಯ



ದಾಗಿನಕಟ್ಟೆಯ ರಂಗನಾಥಸ್ವಾಮಿ ದೇವಾಲಯದ
ನವರಂಗದಲ್ಲಿರುವ ಕಂಬ



ಮಾವಿನ ಹೊಳೆಯ ಮಲ್ಲಿಕಾರ್ಜುನ ದೇವಾಲಯದ
ನವರಂಗದಲ್ಲಿರುವ ಕಂಬ

13. ಚಾಮರಾಜನಗರ ಜಿಲ್ಲೆಯ ದೇವಾಲಯಗಳು – ಒಂದು ನೋಟ

ಡಾ॥ ಸುರೇಶ ಎ.ಎನ್.

ಚಾಮರಾಜನಗರ ದಕ್ಷಿಣ ಕರ್ನಾಟಕದ ಒಂದು ಜಿಲ್ಲೆ. ಮೊದಲಿಗೆ ಮೈಸೂರು ಜಿಲ್ಲೆಯ ಭಾಗವಾಗಿದ್ದ ಚಾಮರಾಜನಗರ ಈಗ ಒಂದು ಸ್ವತಂತ್ರ ಜಿಲ್ಲೆಯಾಗಿದೆ. ಈ ಜಿಲ್ಲೆಯ ಪ್ರಮುಖ ತಾಲ್ಲೂಕುಗಳು ಚಾಮರಾಜನಗರ, ಯಳಂದೂರು, ಗುಂಡ್ಲುಪೇಟೆ ಮತ್ತು ಕೊಳ್ಳೆಗಾಲ, ಇತ್ತೀಚೆಗೆ ಹನೂರು ತಾಲ್ಲೂಕು ಈ ಜಿಲ್ಲೆಯಲ್ಲಿ ಸೃಷ್ಟಿಯಾಗಿದೆ. ಈ ಜಿಲ್ಲೆಯು ಕ್ರಿಸ್ತಪೂರ್ವದಿಂದಲೂ ಆದಿಮಾನವನ ನೆಲೆಯಾಗಿದ್ದು ಅದರ ಕುರುಹಾಗಿ ಶಿಲಾಸಮಾಧಿಗಳನ್ನು ಕಾಣಬಹುದು. ಈ ಜಿಲ್ಲೆಯ ಪ್ರದೇಶವು ಪ್ರಾಚೀನ ಗಂಗರು, ಚೋಳರು, ಹೊಯ್ಸಳರು, ವಿಜಯನಗರ ಅರಸರು, ಮೈಸೂರು ಒಡೆಯರು ಹಾಗೂ ಉಮ್ಮತ್ತೂರು ಸ್ಥಳೀಯ ನಾಯಕರ ಆಳ್ವಿಕೆಗೆ ಒಳಪಟ್ಟಿತ್ತು. ಚಾಮರಾಜನಗರವು ಜಿಲ್ಲಾ ಕೇಂದ್ರವೂ ಹಾಗೂ ತಾಲ್ಲೂಕು ಕೇಂದ್ರವೂ ಆಗಿದ್ದು, ಈ ನಗರಕ್ಕೆ 1818ರವರೆಗೂ 'ಅರಿಕುಠಾರ' ಎಂಬ ಹೆಸರಿತ್ತು. ಮೈಸೂರು ಅರಸು ಮನೆತನದ ಚಾಮರಾಜ ಒಡೆಯರು ಇಲ್ಲಿ ಜನಿಸಿದ್ದರಿಂದ ಇದಕ್ಕೆ ಚಾಮರಾಜನಗರ ಎಂದು ಹೆಸರು ಬಂದಿತು ಹಾಗೂ ಅಲ್ಲಿ ಚಾಮರಾಜೇಶ್ವರ ದೇವಾಲಯವೂ ನಿರ್ಮಾಣವಾಯಿತು. ಈ ಜಿಲ್ಲೆಯು ಧಾರ್ಮಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಭವ್ಯ ಪರಂಪರೆಯನ್ನು ಹೊಂದಿದೆ. ಶೈವ, ವೈಷ್ಣವ, ವೀರಶೈವ, ಜೈನ ಧರ್ಮಗಳು ಮತ್ತು ಸ್ಥಳೀಯ ಶಿಷ್ಟ ಸಂಸ್ಕೃತಿಯು ಪ್ರಾಚೀನ ಕಾಲದಿಂದಲೂ ಆಚರಣೆಯಲ್ಲಿದ್ದು, ಜಿಲ್ಲೆಯ ಆಳ್ವಿಕೆಗೊಳಪಟ್ಟ ಅರಸರು ಹಾಗೂ ಸ್ಥಳೀಯ ಮುಖಂಡರು ಮತ್ತು ಇತರ ಪೋಷಕರಿಂದ ರಕ್ಷಿಸಿ ಪೋಷಿಸಲ್ಪಟ್ಟಿದೆ. ಅದಕ್ಕೆ ಸಂಬಂಧಿಸಿದಂತಹ ದೇವಾಲಯಗಳು ಹಾಗೂ ಧಾರ್ಮಿಕ ನೆಲೆಗಳು ಸ್ಥಾಪಿಸಲ್ಪಟ್ಟಿವೆ.

ವಿಜಯನಗರ ಅರಸರ ಕಾಲದಲ್ಲಿ ಧರ್ಮರಕ್ಷಣೆ ಮತ್ತು ಪೋಷಣೆ ರಾಜಧರ್ಮದ ಒಂದು ಭಾಗವಾಗಿತ್ತು. ದೇವಾಲಯಗಳ ಸ್ಥಾಪನೆ ಮತ್ತು ಪೋಷಣೆಯಲ್ಲಿ ಅರಸರು ಮತ್ತು ಸ್ಥಳೀಯ ಆಡಳಿತಗಾರರು ತೊಡಗಿದ್ದು ದೇವದಾನಗಳನ್ನು ನೀಡುತ್ತಿದ್ದರು. ಇವರ ಕಾಲದ ದೇವಾಲಯಗಳು ಆಶ್ರಿತರ ಕೊಡುಗೆಗಳಿಂದ ಆರ್ಥಿಕ ಚಟುವಟಿಕೆಗಳು, ಧರ್ಮ ಮತ್ತು ಸಂಸ್ಕೃತಿಯ ಕೇಂದ್ರಗಳಾಗಿದ್ದವು. ದೇವಾಲಯದ ಕೇಂದ್ರಗಳು ತೆರಿಗೆಮುಕ್ತ ಭೂದಾನಗಳನ್ನು ಪಡೆದು ದೇವಾಲಯಗಳ ಆಡಳಿತ ಕಾರ್ಯ, ರಕ್ಷಣೆ ಮತ್ತು ಪೋಷಣೆಯಲ್ಲಿ ಅಭಿವೃದ್ಧಿ ಹೊಂದುತ್ತಿದ್ದವು.[1] ಚಾಮರಾಜನಗರ ಜಿಲ್ಲೆಯಲ್ಲಿ ಉಮ್ಮತ್ತೂರು ಪಾಳೆಯಪಟ್ಟು ವಿಜಯನಗರ ಕಾಲದಲ್ಲಿ ಮಹತ್ವಪೂರ್ಣ ಪಾಳೆಯಗಾರಿಯಾಗಿದ್ದಿತು. ಅದರ ಅರಸರು ಶ್ರೀರಂಗಪಟ್ಟಣದಲ್ಲಿ ವಿಜಯನಗರದ ಮಹಾಮಂಡಲೇಶ್ವರನಾದ ಶ್ರೀರಂಗರಾಯನ ಬಂಧುವಾಗಿದ್ದನು. ಉಮ್ಮತ್ತೂರು ಅರಸರ ಕುಲದೇವತೆ ಸೋಮೇಶ್ವರ ಆಗಿದ್ದು ಶಿವನಸಮುದ್ರ, ತೆರಕಣಾಂಬಿ, ನೀಲಗಿರಿ, ಉಮ್ಮತ್ತೂರು ಮೊದಲಾದ ಪ್ರಾಂತ್ಯಗಳನ್ನು ಆಳಿದರು.[2] ಇವರ ಕಾಲದಲ್ಲಿ ಚಾಮರಾಜನಗರ ಜಿಲ್ಲೆಯಲ್ಲಿ ಹಲವಾರು ದೇವಾಲಯಗಳು ನಿರ್ಮಾಣಗೊಂಡವು ಹಾಗೂ ಕೆಲವು ಪ್ರಾಚೀನ ದೇವಾಲಯಗಳು ಪೋಷಿಸಲ್ಪಟ್ಟವು. ಕೆಲವು ದೇವಾಲಯಗಳನ್ನು ವಿಜಯನಗರದ ಅರಸರ ಹೆಸರಿನಲ್ಲಿ ಸ್ಥಳೀಯ ಮುಖಂಡರು ಅಭಿವೃದ್ಧಿಪಡಿಸಿದರು. ಕೆಲವು ದೇವಾಲಯಗಳನ್ನು ವಿಜಯನಗರದ ಅರಸರೇ ನೇರವಾಗಿ ದಾನವನ್ನು ನೀಡಿ ಅಭಿವೃದ್ಧಿಪಡಿಸಿದ್ದಾರೆ.

ವಿಜಯನಗರದ ಅರಸರ ಕಾಲದಲ್ಲಿ ಚಾಮರಾಜನಗರ ಜಿಲ್ಲೆಯಲ್ಲಿ ಅರಸರುಗಳಿಂದ ಕೆಲವು ದೇವಾಲಯಗಳು ಹೊಸದಾಗಿ ನಿರ್ಮಾಣಗೊಂಡವು. ಚಾಮರಾಜನಗರ ತಾಲ್ಲೂಕಿನ ಹರಪನಹಳ್ಳಿಯ ದಿವ್ಯಲಿಂಗೇಶ್ವರ, ಉಮ್ಮತ್ತೂರು ದೇವಾಲಯ, ಕನಕಗಿರಿ ವಿಜಯನಾಥ ದೇವರು, ಹೆಬ್ಬಲಕೋಟೆ ವೀರಭದ್ರ ದೇವಾಲಯ, ಹೊಂಗನೂರು, ಗುಂಡ್ಲುಪೇಟೆಯಲ್ಲಿ

ರಾಮೇಶ್ವರ, ತೆರಕಣಾಂಬಿಯಲ್ಲಿ ತ್ರಿಯಂಬಕದೇವ, ಯಳಂದೂರಿನಲ್ಲಿ ಗೌರೀಶ್ವರ, ಕೊಳ್ಳೇಗಾಲ ತಾಲ್ಲೂಕಿನ ಸರಗೂರಿನಲ್ಲಿ ಮಲ್ಲಿಕಾರ್ಜುನದೇವ ಮತ್ತು ಸೂಲವಾಡಿ ಬೀರೇಶ್ವರ ದೇವಾಲಯಗಳು ನಿರ್ಮಾಣಗೊಂಡವು. ಕೆಲವು ದೇವಾಲಯಗಳು ಜೀರ್ಣೋದ್ಧಾರಗೊಂಡು ಹೆಚ್ಚುವರಿ ದೇವಾಲಯ ಆಕರ, ಮಂಟಪ, ಕೊಳ, ಕಲ್ಲುತೋರಣಗಳು ಸೇರ್ಪಡೆಗೊಂಡು ಅಭಿವೃದ್ಧಿಹೊಂದಿದ್ದವು. ಚಾಮರಾಜನಗರ ಮತ್ತು ಗುಂಡ್ಲುಪೇಟೆ ತಾಲ್ಲೂಕಿನ ದೇವಾಲಯಗಳು ಗಂಗರು ಮತ್ತು ಹೊಯ್ಸಳರ ನಂತರ ವಿಜಯನಗರ ಅರಸರಿಂದಲೇ ಹೆಚ್ಚು ಅಭಿವೃದ್ಧಿಹೊಂದಿದ್ದವು.

ಚಾಮರಾಜನಗರದಿಂದ ಐದು ಕಿ.ಮೀ. ದೂರದಲ್ಲಿ ಹರದನಹಳ್ಳಿ ಗ್ರಾಮದಲ್ಲಿ ದಿವ್ಯಲಿಂಗೇಶ್ವರ ದೇವಾಲಯ ಪ್ರಮುಖವಾಗಿ ವಿಜಯನಗರ ಕಾಲದಲ್ಲಿ ಪೋಷಿಸಿ ಅಭಿವೃದ್ಧಿಪಡಿಸಲ್ಪಟ್ಟಿದೆ. ಈ ಊರಿನಲ್ಲಿ ಹಿಂದೆ ಕೋಟೆ ಇದ್ದು ಈಗ ಹಾಳಾಗಿದೆ. ಈ ದೇವಾಲಯವನ್ನು ಹೊಯ್ಸಳರು, ವಿಜಯನಗರ ಅರಸರು ಮತ್ತು ಮೈಸೂರು ಒಡೆಯರು ಅಭಿವೃದ್ಧಿಪಡಿಸಿದರು. ಈ ದೇವಾಲಯವನ್ನು ಹೊಯ್ಸಳ ಅರಸ ಮೂರನೇ ಬಲ್ಲಾಳ ಕ್ರಿ.ಶ. 1316ರಲ್ಲಿ ನಿರ್ಮಿಸಿದನು. ಈ ದೇವಾಲಯವು ಗೋಪುರ ಮತ್ತು ಗರುಡಗಂಭವನ್ನು ಒಳಗೊಂಡು ಸುಂದರವಾಗಿದೆ. ಈ ದೇವಾಲಯವು ಗರ್ಭಗುಡಿಯಲ್ಲಿ ಶಿವಲಿಂಗವಿದ್ದು ಕಲಾತ್ಮಕವಾಗಿದೆ. ಇದರಿಂದ 105 ಅಡಿ ದೂರದಲ್ಲಿ ನಂದೀಶ್ವರನ ವಿಗ್ರಹವಿದೆ. ಇದೊಂದು ಐತಿಹಾಸಿಕ ಹಾಗೂ ಧಾರ್ಮಿಕ ಕೇಂದ್ರವಾಗಿದ್ದು ಹರದನಹಳ್ಳಿಯಲ್ಲಿ ಎಡೆಯೂರು ಸಿದ್ದಲಿಂಗೇಶ್ವರರು ಜನಿಸಿದ್ದರು. ಈ ದೇವಾಲಯದ ಆವರಣದಲ್ಲಿ ಸುಮಾರು 15 ಶಾಸನಗಳಿವೆ. ದೇವಾಲಯದ ಪಶ್ಚಿಮಕ್ಕೆ 'ನವರಂಗ' ಮತ್ತು ವೀರಭದ್ರ ದೇವಾಲಯವಿದೆ. ದೇವಾಲಯದ ಸಂಕೀರ್ಣದಲ್ಲಿ ಕಾಮಾಕ್ಷಿ ದೇವಾಲಯ ಮತ್ತು ಸರಸ್ವತಿ ದೇವಾಲಯಗಳಿವೆ.[3] ಒಂದು ಶಾಸನದ ಪ್ರಕಾರ ವಿಜಯನಗರದ ಶ್ರೀಕೃಷ್ಣದೇವರಾಯ ಉಮ್ಮತ್ತೂರು ಪ್ರದೇಶವನ್ನು ಗೆದ್ದು ವಿಜಯೋತ್ಸವದ ನೆನಪಿಗಾಗಿ ದಿವ್ಯಲಿಂಗೇಶ್ವರ ದೇವಾಲಯವನ್ನು ನಿರ್ಮಿಸಿದನು ಎಂದು ಹೇಳುತ್ತದೆ. ಹೊಯ್ಸಳ ಶಾಸನದ ಪ್ರಕಾರ ಮೂರನೆಯ ಬಲ್ಲಾಳನ ಸೇನಾನಿ ಮಾದವ ದಣ್ಣಾಯಕನು ಹಾಗೂ ಅವನ ಅಧಿಕಾರಿ ಮಾರಗೌಡ ಕ್ರಿ.ಶ. 1316ರಲ್ಲಿ ನಿರ್ಮಿಸಿದರು. ಈ ದೇವಾಲಯವನ್ನು ವಿಜಯನಗರದ ಶ್ರೀಕೃಷ್ಣದೇವರಾಯ, ಇಮ್ಮಡಿ ಹರಿಹರ, ಇಮ್ಮಡಿ ದೇವರಾಯ, ಅಚ್ಚುತರಾಯ, ಸದಾಶಿವರಾಯರ ಅಧೀನ ಅಧಿಕಾರಿಗಳು ದೇವಾಲಯಕ್ಕೆ ಹಲವು ದತ್ತಿಗಳನ್ನು ನೀಡಿದರು. ದೇವಾಲಯದ ಪಶ್ಚಿಮ ಭಾಗದಲ್ಲಿ 1645ರಲ್ಲಿ ಲಿಂಗಯ್ಯ ಎಂಬುವ ಅಧಿಕಾರಿ ಕಾಳಹಸ್ತೀಶ್ವರ ವಿಗ್ರಹವನ್ನು ಪ್ರತಿಷ್ಠಾಪಿಸಿದನು.[4]

ವಿಜಯನಗರ ಅರಸರ ಸಾಮಂತರಾಗಿದ್ದ ಉಮ್ಮತ್ತೂರು ಅರಸರು ತೆರಕಣಾಂಬಿ ಕೇಂದ್ರದಿಂದ ಆಳ್ವಿಕೆ ಮಾಡುತ್ತಿದ್ದು ಅಲ್ಲಿ ಮೂಲಸ್ಥಾನೇಶ್ವರ ಮತ್ತು ಲಕ್ಷ್ಮೀವರದರಾಜಸ್ವಾಮಿ ದೇವಾಲಯಗಳಿಗೆ ದಾನ ನೀಡಿ ಅಭಿವೃದ್ಧಿಪಡಿಸಿದ್ದರು. ಕೃಷ್ಣದೇವರಾಯನ ಕಾರ್ಯಕರ್ತ ಅಧಿಕಾರ ಪೆರುಮಾಳು ಚಲ್ಲಯ್ಯನವರಿಗೆ ಪುಣ್ಯವಾಗಲೆಂದು ಕ್ರಿ.ಶ. 1571ರಲ್ಲಿ ಗಂಗನಾಯಕರ ಮಗ ದಳವಾಯಿ ರಂಗನಾಯಕರು ಕಾಶಿ ಕ್ಷೇತ್ರಕ್ಕೆ ಸಮಾನವಾದ ಉಮ್ಮತ್ತೂರು ಶ್ರೀರಂಗನಾಥನಿಗೆ ನೈವೇದ್ಯಕ್ಕಾಗಿ ಉಮ್ಮತ್ತೂರು ಸೀಮೆಯ ಭೂಮಿಯನ್ನು ದಾನಮಾಡಿದನು.[5] ಅವಸರದ ದೇಮರಸಯ್ಯನವರ ನಿರೂಪದಂತೆ ಶ್ರೀಕೃಷ್ಣದೇವರಾಯರಿಗೆ ಧರ್ಮಕೀರ್ತಿಯಾಗಬೇಕೆಂದು ಲಕ್ಕರಾಜನ ಮಗ ತಿಮ್ಮರಾಜನು ಉಮ್ಮತ್ತೂರು ದೇವಾಲಯದ (ದೇವಾಲಯದ ಹೆಸರು ಹಾಳಾಗಿದೆ) ಗರ್ಭಗೃಹ ಮತ್ತು ಸುಕನಾಸಿಯನ್ನು ಜೀರ್ಣೋದ್ಧಾರ ಮಾಡಿದರು. ಉಮ್ಮತ್ತೂರಿನ ಭುಜಂಗೇಶವರ ದೇವಾಲಯದ ಸೇವೆಗಾಗಿ ವಿಜಯನಗರದ ರಾಜ ವೆಂಕಟಪತಿರಾಯನ ಕಾಲದಲ್ಲಿ (ಕ್ರಿ.ಶ. 1589) ಉಮ್ಮತ್ತೂರಿನ ದೇವಪ್ಪ ವೊಡೆಯನ ಮಗ ಕಾಲಾಂತಕ ವೊಡೆಯನು ಭೂಮಿಯನ್ನು ದಾನಮಾಡಿದನು. ಅದೇ ದೇವಾಲಯದ ಗರುಡಗಂಭದಲ್ಲಿ ಶಾಸನವೊಂದು ವಿಜಯನಗರದ ಸದಾಶಿವರಾಯನಿಗೆ ಶ್ರೇಯವಾಗಲೆಂದು ವಿರೂಪಸಮುದ್ರ ಗ್ರಾಮವನ್ನು ದಾನವಾಗಿ ನೀಡಿದರು. ಇದೇ ಭುಜಂಗೇಶ್ವರ ದೇವಾಲಯಕ್ಕೆ ಕೃಷ್ಣದೇವರಾಯನ ಮಂತ್ರಿ ಸಾಳುವ

ಗೋವಿಂದರಾಯನು ಉಮ್ಮತ್ತೂರು ಸ್ಥಳದ ಬಾಗುಳಿ ಗ್ರಾಮದ ಕಂದಾಯವನ್ನು ದಾನವಾಗಿ ನೀಡಿದನು. ಉಮ್ಮತ್ತೂರಿನ ನಾರಾಯಣಸ್ವಾಮಿ ದೇವಾಲಯಕ್ಕೆ ಉಮ್ಮತ್ತೂರಿನ ತಿರುವಣಗದೆಯನ ಮಗ ರಾಮಕೃಷ್ಣಯ್ಯನವರು ಗರ್ಭಗೃಹಕ್ಕೆ ದ್ವಾರವನ್ನು ಅಲಂಕೃತವಾಗಿ ಕೆತ್ತಿಸಿ ಕೊಡುಗೆಯಾಗಿ ನೀಡಿದನು. ತೆರಕಣಾಂಬಿಯ ವರದರಾಜ ದೇವಾಲಯಕ್ಕೆ ಸದಾಶಿವರಾಯನ ಕಾಲದಲ್ಲಿ ಹಲವು ಗ್ರಾಮಗಳನ್ನು ದಾನವಾಗಿ ನೀಡಲಾಯಿತು.[6]

ಚಾಮರಾಜನಗರ ತಾಲ್ಲೂಕಿನ ಹೊಂಗನೂರು ಗ್ರಾಮ ಹಲವಾರು ಪ್ರಾಚೀನ ದೇವಾಲಯಗಳನ್ನು ಹೊಂದಿತ್ತು. ಈ ದೇವಾಲಯಗಳಿಗೆ ಹೊಯ್ಸಳರು, ವಿಜಯನಗರ ಅರಸರು, ಸ್ಥಳೀಯ ನಾಯಕರು, ಜನಸ್ತೋಮ, ಪ್ರಸಿದ್ಧ ಗಾವುಂಡರು ದಾನಗಳನ್ನು ನೀಡಿ ಅಭಿವೃದ್ಧಿಪಡಿಸಿದರು. ಹೊಂಗನೂರು ಗ್ರಾಮವನ್ನು ಕೃಷ್ಣದೇವರಾಯನ ಮಂತ್ರಿ ಗೋವಿಂದರಾಜ ವೊಡೆಯನು ಅಗ್ರಹಾರವನ್ನಾಗಿ ಪರಿವರ್ತಿಸಿದನು. ಅದು ಮುಂದೆ ಪ್ರಸಿದ್ಧ ಧಾರ್ಮಿಕ ಕ್ಷೇತ್ರವಾಗಿ ಅಭಿವೃದ್ಧಿ ಹೊಂದಿತು. ಅಲ್ಲಿನ ಆಂಜನೇಯ, ವಿನಾಯಕ ದೇವಾಲಯಗಳು, ವಿಶ್ವೇಶ್ವರ ದೇವಾಲಯಗಳಿಗೆ ಜನತೆ ಹಲವಾರು ದಾನಗಳನ್ನು ನೀಡಿ ಅಭಿವೃದ್ಧಿಪಡಿಸಿದ್ದಾರೆ.[7] ಕ್ರಿ.ಶ. 1523ರಲ್ಲಿ ಕೃಷ್ಣದೇವರಾಯನ ಮಹಾಮಂತ್ರಿಯಾದ ಸಾಳುವ ಗೋವಿಂದರಾಯನ ಕೈಕೆಳಗೆ ಮಾಗಣಿಕಾರನಾಗಿದ್ದ ತುರುಮುಡಿಪಾಕದ ತಿರುವೇಂಗಡ ಮುದಲಿಯಾರನ ಮಗ ಒಡೆಯಾರು ಮುದಲಿಯಾರು ಹೆಬ್ಬಲಕೋಟೆಯಲ್ಲಿ ವೀರಭದ್ರ ದೇವರ ಪ್ರತಿಷ್ಠೆ ಮಾಡಿಸಿದನು. ಆ ದೇವಾಲಯಕ್ಕೆ ದಾನ ನೀಡಿ ಭೂಕಾಣಿಕೆಗಳನ್ನು ಆ ದೇವರ ಸ್ಥಾನಕ್ಕೆ ಕರ್ತನಾದ ಅಲ್ಲಪ್ಪನಿಗೆ ಸಲ್ಲಿಸಲಾಯಿತು. ಮುಂದೆ ಮತ್ತೆ ಯಾರಾದರೂ ದಾನ ನೀಡಿದರೆ ಅದು ಯಲ್ಲಪ್ಪನಿಗೆ ಸಲ್ಲಬೇಕೆಂದೂ, ದೇವರ ಪೂಜೆಗೆ ತನಗಿಷ್ಟ ಬಂದವರನ್ನು ಅರ್ಚಕರನ್ನಾಗಿ ನೇಮಿಸಿಕೊಳ್ಳುವ ಪೂರ್ಣಾಧಿಕಾರ ಅವನಿಗುಂಟೆಂದೂ ಇವುಗಳ ಬಗ್ಗೆ ಪಾರುಪತ್ಯಗಾರನೂ ಪ್ರಶ್ನಿಸುವಂತಿಲ್ಲವೆಂದೂ, ದೇವಾಲಯದ ಶ್ರೀಕಾರ್ಯವನ್ನು ವೇಳೆವೇಳೆಗೆ ತಪ್ಪದೆ ನಡೆಸಿಕೊಂಡು ಬರಬೇಕೆಂದು ಹೇಳಲಾಗಿದೆ.[8]

ಚಾಮರಾಜನಗರದ ಪಶ್ಚಿಮಕ್ಕೆ 25 ಕಿ.ಮೀ. ದೂರದಲ್ಲಿರುವ ಮಲೆಯೂರಿನ ಕನಕಗಿರಿ ಜಗತ್ತಿನ ಸುಪ್ರಸಿದ್ಧ ಜೈನ ಕ್ಷೇತ್ರಗಳಲ್ಲಿ ಒಂದಾಗಿದೆ. ಇಲ್ಲಿ ಅನೇಕ ಪಾದುಕೆಗಳು, ಶಿಲಾಶಾಸನಗಳು, ಸಮಾಧಿಮಂಟಪಗಳು ಮತ್ತು ಗುಹೆಗಳಿವೆ. 10ನೇ ಶತಮಾನಕ್ಕೆ ಸೇರಿದ ಕನಕಗಿರಿ ಮೇಲಿನ ಪಾರ್ಶ್ವನಾಥ ಬಸದಿ ಅತಿ ಪುರಾತನ ಹಾಗೂ ಸುಂದರ ಬಸದಿಯಾಗಿದೆ. ಇಲ್ಲಿ ಗಂಗರು ಮತ್ತು ಹೊಯ್ಸಳರ ಕಾಲದ ಕಟ್ಟಡಗಳು, ಶಿಲಾಶಾಸನಗಳು ಕಂಡುಬರುತ್ತವೆ. ಇಲ್ಲಿನ ಶಿಲಾಶಾಸನಗಳ ಪ್ರಕಾರ ಅಜಿತಮುನಿ ಚಂದ್ರಸೇನಾಚಾರ್ಯ ಮುಂತಾದ ಹಲವರು ಸಲ್ಲೇಖನ ವ್ರತ ಕೈಗೊಂಡು ಸಮಾಧಿ ಪಡೆದರೆಂದು ತಿಳಿಯುತ್ತದೆ. 'ಕಲ್ಯಾಣಕಾರಕ ಚಿಕಿತ್ಸಾಶಾಸ್ತ್ರ' ಗ್ರಂಥ ಬರೆದ ಶ್ರೀ ಪೂಜ್ಯಪಾದರು ಈ ಊರಿನವರು.[9] ಇಲ್ಲಿ ವಿಜಯನಾಥ ದೇವಾಲಯವಿದೆ. ಈ ದೇವಾಲಯಕ್ಕೆ ಒಂದನೇ ದೇವರಾಯನ ಮಗ ಹರಿಹರರಾಯ ವೊಡೆಯನು ಮಲೆಯೂರು ಮತ್ತು ಅದರ ಉಪಗ್ರಾಮಗಳನ್ನು ಕೆಲವಾರು ಸುಂಕಾದಾಯಗಳನ್ನು ದಾನಮಾಡಿದನು. ಕೊಲಗಾಣದ ವಾಸುದೇವರಿಗೆ ಪೂರ್ವದಲ್ಲಿ ನೀಡಿದ ಮಲೆಯೂರಿನಲ್ಲಿಯ ಭೂಕಾಣಿಕೆಗಳನ್ನು ಹೊರತುಪಡಿಸಿ ಉಳಿದುದನ್ನು ದಾನ ನೀಡಿದನು. ಹರಿಹರರಾಯನು ತಮ್ಮ ತಂದೆ ದೇವರಾಯ ಮಹಾರಾಯರಿಗೆ ಶಾಶ್ವತ ಪುಣ್ಯಲೋಕಪ್ರೀತ್ಯರ್ಥವಾಗಿ ದತ್ತಿ ನೀಡಿದನು. ಅಲ್ಲಿನ ಅಂಗರಂಗಭೋಗ ಮೊದಲಾದ ದೇವತಾವಿನಿಯೋಗಕ್ಕೆ ಮಲೆಯೂರು ಚತುಸ್ಸೀಮೆಯನ್ನು ವೀರಹರಿಹರರಾಯ (ಕ್ರಿ.ಶ. 1422) ದಾನವಾಗಿ ನೀಡಿದನು.[10] ಶ್ರೀಕೃಷ್ಣದೇವರಾಯನು ಉಮ್ಮತ್ತೂರು ಸೀಮೆಯ ನಾಯಕತನವನ್ನು ದಯಪಾಲಿಸಿದ್ದಕ್ಕಾಗಿ ಅವಸರದ ದೇಮರಸಯ್ಯ ನಿರೂಪದ ಮೇರೆಗೆ ಲಕ್ಕರಾಜನ ಮಗ ತಿಮ್ಮರಾಜನು ತಗಡೂರು ಸ್ಥಳದ ಹೆಗ್ಗೂಠಾರ ಹಾಗೂ ಅದರ ಉಪಗ್ರಾಮಗಳನ್ನು ಸರ್ವಸ್ವಾಮ್ಯವಾಗಿ ಬ್ರಹ್ಮಾಪುರದ ಬಾಲಕೃಷ್ಣದೇವರ ಅಂಗರಂಗಭೋಗದ ಸೇವೆಗಳಿಗೆ ದಾನ ಮಾಡಿದನು. ಈ ದಾನವನ್ನು ತುಂಗಭದ್ರ ತೀರದ ಪಂಪಾಕ್ಷೇತ್ರದ ವಿರೂಪಾಕ್ಷೇಶ್ವರನ ಸನ್ನಿಧಿಯಲ್ಲಿ ನೀಡಲಾಯಿತು. ಕೃಷ್ಣದೇವರಾಯನ ಅವಸರದ ದೆಮ್ಮರಸನ ಆಜ್ಞೆ ಮೇರೆಗೆ ಬ್ರಹ್ಮಾಪುರದ ಬಾಲಕೃಷ್ಣದೇವರ

ಸೇವೆಗೆ ಉಮ್ಮತ್ತೂರು ಸೀಮೆಯ ತಗಡೂರು ಸ್ಥಳದ ಹೆಗ್ಗೂಂತಾರ ಗ್ರಾಮವನ್ನು ನೀಡಲಾಯಿತು.[11] ಇವುಗಳಲ್ಲದೆ ಚಾಮರಾಜನಗರ ತಾಲ್ಲೂಕಿನ ಇತರ ಸಣ್ಣ ದೇವಾಲಯಗಳಿಗೆ ರಾಜರು ಹಾಗೂ ಸ್ಥಳೀಯ ಪ್ರಮುಖರು ದಾನ ನೀಡಿ ಅವುಗಳ ಅಭಿವೃದ್ಧಿಗೆ ಶ್ರಮಿಸಿದರು. ತೆಳನೂರು ಮಹಾಕಾಳಿ ಅಮ್ಮನವರ ದೇವಸ್ಥಾನಕ್ಕೆ ವಿಜಯನಗರ ಎರಡನೇ ಹರಿಹರರಾಯನ ಆಳ್ವಿಕೆ ಕಾಲದಲ್ಲಿ ಅಕ್ಕಸಾಲಿ ಸೋಮೋಜನ ಮಗ ಕಾಲ್ಟೋಜನು ಕಲ್ಲುತೋರಣವನ್ನು ನಿರ್ಮಿಸಿದನು. ಹೊಮ್ಮ ಗ್ರಾಮದಲ್ಲಿರುವ ಮೂಲಸ್ಥಾನೇಶ್ವರ ದೇವಾಲಯದಲ್ಲಿ ಪೂಜಾ ಕಾರ್ಯಗಳು ನೆರವೇರಲು ಸಂಗಮ ವಂಶದ ರಾಜ ಎರಡನೇ ಹರಿಹರನ ಮಂತ್ರಿ ಕೆಂಪ ಮತ್ತು ಹದಿನಾಡು ಸೀಮೆಯ ಸಂಗಮರಾಜನ ಮಗ ಬಲ್ಲಪನು ಭೂದಾನ ನೀಡಿದನು. ಮೂಲಸ್ಥಾನೇಶ್ವರ ದೇವರು ವೀರಶೈವ ದೇವರಾಗಿತ್ತು. ಇರಸವಾಡಿಯಲ್ಲಿನ ಸೋಮೇಶ್ವರ ದೇವಾಲಯಕ್ಕೆ ಹದಿನಾಡಿನ ತಿಮ್ಮಣ್ಣನಾಯಕ ಭೂದಾನ ನೀಡಿದನು. ಅದೇ ದೇವಾಲಯಕ್ಕೆ ಕೃಷ್ಣದೇವರಾಯನ ಶಿರೋಮಣಿ ಗೋವಿಂದರಾಜ ವೊಡೆಯನು ಹಲವಾರು ದಾನಗಳನ್ನು ನೀಡಿದನು. ಚಾಮರಾಜನಗರ ತಾಲ್ಲೂಕಿನ ಹಳೇ ಆಲೂರಿನ ಬೀರೇಶ್ವರ ದೇವಸ್ಥಾನದಲ್ಲಿ ಪಾತ್ರಬೋಗ ಸೇವೆ ನಡೆಸಲು ವಿಜಯನಗರದ ಎರಡನೇ ಹರಿಹರನ ಆಳ್ವಿಕೆಯ ಕಾಲದಲ್ಲಿ ಅನಂತಪ್ಪನ ಮಗ ವರದಣ್ಣ ಸಹಾಯ ಮಾಡಿದನು. ಇವುಗಳಲ್ಲದೆ ಚಾಮರಾಜನಗರ ತಾಲ್ಲೂಕಿನ ಗಾಜನೂರಿನ ಮಲ್ಲಿಕಾರ್ಜುನ ದೇವರು ಮತ್ತು ಹರಳುಕೋಟೆಯ ವೀರಭದ್ರ ದೇವಾಲಯಗಳಲ್ಲಿ ಅಂಗರಂಗಭೋಗ ದೀವಿಗೆ ಮತ್ತು ಪ್ರತಿನಿತ್ಯ ಪೂಜಾಕಾರ್ಯ ನಡೆಯಲು ಭೂದಾನ ಮಾಡಲಾಗಿತ್ತು.[12]

ಗುಂಡ್ಲುಪೇಟೆಯಿಂದ 10 ಕಿ.ಮೀ. ದೂರದಲ್ಲಿರುವ ತ್ರಿಯಂಬಕೇಶ್ವರ ದೇವಾಲಯವು ಚಚ್ಚೌಕಾಕಾರದಲ್ಲಿ ನಿರ್ಮಿಸಲಾಗಿದ್ದು, ಪೂರ್ವದ್ವಾರದ ಮುಂದೆ ಭವ್ಯವಾದ ದೀಪಸ್ತಂಭ, ಬಲಿಪೀಠ, ನಂದಿಮಂಟಪಗಳಿವೆ. ದೇವಾಲಯದ ಉತ್ತರ ದಿಕ್ಕಿಗೆ ಪಾರ್ವತಿಗುಡಿ, ಪಶ್ಚಿಮಕ್ಕೆ ಪಂಚಲಿಂಗೇಶ್ವರ ಗುಡಿಗಳಿವೆ. ನೈರುತ್ಯ ದಿಕ್ಕಿನಲ್ಲಿ 54 ಕಂಬಗಳುಳ್ಳ ಕಲ್ಯಾಣ ಮಂಟಪವಿದೆ. ಆಗ್ನೇಯ ಮೂಲೆಗೆ ಎರಡು ಗರ್ಭಗುಡಿಯಿದ್ದು, ಒಂದು ಮಹಿಷಾಸುರ ಮರ್ದಿನಿ, ಮತ್ತೊಂದರಲ್ಲಿ ಸಪ್ತಮಾತೃಕೆಗಳ ವಿಗ್ರಹಗಳಿವೆ. ಗರ್ಭಗುಡಿಯ ಮಧ್ಯದಲ್ಲಿ ತ್ರಿಯಂಬಕೇಶ್ವರ ಶಿವಲಿಂಗವಿದೆ. ನವರಂಗವು ದೊಡ್ಡದಾಗಿದ್ದು ವಿಜಯನಗರ ಶೈಲಿಯನ್ನು ಒಳಗೊಂಡಿದೆ.[13] ತ್ರಿಯಂಬಕದೇವರ ದೇವಾಲಯದ ಸ್ಥಾನಿಕನಾದ ನಂಜನಾಥಜೋಯಿಸನ ಮಗ ಅಯ್ಯಪ್ಪನು ಕಮಲಾಪುರ ಅಗ್ರಹಾರವೆಂಬ ಪ್ರತಿನಾಮವನ್ನು ಪಡೆದಿದ್ದ ಹುಲ್ಲಾಳ ಗ್ರಾಮದಲ್ಲಿದ್ದ ತನ್ನ ಭೂಮಿಯನ್ನು ಆಗ ಪ್ರಚಲಿತವಾಗಿದ್ದ ಭೂಮಿಯ ಬೆಲೆಯಾದ 250 ವರಹಗಳಿಗೆ ಮಾರಿದನು. ಹೀಗೆ ಮಾರಿದ ಭೂಮಿಯಲ್ಲಿ ತಾನು ಸರ್ವಸಾಮಾನ್ಯವಾಗಿ ಪಡೆದ ತೋಟ ಮತ್ತು ಚಿಕ್ಕಪ್ಪ ಹಾಗೂ ಗೋಪಣರಿಂದ 100 ವರಹಗಳಿಗೆ ಕೊಂಡಿದ್ದ ಭೂಮಿಯೂ ಸೇರಿದೆ. ರಾಮಭಟ್ಟಯ್ಯನವರ ಕಾರ್ಯಕರ್ತನೂ ಹಾಗೂ ದೇವಾಲಯದ ಅಧಿಕಾರಿಯೂ ಆದ ಭಾಸ್ಕರನು ಗುರುಮೂರ್ತಿ ತ್ರಿಯಂಬಕದೇವರ ದೇವಾಲಯಕ್ಕಾಗಿ ಈ ಭೂಮಿಯನ್ನು ಕೊಂಡನು.[14]

ಗುಂಡ್ಲುಪೇಟೆಯಲ್ಲಿ ರಾಮೇಶ್ವರ ದೇವಾಲಯವು ಐತಿಹಾಸಿಕವಾಗಿದ್ದು ವಿಜಯನಗರ ಅರಸರ ಕಾಲದಲ್ಲಿ ಸರ್ವರೀತಿಯಲ್ಲೂ ಅಭಿವೃದ್ಧಿ ಹೊಂದಿತು. ವಿಜಯನಗರದ ವೀರಬುಕ್ಕನ ಒಡೆಯರ ಮಗ ಚಿಕ್ಕಕೆಂಪಣ ಒಡೆಯನು ರಾಮನಾಥ (ರಾಮೇಶ್ವರ) ದೇವರ ಪಾತ್ರಭೋಗಕ್ಕಾಗಿ (ನರ್ತಕಿಯರ ಸೇವೆಗಾಗಿ) ಪ್ರಸನ್ನ ವಿಜಯಪುರ ಅಗ್ರಹಾರದ ಮಹಾಜನಗಳು 30 ಗದ್ಯಾಣಗಳ ಕೊಡುಗೆಗಳನ್ನು ನೀಡಿದರು. ನಾಗವ್ವೆಯ ಮಗನಾದ ಹಿರಿಯ ರಾಮಣ್ಣನು ಕೇತವ್ವೆಯನ್ನು ದೇವಾಲಯದ ಪಾತ್ರವೆಂದು ರಾಮನಾಥದೇವರಿಗೆ ಪಾತ್ರಭೋಗವಾಗಿ ಕೊಟ್ಟರು. ದೇವಾಲಯದ ಪಾತ್ರಭೋಗದ ವ್ಯವಸ್ಥೆ ಮೊದಲೇ ಆಗಬೇಕೆಂಬುದಕ್ಕೆ ಮೊದಲೇ ಒಪ್ಪಿಗೆಯಾಗಿ ಕೇತವ್ವೆ ದೇವಾಲಯಕ್ಕೆ ನಿಯಮಿತಳಾಗಿರಬೇಕು ಮತ್ತು ಆಕೆಯ ಜೀವನ ನಿರ್ವಹಣೆಯ ವೆಚ್ಚವನ್ನು ವೀರಪಾಂಚಾಲರು (ಅಕ್ಕಸಾಲಿಗರು) ಕೊಡುತ್ತಿದ್ದರು. ತೆರಕಣಾಂಬಿಯ ಮಹಾಮಹತು ವೀರಶೈವ ಮಠವು ಗುಂಡ್ಲುಪೇಟೆಯ ರಾಮೇಶ್ವರ ದೇವಾಲಯದಲ್ಲಿ ದೀವಟಿಗೆ ನಡೆಸಲು ಪ್ರೋತ್ಸಾಹಿಸಿತು.[15]

ಯಳಂದೂರು ತಾಲ್ಲೂಕಿನಲ್ಲಿ ಯಳಂದೂರಿನ ಗೌರೀಶ್ವರ, ಮಾಂಬಳ್ಳಿ ವೈದ್ಯನಾಥೇಶ್ವರ, ಮದ್ದೂರು ದೇಶಿನಾಥ, ಅಗರ ಗ್ರಾಮದ ಶ್ರೀ ಯೋಗಾನರಸಿಂಹ ದೇವಾಲಯಗಳು ಪ್ರಮುಖವಾಗಿದ್ದು ವಿಜಯನಗರ ಅರಸರ ಆಳ್ವಿಕೆಯ ಕಾಲದಲ್ಲಿ ರಾಜರು ಹಾಗೂ ಸ್ಥಳೀಯ ನಾಡಪ್ರಭುಗಳು ಹಾಗೂ ಪ್ರಮುಖರಿಂದ ಪೋಷಿಸಲ್ಪಟ್ಟು ಅಭಿವೃದ್ಧಿ ಹೊಂದಿದ್ದವು. ಯಳಂದೂರು ವಿಜಯನಗರದ ರಾಜರ ಅಧೀನ ನಾಡಪ್ರಭುಗಳಾಗಿದ್ದ ಹದಿನಾಡಿನ ಅರಸರ ಕಾಲದಲ್ಲಿ ಮುಖ್ಯಪಟ್ಟಣವಾಗಿತ್ತು. ಇಲ್ಲಿ ಜೈನಧರ್ಮ, ವೀರಶೈವ ಧರ್ಮ ಹೆಚ್ಚು ಪ್ರಚಲಿತವಾಗಿತ್ತು. ಯಳಂದೂರಿನ ಗೌರೀಶ್ವರ ದೇವಾಲಯ ಹೆಚ್ಚು ವೈಶಿಷ್ಟ್ಯತೆಯನ್ನು ಹೊಂದಿದೆ. ಈ ದೇವಾಲಯವನ್ನು ಹದಿನಾಡಿನ ಅರಸ ಮೊದಲನೆ ರಾಜ ಸಿಂಗದೇವಭೂಪನು ನಿರ್ಮಿಸಿದನು. ಕ್ರಿ.ಶ. 1654ರಲ್ಲಿ ಮುದ್ದುರಾಜನು ಮುಖಮಂಟಪ ಪಂಚಲಿಂಗಗಳನ್ನೊಳಗೊಂಡ ಗುಡಿಗಳನ್ನು ಕಟ್ಟಿಸಿದ್ದಾನೆ. ಈ ಮಂಟಪವು ಹಂಪೆಯ ಕಲ್ಲಿನ ರಥವನ್ನು ಹೋಲುತ್ತದೆ. ಈ ಮಂಟಪವು ಬೇಲೂರು ಮತ್ತು ಹಳೇಬೀಡಿನ ದೇವಾಲಯದ ಶಿಲ್ಪಕಲೆಯಂತೆ ಇದೆ. ಈ ಮಂಟಪವೂ ಚತುರ್ಮುಖಗಳನ್ನು ಹೊಂದಿದ್ದು ಸುಂದರವಾದ ಕಲ್ಲಿನ ಬಳೆಗಳಿಂದ ಕೂಡಿದ ಮಂಟಪವಾಗಿದೆ. ಈ ಗೌರೀಶ್ವರ ಹಿಂದೆ ಕೃತಾಯುಗದಲ್ಲಿ ಜಮದಗ್ನಿ ಮಹರ್ಷಿಯಿಂದ 'ತ್ರಿಪುರಾಂತಕ'ನೆಂದು ತ್ರೇತಾಯುಗದಲ್ಲಿ ಶ್ರೀರಾಮಚಂದ್ರನಿಂದ 'ನೀಲಕಂಠ'ನೆಂದೂ, ದ್ವಾಪರಯುಗದಲ್ಲಿ ಪಾಂಡವರಿಂದ 'ಲೋಕೇಶ್ವರ'ನೆಂದೂ, ಕಲಿಯುಗದಲ್ಲಿ ಹದಿನಾಡಿನ ವಂಶಸ್ಥರು 'ಗೌರೀಶ್ವರ'ನೆಂದು ಪೂಜಿಸುತ್ತಿದ್ದರು. ಈ ದೇವಾಲಯದ ಸಂಕೀರ್ಣದಲ್ಲಿ ವಿಷ್ಣು, ಷಣ್ಮುಖ, ಪಾರ್ವತಿ, ಮಹಿಷಾಸುರಮರ್ದಿನಿ, ದುರ್ಗಾ, ವೀರಭದ್ರ, ಗಣಪತಿ, ವಿಗ್ರಹಗಳಿವೆ.[16]

ವಿಜಯನಗರದ ವೀರಬುಕ್ಕರಾಯನ ಆಳ್ವಿಕೆಯಲ್ಲಿ ಕ್ರಿ.ಶ. 1381ರಲ್ಲಿ ಶ್ರೀಮದುಪೇಂದ್ರಪುರವಾದ ಮದ್ದೂರ ನಾಡಿನ ಮಾಹಿಸೆಟ್ಟಿ ಕೇತುಮಲ್ಲಸೆಟ್ಟನಾಡಿನ ಮಹಾಜನಗಳು ಮದ್ದೂರ ಶ್ರೀ ದೇಶಿನಾಥ ದೇವರಿಗೆ ಧರ್ಮಪುರಾಣ, ಅಭ್ಯಾಗತರ, ನಿತ್ಯಹೋಮ, ನಿತ್ಯಾಹಾರ, ವೇದಾಪಾರಾಯಣ ಮುಂತಾದ ಕಾರ್ಯಗಳಿಗಾಗಿ ಧಾರಾಪೂರ್ವಕವಾಗಿ ಆ ಊರ ಹೆಸರಿನ ಸುಂಕವನ್ನು ಸಮರ್ಪಿಸಿದನು. ಅದೇ ಊರಿನ ಜನತೆ ತಮ್ಮ ಅಡಿಕೆ ತೋಟಗಳಿಂದ ಬರುವ ತೆರಿಗೆಗಳನ್ನು ಮದ್ದೂರ ಶ್ರೀ ದೇಶಿನಾಥ ದೇವರಿಗೆ ಅರ್ಪಿಸಿದರು. ವಿಜಯನಗರದ ಒಂದನೇ ಬುಕ್ಕರಾಯನ ಮಂತ್ರಿ ನಾಗರಸ ಮಹಾಮಂತ್ರಿಯ ಆಜ್ಞೆಯಂತೆ ಚಂದರಸನು ಉಪೇಂದ್ರಪುರ (ಮದ್ದೂರು) ಶ್ರೀ ನೀಲಮಾಣಿಕ್ಯನಾಥಾ ದೇವಾಲಯದ ಜೀರ್ಣೋದ್ಧಾರವನ್ನು ಮಾಡಿಸಿ ಆ ದೇವಾಲಯದ ಅಧಿಕಾರಿ ಪುರಾಣಭಟ್ಟರ ಮೂಲಕ ದತ್ತಿಗಳನ್ನು ನೀಡಿದನು. 1583ರಲ್ಲಿ ವಿಜಯನಗರದ ರಾಜ ತಿರುಮಲರಾಯನಿಗೆ ಧರ್ಮವಾಗಲೆಂದು ಶ್ರೀಪದುಪೇಂದ್ರಪುರದ ಸಮಸ್ತ ನಾಡಗೌಡುಗಳು ಸೋಮೇಶ್ವರ ದೇವರಿಗೆ ನೈವೇದ್ಯಕ್ಕೆಂದು ಭೂಮಿಯನ್ನು ದಾನಮಾಡಿದರು.[17]

ಯಳಂದೂರು ತಾಲ್ಲೂಕಿನ ಹೂಸೂರು ಗ್ರಾಮದ ಹನುಮಂತ ದೇವಾಲಯ ಐತಿಹಾಸಿಕವಾಗಿದ್ದು ಅದರ ಅಭಿವೃದ್ಧಿಗೆ ಅದೇ ಗ್ರಾಮದ ಸೋಮಣ್ಣಶೆಟ್ಟಿಯು ತನ್ನ ಮಾತಾಪಿತೃಗಳಿಗೆ ಸ್ವರ್ಗ ಪ್ರಾಪ್ತಿಯಾಗಲೆಂದು ಮಂಟಪವನ್ನು ಕಟ್ಟಿಸಿ ಶ್ರೀ ಹನುಮಂತ ಪ್ರತಿಷ್ಠೆಯನ್ನು ಮಾಡಿಸಿ ಆ ದೇವರ ನೈವೇದ್ಯಕ್ಕೆ ಹಾಗೂ ಪೂಜೆಗೆ ತನ್ನ ಬಳಿಯ ಐದು ಕೊಳಗ ಗದ್ದೆಯನ್ನು ಕೊಟ್ಟನು. ಅದೇ ತಾಲ್ಲೂಕಿನ ಅಗರ ಗ್ರಾಮದ ದುರ್ಗಾಗ್ರಹಾರದಲ್ಲಿರುವ ಶ್ರೀಯೋಗಾನಾರಸಿಂಹ ದೇವಾಲಯದ ಪ್ರತಿಷ್ಠಾಕಾಲದಲ್ಲಿ ನಿರ್ಮಾಣಗೊಂಡಿದ್ದ ತಿರುಕೊಳವು ಹಾಳಾಗಿದ್ದು ಅದನ್ನು ಸಿಂಗಣ್ಣನಾಯಕನ ಸಿರಪ್ರಧಾನ ಮಲ್ಲರಸಯ್ಯನ ಮುದ್ರೆಮನುಷ್ಯನು ಅವದಾನಿಯ ಸೀಮೆಯ ಬದನೆಹಾಳ ಮಲ್ಲಯ್ಯನ ಮಗ ರಾಮಯ್ಯನು ದುರ್ಗಾಗ್ರಹಾರದ ಪಾರುಪತ್ಯವನ್ನು ವಹಿಸಿಕೊಂಡು ಅಲ್ಲಿಗೆ ಕಲ್ಲುಗಳನ್ನು ಕಟ್ಟಿಸಿ ತಿರುಕೊಳವನ್ನು ಜೀರ್ಣೋದ್ಧಾರಗೊಳಿಸಿ ಅನೇಕ ದತ್ತಿಗಳನ್ನು ಬಿಟ್ಟನು. ಈ ದೇವಾಲಯವನ್ನು ಚೋಳರ ಮತ್ತು ಹೊಯ್ಸಳರ ಕಾಲದಲ್ಲಿ ನಿರ್ಮಾಣವಾಗಿತ್ತು. ಇವಲ್ಲದೆ ಯಳಂದೂರು ತಾಲ್ಲೂಕಿನ ಕೆಲವು ಚಿಕ್ಕ ದೇವಾಲಯಗಳು ಸ್ಥಳೀಯರಿಂದ ಪೋಷಿಸಲ್ಪಟ್ಟು ಅಭಿವೃದ್ಧಿಗೊಂಡವು. ಯಳಂದೂರು ತಾಲ್ಲೂಕಿನ

ಕೆಸ್ತೂರಿನ ಚಿಕ್ಕಪ್ಪ ದೇವರಿಗೆ 1546ರಲ್ಲಿ ಹಿರಿಯೊಡೆಯನ ಶಿಷ್ಯರು ಮಂಟಪವೊಂದನ್ನು ನಿರ್ಮಿಸಿದರು. ಮಾಂಬಳ್ಳಿ ವೈದ್ಯನಾಥೇಶ್ವರ ದೇವರಿಗೆ ಪ್ರತಿದಿನ ಇಬ್ಬರು ಯಾತ್ರಾತ್ರಿಗಳಿಗಾಗಿ ಭೋಜನ ಏರ್ಪಾಡುಮಾಡಲು ಇರುಮಡಿ ಮಂಡಲಸಾಮಿ ವಾಸುದೇವರ ಅಣ್ಣಾಮಲೈಯರು ಭೂಮಿಯನ್ನು ದಾನಮಾಡಿದರು. ಗುಂಬಳ್ಳಿ ನಂದಿಕೇಶ್ವರ ದೇವರ ದೀಪಾರಾಧನೆಗಾಗಿ ಗುರುಲಿಂಗಣರು 1512ರಲ್ಲಿ ಕ್ರಯಕ್ಕೆ ಕೊಂಡ ಭೂಮಿಯನ್ನು ದಾನವಾಗಿ ನೀಡಿದರು. ಇದಲ್ಲದೆ ಯರಂಗಬಳ್ಳಿ ಬಸವೇಶ್ವರ ದೇವಾಲಯ ಗೌಡಹಳ್ಳಿಯ ವೀರಭದ್ರ ದೇವಾಲಯಗಳು ಅಭಿವೃದ್ಧಿಗಾಗಿ ದಾನವನ್ನು ಪಡೆದವು.[19]

ಕೊಳ್ಳೇಗಾಲ ತಾಲ್ಲೂಕಿನಲ್ಲಿ ಹಲವಾರು ದೇವಾಲಯಗಳು ವಿಜಯನಗರ ಅರಸರ ಆಳ್ವಿಕೆಯ ಕಾಲದಲ್ಲಿ ಅಭಿವೃದ್ಧಿಗೊಂಡವು. ಕೊಳ್ಳೇಗಾಲದ ಶಿವನಸಮುದ್ರ ಬಳಿ ಇರುವ ವೀರೇಶ್ವರ ದೇವಾಲಯವು ಪ್ರಮುಖ ಐತಿಹಾಸಿಕ ಹಿನ್ನೆಲೆಯನ್ನು ಹೊಂದಿದೆ. ಈ ದೇವಾಲಯಕ್ಕೆ ವಿಜಯನಗರದ ವೆಂಕಟಪತಿರಾಯನ ಆಳ್ವಿಕೆಯಲ್ಲಿ ಹದಿನಾಡು ಪಾಳೆಯಪಟ್ಟುವಿನ ನಾಯಕ ರಾಮರಾಜನಾಯಕನ ಮಗ ತಿರುಮಲನಾಯಕನು ಈ ದೇವಾಲಯದಲ್ಲಿ ಸುಜನ ಶುದ್ಧಶಿವಾಚಾರ್ಯ ಸಂಪನ್ನರಾದ್ಯ ದೇಶಾಯಿಗಳಾಚರಿಸುವ ಮಾಹತ್ತಿನಮಠವನ್ನು ಮಾಡಿ ಅಲ್ಲಿನ ಭಕ್ತಾದಿಗಳೂ ಹಾಗೂ ಪೂಜಾರಿಗಳಿಗೆ ಭೋಜನವ್ಯವಸ್ಥೆ ಮಾಡಲು ರಂಗನಾಥದೇವರ ತುಡಿಯ ತೆಂಕಲು ಹೊಲದ ಕೋಟೆಯ ಬಳಿ ಇರುವ ಜನುಕನಹಳ್ಳಿ ಗ್ರಾಮ ಸರಗೂರು ಸ್ಥಳದ ಕರಿಪುರ ಗ್ರಾಮದ ಕೆಲವು ಜಮೀನುಗಳನ್ನು ದನ ಮಾಡಿದನು.[20] ಸರಗೂರು ಮಲ್ಲಿಕಾರ್ಜುನ ದೇವಸ್ಥಾನದ ಗರ್ಭಗೃಹ ನಿರ್ಮಾಣ ಕಾರ್ಯವನ್ನು ಹನುಮ ಸಿಪಾಯಿಯು ನೆರವೇರಿಸಿದರು. ಅದೇ ದೇವಾಲಯಕ್ಕೆ ಓರ್ವ ವೀರಶೈವ ಮುನಿ ಸುಜನಶುದ್ಧ ಶಿವಾಚಾರ್ಯರು ನಡೆಸುವ ಮಲ್ಲಿಕಾರ್ಜುನ ದೇವರಿಗೆ ದತ್ತಿಗಳನ್ನು ನೀಡಿದರು.[21] ವಿಜಯನಗರ ಶ್ರೀರಂಗರಾಯನ ಆಳ್ವಿಕೆಯಲ್ಲಿ ಹದಿನಾಡು ಸೀಮೆಯ ದೇವಪ್ಪಗಾವುಂಡನವರ ಮಕ್ಕಳಾದ ರಾಮರಾಜನಾಯಕ ತನ್ನ ಸಹೋದರ ಹೊನ್ನಜಿಯರಿಗೆ ಶ್ರೇಯವಾಗಲೆಂದು ಹಾಳಾಗಿದ್ದ ಗುಂಡೆಗಾಲ ಬಳಿಯಿರುವ ಅಮೃತೇಶ್ವರ ದೇವಾಲಯವನ್ನು ಜೀರ್ಣೋದ್ದಾರ ಮಾಡಿದರು.[22] ಈ ದೇವಾಲಯಗಳ ಜೊತೆಗೆ ಸಿಂಗನಲ್ಲೂರು ಗ್ರಾಮದ ಶಿವಶಂಕರ ದೇವಾಲಯ, ಮೊಡೆಹಳ್ಳಿಯ ಮಲ್ಲಿನಾಥ ದೇವಾಲಯ ಹಾಗೂ ಸೂಲವಾಡಿಯ ಬ್ರಹ್ಮೇಶ್ವರ ದೇವಾಲಯಗಳು ವಿಜಯನಗರದ ಅರಸರಿಂದ ನೇರವಾಗಿ ದಾನದತ್ತಿಗಳನ್ನು ಪಡೆದು ಅಭಿವೃದ್ಧಿಗೊಂಡವು.[23]

ವಿಜಯನಗರ ಅರಸರ ಆಳ್ವಿಕೆಯ ಕಾಲದಲ್ಲಿ ಚಾಮರಾಜನಗರ ಜಿಲ್ಲೆಯ ಪ್ರಾಚೀನ ದೇವಾಲಯಗಳನ್ನು ವಿಜಯನಗರದ ರಾಜರು ಹಾಗೂ ಅವರ ಅಧೀನ ನಾಡ ಅರಸರು ಮತ್ತು ಸ್ಥಳೀಯ ಪ್ರಮುಖರು ಅಭಿವೃದ್ಧಿಗೊಳಿಸಿದರು. ಈ ಪ್ರಾಚೀನ ದೇವಾಲಯಗಳು ಹೊಯ್ಸಳ, ಗಂಗ, ಚೋಳರ ಕಾಲದಲ್ಲಿ ರಚನೆಯಾಗಿದ್ದವು. ಇವುಗಳಲ್ಲದೆ, ಆ ಕಾಲದಲ್ಲಿ ಹೊಸ ದೇವಾಲಯಗಳು ಕೂಡ ನಿರ್ಮಾಣಗೊಂಡವು. ಪ್ರಾಚೀನ ಹಾಗೂ ನವೀನ ದೇವಾಲಯಗಳಿಗೆ ಹೆಚ್ಚಿನಪ್ರಮಾಣದ ದತ್ತಿಗಳನ್ನು ನೀಡಿ ಅಭಿವೃದ್ಧಿಗೊಳಿಸಿದರು. ವಿಜಯನಗರ ಅರಸರ ಕಾಲದಲ್ಲಿ ಈ ಜಿಲ್ಲೆಯಲ್ಲಿ ಹರದನಹಳ್ಳಿ ದಿವ್ಯಲಿಂಗೇಶ್ವರ, ಯಳಂದೂರು ಗೌರೀಶ್ವರ, ಗುಂಡ್ಲುಪೇಟೆಯ ತ್ರಿಯಂಬಕೇಶ್ವರ, ಕನಕಗಿರಿಯ ವಿಜಯನಾಥ ದೇವಾಲಯಗಳು ಪ್ರಮುಖವಾಗಿದ್ದವು. ಇವುಗಳಲ್ಲದೆ ಕೆಲವು ದೇವಾಲಯಗಳಿಗೆ ಹೆಚ್ಚುವರಿ ವಿಗ್ರಹ, ಸಭಾಮಂಟಪ, ನಂದಿಧ್ವಜ, ಮುಖಮಂಟಪ ಮುಂತಾದ ದೇವಾಲಯದ ಆಕರಗಳನ್ನು ನಿರ್ಮಿಸಿ ಅಭಿವೃದ್ಧಿಗೊಳಿಸಿದರು. ಇವುಗಳ ಜೊತೆಗೆ ಜಿಲ್ಲೆಯ ದೇವಾಲಯಗಳಿಗೆ ಪೂಜೆ, ನಿತ್ಯೋತ್ಸವ, ವೇದಪಾರಾಯಣ, ಅಂಗರಂಗಭೋಗ ಸೇವೆ ಮುಂತಾದ ದೇವತಾ ಕಾರ್ಯಗಳಿಗೆ ದಾನವನ್ನು ನೀಡಿ ಅಭಿವೃದ್ಧಿಪಡಿಸಿದರು. ಈ ದೇವಾಲಯಗಳಲ್ಲಿ ಶೈವ, ವೀರಶೈವ, ವಿಷ್ಣು ದೇವಾಲಯಗಳು ಹಾಗೂ ಜೈನ ಬಸದಿಗಳು ಸಹ ಅಭಿವೃದ್ಧಿಗೊಂಡಿದ್ದವು.

ಅಡಿ ಟಿಪ್ಪಣಿಗಳು

1. ಮಹಾಲಿಂಗಮ್ ಕೆ.ಟಿ., *ಅಡ್ಮಿನಿಸ್ಟ್ರೇಷನ್ ಅಂಡ್ ಸೋಷಿಯಲ್ ಲೈಫ್ ಅಂಡರ್ ವಿಜಯನಗರ,* ಭಾಗ 1, ಅಡ್ಮಿನಿಸ್ಟ್ರೇಷನ್, ಮದ್ರಾಸ್, 1969, ಪು. 233–237.
2. ಡಾ॥ ಕೃಷ್ಣರಾವ್ ಎಂ.ವಿ., ಮತ್ತು ಎಂ. ಕೇಶವಭಟ್ಟ, *ಕರ್ನಾಟಕದ ಇತಿಹಾಸ ದರ್ಶನ,* ಬೆಂಗಳೂರು, 1970, ಪು. 491–92.
3. *ಮೈಸೂರು ಆರ್ಕಿಯಾಲಜಿಕಲ್ ರಿಪೋರ್ಟ್,* 1935, ಪು. 43–44.
4. *ಎಪಿಗ್ರಾಫಿಯಾ ಕರ್ನಾಟಿಕ,* ಸಂಪುಟ 4, ಚಾಮರಾಜನಗರ ಶಾಸನ ಸಂಖ್ಯೆ 293, 275, 264, 260, 266, 265, 269, 268, 271.
5. *ಅದೇ,* ಸಂಪುಟ 4, ಚಾಮರಾಜನಗರ, ಶಾಸನ ಸಂಖ್ಯೆ 89.
6. *ಅದೇ,* ಶಾಸನ ಸಂಖ್ಯೆ 95, 100, 102, 103, 119, 301.
7. *ಅದೇ,* ಶಾಸನ ಸಂಖ್ಯೆ 155–172.
8. *ಅದೇ,* ಶಾಸನ ಸಂಖ್ಯೆ 100, 487.
9. *ಮೈಸೂರು ಆರ್ಕಿಯಾಲಜಿಕಲ್ ರಿಪೋರ್ಟ್,* 1917, ಪು. 56–57.
10. *ಎಪಿಗ್ರಾಫಿಯಾ ಕರ್ನಾಟಿಕ,* ಸಂಪುಟ 4, ಚಾಮರಾಜನಗರ, ಶಾಸನ ಸಂಖ್ಯೆ 355, 372.
11. *ಅದೇ,* ಸಂಪುಟ 4, ಚಾಮರಾಜನಗರ, ಶಾಸನ ಸಂಖ್ಯೆ 100, 487, 387, 388.
12. *ಅದೇ,* ಶಾಸನ ಸಂಖ್ಯೆ 120, 152, 153, 184, 185, 213, 224.
13. *ಮೈಸೂರು ಆರ್ಕಿಯಾಲಜಿಕಲ್ ರಿಪೋರ್ಟ್,* 1917, ಪು. 76.
14. *ಎಪಿಗ್ರಾಫಿಯಾ ಕರ್ನಾಟಿಕ,* ಸಂಪುಟ 5, ಗುಂಡ್ಲುಪೇಟೆ, ಶಾಸನ ಸಂಖ್ಯೆ 137.
15. *ಅದೇ,* ಶಾಸನ ಸಂಖ್ಯೆ 9, 12, 17.
16. *ಮೈಸೂರು ಆರ್ಕಿಯಾಲಜಿಕಲ್ ರಿಪೋರ್ಟ್,* 1917, ಪು. 37–38.
17. *ಎಪಿಗ್ರಾಫಿಯಾ ಕರ್ನಾಟಿಕ,* ಸಂಪುಟ 4, ಯಳಂದೂರು, ಶಾಸನ ಸಂಖ್ಯೆ 41, 42, 50, 64.
18. *ಅದೇ,* ಯಳಂದೂರು, ಶಾಸನ ಸಂಖ್ಯೆ 24, 67.
19. *ಅದೇ,* ಯಳಂದೂರು, ಶಾಸನ ಸಂಖ್ಯೆ 21, 67, 146, 155, 181, 187.
20. *ಅದೇ,* ಕೊಳ್ಳೇಗಾಲ, ಶಾಸನ ಸಂಖ್ಯೆ 28.
21. *ಅದೇ,* ಕೊಳ್ಳೇಗಾಲ, ಶಾಸನ ಸಂಖ್ಯೆ 32–33.
22. *ಅದೇ,* ಕೊಳ್ಳೇಗಾಲ, ಶಾಸನ ಸಂಖ್ಯೆ 40.
23. *ಅದೇ,* ಕೊಳ್ಳೇಗಾಲ, ಶಾಸನ ಸಂಖ್ಯೆ 55, 57, 79, 80.

14. ಕಾಲಕಾಲೇಶ್ವರದ ಬೆಟ್ಟದಲ್ಲಿರುವ 'ಆನೆಗುಂದಿ ಬಸವಣ್ಣ'

ಡಾ॥ ಮಲ್ಲಿಕಾರ್ಜುನ ಕುಂಬಾರ


ವಿಜಯನಗರದ ಅರಸರು ತಮ್ಮ ರಾಜ್ಯವನ್ನು ಸಾಕಷ್ಟು ಕಡೆ ವಿಸ್ತರಿಸಿದ್ದಲ್ಲದೇ, ತಮ್ಮ ಕಲೆಯನ್ನು ಕೂಡ ಪಸರಿಸುವಂತೆ ಮಾಡಿದ್ದಾರೆ. ವಿಜಯನಗರ ಶಿಲ್ಪ ಶೈಲಿಯ ಗೋಪುರಗಳು, ಗುಡಿಗುಂಡಾರಗಳು ಶಾಸನಗಳು ಇಂದು ನಾಡಿನ ಮೂಲೆ ಮೂಲೆಗಳಲ್ಲಿ ದೊರಕುತ್ತವೆ. ಇಂತಹ ಯಾವುದೇ ಶಿಲ್ಪವನ್ನು ಗಮನಿಸಿದಾಗ ಇದು ವಿಜಯನಗರ ಶೈಲಿಯದ್ದೆಂದು ಥಟ್ಟನೆ ಮನವರಿಕೆಯಾಗುವಂತೆ ತಮ್ಮ ಕಲಾಕೌಶಲ್ಯದ ವಿಶೇಷತೆಯನ್ನು ತೋರಿಸಿದ್ದಾರೆ. ಈ ನಾಡಿಗೆ ಇವರ ಕೊಡುಗೆ ಅನುಪಮವಾದುದು.

ಮೈಸೂರಿನ ಚಾಮುಂಡಿ ಬೆಟ್ಟದ ಪ್ರಸಿದ್ಧ ನಂದಿಯನ್ನೆ ಹೋಲುವ ಬಸವಣ್ಣನ (ನಂದಿ) ಮೂರ್ತಿಯೊಂದು ಗದಗ ಜಿಲ್ಲೆಯ ರೋಣ ತಾಲೂಕಿನ ಗಜೇಂದ್ರಗಡದ ಸನಿಹದಲ್ಲಿರುವ ಸುಪ್ರಸಿದ್ದ ಕಾಲಕಾಲೇಶ್ವರ ದೇವಾಲಯದ ಅನತಿ ದೂರದಲ್ಲಿದೆ. ಸಂಪೂರ್ಣವಾಗಿ ಕಾಡುಕಲ್ಲಿನಲ್ಲಿಯೇ ಕೆತ್ತಿದ, ಅದರ ಕೆತ್ತನೆಯು ನಾಜೂಕಲ್ಲದಿದ್ದರೂ ನೋಡುಗರ ಗಮನವನ್ನು ಸೆಳೆಯುತ್ತದೆ. ಈ ಬೃಹದಾಕಾರದ ಏಕಶಿಲೆಯ ನಂದಿಯು ಪ್ರಚಾರವಿಲ್ಲದೆ ಎಲೆಯ ಮರೆಯ ಕಾಯಿಯಂತೆ, ಕಾಲಕಾಲೇಶ್ವರದಿಂದ ಗುಡೂರಿಗೆ ಹೋಗುವ ಕಣಿವೆಯ ಮಾರ್ಗದಲ್ಲಿ ರಸ್ತೆಗೆ ಹೊಂದಿನಿಂತಿದೆ. ಇದು 25 ಅಡಿ ಉದ್ದ, 12 ಅಡಿ ಅಗಲ ಮತ್ತು 23 ಅಡಿ ಎತ್ತರವನ್ನು ಹೊಂದಿದೆ. ಈ ಭಾಗದಲ್ಲಿ ಇದನ್ನು ಆನೆಗುಂದಿ ಬಸವಣ್ಣನೆಂದು ಕರೆಯುತ್ತಾರೆ. ಈ ನಂದಿಯನ್ನು ಯಾರು ಯಾವಾಗ ಕೆತ್ತಿದರು ಎನ್ನುವ ಬಗ್ಗೆ ದಾಖಲೆಗಳು ಸಿಗುವುದಿಲ್ಲ.

ಜನಪದರ ಹೇಳುವ ಐತಿಹ್ಯಗಳ ನೆರಳಲ್ಲಿ ಒಂದಷ್ಟು ಇತಿಹಾಸ ಹುದುಗಿರುತ್ತದೆ. ಸನಿಹದ ಕಾಲಕಾಲೇಶ್ವರ ದೇವಾಲಯದ ಬಹಳಷ್ಟು ಕಟ್ಟಡಗಳು ವಿಜಯನಗರದ ಶೈಲಿಯಲ್ಲಿವೆ. ಈ ಹೆಸರಿನ ಸುಳಿವಿನಿಂದ ಇದು 16ನೆಯ ಶತಮಾನಕ್ಕೆ ಸೇರಿದೆ. ಈ ಹಿನ್ನೆಲೆಯಲ್ಲಿ ನಂದಿಯನ್ನು ವಿಜಯನಗರ ಅರಸರ ಕೊನೆಯ ಸಂತತಿಯವರಾದ ಆನೆಗುಂದಿ ಅರವೀಡು ಅರಸರ ಆಳ್ವಿಕೆಯ ಕಾಲದಲ್ಲಿ (ಕ್ರಿ.ಶ. 1572–1680) ಕೆತ್ತಿದ್ದಾರೆಂದು ಸ್ಪಷ್ಟವಾಗುತ್ತದೆ ವಿಜಯನಗರ ಸಾಮ್ರಾಜ್ಯ ಸ್ಥಾಪನೆ ಆರಂಭದಲ್ಲಿ ಮತ್ತು ಅದರ ಕೊನೆಯ ಕಾಲದಲ್ಲಿ ಕೂಡ ಆನೆಗುಂದಿಯು ಪ್ರಮುಖ ಸ್ಥಾನವಾಗಿ ಹಾಗೂ ರಾಜಧಾನಿಯಾಗಿ ಉಳಿದ ಸ್ಥಳ. ಅದು ಎಂದಿಗೂ ಶತ್ರುಗಳ ವಶವಾಗಲಿಲ್ಲ. ಅಳಿಯ ರಾಮರಾಯನ ಅವಸಾನದ ನಂತರ ವಿಜಯನಗರ ಪತನವಾಯಿತು. ಆ ನಂತರ ಅರವೀಡು ಸಂತತಿಯ ಅರಸರ ಶಾಖೆಯೊಂದು ಸ್ವಲ್ಪ ದಿನಗಳ ಕಾಲ ಆನೆಗುಂದಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳ್ವಿಕೆ ಮಾಡಿತು. ಇದೇ ಅರಸರು ಮುಂದೆ ಪೆನುಗೊಂಡೆಗೆ ತೆರಳಿದರು. ಇವರು ಆನೆಗುಂದಿಯಲ್ಲಿರುವಾಗ ಅರವೀಡು ಸಂತತಿಯ ಮೊದಲ ಅರಸ ಶ್ರೀರಂಗರಾಯ (ಕ್ರಿ.ಶ. 1572–85) ಆಳ್ವಿಕೆ ಮಾಡಿದ. ಈ ಅರಸನಿಗೆ ಬೇಟೆಯ ಖಯಾಲಿ ಇತ್ತೆಂದು, ಈ ಪ್ರದೇಶದಲ್ಲಿ ಆನೆಗುಂದಿ ಅರಸರು ಬೇಟೆಗೆ ಬರುತ್ತಿದ್ದರೆಂದು ಬಹಳಷ್ಟು ಕಥೆ ಮತ್ತು ಐತಿಹ್ಯಗಳು ಇಲ್ಲಿನ ಪರಿಸರದಲ್ಲಿವೆ. ಇಲ್ಲಿಂದ ಸ್ವಲ್ಪ ದೂರದಲ್ಲಿರುವ ನಾಗೇಂದ್ರಗಡದ ಸನಿಹದ ಹೊಗರಿ ಕೆರೆಯ ಪ್ರದೇಶದ, ಶಾಸನಗಳಲ್ಲಿ ಪೊಂಗರಿ ಎನ್ನಿಸಿಕೊಂಡ ಪರಿಸರದಲ್ಲಿ ಈ ಅರಸನು ಬೇಟೆಗೆ ಬಂದು ಪೊಂಗರಿಯ ಒಡತಿ ಹೊಂಬಾಳೆ ಎಂಬವಳನ್ನು ಮೋಹಿಸಿದನೆಂದು ನಾಗೇಂದ್ರಗಡದ ಪರಿಸರ

ಜನರು ಕಣ್ಣಿಗೆ ಕಟ್ಟುವಂತೆ ಕಥೆಯನ್ನು ಹೇಳುತ್ತಾರೆ. ಇದೆಲ್ಲವನ್ನು ಗಮನಿಸಿದರೆ ಅರಸ ಶ್ರೀರಂಗರಾಯನು ಈ ಭಾಗದಲ್ಲಿ ಬಹಳಷ್ಟು ಸಖ್ಯವನ್ನು ಹೊಂದಿರಬೇಕು.

ವಿಜಯನಗರದ ಪತನದ ನಂತರ ಜುಗುಪ್ಸೆಯನ್ನು ಹೊಂದಿದ ಈ ಅರಸನು ದೇವತಾ ಸೇವೆ, ಮಂದಿರಗಳ ಜೀರ್ಣೋದ್ಧಾರ, ಮೂರ್ತಿಗಳನ್ನು ಕೆತ್ತಿಸುವ ಕೈಂಕರ್ಯವನ್ನು ಕೈಗೊಂಡಿರಬೇಕು. ಇದರಿಂದ ಈ ಭಾಗದಲ್ಲಿ ಸಂಚರಿಸಿದ ಈ ಅರಸನು ಕ್ರಿ.ಶ. 1572-85ರ ಸಮಯದಲ್ಲಿಯೇ ನಂದಿ ಮೂರ್ತಿಯನ್ನು ಕೆತ್ತಿಸಿದ್ದಲ್ಲದೇ, ಪಕ್ಕದಲ್ಲಿರುವ ಕಾಲಕಾಲೇಶ್ವರ ದೇವಾಲಯದ ಜೀರ್ಣೋದ್ಧಾರಗೈದ. ಅದಕ್ಕೆ ಸಾಕ್ಷಿಯಾಗಿ ಇಲ್ಲಿನ ಕಟ್ಟಡಗಳು ವಿಜಯನಗರದ ಶೈಲಿಯಲ್ಲಿವೆ. ಈ ನಂದಿಯನ್ನು ಇತ್ತೀಚೆಗೆ ಸುಂದರಗೊಳಿಸಲು ಅದಕ್ಕೆ ಸುಣ್ಣವನ್ನು ಬಳಿಯುವ ಯತ್ನವನ್ನು ಕೆಲವರು ತಡೆದರು. ಸುಣ್ಣವನ್ನು ಬಳಿಯುವುದರಿಂದ ಈ ಶಿಲ್ಪವು ಕೆಲವು ದಿನಗಳ ನಂತರ ಸವೆದು ವಿರೂಪಗೊಳ್ಳುತ್ತದೆ. ಅದನ್ನು ಇರುವ ಸ್ಥಿತಿಯಲ್ಲಿಯೇ ಉಳಿಸಿಕೊಳ್ಳಬೇಕು. ಇದೇ ದೇವಾಲಯದ ಪಕ್ಕದಲ್ಲಿ ಕುದುರೆಗುಂಡು ಎನ್ನುವ ಸ್ಥಳದಲ್ಲಿ ಕೂಡ ಇನ್ನೊಂದು ನಂದಿಮೂರ್ತಿಯನ್ನು ಕಲ್ಲಿನಲ್ಲಿ ರೂಪಿಸಿ ಅಪೂರ್ಣಗೊಳಿಸಿದ್ದಾರೆ. ಇದು ಕೂಡ ಗಮನಾರ್ಹ ಅಂಶವಾಗಿದೆ.



15. ಕೋಲಾರದ ಸೋಮೇಶ್ವರ ದೇವಾಲಯ : ಒಂದು ಅಧ್ಯಯನ

ಡಾ|| ಜಿ. ಮನೋಜ್

ಕೋಲಾರದ ಸೋಮೇಶ್ವರ ದೇವಾಲಯವು ವಿಜಯನಗರ ಕಾಲದ ನಿರ್ಮಾಣ. ಈ ದೇವಾಲಯವು ಹಲವಾರು ವಿಶೇಷತೆಗಳಿಂದ ಕೂಡಿದೆ. ದೇವಾಲಯದ ನಿರ್ಮಾಣದ ಕಾಲ, ನಿರ್ಮಾತೃ, ಇತ್ಯಾದಿಗಳ ವಿವರಗಳನ್ನು ಒದಗಿಸುವ ಶಾಸನವು ಇಲ್ಲವಾದರೂ ಶೈಲಿಯ ಆಧಾರದ ಮೇಲೆ ಈ ದೇವಾಲಯವು ಸುಮಾರು 16ನೇ ಶತಮಾನದಲ್ಲಿ ನಿರ್ಮಾಣಗೊಂಡಿದೆ ಎನ್ನಬಹುದು. ಇದರ ನಿರ್ಮಾಣ ಕ್ರಮ ಮತ್ತು ಅಲಂಕರಣಗಳನ್ನು ಗಮನಿಸಿದರೆ ಇದು ಶ್ರೀಮಂತ ಪೋಷಣೆಯಲ್ಲಿ ನಿರ್ಮಾಣಗೊಂಡ ದೇವಾಲಯವೆಂದು ನಿಸ್ಸಂದೇಹವಾಗಿ ಹೇಳಬಹುದು. ಅಲ್ಲದೆ ಕೋಲಾರವು ವಿಜಯನಗರದ ಕನ್ನಡ ಮತ್ತು ತಮಿಳು ಪ್ರಾಂತ್ಯಗಳ ನಡುವಣ ಪ್ರದೇಶವಾದ್ದರಿಂದ ರಾಜಕೀಯವಾಗಿ ಇಲ್ಲಿ ಪ್ರಬಲವಾದ ವ್ಯಕ್ತಿಗಳ ನೇಮಕವಾಗುತ್ತಿದ್ದುದು ತಿಳಿದ ಸಂಗತಿಯಾಗಿದೆ.

ಸೋಮೇಶ್ವರ ದೇವಾಲಯವು ಪೂರ್ವಾಭಿಮುಖವಾಗಿದ್ದು, ತಲವಿನ್ಯಾಸದಲ್ಲಿ ಗರ್ಭಗೃಹವನ್ನು, ಶುಕನಾಸವನ್ನು ಮತ್ತು ಗೂಢಮಂಟಪವನ್ನು ಹೊಂದಿದೆ (ಚಿತ್ರ 01). ಗೂಢಮಂಟಪಕ್ಕೆ ಹೊಂದಿಕೊಂಡಂತೆ ದೀರ್ಘಯಾತಾಕಾರದ ಮಹಾಮಂಟಪವಿದೆ. ಈ ಮಹಾಮಂಟಪದ ಮುಂಭಾಗದಲ್ಲಿ ಅಡ್ಡಲಾಗಿ, ಮೂರು ಅಂಕಣಗಳ ವಿಸ್ತಾರದ ಪಾತಾಳಾಂಕಣವನ್ನು ನಿರ್ಮಿಸಲಾಗಿದೆ. ದೇವಾಲಯದ ಆವರಣದಲ್ಲಿ ಪ್ರಧಾನ ದೇವಾಲಯದ ನೈರುತ್ಯಕ್ಕೆ ಕಲ್ಯಾಣ ಮಂಟಪ, ವಾಯವ್ಯಕ್ಕೆ ಅಮ್ಮನವರ ಗುಡಿ ಮತ್ತು ಈಶಾನ್ಯಕ್ಕೆ ಡೋಲೋತ್ಸವ ಮಂಟಪವನ್ನು ನಿರ್ಮಿಸಲಾಗಿದೆ. ಇವೆಲ್ಲವನ್ನು ಆವರಿಸಿರುವಂತೆ ಎತ್ತರವಾದ ಪ್ರಾಕಾರವನ್ನು ಈ ದೇವಾಲಯವು ಹೊಂದಿದೆ. ಈ ದೇವಾಲಯಕ್ಕೆ ಪೂರ್ವದಲ್ಲಿ ಮಾನಸೂತ್ರಕ್ಕೆ ಹೊಂದಿಕೊಂಡಂತೆ ಮಹಾದ್ವಾರವಿರುವುದು. ಈ ಮಹಾದ್ವಾರವಲ್ಲದೆ ದಕ್ಷಿಣಕ್ಕೂ ಒಂದು ಪ್ರವೇಶದ್ವಾರವನ್ನು ನೀಡಲಾಗಿದೆ. ಏರುವಿನ್ಯಾಸದಲ್ಲಿ ದೇವಾಲಯದ ವಿಮಾನ ಭಾಗವು ಅಧಿಷ್ಠಾನ, ಭಿತ್ತಿ, ಪ್ರಸ್ತರ ಮತ್ತು ಎರಡು ತಲಗಳುಳ್ಳ ಪ್ರಾಸಾದವನ್ನು ಹೊಂದಿದೆ. ವಿಮಾನವು ವಿನ್ಯಾಸ ಸೂತ್ರದಲ್ಲಿ ಭದ್ರ, ಕರ್ಣ, ಪ್ರತಿಕರ್ಣ ಮತ್ತು ಸುಭದ್ರಗಳನ್ನು ಹೊಂದಿದೆ.

ಈ ದೇವಾಲಯವು ವಿಜಯನಗರ ಕಾಲದ ನಿರ್ಮಾಣವಾಗಿದ್ದರು, ಇದರ ವಾಸ್ತು ಅಂಗಗಳ ಮತ್ತು ಅಲಂಕರಣದ ಮೇಲೆ ನೊಳಂಬರ ಪ್ರಭಾವವನ್ನು ಹೇರಳವಾಗಿ ಕಾಣಬಹುದು. ಕೋಲಾರದ ಹಲವಾರು ಭಾಗಗಳು ನೊಳಂಬರ ಅಧೀನದಲ್ಲಿದ್ದುದಲ್ಲದೆ, ಇಲ್ಲಿ ಅವರ ವಾಸ್ತು ನಿರ್ಮಾಣಗಳನ್ನು ಹಲವೆಡೆಗಳಲ್ಲಿ ಕಾಣಬಹುದಾಗಿದೆ. ಇವರ ಪ್ರಮುಖ ಕೇಂದ್ರಗಳೆಂದರೆ ನಂದಿ ಮತ್ತು ಆವನಿ. ಈ ಎರಡೂ ಸ್ಥಳಗಳಲ್ಲಿ ನೊಳಂಬ ಶೈಲಿಯ ದೇವಾಲಯಗಳನ್ನು ಕಾಣಬಹುದು. ರಾಜಕೀಯವಾಗಿ ವಿಜಯನಗರದ ಅರಸರ ಪೂರ್ವದಲ್ಲಿ ಆಳ್ವಿಕೆ ನಡೆಸಿದ ಹೊಯ್ಸಳರು ಈ ಶೈಲಿಯನ್ನು ಅನುಸರಿಸುವುದರಲ್ಲಿ ಒಲವು ತೋರಿದಂತೆ ಕಾಣುವುದಿಲ್ಲ. ಆವಣಿಯ ರಾಮೇಶ್ವರ ದೇವಾಲಯ, ಕುರುಡುಮಲೆಯ ಸೋಮೇಶ್ವರ ಮೊದಲಾದ ಕೆಲವು ದೇವಾಲಯಗಳು ಹೊಯ್ಸಳರ ಕಾಲದ್ದೆಯಾದರೂ ಅವು ನೊಳಂಬರ ಶೈಲಿಯ ಪ್ರಭಾವವನ್ನು ಹೊಂದಿದಂತೆ ತೋರುವುದಿಲ್ಲ. ಆದರೆ ಈ ಪ್ರದೇಶದಲ್ಲಿ ನೊಳಂಬರಿಂದ ಪರಿಚಯಿಸಲ್ಪಟ್ಟ ಸ್ತಂಭಗಳ ಸ್ವರೂಪ ಮತ್ತು ನಿರೂಪಣೆ ಆ ಕಾಲದಿಂದ ಸುಮಾರು 16/17ನೇ ಶತಮಾನದವರೆಗೂ ಮುಂದುವರೆದಿರುವುದು ಕಾಣಬಹುದು. ಪ್ರಸ್ತುತ ಲೇಖನದಲ್ಲಿ ದೇವಾಲಯದ ವಿವಿಧ ಅಂಗಗಳನ್ನು ವಿಭಜಿಸಿ ವಿವರಿಸುವಾಗ ಅಲ್ಲಲ್ಲಿ, ಸೂಕ್ತ ಸ್ಥಳಗಳಲ್ಲಿ ವಿಜಯನಗರ ವಾಸ್ತುವಿನ ಮೇಲೆ ನೊಳಂಬರ ಪ್ರಭಾವವನ್ನು ಉಲ್ಲೇಖಿಸಲಾಗುವುದು.

ಈ ದೇವಾಲಯವು ಪ್ರತಿಬಂಧ ಅಧಿಷ್ಠಾನವನ್ನು ಹೊಂದಿದೆ. ಇದು ಉಪಾನ, ಜಗತಿ, ತ್ರಿಪಟ್ಟಕುಮುದ, ಗಳ, ಕಪೋತ ಮತ್ತು ಪ್ರತಿಗಳಿಂದ ಕೂಡಿದೆ. ಇಲ್ಲಿಯ ಉಪಾನವು, ಸಾಮಾನ್ಯವಾಗಿ ಇರುವಂತೆ ಬಹುಪಾಲು ಭೂಮಿಯಲ್ಲಿ

ಹುದುಗಿ ಹೋಗಿರದೆ, ಜಗತಿಯಷ್ಟೇ ಪ್ರಧಾನವಾಗಿ ಕಾಣುತ್ತದೆ. ಇದರ ವಿನ್ಯಾಸ ಸೂತ್ರವು ನೇರವಾಗಿದ್ದು ಯಾವುದೇ ಹಿಂಚಾಚು ಮತ್ತು ಮುಂಚಾಚುಗಳನ್ನು ಹೊಂದಿಲ್ಲವಾದ್ದರಿಂದ ಇದು ಉಪಾನವೆಂದೇ ಖಚಿತವಾಗುತ್ತದೆ. ಇದರ ಮೇಲಿನ ಜಗತಿಯು ಸಾಲಾಗಿ ಮೆರವಣಿಗೆ ಹೋಗುತ್ತಿರುವ ಆನೆಗಳ ಸಾಲುಗಳಿಂದ ಕೂಡಿದೆ. ಜಗತಿಯ ಮೇಲ್ಭಾಗದಲ್ಲಿ ಪದ್ಮಜಗತಿಯನ್ನು ಕಾಣಬಹುದು. ಆದರೇ ಇದರ ದಳಗಳನ್ನು ಸ್ಪಷ್ಟವಾಗಿಯೂ ಮತ್ತು ಆಳವಾಗಿಯೂ ಕೆತ್ತಿಲ್ಲ. ಪದ್ಮಜಗತಿಯ ಮೇಲಿನ ತ್ರಿಪಟ್ಟಕುಮುದವು ಮಧ್ಯದಲ್ಲಿ ರತ್ನ ಪಟ್ಟಿಕೆಯನ್ನು ಹೊಂದಿದೆ. ಇದರ ಮೇಲೆ ಕಪೋತವು ಅದಕ್ಕೆ ಹೊಂದಿಕೊಂಡಂತೆ ಪ್ರತಿಮುಖವಿರುವುದು. ಪ್ರತಿ ಮುಖದಲ್ಲಿ, ಪ್ರತಿಬಂಧ ಅಧಿಷ್ಠಾನದಲ್ಲಿ ಸಾಮಾನ್ಯವಾಗಿ ಕಂಡುಬರುವ ವ್ಯಾಳ ಮಾಲೆಗಳಿಗೆ ಬದಲಾಗಿ ಜಿಗಿಯುತ್ತಿರುವ ಸಣ್ಣ ಸಣ್ಣ ಸಿಂಹಗಳನ್ನು ಕೆತ್ತಲಾಗಿದೆ. ಇದರ ಮೇಲೆ ಪದ್ಮ ವಾಜನವನ್ನು ಕಾಣಬಹುದು. ಈ ಅಧಿಷ್ಠಾನವು ಆವಣಿಯ ಲಕ್ಷ್ಮಣೇಶ್ವರ ದೇವಾಲಯದ ಅಧಿಷ್ಠಾನವನ್ನು ಬಹಳವಾಗಿ ಹೋಲುತ್ತದೆ. (ಚಿತ್ರ 02–03)

ವಿಜಯನಗರ ಕಾಲದಲ್ಲಿ ಪ್ರತಿಬಂಧ ಅಧಿಷ್ಠಾನದ ನಿರ್ಮಾಣವು ಬಹಳ ವಿರಳವಾಗಿ ಕಂಡುಬರುತ್ತದೆ ಈ ಸಾಮ್ರಾಜ್ಯದ ಕೇಂದ್ರಭಾಗವಾದ ಹಂಪಿ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲೂ ಅವರು ಪಾದಬಂಧ ಅಧಿಷ್ಠಾನವನ್ನೆ ಬಳಸಿದ್ದಾರೆ. ಕೆಲವೊಮ್ಮೆ ಈ ಪಾದಬಂಧ ಅಧಿಷ್ಠಾನದ ನಡುವೆ ಅತೀ ಸೂಕ್ಷ್ಮವಾದ ಪದ್ಮದಳಗಳನ್ನು ಕೆತ್ತಿರುವುದರಿಂದ, ಮೂಲತಃ ಪಾದ ಬಂಧವೆ ಆದರೂ, ಅದನ್ನು ಪದ್ಮಕೇಸರವೆಂದು ವರ್ಗಿಕರಿಸಲಾಗುವುದು. ಹೀಗಿರುವಲ್ಲಿ ಕೋಲಾರ ಸೋಮೇಶ್ವರ ದೇವಾಲಯದಲ್ಲಿ ಪ್ರತಿಬಂಧ ಅಧಿಷ್ಠಾನವನ್ನು ಬಳಸಿರುವುದು ಗಮನಾರ್ಹ. ಈ ಬಳಕೆಗೆ ನೊಳಂಬರ ಪ್ರಭಾವವೇ ಕಾರಣವೆಂದು ನಿಸ್ಸಂದೇಹವಾಗಿ ಹೇಳಬಹುದು ಈ ಹಿಂದೆ ಇದೇ ಜಿಲ್ಲೆಗೆ ಸೇರಿದ್ದ ರಂಗ ಸ್ಥಳದಲ್ಲಿ ಇರುವ ರಂಗನಾಥ ದೇವಾಲಯವು ಸಹ ಇಂತಹದ್ದೇ ಪ್ರತಿಬಂಧ ಅಧಿಷ್ಠಾನವನ್ನೇ ಹೊಂದಿರುವುದು. ಈ ದೇವಾಲಯವೂ ವಿಜಯನಗರ ಕಾಲದ ನಿರ್ಮಾಣ. ಕೋಲಾರವು ಹೇಗೆ ಆವಣಿಗೆ ಸಮೀಪವಾಗಿರುವುದೋ ಹಾಗೆ ರಂಗಸ್ಥಳವು ನಂದಿಗೆ ಸಮೀಪವಿರುವುದು. ಹೀಗಾಗಿ ಈ ಎರಡೂ ದೇವಾಲಯಗಳೂ ನೊಳಂಬರ ವಾಸ್ತು ಪ್ರಭಾವಕ್ಕೆ ಒಳಗಾಗಿರುವುದು.

ಸೋಮೇಶ್ವರ ದೇವಾಲಯದ ಭಿತ್ತಿಯ ಭಾಗವು ವಿಶೇಷವಾದ ಅಲಂಕರಣದಿಂದ ಕೂಡಿದೆ. ಈ ಹಿಂದೆಯೆ ಹೇಳಿದಂತೆ ಇದರ ಅಲಂಕರಣದಲ್ಲೂ ನೊಳಂಬರ ಪ್ರಭಾವವನ್ನು ಕಾಣಬಹುದು. ಭಿತ್ತಿಯ ಭದ್ರ, ಕರ್ಣ, ಮತ್ತು ಪ್ರತಿಕರ್ಣಗಳು ತೋರಣಗಳಿಂದ ಅಲಂಕೃತವಾಗಿದ್ದರೆ. ಸಲಿಲಾಂತರಗಳು ಕುಂಭ ಪಂಜರಗಳಿಂದ ಅಲಂಕೃತವಾಗಿದೆ. ಭದ್ರದ ಮಧ್ಯಭಾಗವು ಕೋಷ್ಠವನ್ನು ಹೊಂದಿದ್ದು ಒಂದೆರಡು ಕೋಷ್ಠಗಳಲ್ಲಿ ಜಾಲವಾತಾಯನಗಳನ್ನು ಕಾಣಬಹುದು.

ಭಿತ್ತಿಯಲ್ಲಿ ಎರಡು ಪ್ರಕಾರದ ಶಾಲಾ ಮತ್ತು ಕೂಟ ರೀತಿಯ ಶಿಖರಗಳುಳ್ಳ ತೋರಣಗಳನ್ನು ಕೆತ್ತಲಾಗಿದೆ. (ಚಿತ್ರ 04–05). ಈ ತೋರಣಗಳಲ್ಲಿ ಅವುಗಳಿಗೆ ಹೊಂದಿಕೊಂಡಂತೆ ಕುಬ್ಜರ ಮತ್ತು ಸಾಲಭಂಜಿಕೆಯರ ಉಬ್ಬು ಶಿಲ್ಪಗಳನ್ನು ಕೆತ್ತಲಾಗಿದೆ. ಇದನ್ನು ನೋಡಿದರೆ ಭೋಗನಂದೀಶ್ವರ ದೇವಾಲಯದ ತೋರಣಗಳು ನೆನಪಾಗುತ್ತವೆ. ಕುಂಭಪಂಜರಗಳು ಕರ್ನಾಟಕದಲ್ಲಿ ವಿಜಯನಗರ ಕಾಲದಿಂದಲೆ ಕಂಡುಬರುವುದು. ಇಲ್ಲಿಯ ಕುಂಭಪಂಜರವು ಸಾಧಾರಣವಾದ ಅಲಂಕರಣವನ್ನು ಹೊಂದಿದೆ. ಮುಂಚಾಚಿನೊಂದಿಗೆ ರತ್ನಪಟ್ಟಿಕೆಯನ್ನು ಹೊಂದಿದೆ. ಕುಂಭದ ಮುಖಭಾಗದಲ್ಲಿ ಬ್ರಹ್ಮಕಾಂತ ಭಿತ್ತಿಪಾದವು ಕೆತ್ತಲಾಗಿದ್ದು ಇದರ ಬುಡದ ಇಕ್ಕೆಲಗಳಲ್ಲಿ ಮಕರ ಮುಖಗಳನ್ನು ಕೆತ್ತಲಾಗಿದೆ. ಮಕರ ಮುಖಗಳಿಂದ ಮುಕ್ತಾಗ್ರಾಸಗಳು ಹೊರಹೊಮ್ಮುತಿದೆ. ಭಿತ್ತಿಪಾದದ ಮೇಲ್ತುದಿಯು ಮಾಲಾಸ್ತಾನದಿಂದ ಅಲಂಕೃತವಾಗಿದ್ದು ಅದರ ಮೇಲೆ ಷಡ್ವರ್ಗಯುತ ಚಿಕಣಿ ವಿಮಾನವನ್ನು ಖಂಡರಿಸಲಾಗಿದೆ. ಈ ವಿಮಾನವು ಕೂಟ ಶಿಖರವನ್ನು ಹೊಂದಿದೆ ಇದೇ ರೀತಿಯ ಕುಂಭಪಂಜರಗಳನ್ನು ದೇವಾಲಯದ ಪ್ರತಿ ಸಲಿಲಾಂತರದಲ್ಲೂ ಕಾಣಬಹುದು. (ಚಿತ್ರ 06)

ಈ ದೇವಾಲಯದ ಕಪಿಲಿಯ, ಅಂದರೆ ಶುಕನಾಸಿಯ ಹೊರಭಿತ್ತಿಯ ಅಲಂಕರಣವು ವಿಶೇಷವಾಗಿರುವುದು. ಕಪಿಲಿ ಅಗಲಕ್ಕೂ ಭದ್ರ ಮತ್ತು ಸುಭದ್ರಗಳ ಮುಂಚಾಚುಗಳಿದ್ದು ಮಧ್ಯದ ಕೋಷ್ಠದಲ್ಲಿ ಜಾಲವಾತಾಯನವನ್ನು

ಹೊಂದಿದೆ (ಚಿತ್ರ 07). ಈ ಅಲಂಕರಣವು ಘನದ್ವಾರದ ಅಲಂಕರಣವನ್ನು ಹೊಲುತ್ತದೆ ದೇವಾಲಯದ ಭದ್ರದ ಕೋಷ್ಠಗಳಲ್ಲಿ ಜಾಲವಾತಾಯನಗಳನ್ನು ಹೊಂದಿಸಲಾಗಿದೆ. ಇವು ಗವಾಕ್ಷ ಮತ್ತು ಪುಷ್ಪಖಂಡ ಜಾಲಾವಾತಾಯನಗಳ ಮಿಶ್ರ ಮಾದರಿಗಳಾಗಿದೆ. ವಿಜಯನಗರ ಕಾಲದ ವೇಳೆಗೆ ಇಂತಹ ಮಿಶ್ರ ಅಂಶಗಳನ್ನು ದೇವಾಲಯದ ಹಲವಾರು ಅಂಗಗಳಲ್ಲಿ ಕಾಣಬಹುದು (ಚಿತ್ರ 08).

ಭಿತ್ತಿ ಪಾದಗಳು ಬ್ರಹ್ಮಕಾಂತ ವರ್ಗಕ್ಕೆ ಸೇರುತ್ತವೆ. ವಿಜಯನಗರ ಕಾಲದ ಭಿತ್ತಿಪಾದಗಳಂತೆ ಇವು ಪೀಠಗಳನ್ನು ಹೊಂದಿಲ್ಲ ಮತ್ತು ದಿಂಡು ನಿರಲಂಕೃತವಾಗಿದ್ದು ಮೇಲ್ತುದಿಯಲ್ಲಿ ಮಾಲಾಸ್ಥಾನ, ಕುಂಭ, ತಡಿ, ಮಂಡಿ ಮತ್ತು ಫಲಕಗಳನ್ನು ಹೊಂದಿದೆ. ತಡಿಯನ್ನು ಘಂಟಾಕಾರದಲ್ಲಿ ಖಂಡರಿಸಲಾಗಿದೆ. ಫಲಕದ ಮೇಲೆ ಪುಷ್ಪಪೋತಿಕೆಗಳನ್ನು ಖಂಡರಿಸಲಾಗಿದೆ. ಈ ಪುಷ್ಪಪೋತಿಕೆಗಳು ಪ್ರಧಾನವಾಗಿ ಮುಂಚಾಚಿಕೊಂಡಿರುವುದು ವಿಶೇಷ (ಚಿತ್ರ 04).

ಪ್ರಸ್ತರವು ಉತ್ತರ, ವಲಭಿ, ಕಪೋತ ಮತ್ತು ವಜನಗಳಿಂದ ಕೂಡಿದ್ದು ಅಧಿಷ್ಠಾನ ಮತ್ತು ಭಿತ್ತಿಗಳಂತೆಯೆ ಹೇರಳವಾದ ಅಲಂಕರಣವನ್ನು ಹೊಂದಿದೆ (ಚಿತ್ರ 09). ಪ್ರಸ್ತರದ ಉತ್ತರವು ವಿಜಯನಗರ ಕಾಲದಿಂದಲೇ ಅಲಂಕರಣವನ್ನು ಹೊಂದುವುದು. ಪ್ರಸ್ತುತ ದೇವಾಲಯದ ಉತ್ತರವು ಗಳಪಾದಗಳನ್ನು ಹೋಲುವಂತೆ, ಮುಂಚಾಚಿದ, ಚೌಕಾಕಾರದ ಪಟ್ಟಿಕೆಗಳನ್ನು ಹೊಂದಿದೆ. ಇವುಗಳ ಮೇಲೆ ಕುಳಿತಿರುವ ಸಿಂಹಗಳ ಮತ್ತು ವ್ಯಾಳಗಳ ಉಬ್ಬುಶಿಲ್ಪಗಳನ್ನು ಕಾಣಬಹುದು. ಇದರ ಮೇಲಿನ ವಲಭಿಯ ಅಲಂಕರಣವು ಸಹ ಮಿಶ್ರ ಮಾದರಿಯಲ್ಲಿದೆ. ವಿಜಯನಗರ ಕಾಲಕ್ಕೆ ಸಾಮಾನ್ಯವಾಗಿ ವಲಭಿಯಲ್ಲಿ ಕಂಡುಬರುವ ಪದ್ಮದಳಗಳ ಅಲಂಕರಣದೊಂದಿಗೆ ಅಲ್ಲಲ್ಲಿ ಭಾರವಾಹಕರ ಶಿಲ್ಪಗಳನ್ನು ಕೆತ್ತಲಾಗಿದೆ. ವಲಭಿಯಲ್ಲಿ ಭೂತಮಾಲೆ ಭಾರವಾಹಕರ ಮಾಲೆ ಇತ್ಯಾದಿಗಳನ್ನು ಕೆತ್ತುವುದು ಹತ್ತನೆ ಶತಮಾನಕ್ಕೆ ಪೂರ್ವದ ಲಕ್ಷಣ. ಈ ಅಲಂಕರಣವನ್ನು ಆ ಕಾಲಕ್ಕೆ ಸೇರಿದ ನೊಳಂಬರ ದೇವಾಲಯಗಳಲ್ಲಿ ಕಾಣಬಹುದು ಪ್ರಸ್ತುತ ದೇವಾಲಯದಲ್ಲಿ ಈ ಎರಡೂ ಅಲಂಕರಣಗಳನ್ನು ಸಂಮಿಶ್ರಣ ಮಾಡಿ ನಿರೂಪಿಸಲಾಗಿದೆ.

ಪ್ರಸ್ತರದ ಕಪೋತವು ಅಲಂಕರಣದಲ್ಲಿ ಸಮಕಾಲೀನ ಕಪೋತಗಳನ್ನೇ ಹೋಲುತ್ತದೆ. ಇದರ ಮೇಲಿನ ನಾಸಿಗಳು ಬಹಳ ನಿಬಿಡವಾಗಿ ಕೆತ್ತಲಾಗಿದೆ. ಇವು ವಿಜಯನಗರ ಕಾಲದ ನಾಸಿಗಳಂತೆಯೆ ಮೇಲ್ತುದಿಯಲ್ಲಿ ಕೀರ್ತಿಮುಖವನ್ನು ಹೊಂದಿದ್ದು ಅವುಗಳ ಬಾಯಿಂದ ಹೊರಟ ಬಳ್ಳಿಗಳು ಎರಡೂ ಪಾರ್ಶ್ವಗಳಲ್ಲೂ ಹರಡಿಕೊಂಡಿವೆ. ಗಾಢದಲ್ಲಿ ಗಂಧರ್ವ ಮುಖಗಳನ್ನು ಕೆತ್ತಲಾಗಿದೆ. ವಿಜಯನಗರ ನಾಸಿಗಳಂತೆ ವೈವಿಧ್ಯಮಯವಾದ ಉಬ್ಬುಶಿಲ್ಪಗಳನ್ನು ಹೊಂದಿರದೆ ಕೇವಲ ಗಂಧರ್ವಮುಖಗಳನ್ನು ಹೊಂದಿರುವುದು ಒಂದು ವಿಶೇಷ. ಕಪೋತದ ಹೊರಮೈ ತುದಿಗಳಲ್ಲಿ ಪದ್ಮದಳಗಳ ಅಲಂಕರಣವನ್ನು ಹೊಂದಿದೆ. ಕಪೋತದ ಮೇಲೆ ವಾಜನವು ಸ್ವಲ್ಪ ಹೆಚ್ಚು ಎತ್ತರವಾಗಿದ್ದು ವೇಧಿಯನ್ನು ಹೋಲುತ್ತದೆ. ಇದರಲ್ಲಿ ವ್ಯಾಳ ಮಾಲೆಗಳ ಬದಲಾಗಿ ಕುಳಿತಿರುವ ಸಿಂಹಗಳ ಅಲಂಕರಣವನ್ನು ಕಾಣಬಹುದು. ಪ್ರಸ್ತರದ ಮೇಲ್ಭಾಗದಲ್ಲಿರುವ ಪ್ರಾಸಾದವು ಮೈಸೂರು ಒಡೆಯರ ಕಾಲದ ನಿರ್ಮಾಣವಾಗಿದೆ. ಹೀಗಾಗಿ ಇದರ ಪ್ರಸ್ತಾಪ ಈ ಲೇಖನದಲ್ಲಿ ಅಪ್ರಸ್ತುತವಾದ್ದರಿಂದ ಹೆಚ್ಚು ವಿವರಣೆಗಳನ್ನು ನೀಡಿಲ್ಲ.

ಸೋಮೇಶ್ವರ ದೇವಾಲಯದ ಗೂಢಮಂಟಪದಲ್ಲಿ ನಾಲ್ಕು ಚಿತ್ರಖಂಡ ಸ್ತಂಭಗಳಿವೆ (ಚಿತ್ರ 10). ವಿಜಯಗರದ ಕಾಲದ ವೇಳೆಗೆ ಚಿತ್ರಖಂಡ ಸ್ತಂಭದ ಬಳಕೆಯೇ ಹೆಚ್ಚಾಗಿದ್ದಿತು. ಆ ಕಾಲದಲ್ಲಿ ನಿರ್ಮಾಣವಾಗುತ್ತಿದ್ದ ವಿಶಾಲವಾದ ಮಹಾಮಂಟಪಗಳು, ರಂಗ ಮಂಟಪ, ಕಲ್ಯಾಣಮಂಟಪ, ಇತ್ಯಾದಿ ಮಂಟಪಗಳಿಗೆ, ಚಿತ್ರಖಂಡ ಸ್ತಂಭಗಳನ್ನೆ ಬಳಸುತ್ತಿದ್ದರು. ಸಾಮಾನ್ಯವಾಗಿ ಈ ಕಾಲದಲ್ಲಿ ನಿರ್ಮಾಣವಾಗುತ್ತಿದ್ದಂತಹ ಚಿತ್ರಖಂಡ ಸ್ತಂಭಗಳ ಅಲಂಕರಣವು ಹೆಚ್ಚೇನು ಪಂಥೀಯವಾಗಿರುತ್ತಿರಲಿಲ್ಲ. ಶೈವ, ವೈಷ್ಣವ, ಪಂಥದ ಶಿಲ್ಪಗಳೊಂದಿಗೆ ಹಲವಾರು ಕಥಾನಕ ಶಿಲ್ಪಗಳು ಪ್ರಾಣಿ, ಪಕ್ಷಿಗಳ ಶಿಲ್ಪಗಳನ್ನು ಕೆತ್ತುತ್ತಿದ್ದರು. ಸೋಮೇಶ್ವರ ದೇವಾಲಯದ ಚಿತ್ರಖಂಡ ಸ್ತಂಭಗಳು ವಸ್ತುವಿಷಯದಲ್ಲಿ ಇದೇ ರೀತಿಯಿದ್ದರೂ ನಿರೂಪಣೆಯಲ್ಲಿ ಪ್ರಾದೇಶಿಕ ಪ್ರಭಾವವನ್ನು ಕಾಣಬಹುದು. ಕೋಲಾರ ಜಿಲ್ಲೆಯ ಹಲವಾರು ಹೊಯ್ಸಳ ಮತ್ತು ವಿಜಯನಗರ ಕಾಲದ ದೇವಾಲಯಗಳ ಸ್ತಂಭಗಳು ನೊಳಂಬ ಸ್ತಂಭಗಳ ಕೆಲಸಗಾರಿಕೆಯನ್ನು ಹೊಂದಿರುತ್ತಿತ್ತು. ಇಂತಹ ಹಲವಾರು

ಉದಾಹರಣೆಗಳನ್ನು ಕುರುಡುಮಲೆಯ ಸೋಮೇಶ್ವರ ಮತ್ತು ಗಣೇಶ, ಮುಳಬಾಗಿಲ ಪ್ರಸನ್ನ ಸೋಮೇಶ್ವರ ಇತ್ಯಾದಿ ದೇವಾಲಯಗಳಲ್ಲಿ ಕಾಣಬಹುದು. ಈ ಸ್ತಂಭಗಳು ದಿಂಡಿನಲ್ಲಿ ಮೂರು ಚೌಕಾಕಾರದ ಭಾಗಗಳನ್ನು ಹೊಂದಿರುತ್ತವೆ. ಮಧ್ಯದ ಭಾಗಗಳು ಅಷ್ಟಾಶ್ರ ಅಥವ ಷೋಡಷಾಶ್ರವಾಗಿರುತ್ತದೆ. ಇದು ಸಾಮಾನ್ಯ ಚಿತ್ರಖಂಡ ಸ್ತಂಭದ ಲಕ್ಷಣವಾದರೆ ಇಲ್ಲಿ ಕಾಣಬರುವ ಸ್ತಂಭಗಳಲ್ಲಿ ಚೌಕಾಕಾರ ಭಾಗದ ತುದಿಗಳಲ್ಲಿ ಭಕ್ತರು, ಕುಳಿತಿರುವ ಸಿಂಹಗಳ, ಕುಬ್ಜರ ಶಿಲ್ಪಗಳನ್ನು ಕೆತ್ತಿರುವುದು ಗಮನಾರ್ಹ. ಈ ಲಕ್ಷಣವು ನೊಳಂಬರಿಂದ ಕಾಣಸಿಗುವ ಒಂದು ಅಂಶ (ಚಿತ್ರ 11–12). ವಿಶೇಷವೆಂದರೆ ಸ್ತಂಭದ ಬುಡಭಾಗದ ತುದಿಗಳಲ್ಲಿ ವಿಜಯನಗರ ಶೈಲಿಯ ಬಾಹ್ಯಪತ್ರಗಳ ಅಲಂಕರಣಗಳನ್ನು ಹೊಂದಿದ್ದು ಅವುಗಳ ಮೇಲೆ ಕುಳಿತಿರುವ ಸಿಂಹಗಳ ಅಲಂಕರಣವನ್ನು ಹೊಂದಿದೆ. ಇದು ಪ್ರಚಲಿತ ಮತ್ತು ಪ್ರಾದೇಶಿಕ ಶೈಲಿಗಳ ಸಂಮಿಶ್ರಣಕ್ಕೆ ಉತ್ತಮ ಉದಾಹರಣೆಯಾಗಿದೆ (ಚಿತ್ರ 13).

ಈ ದೇವಾಲಯದ ಮಹಾಮಂಟಪದಲ್ಲಿ ವಿಜಯನಗರ ಸಂಪ್ರದಾಯದಂತೆಯೆ ಅಂಚಿನಲ್ಲಿ ಸಂಯುಕ್ತ ಸ್ತಂಭಗಳನ್ನು ಮತ್ತು ಮಧ್ಯಭಾಗದಲ್ಲಿ ಚಿತ್ರಖಂಡ ಸ್ತಂಭಗಳನ್ನು ಬಳಸಲಾಗಿದೆ ಈ ಮಹಾಮಂಟಪವು ಎರಡು ಪಾರ್ಶ್ವಗಳಲ್ಲಿ ಎತ್ತರವಾದ ಒಂದಂಕಣದ ವೇದಿಕೆಯನ್ನು ಹೊಂದಿದ್ದು ಮಧ್ಯದಲ್ಲಿ ಸುಮಾರು ಮೂರು ಅಂಕಣದಷ್ಟು ವಿಸ್ತಾರವಾದ, ಸುತ್ತಲಿನ ಆವರಣಕ್ಕೆ ಸಮವಾಗಿರುವ ನೆಲವನ್ನು ಹೊಂದಿದೆ. ಈ ಮಂಟಪದ ತುದಿಗಳಲ್ಲಿ ಮೂರು ಉಪಸ್ತಂಭಗಳನ್ನು ಹೊಂದಿರುವ ಸಂಯುಕ್ತಸ್ತಂಭ ಅದರ ಪಕ್ಕದಲ್ಲಿ ಒಂದು ಉಪಸ್ತಂಭವನ್ನುಳ್ಳ ಸುಪ್ರತೀಕಾಂತ ಸ್ತಂಭ ಮತ್ತು ಇವುಗಳ ಮಧ್ಯ ನಾಲ್ಕು ಸಿಂಹಕಾಂತ ಸ್ತಂಭಗಳನ್ನು ಹೊಂದಿದೆ (ಚಿತ್ರ 14). ವೇದಿಕೆಯ ಒಳಭಾಗದ ಸ್ತಂಭಗಳು ಸುಪ್ರತೀಕಾಂತ ಸ್ತಂಭಗಳು ಇನ್ನು ಉಳಿದ ಸ್ತಂಭಗಳು ಚಿತ್ರಖಂಡ ವರ್ಗಕ್ಕೆ ಸೇರಿದವು ಈ ದೇವಾಲಯದ ಸ್ತಂಭಗಳ ಬಗ್ಗೆ ಪ್ರಸ್ತಾಪಿಸುವಾಗ ಪಾತಾಳಾಂಕಣದ ಸ್ತಂಭಗಳ ಕುರಿತು ಉಲ್ಲೇಖಿಸಬೇಕು. ಪಾತಾಳಾಂಕಣದ ಸ್ತಂಭಗಳು ಎತ್ತರವಾಗಿರುತ್ತದೆ ಎಂಬುದು ತಿಳಿದ ಸಂಗತಿಯೇ ಆಗಿದೆ. ಇಲ್ಲಿಯ ಪಾತಾಳಾಂಕಣದ ಸ್ತಂಭಗಳನ್ನು, ಶಿಲ್ಪಿಯು ಎತ್ತರಕ್ಕೆ ಅನುಗುಣವಾಗಿ ಎರಡು ಹಂತಗಳಲ್ಲಿ ವ್ಯಾಳಕಾಂತ ಸ್ತಂಭಗಳನ್ನು ರೂಪಿಸಿದ್ದಾನೆ. ಇಂತಹ ಸ್ತಂಭಗಳು ರಂಗಸ್ಥಳದ ದೇವಾಲಯದಲ್ಲಿ ಕಂಡುಬಂದರೂ ಇದರಲ್ಲಿ ಕಾಣುವಂತಹ ನೈಪುಣ್ಯ ಮತ್ತು ಪರಿಪಕ್ವತೆ ಅವುಗಳಲ್ಲಿ ಕಂಡುಬರುವುದಿಲ್ಲ. ಮೂಲೆಗಳ ಸ್ತಂಭಗಳು ಮೂರು ಮುಖಗಳಲ್ಲೂ ಎರಡು ಹಂತಗಳಲ್ಲಿ ವ್ಯಾಳಕಾಂತ ಸ್ತಂಭದ ಅಲಂಕರಣವನ್ನು ಹೊಂದಿದೆ (ಚಿತ್ರ 15). ಇಡೀ ದೇವಾಲಯದಲ್ಲಿಯೇ ಅತೀ ಅಲಂಕೃತವೂ ವಿಶೇಷವೂ ಆದ ಸ್ತಂಭಗಳನ್ನು ಈ ದೇವಾಲಯದ ಕಲ್ಯಾಣಮಂಟಪದಲ್ಲಿ ಕಾಣಬಹುದು. ಆದರೆ ಅವುಗಳ ವಿವರಣೆಯನ್ನು ಕಲ್ಯಾಣ ಮಂಟಪವನ್ನು ವಿವರಿಸುವಾಗ ನೀಡುವುದು ಸೂಕ್ತವಾದ ಕಾರಣ ಇಲ್ಲಿ ಚರ್ಚಿಸಲಾಗಿಲ್ಲ.

ಪ್ರಧಾನ ದೇವಾಲಯದ ದ್ವಾರಬಂಧವು ಮಹಾದ್ವಾರದ ದ್ವಾರಬಂಧ ಲಕ್ಷಣಗಳನ್ನು ಹೊಂದಿದೆ. ಈ ದ್ವಾರಬಂಧದ ಇಕ್ಕೆಲಗಳಲ್ಲೂ ಕುಂಭಪಂಜರಗಳನ್ನು ಕೆತ್ತಲಾಗಿದೆ. ದ್ವಾರಬಂಧದ ಹೊರಗಿನ ಶಾಖೆಯು ಪ್ರಧಾನವಾಗಿ ಮುಂಚಾಚಿದ್ದು ಭಾರವಾಹಕರ ಮತ್ತು ಕುಳಿತಿರುವ ಸಿಂಹಗಳ ಉಬ್ಬು ಶಿಲ್ಪಗಳಿಂದ ಅಲಂಕೃತವಾಗಿದೆ. ಒಳಗಿನ ಶಾಖೆಗಳು ಪದ್ಮಪತ್ರಗಳ ಅಲಂಕರಣಗಳನ್ನು ಹೊಂದಿದ್ದು ಲಲಾಟದಲ್ಲಿ ಗಜಲಕ್ಷ್ಮಿಯನ್ನು ಕಂಡರಿಸಲಾಗಿದೆ (ಚಿತ್ರ 16). ಅಮ್ಮನವರ ಗುಡಿಯ ದ್ವಾರಬಂಧವು ಸ್ವಲ್ಪ ವಿಭಿನ್ನ ರೀತಿಯಲ್ಲಿ ಅಲಂಕೃತವಾಗಿದೆ. ಇವುಗಳ ಪೇದ್ಯಗಳಲ್ಲಿ ದ್ವಾರ ದೇವತೆಗಳ ಅಥವ ನಿಧಿಗಳ ಬದಲಿಗೆ ಚಂಚುಲಕ್ಷ್ಮಿಯ ಶಿಲ್ಪಗಳನ್ನು ಕೆತ್ತಿರುವುದು ವಿಶೇಷ (ಚಿತ್ರ 17). ಈ ದ್ವಾರಬಂಧದ ಹೊರಗಿನ ಶಾಖೆಯು ವಿವಿಧ ಭಂಗಿಗಳಲ್ಲಿರುವ ಸಾಲಭಂಜಿಕೆಯರ, ಸ್ತ್ರೀಯರ ಉಬ್ಬುಶಿಲ್ಪಗಳನ್ನು ಕೆತ್ತಿರುವುದು ಕಾಣಬಹುದು. ಇಲ್ಲಿ ದ್ವಾರ ಶಾಖೆಯ ಮೆಲ್ತುದಿಯಲ್ಲಿ ಪುಷ್ಪಪೋತಿಕೆಯ ಉಬ್ಬುಶಿಲ್ಪವನ್ನು ಕಾಣಬಹುದು. ಇದು ಔಪಯೋಗಿಕ ಪೋತಿಕೆಯಾಗಿರದೆ ಕೇವಲ ಪ್ರತಿಬಿಂಬವಾಗಿದೆ. ಈ ದೇವಾಲಯದ ಪ್ರಣಾಳವು ಮಕರ ಮತ್ತು ಗಜಮುಖ ಪ್ರಣಾಳಗಳ ಸಂಮಿಶ್ರಣ ಸ್ವರೂಪವನ್ನು ಹೊಂದಿದೆ (ಚಿತ್ರ 18). ಪ್ರಣಾಳವು ಉಪಾನದ ಕೆಳಭಾಗದಿಂದ ಮುಂಚಾಚಿದ್ದು ದೇವಾಲಯದ ಆವರಣದ ನೆಲಕ್ಕೆ ಸಮಾನವಾಗಿದೆ. ಈ ಪ್ರಣಾಳಕ್ಕಾಗಿ ನಿರ್ಮಿಸಿರುವ ತೀರ್ಥಪಾತ್ರೆಯು ಆಧುನಿಕ ನಿರ್ಮಾಣ.

ಕರ್ನಾಟಕದಲ್ಲಿರುವ ವಿಜಯನಗರ ಕಾಲದ ಕಲ್ಯಾಣಮಂಟಪಗಳ ಪೈಕಿ ಉತ್ಕೃಷ್ಟ ಕಲ್ಯಾಣ ಮಂಟಪವೆಂದು ಗುರುತಿಸಬಹುದಾದ ಮಂಟಪಗಳಲ್ಲಿ ಈ ದೇವಾಲಯದ ಮಂಟಪವು ಒಂದು (ಚಿತ್ರ 19). ವಿಜಯವಿಠಲ, ಭೋಗನಂದೀಶ್ವರ ದೇವಾಲಯಗಳ ಕಲ್ಯಾಣ ಮಂಟಪದೊಂದಿಗೆ ಇದನ್ನು ಹೋಲಿಸಬಹುದು. ವಿನ್ಯಾಸದಲ್ಲಿ ಚತುರಶ್ರಾಕಾರದಲ್ಲಿರುವ ಈ ಕಲ್ಯಾಣ ಮಂಟಪವು ತ್ರಿವರ್ಗಗಳನ್ನು ಹೊಂದಿದೆ. ಸಾಲಂಕೃತ ಪದ್ಮಕೇಸರ ಅಧಿಷ್ಠಾನವನ್ನು ಹೊಂದಿದೆ. ಮಂಟಪದ ಸುತ್ತಲೂ ಅಂಚಿನಲ್ಲಿ ಹನ್ನೆರಡು ಸ್ತಂಭಗಳನ್ನು ಹೊಂದಿದೆ. ಇವುಗಳ ಪೈಕಿ ಮೂಲೆಗಳಲ್ಲಿರುವ ಸಂಯುಕ್ತ ಸ್ತಂಭಗಳು ದಿವ್ಯಾಂಗನೆಯರ ಮತ್ತು ದಿವ್ಯ ಪುರುಷರ ಶಿಲ್ಪಗಳನ್ನು ಹೊಂದಿವೆ. ಮಧ್ಯದಲ್ಲಿ ಮುಖಭಾಗಕ್ಕಿರುವ ಎರಡು ಸ್ತಂಭಗಳು ವ್ಯಾಳಕಾಂತ ಸ್ತಂಭಗಳು. ಸಂಮಿಶ್ರಿತ ಪ್ರಾಣಿಗಳ ಅವಯವಗಳನ್ನು ಹೊಂದಿದ್ದು ಸೊಂಡಿಲನ್ನು ಹಿಡಿದಂತೆ ಸ್ಪಷ್ಟವಾಗಿ ವ್ಯಾಳವನ್ನು ಕೆತ್ತಲಾಗಿದೆ. ಪಾರ್ಶ್ವಗಳು ಮತ್ತು ಹಿಂಭಾಗದ ಸ್ತಂಭಗಳು ಸಿಂಹಕಾಂತ ವರ್ಗಕ್ಕೆ ಸೇರುತ್ತದೆ. ವ್ಯಾಳಕಾಂತ ಸ್ತಂಭಕ್ಕೆ ಹೊಂದಿಕೊಂಡಂತೆ ಹಸ್ತಿಹಸ್ತಗಳನ್ನು ಅಧಿಷ್ಠಾನದಲ್ಲಿ ಸೇರಿಸಲಾಗಿದೆ. ಈ ಹಸ್ತಿಹಸ್ತಗಳು ಮಕರ ಹಸ್ತಿಹಸ್ತಗಳಾಗಿದ್ದು ಸೋಪಾನಗಳ ಮೂಲಕ ಕಲ್ಯಾಣ ಮಂಟಪಕ್ಕೆ ಪ್ರವೇಶವನ್ನು ಒದಗಿಸುತ್ತದೆ.

ಕಲ್ಯಾಣ ಮಂಟಪದ ಮಧ್ಯಭಾಗದಲ್ಲಿ ಕಪ್ಪುಕಣಶಿಲೆಯಿಂದ ನಿರ್ಮಿತವಾದ ಕಲ್ಯಾಣೋತ್ಸವ ಸೇವೆಯನ್ನು ನೆರವೇರಿಸಲು ನಿರ್ಮಿಸಲಾದ ಸಾಲಂಕೃತ ಮಂಟಪವಿರುವುದು (ಚಿತ್ರ 20). ಈ ಮಂಟಪದ ಪ್ರತಿ ಅಂಗದ ಅಲಂಕರಣ ಮತ್ತು ಸೂಕ್ಷ್ಮ ಕೆತ್ತನೆಗಳು ಹೊಯ್ಸಳರ ಕೆಲಸಗಾರಿಕೆಯನ್ನು ನೆನಪಿಗೆ ತರುತ್ತದೆ. ಚತುರಶ್ರಾಕಾರದ ಈ ಮಂಪಟವು ಶ್ರೀ ಭೋಗ ಅಧಿಷ್ಠಾನವನ್ನು ಹೊಂದಿದೆ (ಚಿತ್ರ 21). ಜಗತಿ, ಪದ್ಮಜಗತಿ, ಪಟ್ಟಿ, ಗಳ ಮತ್ತು ಕಪೋತಗಳನ್ನು ಹೊಂದಿರುವ ಈ ಅಧಿಷ್ಠಾನದ ಮುಖಭಾಗದಲ್ಲಿ ಷಡ್ವರ್ಗಗಳನ್ನುಳ್ಳ ಚಿಕಣಿ ವಿಮಾನಗಳ ಉಬ್ಬುಶಿಲ್ಪಗಳನ್ನು ಕಾಣಬಹುದು. ಅಧಿಷ್ಠಾನದ ತುದಿಗಳಲ್ಲಿ ಕಂಬಗಳ ಕೆಳಭಾಗಕ್ಕೆ ಭಾರವಾಹಕರನ್ನು ಕೆತ್ತಲಾಗಿದೆ. ಈ ಭಾಗದಲ್ಲಿ ಅಧಿಷ್ಠಾನವು ಮಹಾಪಟ್ಟಿಕೆಗೆ ಬದಲಾಗಿ ಕಪೋತವನ್ನು ಹೊಂದಿದೆ. ಈ ವೇದಿಕೆಯ ವಿನ್ಯಾಸ ಸೂತ್ರವು ಭದ್ರ ಮತ್ತು ಕರ್ಣಗಳನ್ನು ಹೋಲುವ ಮುಂಚಾಚುಗಳನ್ನು ಹೊಂದಿದೆ. ಅಧಿಷ್ಠಾನದ ಮೇಲ್ಮುಖದಲ್ಲಿ, ಅಂದರೆ ಮಂಟಪದ ನೆಲಕ್ಕೆ ಸಮತಲವಾದ ಭಾಗದಲ್ಲಿ ಪದ್ಮಪದಕಗಳನ್ನು ಕೆತ್ತಲಾಗಿದೆ (ಚಿತ್ರ 22). ಸ್ತಂಭಗಳು ಮಿಶ್ರ ಜಾತಿಯ ಸಂಯುಕ್ತ ಸ್ತಂಭಗಳಾಗಿದ್ದು ಉಪಸ್ತಂಭಕ್ಕೆ ಹೊಂದಿಕೊಂಡಂತೆ ವೇಣುಗೋಪಾಲ, ದೇವಿ, ಇತ್ಯಾದಿ ಮೂರ್ತಿ ಶಿಲ್ಪಗಳ ಕಂಡರಣೆಯನ್ನು ಹೊಂದಿದೆ. ಮೂರ್ತಿಶಿಲ್ಪಗಳು ಇರುವ ಭಾಗವು ವೇದಿಕೆಯ ಒಳಭಾಗಕ್ಕೆ ಚಾಚಿದ್ದು ದಿಂಡಿನ ಹೊರಮುಖಗಳಲ್ಲಿ ಅತ್ಯಲಂಕರಣವನ್ನು ಹೊಂದಿರುವ ಕುಂಭ ಪಂಜರಗಳಿವೆ. ಇದರ ಬುಡಭಾಗವು ಸಹ ಚಿಕಣಿ ವಿಮಾನಗಳನ್ನು ಅದರೊಳಗೆ ಭೈರವ, ವಿಷ್ಣು, ದೇವಿ ಮೊದಲಾದ ಉಬ್ಬುಶಿಲ್ಪಗಳನ್ನು ಹೊಂದಿದೆ. ಕುಂಭ ಪಂಜರದ ಕುಂಭಗಳು ಅಲುಗಿನಂತಹ ಅಲಂಕರಣವನ್ನು ಹೊಂದಿದ್ದು ಇದರ ಮೇಲಿನ ದಿಂಡು ವಲ್ಲಿಮಂಡಲಗಳಿಂದ ಕೂಡಿದೆ. ವಲ್ಲಿ ಮಂಡಲಗಳಲ್ಲಿ ವಿವಿಧ ರೀತಿಯಲ್ಲಿ ಕ್ರೀಡಿಸುತ್ತಿರುವ ಗಿಳಿಗಳನ್ನು ಕೆತ್ತಲಾಗಿದೆ ಕುಂಭಪಂಜರದ ಮೇಲಿನ ವಿಮಾನ ಮಾದರಿಗಳನ್ನು ಸ್ತಂಭದ ಪೋತಿಕೆಗಳ ಹೊರಮುಖಗಳಲ್ಲಿ ಕೆತ್ತಲಾಗಿದೆ. ಪೋತಿಕೆಗಳು ಸಹ ತೊಲೆಗಳ ಕೆಳಭಾಗಕ್ಕೆ ಮಾತ್ರ ಮುಂಚಾಚಿರುವ ಹಸ್ತಗಳನ್ನು ಹೊಂದಿವೆ. ಪುಷ್ಪ ಪೋತಿಕೆಗಳ ವರ್ಗಕ್ಕೆ ಸೇರುವ ಇದರ ಪುಷ್ಪಗಳು ಬಹಳ ವಿಸ್ತೃತ ಅಲಂಕರಣವನ್ನು ಹೊಂದಿದೆ. ಮೂರು ನಾಲ್ಕು ಹಂತಗಳ ತಾವರೆ ದಳಗಳ ಕೆಳಭಾಗದಲ್ಲಿ ಪದ್ಮಮುಕುಳಗಳನ್ನು ಕಾಣಬಹುದುದಾಗಿದೆ. ಇಲ್ಲಿಯ ವಿಮಾನದ ಮಾದರಿಯಲ್ಲೂ ದೇವತಾ ಪ್ರತಿಮೆಗಳನ್ನು ಕೆತ್ತಿರುವುದು ಕಾಣಬಹುದು (ಚಿತ್ರ 23–24).

ಈ ನಾಲ್ಕೂ ಸ್ತಂಭಗಳ ಮೇಲೂ ಉತ್ತರಗಳನ್ನು ನಿರ್ಮಿಸಲಾಗಿದೆ. ಈ ಉತ್ತರದ ತೊಲೆಗಳು ಸಹ ಹೇರಳವಾದ ಅಲಂಕರಣವನ್ನು ಕಾಣಬಹುದು ವಿವಿಧ ಭಂಗಿಗಳಲ್ಲಿ ಸಾಲಾಗಿ ಕುಳಿತಿರುವ ಕುಬ್ಜರ ಮತ್ತು ಭಾರವಾಹಕರ ಶಿಲ್ಪಗಳನ್ನು ಕೆತ್ತಲಾಗಿದೆ. ಇದರ ಮೇಲೆ ಬಾಹ್ಯ ಪತ್ರವನ್ನು ಕಾಣಬಹುದು. ಉತ್ತರಗಳ ಕೆಳಮುಖಗಳಲ್ಲಿ ಪುಷ್ಪಪದಕಗಳನ್ನು ಮತ್ತು ಇಕ್ಕೆಲಗಳಲ್ಲೂ ದಿಕ್ಪಾಲಕರನ್ನು, ದಿಕ್ಕಿಗೆ ಎರಡರಂತೆ ಕೆತ್ತಿರುವುದು ಕಾಣಬಹುದು (ಚಿತ್ರ 25). ಈ ಮಂಟಪಕ್ಕೆ ಎರಡೂ ಬಾಗುಗಳುಳ್ಳ (*S* ಆಕಾರದ) ಕಪೋತವನ್ನು ಯೋಜಿಸಲಾಗಿದೆ. ಕಪೋತದ ಕೆಳಮುಖವು ಮರದ ತೊಲೆಗಳ ಮತ್ತು

ಪಟ್ಟಿಕೆಗಳ ಅಲಂಕರಣವನ್ನು ಹೊಂದಿದ್ದು ಸೂಕ್ಷ್ಮತೆಗಳಿಂದ ಕೂಡಿದೆ. ಕಪೋತದ ಮೇಲ್ಭಾಗದ ವಾಜನವು ಕಲ್ಯಾಣ ಮಂಟಪದ ಮೇಲ್ಛಾವಣಿಯೊಂದಿಗೆ ಹೊಂದಿಕೊಂಡಿದೆ. ಇದರ ವಿತಾನವು ನಾಭಿಚ್ಛಂಧ ಪ್ರಕಾರವೇ ಆಗಿದ್ದರೂ, ಅಲಂಕರಣದಲ್ಲಿ ಹೊಯ್ಸಳರ ಭುವನೇಶ್ವರಿಯನ್ನು ಹೋಲುತ್ತದೆ (ಚಿತ್ರ 26). ಒಟ್ಟಾರೆ ಈ ಕಲ್ಯಾಣ ಮಂಟಪವು ಉತ್ತಮವಾದ ಕೆಲಸಗಾರಿಕೆಯ ಆಗರವಾಗಿದೆ.

ದೇವಾಲಯದ ಆವರಣದಲ್ಲಿ ಈ ಹಿಂದೆಯೇ ಹೇಳಿದಂತೆ ಈಶಾನ್ಯಕ್ಕೆ ಡೋಲೋತ್ಸವ ಮಂಟಪವಿದೆ (ಚಿತ್ರ 27). ಈ ಮಂಟಪವು ಸಹ ಎತ್ತರವಾದ ಪದ್ಮಕೇಸರ ಅಧಿಷ್ಠಾನದ ಮೇಲೆ ನಿರ್ಮಿತವಾಗಿದ್ದು ನಾಲ್ಕು ಚಿತ್ರಖಂಡ ಸ್ತಂಭಗಳಿಂದ ಕೂಡಿದೆ. ಇದರ ಮೇಲೆ ಎರಡು ಬಾಗುಗಳುಳ್ಳ ಕಪೋತವಿದ್ದು ವಾಜನದ ಮೇಲೆ ಗಾರೆಗಚ್ಚಿನಿಂದ ನಿರ್ಮಿತವಾದ, ನಂತರದ ಕಾಲಕ್ಕೆ ಸೇರಿದ್ದ ಕೈಪಿಡಿ ಗೋಡೆಯಿದೆ. ಈ ಮಂಟಪದ ವಿತಾನವು ಮೂರು ಚಪ್ಪಡಿ ಕಲ್ಲುಗಳನ್ನು ಜೋಡಿಸಿ ನಿರ್ಮಿಸಲಾಗಿದೆ. ಮಧ್ಯದಲ್ಲಿ ಪದ್ಮಶಿಲೆಯಿದ್ದು ಸುತ್ತಲೂ ಅಷ್ಟದಿಕ್ಪಾಲಕರನ್ನು ಕೆತ್ತಲಾಗಿದೆ. ಡೋಲೋತ್ಸವ ಮಂಟಪಕ್ಕೆ ಇಂತಹ ವಿತಾನ ಅಪರೂಪದ ನಿದರ್ಶನ ಮಧ್ಯದ ಪದ್ಮಶಿಲೆಯ ಎರಡೂ ಕಡೆಗಳಲ್ಲಿ ರಂಧ್ರಗಳಿವೆ. ಇವುಗಳು ಉಯ್ಯಾಲೆಯ ಸರಪಳಿಗಳನ್ನು ಸಿಕ್ಕಿಸಲು ಬಳಸಲಾಗುತ್ತಿದ್ದ ಕೊಂಡಿಗಳನ್ನು ಕೂಡಿಸುವ ಉದ್ದೇಶದಿಂದ ಮಾಡಲಾದವು (ಚಿತ್ರ 28).

ಪ್ರಧಾನ ದೇವಾಲಯದ ಮಾನ ಸೂತ್ರಕ್ಕೆ ಹೊಂದಿಕೊಂಡಂತೆ ಸಾಲಂಕೃತವಾದ ಬಲಿಪೀಠ ಮತ್ತು ಧ್ವಜಸ್ತಂಭಗಳನ್ನು ಕಾಣಬಹುದು. ಇವು ಸ್ವರೂಪದಲ್ಲಿ ಶ್ರೀಬಂಧ ಅಧಿಷ್ಠಾನವನ್ನು ಹೋಲುತ್ತದೆ. ಅಲ್ಲದೆ ದೊಡ್ಡ ಗಾತ್ರದ ಮತ್ತು ಮಧ್ಯಮ ಗಾತ್ರದ ಎರಡೂ ಬಲಿಪೀಠಗಳನ್ನು ಇಲ್ಲಿ ಕಾಣಬಹುದು. ದೊಡ್ಡದಾದ ಬಲಿಪೀಠದ ಮುಂಭಾಗದಲ್ಲಿ ಪ್ರತಿಭದ್ರ ಉಪಪೀಠದ ಮೇಲೆ ಧ್ವಜಸ್ತಂಭವಿದ್ದು ಇದರ ದಿಂಡು ವಿಷ್ಣುಕಾಂತ ಪ್ರಕಾರಕ್ಕೆ ಸೇರುತ್ತದೆ. (ಚಿತ್ರ 29).


ಈ ದೇವಾಲಯದ ಮಹಾದ್ವಾರವು ಪ್ರತಿಭದ್ರ ಉಪಪೀಠ ಶ್ರೀಬಂಧ ಅಧಿಷ್ಠಾನಗಳನ್ನು ಹೊಂದಿದೆ. ಉಪಪೀಠವು ಸಾಧಾರಣವಾದ ಅಲಂಕರಣವನ್ನು ಹೊಂದಿದ್ದರೂ ಅಧಿಷ್ಠಾನವು ಮಾತ್ರ ಶ್ರೀಬಂಧ ಎಂಬುದಕ್ಕೆ ಅನ್ವರ್ಥವಾಗಿ ಅಲಂಕೃತವಾಗಿವೆ. ಭಿತ್ತಿಯ ಸಲಿಲಾಂತರಗಳಲ್ಲಿ ಕುಂಭ ಪಂಜರಗಳನ್ನು ಮುಂಚಾಚಿನಲ್ಲಿ ಮೂರ್ತಿ ಶಿಲ್ಪಗಳನ್ನು ಕಾಣಬಹುದಾಗಿದೆ. ಕುಂಭ ಪಂಜರಗಳ ಇಕ್ಕೆಲಗಳಲ್ಲಿ ತುಂಬರು, ನಾರದರು, ಗೋವು, ಲಕ್ಷ್ಮೀ ಮೊದಲಾದ ಪ್ರತಿಮೆಗಳನ್ನು ಹೊಂದಿದೆ. ಈಶ್ವರನ ಲೀಲಾಮೂರ್ತಿಗಳಾದ ಕಂಕಾಳಮೂರ್ತಿ, ಚಂದ್ರಶೇಖರ ಮೂರ್ತಿ, ತ್ರಿಪುರ ಸಂಹಾರಮೂರ್ತಿ ಶಿಲ್ಪಗಳೊಂದಿಗೆ ಶ್ರೀ, ಭೂ ಸಮೇತ ನಾರಾಯಣ ಮೊದಲಾದವುಗಳನ್ನು ಕಾಣಬಹುದು ಈ ಮಹಾದ್ವಾರದ ದ್ವಾರದ ಬಂಧವು ಸಾಲಭಂಜಿಕೆಯರ ವಲ್ಲಿಮಂಡಲಗಳ ಸಿಂಹ ಕುಬ್ಜ ಮೊದಲಾದ ಉಬ್ಬುಶಿಲ್ಪಗಳ ಅಲಂಕರಣ ಹೊಂದಿದೆ. ಮಹಾದ್ವಾರದ ಒಳಗಿನ ಮಂಟಪದ ಸ್ತಂಭಗಳಲ್ಲಿ ಚಾಮರ ಧಾರಣಿಯರನ್ನು ಕೆತ್ತಲಾಗಿದೆ ಈ ಮಹಾದ್ವಾರದ ಮೇಲೆ ನಿರ್ಮಿತವಾಗಿರುವ ಗೋಪುರವು ಸಹ ಒಡೆಯರ ಕಾಲಕ್ಕೆ ಸೇರಿದ ವಾಸ್ತು ನಿರ್ಮಾಣ (ಚಿತ್ರ 30, 31, 32).

ಕೋಲಾರದ ಸೋಮೇಶ್ವರ ವಿಜಯನಗರ ಸಾಮ್ರಾಜ್ಯದ ಕಾಲವು ಉಚ್ಛ್ರಾಯ ಸ್ಥಿತಿಯಲ್ಲಿದ್ದ ಕಾಲದಲ್ಲಿ ನಿರ್ಮಾಣವಾದ ಒಂದು ಉತ್ತಮ ದೇವಾಲಯ. ತಲವಿನ್ಯಾಸದಲ್ಲಿ ಮತ್ತು ಏರುವಿನ್ಯಾಸದಲ್ಲಿ ಎಲ್ಲ ಪ್ರಮುಖ ಅಂಗಗಳನ್ನು ಹೊಂದಿದ್ದು ವಾಸ್ತುಶಿಲ್ಪ ವಿದ್ಯಾರ್ಥಿಗಳಿಗೂ ಸಂಶೋಧಕರಿಗೂ ಮಾಹಿತಿಯ ಆಗರವಾಗಿದೆ. ಅಲ್ಲದೆ 9–10ನೇ ಶತಮಾನಗಳಲ್ಲಿ ಪ್ರಚಲಿತವಿದ್ದ ವಾಸ್ತುಪದ್ಧತಿಯು ಸುಮಾರು ಐದು ಶತಮಾನಗಳ ನಂತರ ಪ್ರಯೋಗಕ್ಕೆ ಬಂದಿರುವುದು ವಿಶೇಷ. ಇದು ಪ್ರದೇಶದ ಪ್ರಭಾವದಿಂದಲೂ ಅಥವ ಶಿಲ್ಪಿಗಳ ನೈಪುಣ್ಯದಿಂದಲೂ ಉಂಟಾದ ಒಂದು ಸುಂದರ ಕೃತಿ.


(ಈ ಲೇಖನವನ್ನು ಸಿದ್ಧಪಡಿಸಲು ಕ್ಷೇತ್ರಕಾರ್ಯದಲ್ಲಿ ನೆರವಾದ ಎಸ್. ಪ್ರವೀಣ್ ಕುಮಾರವರಿಗೆ ಕೃತಜ್ಞತೆಗಳು)




ಚಿತ್ರ 1




ಚಿತ್ರ 2




ಚಿತ್ರ 3




ಚಿತ್ರ 4





ಚಿತ್ರ 5



ಚಿತ್ರ 6


ಚಿತ್ರ 7



ಚಿತ್ರ 8


ಚಿತ್ರ 9



ಚಿತ್ರ 10


ಚಿತ್ರ 11


ಚಿತ್ರ 12



ಚಿತ್ರ 13


ಚಿತ್ರ 14



ಚಿತ್ರ 15



ಚಿತ್ರ 16




ಚಿತ್ರ 17




ಚಿತ್ರ 18



ಚಿತ್ರ 19




ಚಿತ್ರ 20




ಚಿತ್ರ 21




ಚಿತ್ರ 22



ಚಿತ್ರ 23



ಚಿತ್ರ 24




ಚಿತ್ರ 25



ಚಿತ್ರ 26



ಚಿತ್ರ 27




ಚಿತ್ರ 28




ಚಿತ್ರ 29



ಚಿತ್ರ 30



ಚಿತ್ರ 31



ಚಿತ್ರ 32

16. ಆನೆಗೊಂದಿಯಲ್ಲಿಯ ವಿಜಯನಗರ ಕಾಲದ ಕಾರಾಗೃಹ

ಡಾ॥ ಶರಣಬಸಪ್ಪ ಕೋಲ್ಕಾರ

ವಿಜಯನಗರದ ಮಾತೃಸ್ಥಾನವಾಗಿರುವ ಆನೆಗೊಂದಿ ಶ್ರೀಮಂತ ಚಾರಿತ್ರಿಕ ಮತ್ತು ಸಾಂಸ್ಕೃತಿಕ ಪರಂಪರೆಯ ಸ್ಥಳವಾಗಿದೆ. ಏಳುಗುಡ್ಡಗಳ ಸಾಲಿನ ಪೂರ್ವದ ಸೆರಗಿನಲ್ಲಿ ತುಂಗಭದ್ರಾ ನದಿಯ ಎಡತೀರದ ಮೇಲೆ ಇರುವ ಆನೆಗೊಂದಿಗೆ ಸು. 5000 ವರ್ಷಗಳ ಇತಿಹಾಸವಿದೆ.[1] ನೂತನ ಶಿಲಾಯುಗದಿಂದ ಪ್ರಾರಂಭವಾಗುವ ಆನೆಗೊಂದಿಯ ಚರಿತ್ರೆ ಪ್ರಸ್ತುತದವರೆಗೂ ನಿರಂತರತೆಯಿಂದ ಸಾಗಿಬಂದಿದ್ದು, ಅದರ ವಿವಿಧ ಕಾಲಘಟ್ಟಗಳು ನಾಡಿನ ಚರಿತ್ರೆಯಲ್ಲಿ ಸ್ಮರಣೀಯ ಸಂದರ್ಭಗಳಾಗಿರುವುದು ಗಮನಾರ್ಹ ಸಂಗತಿಯಾಗಿದೆ.

ಪುರಾಣ ಕಾಲದ ಪಂಪಾಕ್ಷೇತ್ರವೆಂದೂ, ರಾಮಾಯಣ ಕಾಲದ ಕಿಷ್ಕಿಂದಾ[2] ರಾಜ್ಯವೆಂದು ಗುರುತಿಸಲ್ಪಟ್ಟಿರುವ ಆನೆಗೊಂದಿ ತತ್‌ಸಂಬಂಧದ ವಿಪುಲ ಐತಿಹ್ಯಗಳನ್ನು ಹೊಂದಿದ್ದು, ಅದರ ಆಧಾರದ ಮೇಲೆ ರೂಪಿತವಾದ ಸ್ಮಾರಕ, ಶಿಲ್ಪ ಶಾಸನಗಳು ಇಲ್ಲಿದ್ದು ಆ ಎಲ್ಲ ನಂಬಿಕೆಗಳ ಪ್ರಾಚೀನತೆಯನ್ನು ಸಾರುತ್ತಿವೆ.

ಮೌರ್ಯ, ಶಾತವಾಹನರಾಳ್ವಿಕೆಯ ಸಂದರ್ಭದಲ್ಲಿ ಅವರ ಪ್ರದೇಶದಲ್ಲಿ ಸಮಾವೇಶವಾಗಿದ್ದ ಆನೆಗೊಂದಿ ನಂತರದ ಕದಂಬ, ಬಾದಾಮಿ ಚಾಲುಕ್ಯ, ರಾಷ್ಟ್ರಕೂಟ, ಕಲ್ಯಾಣ ಚಾಲುಕ್ಯರ ಆಳ್ವಿಕೆಯನ್ನು ಕಂಡಿತು. ಕಾಕತೀಯ, ಹೊಯ್ಸಳರ ಆಳ್ವಿಕೆಗೂ ಸಾಕ್ಷಿಯಾದ ಆನೆಗೊಂದಿ ಕುಮ್ಮಟದರಸರ ಸಂದರ್ಭದಲ್ಲಿ ಪ್ರಮುಖ ಪಾತ್ರವನ್ನು ವಹಿಸಿತು. ಹೊಸಮಲೆದುರ್ಗ, ಕುಮ್ಮಟದುರ್ಗಗಳ ಚಾರಿತ್ರಿಕ ಮಹತ್ವ ಬೆಳಕಿಗೆ ಬರುವವರೆಗೂ ಕಂಪಲಿ ಮತ್ತು ಆನೆಗೊಂದಿಗಳೇ ಕಂಪಿಲರಾಯ ಮತ್ತು ಕುಮಾರರಾಮರ ರಾಜಧಾನಿಗಳೆಂದೇ ನಂಬಲಾಗಿತ್ತು. ಆದಾಗ್ಯೂ ಹದಿಮೂರನೆಯ ಮತ್ತು ಹದಿನಾಲ್ಕನೆಯ ಶತಮಾನದ ರಾಜಕೀಯ ಗೊಂದಲದ ಸಂದರ್ಭದಲ್ಲಿ ಆನೆಗೊಂದಿ ಕೇಂದ್ರಿತವಾದ ರಾಜಕೀಯ ಸ್ಥಿತ್ಯಂತರಗಳನ್ನು ಕಡೆಗಣಿಸುವಂತಿಲ್ಲ. ಅದರ ಪರಿಣಾಮವೇ 1336ರಲ್ಲಿ ಆನೆಗೊಂದಿಯಲ್ಲಿ ವಿಜಯನಗರ ಅಸ್ತಿಭಾರವನ್ನು ಕಂಡುಕೊಂಡದ್ದು.

ವಿಜಯನಗರದ ಆರಂಭಿಕ ದೊರೆಗಳಾದ ಹರಿಹರ, ಬುಕ್ಕರ ಕಾಲದವರೆಗೂ ಆನೆಗೊಂದಿ ವಿಜಯನಗರದ ರಾಜಧಾನಿಯಾಗಿತ್ತು. ರಾಜಕೀಯ ಕಾರಣಗಳಿಗಾಗಿ ರಾಜಧಾನಿ ಹಂಪಿ–ವಿಜಯನಗರ ಪಟ್ಟಣಕ್ಕೆ ವರ್ಗಾವಣೆಗೊಂಡ ನಂತರವೂ ಆನೆಗೊಂದಿಯ ಚಾರಿತ್ರಿಕ ಮಹತ್ವ ಕಡಿಮೆಯಾಗಲಿಲ್ಲ ಇದೊಂದು ಪ್ರಬಲ ಸೇನಾ ಠಾಣ್ಯವಾಗಿತ್ತಲ್ಲದೆ ವಿಜಯನಗರ ಸಾಮ್ರಾಜ್ಯದ ಅಧಿಕೃತ 'ಕಾರಾಗೃಹ'ವನ್ನು ಹೊಂದಿದ್ದು ಮಹತ್ವದ ಸಂಗತಿಯಾಗಿದೆ.

1565ರಲ್ಲಿ ವಿಜಯನಗರ ಪತನಾನಂತರ, ಅರವೀಡು ಅರಸರಾದ ತಿರುಮಲ ಮತ್ತು ವೆಂಕಟಾದ್ರಿ ಇವರು ಆಂಧ್ರ ಪ್ರದೇಶದ ಪೆನುಗೊಂಡ ಮತ್ತು ಚಂದ್ರಗಿರಿಗಳಿಗೆ ತೆರಳಿ ಕೆಲಕಾಲ ಆಡಳಿತ ನಡೆಸಿದರು. 79 ವರ್ಷಗಳ ತರುವಾಯ ಕ್ರಿ.ಶ. 1644 ರಲ್ಲಿ ಈ ವಂಶದ ಶ್ರೀರಂಗರಾಯನಿಗೆ ಆದಿಲ್‌ಷಾಹಿಗಳು ಆನೆಗೊಂದಿಯನ್ನು ಪುನಃ ವಹಿಸಿಕೊಡುತ್ತಾರೆ. ಶ್ರೀರಂಗರಾಯನ ತರುವಾಯ ಇಬ್ಬರು ರಾಣಿಯರು ಸಹಿತ ಆನೆಗೊಂದಿಯಲ್ಲಿ 17 ಅರಸರು ಆಡಳಿತ ನಡೆಸಿದರು. ಇದಕ್ಕೆ 'ಶ್ರೀ ಮದ್ರಾಜಾಧಿರಾಜ ಪರಮೇಶ್ವರ ಶ್ರೀ ವೀರಪ್ರತಾಪ ವೀರ ತಿರುಮಲ ವಿದ್ಯಾನಗರ ನರಪತಿ ಸಂಸ್ಥಾನ ಆನಾಗುಂದಿ' ಎಂದು ಹೆಸರು. ಈ ಸಂಸ್ಥಾನ ಅನೇಕ ರಾಜಕೀಯ

ಸ್ಥಿತ್ಯಂತರಗಳನ್ನು ಕಂಡು 1948ರವರೆಗೂ ಅಸ್ತಿತ್ವದಲ್ಲಿತ್ತು. ಹೀಗೆ ಸುಮಾರು 5000 ವರ್ಷಗಳಿಂದಲೂ ಎಡೆಬಿಡದ ರಾಜಕೀಯ ಚಟುವಟಿಕೆಯ ಕೇಂದ್ರವಾಗಿ ಆನೆಗೊಂದಿ ಕಂಡುಬರುತ್ತದೆ.[3]

ಸುದೀರ್ಘ ಅವಧಿಯ ರಾಜಕೀಯ ಪರಂಪರೆಗೆ ಸಾಕ್ಷಿಯಾಗಿ ಆನೆಗೊಂದಿಯಲ್ಲಿ ವಿವಿಧ ಕಾಲಘಟ್ಟಗಳ ಅನೇಕ ಕೋಟೆ ಸ್ಮಾರಕ, ಶಿಲ್ಪ ಶಾಸನಗಳು ಅಪಾರ ಸಂಖ್ಯೆಯಲ್ಲಿವೆ. ಇವುಗಳಲ್ಲಿ ಒಂದಾದ 'ಆನೆಸಾಲು, ಒಂಟೆ ಸಾಲು' ಎಂದು ಕರೆಯುವ ಕೋಟೆಯು ವಾಸ್ತವವಾಗಿ ವಿಜಯನಗರ ಕಾಲದ 'ಸೆರೆಮನೆ'ಯೇ ಎಂಬುದರ ಕುರಿತಾದ ವಿವೇಚನೆಯೇ ಈ ಪ್ರಬಂಧದ ಉದ್ದೇಶವಾಗಿದೆ.

ಆನೆಗೊಂದಿಯ ಕೋಟೆಗಳು

ಆನೆಗೊಂದಿಯಲ್ಲಿ ಒಟ್ಟು ನಾಲ್ಕು ಕೋಟೆಗಳಿವೆ. ಅವು: 1. ಊರ ಸುತ್ತಲಿನ ಕೋಟೆ, 2. ಚಿಂಚಲ ಕೋಟೆ, 3. ಬೆಟ್ಟದ ಮೇಲಿನ ಉತ್ತರ ಕೋಟೆ ಅಥವಾ ವಾಲಿಖಿಲ್ಲಾ, ಮತ್ತು 4. ಬೆಟ್ಟದ ಮೇಲಿನ ದಕ್ಷಿಣ ಕೋಟೆ. ಇವುಗಳಲ್ಲಿ ಅತ್ಯಂತ ಪ್ರಾಚೀನವಾದದ್ದು, ಚಿಂಚಲಕೋಟೆ. ಇದು ನವವೃಂದಾವನ ಗಡ್ಡೆಗೆ ಎದುರಾಗಿ ಕಡೆಬಾಗಿಲು ಗುಡ್ಡದ ದಕ್ಷಿಣದ ಕಣಿವೆಯಲ್ಲಿ ನದಿ ತೀರದ ಮೇಲೆ ಇದೆ. ಈ ಕೋಟೆಯೊಳಗೆ 12ನೇ ಶತಮಾನದ ಒಂದು ದೇವಾಲಯ, ಒಂದು ಶಾಸನ, ಒಂದು ವೀರಗಲ್ಲು, ಒಂದು ಬಾವಿಗಳಿವೆ. ಗಂಗಾವತಿ ತಾಲೂಕಿನ ಗುಂಡೂರು ಗ್ರಾಮದಲ್ಲಿನ ಕ್ರಿ.ಶ. 1411 ಮತ್ತು ಕ್ರಿ.ಶ. 1550ರ ಕಾಲದ ಶಿಲಾಶಾಸನಗಳು[4] ಈ ದೇವಾಲಯವನ್ನು ಚಿಂಚಲಕೋಟೆಯ ನಾಗನಾಥ ದೇವಾಲಯವೆಂದು ಉಲ್ಲೇಖಿಸಿವೆ. ದೇವಾಲಯದ ವಾಸ್ತುಶೈಲಿ, ಶಾಸನ ಹಾಗೂ ಕೋಟೆಯ ರಚನೆ ಇವುಗಳನ್ನು ಅನುಲಕ್ಷಿಸಿ ಇದೇ ಅತ್ಯಂತ ಪ್ರಾಚೀನ ಕೋಟೆ ಎಂದು ಹೇಳಬಹುದು. ಈ ಕೋಟೆಯ ಎಡಬದಿಯಲ್ಲಿ ನೈಸರ್ಗಿಕ ಕಲ್ಲುಗುಂಡುಗಳನ್ನು ಬಳಸಿ ಕಟ್ಟಿದ ಆವರಣ ಗೋಡೆಯೊಂದಿದೆ. ಇದನ್ನೂ ಚಿಂಚಲಕೋಟೆ ಎಂದೇ ಕರೆಯುತ್ತಾರೆ. ಇದು ರಚನಾಶೈಲಿಯಿಂದ ಕೂಡ ಮೊದಲ ಕೋಟೆಗಿಂತ ಇನ್ನೂ ಪ್ರಾಚೀನವೆಂದು ಹೇಳಬಹುದು.

ಎರಡನೆಯ ಕೋಟೆ ಊರ ಸುತ್ತಲಿನದು, ಪ್ರಸ್ತುತ ಆನೆಗೊಂದಿ ಗ್ರಾಮದ ಸುತ್ತಲೂ ಇದು ಕಂಡು ಬರುತ್ತದೆ. ಇದಕ್ಕೆ ಉತ್ತರದಲ್ಲಿ ಹೊನ್ನಗಸೆ, ದಕ್ಷಿಣದಲ್ಲಿ ಅಂಬಿಗರ ಬಾಗಿಲುಗಳಿವೆ. ಮೂರನೆಯದು ಬೆಟ್ಟದ ಮೇಲಿನ ಉತ್ತರ ಕೋಟೆ ಅಥವಾ ವಾಲಿಖಿಲ್ಲಾ ಆನೆಗೊಂದಿಯ ಪಶ್ಚಿಮಕ್ಕಿರುವ ಬೆಟ್ಟ ಸಾಲಿನಲ್ಲಿ ಉತ್ತರದ ಕಡೆ ಈ ಕೋಟೆ ಇದೆ. ಮೂರು ಪ್ರವೇಶದ್ವಾರಗಳು, ದುರ್ಗಾದೇವಿಗುಡಿ, ಕನ್ನೆರಮ್ಮನ ಬಾವಿ ಮತ್ತು ಆನೆಗೊಂದಿ ನರಪತಿ ಸಂಸ್ಥಾನದ ಅರಸರ ಸಮಾಧಿಗಳು, ಕೆಲವು ಕಟ್ಟಡಗಳು ಕೊತ್ತಳಗಳಿವೆ. ಉಳಿದ ನಾಲ್ಕನೆಯ ಕೋಟೆಯೇ 'ಆನೆ ಸಾಲು – ಒಂಟೆ ಸಾಲು' ಎಂದು ಸ್ಥಳೀಯರು ಹೇಳುವ ಪ್ರಸ್ತುತ ಬೆಟ್ಟದ ಮೇಲಿನ ದಕ್ಷಿಣ ಕೋಟೆ.

ಬೆಟ್ಟದ ಮೇಲಿನ ದಕ್ಷಿಣ ಕೋಟೆ

ಚಿಂಚಲಕೋಟೆಯನ್ನು ಹೊರತು ಪ್ರಸ್ತುತ ಕೋಟೆಸಹಿತ ಉಳಿದ ಮೂರು ಕೋಟೆಗಳ ಬಗೆಗೆ ಡಾ॥ ಸಿ.ಎಸ್. ಪಾಟೀಲರು ಸಂಕ್ಷಿಪ್ತವಾಗಿ ವಿವರಿಸಿದ್ದಾರೆ.[5] ಅದರಲ್ಲೂ ಬೆಟ್ಟದ ಮೇಲಿನ ಎರಡು ಕೋಟೆಗಳ ಬಗೆಗಿನ ಅವರ ವಿವರಣೆಯಲ್ಲಿ ಪರಸ್ಪರ ಎರಡು ಕೋಟೆಗಳ ಕೆಲವು ದ್ವಾರ, ಕಟ್ಟಡಗಳು ಅದರವು ಇದರಲ್ಲಿ, ಇದರವು ಅದರಲ್ಲಿ ಬೆರೆತಿವೆ. ಈ ಹಿನ್ನೆಲೆಯಲ್ಲಿ ನಾನು ಕ್ಷೇತ್ರಕಾರ್ಯಕೈಗೊಂಡು ವಿವರವಾಗಿ ಗಮನಿಸಿದಂತೆ ಪ್ರಸ್ತುತ ಕೋಟೆಯ ಸಮಗ್ರ ವಿವರಣೆ ಮತ್ತು ಅದು ವಿಜಯನಗರ ಕಾಲದ ಸೆರೆಮನೆಯಾಗಿದ್ದಿರಬಹುದಾದ ಸಾಧ್ಯತೆಯನ್ನು ಈ ಮುಂದಿನಂತೆ ಪರಿಶೀಲಿಸಬಹುದು.

ಸ್ಥಾನನಿರ್ದೇಶನ

ಪ್ರಸ್ತುತ ಕೋಟೆಯು ಪಶ್ಚಿಮ ಭಾಗದ ಬೆಟ್ಟ ಸಾಲಿನಲ್ಲಿ ಬೆಟ್ಟದ ಮೇಲೆ ದಕ್ಷಿಣ ಭಾಗದಲ್ಲಿದೆ. ಆನೆಗೊಂದಿ ಗ್ರಾಮದ ಮತ್ತು ಈ ಕೋಟೆಯ ಬೆಟ್ಟದ ಮಧ್ಯದಲ್ಲಿ ಒಂದು ಚಿಕ್ಕ ಸ್ವತಂತ್ರ ಬೆಟ್ಟವಿದೆ. ಇದರ ಮೇಲೆ ಒಂದು ಶಿಥಿಲ ದೇವಾಲಯವಿದೆ. ಮಧ್ಯದ ಈ ಬೆಟ್ಟ ಹಾಗೂ ಕೋಟೆಯಿರುವ ಬೆಟ್ಟದ ಮಧ್ಯದಲ್ಲಿ ಒಂದು ಕೆರೆ ಇದೆ. ಈ ಕೆರೆಯ ಏರಿಯ ಬದಿಯಲ್ಲಿ ಕಾಲುದಾರಿಯಿಂದ ಬೆಟ್ಟದ ಮೇಲಿನ ಕೋಟೆಗೆ ತೆರಳಬಹುದು.

ಪ್ರವೇಶ ಮಂಟಪಗಳು

ಬೆಟ್ಟದ ಮೇಲಿನ ಕೋಟೆಗೆ ಸಾಗುವ ಹಾದಿಯಲ್ಲಿ ಅಲ್ಲಲ್ಲಿ ಕಲ್ಲನ್ನು ಜೋಡಿಸಿ ರಸ್ತೆ ಮಾಡಲಾಗಿದೆ. ಅಲ್ಲಲ್ಲಿ ಕಿರಿದಾದ ಮೆಟ್ಟಿಲುಗಳು ಇವೆ. ಬಹುಮಟ್ಟಿಗೆ ಕಚ್ಚಾ ಹಾದಿ ಇದೆ. ಈ ದಾರಿ ಬಂಡೆ ಇಳಿಜಾರಿನಲ್ಲಿಯೇ ಮುಂದುವರೆದಿದೆ. ಸುಮಾರು 50 ಪೀಟ್ ಕ್ರಮಿಸಿದ ನಂತರ ಕೋಟೆಯ ಮೊದಲ ಪ್ರವೇಶ ಮಂಟಪ ಬರುತ್ತದೆ. ಪ್ರವೇಶ ಮಂಟಪದ ಬಲಬದಿಗೆ ಸುಮಾರು 60 ಮೀಟರ್ ಎಡಬದಿಗೆ ಸುಮಾರು 2 ಮೀಟರ್ ಉದ್ದವಾಗಿ ಗೋಡೆಯನ್ನು ಕಟ್ಟಲಾಗಿದೆ. ಬೆಟ್ಟಕ್ಕೆ ಅನುಗುಣವಾಗಿ ಕೋಟೆಯನ್ನು ಕಟ್ಟಿರುವುದರಿಂದ ಗೋಡೆ ಹಿಂದೆ-ಮುಂದೆಯಂತೆ 5 ಭಾಗದಲ್ಲಿದೆ. ಕೋಟೆಯ ಕೆಳಭಾಗದಲ್ಲಿ ಅಳತೆಯ ದೊಡ್ಡ ಕಲ್ಲುಗಳಿಂದ ಮೇಲ್ಭಾಗದಲ್ಲಿ ಚಿಕ್ಕ ಚಿಕ್ಕ ಕಲ್ಲುಗಳಿಂದ ಕಟ್ಟಲಾಗಿದೆ. ಈ ಗೋಡೆಯಲ್ಲಿ ಒಂದು ಚೌಕತಲದ ಮುಂಬದಿ ಕಟ್ಟೆಯ ಮೇಲೆ ವೃತ್ತಾಕಾರದ ಕೊತ್ತಳ (ಹುಡೆ) ಇದೆ. ಇದು ಕುಸಿದಿದ್ದು, ಒಳಭಾಗದಲ್ಲಿ ಕಂಬಗಳು ಗೋಚರಿಸುತ್ತವೆ.

ಮೊದಲ ಪ್ರವೇಶ ದ್ವಾರ ಮಂಟಪವು 4.86 ಮೀಟರ್ ಅಗಲ, 3 ಮೀ ಉದ್ದದ ವಿಸ್ತೀರ್ಣ ಹೊಂದಿದ್ದು, ಮುಂದೆ 4, ಹಿಂದೆ 4 ಒಟ್ಟು 8 ಕಂಬಗಳಿಂದ ಕೂಡಿದ 3 ಅಂಕಣದಲ್ಲಿದೆ. ಬಾಗಿಲು 2.22 ಮೀ ಎತ್ತರ, 1.17 ಮೀ ಅಗಲವಾಗಿದೆ.

ಬಾಗಿಲ ಇಕ್ಕೆಲಗಳಲ್ಲಿ ಅಂದರೆ ಪಟ್ಟಿಗಳಲ್ಲಿ ವೈಷ್ಣವ ದ್ವಾರಪಾಲರ ಶಿಲ್ಪಗಳಿವೆ. ಇವು ಚಿಕ್ಕ ಶಿಲ್ಪಗಳಾಗಿದ್ದು ಉತ್ತರ ಬದಿಯದು ಅಪೂರ್ಣಕೆತ್ತನೆಯಾಗಿದೆ. ಮಂಪಟದ ಮುಖಭಾಗ ಮುಚ್ಚಿದ್ದು, ಭಿತ್ತಿಯು ಗಾರೆ ಲೇಪನವನ್ನು ಹೊಂದಿದೆ. ಕಂಬಗಳ ಮೇಲೆ ಬೋದಿಗೆಗಳು ಭಿತ್ತಿಯಲ್ಲಿ ಗೋಚರಿಸುತ್ತಿವೆ. ಬೋದಿಗೆಯ ಮೇಲೆ ಅಂದರೆ ಪ್ರಸ್ತರದಲ್ಲಿ ಇಳಿಜಾರಾದ ಮುಂಜೂರು ಇದೆ. ಮೇಲೆ ಪ್ರಸ್ತರ ಭಾಗದಲ್ಲಿ ಎತ್ತರವಾದ ಗಾರೆಲೇಪನದ ಗೋಡೆ ಇದೆ. ಅದರ ತುದಿಯಲ್ಲಿ ಮೂರು ತೆನೆಗಳಿವೆ. ಸದ್ಯ ಎರಡು ಇದ್ದು, ಉತ್ತರ ಬದಿಯದ್ದು ನಾಶವಾಗಿದೆ.

ಮಂಟಪದ ಪ್ರವೇಶ ಹಾದಿ 1.62 ಮೀ ಅಗಲವಾಗಿದೆ. ಅದರ ಇಕ್ಕೆಲಗಳಲ್ಲಿ 1.14 ಮೀ ಎತ್ತರದ ಕಟ್ಟೆಗಳಿವೆ. ಪ್ರವೇಶ ಮಂಟಪದ ಮಧ್ಯದ ಭಿತ್ತಿನಲ್ಲಿ ನಾಗಸರ್ಪದ ಉಬ್ಬುಚಿತ್ರವಿದೆ. ಮಂಟಪದ ಹಿಂಬದಿ ಹೊರತು ಉಳಿದ ಕಡೆ ಮುಚ್ಚಿದ್ದು, ಗೋಡೆಗಳನ್ನು ಕಟ್ಟಲಾಗಿದೆ.

ಮೊದಲ ಪ್ರವೇಶಮಂಟಪದಿಂದ ಸುಮಾರು 10 ಮೀಟರ್ ಕ್ರಮಿಸಿದರೆ ಅಲ್ಲಿ ಇನ್ನೊಂದು ದ್ವಾರಮಂಟಪವಿದೆ. ಇದು ಕೂಡ ಎರಡು ಬದಿಯಲ್ಲಿ ನೈಸರ್ಗಿಕವಾದ ಬಂಡೆಗಳಿಂದ ಸುತ್ತುವರಿಯಲ್ಪಟ್ಟಿದೆ. ಇದು ಮೊದಲ ದ್ವಾರಮಂಟಪದಷ್ಟೇ ಅಳತೆಯಲ್ಲಿದ್ದರೂ, ಅದರಂತೆ ಆಕರ್ಷಕವಾಗಿಲ್ಲ. ಪ್ರತಿಸಾಲಿನಲ್ಲಿ 4 ರಂತೆ 3 ಸಾಲುಗಳಲ್ಲಿ 12 ಕಂಬಗಳನ್ನು ಹೊಂದಿದ್ದು, 6 ಅಂಕಣದ್ದಾಗಿದೆ. ಮಧ್ಯದ ಪ್ರವೇಶ ಹಾದಿ 2.40 ಮೀ ಅಗಲವಾಗಿದ್ದು ಅದರ ಎರಡು ಬದಿಗಳಲ್ಲಿ ಕಟ್ಟೆಗಳಿವೆ. ಸುತ್ತಲೂ ಕಂಬಗಳ ಮಧ್ಯ ನಿರ್ಮಿಸಿದ್ದ ಸಣ್ಣ, ಸಣ್ಣ ಕಲ್ಲುಗಳ ಗೋಡೆಗಳು ಬಹುಮಟ್ಟಿಗೆ ಹಾಳಾಗಿವೆ.

ಕೋಟೆಯ ಮೇಲ್ಭಾಗ

ಎರಡು ದ್ವಾರಮಂಟಪಗಳನ್ನು ದಾಟಿ ಬೆಟ್ಟದ ಮೇಲ್ಭಾಗಕ್ಕೆ ತೆರಳಿದಾಗ ಅಲ್ಲಿ ವಿಶಾಲವಾದ ಬಯಲು ಪ್ರದೇಶವಿದೆ. ಉತ್ತರ-ದಕ್ಷಿಣವಾಗಿ ಸುಮಾರು 300 ಮೀ. ಪೂರ್ವ-ಪಶ್ಚಿಮವಾಗಿ ಸುಮಾರು 150 ಮೀ. ವಿಶಾಲವಾದ ಪ್ರದೇಶವಿದ್ದು, ಈ ಪ್ರದೇಶಕ್ಕೆ ಮುಖಭಾಗದಲ್ಲಿ ಹೊರತು ಎಲ್ಲಾ ಕಡೆ ಎತ್ತರವಾದ ಬೆಟ್ಟವಿದೆ. ಹಾಗಾಗಿ ಇದು ಅತ್ಯಂತ ಗೌಪ್ಯವಾದ ಮತ್ತು ಸುಭದ್ರವಾದ ಕೋಟೆ ಎನ್ನಬಹುದು. ಈ ಕೋಟೆಯಲ್ಲಿ ನೂತನ ಶಿಲಾಯುಗದ ಮಡಕೆಚೂರುಗಳು ಮತ್ತು ಒಂದು ಕಲ್ಲಾಸರೆಯಲ್ಲಿ ಜಿಂಕೆ ಚಿತ್ರವಿದೆ. ಇದರಿಂದ ಇದು ಪ್ರಾಗಿತಿಹಾಸ ಕಾಲದಿಂದಲೂ ಮಾನವನ ವಾಸದ ನೆಲೆಯಾಗಿತ್ತೆಂದು ತಿಳಿದುಬರುತ್ತದೆ.

ಇಲ್ಲಿ ಉತ್ತರ ದಕ್ಷಿಣವಾಗಿರುವ ಒಂದು ಆಯತಾಕಾರದ ಕಂಬಗಳ ಕಟ್ಟಡ ಅದರ ಮುಂಭಾಗದಲ್ಲಿ ಮೂರು ವೃತ್ತಾಕಾರದ, ಒಂದು ಚೌಕಾಕಾರದ ಕಣಜಗಳಿವೆ. ವೃತ್ತಾಕಾರದ ಕಣಜಗಳು ಬಹುಮಟ್ಟಿಗೆ ನಾಶವಾಗಿದ್ದು ತಳಭಾಗ ಮಾತ್ರ ಉಳಿದಿವೆ. ಕೋಟೆಯ ಒಳಭಾಗದಲ್ಲಿ ಒಟ್ಟು ಐದು ಬುರುಜು ಅಥವಾ ಕೊತ್ತಳಗಳಿವೆ. ಮತ್ತು ನೈರುತ್ಯದ ಮೂಲೆಯಲ್ಲಿ ಬೆಟ್ಟದ ಹಿಂಬದಿಯಲ್ಲಿ ಹರಿಯುತ್ತಿರುವ ನದಿಗೆ ಸಾಗಲು ಹಾದಿ ಇದ್ದು, ಅದಕ್ಕೆ ಎರಡು ದ್ವಾರಮಂಟಪಗಳಿವೆ. ಕೆಳಗಿನ ದ್ವಾರಮಂಟಪದ ಎರಡು ಬದಿಗೆ ಕೋಟೆ ಗೋಡೆ ಕಟ್ಟಲ್ಪಟ್ಟಿದೆ. ಉಳಿದಂತೆ ಎರಡು ಚಿಕ್ಕ ಕೆರೆಗಳು ಒಂದು ನೈಸರ್ಗಿಕ ಬಾವಿ ಇವೆ. ಅಲ್ಲಲ್ಲಿ ಬಿಡಿಕಲ್ಲುಗಳಲ್ಲಿ ಅಥವಾ ಹುಟ್ಟುಬಂಡೆಗಳಲ್ಲಿ ಕೊರೆದ ಒರಳುಗಳಿವೆ. ಹೀಗಾಗಿ ಇಲ್ಲಿ ಜನ ವಾಸವಿತ್ತು ಎಂಬುದಾಗಿ ತಿಳಿದುಬರುತ್ತದೆ.

ಆಯತಾಕಾರದ ಬೃಹತ್ ಕಟ್ಟಡ

ಕೋಟೆಯ ಒಳಗಿರುವ ಅತ್ಯಂತ ಗಮನಾರ್ಹ ವಾಸ್ತುವೆಂದರೆ ಆಯತಾಕಾರದ ಬೃಹತ್ ಕಟ್ಟಡ. ಉತ್ತರ-ದಕ್ಷಿಣವಾಗಿ 65 ಮೀ. ಉದ್ದ ಪೂರ್ವ-ಪಶ್ಚಿಮವಾಗಿ 8.60 ಮೀ ಅಗಲವಾಗಿದ್ದು, ಆನೆಗೊಂದಿ ಪ್ರದೇಶದಲ್ಲಿಯೇ ಅತ್ಯಂತ ದೊಡ್ಡ ಕಟ್ಟಡವೆನಿಸಿದೆ. ಇದಕ್ಕೆ ಅಧಿಷ್ಠಾನವಿಲ್ಲ. ಪ್ರತಿ ಸಾಲಿನಲ್ಲಿ 24 ರಂತೆ 2 ಸಾಲಿನಲ್ಲಿ ಒಟ್ಟು 72 ಕಂಬಗಳನ್ನು ಇದು ಹೊಂದಿದ್ದು, 46 ಅಂಕಣಗಳಲ್ಲಿದೆ. ಮಧ್ಯದ ಕಂಬಗಳನ್ನು ಹೊರತು ಉಳಿದೆರಡು ಸಾಲು ಕಂಬಗಳ ನಡುವೆ ಸಣ್ಣ ಸಣ್ಣ ಕಲ್ಲುಗಳಿಂದ ಗೋಡೆಗಳನ್ನು ನಿರ್ಮಿಸಲಾಗಿದೆ. ಈ ಗೋಡೆ ಅಲ್ಲಲ್ಲಿ ಹಾಳಾಗಿದೆ. ಕಟ್ಟಡ ಒಳಭಾಗದಲ್ಲಿ 8.55 ಮೀ. ಅಗಲವಾಗಿದೆ. ಕಂಬಗಳ ಪಶ್ಚಿಮದ ಹಜಾರಕ್ಕಿಂತ (2.45 ಮೀ.) ಪೂರ್ವಬದಿಯ ಹಜಾರ (2.65 ಮೀ.) ಅಗಲವಿದೆ. ಪ್ರತಿ ಕಂಬದ ನಡುವೆ 1.85 ಮೀ. ಅಂತರವಿದೆ.

ಕಂಬಗಳು 50*x*48 ಮೀಟರ್ ದಪ್ಪವಿದ್ದು, ಏಕಶಿಲೆಯವಾಗಿದ್ದು ಚೌಕಾಕಾರದಲ್ಲಿವೆ. ಕಂಬಗಳು ಒರಟಾಗಿವೆ. ಉತ್ತರ ಬದಿಯ ಕೆಲವು ಕಂಬಗಳ ಕೆಳಗೆ ಪೀಠಗಳಿವೆ. ಕಂಬಗಳ ಮೇಲೆ ಒರಟಾದ ಬೋದಿಗೆಗಳು, ತೊಲೆಗಳಿವೆ. ಮಟ್ಟಸಗೊಳಿಸಿದ ಕಲ್ಲಿನ ಫಲಕಗಳಿಂದ ಛತ್ತನ್ನು ನಿರ್ಮಿಸಲಾಗಿದೆ. ಈ ಕಟ್ಟಡದ ಪಶ್ಚಿಮ ತುದಿಯಲ್ಲಿ 4 ಮತ್ತು 6ನೇ ಕಂಬಗಳ ನಡುವೆ ಅಡ್ಡಲಾಗಿ ಗೋಡೆ ನಿರ್ಮಿಸಿ ಎರಡು ಪ್ರತ್ಯೇಕ ಕೊಠಡಿಗಳನ್ನಾಗಿಸಲಾಗಿದೆ. ಈ ಕಟ್ಟಡವನ್ನು ದಕ್ಷಿಣದಲ್ಲಿ ವಿಸ್ತರಿಸುವ ಯೋಜನೆ ಅಪೂರ್ಣವಾಗಿದ್ದು, ತಳಪಾಯ, ಕೆಲ ಕಂಬಗಳು ಮಾತ್ರ ಗೋಚರಿಸುತ್ತವೆ.

ಈ ಕಟ್ಟಡದ ಪ್ರವೇಶಕ್ಕೆ ಪೂರ್ವ ಬದಿಯಲ್ಲಿ ಎರಡು ಕಡೆ ಪ್ರವೇಶಗಳಿವೆ. ಕಟ್ಟಡದೊಳಗೆ ಹೋಗಲು ಇರುವ ಪ್ರವೇಶಗಳು ಎತ್ತರದಲ್ಲಿವೆ. ಒಳಗೆ ಹೋಗಲು ಮೊದಲು ಹೊರಗಿನ ಮೆಟ್ಟಿಲುಗಳನ್ನು ಹತ್ತಿ ನಂತರ ಒಳಗಿನ ಮೆಟ್ಟಿಲುಗಳನ್ನು ಇಳಿಯಬೇಕು. ಕಟ್ಟಡದ ಮಾಳಿಗೆಗೆ ಹೋಗಲು ಎರಡು ಪ್ರವೇಶಗಳ ಮಧ್ಯ ಮೆಟ್ಟಿಲುಗಳಿವೆ. ಈ ರೀತಿಯ ಮೆಟ್ಟಿಲುಗಳಿರುವುದರಿಂದ ಇದು ಕಣಜವೆಂದು ಡಾ॥ ಸಿ.ಎಸ್. ಪಾಟೀಲರು ಅಭಿಪ್ರಾಯ ಪಟ್ಟಿದ್ದಾರೆ.[6]

ಕಣಜಗಳು

ಆಯತಾಕಾರದ ದೊಡ್ಡ ಕಟ್ಟಡದ ಮುಂಭಾಗದಲ್ಲಿ ಮೂರು ವೃತ್ತಾಕಾರದ ಒಂದು ಚೌಕಾಕಾರದ ಚಿಕ್ಕ ಕಣಜಗಳಿವೆ. ಇವು ಬಹಳಷ್ಟು ನಾಶವಾಗಿವೆ. ವೃತ್ತಾಕಾರದ ಕಣಜಗಳ ತಳಪಾಯ ಮಾತ್ರ ಉಳಿದಿವೆ. ಸಣ್ಣ ಸಣ್ಣ ಕಲ್ಲುಗಳಿಂದ ಇವನ್ನು ನಿರ್ಮಿಸಲಾಗಿದೆ. ಕೆಳಭಾಗದಲ್ಲಿ 2.30 ಮತ್ತು 1.90 ಮೀ. ವ್ಯಾಸದ ಇವು ಮೇಲೇರಿದಂತೆ ವ್ಯಾಸ ಕಡಿಮೆಯಾಗುತ್ತದೆ. ಪ್ರಾಯಶಃ ಇವುಗಳನ್ನು ಮುಚ್ಚಲು ಬಳಸುತ್ತಿದ್ದಿರಬಹುದಾದ ಕಲ್ಲಿನ 1.81 ಮೀ. ವ್ಯಾಸ 15 ಇಂಚು ದಪ್ಪದ ವೃತ್ತಾಕಾರದ ಫಲಕವೊಂದು ಕಟ್ಟಡದ ಹಿಂಭಾಗದಿಂದ ಅನತಿ ದೂರದಲ್ಲಿದೆ. ಚೌಕಕಣಜವು ಮೆಟ್ಟಿಲಿನಿಂದ ಹತ್ತಿ ಇಳಿಯುವಂತದ್ದು.

ಬುರುಜುಗಳು

ಕೋಟೆಯ ಒಳಭಾಗದಲ್ಲಿ ಒಟ್ಟು ಐದು ಬುರುಜು ಅಥವಾ ಬತೇರಿಗಳಿವೆ. ಮೊದಲ ಪ್ರವೇಶದ್ವಾರದ ಬದಿಯ ಗೋಡೆಯ ಮೇಲೆ, ಒಳಭಾಗದಲ್ಲಿ ಚೌಕ ಕಣಜದ ಹಿಂಭಾಗದಲ್ಲಿ ಮಧ್ಯದಲ್ಲಿ ಹಾಗೂ ದಕ್ಷಿಣ ಭಾಗದಲ್ಲಿ ಪೂರ್ವ ಬದಿಗೆ ಒಂದು ಮತ್ತು ತೀರ ದಕ್ಷಿಣ ತುದಿಗೆ ಒಟ್ಟು ಐದು ಕೊತ್ತಳಗಳಿವೆ. ಇವು ಒಳಭಾಗದಲ್ಲಿ ಕೊಠಡಿಯನ್ನು ಹೊಂದಿರುವುದು ವಿಶೇಷ. ಪ್ರಾಯಶಃ ಕಾವಲುಗಾರರ ವಾಸಕ್ಕೆ ಈ ರೀತಿ ಮಾಡಿರಬಹುದು. ಮೊದಲ ಕೊತ್ತಳದಲ್ಲಿ ಮಧ್ಯದಲ್ಲಿರುವ ಕಂಬವು ಎಂಟು ದಿಕ್ಕುಗಳಿಂದ ಬಂದ ತೊಲೆಗಳನ್ನು ಹೊತ್ತಿದೆ. ಈ ಬತೇರಿಗಳಲ್ಲಿ ಸುತ್ತಲೂ ಬಂದೂಕು ಕಿಂಡಿಗಳಿವೆ.

ಕೆರೆಗಳು

ಕೋಟೆಯ ಒಳಭಾಗದಲ್ಲಿ ಮಳೆನೀರಿನಿಂದ ಸಂಗ್ರಹಿತವಾಗುವ ಎರಡು ಕೆರೆಗಳಿವೆ. ಅವುಗಳಲ್ಲಿ ಸಾಕಷ್ಟು ನೀರು ಸಂಗ್ರಹವಿರುತ್ತದೆ. ವಾಯವ್ಯ ಭಾಗದಲ್ಲಿ ಬೆಟ್ಟಕ್ಕೆ ಹೊಂದಿಕೊಂಡಿರುವ ಒಂದು ಗುಂಡಿನ ಕೆಳಗೆ ದೊಡ್ಡ ನೈಸರ್ಗಿಕ ಬಾವಿ ಇದ್ದು, ಸದಾಕಾಲ ನೀರಿರುತ್ತದೆ. ಅಲ್ಲದೇ, ಬೆಟ್ಟದ ಕೆಳಭಾಗದಲ್ಲಿ ಪೂರ್ವಬದಿಗೆ ಬೆಟ್ಟಕ್ಕೆ ಹೊಂದಿಕೊಂಡು ಬೃಹತ್ ಕೆರೆ ಇದ್ದರೆ, ಪಶ್ಚಿಮ ಭಾಗದಲ್ಲಿ ತುಂಗಭದ್ರಾ ನದಿ ಹರಿದಿದೆ.

ನೈರುತ್ಯದ ದ್ವಾರ

ಈ ಕೋಟೆಗೆ ದಕ್ಷಿಣದಲ್ಲಿ ಹರಿಯುತ್ತಿರುವ ತುಂಗಭದ್ರಾ ನದಿಗೆ ತೆರಳಲು ನೈರುತ್ಯದಲ್ಲಿ ದಾರಿ ಇದೆ. ಇದಕ್ಕೆ ಎರಡು ಮಂಟಪಗಳಿವೆ. ಇವು ಬಾಗಿಲುರಹಿತ ತೆರೆದ ಮಂಟಪಗಳಾಗಿದ್ದು, 4x6 ಸಾಲಿನ 6 ಅಂಕಣಗಳಿವೆ. ಮೊದಲ ದ್ವಾರ ಮಂಟಪದ ಎರಡು ಬದಿಗೆ ಗೋಡೆ ಇದ್ದು, ಅರೆವೃತ್ತಾಕಾರದಲ್ಲಿದೆ. ಈ ದ್ವಾರದಿಂದ ಅನತಿದೂರದಲ್ಲಿ ಮತ್ತೊಂದು ಮಂಟಪವಿದೆ. ಅಲ್ಲಿಂದ ನೇರವಾಗಿ ನದಿಗೆ ತೆರಳಬಹುದು.

ಕಾಲ

ಕೋಟೆಯ ನಿರ್ಮಾಣ ತಾಂತ್ರಿಕತೆ ಮತ್ತು ಅದರಲ್ಲಿಯ ಕಟ್ಟಡಗಳ ಬೃಹತ್ ಗಾತ್ರವನ್ನು ಅನುಲಕ್ಷಿಸಿ ಪ್ರಸ್ತುತ ಕೋಟೆ ವಿಜಯನಗರ ಕಾಲದ ನಿರ್ಮಾಣವೆಂಬುದು ಅತ್ಯಂತ ಸ್ಪಷ್ಟ. ಅದರಲ್ಲೂ ವಿಶೇಷವಾಗಿ ಇದನ್ನು 15ನೇ ಶತಮಾನದಲ್ಲಿ ಕಟ್ಟಿಸಿರಬಹುದಾದ ಸಾಧ್ಯತೆ ಇದೆ. ಮೊದಲ ಮಂಟಪವು 17ನೇ ಶತಮಾನದ್ದೆಂದು ಪಾಟೀಲರು ಅಭಿಪ್ರಾಯಪಟ್ಟಿದ್ದಾರೆ.[7]

ಉದ್ದೇಶ

ಪ್ರಸ್ತುತ ಕೋಟೆ ಹಾಗೂ ಅದರೊಳಗಿನ ಕಟ್ಟಡಗಳನ್ನು ಅನುಲಕ್ಷಿಸಿ "ಈ ಕೋಟೆಯನ್ನು ನದಿಯ ಕಡೆಯಿಂದ ನಗರವನ್ನು ಪ್ರವೇಶಿಸುವವರ ಚಲನವಲನಗಳ ಮೇಲೆ ದೃಷ್ಟಿಯಿಡುವ ಉದ್ದೇಶದಿಂದ ಕಟ್ಟಿದೆ" ಎಂದು ಸಿ.ಎಸ್. ಪಾಟೀಲರವರು ಅಭಿಪ್ರಾಯ ಪಟ್ಟಿದ್ದಾರೆ.[8] ಮತ್ತು ಒಳಗಿನ ಬೃಹತ್ ಆಯತಾಕಾರದ ಕಟ್ಟಡವನ್ನು ಕಣಜವೆಂದು ಹೇಳಿದ್ದಾರೆ ಮತ್ತು ಸ್ಥಳೀಯವಾಗಿ ಜನತೆ ಈ ಕಟ್ಟಡಕ್ಕೆ 'ಆನೆಗಳನ್ನು-ಒಂಟೆಗಳನ್ನು' ಕಟ್ಟುತ್ತಿದ್ದ ಆನೆಸಾಲು ಒಂಟೆ ಸಾಲು ಎಂದು ಕರೆಯುತ್ತಾರೆ. ಆದರೆ ಬೆಟ್ಟದ ಮೇಲಿನ ಈ ಕೋಟೆಯ ರಚನೆ ಹಾಗೂ ಅದನ್ನು ತಲುಪಲು ಇರುವ ದಾರಿಯ ಇಕ್ಕಟ್ಟು, ಪ್ರವೇಶ ಮಂಟಪಗಳ ಅಳತೆ ಇವುಗಳನ್ನು ಅನುಲಕ್ಷಿಸಿದರೆ ಇಲ್ಲಿ ಆನೆಗಳನ್ನು ತೆಗೆದುಕೊಂಡು ಹೋಗಲು ಸಾಧ್ಯವೇ ಇಲ್ಲ. ಅಲ್ಲದೆ, ಆಯತಾಕಾರದ ಕಟ್ಟಡ ಸುತ್ತಲೂ ಗೋಡೆಗಳಿಂದ ಆವೃತವಾಗಿದ್ದು, ಮತ್ತು ಮೆಟ್ಟಿಲುಗಳಿಂದ ಇಳಿದು ಕಟ್ಟಡಕ್ಕೆ ಪ್ರವೇಶ ಮಾಡಬೇಕಾದ್ದರಿಂದ ಇದು ಖಂಡಿತ ಆನೆಲಾಯ ಅಥವಾ ಒಂಟೆಲಾಯವಲ್ಲವೆಂದು ಖಚಿತವಾಗಿ ಹೇಳಬಹುದು.

ಎರಡನೆಯದಾಗಿ ಸಿ.ಎಸ್. ಪಾಟೀಲರು ಗುರುತಿಸಿದಂತೆ ಇದು ಕಣಜದ ಸ್ವರೂಪದಲ್ಲಿದೆಯಾದರೂ, ಧಾನ್ಯಗಳ ವಿಲೇವಾರಿಗೆ ಸರಳವಲ್ಲದ ಈ ಸ್ಥಳದಲ್ಲಿ ಕಣಜ ನಿರ್ಮಿಸಿದ್ದಾರೆ ಎನ್ನುವುದು ಸಮಂಜಸವೆನಿಸಲಾರದು. ಹಾಗಾಗಿ ಕೋಟೆಯ ರಕ್ಷಣಾತ್ಮಕ ಸನ್ನಿವೇಶ, ಒಳಗಿನ ಕೊತ್ತಲಗಳು, ಚಿಕ್ಕ ಕಣಜಗಳು ಮತ್ತು ಬೃಹತ್ ಆಯತಾಕಾರದ ಕಟ್ಟಡ ಇವೆಲ್ಲವನ್ನು ಸೂಕ್ಷ್ಮವಾಗಿ ಅನುಲಕ್ಷಿಸಿ, ಇದು ವಿಜಯನಗರ ಸಾಮ್ರಾಜ್ಯದ ಸೆರೆಮನೆಯಾಗಿತ್ತು ಎಂದು ಗುರುತಿಸಬಹುದು. ಏಕೆಂದರೆ ಆನೆಗೊಂದಿಯಲ್ಲಿಯೇ ಸೆರೆಮನೆ ಇತ್ತು ಎಂಬುದು ಸ್ಪಷ್ಟವಾಗಿರುವ ಸಂಗತಿ. ಇಲ್ಲಿಯ ಸೆರೆಮನೆಯಲ್ಲಿಯೇ ಕೃಷ್ಣದೇವರಾಯನ ಮಗ ತಿರುಮಲನಿಗೆ ವಿಷಪ್ರಾಶನ ಮಾಡಿಸಿ ಹತ್ಯೆಗೈದ ಆರೋಪದಡಿ ಬಂದಿಸಿದ್ದ ಸಾಳ್ವತಿಮ್ಮ ಮತ್ತು ಅವನ ಮಗ ತಿಮ್ಮದಂಡನಾಯಕ ಹಾಗೂ ಗುಂಡರಾಜನನ್ನು ವಿಚಾರಣೆಗೆ ಒಳಪಡಿಸಿ ಅವರ ಕಣ್ಣುಗಳನ್ನು ಕಿತ್ತುಹಾಕಿ ಬಂಧಿಸಿಡಲಾಯಿತೆಂದು ತಿಳಿದುಬರುತ್ತದೆ. ಅದೇ ರೀತಿ ಯಲಹಂಕದ ನಾಡಪ್ರಭು ಕೆಂಪೆಗೌಡನು ಸ್ವತಂತ್ರವಾಗಿ ಆಳ್ವಿಕೆಯನ್ನು ಆರಂಭಿಸಿ ಭೈರವೇಶ್ವರ ನಾಣ್ಯಗಳನ್ನು ಹೊರಡಿಸಿದಾಗ ಅಳಿಯ ರಾಮರಾಯನು ಅವನನ್ನು ವಿಜಯನಗರಕ್ಕೆ ಕರೆಸಿ ಬಂಧಿಸಿ ಆನೆಗೊಂದಿ ಸೆರೆಮನೆಯಲ್ಲಿಡುತ್ತಾನೆ. ಕೆಂಪೆಗೌಡ ಐದು ವರ್ಷಗಳ ಕಾಲ ಸೆರೆಯಲ್ಲಿದ್ದು 1564 ರಲ್ಲಿ ಬಿಡುಗಡೆ ಹೊಂದಿದನು.[9]

ಈ ಘಟನೆಗಳಿಂದ ವಿಜಯನಗರದ ಅಧಿಕೃತ ಕಾರಾಗೃಹ ಆನೆಗೊಂದಿಯಲ್ಲಿತ್ತೆಂಬುದು ಖಚಿತವಾದ ಸಂಗತಿ. ಆದರೆ ಆನೆಗೊಂದಿಯಲ್ಲಿ ಈ ಕಾರಾಗೃಹ ಎಲ್ಲಿತ್ತು ಎಂಬುದು ಸ್ಪಷ್ಟವಿಲ್ಲ. ಪ್ರಸ್ತುತ ಆನೆಗೊಂದಿ ಗ್ರಾಮದಲ್ಲಿ ಸೆರೆಮನೆ ಎಂದು ಹೇಳುವ ಒಂದು ಕಟ್ಟಡವಿದೆ. ಆದರೆ ಅದರ ಕಟ್ಟಡದ ರಚನೆಯನ್ನು ಗಮನಿಸಿದರೆ ಅದು 17ನೇ ಶತಮಾನದ ಕಟ್ಟಡವೆಂಬುದು ಸ್ಪಷ್ಟವಾಗುತ್ತದೆ. ಹಾಗಾಗಿ ಅದು ಆನೆಗೊಂದಿ ನರಪತಿ ಸಂಸ್ಥಾನದ ಸೆರೆಮನೆಯಾಗಿರಬಹುದೆಂದು ಹೇಳಬಹುದು. ಈ ಹಿನ್ನೆಲೆಯಲ್ಲಿ ಮೇಲೆ ವಿವೇಚಿಸಿದಂತೆ ಎಲ್ಲ ಸಾಂದರ್ಭಿಕ

ಸಾಕ್ಷ್ಯಗಳನ್ನು ಅನುಲಕ್ಷಿಸಿ ಪ್ರಸ್ತುತ ಕೋಟೆ ಹಾಗೂ ಅದರೊಳಗಿನ ಆಯತಾಕಾರದ ದೊಡ್ಡ ಕಟ್ಟಡವೇ ವಿಜಯನಗರ ಕಾಲದ ಅಧಿಕೃತ ಸೆರೆಮನೆ ಎಂಬ ಅಭಿಪ್ರಾಯಕ್ಕೆ ಬರಬಹುದು.

ಆಕರಗಳು ಮತ್ತು ಟಿಪ್ಪಣಿಗಳು

1. ವಾಸುದೇವನ್ ಸಿ.ಎಸ್., 2011, 'ಭೌಗೋಳಿಕತೆ ಮತ್ತು ಪ್ರಾಗಿತಿಹಾಸ', *ಆನೆಗೊಂದಿ ಅವಲೋಕನ*, ಜಿಲ್ಲಾಡಳಿತ ಕೊಪ್ಪಳ.
2. ಸುಂದರ ಅ, 2011, 'ಪೌರಾಣಿಕ ಹಿನ್ನೆಲೆ', *ಆನೆಗೊಂದಿ ಅವಲೋಕನ*, ಕೊಪ್ಪಳ.
3. ಶರಣಬಸಪ್ಪ ಕೋಲ್ಕಾರ, 2008, *ಆನೆಗೊಂದಿ*, ಶ್ರೀ ಕೊತ್ತಲಬಸವೇಶ್ವರ ಭಾರತೀಯ ಶಿಕ್ಷಣ ಸಮಿತಿ, ಸೇಡಂ.
4. ದೇವರ ಕೊಂಡಾರೆಡ್ಡಿ, 1999, *ಕನ್ನಡ ವಿ.ವಿ. ಶಾಸನ ಸಂಪುಟ* 2, ಕೊಪ್ಪಳ ಜಿಲ್ಲೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
5. ಪಾಟೀಲ್‌ಸಿ.ಎಸ್., 1999, *ಕರ್ನಾಟಕದ ಕೋಟೆಗಳು*, ಸಂ. 1, ಕನ್ನಡ ವಿಶ್ವವಿದ್ಯಾಲಯ, ಹಂಪಿ.
6. ಪಾಟೀಲ್ ಸಿ.ಎಸ್. *ಪೂರ್ವೋಕ್ತ*
7. *ಅದೇ.*
8. *ಅದೇ.*
9. ಶರಣಬಸಪ್ಪ ಕೋಲ್ಕಾರ, *ಪೂರ್ವೋಕ್ತ.*

17. ವಿಜಯನಗರ ಕಾಲದ ರಕ್ಷಣಾ ವಾಸ್ತು ಶೈಲಿ

ಡಾ॥ ಎಸ್. ತಿಪ್ಪೇಸ್ವಾಮಿ

ವಿಜಯನಗರ ಕಾಲದ ರಕ್ಷಣವಾಸ್ತು ರಚನೆಗಳನ್ನು ಮತ್ತು ಅವುಗಳ ವಾಸ್ತುವೈಶಿಷ್ಟ್ಯತೆಯ ತಂತ್ರಗಳನ್ನು ಕುರಿತು ಪರಿಶೀಲಿಸಲಾಗಿದೆ. ಸೈನಿಕ ಕಾರ್ಯಾಚರಣೆಯ ದೃಷ್ಟಿಯಿಂದ ಆಯಕಟ್ಟಿನ ಸ್ಥಳಗಳಲ್ಲಿ ನಿರ್ಮಾಣಗೊಂಡ ಈ ಕೋಟೆಗಳ ರಚನೆ, ಉದ್ದೇಶ, ಪ್ರಾಮುಖ್ಯ ಮುಂತಾದ ವಿಷಯಗಳ ಬಗ್ಗೆ ಈಗಾಗಲೇ ಸಾಕಷ್ಟು ಸಂಶೋಧನೆಗಳು ನಡೆದಿವೆಯಲ್ಲದೆ ಅನೇಕ ಕೃತಿಗಳು ಹಾಗೂ ಲೇಖನಗಳು ಸಹ ಪ್ರಕಟಣೆಗೊಂಡಿವೆ. ಈ ಹಿನ್ನಲೆಯಲ್ಲಿ ಪ್ರಸ್ತುತ ಲೇಖನದಲ್ಲಿ ಮೇಲ್ಕಂಡ ವಿಷಯಗಳ ಬಗ್ಗೆ ಚರ್ಚಿಸದೇ ವಿಜಯನಗರ ಕಾಲದ ರಕ್ಷಣಾ ವಾಸ್ತುವಿನ ಸ್ವರೂಪದಲ್ಲಾದ ಬದಲಾವಣೆ ಮತ್ತು ನಿರ್ಮಾಣದ ತಂತ್ರಗಾರಿಕೆಯನಷ್ಟೇ ವಿಶ್ಲೇಷಿಸುವ ಪ್ರಯತ್ನ ಮಾಡಿದ್ದೇನೆ. ಕಾರಣ ಯುದ್ಧ ತಂತ್ರದೃಷ್ಟಿಯಿಂದ ನಿರ್ಮಿಸಿದ ಇಂತಹ ಅಪರೂಪದ ಸ್ಮಾರಕಗಳು ರಕ್ಷಣಾ ವಾಸ್ತು ರಚನೆಯಲ್ಲಿ ನಿರ್ವಹಿಸುತಿದ್ದ ಪಾತ್ರವೇನೆಂಬುದನ್ನು ತಿಳಿಯುವದು ಅತ್ಯಂತ ಅವಶ್ಯವಾಗಿದೆ.

ವಾಸ್ತವವಾಗಿ ಇಲ್ಲಿ ರಕ್ಷಣೆ ಎಂಬುದು ಕೋಟೆಯಾಗಿದೆ. ಕೋಟೆ ಮುಖ್ಯವಾಗಿ ರಾಜ್ಯ ಮತ್ತು ರಾಜನಿಗೆ ರಕ್ಷಣೆ ಒದಗಿಸುವ ಸ್ಥಳ. ಇಂತಹ ರಕ್ಷಣಾ ಸ್ಮಾರಕಗಳು ಅಂದಿನ ವೈಭವದ ಬದುಕಿಗೆ ಹಿಡಿದ ಕನ್ನಡಿಗಳಾಗಿವೆ. ಆ ಪರಿಸರದ ಬದುಕು, ಸಾಂಸ್ಕೃತಿಕ ವಿಚಾರ, ಆಳ್ವಿಕೆಯ ಸಾಮರ್ಥ್ಯ, ಮತ್ತಿತರೆ ವಿಚಾರಗಳ ಮೇಲೆ ಹೊಸ ಬೆಳಕನ್ನು ಚೆಲ್ಲುತ್ತವೆ. ವಿಶೇಷವಾಗಿ ವಿಜಯನಗರದ ಕಾಲಘಟ್ಟದಲ್ಲಿ ನಿರ್ಮಾಣವಾದ ರಕ್ಷಣಾ ವಾಸ್ತುರಚನೆಯ ವಿನ್ಯಾಸ ಮತ್ತು ತಂತ್ರಗಾರಿಕೆಗಳನ್ನು ಸೂಕ್ಷ್ಮವಾಗಿ ಗಮನಿಸಿದಾಗ, ನಮಗೆ ಮುಖ್ಯವಾಗಿ ಎರಡು ಅಂಶಗಳು ಕಂಡುಬರುತ್ತವೆ. ಮೊದಲನೆಯದಾಗಿ, ವಿಜಯನಗರದ ಅರಸರುಗಳು ಕೇವಲ ಯುದ್ಧಗಳನ್ನಷ್ಟೇ ಗಮನದಲ್ಲಿಟ್ಟುಕೊಂಡು ಕೋಟೆಗಳನ್ನು ನಿರ್ಮಾಣಮಾಡದೇ ಸಾಮಾಜಿಕ ಹಾಗು ಸಾಂಸ್ಕೃತಿಕ ಬದುಕಿನ ಸುರಕ್ಷತೆಯ ದೃಷ್ಟಿಯಿಂದಲೂ ಕೋಟೆಗಳನ್ನು ನಿರ್ಮಾಣ ಮಾಡಿರುವುದು; ಎರಡನೆಯದಾಗಿ, ಸ್ಥಳೀಯ ಹಾಗೂ ಪರಕೀಯರ ದಾಳಿಗಳನ್ನು ಎದುರಿಸಲು ಇವರು ಕೋಟೆಗಳನ್ನು ನಿರ್ಮಿಸುತ್ತಿದ್ದಿರುವುದು ಇಲ್ಲಿ ಸ್ಪಷ್ಟವಾಗುತ್ತದೆ. ವಿಜಯನಗರ ಸಾಮ್ರಾಜ್ಯ ಸ್ಥಾಪನೆಯ ಹಿಂದಿನ ಉದ್ದೇಶ ನಮ್ಮ ಸಾಂಸ್ಕೃತಿಕ ಪರಂಪರೆಯ ರಕ್ಷಣೆಯು ಆಗಿತ್ತೆಂಬುದು ಈಗಾಗಲೇ ದೃಢಪಟ್ಟ ಅಂಶವಾಗಿದೆ. ಹೀಗಾಗಿ ಪರಕೀಯರ ದಾಳಿಗಳನ್ನು ಎದುರಿಸಲು ತಮ್ಮ ರಕ್ಷಣಾ ವ್ಯವಸ್ಥೆಯನ್ನು ಆಧುನೀಕರಣಗೊಳಿಸುವುದು ಇವರಿಗೆ ಅನಿವಾರ್ಯವಾಗಿತ್ತು. ಈ ಅನಿವಾರ್ಯತೆಯ ಫಲವಾಗಿ ಮೂಡಿಬಂದ ವಿಶಿಷ್ಟವಾದ ರಕ್ಷಣಾ ವ್ಯವಸ್ಥೆಯೇ "ವಿಜಯನಗರ ರಕ್ಷಣಾ ವಾಸ್ತು ಶೈಲಿ".

ವಿಜಯನಗರ ಕಾಲದ ರಕ್ಷಣಾ ವಾಸ್ತು ರಚನೆಯು ಕರ್ನಾಟಕದ ಕೋಟೆಗಳ ಇತಿಹಾಸದಲ್ಲಿ ಉದಯೋನ್ಮುಖ ಯುಗವೆಂದೇ ಪರಿಗಣಿಸಲಾಗುವುದು. ಇದರರ್ಥ ಇವರಿಗಿಂತ ಪೂರ್ವದಲ್ಲಿ ಕೋಟೆಗಳ ನಿರ್ಮಾಣವಾಗುತ್ತಿರಲಿಲ್ಲವೆಂದಲ್ಲ. ಪೂರ್ವದಲ್ಲಿ ಸಾಂಪ್ರದಾಯಿಕವಾಗಿ ತುಂಡುಗೋಡೆಗಳಿಂದ ರಕ್ಷಣೆಗಾಗಿ ನಿರ್ಮಾಣವಾಗುತ್ತಿದ್ದ ಕೋಟೆಗಳು ಹೆಚ್ಚು ಔಪಯೋಗಿಕವಾಗಿ ಇರುತ್ತಿದ್ದವಲ್ಲದೆ, ಹೆಚ್ಚು ಸ್ಥಳೀಯ ದಾಳಿಗಳನ್ನು, ಇಲ್ಲವೆ ಕಾಡುಮೃಗಗಳಿಂದ ಅಥವ ತುರುಗಳ್ಳರಿಂದ ರಕ್ಷಣೆ ಪಡೆಯಲು ನಿರ್ಮಿತವಾದ ರಚನೆಗಳಾಗಿದ್ದವೆನ್ನಬಹುದು. ಆದರೆ ಇವರ ಕಾಲದಲ್ಲಿ ಈ ಕ್ಷೇತ್ರವು ಹಲವು ಹೊಸತುಗಳನ್ನು ಕಂಡಿತು. ಅಧಿಷ್ಠಾನದಿಂದ ಕೋಟೆಯ ಕೊನೆಯ ಭಾಗದವರೆಗೂ ಭಾರೀ ಗಾತ್ರದ ಕಲ್ಲುಗಳನ್ನು ಬಳಸಿ ಯೋಜನಾಬದ್ಧವಾಗಿ ಕೋಟೆಗಳನ್ನು ನಿರ್ಮಿಸುವುದು ಈ ಕಾಲದಲ್ಲಿ ಉಪಕ್ರಮಿಸಿತು. ವಿಶೇಷವಾಗಿ ರಕ್ಷಣಾ ವಾಸ್ತು ರಚನೆ ಮತ್ತು ಶಸ್ತ್ರಾಸ್ತ್ರಗಳ ಬಳಕೆಯಲ್ಲಿ ವಿನೂತನ ಪ್ರಯೋಗಗಳನ್ನು ಅಳವಡಿಸಿಕೊಳ್ಳಲಾಯಿತು. ಒಂದರ್ಥದಲ್ಲಿ ಅವರ ರಕ್ಷಣಾ ವಾಸ್ತು ಪ್ರಯೋಗಗಳ ಶಾಲೆಯಾಯಿತೆನ್ನಬಹುದು. ಅಂದು ಬಳಕೆಯಲ್ಲಿದ್ದ ಬಿಲ್ಲು, ಬಾಣ, ಕತ್ತಿ ಗುರಾಣಿಗಳ

ಸ್ಥಾನವನ್ನು ಕ್ರಮೇಣವಾಗಿ ಬಂದೂಕು, ಸಿಡಿಮದ್ದು ಮತ್ತು ಫಿರಂಗಿಗಳು ಸ್ಥಾನವನ್ನು ಪಡೆದವು. ಇಂತಹ ಅತ್ಯಾಧುನಿಕ ಶಸ್ತ್ರಾಸ್ತ್ರಗಳಿಗಾಗಿಯೇ ಕೋಟೆಗಳ ವಾಸ್ತುರಚನೆಯನ್ನೇ ಬದಲಾಯಿಸಲಾಯಿತು. ಈಗಾಗಲೇ ರಚನೆಯಾಗಿದ್ದ ಕೋಟೆಗಳನ್ನು ಮುರಿದು ಹೊಸದಾಗಿ ರಚಿಸಲಾಯಿತು. ಆ ಮೂಲಕ ಬಂದೂಕು ಮತ್ತು ಫಿರಂಗಿಗಳಿಗೆ ಜಗ್ಗದಂತಹ ಕೋಟೆ-ಕೊತ್ತಲುಗಳನ್ನು ನಿರ್ಮಾಣಮಾಡಬೇಕಾಯಿತು. ಹೀಗೆ ಪರಕೀಯರ ದಾಳಿಗಳಿಂದ ರಾಜ್ಯ ರಕ್ಷಣೆಯನ್ನು ಮಾಡುವ ಮೂಲಕ, ಕರ್ನಾಟಕದ ರಕ್ಷಣಾ ವಾಸ್ತುಶಿಲ್ಪ ಕ್ಷೇತ್ರದಲ್ಲಿ ಕ್ರಾಂತಿಕಾರಿ ಬದಲಾವಣೆ ಮಾಡಿದವರು ವಿಜಯನಗರ ಅರಸರು.

ಇಲ್ಲಿಯವರೆಗೆ ಕೇವಲ ಸಾಂಪ್ರದಾಯಿಕವಾಗಿದ್ದ ರಕ್ಷಣಾ ವಾಸ್ತುಶಿಲ್ಪದ ರಚನೆಯು ಇವರ ಅವಧಿಯಲ್ಲಿ ತುಂಬಾ ತಾಂತ್ರಿಕತೆಯನ್ನು ಪಡೆಯಿತಲ್ಲದೆ, ಇದೊಂದು ಪ್ರತಿಷ್ಠೆಯ ಕಲೆಯಾಗಿ ಮಾರ್ಪಟ್ಟಿತು. ಇವರ ಅವಧಿಯಲ್ಲಿ ದೇವಾಲಯ ವಾಸ್ತುಶಿಲ್ಪವು ಹೇಗೆ ವಿಜಯನಗರ ಶೈಲಿಯೆಂದು ಪ್ರತ್ಯೇಕವಾಗಿ ಗುರುತಿಸಿಕೊಂಡಿತೊ, ಹಾಗೆಯೇ ರಕ್ಷಣಾ ವಾಸ್ತು ರಚನಾ ಶೈಲಿಯಲ್ಲಿಯೂ ಪ್ರತ್ಯೇಕತೆಯನ್ನು ಗುರುತಿಸಿಕೊಳ್ಳುವ ಹಂತಕ್ಕೆ ಬೆಳೆಯಿತು. ಇದಕ್ಕೆ ಪ್ರಮುಖ ಕಾರಣ ಬದಲಾದ ಯುದ್ಧತಂತ್ರ. ವಿಶೇಷವಾಗಿ ಪೋರ್ಚುಗೀಸರು ಮತ್ತು ಮುಸ್ಲೀಮರು ನಮ್ಮ ದೇಶದಲ್ಲಿ ಪ್ರಯೋಗಿಸಿದ ಹೊಸ ಹೊಸ ಶಸ್ತ್ರಾಸ್ತ್ರಗಳು ಮತ್ತು ಯುದ್ಧನೀತಿಗಳು. ಈ ಹಿನ್ನೆಲೆಯಲ್ಲಿ ವಿಜಯನಗರ ಅರಸರು ತಮ್ಮ ರಕ್ಷಣಾ ವ್ಯವಸ್ಥೆಯನ್ನೇ ಮಾರ್ಪಡಿಸಿಕೊಂಡರು. ಅಂದಿನ ಯುದ್ಧತಂತ್ರಗಳಿಗುಣವಾಗಿಯೇ ಕೋಟೆ-ಕೊತ್ತಲುಗಳನ್ನು ನಿರ್ಮಿಸತೊಡಗಿದರು. ಇವರ ದುರ್ಗಶಿಲ್ಪ ಅಥವಾ ಕೋಟೆಯನ್ನು ಕಟ್ಟುಕಲೆಯು ನಮ್ಮ ನಾಡಿನ ಸಾಂಸ್ಕೃತಿಕ ಹಿರಿಮೆಗಳಲ್ಲೊಂದಾಯಿತು. ಈ ರಚನಾತ್ಮಕ ಕಲೆಯನ್ನು ಅವರು ಕೇವಲ ತಮ್ಮ ರಾಜಧಾನಿಗೆ ಸೀಮಿತಗೊಳಿಸದೆ ಸಾಮ್ರಾಜ್ಯದಾದ್ಯಂತ ವಿಸ್ತರಿಸಿದ್ದು ಅತ್ಯಂತ ಗಮನಾರ್ಹ ಅಂಶ. ಆ ಮೂಲಕ ಕಲೆಯ ಜೊತೆಯಲ್ಲಿಯೇ ರಕ್ಷಣಾ ವಾಸ್ತುಶಿಲ್ಪ ಕ್ಷೇತ್ರಕ್ಕೆ ತಮ್ಮದೇ ಆದ ಕಾಣಿಕೆಯನ್ನು ನೀಡುವ ಮೂಲಕ ಪ್ರಸಿದ್ಧಿಗೆ ಕಾರಣರಾಗಿದ್ದಾರೆ. ಈ ರಕ್ಷಣಾ ವಾಸ್ತುಶಿಲ್ಪ ಬೆಳವಣಿಗೆಯನ್ನು ಇತಿಹಾಸದಲ್ಲಿ, ವಿಶೇಷವಾಗಿ ಕರ್ನಾಟಕ ರಕ್ಷಣಾ ವಾಸ್ತು ರಚನೆಯಲ್ಲಿ "ವಿಜಯನಗರ ರಕ್ಷಣಾ ವಾಸ್ತುಶೈಲಿ" ಎಂದು ಪ್ರತ್ಯೇಕವಾಗಿ ಈ ಮುಂದಿನ ಲಕ್ಷಣಗಳಿಂದ ಗುರುತಿಸಬಹುದು.

ವಿಜಯನಗರ ರಕ್ಷಣಾ ವಾಸ್ತುಶೈಲಿಯ ಪ್ರಮುಖ ಲಕ್ಷಣಗಳು

1) ಕೋಟೆಯ ಗೋಡೆ, ಬಾಗಿಲು, ಕೊತ್ತಲು, ಗೋಪುರ, ಬುರುಜುಗಳನ್ನು ಗಾತ್ರ ಮತ್ತು ವಿಸ್ತಾರದಲ್ಲಿ ವ್ಯಾಪಕವಾಗಿ ಹೆಚ್ಚಿಸಿರುವುದು.

2) ರಾಜಧಾನಿಯ ಸುತ್ತ ಭದ್ರವಾದ ಕೋಟೆಯ ಅನೇಕ ಸುತ್ತುಗಳ ನಿರ್ಮಾಣ.

3) ಕೋಟೆ ಗೋಡೆಗೆ ಭಾರಿ ಗಾತ್ರದ ಬೆಣೆಯಾಕಾರದ ಕಲ್ಲುಗಳ ಬಳಕೆ.

4) ಕೋಟೆ ಗೋಡೆಯ ಭದ್ರತೆಗಾಗಿ ಅಲ್ಲಲ್ಲಿ ಚೌಕಾಕಾರದ, ವೃತ್ತಾಕಾರದ ಕೊತ್ತಲುಗಳ ನಿರ್ಮಾಣ.

5) ಬೆಟ್ಟ-ಗುಡ್ಡಗಳು, ತಗ್ಗು-ದಿನ್ನೆಗಳ ಮಧ್ಯ ಸಂಪರ್ಕ ಸಾಧಿಸಲು "ವೀಕ್ಷಣಾ ಗೋಪುರ"ಗಳ ನಿರ್ಮಾಣ.

6) ಕೋಟೆಗೋಡೆಯ ಗಾತ್ರ ಮತ್ತು ವಿಸ್ತಾರಕ್ಕೆ ತಕ್ಕಂತೆ ಹೆಬ್ಬಾಗಿಲು ಹಾಗು ದಿಡ್ಡಿ ಬಾಗಿಲುಗಳ ರಚನೆ.

7) ಕೋಟೆಗೋಡೆ, ಬುರುಜು-ಬತೇರಿಗಳಲ್ಲಿ ವಿವಿಧ ವಿನ್ಯಾಸದಲ್ಲಿ ವ್ಯಾಪಕವಾಗಿ ಬಂದೂಕು ರಂಧ್ರಗಳ ರಚನೆ.

8) ಬುರುಜು ಬತೇರಿಗಳ ಮೇಲೆ ಫಿರಂಗಿ ಗೂಡುಗಳ ಸ್ಥಾಪನೆ.

9) ಗೋಡೆಗಳ ಸುತ್ತಲೂ ವಿಸ್ತಾರವಾದ ಕಂದಕಗಳ ನಿರ್ಮಾಣ.

10) ಸಾಮ್ರಾಜ್ಯಾದಾದ್ಯಂತ ಇದ್ದ ಆಡಳಿತ ಕೇಂದ್ರಗಳ ಸುತ್ತಲೂ ರಕ್ಷಣಾ ಗೋಡೆಗಳು.

11) ದೇವಾಲಯ ಹಾಗೂ ವಸತಿ ಪ್ರದೇಶದ ಸುತ್ತ ಪೌಳಿ ಗೋಡೆಯ ನಿರ್ಮಾಣ.


12) ಕೋಟೆಯ ಒಳಗಿನಿಂದ ಹೊರಗಿನ ದೃಶ್ಯಗಳನ್ನು ನೋಡಲು ಸಹಾಯಕವಾಗುವಂತೆ ರಚಿಸಕೊಂಡ ವಿವಿಧ ಬಗೆಯ ವೀಕ್ಷಣಾರಂಧ್ರಗಳು.

13) ನೂತನವಾಗಿ ಕೋಟೆ ಗೋಡೆಗೆ ವಪ್ರ, ಅಟ್ಟಾಲಕ ಮತ್ತಿತರೆ ಅಂಗ ಭಾಗಗಳ ಸೇರ್ಪಡೆ.

14) ಗುಪ್ತಮಾರ್ಗ, ಸುರಂಗಮಾರ್ಗಗಳ ರಚನೆ.

ಮೇಲ್ಕಂಡ ಲಕ್ಷಣಗಳನ್ನೊಳಗೊಂಡಂತೆ ವಿಜಯನಗರ ಅರಸರು ನಿರ್ಮಿಸಿದ ಕೋಟೆಗಳು ಕೇವಲ ರಾಜಕೀಯ, ಸೈನಿಕ ಕೇಂದ್ರಗಳಾಗಿರದೆ, ಸಾಂಸ್ಕೃತಿಕ ಕೇಂದ್ರಗಳಾಗಿದ್ದವೆಂದು ಹೇಳಬಹುದು. ಕೋಟೆಯೊಳಗೆ ಹಬ್ಬ ಹರಿದಿನಗಳು, ಉತ್ಸವಗಳು, ಕ್ರೀಡಾಕೂಟಗಳು ನಡೆಯುತ್ತಿದ್ದವು. ಕೋಟೆಯೊಳಗೆ ಬೀದಿಗಳು, ಬಜಾರುಗಳು, ಗುಡಿ-ಕೈಗಾರಿಕೆಗಳು ಅಸ್ತಿತ್ವದಲ್ಲಿದ್ದವು. ಒಟ್ಟಾರೆ ಇವರು ರಚಿಸಿದ ಕೋಟೆಗಳು ರಕ್ಷಣೆಯ ಪ್ರತಿರೂಪವಾಗಿದ್ದರೂ, ನಾಗರಿಕರ ಬದುಕಿನ ಜೀವನಾಡಿಗಳಾಗಿದ್ದವು. ಅಧ್ಯಯನ ದೃಷ್ಟಿಯಿಂದ ಇವರ ರಕ್ಷಣಾ ವಾಸ್ತುಶಿಲ್ಪವನ್ನು ಈ ಕೆಳಕಂಡಂತೆ ವಿಭಾಗಗಳಾಗಿ ಮಾಡಬಹುದು.

ವಿಜಯನಗರ ರಕ್ಷಣಾ ವಾಸ್ತು ಶಿಲ್ಪ ಶೈಲಿ



1. ಪೌರ ವಾಸ್ತುಶಿಲ್ಪ (Citizen Architecture)

ಕೋಟೆ ಪ್ರದೇಶದಲ್ಲಿ ಕೇಂದ್ರೀಕೃತವಾದ ರಾಜಭವನಗಳು, ಸೈನಿಕ ಭವನಗಳು, ಮನೋರಂಜನಾ ಭವನಗಳು, ಸಾರ್ವಜನಿಕ ಭವನಗಳಲ್ಲದೆ ಸರ್ಕಾರಿ ಕಟ್ಟಡಗಳು, ಬಾವಿಗಳು, ಹೊಂಡಗಳು, ಇತ್ಯಾದಿ ರಚನೆಗಳು ಪೌರವಾಸ್ತುಶಿಲ್ಪದ ರಚನೆಗಳಾಗಿವೆ. ರಕ್ಷಣಾತ್ಮಕವಾದ ಈ ಪ್ರದೇಶದಲ್ಲಿ ಶಿಲ್ಪಶಾಸ್ತ್ರವು ಸಹ ಮೇಲ್ಕಂಡ ಅಂಶಗಳನ್ನೇ ಹೇಳುತ್ತದೆ. ಸಾಮಾನ್ಯವಾಗಿ ಜನಭವನಗಳು ಹೊರಕೋಟೆಯಲ್ಲಿರುತ್ತವೆ. ಇವರಿಗಾಗಿ ಪ್ರತ್ಯೇಕ ಬಾವಿ, ರಸ್ತೆ, ಕೆರೆ, ಜಲಾಶಯಗಳಿರುತ್ತವೆ. ರಾಜಮನೆತನದವರಿಗಾಗಿ ಪ್ರತ್ಯೇಕವಾದ ಭವ್ಯ ಅರಮನೆಗಳನ್ನು ನಿರ್ಮಿಸಲಾಗುತ್ತಿತ್ತು. ಪ್ರಜಾ ರಕ್ಷಣೆಯ ಏಳು ಅಂಗಗಳಲ್ಲಿ ಒಂದಾದ ಸೇನೆಯ ವಸತಿ ನೆಲೆಗಳು ಸಹ ದುರ್ಗದಷ್ಟೇ ಪ್ರಾಮುಖ್ಯ ಪಡೆದುಕೊಂಡಿವೆ. ಸೈನಿಕರು ಕೋಟೆಯ ಸೂಕ್ಷ್ಮ ಪ್ರದೇಶವನ್ನು ದಿನವಿಡಿ ಕಾಯಬೇಕಾಗಿರುತ್ತದೆ. ಹಾಗಾಗಿಯೇ ಇವರಿಗೆ ಪ್ರತ್ಯೇಕವಾದ ಚಾವಡಿ, ಮಂಟಪ, ಮನೆಗಳನ್ನು

ನಿರ್ಮಿಸಿಕೊಡಲಾಗುತ್ತಿತ್ತು. ಇಂತಹ ವಸತಿ ಪ್ರದೇಶಗಳಿಗೆ ನೇರವಾದ ರಸ್ತೆಗಳಾಗಲಿ, ದಾರಿಗಳಾಗಲಿ ಇರುತ್ತಿರಲಿಲ್ಲ. ಸಾಮಾನ್ಯವಾಗಿ ಇವು ದುರ್ಗಮ ಪ್ರದೇಶದಲ್ಲಿರುವುದನ್ನು ನಾವು ಸೂಕ್ಷ್ಮವಾಗಿ ಗಮನಿಸಬಹುದು.

2. ಮಿಲಿಟರಿ ವಾಸ್ತುಶಿಲ್ಪ (Defence Architecture)

ಈ ಹಿಂದೆ ಚರ್ಚಿಸಿದಂತೆ ರಕ್ಷಣಾ ವಾಸ್ತು ಎಂಬುದು ಕೋಟೆಯಾಗಿದೆ. ಕೋಟೆಯನ್ನು ಕಟ್ಟು ಕಲೆಯು ನಮ್ಮ ನಾಡಿನ ಸಾಂಸ್ಕೃತಿಕ ಹಿರಿಮೆಗಳಲ್ಲೊಂದು. ಕೋಟೆ ನಿರ್ಮಿಸುವುದು ಮನುಕುಲದ ಒಂದು ಪ್ರಾಚೀನ ಕಲೆಯಾಗಿದೆ. ಈ ನಿರ್ಮಾಣ ಕಾರ್ಯವು ಕಾಲದಿಂದ ಕಾಲಕ್ಕೆ ಬದಲಾಗುತ್ತಾ ರಚನೆ ಮತ್ತು ಗಾತ್ರದಲ್ಲಿ ಬೆಳವಣಿಗೆಯಾಗುತ್ತಾ ವಿಕಾಸನಗೊಂಡು ಪ್ರಾದೇಶಿಕ ಕೋಟೆಗಳ ನಿರ್ಮಾಣದವರೆಗೆ ಸಾಗುತ್ತಾ ಬಂದಿರುವುದನ್ನು ಇಲ್ಲಿ ಗುರುತಿಸಬಹುದಾಗಿದೆ.

ಸಾಮಾನ್ಯವಾಗಿ ವಿಜಯನಗರ ಸಾಮ್ರಾಜ್ಯವು ಸದಾ ನೆರೆಹೊರೆಯ ರಾಜ್ಯಗಳೊಂದಿಗೆ ಯುದ್ಧದಲ್ಲಿ ತೊಡಗಿರುತ್ತಿದ್ದ ಮಿಲಿಟರಿ ಆಡಳಿತವನ್ನು ಹೊಂದಿತ್ತು. ಆಡಳಿತದ ಸಮಗ್ರತೆಯನ್ನು ಕಾಪಾಡಿಕೊಳ್ಳಲು ಎಲ್ಲಾ ರೀತಿಯಿಂದಲೂ ಸಜ್ಜಾಗ ತೊಡಗಿತು. ಈ ನಿಟ್ಟಿನಲ್ಲಿ ಸೈನ್ಯವನ್ನು ಕಟ್ಟುವುದು, ಕೋಟೆಗಳನ್ನು ನಿರ್ಮಿಸುವುದು ಅವರ ಪ್ರಧಾನ ಅಂಶಗಳಲ್ಲಿ ಮುಖ್ಯವಾದವು. ಇಡೀ ದಕ್ಷಿಣ ಭಾರತದಲ್ಲಿ ಏಕಚಕ್ರಾಧಿಪತ್ಯದ ಆಡಳಿತವನ್ನು ಸ್ಥಾಪಿಸಿದ್ಧ ವಿಜಯನಗರ ಅರಸರಿಗೆ ಬೃಹತ್ ಸೈನ್ಯವನ್ನು ಕಟ್ಟುವುದು, ನಿಯಂತ್ರಿಸುವುದು ರಾಜನೊಬ್ಬನಿಗೆ ಸಾಧ್ಯವಿರಲಿಲ್ಲ. ಈ ಸಲುವಾಗಿಯೇ ವಿಜಯನಗರ ಅರಸರು ಅಧಿಕಾರವನ್ನು ವಿಕೇಂದ್ರೀಕರಿಸಿದರು. ಈ ವಿಕೇಂದ್ರೀಕರಣ ಆಡಳಿತದ ವಿಶಿಷ್ಟ ವ್ಯವಸ್ಥೆಯೇ 'ಅಮರನಾಯಕ' ಅಥವ 'ನಾಯಂದರ ಪದ್ಧತಿ'. ಇಂತಹ ಅಧಿಕಾರ ಪಡೆದವರು ವಿಜಯನಗರ ಅರಸರಿಗೆ ಸಾಮಂತರಾಗಿರುತ್ತಿದ್ದರು. ಈ ಪದ್ಧತಿಯ ಮೂಲಕ ಅಮರನಾಯಕರಿಗೆ ತಮ್ಮ ಪ್ರದೇಶದಲ್ಲಿ ಕೋಟೆಗಳನ್ನು ಕಟ್ಟಲು ಹಾಗೂ ಸೇನೆಯನ್ನು ಇಟ್ಟುಕೊಳ್ಳಲು ಅವಕಾಶನೀಡಲಾಗಿತ್ತು. ಈ ಹಿನ್ನೆಲೆಯಲ್ಲಿ ಅವರ ಎಲ್ಲಾ ಆಡಳಿತ ವಿಭಾಗಗಳಲ್ಲಿ ರಕ್ಷಣಾ ವಾಸ್ತು ರಚನೆಗಳು ನಿರ್ಮಾಣವಾದವು. ಸ್ಥಳೀಯವಾಗಿ ದೊರಕುತ್ತಿದ್ದ ಸಂಪನ್ಮೂಲಗಳನ್ನು ಬಳಸಿಕೊಂಡು ನಿರ್ಮಾಣ ಮಾಡಿರುವ ಈ ರಚನೆಗಳು ವಿವಿಧ ರೂಪಗಳನ್ನು ಪಡೆದುಕೊಂಡವು. ಇವುಗಳಲ್ಲಿ ಮುಖ್ಯವಾಗಿ ಗಿರಿದುರ್ಗ, ಸ್ಥಲದುರ್ಗ, ಗ್ರಾಮದುರ್ಗ, ಕಾವಲುದುರ್ಗಗಳು (ಬತೇರಿ ಅಥವ ವೀಕ್ಷಣಾ ಗೋಪುರಗಳು) ನಿರ್ಮಾಣಗೊಂಡವು. ಈ ಎಲ್ಲಾ ರಕ್ಷಣಾ ವಾಸ್ತು ರಚನೆಗಳಿಂದ ಇಡೀ ಸಾಮ್ರಾಜ್ಯವು ಒಂದು ರೀತಿ ಆಧುನಿಕ ಸಂಪರ್ಕಜಾಲದಂತೆ ರೂಪಗೊಂಡಿದ್ದು ಗಮನಾರ್ಹ. ಇಂದಿಗೂ ಇಂತಹ ರಚನೆಗಳನ್ನು ನಾವು ಅನೇಕ ಕಡೆಗಳಲ್ಲಿ ಕಾಣಬಹುದು.

3. ಕಾವಲುಗೋಪುರಗಳು (ವೀಕ್ಷಣಾ ಗೋಪುರ) (Observation Towers)

ಶತ್ರುಗಳನ್ನು ದೂರದಿಂದಲೇ ವೀಕ್ಷಿಸಿ ಅಪಾಯದ ಸಂಕೇತಗಳನ್ನು ರಾಜನಿಗೆ ತಲುಪಿಸಲು ಮಾಡಿಕೊಂಡ ವ್ಯವಸ್ಥೆಗಳೇ ಕಾವಲುಗೋಪುರಗಳು. ವೃತ್ತಾಕಾರವಾಗಿ ಇಲ್ಲವೇ ಚೌಕಾಕಾರವಾಗಿ ಆಯಕಟ್ಟಿನ ಸ್ಥಳಗಳಲ್ಲಿ ಇವುಗಳನ್ನು ನಿರ್ಮಿಸುತ್ತಿದ್ದರು. ಸಾಮಾನ್ಯವಾಗಿ 40 ರಿಂದ 50 ಅಡಿ ಎತ್ತರದವರೆಗಿರುವ ಈ ಗೋಪುರಗಳು ಸಾಮ್ರಾಜ್ಯಾದ್ಯಂತ ಸಾಕಷ್ಟು ಸಂಖ್ಯೆಯಲ್ಲಿವೆ. ಗಿರಿದುರ್ಗ, ಸ್ಥಳದುರ್ಗ, ಕಣಿವೆ ಮತ್ತು ಬೆಟ್ಟಗುಡ್ಡಗಳ ಮಧ್ಯೆ ಸಂಪರ್ಕ ಸಾಧಿಸಲು ಇಂತಹ ವೀಕ್ಷಣಾ ಗೋಪುರಗಳನ್ನು ನಿರ್ಮಿಸಲಾಗಿದೆ.

4. ಗ್ರಾಮರಕ್ಷಣಾ ವಾಸ್ತು (Defence Architecture of Village)

ಯುದ್ಧಕಲೆ ಮತ್ತು ತಂತ್ರಗಾರಿಕೆಯಲ್ಲಿ ಹೊಸ-ಹೊಸ ವಿಧಾನ ಮತ್ತು ವಿನ್ಯಾಸಗಳನ್ನು ವಿಜಯನಗರದ ಅರಸರು ರೂಪಿಸಿಕೊಂಡಿದ್ದರು. ಈ ನಿಟ್ಟಿನಲ್ಲಿ ಕೇವಲ ತಮಗಷ್ಟೇ ಅಲ್ಲದೆ ತಮ್ಮನ್ನು ನಂಬಿದ್ದ ಅನೇಕ ಗ್ರಾಮಗಳಿಗೆ ರಕ್ಷಣೆಯನ್ನು ಒದಗಿಸುವ ಸಲುವಾಗಿ ಮತ್ತು ಆ ಗ್ರಾಮಗಳಿಂದಲೇ ಶತ್ರುಸೈನಿಕರ ಚಲನವಲನಗಳನ್ನು ವೀಕ್ಷಿಸಲು ಗ್ರಾಮರಕ್ಷಣಾ ವಾಸ್ತುವನ್ನು ನಿರ್ಮಾಣಮಾಡಿದರು. ಸಾಮಾನ್ಯವಾಗಿ ಸಾಮ್ರಾಜ್ಯದಾದ್ಯಂತ ಈ ಗ್ರಾಮರಕ್ಷಣಾ ವಾಸ್ತುಗಳನ್ನು ನಾವು

ನೋಡಬಹುದು. ಈ ಗ್ರಾಮರಕ್ಷಣಾ ವ್ಯವಸ್ಥೆಯಲ್ಲಿ ಗ್ರಾಮಗಳ ರಕ್ಷಣೆಗೆ ಬೇಕಾದ ಎಲ್ಲಾ ಪೂರಕ ವ್ಯವಸ್ಥೆಗಳನ್ನು ಒದಗಿಸಲಾಗಿತ್ತು. ಇವುಗಳ ವಾಸ್ತು ರಚನಾ ಶೈಲಿ ಮಧ್ಯಕಾಲೀನ ಕೋಟೆಗಳಲ್ಲಿ ಕಂಡುಬರುವ ಬುರುಜುಗಳ ಮಾದರಿಯಲ್ಲಿದ್ದು, ಇವುಗಳನ್ನು ನಿರ್ಮಿಸಲು ಸ್ಥಳೀಯ ಸಂಪನ್ಮೂಲಗಳನ್ನೇ ಬಳಸಲಾಗಿದೆ. ಗೋಡೆಗಳಲ್ಲಿ ಚಿಕ್ಕ-ಚಿಕ್ಕ ಕಿಂಡಿಗಳನ್ನು ಮಾಡುವ ಮೂಲಕ ದೂರದಲ್ಲಿ ಬರುವ ವೈರಿಗಳ ಚಲನವಲನಗಳನ್ನು ಗ್ರಹಿಸಬಹುದಾಗಿದೆ. ಆ ಮೂಲಕ ಅಪಾಯವನ್ನು ಮುಂಜಾಗೃತವಾಗಿ ಅರಿತು ಜಾಗೃತರಾಗಲು ಇಂತಹ ರಚನೆಗಳು ಸಹಾಯಕವಾಗುತ್ತಿದ್ದವು.

ಮೇಲ್ಕಂಡ ಅಂಶಗಳಿಂದ ವಿಜಯನಗರ ಅವಧಿಯಲ್ಲಿ ರಕ್ಷಣಾ ವಾಸ್ತುಶಿಲ್ಪದ ಬೆಳವಣಿಗೆ ಮತ್ತು ವಿಕಾಸವನ್ನು ಗುರುತಿಸಬಹುದಾಗಿದೆ. ಆದರೆ ಇವರ ಈ ಎಲ್ಲಾ ಬೆಳವಣಿಗೆಗಳನ್ನು ದೇವಾಲಯ ವಾಸ್ತುಶಿಲ್ಪದ ಜೊತೆಯಲ್ಲಿಯೇ ಅಧ್ಯಯನ ಮಾಡುವುದಕ್ಕಿಂತ, ವಿಜಯನಗರ ರಕ್ಷಣಾ ವಾಸ್ತುಶಿಲ್ಪ ಶೈಲಿಯ ಮೂಲಕ ಅಧ್ಯಯನ ಮಾಡುವುದು ಸೂಕ್ತವೆನಿಸುತ್ತದೆ. ಒಟ್ಟಾರೆ ಕ್ರಮಬದ್ಧವಾದ ಹಾಗೂ ತಂತ್ರಜ್ಞಾನದ ವೈಜ್ಞಾನಿಕ ನೆಲೆಗಟ್ಟಿನ ಮೇಲೆ ರಚನೆಯಾಗಿರುವ ಇವರ ಎಲ್ಲಾ ಸ್ಮಾರಕಗಳನ್ನು ಪ್ರತ್ಯೇಕವಾಗಿ ಅಧ್ಯಯನ ಮಾಡುವ ಅವಶ್ಯಕತೆ ಇದೆ.

ಒಟ್ಟಾರೆ ಹೇಳುವುದಾದರೆ, ವಿಜಯನಗರದ ಅವಧಿಯಲ್ಲಿನ ಈ ರಕ್ಷಣಾ ವಾಸ್ತು ರಚನೆಗಳು, ಶೈಲಿಗಳ ವೈವಿಧ್ಯತೆಯು ಇಲ್ಲಿ ಹೇರಳವಾಗಿಯೂ ನಾನಾ ವಿಧವಾಗಿಯು ದೊರಕುತ್ತವೆ. ವಿಶೇಷವಾಗಿ ರಕ್ಷಣಾ ವಾಸ್ತು ನಿರ್ಮಾಣದ ಬೆಳವಣಿಗೆಯನ್ನು ಶೈಶವದಿಂದ ಪರಿಪಕ್ವಾವಸ್ಥೆಯವರೆಗು ಇಲ್ಲಿ ತಿಳಿಯಲು ಅವಕಾಶವಿದೆ. ಭಾರತದ ರಕ್ಷಣಾ ವಾಸ್ತು ಇತಿಹಾಸಕ್ಕೆ ವಿಜಯನಗರದ ಕೊಡುಗೆ ಅಪಾರವಾಗಿದ್ದು, ಇದು ವಿಭಿನ್ನ ಪ್ರತ್ಯೇಕತೆಯನ್ನು ಗುರುತಿಸಿಕೊಳ್ಳುವ ಕಾಲಘಟ್ಟವಾಗಿರುವುದೇ ಕನ್ನಡಿಗರ ಹೆಮ್ಮೆಯಾಗಿದೆ.

18. ಮುಳಬಾಗಿಲು ಕೋಟೆ – ಒಂದು ಅಧ್ಯಯನ

ಎಸ್. ಪ್ರವೀಣ್ ಕುಮಾರ್

ರಕ್ಷಣಾವಾಸ್ತು ಸಾಮ್ರಾಜ್ಯವೊಂದರ ದೃಢತೆ, ಬಲ, ಆರ್ಥಿಕ ವ್ಯವಸ್ಥೆಗಳಂತಹ ಹಲವು ಅಂಶಗಳನ್ನು ಪ್ರತಿಬಿಂಬಿಸುವ ಸ್ಮಾರಕ. ಇಂತಹ ರಕ್ಷಣಾವಾಸ್ತು ಚರಿತ್ರೆಯುದ್ದಕ್ಕೂ ತನ್ನ ಸ್ಥಿತಿ, ರಚನೆ ಮತ್ತು ಅಸ್ತಿತ್ವಗಳಲ್ಲಿ, ಅಗತ್ಯ ಮತ್ತು ಅನಿವಾರ್ಯತೆಗಳಂತೆ ಬದಲಾವಣೆಯನ್ನು ಹೊಂದುತ್ತದೆ. ಈ ಲೇಖನದಲ್ಲಿ ವಿಜಯನಗರ ಮತ್ತು ವಿಜಯನಗರೋತ್ತರ ರಕ್ಷಣಾವಾಸ್ತುವಿನ ವಿಶೇಷ ಲಕ್ಷಣಗಳನ್ನು ಹೊಂದಿದ ಮುಳಬಾಗಿಲು ಕೋಟೆಯನ್ನು ಪರಿಚಯಿಸುವ ಯತ್ನ ಮಾಡಲಾಗಿದೆ. (ಚಿತ್ರ 01).

ಪ್ರಸ್ತುತ ಮುಳಬಾಗಿಲು ಎಂದು ಕರೆಯಲ್ಪಡುವ ಈ ಪಟ್ಟಣವು ಪೂರ್ವದಲ್ಲಿ ಮುಳವಾಯಿ, ಮೂಡಲಬಾಗಿಲು, ಇತ್ಯಾದಿ ಹೆಸರುಗಳಿಂದ ಕರೆಯಲ್ಪಡುತ್ತಿತ್ತು. ವಿಜಯನಗರ ಸಾಮ್ರಾಜ್ಯದಲ್ಲಿ ಇದು ಪ್ರಮುಖ ಪಟ್ಟಣ ಮತ್ತು ಉಪರಾಜಧಾನಿಯಾಗಿತ್ತು. ವಿಜಯನಗರ ಸಿಂಹಾಸನದ ಉತ್ತರಾಧಿಕಾರಿಯನ್ನು ಈ ಪ್ರದೇಶದಲ್ಲಿ ಆಡಳಿತಕ್ಕೆ ನೇಮಿಸಲಾಗುತ್ತಿತ್ತು. ಏಕೆಂದರೆ, ಇದು ಕನ್ನಡ ಮತ್ತು ತಮಿಳು ಪ್ರದೇಶಗಳ ಗಡಿಯಾಗಿದ್ದು ರಾಜಕೀಯ ಪರಿಸ್ಥಿತಿಯು ಬಹುಪಾಲು ಸೂಕ್ಷ್ಮವಾಗಿಯೂ ಇರುತ್ತಿತ್ತು ಮತ್ತು ಇಂತಹ ಪ್ರದೇಶಗಳ್ಲಿ ಆಡಳಿತ ನಡೆಸಿದರೆ ರಾಜ್ಯ ನಿರ್ವಹಣೆಯಲ್ಲಿ ದಕ್ಷತೆಯನ್ನು ಪಡೆಯಬಹುದಿತ್ತು. ಹೀಗಾಗಿ ವಿಜಯನಗರ ಕಾಲದಲ್ಲಿ ಇಲ್ಲಿ ಒಂದು ಕೋಟೆ ಸಹ ನಿರ್ಮಾಣಗೊಂಡಿದೆ.

ಮುಳಬಾಗಿಲು ಪಟ್ಟಣ ಕೋಲಾರ ಜಿಲ್ಲೆಗೆ ಸೇರಿರುವ ಪ್ರಮುಖ ಕೇಂದ್ರ. ಈ ಪಟ್ಟಣದ ಪಶ್ಚಿಮಕ್ಕೆ, ಅಚಿಜನಾದ್ರಿಯೆಂದು ಸ್ಥಳೀಯರಿಂದ ಕರೆಯಲ್ಪಡುವ ಬೆಟ್ಟದ ಮೇಲೆ ಪ್ರಸ್ತುತ ಚರ್ಚಿಸಲಾಗುವ ಕೋಟೆಯಿರುವುದು. ಇದು 13^o10^oಉತ್ತರ ಅಕ್ಷಾಂಶ, 78^o24^o ಪೂರ್ವ ರೇಖಾಂಶಗಳಲ್ಲಿದ್ದು ಸಮುದ್ರಮಟ್ಟದಿಂದ 1075 ಮೀ. ಎತ್ತರವಿದೆ.

ಈ ಕೋಟೆಯು ಗಿರಿದುರ್ಗದ ಪ್ರಕಾರಕ್ಕೆ ಸೇರುತ್ತದೆ (ಚಿತ್ರ 02). ಈ ಗಿರಿಯಲ್ಲಿ ಲಭ್ಯವಿರುವ ಸಹಜ ಸಂಪನ್ಮೂಲಗಳನ್ನು ಬಳಸಿಕೊಂಡು ಅನಿಯಮಿತಾಕಾರವಾಗಿ ಕೋಟೆ ನಿರ್ಮಿಸಲಾಗಿದ್ದು ತನ್ನದೇ ಆದ ಕೊರತೆಗಳನ್ನು ಹೊಂದಿದೆ. ಈ ಕೋಟೆಯು ರಾಜಧಾನಿಯನ್ನು ಅವರಿಸಿದ ಪ್ರಧಾನವಾದ ಕೋಟೆಯಾಗಿರದೆ ಕೇವಲ ಸೈನಿಕ ಘಟಕದ ಬಳಕೆಗೆ ನಿರ್ಮಿಸಿದಂತೆ ತೋರುತ್ತದೆ. ಏಕೆಂದರೆ ಈ ಕೋಟೆಯು ಸಾಮ್ರಾಟರ ನಿರ್ಮಾಣವೆಂದು ಹೇಳುವುದಕ್ಕೆ ಸರಿಹೊಂದುವ ದಾರ್ಢ್ಯ, ಕ್ರಮಬದ್ಧತೆಯನ್ನು ಹೊಂದಿಲ್ಲ. ಕೋಟೆಯ ರಚನಾವೈಖರಿಯಿಂದ ಇದು ಕಡಿಮೆ ವ್ಯಯದಲ್ಲಿ ನಿರ್ಮಾಣವಾದದ್ದೆಂದು ಹೇಳಬಹುದು. ಕೋಟೆ ನಿರ್ಮಿತವಾದ ಗುಡ್ಡವನ್ನು ಆವರಿಸುವ ಪ್ರದೇಶವು ಸುಮಾರು ಹದಿನೈದು ಕಿ.ಮೀ. ವಿಸ್ತಾರದವರೆಗೂ ಬಯಲು ಪ್ರದೇಶವಾಗಿದ್ದು, ಈ ಕೋಟೆಯ ಎತ್ತರದ ಪ್ರದೇಶದಿಂದ ಸಾಕಷ್ಟು ದೂರದವರೆಗೂ ಪರಿವೀಕ್ಷಿಸಬಹುದು.

ವಿಜಯನಗರ ಕಾಲದ ಕೋಟೆಯ ಲಕ್ಷಣಗಳು

ಈ ಹಿಂದೆಯೆ ಹೇಳಿದಂತೆ ಈ ಕೋಟೆಯು ವಿಜಯನಗರ ಕಾಲದಲ್ಲಿ ನಿರ್ಮಾಣವಾದದ್ದು. ಈ ಅಂಶವನ್ನು ಪುಷ್ಟೀಕರಿಸಲು ಕೋಟೆಯ ಅವಶೇಷಗಳಲ್ಲಿ ಹಲವಾರು ಕುರುಹುಗಳು ದೊರಕುತ್ತವೆ. ಈ ಕೋಟೆಯ ಗೋಡೆಯ ಭಾಗಗಳಲ್ಲಿ ಮತ್ತು ಒಳಗಿನ ಆವರಣಗಳಲ್ಲಿ ಕಂಡುಬರುವ ಭಗ್ನಾವಶೇಷಗಳು ಇಟ್ಟಿಗೆ ಮತ್ತು ಗಾರೆಯ ಕಟ್ಟಡಗಳಾಗಿವೆ. ವಿಜಯನಗರ ಕಾಲದಲ್ಲಿ ಗಾರೆಯ ಬಳಕೆಯು ಅತೀ ಹೆಚ್ಚಾಗಿ ಕಂಡುಬರುತ್ತದೆ ಅಲ್ಲದೆ ಈ ಭಗ್ನಾವಶೇಷಗಳಲ್ಲಿ ಇಟ್ಟಿಗೆಗಳ ಪ್ರಮಾಣ ಮತ್ತು ಆಕಾರ ಸಹ ಇವು ವಿಜಯನಗರ ಕಾಲದ್ದು ಎಂಬುದನ್ನು ಸ್ಪಷ್ಟಪಡಿಸುತ್ತವೆ. ಮತ್ತೊಂದು ಗಮನಾರ್ಹ ಅಂಶವೆಂದರೆ ಕೋಟೆಯ ನಿರ್ಮಾಣಕ್ಕೆ ಬಳಸಲಾಗಿರುವ ಕಲ್ಲುಗಳ ಆಕಾರ. ಕೋಟೆ ಗೋಡೆಯು ಕುಸಿದುಬಿದ್ದಿರುವ ಸ್ಥಳಗಳಲ್ಲಿ ಈ ಕಲ್ಲುಗಳ ಆಕಾರವನ್ನು ಸ್ಪಷ್ಟವಾಗಿ ತಿಳಿಯಬಹುದಾಗಿದೆ. ಈ ಕಲ್ಲುಗಳು ತ್ರಿಕೋನಾಕೃತಿಯಾಗಿರುವುದು ವಿಶೇಷ. ಇದೇ ಆಕಾರದ ಕಲ್ಲುಗಳನ್ನು ಹಂಪಿಯ ಕೋಟೆಯ ಭಾಗಗಳಲ್ಲಿ ನಡೆಸಿರುವ

ಉತ್ಖನನದಲ್ಲಿ ಕಾಣಬಹುದು. ಈ ಕಲ್ಲುಗಳು ತ್ರಿಕೋನಾಕಾರವಾಗಿರುವುದರಿಂದ ಹೊರಮುಖಕ್ಕೆ ಬೃಹತ್ ಆಗಿ ಕಾಣುತ್ತಿದ್ದವು. ಇದರ ಮೊನಚಾದ ಭಾಗವನ್ನು ಕೋಟೆಯ ಒಳಮುಖದಲ್ಲಿ ಕೂಡಿಸಲಾಗುತ್ತಿತ್ತು (ಚಿತ್ರ 03). ಇದರಿಂದ ಕಲ್ಲುಗಳನ್ನು ಸಾಗಿಸುವುದು ಸುಲಭವಾಗಿತ್ತು ಮತ್ತು ಗೋಡೆಯಲ್ಲಿ ಹೆಚ್ಚು ಭದ್ರವಾಗಿ ಒಂದರೊಳಗೆ ಇನ್ನೊಂದಂತೆ ಕೂಡಿಸಬಹುದಾಗಿತ್ತು. ಇದರಿಂದ ಇಡೀ ಕೋಟೆಗೆ ಒಂದು ರೀತಿ ಭದ್ರತೆಯು ಒದಗುತ್ತಿತ್ತು. ಈ ಎಲ್ಲಾ ಅಂಶಗಳನ್ನು ಗಮನಿಸಿದಾಗ ಕೋಟೆಯು ವಿಜಯಜಗರ ಕಾಲದ್ದೆಂದು ತೀರ್ಮಾನಿಸಿ ಹೇಳಬಹುದು.

ಮಹಾದ್ವಾರ

ಕೋಟೆಯ ದಕ್ಷಿಣ ಭಾಗದಲ್ಲಿ, ಪಶ್ಚಿಮಾಭಿಮುಖವಾಗಿ ಇರುವ ಪ್ರವೇಶ ದ್ವಾರವಿರುವುದು. (ಚಿತ್ರ 04) ವಿಶೇಷವೆಂದರೆ ಇಡೀ ಕೋಟೆ ಪ್ರವೇಶಿಸಲು ಇದೊಂದೇ ದ್ವಾರವಿರುವುದು. ಗಾತ್ರದಲ್ಲಿ ಅಷ್ಟೇನೂ ದೊಡ್ಡದಾಗಿರದಿದ್ದರೂ ಉಪಯೋಗದ ದೃಷ್ಟಿಯಿಂದ ಇದೇ ಕೋಟೆಯ ಮಹಾದ್ವಾರವೆನಿಸುತ್ತದೆ. ಮತ್ತೊಂದು ಗಮನಾರ್ಹ ಅಂಶವೆಂದರೆ ಈ ಪ್ರವೇಶ ದ್ವಾರವು ಸುಲಭ ಗೋಚರವಾಗಿರದೆ ದೂರದಿಂದಾಗಲಿ ಅಥವಾ ಹಾಗೆಯೆ ಹಾದುಹೋಗುವಾಗಲಾಗಲಿ ಈ ದ್ವಾರದ ಉಪಸ್ಥಿತಿಯು ಗಮನಕ್ಕೆ ಬರುವುದಿಲ್ಲ. ಬಳಸಿ ರೂಢಿಯಿರುವವರಿಗೆ ಮಾತ್ರ ಈ ದ್ವಾರದ ಅಸ್ತಿತ್ವವು ತಿಳಿಯುತ್ತದೆ.

ಈ ದ್ವಾರದ ಮೂಲಕ ಕೋಟೆಯನ್ನು ಪ್ರವೇಶಿಸಿದ ನಂತರ ಮತ್ತೊಂದು ಆವರಣದ ಪ್ರವೇಶ ದ್ವಾರವು ಸಿಗುತ್ತದೆ (ಚಿತ್ರ 05). ಕೋಟೆಗೆ ಅವಶ್ಯವಾಗಿರುವ ನೀರಿನಮೂಲಗಳನ್ನು ಈ ಆವರಣದಲ್ಲಿ ಕಾಣಬಹುದು. ಪ್ರಾಕೃತಿಕ ದೋಣೆಯೊಂದಕ್ಕೆ ತಡೆಗೋಡೆಯನ್ನು ನಿರ್ಮಿಸಿಲಾಗಿದೆ. ಇದಲ್ಲದೆ ಕೊಳವೊಂದನ್ನೂ ಕಟ್ಟಲಾಗಿದೆ. ಕೋಟೆಯ ಆವರಣದಲ್ಲಿ ಸಂಗ್ರಹವಾಗುವ ಅಧಿಕ ನೀರು ಹೊರಹೋಗಲು ಕೋಟೆ ಗೋಡೆಯ ಅಡಿಭಾಗಕ್ಕೆ ಕಿಂಡಿಗಳನ್ನು ನಿರ್ಮಿಸಲಾಗಿದೆ (ಚಿತ್ರ 06). ಈ ಕೋಟೆಗೆ ಒಟ್ಟು ಹನ್ನೆರಡು ಬುರುಜುಗಳಿವೆ. ಇವು ಎಲ್ಲವೂ ವಿನ್ಯಾಸದಲ್ಲಿ ಅರ್ಧವೃತ್ತಾಕಾರವಾಗಿದ್ದು ಕೋಟೆಯ ಪೂರ್ವ ದಿಕ್ಕಿಗೆ ನಂಗಲಿ, ಆಗ್ನೇಯ ದಿಕ್ಕಿಗೆ ವೆಂಕಟಗಿರಿ ಕೋಟೆ, ದಕ್ಷಿಣ ದಿಕ್ಕಿಗೆ ಆವನಿ, ನೈರುತ್ಯ ದಿಕ್ಕಿಗೆ ದೇವರಾಯನಸಮುದ್ರ, ಪಶ್ಚಿಮ ದಿಕ್ಕಿಗೆ ಕೋಲಾರವಿದ್ದು ಯಾವುದೇ ಕಡೆಗೆ ಪೂರ್ಣ ಪ್ರಮಾಣದಲ್ಲಿ ತಡೆಯಿಲ್ಲದೆ ವೀಕ್ಷಿಸಬಹುದು.

ಕೋಟೆಯಲ್ಲಿ ಕಂಡುಬರುವ ಸ್ಮಾರಕಗಳು

ಕೋಟೆಯ ಉತ್ತುಂಗದಲ್ಲಿ ಭಗ್ನವಾಸ್ಥೆಯಲ್ಲಿ ಇರುವ ಒಂದು ಮಂಟಪ ಇದೆ. ಪ್ರಾಯಶಃ ಇದು ಮೊದಲಿಗೆ ಗೋಡೆಗಳನ್ನು ಹೊಂದಿರಬಹುದು. ಈ ಮಂಟಪದ ಮೂಲ ಉದ್ದೇಶವನ್ನು ವಿವರಿಸುವುದು ಕಷ್ಟ. ಆದರೂ ಇದರೊಳಗಿರುವ ಪಾಣಿಪೀಠವನ್ನು ಮತ್ತು ಗುರುತಿಸಲು ಸಾಧ್ಯವಾಗದಷ್ಟು ಸವೆದಿರುವ ವಾಹನದ ಪ್ರತಿಮೆಯನ್ನು ಗಮನಿಸಿದರೆ ಇದು ಸೈನಿಕರ ಉಪಯೋಗಕ್ಕಾಗಿ ನಿರ್ಮಿತವಾದ ಸಣ್ಣ ದೇಗುಲವಾಗಿರಬಹುದು (ಚಿತ್ರ 07). ಇಲ್ಲಿ ಇತ್ತೀಚಿನ ದಿನಗಳಲ್ಲಿ ತಂದಿಟ್ಟಿರುವ ಲಿಂಗವನ್ನು ಕಾಣಬಹುದು. ಪಾಣಿಪೀಠವು ಪ್ರಾಚೀನವಾದರೂ ಲಿಂಗವು ಮಾತ್ರ ಹೊಸದು. ಈ ಪಾಣಿಪೀಠದ ಸುತ್ತಲೂ ನಾಲ್ಕು ಚಪ್ಪಡಿಕಲ್ಲುಗಳನ್ನು ಕೂಡಿಸಲಾಗಿದೆ. ಈ ಚಪ್ಪಡಿಕಲ್ಲುಗಳ ಪೈಕಿ ಉತ್ತರಾಭಿಮುಖವಾಗಿ ಇರುವ ಚಪ್ಪಡಿಯ ಒಳಮುಖದಲ್ಲಿ ಗಣೇಶನ ಉಬ್ಬುಶಿಲ್ಪವನ್ನು ಕಾಣಬಹುದು. ಇಲ್ಲಿರುವ ಪಾಣಿಪೀಠವನ್ನು ಗಮನಿಸಿದಾಗ ಇಲ್ಲಿ ಕಾಣುವ ವಾಹನದ ಪ್ರತಿಮೆ ನಂದಿ ಇರಬಹುದುದೆಂದು ಊಹಿಸಬಹುದು. ಆದರೆ ಪಾಣಿಪೀಠವು ಯಾವುದಾದರು ಪ್ರತಿಮೆಯ ಪೀಠಭಾಗವೆಂಬ ಸಂದೇಹಕ್ಕೆ ಎಡೆಕೊಡುತ್ತದೆ (ಚಿತ್ರ 08). ಮಂಟಪವು ದೇವಾಲಯವೇ ಎಂಬುದಕ್ಕೆ ಅಭಿಮುಖವಾಗಿ ಭಗ್ನವಾದ ಧ್ವಜಸ್ತಂಭವಿರುವುದು. ಇದರ ಬುಡದ ಮೇಲೆ ಶೈವ ಪಂಥೀಯ ಲಾಂಛನಗಳನ್ನು ಕೆತ್ತಿರುವುದು ಗಮನಿಸಬಹುದು. ಇವು ಸಾಕಷ್ಟು ಸವೆದಿದ್ದು ಹೆಚ್ಚು ಕಲಾತ್ಮಕವಾಗಿರುವಂತೆ ತೋರುವುದಿಲ್ಲ. ಈ ಧ್ವಜಸ್ತಂಭದ ಬುಡಭಾಗದಲ್ಲಿ ಪ್ರದಕ್ಷಿಣೆಯಾಗಿ ಪೂರ್ವದಿಂದ ಲಿಂಗ, ತ್ರಿಶೂಲ, ನಂದಿ ಮತ್ತು ಡಮರುಗಳಿವೆ.

ಕೋಟೆಯ ಎರಡನೆ ಆವರಣದಲ್ಲಿ ಇಟ್ಟಿಗೆ ಮತ್ತು ಗಾರೆಯನ್ನು ಬಳಸಿ ನಿರ್ಮಿಸಲಾದ ಕಟ್ಟಡವೊಂದಿದೆ. ವಿನ್ಯಾಸದಲ್ಲಿ ಚೌಕಾಕಾರವಾದ ಈ ಕಟ್ಟಡವನ್ನು ಮದ್ದಿನಮನೆಯೆಂದು ಗುರುತಿಸಬಹುದು. ಈ ಕಟ್ಟಡದ ಸುತ್ತಲೂ ಹಲವು ಕಟ್ಟಡಗಳ ಭಗ್ನಾವಶೇಷಗಳನ್ನು ಕಾಣಬಹುದು. ಪ್ರಾಯಶಃ ಇವು ಸೈನಿಕರ ವಸತಿಗೃಹಗಳಿರಬಹುದು (ಚಿತ್ರ 9).


ಈ ಕಟ್ಟಡವು ಪ್ರಾಚೀನವಾದ ಒಂದು ಕಲ್ಲಿನ ಅಧಿಷ್ಠಾನದ ಮೇಲೆ ನಿರ್ಮಿತವಾಗಿರುವುದು ವಿಶೇಷ. ಈ ಅಧಿಷ್ಠಾನದ ಮೇಲಿನ ಅಂಗಗಳು ನಷ್ಟವಾಗಿದ್ದು ಕೆಳಗಿನ ಜಗತಿ ಮತ್ತು ತ್ರಿಪಟ್ಟ ಕುಮುದ ಸ್ಪಷ್ಟವಾಗಿ ಕಾಣುತ್ತವೆ. ಇದು ಪಾದಬಂಧ ಅಧಿಷ್ಠಾನವಾಗಿದ್ದಿರಬಹುದು, ಜಗತಿಯ ಬಹುಭಾಗ ಭೂಮಿಯಲ್ಲಿ ಹೂತುಹೋಗಿದೆ (ಚಿತ್ರ 10). ಈ ಕಟ್ಟಡದ ಸಮೀಪದಲ್ಲಿ ಭಗ್ನವಾಗಿರುವ ಪಾಣಿಪೀಠವನ್ನು ಗಮನಿಸಿದಾಗ ಈ ಅಧಿಷ್ಠಾನವು ಪ್ರಾಚೀನ ದೇವಾಲಯದ ಗರ್ಭಗೃಹದ ಭಾಗವೆಂದು ಹೇಳಬಹುದು. ಕೋಟೆಯ ನಿರ್ಮಾಣ ಕಾಲಕ್ಕಾಗಲೆ ದೇವಾಲಯವು ಸಂಪೂರ್ಣವಾಗಿ ನಷ್ಟವಾಗಿದ್ದು ಅದರ ಭಗ್ನಾವಶೇಷಗಳ ಮೇಲೆ ಪ್ರಸ್ತುತ ಕಟ್ಟಡವನ್ನು ನಿರ್ಮಿಸಿರುವಂತೆ ತೋರುತ್ತದೆ.

ಈ ಕೋಟೆಯಲ್ಲಿ ಹಲವು ಉಬ್ಬುಶಿಲ್ಪಗಳನ್ನು ಕಾಣಬಹುದು. ಇವುಗಳ ಪೈಕಿ ಎರಡು ಶಿಲ್ಪಗಳು ಆಂಜನೇಯನದಾಗಿದ್ದು ಉಳಿದೆರಡು ಶಿಲ್ಪಗಳು ಪ್ರವೇಶದ್ವಾರದ ಎಡಭಾಗದಲ್ಲಿ ಕೆತ್ತಲಾಗಿದೆ. ಮೊದಲನೆಯ ಆಂಜನೇಯನ ಶಿಲ್ಪವನ್ನು ಕೋಟೆಯ ಪ್ರವೇಶದ್ವಾರದ ಎಡಗಡೆಯ ಗೋಡೆಯಲ್ಲಿ ಕೆತ್ತಲಾಗಿದೆ. ಗೋಡೆಗಳನ್ನು ನಿರ್ಮಿಸುವಾಗ ಬಲ, ಬ್ರಹ್ಮಚಾರ್ಯ ಮತ್ತು ಸೈನಿಕ ಸಾಮರ್ಥ್ಯಗಳಿಗೆ ಅಧಿದೇವತೆಯಾದ ಆಂಜನೇಯನನ್ನು ಪ್ರವೇಶ ದ್ವಾರದ ಸಮೀಪದಲ್ಲಿ ಕೆತ್ತಿರುವುದು ಬಹಳ ಪ್ರಾಚೀನ ಪದ್ಧತಿ ಎಂಬುದು ಜನಜನಿತ ಸಂಗತಿ. ಈ ಸಂಪ್ರದಾಯವು ವಿಜಯನಗರ ಮತ್ತು ವಿಜಯನಗರೋತ್ತರ ಕಾಲದಲ್ಲಿ ಬೃಹತ್ ಪ್ರಮಾಣದಲ್ಲಿ ಬೆಳೆಯಿತು. ಇಂತಹ ನಿರ್ಮಾಣಗಳಿಗೆ ಪ್ರಸ್ತುತ ಕೋಟೆಯ ಶಿಲ್ಪವು ಉದಾಹರಣೆಯಾಗಿದೆ. ಮತ್ತೊಂದು ಆಂಜನೇಯನ ಉಬ್ಬುಶಿಲ್ಪವು ಈ ಹಿಂದೆಯೆ ವಿವರಿಸಲಾದ ಕೋಟೆಯ ಉತ್ತುಂಗದಲ್ಲಿರುವ ಮಂಟಪದ ಸಮೀಪದಲ್ಲಿದೆ. ಈ ಶಿಲ್ಪವು ಪ್ರಾಕೃತಿಕವಾದ ಕೋಡುಗಲ್ಲಿನ ಮೇಲೆ ಕೆತ್ತಲಾಗಿದೆ. ಈ ಎರಡೂ ಶಿಲ್ಪಗಳು ವಿಜಯನಗರ ಕಾಲದ ಕೆಲಸಗಾರಿಕೆಯನ್ನು ಸ್ಪಷ್ಟವಾಗಿ ಪ್ರತಿಬಿಂಬಿಸುತ್ತದೆ. ಶಿಲ್ಪದ ವಸ್ತ್ರಾಲಂಕರಣ, ಶಿಲಾವಿನ್ಯಾಸ ಮತ್ತು ಅಲಂಕರಣವು ಸ್ಪಷ್ಟವಾಗಿದ್ದು ಶಿಲ್ಪವು ಸುಸ್ಥಿತಿಯಲ್ಲಿದೆ.

ಪ್ರವೇಶದ್ವಾರದ ಗೋಡೆಯ ತಳಭಾಗದಲ್ಲಿ ಆಮೆ ಮತ್ತು ಮೀನಿನ ಉಬ್ಬುಶಿಲ್ಪಗಳನ್ನು ಕೆತ್ತಲಾಗಿದೆ. ಇಲ್ಲಿ ಹೇಗೆ ಮೀನು ಸದಾ ಕಣ್ಣುಗಳನ್ನು ತೆರೆದೆ ಇರುತ್ತದೆಯೋ ಹಾಗೆಯೆ ಈ ಕೋಟೆಯು ತೆರೆದ ಕಣ್ಣುಗಳಿಂದ ರಕ್ಷಿಸಲ್ಪಡಬೇಕು ಎಂಬುದನ್ನು ಸಾಂಕೇತಿಕವಾಗಿ ಸೂಚಿಸಲಾಗಿದೆ. ಅದೇ ರೀತಿ ಆಮೆಯು ಬಲ ಮತ್ತು ದೃಢತೆಯ ಸಂಕೇತ ಅಲ್ಲದೆ ಆಮೆಯು ದೀರ್ಘಾಯುಷ್ಯದ ಸಂಕೇತವು ಹೌದು. ಹೀಗಾಗಿ ಕೋಟೆಯು ದೃಢವಾಗಿ ಮತ್ತು ಶಾಶ್ವತವಾಗಿರಬೇಕೆಂಬ ಅಪೇಕ್ಷೆಯಿಂದ ಈ ಸಂಕೇತಗಳನ್ನು ಕೆತ್ತಿರುತ್ತಾರೆ.

ಈ ಕೋಟೆಯ ಮೊದಲನೆಯ ಆವರಣದಲ್ಲಿ ನೈಸರ್ಗಿಕ ಬಂಡೆಯ ಮೇಲೆ ಎರಡು ಶಾಸನಗಳನ್ನು ಕೆತ್ತಲಾಗಿದೆ. ಈ ಶಾಸನಗಳು ಅರವಕ್ಷರದ ಮತ್ತು ತಮಿಳು ಭಾಷೆಯವು. ಈ ಶಾಸನಗಳು ಪ್ರಕಟವಾಗಿದ್ದು ಕೋಟೆಗೂ ಇದಕ್ಕೂ ಸಂಬಂಧವಿರುವಂತೆ ತೋರುವುದಿಲ್ಲ. ಎರಡೂ ಶಾಸನಗಳು ತ್ರುಟಿತವಾಗಿದ್ದು ಇದರ ವಸ್ತುವಿಷಯವು ಅಸ್ಪಷ್ಟವಾಗಿದೆ. ಮೊದಲನೆಯ ಶಾಸನವು ಶುಭಕೃತ್ ಸಂವತ್ಸರದ ಫಾಲ್ಗುಣ ಮಾಸವನ್ನು ಪ್ರಸ್ತಾಪ ಮಾಡುತ್ತದೆ. ಪ್ರಾಯಶಃ ಇದೊಂದು ದೇವದಾನದ ದಾಖಲೆಯಾಗಿರಬಹುದು. ಎರಡನೇ ಶಾಸನವು ಜಯಗೊಂಡ ಚೋಳಮಂಡಲದ ಆವಣಿ ನಾಡನ್ನು ಉಲ್ಲೇಖಿಸುತ್ತದೆ. ಇದರೊಂದಿಗೆ ನೊಳಂಬ ರಾಜನ ಮತ್ತು ಗಂಗ ಪೆರುಮಾಳ್‌ಗಳ ಹೆಸರನ್ನು ಕಾಣಬಹುದು. ಉಳಿದ ಮಾಹಿತಿ ನಷ್ಟವಾಗಿದೆ.


ಒಟ್ಟಾರೆ ಮುಳಬಾಗಿಲ ಕೋಟೆಯನ್ನು ಸೂಕ್ಷ್ಮಾವಲೋಕನದೊಂದಿಗೆ ಇನ್ನಷ್ಟು ಕ್ಷೇತ್ರ ಕಾರ್ಯವನ್ನು ಕೈಗೊಂಡರೆ ಹಲವು ಐತಿಹಾಸಿಕ ಅಂಶಗಳು ಬೆಳಕಿಗೆ ಬರಬಹುದು.




ಚಿತ್ರ 1




ಚಿತ್ರ 2




ಚಿತ್ರ 3




ಚಿತ್ರ 4



ಚಿತ್ರ 5



ಚಿತ್ರ 6




ಚಿತ್ರ 7



ಚಿತ್ರ 8



ಚಿತ್ರ 9



ಚಿತ್ರ 10

19. ಹಂಪಿ ಪರಿಸರದ ವರಾಹ ಶಿಲ್ಪಗಳು

ಡಾ॥ ಸಿ. ಎಸ್. ವಾಸುದೇವನ್

ಎಲ್ಲರಿಂದ ಒಪ್ಪಿತ ಮತ್ತು ಪ್ರಸಿದ್ಧವಾದ ವಿಷ್ಣುವಿನ ಅವತಾರಗಳು ಹತ್ತು. ಅವುಗಳನ್ನು ದಶಾವತಾರ ಎಂದು ಕರೆಯಲಾಗುತ್ತದೆ. ಈ ಪ್ರಪಂಚಕ್ಕೆ ಅಸುರರುಗಳಿಂದ ಆಪತ್ತು ಒದಗಿದಾಗ ವಿಷ್ಣುವು ವಿವಿಧ ಕಾಲಘಟ್ಟಗಳಲ್ಲಿ ಹತ್ತು ಅವತಾರಗಳನ್ನು ತಾಳಿ ಅಸುರರನ್ನು ನಿಗ್ರಹಿಸಿ ತಪ್ಪು ದಾರಿಯಲ್ಲಿದ್ದವರನ್ನು ಸರಿದಾರಿಗೆ ತಂದನು. ಧರ್ಮವನ್ನು ಸ್ಥಾಪಿಸಲು ಇಂತಹ ಅವತಾರಗಳನ್ನು ವಿಷ್ಣುವು ತಾಳಿದನು. ವಿಷ್ಣುವಿನ ದಶಾವತಾರಗಳು ಇಂತಿವೆ: ಮತ್ಸ್ಯ (ಮೀನು), ಕೂರ್ಮ (ಆಮೆ), ವರಾಹ (ಹಂದಿ), ನರಸಿಂಹ (ಮನುಷ್ಯ-ಸಿಂಹ), ವಾಮನ (ಕುಬ್ಜ), ತ್ರಿವಿಕ್ರಮನನ್ನು ಒಳಗೊಂಡಂತೆ ಪರಶುರಾಮ, ರಘುರಾಮ, ಕೃಷ್ಣ, ಬುದ್ಧ ಮತ್ತು ಕಲ್ಕಿ. ಕೆಲವು ಹಿಂದೂ ಸಂಪ್ರದಾಯವಾದಿಗಳು ಬುದ್ಧನನ್ನು ವಿಷ್ಣುವಿನ ಅವತಾರ ಅಲ್ಲವೆಂದು ವಾದಿಸಿ ಅವನ ಸ್ಥಳದಲ್ಲಿ ಬಲರಾಮನನ್ನು ಉಲ್ಲೇಖಿಸುತ್ತಾರೆ. ಇವನು ಕೃಷ್ಣನ ಅಣ್ಣ.[1]

ಮತ್ಸ್ಯ ಮತ್ತು ಕೂರ್ಮ ಎಂಬ ಎರಡು ಅವತಾರಗಳ ನಂತರ ಮೂರನೆಯದು ವರಾಹ ಅವತಾರವಾಗಿದೆ. ಶತಪಥ ಬ್ರಾಹ್ಮಣದಲ್ಲಿ ಈ ಅವತಾರವನ್ನು ಕುರಿತಾದ ಮೊದಲ ಉಲ್ಲೇಖವಿದೆ. ಅದರಂತೆ ವರಾಹ (ಹಂದಿ) ಕೆಳಗಿನಿಂದ (ಪಾತಾಳದಿಂದ) ಭೂಮಿಯನ್ನು ಮೇಲೆತ್ತಿದಂತೆ ಉಲ್ಲೇಖಿಸಲಾಗಿದೆ. ಈಮೂಷ ಎಂಬ ವರಾಹವು ಭೂಮಿಯನ್ನು ಎತ್ತಿತು. ತೈತ್ತಿರೀಯ ಸಂಹಿತೆಯಲ್ಲಿ ಈ ಹಂದಿಯನ್ನು ಪ್ರಜಾಪತಿ ಎಂದು ಗುರುತಿಸಲಾಗಿದೆ. ಮಹಾಕಾವ್ಯಗಳು ಮತ್ತು ಪುರಾಣಗಳು ಈ ನಂಬಿಕೆ ಮತ್ತು ಐತಿಹ್ಯಗಳ ಅಂತಿಮ ಘಟ್ಟವಾಗಿದ್ದು, ಅವುಗಳು ವರಾಹ ಅಥವಾ ಹಂದಿಯನ್ನು ವಿಷ್ಣುವಿನ ಅವತಾರ ಎಂದು ನಿಶ್ಚಯಿಸುತ್ತವೆ. ತ್ಯಾಗಮಯಿ ವಿಷ್ಣುವು ಪಾತಾಳದಿಂದ ಭೂಮಿಯನ್ನು ರಕ್ಷಿಸಿ ಮೇಲೆತ್ತಿ ಅದನ್ನು ಪುನರ್ ನಿರ್ಮಿಸಲು ಇಚ್ಚಿಸಿದ್ದರಿಂದ ವಿಷ್ಣವು ಈ ಅವತಾರವನ್ನು ತಳೆದನು ಎಂದು ಭಾಗವತ ಪುರಾಣವು ಉಲ್ಲೇಖಿಸುತ್ತದೆ. ಭೂಮಿಯನ್ನು ಮೇಲೆತ್ತುವ ಕೆಲಸವನ್ನು ವಿಷ್ಣುವು ಮಾಡಿದನೆಂದು ಹೇಳಲಾಗುತ್ತದೆ.

ಬ್ರಹ್ಮನು ಸಾಗರದಿಂದ ಭೂಮಿಯನ್ನು ಎತ್ತಿದನು ಎಂದು ವಿಷ್ಣುಪುರಾಣ, ಲಿಂಗಪುರಾಣ ಮತ್ತು ಗರುಡಪುರಾಣಗಳು ಉಲ್ಲೇಖಿಸುತ್ತವೆ. ಆದರೆ ಇದೇ ಸಮಯದಲ್ಲಿ ಬ್ರಹ್ಮನನ್ನು ವಿಷ್ಣವಿನೊಂದಿಗೆ ಸಮೀಕರಿಸಲಾಗುತ್ತದೆ. ಹಿರಣ್ಯಾಕ್ಷ ಎಂಬ ಅಸುರರ ದೊರೆಯು ದೇವತೆಗಳನ್ನು ಸೋಲಿಸಿ ಅವರ ಇಂದ್ರಲೋಕವನ್ನು ವಶಪಡಿಸಿಕೊಳ್ಳುತ್ತಾನೆ ಎಂದು ಅಗ್ನಿಪುರಾಣವು ಉಲ್ಲೇಖಿಸುತ್ತದೆ. ಆಗ ದೇವತೆಗಳು ವಿಷ್ಣುವಿನ ಸಹಾಯವನ್ನು ಬೇಡುತ್ತಾರೆ. ವಿಷ್ಣುವು ವರಾಹ ಅವತಾರವನ್ನು ತಾಳಿ ಹಿರಣ್ಯಾಕ್ಷನನ್ನು ಕೊಲ್ಲುತ್ತಾನೆ. ನಂತರ ಕಾಲದ ಸಾಹಿತ್ಯದ ಬರವಣಿಗೆಗಳಲ್ಲಿ ವರಾಹ ಅವತಾರವನ್ನು ವಿಷ್ಣವು ಮಾತ್ರ ತಳೆದನೆಂದು ದಾಖಲಿಸುತ್ತವೆ. ಆಗಮಗಳು ಮತ್ತು ತಂತ್ರಗಳು ಸಹ ಇದನ್ನೇ ಪ್ರತಿಪಾದಿಸುತ್ತವೆ.[2]

ವೈಖಾನಸ ಆಗಮದಂತೆ[3] ವರಾಹನ ಮುಖವು ಹಂದಿಯದಾಗಿದ್ದು ದೇಹವು ಮನುಷ್ಯನದ್ದಾಗಿರಬೇಕು. ಅವನಿಗೆ ನಾಲ್ಕು ಕೈಗಳಿದ್ದು, ಅವುಗಳಲ್ಲಿ ಎರಡು ಕೈಗಳು ಶಂಖ ಮತ್ತು ಚಕ್ರವನ್ನು ಹಿಡಿದಿರಬೇಕು. ಬಲಗಾಲು ಸ್ವಲ್ಪ ಬಾಗಿದಂತೆ ಇದ್ದು ನಾಗದೇವತೆಯಾದ ಆಭರಣ ಖಚಿತ ಆದಿಶೇಷನ ಹೆಡೆಯ ಮೇಲೆ ಇರಿಸಿರಬೇಕು ಮತ್ತು ಆತನು ತನ್ನ ಪತ್ನಿಯರೊಂದಿಗೆ ಇರಬೇಕು. ವರಾಹನ ಉಳಿದ ಎರಡು ಕೈಗಳಲ್ಲಿ ಎಡಗೈ ಭೂದೇವಿಯನ್ನು ಹೊತ್ತಿರುವಂತೆಯೂ, ದೇವಿಯು ವರಾಹದ ಬಾಗಿದ ಕಾಲಿನ ಮೇಲೆ ಕುಳಿತಂತೆ ಇದ್ದು, ತನ್ನ ಕಾಲುಗಳನ್ನು ಇಳಿಬಿಟ್ಟಿರಬೇಕು. ವರಾಹದ ಬಲಗೈ ದೇವಿಯ ನಡುವನ್ನು ಬಳಸಿರಬೇಕು. ವರಾಹದ ಮುಖವು ಸ್ವಲ್ಪ ಎತ್ತಿದಂತೆ ಇದ್ದು ಅದರ ಮೂರ್ತಿಯು

ದೇವಿಯ ವಾಸನೆಯನ್ನು ಆಸ್ವಾದಿಸುತ್ತಿರಬೇಕು. ವರಾಹದ ಬಣ್ಣವು ಸಂಜೆಯ ನಸುಗತ್ತಲೆಯಂತಿರಬೇಕು ಹಾಗು ಭೂದೇವಿಯು ಸೂಕ್ತ ಆಭರಣಗಳೊಂದಿಗೆ ಅಂಜಲಿ ಮುದ್ರೆಯಲ್ಲಿರಬೇಕು. ಆಕೆಯ ಮುಖವು ಸ್ವಲ್ಪ ಎತ್ತಿದ್ದು ದೇವರನ್ನು ನಾಚಿಕೆ ಮತ್ತು ಸಂತೋಷದಿಂದ ನೋಡುತ್ತಿರಬೇಕು. ಆಕೆಯ ತಲೆಯು ವರಾಹದ ವಕ್ಷಸ್ಥಲದವರೆಗೆ ಇರಬೇಕು ಮತ್ತು ಈಕೆಯನ್ನು ಪಂಚತಲ ಅಳತೆಯಲ್ಲಿ ಕೆತ್ತಬೇಕು.

ಹಂಪಿ ಪರಿಸರದಲ್ಲಿ ವರಾಹನ ಬಿಡಿಶಿಲ್ಪ ಮತ್ತು ಉಬ್ಬುಶಿಲ್ಪಗಳು ದೊರಕಿವೆ. ಹಂಪಿಯ ಕೇಂದ್ರ ವಲಯದಲ್ಲಿ ನರಮೃಗ ಮತ್ತು ಪ್ರಾಣಿ ರೂಪದ ಸುಮಾರು 18 ಶಿಲ್ಪಗಳು ಕಂಡುಬಂದಿವೆ. ಇಲ್ಲಿನ ಬಹುಪಾಲು ಶಿಲ್ಪಗಳು ಇಲ್ಲಿರುವ ವಿವಿಧ ದೇವಾಲಯಗಳಲ್ಲಿವೆ. ಕಮಲಾಪುರದ ಕೇಂದ್ರ ಸರ್ಕಾರದ ವಸ್ತುಸಂಗ್ರಹಾಲಯದಲ್ಲಿ ಅಪರೂಪದ ಕುಳಿತ ಪ್ರಳಯವರಾಹನ ಬಿಡಿ ಶಿಲ್ಪವಿದೆ. ಇದೇ ಊರಿನ ಶ್ರೀರಾಘವೇಂದ್ರಸ್ವಾಮಿಯವರ ಮಠದಲ್ಲಿ ಪೂಜೆಗೊಳ್ಳುತ್ತಿರುವ ಸಮಭಂಗಿಯಲ್ಲಿರುವ ಭೂವರಾಹನ ಬಿಡಿ ಶಿಲ್ಪವಿದೆ. ಇವುಗಳೊಂದಿಗೆ ಹಂಪಿ ಪರಿಸರದಲ್ಲಿರುವ ದೇವಾಲಯಗಳ ಬಾಗಿಲವಾಡದ ಲತಾಸುರುಳಿ ಅಲಂಕರಣೆ ಮತ್ತು ಇತರೆ ಭಾಗಗಳಲ್ಲಿ ದಶಾವತಾರ ಶಿಲ್ಪಗಳನ್ನು ತೋರುವಾಗ ವರಾಹನನ್ನು ಕಿರು ಉಬ್ಬುಶಿಲ್ಪಗಳಾಗಿ ತೋರಲಾಗಿದೆ. ಅವುಗಳನ್ನು ಇಲ್ಲಿ ಪರಿಗಣಿಸಿಲ್ಲ. ಪ್ರಧಾನವಾಗಿ ಕಂಡುಬರುವ ಉಬ್ಬುಶಿಲ್ಪಗಳನ್ನು ಮಾತ್ರ ಗಣನೆಗೆ ತೆಗೆದುಕೊಳ್ಳಲಾಗಿದೆ.

ಹಂಪಿ ಪರಿಸರದ ದೇವಾಲಯಗಳಲ್ಲಿರುವ ವರಾಹ ಶಿಲ್ಪಗಳ ಕೋಷ್ಟ

	ವಿರೂಪಾಕ್ಷ (ಕ್ರಿ.ಶ.9–16ನೇ ಶತಮಾನ)	ಪ್ರಸನ್ನ ವಿರೂಪಾಕ್ಷ (ಕ್ರಿ.ಶ.13–14ನೇ ಶತಮಾನ)	ಹಜಾರ ರಾಮಚಂದ್ರ (ಕ್ರಿ.ಶ.13–14ನೇ ಶತಮಾನ)	ಕೃಷ್ಣ (ಕ್ರಿ.ಶ.1513)	ವಿಠಲ (ಕ್ರಿ.ಶ.1422–46)	ಪಟ್ಟಾಭಿರಾಮ (ಕ್ರಿ.ಶ.1530–40)	ಮಾಲ್ಯವಂತ ರಘುನಾಥ (ಕ್ರಿ.ಶ.1534–42)	ತಿರುವೆಂಗಳನಾಥ (ಅಚ್ಯುತರಾಯ) (ಕ್ರಿ.ಶ.1534)	ಒಟ್ಟು
ನರಮೃಗ ರೂಪದ ವರಾಹ	2	0	3	1	1	1	2	0	10
ಮೃಗರೂಪದ ವರಾಹ	1	0	0	1	2	2	0	0	6

ಕೋಟಿಲಿಂಗ ಮತ್ತು ಕಮಲಮಹಲದ ಹತ್ತಿರವಿರುವ ನೈಸರ್ಗಿಕ ಕಣಶಿಲೆಯ ಬೆಟ್ಟದಲ್ಲಿರುವ ಒಂದು ಬಂಡೆಯಲ್ಲಿ ದಶಾವತಾರದ ಉಬ್ಬುಶಿಲ್ಪಗಳಿವೆ. ಇದರಲ್ಲಿ ದಶಾವತಾರಗಳನ್ನು ಕ್ರಮವಾಗಿ ಸಾಲಿನಲ್ಲಿ ಕೆತ್ತಲಾಗಿದ್ದು ವರಾಹನನ್ನು ಮೂರನೆಯ ಅವತಾರವಾಗಿ ತೋರಲಾಗಿದೆ. ವಿಷ್ಣುವು ದಶಾವತಾರ ತಾಳಿದ ಅನುಕ್ರಮದಂತೆ ಇಲ್ಲಿ ಕೆತ್ತಲಾಗಿದೆ. ವರಾಹನು ಮೂರನೆಯ ಸ್ಥಾನವನ್ನು ಪಡೆದಿದ್ದಾನೆ. ಈ ಎರಡೂ ಶಿಲಾಫಲಕಗಳು ಕಡಿದಾದ ಕಣಶಿಲೆಯಲ್ಲಿ, ಸುಲಭವಾಗಿ ತಲುಪಲಾಗದ ಎತ್ತರದ ಸ್ಥಳದಲ್ಲಿ ಕೆತ್ತಿರುವುದರಿಂದ ಅವುಗಳು ಒರಟಾಗಿ ಮೂಡಿದೆ. ಈ ಶಿಲ್ಪವು ಸಮಭಂಗಿಯಲ್ಲಿದ್ದು ನಾಲ್ಕು ಕೈಗಳಿದ್ದು, ಮೇಲಿನ ಎರಡು ಕೈಗಳಲ್ಲಿ ಶಂಖ ಮತ್ತು ಚಕ್ರವಿದ್ದು, ಕೆಳಗಿನ ಎರಡು ಕೈಗಳು ಕ್ರಮವಾಗಿ ಅಭಯ ಮತ್ತು ವರದ ಮುದ್ರೆಯಗಳಲ್ಲಿವೆ. ದೇವತೆಯು ಧೋತಿಯನ್ನು ಧರಿಸಿದ್ದು, ಕಿರೀಟ ಮಕುಟಧಾರಿಯಾಗಿ ಕಂಠದಲ್ಲಿ ಹಾರವನ್ನು ಧರಿಸಿದ್ದಾನೆ. ಶಿಲ್ಪವು ಒರಟಾಗಿ ಇರುವುದರಿಂದ ದೇವತೆಯ ಕೈಗಡಗ, ಕಾಲ್ಗಡಗ, ಕರ್ಣಕುಂಡಲ ಮುಂತಾದ ಆಭರಣಗಳು ಸ್ಪಷ್ಟವಾಗಿ ಕಾಣುವುದಿಲ್ಲ.

ಹಜಾರ ರಾಮಚಂದ್ರ ದೇವಾಲಯದ ರಂಗಮಂಟಪದಲ್ಲಿರುವ ಕಪ್ಪು ಶಿಲೆಯ ಕಂಬದ ಮೇಲೆ ಭೂವರಾಹ ಅಥವಾ ನೃವರಾಹನ ಸುಂದರ ಉಬ್ಬುಶಿಲ್ಪವಿದೆ. ಅದರಲ್ಲಿ ವರಾಹನು ಒಂದು ಪೀಠದ ಮೇಲೆ ಕುಳಿತು ಬಲಗಾಲನ್ನು ಇಳಿಬಿಟ್ಟಿರುವನು. ಕುಳಿತ ಪೀಠದ ಮೇಲೆ ಎಡಗಾಲನ್ನು ಮಡಚಿ ಇರಿಸಿದ್ದು ಅವನ ತೊಡೆಯ ಮೇಲೆ ಭೂದೇವಿಯು ಕುಳಿತಿರುವಳು. ದೇವಿಗೆ ಎಡತೊಡೆಯನ್ನು ಆಸನವಾಗಿ ನೀಡಿರುವನು. ವರಾಹನಿಗೆ ನಾಲ್ಕು ಕೈಗಳಿದ್ದು, ಮೇಲಿನ ಎರಡು ಕೈಗಳಲ್ಲಿ ಚಕ್ರ ಮತ್ತು ಶಂಖಗಳಿದ್ದರೆ, ಕೆಳಗಿನ ಎಡಗೈ ಭೂದೇವಿಯ ಸೊಂಟವನ್ನು ಬಳಸಿದೆ. ಬಲಗೈ ಮುರಿದಿದ್ದು ಹಾಳಾಗಿದೆ. ವರಾಹನ ಎರಡು ಕಿವಿಗಳು ನೈಜವಾಗಿದ್ದು ಮೇಲಕ್ಕೆ ನೆಟ್ಟಗೆ ನಿಂತಂತೆ ತೋರಲಾಗಿದೆ. ವರಾಹವು ಕಿರೀಟಮಕುಟ, ಹಾರ, ಚನ್ನವೀರ, ಕೈಗಡಗ, ಕಾಲ್ಗಡಗ, ಸಡಿಲವಾದ ಕಾಲ ಬಳೆ (ಕಾಲ್ಗಡಗ) ಮತ್ತು ಧೋತಿಯನ್ನು ಧರಿಸಿದ್ದಾನೆ. ಭೂದೇವಿಗೆ ಎರಡು ಕೈಗಳಿವೆ. ದೇವಿಯು ಎಡಗೈಯಲ್ಲಿ ತೊಟ್ಟಿರುವ ಹೂವಿನ ಮೊಗ್ಗು ಹಿಡಿದಿದ್ದು ಬಲಗೈ ದೇವರ ಬೆನ್ನ ಹಿಂದಿದ್ದು ಆಲಿಂಗನ ಮಾಡಿರುವಂತೆ ತೋರಲಾಗಿದೆ. ದೇವಿಯು ಸೀರೆಯನ್ನು ಧರಿಸಿದ್ದು, ಕಿರೀಟಮಕುಟ, ಹಾರ, ಕಾಲ್ಗಡಗ, ಮುಂತಾದ ಆಭರಣಗಳನ್ನು ಧರಿಸಿದ್ದಾಳೆ. ಇವರಿಬ್ಬರೂ ಮಕರತೋರಣಗಳಿರುವ ಪ್ರಭಾವಳಿಯ ನಡುವೆ ಕುಳಿತಂತೆ ತೋರಲಾಗಿದೆ. ಕೀರ್ತಿಮುಖವು ತೋರಣದ ಮಧ್ಯೆ, ಮೇಲ್ಭಾಗದಲ್ಲಿದೆ. ಈ ಉಬ್ಬುಶಿಲ್ಪವನ್ನು ಅತ್ಯಂತ ಜಾಗರೂಕತೆಯಿಂದ ಎದ್ದುಬರುವಂತೆ ಪ್ರಧಾನ ಉಬ್ಬುಶಿಲ್ಪವಾಗಿ ಕೆತ್ತಿರುವುದರಿಂದ ಶಿಲ್ಪದಲ್ಲಿ ವಿವರಗಳು ಸ್ಪಷ್ಟವಾಗಿ ಕಾಣುತ್ತವೆ. ಈ ಇಬ್ಬರು ದೇವತೆಗಳು ನೋಡುಗರನ್ನು ನೇರವಾಗಿ ನೋಡುವಂತೆ ಕೆತ್ತಲಾಗಿದೆ.

ಇದೇ ದೇವಾಲಯದ ಮುಖಮಂಟಪದಲ್ಲಿರುವ ಒಂದು ಕಂಬದ ಮೇಲೆ ವರಾಹ ಮತ್ತು ಭೂದೇವಿಯ ಒಂದು ವಿಶೇಷ ಉಬ್ಬುಶಿಲ್ಪವಿದೆ. ಇದರಲ್ಲಿ ವರಾಹನು ತನ್ನ ತುಸುಬಾಗಿದ ಬಲಗಾಲ ಮೇಲೆ ನಿಂತಿದ್ದು ಲಲಿತಾಸನದಲ್ಲಿರುವಂತೆ, ಕಾಲನ್ನು ಮಡಚಿರುವನು. ಅದರ ಮೇಲೆ ಭೂದೇವಿಯು ಕುಳಿತಿರುವಳು. ವರಾಹನು ನಾಲ್ಕು ಕೈಗಳನ್ನು ಹೊಂದಿದ್ದು, ಕೆಳಗಿನ ಬಲಗೈ ಅಭಯ ಮುದ್ರೆಯಲ್ಲಿದ್ದು, ಮೇಲಿನ ಬಲಗೈ ಚಕ್ರ ಮತ್ತು ಎಡಗೈ ಶಂಖವನ್ನು ಹಿಡಿದಿದೆ. ಕೆಳಗಿನ ಎಡಗೈ ಭೂದೇವಿಯ ನಡುವನ್ನು ಬಳಸಿದಂತೆ ಹಿಂಬದಿಯಿಂದ ಬಂದು ವರದ ಮುದ್ರೆಯಲ್ಲಿದೆ. ಆತನು ಉದ್ದನೆಯ ಕಿರೀಟಮಕುಟ, ಕಂಠಹಾರ, ಕಿವಿಯಲ್ಲಿ ಓಲೆ ಹಾಕಿ ಎದೆಗೆ ಪಟ್ಟಿ, ಕಟಿಬಂಧ, ಉದ್ದನೆಯ ವನಮಾಲ, ಬಾಹುವಳಯ, ಮಣಿಕಟ್ಟಿನ ಆಭರಣ ಮತ್ತು ಕಾಲ್ಗಡಗಗಳನ್ನು ಧರಿಸಿರುವನು. ವರಾಹನ ಎಡಬದಿಗೆ ತಿರುಗಿದ್ದು ಭೂದೇವಿಯ ಮುಖವನ್ನು ನೋಡುತ್ತಿರುವಂತೆ ತೋರಲಾಗಿದೆ. ವರಾಹನ ಕಿವಿಯು ನೆಟ್ಟಗೆ ನಿಮಿರಿದ್ದು ಮೇಲ್ಮುಖವಾಗಿರುವಂತೆ ನೈಜವಾಗಿ ಕೆತ್ತಲಾಗಿದೆ. ವಿಜಯನಗರ ಶೈಲಿಯಲ್ಲಿ ವರಾಹನ ಮುಖವನ್ನು ನಿಜವಾದ ವರಾಹದ (ಹಂದಿಯ) ಮುಖದಂತೆ ಕೆತ್ತಿರುವುದು ಗಮನಾರ್ಹ. ವರಾಹದ ಮಡಚಿದ ಎಡ ಭಾಗದ ತೊಡೆಯ ಮೇಲೆ ಭೂದೇವಿಯು ಕುಳಿತಿರುವಳು. ಅವಳಿಗೆ ಎರಡು ಕೈಗಳಿವೆ. ಎಡಗೈಯಲ್ಲಿ ತೊಟ್ಟಿನೊಂದಿಗಿರುವ ತಾವರೆ ಮೊಗ್ಗು ಹಿಡಿದಂತೆ ಮತ್ತು ಬಲಗೈ ವಿಷ್ಣುವಿನ ಬೆನ್ನನ್ನು ಬಳಸಿದಂತೆ ಕೆತ್ತಲಾಗಿದೆ. ಅವಳು ಸೀರೆಯುಟ್ಟು ಕಿರೀಟಮಕುಟ, ಕಿವಿಯಲ್ಲಿ ಓಲೆ, ಕಂಠಹಾರ, ಹಾರ ಮತ್ತು ಕಟಿಬಂಧವನ್ನು ಧರಿಸಿರುವಳು.

ಮೇಲೆ ವಿವರಿಸಿರುವ ಹಜಾರ ರಾಮಚಂದ್ರ ದೇವಾಲಯದಲ್ಲಿರುವ ಭೂವರಾಹ ಶಿಲ್ಪವನ್ನು ಹೋಲುವ ಒಂದು ಉಬ್ಬುಶಿಲ್ಪವು ವಿಠಲ ದೇವಾಲಯದಲ್ಲಿದೆ. ಶಿಲ್ಪದಲ್ಲಿರುವ ಬಟ್ಟೆ, ಮುದ್ರೆಗಳು ಮತ್ತು ಇತರೆ ವಿವರಗಳು ಒಂದೇ ರೀತಿಯಲ್ಲಿದ್ದು ಸ್ವಾಮ್ಯತೆಯನ್ನು ಹೊಂದಿದೆ. ಆದರೆ ವರಾಹನ ಮೂತಿಯು ಪ್ರಮುಖವಾಗಿ, ದಪ್ಪ ಮತ್ತು ದೊಡ್ಡದಾಗಿದ್ದು ಗಮನಾರ್ಹವಾಗಿದೆ. ಇವೆರಡೂ ಶಿಲ್ಪಗಳು ಪಾರ್ಶ್ವಮುಖಿಯಾಗಿದ್ದು, ದೇವರ ಮುಖವು ಒಂದು ಕಡೆ ತಿರುಗಿರುವಂತೆ ತೋರಲಾಗಿದೆ. ಇವೆರಡೂ ಶಿಲ್ಪಗಳು ವೈಖಾನಸ ಆಗಮದಂತೆ ಕೆತ್ತಲಾಗಿದೆ. ಶಿಲ್ಪ ಪಠ್ಯಗಳ ಉಲ್ಲೇಖದಂತೆ ಈ ಶಿಲ್ಪಗಳಿದ್ದರೂ, ಕೆಲವು ಅಂಶಗಳಲ್ಲಿ ಭಿನ್ನತೆಯನ್ನು ತೋರಲಾಗಿದೆ.

ವಿಠಲ ದೇವಾಲಯದಲ್ಲಿರುವ ಕಂಬದ ಮೇಲೆ ಸಮಭಂಗಿಯಲ್ಲಿರುವ ವರಾಹ ಶಿಲ್ಪವು ಮಕರತೋರಣ ಮತ್ತು ಬಳ್ಳಿಯ ಅಲಂಕರಣೆಗಳಿರುವ ಕೋಷ್ಠ ರಚನೆಯಲ್ಲಿದೆ. ವರಾಹ ಶಿಲ್ಪವು ನಾಲ್ಕು ಕೈಗಳನ್ನು ಹೊಂದಿದ್ದು ಅವುಗಳ ಮೇಲಿನ ಎರಡು ಕೈಗಳಲ್ಲಿ ಚಕ್ರ ಮತ್ತು ಶಂಖವಿದ್ದರೆ, ಕೆಳಗಿನ ಎರಡು ಕೈಗಳು ಅಭಯ ಮತ್ತು ವರದ ಮುದ್ರೆಗಳಲ್ಲಿವೆ. ದೇವತೆಯು ಕಿರೀಟಮಕುಟವನ್ನು ಹೊಂದಿದ್ದು ಸಾಧಾರಣವಾಗಿ ಧರಿಸುವ ಆಭರಣಗಳನ್ನು ಧರಿಸಿರುವನು. ದೇವತೆಯು ನೆರಿಗೆಗಳಿರುವ ಧೋತಿಯನ್ನು ಧರಿಸಿರುವನು. ಮುಖದ ಭಾಗವು ಸವೆದಿದ್ದು ಶಿಥಿಲಗೊಂಡಿರುವುದರಿಂದ ಮುಖ ಲಕ್ಷಣಗಳು ಸ್ಪಷ್ಟವಾಗಿ ಗೋಚರಿಸುವುದಿಲ್ಲ.

ವಿಠಲ ದೇವಾಲಯದ ಹೊರಭಾಗದಲ್ಲಿರುವ ಅಪೂರ್ಣವಾಗಿರುವ ಮಂಟಪದಲ್ಲಿರುವ ಕಂಬದ ಮೇಲೆ ಯಜ್ಞವರಾಹನ ಶಿಲ್ಪವಿದೆ. ಇದರಲ್ಲಿ ದೇವತೆಯು ಪೀಠದ ಮೇಲೆ ಪದ್ಮಾಸನದಲ್ಲಿ ಕುಳಿತು ಬಲಗಾಲನ್ನು ಸ್ವಲ್ಪ ಮಡಚಿದ್ದು ಪೀಠದಿಂದ ಇಳಿಬಿಟ್ಟಂತೆ ತೋರಲಾಗಿದೆ. ದೇವತೆಯು ನಾಲ್ಕು ಕೈಗಳನ್ನು ಹೊಂದಿದ್ದು ಕೆಳಭಾಗದ ಎರಡು ಕೈಗಳು ಅಭಯ ಮತ್ತು ವರದ ಮುದ್ರೆಗಳಲ್ಲಿ ಇದ್ದರೆ, ಮೇಲಿನ ಎರಡು ಕೈಗಳಲ್ಲಿ ಶಂಖ ಮತ್ತು ಚಕ್ರವನ್ನು ಹಿಡಿದಿರುವನು. ಕಿರೀಟಮಕುಟಧಾರಿಯಾಗಿರುವ ದೇವತೆಯ ದೇವಿಯರನ್ನು ಇಲ್ಲಿ ತೋರಿಲ್ಲ. ಈ ದೇವತೆಯನ್ನು ಪ್ರಳಯವರಾಹ ಎಂದು ಸಹ ಗುರುತಿಸಬಹುದು. ಇಂತಹದೇ ಯಜ್ಞವರಾಹ ಅಥವಾ ಪ್ರಳಯವರಾಹದ ಉಬ್ಬುಶಿಲ್ಪವನ್ನು ಕೃಷ್ಣ ದೇವಾಲಯದ ಕಂಬದಲ್ಲಿ ಕಾಣಬಹುದು. ಈ ದೇವತೆಯು ಕಿರೀಟಮಕುಟಧಾರಿಯಾಗಿದ್ದು ಮಕರತೋರಣದ ಮಧ್ಯೆ ಪದ್ಮಾಸನದಲ್ಲಿ ಪೀಠದ ಮೇಲೆ ಕುಳಿತು ಬಲಗಾಲನ್ನು ಪೀಠದಿಂದ ಇಳಿಬಿಟ್ಟಂತೆ ತೋರಲಾಗಿದೆ. ದೇವತೆಯು ನಾಲ್ಕು ಕೈಗಳನ್ನು ಹೊಂದಿದ್ದು ಕೆಳಗಿನ ಎರಡು ಕೈಗಳು ಅಭಯ ಮತ್ತು ವರದ ಮುದ್ರೆಗಳನ್ನು ತೋರುತ್ತಿದ್ದು ಮೇಲಿನ ಎರಡು ಕೈಗಳು ಕ್ರಮವಾಗಿ ಶಂಖ ಮತ್ತು ಚಕ್ರಗಳು, ಎಡ ಮತ್ತು ಬಲಗೈಗಳಲ್ಲಿವೆ. ಶಿಲ್ಪ ಪಠ್ಯಗಳಂತೆ ಯಜ್ಞವರಾಹ ಮತ್ತು ಪ್ರಳಯವರಾಹ ಶಿಲ್ಪಗಳನ್ನು ತನ್ನ ಪತ್ನಿ (ದೇವಿ)ಯೊಂದಿಗೆ ತೋರಬೇಕು. ಪ್ರಳಯವರಾಹ ಮತ್ತು ಯಜ್ಞವರಾಹ ಶಿಲ್ಪಗಳನ್ನು ಅವರುಗಳ ಪತ್ನಿಯರೊಂದಿಗೆ ಕುಳಿತಿರುವಂತೆ ತೋರಿಸಬೇಕು ಎಂದು ಶಿಲ್ಪರತ್ನವು ವಿವರಿಸಿದೆ. ಆದರೆ ಮೇಲೆ ಉಲ್ಲೇಖಿಸಿದ ಶಿಲ್ಪದಲ್ಲಿ ದೇವಿಯರನ್ನು ತೋರಿಲ್ಲ. ವಿಜಯನಗರ ಕಾಲದ ಶಿಲ್ಪಿಯು ಶಿಲ್ಪ ಪಠ್ಯಗಳಿಗಿಂತ ಭಿನ್ನವಾಗಿ ದೇವತೆಯ ಪತ್ನಿಯರು ಇಲ್ಲದಂತೆ ಇಲ್ಲಿ ತೋರಿರುವನು.

ವಿಠಲ ದೇವಾಲಯದಲ್ಲಿರುವ ಒಂದು ಕಂಬದಲ್ಲಿ ಭಿನ್ನ ಶೈಲಿಯಲ್ಲಿರುವ ಒಂದು ವರಾಹನ ಉಬ್ಬುಶಿಲ್ಪವಿದೆ. ವರಾಹನು ಸಿಂಹಾಸನ ಅಥವಾ ಒಂದು ಪೀಠದ ಮೇಲೆ ಕುಳಿತು ತನ್ನ ಬಲಗಾಲನ್ನು ಎಡಗಾಲಿನ ಮೇಲೆ ಇರಿಸಿ ಕುಳಿತಿರುವಂತೆ ತೋರಲಾಗಿದೆ. ದೇವತೆಯು ಕಿರೀಟಮಕುಟವನ್ನು ಧರಿಸಿದ್ದು ಎರಡು ಕೈಗಳನ್ನು ಹೊಂದಿರುವನು. ದೇವತೆಯ ಬಲಗೈ ವ್ಯಾಖ್ಯಾನ ಮುದ್ರೆಯಲ್ಲಿದೆ. ಎಡಗೈ ದೇವತೆಯ ಭುಜದವರೆಗೆ ಎತ್ತಿರುವಂತೆ ತೋರಲಾಗಿದೆ. ಸಾಮಾನ್ಯವಾಗಿ ವರಾಹನಿಗೆ ನಾಲ್ಕು ಕೈಗಳನ್ನು ತೋರುತ್ತಿದ್ದು ಮೇಲಿನ ಎರಡು ಕೈಗಳಲ್ಲಿ ಆಯುಧಗಳಾದ ಶಂಖ ಮತ್ತು ಚಕ್ರಗಳನ್ನು ಹಿಡಿದಿರುವಂತೆ ತೋರಲಾಗುವುದು. ಆದರೆ ಈ ಶಿಲ್ಪದಲ್ಲಿ ಅವುಗಳನ್ನು ತೋರಿಸಿಲ್ಲ. ದೇವತೆಯನ್ನು ಪಾರ್ಶ್ವಮುಖಿಯಾಗಿ ತೋರಿರುವುದು ವಿಶೇಷವಾಗಿದೆ. ಆಗಮಗಳು ಮತ್ತು ಶಿಲ್ಪ ಪಠ್ಯಗಳು ಇಂತಹ ವರಾಹಮೂರ್ತಿಯ ಶಿಲ್ಪ ಲಕ್ಷಣಗಳನ್ನು ಉಲ್ಲೇಖಿಸಿಲ್ಲ.

ಕಮಲಾಪುರದ ಭಾರತೀಯ ಪುರಾತತ್ವ ಸರ್ವೇಕ್ಷಣ ಇಲಾಖೆಯ ವಸ್ತುಸಂಗ್ರಹಾಲಯದಲ್ಲಿ ಕುತೂಹಲಕಾರಿ ಮತ್ತು ಪೂರ್ಣಪ್ರಮಾಣದ ಸ್ವತಂತ್ರ ವರಾಹ ಶಿಲ್ಪವಿದೆ. ಇದನ್ನು ಹೊಸಪೇಟೆ ಸಮೀಪದ ಅನಂತಶಯನಗುಡಿ ಗ್ರಾಮದಿಂದ ತರಲಾಗಿದೆ. ಇದರಲ್ಲಿ ವರಾಹನು ಪಂಚರಥ ಪೀಠದ ಮೇಲೆ ಪದ್ಮಾಸನದಲ್ಲಿ ಕುಳಿತಂತೆ ತೋರಲಾಗಿದೆ. ದೇವತೆಯು

ನಾಲ್ಕು ಕೈಗಳನ್ನು ಹೊಂದಿದ್ದು ಮೇಲಿನ ಎರಡು ಕೈಗಳಲ್ಲಿ ಚಕ್ರ ಮತ್ತು ಶಂಖವನ್ನು ಬಲ ಮತ್ತು ಎಡಗೈಗಳಲ್ಲಿ ಹಿಡಿದಿದ್ದರೆ, ಕೆಳಗಿನ ಎರಡು ಕೈಗಳು ಅಭಯ ಮತ್ತು ವರದ ಮುದ್ರೆಗಳಲ್ಲಿವೆ. ಈ ಶಿಲ್ಪದಲ್ಲಿ ದೇವತೆಯು ಕಿರೀಟಮುಕುಟವನ್ನು ಧರಿಸಿಲ್ಲ. ದೇವತೆಯು ಹಾರ, ಉಪವೀತ, ವಕ್ಷಪಟ್ಟಿಕೆ, ಬಾಹುವಳಯ, ಕಂಕಣ ಮತ್ತು ಕಾಲ್ಗಡಗಳನ್ನು ಧರಿಸಿರುವನು. ಈ ಶಿಲ್ಪವನ್ನು ವೈಖಾನಸ ಆಗಮದ ಉಲ್ಲೇಖಕ್ಕಿಂತ ಭಿನ್ನವಾಗಿ ತೋರಲಾಗಿದೆ. ಮುಖ್ಯವಾಗಿ ಭೂದೇವಿ, ನಾಗ, ನಾಗಲೋಕ ಮುಂತಾದವುಗಳನ್ನು ತೋರಿಲ್ಲ. ಸ್ಕಾಂದಪುರಾಣ ಎರಡನೆಯ ಸಂಪುಟದಲ್ಲಿರುವಂತೆ ಈ ವರಾಹ ಶಿಲ್ಪನ್ನು ಕೆತ್ತಲಾಗಿದೆ.[4]

ಕಮಲಾಪುರದಲ್ಲಿರುವ ಶ್ರೀರಾಘವೇಂದ್ರಸ್ವಾಮಿ ಮಠದಲ್ಲಿ ಸಮಭಂಗದಲ್ಲಿ ನಿಂತಿರುವ ನಾಲ್ಕು ಕೈಗಳಿರುವ ಭೂವರಾಹನ ಕಪ್ಪುಶಿಲೆಯ ಶಿಲ್ಪವಿದೆ. ಮೇಲಿನ ಎರಡು ಕೈಗಳು ಶಂಖ ಮತ್ತು ಚಕ್ರವನ್ನು ಹಿಡಿದಿದ್ದು ಕೆಳಗಿನ ಎರಡು ಕೈಗಳು ಅಭಯ ಮತ್ತು ವರದ ಮುದ್ರೆಗಳಲ್ಲಿವೆ. ದೇವತೆಯು ಧೋತಿಯನ್ನು ಧರಿಸಿರುವುದು ಸ್ಪಷ್ಟವಾಗಿ ಕಾಣಬರುತ್ತದೆ. ತಲೆಯಲ್ಲಿ ಕಿರೀಟಮಕುಟ ಮತ್ತು ಕಂಠದಲ್ಲಿ ಹಾರವನ್ನು ಧರಿಸಿರುವನು. ಇತರೆ ಆಭರಣಗಳಾದ ಕೈಗಡಗ, ಕಾಲ್ಗಡಗ, ಕರ್ಣಕುಂಡಲ ಮತ್ತು ಇನ್ನಿತರ ಆಭರಣಗಳನ್ನು ಧರಿಸಿರುವನು. ದೇವತೆಯ ಪತ್ನಿಯರನ್ನು ಇಲ್ಲಿ ತೋರಿಲ್ಲ. ಈ ಭೂವರಾಹಸ್ವಾಮಿಯು ನಿತ್ಯ ಪೂಜೆಗೆ ಒಳಪಡುತ್ತಿದೆ.

ಹಂಪಿ ಪರಿಸರದಲ್ಲಿ ಒಟ್ಟು 6 ಮೃಗರೂಪದ ವರಾಹ ಶಿಲ್ಪಗಳು ದೊರಕಿವೆ. ಇವುಗಳಲ್ಲಿ ವರಾಹನನ್ನು ಹಂದಿಯ ರೂಪದಲ್ಲಿ ನಾಲ್ಕು ಕಾಲುಗಳಿರುವಂತೆ ತೋರಲಾಗಿದೆ. ಆದರೆ ದೇವತೆಯ ಪತ್ನಿ ಅಥವಾ ದೇವಿಯ ಶಿಲ್ಪಗಳನ್ನು ತೋರಿಲ್ಲ. ವಿರೂಪಾಕ್ಷ ಮತ್ತು ಕೃಷ್ಣ ದೇವಾಲಯಗಳಲ್ಲಿ ತಲಾ ಒಂದು ವರಾಹ ಶಿಲ್ಪಗಳಿವೆ. ಈ ಉಬ್ಬುಶಿಲ್ಪಗಳು ಉಳಿದ ಪ್ರಾಣಿ ಶಿಲ್ಪಗಳಂತೆ ತೋರಲಾಗಿದೆ. ವಿಠಲ ಮತ್ತು ಪಟ್ಟಾಭಿರಾಮ ದೇವಾಲಯಗಳಲ್ಲಿ ಮೇಲೆ ವಿವರಿಸಿದ ಲಕ್ಷಣಗಳಿರುವ ವರಾಹನ ತಲಾ ಎರಡು ಶಿಲ್ಪಗಳಿವೆ. ವಿಜಯನಗರ ಅರಸರ ರಾಜಲಾಂಛನವು ವರಾಹವೇ ಆಗಿತ್ತು ಎಂಬುದನ್ನು ಇಲ್ಲಿ ಸ್ಮರಿಸಬಹುದು. ಒಂದು ದಂಡ, ಸೂರ್ಯ ಮತ್ತು ಚಂದ್ರರು ವರಾಹದ ಪಕ್ಕದಲ್ಲಿರುವಂತೆ ತೋರಲಾಗಿದೆ. ವರಾಹವನ್ನು ಬಾದಾಮಿ ಚಾಲುಕ್ಯರು ಸಹ ರಾಜಲಾಂಛನವನ್ನಾಗಿಸಿಕೊಂಡಿದ್ದರು. ಯಾವ ರೀತಿಯಲ್ಲಿ ವಿಷ್ಣುವು ವರಾಹ ಅವತಾರವನ್ನು ತಾಳಿ ಭೂಮಿಯನ್ನು (ಭೂದೇವಿ) ರಕ್ಷಿಸಿದನೋ ಅದೇ ರೀತಿಯಲ್ಲಿ ಅರಸರು ಭೂಮಿಯನ್ನು ರಕ್ಷಿಸುತ್ತಾರೆ ಎಂಬುದನ್ನು ಸಾಂಕೇತಿಕವಾಗಿ ತಮ್ಮ ಲಾಂಛನದ ಮೂಲಕ ತೋರಿರುವರು.

ಕುತೂಹಲಕಾರಿ ಅಂಶವೆಂದರೆ, ಹಂಪಿಯಲ್ಲಿ ವರಾಹನಿಗೆಂದು ಎರಡು ದೇವಾಲಯಗಳು ನಿರ್ಮಿಸಿರುವುದನ್ನು ಕಾಣಬಹುದು. ಎರಡು ದೇವಾಲಯಗಳು ವಿಠಲ ದೇವಾಲಯದ ಸಮೀಪದಲ್ಲಿವೆ. ಆದರೆ ಇವೆರಡೂ ದೇವಾಲಯಗಳಲ್ಲಿ ಮೂಲ ಮೂರ್ತಿಯು ಇಲ್ಲ. ಪ್ರಾಯಶಃ ಇಲ್ಲಿನ ವಿಗ್ರಹಗಳನ್ನು ಸ್ಥಳಾಂತರಿಸಿರಬಹುದು ಅಥವಾ ಕಾಲನ ತುಳಿತಕ್ಕೆ ಸಿಲುಕಿ ನಾಶವಾಗಿರಬಹುದು. ಆದರೆ ಪಾರಂಪರಿಕವಾಗಿ ಈ ಎರಡೂ ದೇವಾಲಯಗಳನ್ನು ವರಾಹ ದೇವಾಲಯವೆಂದೇ ಗುರುತಿಸಲಾಗುತ್ತದೆ. ಇಲ್ಲಿರುವ ಇತರೆ ಉಬ್ಬುಶಿಲ್ಪಗಳ ಆಧಾರಗಳ ಮೇಲೆ ಇವು ವೈಷ್ಣವ ಪಂಥಕ್ಕೆ ಸೇರಿದವೆಂದು ಗುರುತಿಸಬಹುದಾಗಿದೆ. ಹಂಪಿ ಪರಿಸರದಲ್ಲಿ ವರಾಹನ ಎರಡು ದುಂಡು ಶಿಲ್ಪಗಳು ದೊರಕಿರುವುದರಿಂದ, ಪ್ರಾಯಶಃ ಈ ದೇವಾಲಯಗಳಲ್ಲಿ ವರಾಹನ ಮೂರ್ತಿಶಿಲ್ಪಗಳನ್ನು ಇರಿಸಿ ಪೂಜಿಸುತ್ತಿದ್ದರು ಎಂದು ಸಂದೇಹಕ್ಕೆ ಎಡೆಮಾಡದೇ ನಿರ್ಧರಿಸಬಹುದು. ಇದಕ್ಕೆ ಪೂರಕವಾಗಿ ಕಮಲಾಪುರದ ವಸ್ತುಸಂಗ್ರಹಾಲಯದಲ್ಲಿರುವ ವಿಭಿನ್ನ ಶೈಲಿಯ ವರಾಹನ ಶಿಲ್ಪ ಮತ್ತು ಶ್ರೀರಾಘವೇಂದ್ರಸ್ವಾಮಿ ಮಠದಲ್ಲಿ ಇಂದಿಗೂ ಪೂಜೆಗೆ ಒಳಪಡುತ್ತಿರುವ ವರಾಹನ ಶಿಲ್ಪಗಳನ್ನು ಉದಾಹರಿಸಬಹುದು. ಮಠದಲ್ಲಿ ಪ್ರತಿ ವರ್ಷ ವರಾಹ ಜಯಂತಿಯನ್ನು ಆಚರಿಸಲಾಗುತ್ತದೆ.

ಹಂಪಿ ಪರಿಸರದಲ್ಲಿ ದೊರಕಿರುವ ಒಟ್ಟು 18 ವರಾಹ ಶಿಲ್ಪಗಳಲ್ಲಿ 12 ನರಮೃಗ ಮತ್ತು 6 ಮೃಗ ರೂಪದ ಶಿಲ್ಪಗಳಾಗಿವೆ. ಭೂವರಾಹ, ಯಜ್ಞವರಾಹ ಮತ್ತು ಪ್ರಳಯವರಾಹ ಎಂಬ ಮೂರು ಭಿನ್ನ ಮಾದರಿಯ ಅಥವಾ ಶೈಲಿಯ ಶಿಲ್ಪಗಳು ಇಲ್ಲಿ ಕಂಡುಬರುತ್ತದೆ. ಇದರೊಂದಿಗೆ ವ್ಯಾಖ್ಯಾನ ವರಾಹನ ಉಬ್ಬುಶಿಲ್ಪವನ್ನು ಮೊದಲ ಬಾರಿಗೆ ಇಲ್ಲಿ ಕಾಣಬಹುದು. ವಿಜಯನಗರ ಕಾಲದ ಶಿಲ್ಪಿಯು ವೈಖಾನಸ, ಶಿಲ್ಪರತ್ನ ಮತ್ತು ಸ್ಕಾಂದಪುರಾಣಗಳಲ್ಲಿ ಉಲ್ಲೇಖಿತವಾಗಿರುವಂತೆ ಪಠ್ಯಗಳನ್ನು ಅನುಸರಿಸಿ ಶಿಲ್ಪಗಳನ್ನು ಕೆತ್ತಿರುವುದನ್ನು ಕಾಣಬಹುದು. ಕೆಲವು ಸಂದರ್ಭಗಳಲ್ಲಿ ಶಿಲ್ಪ ಪಠ್ಯಗಳನ್ನು ಹೊರತುಪಡಿಸಿ, ಕೆಲವು ಹೊಸ ಲಕ್ಷಣಗಳನ್ನು ತೋರಿದರೆ, ಇನ್ನುಳಿದ ಸಂದರ್ಭಗಳಲ್ಲಿ ಶಿಲ್ಪ ಪಠ್ಯಗಳನ್ನು ಚಾಚೂ ತಪ್ಪದೇ ಆಧರಿಸಿ, ಕೆತ್ತಿರುವುದು ಕಾಣಬಹುದು. ಸ್ಥಳೀಯ ಅಗತ್ಯಗಳ ಪೂರೈಕೆಗಾಗಿ ಇಂತಹ ಶಿಲ್ಪಗಳನ್ನು ಕೆತ್ತಲಾಗಿದೆ ಎಂದು ತೋರುತ್ತದೆ. ಇದರೊಂದಿಗೆ ಪಠ್ಯದಲ್ಲಿ ಇಲ್ಲದ ಹೊಸ ಮಾದರಿಯ ಶಿಲ್ಪಗಳಾದ ವ್ಯಾಖ್ಯಾನವರಾಹ ಉಬ್ಬುಶಿಲ್ಪಗಳನ್ನು ಮೊದಲ ಬಾರಿಗೆ ಪರಿಚಯಿಸಲಾಗಿದೆ. ಶಿಲ್ಪ ಪಠ್ಯದಲ್ಲಿ ಉಲ್ಲೇಖಿತವಾದಂತೆ ನಾಗ, ನಾಗಲೋಕ, ಆದಿಶೇಷ, ಪತ್ನಿಯರಾದ ಲಕ್ಷ್ಮಿ ಮತ್ತು ಭೂದೇವಿಯರನ್ನು ತೋರುವ ಕ್ರಮವನ್ನು ಕೈಬಿಟ್ಟು ಯಾವುದಾದರೂ ಒಂದು ದೇವಿ ಅಥವಾ ಇಬ್ಬರೂ ದೇವಿಯರನ್ನು ತೋರುವ ಕ್ರಮವನ್ನು ಶಿಲ್ಪಿಗಳು ಮಾಡಿದರು. ವಿಜಯನಗರ ಪೂರ್ವ ಕಾಲಘಟ್ಟಗಳಲ್ಲಿನ ವರಾಹ ಶಿಲ್ಪಗಳಲ್ಲಿ ವರಾಹನಿಗೆ ಕೋರೆ ಹಲ್ಲನ್ನು ಪ್ರಧಾನವಾಗಿ ತೋರಲಾಗುತ್ತಿತ್ತು. ಭೂದೇವಿಯನ್ನು ಸಮುದ್ರ ಅಥವಾ ಪಾತಾಳದಿಂದ ಎತ್ತಿಕೊಂಡು ಬರುವಾಗ ಈ ಕೋರೆಹಲ್ಲುಗಳ ಮೇಲೆ ಕುಳ್ಳಿರಿಸಿಕೊಂಡು ಬರುವಂತೆ ತೋರಲಾಗುತ್ತಿತ್ತು. ಆದರೆ ಹಂಪಿ ಪರಿಸರದಲ್ಲಿರುವ ಎಲ್ಲಾ ವರಾಹ ಶಿಲ್ಪಗಳು ಕೋರೆಹಲ್ಲುಗಳು ಇಲ್ಲದೆ ಅತ್ಯಂತ ಮೃದುವಾದ ಸೌಮ್ಯ ಮತ್ತು ಶಾಂತ ಸ್ವರೂಪ ಭಾವನೆಯುಳ್ಳದ್ದಾಗಿವೆ. ಗುಪ್ತರ ಕಾಲದಿಂದ ವಿಜಯನಗರ ಕಾಲದವರೆಗೆ ನಾವು ವರಾಹ ಶಿಲ್ಪಗಳ ಬೆಳವಣಿಗೆಯನ್ನು ಗಮನಿಸಿದರೆ ಒಂದು ರೀತಿಯ ವಿಕಸನವನ್ನು ಗುರುತಿಸಬಹುದು. ಪ್ರಾರಂಭ ಕಾಲದ ವರಾಹ ಶಿಲ್ಪಗಳು ಕೋರೆಹಲ್ಲುಗಳನ್ನು ಹೊಂದಿ, ದೃಢವಾದ ಮೈಕಟ್ಟಿನೊಂದಿಗೆ ಬಲಶಾಲಿಯಾಗಿ ಹೋರಾಟ ಸ್ವರೂಪದ ಭಾವನೆಗಳನ್ನು ಸೂಚಿಸುವ ಲಕ್ಷಣಗಳನ್ನು ಹೊಂದಿದ್ದರೆ ವಿಜಯನಗರ ಕಾಲದ ಶಿಲ್ಪಗಳು ಅದಕ್ಕೆ ವಿರುದ್ಧವಾಗಿ ಸೌಮ್ಯ, ಶಾಂತ ಮತ್ತು ಮೃದು ಧೋರಣೆಯ ಮುಖ ಲಕ್ಷಣಗಳನ್ನು ಹೊಂದಿ ವರ ನೀಡುವ ಮೂರ್ತಿಶಿಲ್ಪಗಳಾಗಿವೆ. ಇವುಗಳು ಒಂದು ರೀತಿಯ 'ಪಳಗಿಸಲಾದ' ಮೃಗಗಳಂತೆ, ಕೋರೆ ಹಲ್ಲುಗಳಿಲ್ಲದ ಸೌಮ್ಯ ಮತ್ತು ಶಾಂತತೆಯಿಂದ ಕೂಡಿದ ಶಿಲ್ಪಗಳಾಗಿ ಕಂಡುಬರುತ್ತವೆ.

ಅಡಿಟಿಪ್ಪಣಿಗಳು

1. ಗೋಪಿನಾಥರಾವ್, ಟಿ.ಎ., *ಎಲಿಮೆಂಟ್ಸ್ ಆಫ್ ಹಿಂದೂ ಐಕನೋಗ್ರಾಫಿ,* ಸಂ. 2, ಪು. 120–124; ಸುರೇಶ್ ಕೆ.ಎಂ., *ಸ್ಕಲ್ಪ್‌ಚರಲ್ ಆರ್ಟ್ ಆಫ್ ಹಂಪಿ,* ಪು. 88–90.
2. ಗೋಪಿನಾಥರಾವ್, ಟಿ.ಎ., *ಪೂರ್ವೋಕ್ತ,* ಪು. 120–124.
3. ಆಗಮಗಳಂತೆ ವರಾಹ ಶಿಲ್ಪಗಳು ಮೂರು ಪ್ರಕಾರಗಳಾಗಿವೆ. ಅವುಗಳು 1. ಭೂವರಾಹ ಅಥವಾ ಆದಿವರಾಹ ಅಥವಾ ನೃವರಾಹ 2. ಯಜ್ಞವರಾಹ ಮತ್ತು 3. ಪ್ರಳಯವರಾಹ.
4. ಸಿನ್ಹ, ಡಿ. ಕೆ., 'ಎ ರೇರ್ ಇಮೇಜ್ ಅಟ್ ಆರ್ಕಿಯಲಾಜಿಕಲ್ ಮ್ಯೂಜಿಯಂ, ಹಂಪಿ', *ಜರ್ನಲ್ ಆಫ್ ಇಂಡಿಯನ್ ಹಿಸ್ಟರಿ,* ಸಂ. 53, ಭಾಗ 3, ಪು. 353–359, ಟ್ರಿವೇಂಡ್ರಮ್, 1975.


ಭೂವರಾಹ – ವಿಠ್ಠಲ ದೇವಸ್ಥಾನ


ಭೂವರಾಹ – ವಿಠ್ಠಲ ದೇವಸ್ಥಾನ



ವ್ಯಾಖ್ಯಾನ ವರಾಹ – ವಿಠ್ಠಲ ದೇವಸ್ಥಾನ


ಭೂವರಾಹ – ಕೋಟಿಲಿಂಗ


ಭೂವರಾಹ
ಹಜಾರ ರಾಮಚಂದ್ರ ದೇವಸ್ಥಾನ


ಪ್ರಳಯವರಾಹ – ವಿಠ್ಠಲ ದೇವಸ್ಥಾನ


ಪ್ರಳಯವರಾಹ – ಎ.ಎಸ್.ಐ. ಮ್ಯೂಸಿಯಂ


ವಿಜಯನಗರ ವರಾಹ ಲಾಂಛನ


ಸ್ಥಾನಕವರಾಹ – ಶ್ರೀ ರಾಘವೇಂದ್ರಸ್ವಾಮಿ ಮಠ

20. ವಿಜಯನಗರದ ಕಾಲದಲ್ಲಿ ಪುನರ್ ನಿರ್ಮಾಣಗೊಂಡ ವೈದ್ಯನಾಥೇಶ್ವರ ದೇವಾಲಯ

ನಿರ್ಮಲ ಎಚ್.

ಮೈಸೂರಿನಿಂದ ನಲವತ್ತಾರು ಕಿಲೋಮೀಟರ್ ಆಗ್ನೇಯಕ್ಕೆ ಇರುವ ತಲಕಾಡು ಇತಿಹಾಸ ಪ್ರಸಿದ್ಧವಾದ ಪಟ್ಟಣ. ಇತ್ತೀಚೆಗೆ ಅಲ್ಲಿ ನಡೆದ ಉತ್ಖನನದಿಂದ ಈ ಊರು ಬೃಹತ್ ಶಿಲಾಯುಗ ಸಂಸ್ಕೃತಿಯ ಕಾಲದಿಂದಲೂ ನಿರಂತರವಾಗಿ ಮಾನವ ನೆಲೆಯಾಗಿತ್ತೆಂದು ತಿಳಿದು ಬರುತ್ತದೆ. ತಲಕಾಡನ್ನು ಗಂಗರು ಕ್ರಿ.ಶ. ಸುಮಾರು ಏಳನೇ ಶತಮಾನದ ಹೊತ್ತಿಗೆ ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡಿದ್ದರು. ಹೀಗೆ ಗಂಗರು ಹತ್ತನೇ ಶತಮಾನದ ಕೊನೆಯವರೆಗೆ ತಲಕಾಡನ್ನು ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡಿದ್ದರು. ಗಂಗರ ನಂತರ ತಲಕಾಡನ್ನು ಚೋಳರು ಹನ್ನೊಂದನೇ ಶತಮಾನದಲ್ಲಿ ಆಕ್ರಮಿಸಿಕೊಂಡಿದ್ದರು. ಚೋಳರ ನಂತರ ಹೊಯ್ಸಳರು ಅವರ ನಂತರ ವಿಜಯನಗರದ ಅರಸರು, ನಂತರ ಮೈಸೂರು ಒಡೆಯರು ಹೀಗೆ ತಲಕಾಡು ರಾಜಕೀಯವಾಗಿ ವಿವಿಧ ಅರಸು ಮನೆತನಗಳ ಆಳ್ವಿಕೆಗೆ ಒಳಪಟ್ಟಿತ್ತಲ್ಲದೆ, ಧಾರ್ಮಿಕವಾಗಿಯೂ ಸಹ ಒಂದು ಪ್ರಸಿದ್ಧ ಕ್ಷೇತ್ರವಾಗಿದೆ.

ಪ್ರಾಚೀನ ಕರ್ನಾಟಕದ ಶೈವಕೇಂದ್ರಗಳಲ್ಲಿ ಸುಮಾರು ಸಾವಿರ ವರ್ಷಗಳ ಇತಿಹಾಸ ಹೊಂದಿರುವ, ಪುರಾಣೋಕ್ತವಾದ, ಪವಿತ್ರವಾದ ಶೈವ ಯಾತ್ರಾಕೇಂದ್ರವೇ ಗಂಗರ ರಾಜಧಾನಿಯಾಗಿ ಮೆರೆದ ತಲಕಾಡು. ಈ ಕ್ಷೇತ್ರವು ಪುರಾಣಗಳಲ್ಲಿ ದಕ್ಷಿಣಕಾಶಿಯೆಂದೂ, ಪ್ರಸಿದ್ಧಿ ಪಡೆದಿದೆ. ತಲಕಾಡು ಒಂದು ಯಾತ್ರಾ ಸ್ಥಳವಾಗಿಯೂ ಹೆಸರು ಪಡೆದಿದೆ. ಇಲ್ಲಿ ಅನೇಕ ಪ್ರಸಿದ್ಧವಾದ ದೇವಾಲಯಗಳಿವೆ. ಇಲ್ಲಿನ ಪ್ರಸಿದ್ಧ ಶೈವ ದೇವಾಲಯಗಳಲ್ಲಿ ವೈದ್ಯೇಶ್ವರ ದೇವಾಲಯವೂ ಒಂದು. ಕಲಾದೃಷ್ಟಿಯಲ್ಲಿ ವೈದ್ಯೇಶ್ವರ ದೇವಾಲಯ ಅತ್ಯಂತ ಪ್ರಸಿದ್ಧವಾದುದು. ಈ ದೇವಾಲಯದ ವೈಶಿಷ್ಟ್ಯಗಳನ್ನು ಪರಿಚಯಿಸುವುದು ಹಾಗೂ ಅದರ ರಚನೆಯ ಕಾಲದ ಬಗ್ಗೆ ಪುನರಾವಲೋಕನ ಮಾಡುವ ಉದ್ದೇಶವನ್ನು ಈ ಲೇಖನ ಹೊಂದಿದೆ.

ಐತಿಹ್ಯಗಳು

ತಲಕಾಡು ಗಂಗರಸುಗಳ ರಾಜಧಾನಿಯಾಗಿ ಮತ್ತು ಚೋಳರ, ಹೊಯ್ಸಳರ ಉಪ ರಾಜಧಾನಿಯಾಗಿ ಮೆರೆದ ಪುಣ್ಯಕ್ಷೇತ್ರ ತಲಕಾಡು. ಬಹಳ ಕಾಲದ ಹಿಂದೆ ಈ ಸ್ಥಳವು ಗಜಾರಣ್ಯಕ್ಷೇತ್ರವೆಂಬ ಕಾಡಾಗಿದ್ದು ಸೋಮದತ್ತ ಮಹರ್ಷಿಗಳು ಆನೆಯ ಜನ್ಮವನ್ನು ಪಡೆದು ಇಲ್ಲಿನ ಗೋಕರ್ಣತೀರ್ಥವೆಂಬ ಪುಣ್ಯತೀರ್ಥದ ಬಳಿಯ ಪೊದೆಯೊಳಗಿದ್ದ ಶಿವಲಿಂಗವನ್ನು ಆರಾಧಿಸುತ್ತಿದ್ದುದ್ದನ್ನು ತಲ, ಕಾಡ ಎಂಬ ಬೇಡರು ನೋಡಿ ಪರೀಕ್ಷಿಸುವ ಸಲುವಾಗಿ ಪೊದೆಯನ್ನು ಕತ್ತರಿಸುತ್ತಿದ್ದಾಗ ಕೊಡಲಿಯ ಪೆಟ್ಟು ಅಲ್ಲಿದ್ದ ಶಿವಲಿಂಗಕ್ಕೆ ತಗುಲಿ, ರಕ್ತ ಹರಿಯಲು, ಅದನ್ನು ನೋಡಿ ಬೇಡರು ಮೂರ್ಛೆ ಹೋದರು. ಆಗ ಅಲ್ಲಿಯೇ ಇದ್ದ ಶಾಲ್ಮಲಿ ಅಥವಾ ಬೂರುಗದ ಮರದ ಸೊಪ್ಪನ್ನು ಅರೆದು ಲಿಂಗದ ಗಾಯಕ್ಕೆ ಮೆತ್ತುವಂತೆ ಅಶರೀರವಾಣಿಯಾಯಿತು. ಅದರಂತೆ ಅವರು ವೈದ್ಯವನ್ನು ಮಾಡಿ, ಈ ಸ್ಥಳವು ತಮ್ಮ ಹೆಸರಿನಿಂದ ಪ್ರಸಿದ್ಧವಾಗಬೇಕೆಂದು ದೇವರನ್ನು ಪ್ರಾರ್ಥಿಸಿದರೆಂದೂ, ಆದುದರಿಂದ ಈ ಊರಿಗೆ ತಲಕಾಡು ಎಂದೂ ತನಗೆ ತಾನೇ ವೈದ್ಯ ಮಾಡಿಕೊಂಡುದರಿಂದ ಆ ಲಿಂಗಕ್ಕೆ ವೈದ್ಯೇಶ್ವರನೆಂದೂ ಹೆಸರಾಯಿತೆಂಬುದು ಪುರಾಣ ಪ್ರಸಿದ್ಧವಾದ ಕಥೆಯಾಗಿದೆ.[1] ಚಾರಿತ್ರಿಕವಾಗಿ ಈ ಊರಿಗೆ ತಲಕಾಡು ಎಂಬ ಹೆಸರು ಏಳನೆ ಶತಮಾನದಿಂದಲೇ ಬಳಕೆಯಲ್ಲಿತ್ತೆಂದು ತಿಳಿದುಬರುತ್ತದೆ. ವೈದ್ಯನಾಥನು ಮನೋನ್ಮಣಿಯನ್ನು ಹೊಂದಿ ಆಚಾರ್ಯರೂಪದಲ್ಲಿ, ಹಾಗೂ ಪಂಚ ಮುಖನಾಗಿ, ಬ್ರಹ್ಮನಾಗಿ, ಶಿವನಾಗಿ ತಲಕಾಡಿನಲ್ಲಿ ನೆಲೆಸಿದ್ದಾನೆ ಎಂಬುದು ಇಲ್ಲಿನ ಸ್ಥಳ ಪುರಾಣ.

ವೈದ್ಯನಾಥ ದೇವಾಲಯದ ಅಂಗಗಳು

ತಲಕಾಡು ಗ್ರಾಮದಲ್ಲಿರುವ ಈ ದೇವಾಲಯ ಗ್ರಾನೈಟ್‌ಕಲ್ಲಿನಿಂದ ನಿರ್ಮಿತಗೊಂಡಿದ್ದು, ತಲವಿನ್ಯಾಸದಲ್ಲಿ, ಗರ್ಭಗುಡಿ, ಅಂತರಾಳ, ನವರಂಗ ಮತ್ತು ಮುಖಮಂಟಪದಿಂದ ಕೂಡಿದೆ. ಈ ದೇವಾಲಯದ ಸಂಕ್ಷಿಪ್ತ ವಾಸ್ತು ಲಕ್ಷಣಗಳು ಮೈಸೂರು ಪುರಾತತ್ವ ಇಲಾಖೆಯ 1932, 1937ರ ವರದಿಯಲ್ಲಿ ಪ್ರಕಟವಾಗಿದೆ. ಐ.ಕೆ. ಶರ್ಮಾ ಮತ್ತು ದೇವಕೊಂಡಾರೆಡ್ಡಿರವರು ಬರೆದಿರುವ ಪುಸ್ತಕಗಳಲ್ಲಿ ಗಂಗರ ದೇವಾಲಯಗಳನ್ನು ಅಧ್ಯಯನ ಮಾಡಿದ್ದಾರೆ. ಆದರೆ ಈ ದೇವಾಲಯದ ಬಗ್ಗೆ ಯಾವುದೇ ವಿವರ ದಾಖಲಾಗಿಲ್ಲ. ಡಾ. ಡಿ.ವಿ.ದೇವರಾಜ್ 1996ರ ಪ್ರಕಟಿಸಿದ ಉತ್ಖನನ ವರದಿಯ ಪೀಠಿಕೆಯಲ್ಲಿ ಈ ದೇವಾಲಯದ ಬಗೆಗೆ ದಾಖಲಿಸಿದ್ದಾರೆ.[2]

ಹೊರಭಾಗದ ಅಂಗಗಳು

ದೇವಾಲಯದ ಹೊರ ಅಲಂಕರಣ ಬಹಳ ಆಕರ್ಷಕವಾದ ಭಾಗವಾಗಿದೆ. ಹೊಯ್ಸಳ ಶೈಲಿಯಿಂದ ಸಂಪೂರ್ಣವಾಗಿ ಬೇರೆಯಾಗಿದ್ದರೂ ಆ ಶೈಲಿಯ ಪ್ರಭಾವ ವಿಜಯನಗರ ಕಾಲದಲ್ಲಿ ಇನ್ನೂ ಮುಂದುವರೆದಿತ್ತು ಎನ್ನುವುದಕ್ಕೆ ಈ ದೇವಾಲಯ ಉತ್ತಮ ಉದಾಹರಣೆಯಾಗಿದೆ. ಈ ದೇವಾಲಯ ಗ್ರಾನೈಟ್ ಕಲ್ಲಿನಲ್ಲಿ ನಿರ್ಮಾಣವಾಗಿದೆ. ಈ ದೇವಾಲಯದ ಭಿತ್ತಿ ವಿವಿಧ ಆಕರ್ಷಕ ವಾಸ್ತು ಮಾದರಿಗಳಿಂದ ಅಲಂಕರಿಸಲ್ಪಟ್ಟಿದೆ.

ವೈದ್ಯೇಶ್ವರ ದೇವಾಲಯದ ಭಿತ್ತಿಯ ವಿನ್ಯಾಸದಲ್ಲಿ ಅಲಂಕರಣಗಳು ಕಂಡು ಬರುತ್ತದೆ. ಇಲ್ಲಿ ಅರೆಗಂಬಗಳು ಮತ್ತು ಶಿಖರ ಮಾದರಿಗಳಿಂದ ಅಲಂಕೃತವಾದ ಶಿಲ್ಪ ರಹಿತ ಮತ್ತು ಶಿಲ್ಪ ಸಹಿತ ದೇವಕೋಷ್ಠಗಳು ಮತ್ತು ಹಲವಾರು ದೇವಿ-ದೇವತೆಗಳ ವಿಗ್ರಹಗಳು ಕಂಡುಬರುತ್ತವೆ. ಈ ಬಗೆಯ ಅಲಂಕಾರ ದೇವಾಲಯದ ಮೂರು ಪಾರ್ಶ್ವಗಳಲ್ಲಿಯೂ ಕಂಡು ಬರುತ್ತದೆ. ಈ ದೇವಾಲಯದ ವಿಶೇಷವೇನೆಂದರೆ ಹಿಂದೆ ತಿರುಗಿದ ಎರಡು ಬಾಗುಗಳುಳ್ಳ '*S*' ಆಕಾರದ ಕಪೋತ ಇದೆ. ಕಪೋತವನ್ನು ದೇವಾಲಯದ ಸುತ್ತಲೂ ನಿರ್ಮಿಸಲಾಗಿದೆ ಹಾಗೂ ಈ ಬಗೆಯ ಕಪೋತ ಅಪರೂಪವೆನ್ನಬಹುದು. ಹೊರಚಾಚಿರುವ ಕಪೋತಕ್ಕೆ ಮೂಲೆಗಳಲ್ಲಿ ಕಲ್ಲಿನ ಸರಪಳಿಯ ಅಲಂಕಾರವೂ ಅಲ್ಲಲ್ಲಿ ಕಂಡುಬಂದಿದೆ.

ಪ್ರತಿಯೊಂದು ಕೋಷ್ಠಕ್ಕೂ ಎತ್ತರವಾದ ಶಿಖರ ಮಾದರಿಗಳನ್ನು ಉಬ್ಬುಕೆತ್ತನೆಯಲ್ಲಿ ಕೆತ್ತಲಾಗಿದೆ. ಆದ್ದರಿಂದ ಈ ಭಿತ್ತಿಯ ಸಂಪೂರ್ಣ ಭಾಗ ವಾಸ್ತು ಅಲಂಕರಣೆಗಳಿಂದ ತುಂಬಿದಂತೆ ಕಂಡುಬರುತ್ತದೆ. ಗರ್ಭಗೃಹದ ಮೇಲ್ಭಾಗದಲ್ಲಿ ದ್ರಾವಿಡ ಶೈಲಿಯಲ್ಲಿ ಇತ್ತೀಚಿನ ಕಾಲದಲ್ಲಿ ನಿರ್ಮಿಸಿದ ಇಟ್ಟಿಗೆ ಮತ್ತು ಗಾರೆಯ ವಿಮಾನವಿದೆ. ಉಪಾನ, ಜಗತಿ, ಕುಮುದ, ಕಂಠ, ಪ್ರತಿಗಳಿರುವ ಕುಬ್ಜವಾದ ಅಧಿಷ್ಠಾನವಿದೆ.

ಮುಂಭಾಗದ ಬಾಗಿಲುವಾಡದ ದ್ವಾರಪಾಲಕ ಶಿಲ್ಪಿಗಳ ನಿಲುವು ಮತ್ತು ಪಟ್ಟಿಯಲ್ಲಿ ಬಳ್ಳಿ ಸುರುಳಿಗಳ ಹಾಗು ಇತರ ಸರಳ ಅಲಂಕರಣಗಳ ಉಬ್ಬುಕೆತ್ತನೆ ಕಂಡು ಬರುತ್ತದೆ. ಮುಖ್ಯದ್ವಾರದ ಇಕ್ಕೆಲಗಳಲ್ಲಿ ಶೈವ ದ್ವಾರಪಾಲಕರು ಮತ್ತು ಸ್ತ್ರೀಯರ ವಿಗ್ರಹಗಳು ಕಂಡುಬರುತ್ತವೆ. ಈ ಶಿಲ್ಪಗಳು ಅಲಂಕಾರಕ್ಕೆ, ಆಭರಣಗಳಿಗೆ, ವಸ್ತ್ರಗಳಿಗೆ ಮತ್ತು ಎತ್ತರವಾದ ನಿಲುವಿಗೆ ಬಹಳ ಪ್ರಸಿದ್ಧವಾಗಿವೆ. ಇಲ್ಲಿನ ಛಾವಣಿಯಲ್ಲಿ ಇಪ್ಪತ್ತಾರು ಸಾಲಂಕೃತವಾದ ಭುವನೇಶ್ವರಿಯ ಅಲಂಕಾರವಿದೆ. ನಾಲ್ಕು ಕಂಬಗಳನ್ನು ಹೊಂದಿದ ಮೂರು ಅಂಕಣದ ಹದಿನಾರು ಮತ್ತು ಹದಿನೇಳನೆ ಶತಮಾನದ ಮುಖಮಂಟಪವಿದೆ. ಪ್ರಾಯಶಃ ಈ ದೇವಾಲಯಕ್ಕೆ ದ್ವಾರಗೋಪುರವಿದ್ದ ಸೂಚನೆಗಳಿಲ್ಲ. ಬದಲಾಗಿ ಕಲ್ಲಿನಲ್ಲಿ ನಿರ್ಮಿತವಾದ ದ್ವಾರಮಂಟಪವಿದೆ. ಹೀಗೆ ವೈದ್ಯೇಶ್ವರ ದೇವಾಲಯದ ಹೊರಭಾಗವು ಸುಂದರವಾಗಿ ಅಲಂಕೃತವಾಗಿದೆ.

ಒಳಭಾಗದ ಅಂಗಗಳು

ಈ ದೇವಾಲಯದ ಒಳಗೆ ಗರ್ಭಗೃಹ ನಂತರ ಎರಡು ಅಂತರಾಳವಿರುತ್ತದೆ. ಈ ಅಂತರಾಳದ ಮುಂಭಾಗದ ಮಧ್ಯದಲ್ಲಿ ನಾಲ್ಕು ಕಂಬಗಳನ್ನು ಹೊಂದಿರುವ ಒಂದು ನವರಂಗವಿದೆ. ದೇವಾಲಯದ ಒಳ ಎತ್ತರ ಬಹಳ ಕಡಿಮೆ

ಇದೆ ಮತ್ತು ಬಾಗಿಲುಗಳೂ ಸಹ ತಗ್ಗಾಗಿರುತ್ತದೆ. ವೈದ್ಯೇಶ್ವರ ದೇವಾಲಯದ ಕಂಬಗಳ ವಿನ್ಯಾಸ ಸರಳವಾಗಿದ್ದು, ಕಂಬಕ್ಕೆ ಪೀಠವಿರುತ್ತದೆ. ದಿಂಡಿನ ಭಾಗದಲ್ಲಿ ಕೆಳಭಾಗ ಚೌಕಟ್ಟಾಗಿದ್ದು, ಮೇಲ್ಭಾಗ ಉರುಳೆಯಾಕಾರದ್ದಾಗಿರುತ್ತದೆ. ಈ ಉರುಳೆಯಾಕಾರದ ಭಾಗದಲ್ಲಿ ಸರಳವಾದ ಅಲಂಕಾರಕ ಕಂಡು ಬರುತ್ತದೆ. ಶುಕನಾಸ ಮತ್ತು ಗರ್ಭಗೃಹದ ಛಾವಣಿಯನ್ನು ನಾಭಿಚ್ಛಂದ್ರ ರೀತಿಯಲ್ಲಿ ನಿರ್ಮಿಸಿರುತ್ತಾರೆ. ದಕ್ಷಿಣದಲ್ಲಿ ಮೂರು ಅಂಕಣದ ಮತ್ತೊಂದು ಕೋಣೆಯಿದೆ. ಈ ಕೋಣೆಯ ಮಧ್ಯದ ಅಂಕಣಕ್ಕೆ ಒಂದು ದ್ವಾರವನ್ನು ನಿರ್ಮಿಸಿ ದ್ವಾರದ ಮುಂಭಾಗದಲ್ಲಿ ದಕ್ಷಿಣಕ್ಕೆ ಮುಖ ಮಾಡಿರುವ ಒಂದು ಮುಖಮಂಟಪವನ್ನು ನಿರ್ಮಿಸಲಾಗಿದೆ. ಮೂಲತಃ ಈ ನವರಂಗಕ್ಕೆ ಪೂರ್ವ, ದಕ್ಷಿಣ ಮತ್ತು ಉತ್ತರ ದಿಕ್ಕುಗಳಲೂ ಪ್ರವೇಶದ್ವಾರವಿತ್ತು. ಆದರೆ ಈಗ ಉತ್ತರದ ಪ್ರವೇಶದ್ವಾರವನ್ನು ಮುಚ್ಚಲಾಗಿದೆ.

ಈ ದೇವಾಲಯವನ್ನು ಸುಮಾರು ನಾಲ್ಕು ಅಡಿ ಎತ್ತರದ ಹೊಯ್ಸಳ ಮಾದರಿಯ ಏಕಕೂಟ ದೇವಾಲಯದ ಜಗತಿಯ ಮೇಲೆ ನಿರ್ಮಿಸಲಾಗಿದೆ. ಈ ಜಗತಿಯ ಅರ್ಧಕ್ಕೂ ಹೆಚ್ಚಿನ ಭಾಗ ಈಗ ಮುಚ್ಚಿಹೋಗಿದೆ. ದೇವಾಲಯದ ಸುತ್ತಲೂ ಜಗತಿಯ ಮೇಲೆ ದೇವಾಲಯವನ್ನು ಪ್ರದಕ್ಷಣೆ ಬರಲು ಅನುಕೂಲವಾಗುವಂತೆ ಅವಕಾಶ ನೀಡಲಾಗಿದೆ. ಆದರೆ ದೇವಾಲಯದ ಹಿಂಬದಿಯಲ್ಲಿ ವಿಜಯನಗರೋತ್ತರ ಶೈಲಿಯಲ್ಲಿ ನಿರ್ಮಾಣಗೊಂಡಿರುವ ಪಂಚಲಿಂಗ ದೇವಾಲಯಗಳಿವೆ. ಇವುಗಳನ್ನು ರಣಧೀರಕಂಠೀರವನ ಅಧಿಕಾರಿಯೂ ನಿರ್ಮಿಸಿದಂತೆ ಶಾಸನವೊಂದು ತಿಳಿಸುತ್ತದೆ.

ದೇವಾಲಯದ ಸುತ್ತಲೂ ಕಲ್ಲುಹಾಸಿನ ವಿಶಾಲವಾದ ಪ್ರಾಂಗಣವಿದೆ. ಪ್ರಾಂಗಣದ ಸುತ್ತಲೂ ಪ್ರಾಕಾರದ ಗೋಡೆ ಇದೆ. ಪ್ರಾಕಾರಕ್ಕೆ ಪೂರ್ವದಲ್ಲಿ ಮತ್ತು ಉತ್ತರದಲ್ಲಿ ಒಂದೊಂದು ಪ್ರವೇಶದ್ವಾರಗಳಿವೆ. ಪೂರ್ವದ ಪ್ರವೇಶದ್ವಾರಕ್ಕೆ ಕಲ್ಲಿನಿಂದ ಕಟ್ಟಿದ ಅಚ್ಚುಕಟ್ಟಾದ ದ್ವಾರಮಂಟಪವೂ, ಅನೇಕ ಸಣ್ಣಪುಟ್ಟ ಗುಡಿಗಳು, ಮಂಟಪಗಳು, ಕೈಸಾಲೆಗಳು ಇವೆ. ದೇವಾಲಯದ ಏರುವಿನ್ಯಾಸ ವಾಸ್ತುದೃಷ್ಟಿಯಿಂದ ಮಹತ್ವ ಪಡೆದಿದೆ.

ಕಾಲನಿರ್ಣಯ

ತಲಕಾಡಿನ ಪ್ರಾಚೀನ ದೇವಾಲಯಗಳಲ್ಲಿ ಅತ್ಯಂತ ಮಹತ್ವಪೂರ್ಣ ದೇವಾಲಯವೆಂದರೆ ವೈದ್ಯನಾಥೇಶ್ವರ ದೇವಾಲಯ. ಈ ದೇವಾಲಯದ ರಚನೆ ಬಗ್ಗೆ ಸಾಕಷ್ಟು ಗೊಂದಲವಿದೆ. ತಲಕಾಡಿನಲ್ಲಿ ದೊರೆಯುವ ಸಾಕಷ್ಟು ಶಾಸನಗಳಲ್ಲಿ ರಾಜರಾಜೇಶ್ವರ ದೇವಾಲಯದ ಉಲ್ಲೇಖವಿದೆ. ಈ ದೇವಾಲಯವನ್ನು ರಾಜರಾಜಚೋಳನ ಹೆಸರಿಗೆ ಅನ್ವರ್ಥವಾಗುವಂತೆ ರಾಜರಾಜನೆಂದು ಕರೆಯಲಾಗುತ್ತಿದೆ ಎಂದು ಅಭಿಪ್ರಾಯಪಡಲಾಗಿದೆ.

ರಾಜರಾಜೇಶ್ವರ ಲಿಂಗವೇ ವೈದ್ಯನಾಥೇಶ್ವರ ಲಿಂಗವಿರಬಹುದೆಂದು ಎಂ.ಎ.ಆರ್.ನಲ್ಲಿ ಅಭಿಪ್ರಾಯಪಡಲಾಗಿದೆ.[3] ಆದರೂ ದೇವಾಲಯದ ರಚನೆಯನ್ನು ಅನುಸರಿಸಿ ಈ ದೇವಾಲಯದ ಭಿತ್ತಿಯಲ್ಲಿರುವ ಮೂರ್ತಿಗಳ ಲಕ್ಷಣವನ್ನು ಅನುಸರಿಸಿ ಹಾಗೂ ಅಲಂಕರಣದ ಆಧಾರದ ಮೇಲೆ ಇದು 14ನೇ ಶತಮಾನದಲ್ಲಿ ರಚಿತವಾಗಿರಬಹುದು ಎಂಬ ಅಭಿಪ್ರಾಯಕ್ಕೆ ಬರುತ್ತಾರೆ. ಆದರೆ ಈ ದೇವಾಲಯವನ್ನು 13ನೇ ಶತಮಾನದ ಮಧ್ಯಭಾಗದ ಪೂರ್ವಕ್ಕೆ ಕಾಲ ನಿರ್ದೇಶಿಸುವುದು ಸಾಧ್ಯವಿಲ್ಲ ಎಂಬ ಅಭಿಪ್ರಾಯಕ್ಕೆ ಬರಲಾಗಿದೆ. ಈ ಅಭಿಪ್ರಾಯಕ್ಕೆ ಆಧಾರವಾಗಿ ಸರಸ್ವತಿಯ ವಿಗ್ರಹದಲ್ಲಿರುವ ಶಾಸನವನ್ನು ಮತ್ತು ಅದೇ ದೇವಾಲಯದಲ್ಲಿರುವ 14ನೇ ಶತಮಾನದ ಮತ್ತೊಂದು ಶಾಸನವನ್ನು ಉಲ್ಲೇಖಿಸುತ್ತಾರೆ. ಈ ಶಾಸನದಲ್ಲಿ ಕಂಡುಬರುವ ಮಾಧವ ಹೆಸರನ್ನು ಹೊಯ್ಸಳರ ಕಾಲದಲ್ಲಿ ಆಡಳಿತಾಧಿಕಾರಿಯಾಗಿದ್ದ ಮಾಧವನೊಂದಿಗೆ ಮತ್ತು ವಿಜಯನಗರಕಾಲದ ಮಾಧವ ಮಂತ್ರಿಯೊಂದಿಗೆ ಸಮೀಕರಿಸಿ ಈ ದೇವಾಲಯವನ್ನು ಹೊಯ್ಸಳರ ಅಂತ್ಯಕಾಲ ಅಂದರೆ ಕ್ರಿ.ಶ. ಸುಮಾರು 1400ರ ಆಸುಪಾಸಿನಲ್ಲಿ ವಿಜಯನಗರದ ಮಂತ್ರಿ ಗೋವಾವನ್ನು ಗೆದ್ದ ದಂಡನಾಯಕ ಮಾಧವ ಮಂತ್ರಿಯಿಂದ ಕ್ರಿ.ಶ. 1360ರಲ್ಲಿ ನಿರ್ಮಾಣವಾಗಿರಬೇಕೆಂಬ ಅಭಿಪ್ರಾಯಕ್ಕೆ ಬರುತ್ತಾರೆ.[4] ಆದರೆ ಆರ್. ನರಸಿಂಹಚಾರ್ಯರು ಈ ದೇವಾಲಯದ ದಕ್ಷಿಣದ್ವಾರದ ಕಂಬಗಳನ್ನು ಕುರುಡುಮಲೆಯಲ್ಲಿ ಇಳವಂಜಿ ವಾಸುದೇವರಾಯ ನಿರ್ಮಿಸಿದ ಸೋಮೇಶ್ವರ ದೇವಾಲಯದ ಕಂಬಗಳೊಂದಿಗೆ ಸಮೀಕರಿಸಿ ಈ ದೇವಾಲಯವು

13ನೇ ಶತಮಾನದ ದೇವಾಲಯವೆಂದು ಹೇಳುತ್ತಾರೆ.[5] ಆದರೆ ಎಂ.ಎ.ಆರ್.ನಲ್ಲಿ ಗುರುತಿಸುವ 14ನೇ ಶತಮಾನದ ಮಾಧವನ ಹೆಸರನ್ನು ಉಲ್ಲೇಖಿಸುವ ಶಾಸನದ ಪಾಠ ಈ ರೀತಿ ಇದೆ:

ವೈದ್ಯಲಿಂಗಾಯ ನಮಃ ಮಾಧವ [6]

ಈ ಶಾಸನ ಯಾವುದೇ ರೀತಿಯಲ್ಲಿ ಮಾಧವನು ಅಂದರೆ ಎಂ.ಎ.ಆರ್.ನ ಸಂಪಾದಕರು ಹೇಳುವಂತೆ ಹೊಯ್ಸಳ ದಂಡನಾಯಕ ಮಾಧವನ ವಿವರಗಳನ್ನಾಗಲೀ ಅಥವಾ ವಿಜಯನಗರದ ದಂಡನಾಯಕ ಮಾಧವನ ವಿವರಗಳನ್ನಾಗಲೀ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ದಾಖಲಿಸಿಲ್ಲ. ಅಂದಮೇಲೆ ಆತನೇ ಈ ದೇವಾಲಯವನ್ನು ಕಟ್ಟಿಸಿದನೆಂದು ತಲಕಾಡು ಉತ್ಖನನ ವರದಿಯಲ್ಲಿ ಹೇಳಿರುವುದನ್ನು ಒಪ್ಪಿಕೊಳ್ಳಲಾಗುವುದಿಲ್ಲ. ಇದಕ್ಕೆ ಬದಲಾಗಿ ಈ ದೇವಾಲಯದಲ್ಲಿರುವ 16ನೇ ಶತಮಾನದ ಕಾಲದ ಲಿಪಿಯಲ್ಲಿರುವ ಶಾಸನವು ರಾಜರಾಜೇಶ್ವರ ದೇವರನ್ನು ಉಲ್ಲೇಖಿಸುತ್ತದೆ. ಅಲ್ಲದೆ 10ನೇ ಶತಮಾನದ ಲಿಪಿಯಲ್ಲಿರುವ ಮತ್ತೊಂದು ಶಾಸನವು ಮತ್ತೆ ರಾಜರಾಜಪುರವನ್ನು ಅಲ್ಲಿನ ರಾಜರಾಜೇಶ್ವರನನ್ನು ಹೆಸರಿಸುತ್ತದೆ.

1180ರ 2ನೇ ಬಲ್ಲಾಳನ ಶಾಸನ ಈ ಗ್ರಾಮವನ್ನು ರಾಜರಾಜಪುರವೆಂದೇ ದಾಖಲಿಸುತ್ತದೆ. ಅಂದ ಮೇಲೆ ರಾಜರಾಜಪುರದ ರಾಜರಾಜೇಶ್ವರ ದೇವಾಲಯವು ವೈದ್ಯನಾಥನೇ ಆಗಿರಬೇಕು. ಕಾರಣ ಈ ದೇವಾಲಯದ ಮಹಾದ್ವಾರದಲ್ಲಿ ದೊರೆತಿರುವ ಹಲವಾರು ಹೊಯ್ಸಳರ ಶಾಸನಗಳನ್ನು ವಿಶ್ಲೇಷಣೆ ಮಾಡುತ್ತಾ ಈ ಪ್ರದೇಶದಲ್ಲಿ ದೊರೆತ ಹಳೆಯ ಕಟ್ಟಡಗಳ ಶಿಲೆಯನ್ನು ಬಳಸಿ ಆನಂತರದ ದಿನಗಳಲ್ಲಿ ಪ್ರವೇಶದ್ವಾರವನ್ನು ನಿರ್ಮಿಸಿದುದೇ ಹೊಯ್ಸಳರ ಕಾಲದ ಶಾಸನಗಳು ಪುನರ್ ಬಳಕೆಯಾಗಿರುವುದಕ್ಕೆ ಕಾರಣವೆಂದು ಎಂ.ಎ.ಆರ್.ನ ಸಂಪಾದಕರು ಹೇಳುತ್ತಾರೆ.[7] ಇಲ್ಲಿ ಗಮನಿಸಬೇಕಾದ ಒಂದು ಅಂಶವೆಂದರೆ ತಲಕಾಡಿನ ಗಂಗರ ದೇವಾಲಯವೆಂದು ಗುರುತಿಸುವ ಪಾತಾಳೇಶ್ವರ ಮರಳೇಶ್ವರ ದೇವಾಲಯಗಳು ಚೋಳರ ಕಾಲದಲ್ಲಿ ಸಾಕಷ್ಟು ಆರ್ಥಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಮುಂದುವರಿದಿದ್ದವು. ಆ ಕಾಲದಲ್ಲಿ ಗಂಗರ ಈ ದೇವಾಲಯಗಳು ಪುನರ್ ನಿರ್ಮಾಣಗೊಂಡವು.

ಕಾವೇರಿಯ ಮಹಾತ್ಮೆಯಲ್ಲಿ ಬರುವ ಗಜಾರಣ್ಯಕ್ಷೇತ್ರದ ಶೈವ ಪರಂಪರೆಯ ಅತ್ಯಂತ ಮುಖ್ಯ ದೇವಾಲಯವಾಗಿ, ವೈದ್ಯನಾಥೇಶ್ವರವನ್ನು ಗುರುತಿಸಲಾಗಿದೆ. ವೈದ್ಯನಾಥೇಶ್ವರ ದೇವಾಲಯದ ಪ್ರಾಕಾರದಲ್ಲಿಯು ಸಹ ಗಂಗರ ಶಿಲ್ಪಕಲೆಯ ಪ್ರಭಾವವಿರುವುದನ್ನು ದೇವರಕೊಂಡರೆಡ್ಡಿಯವರು ಗುರುತಿಸುತ್ತಾರೆ. ವೈದ್ಯನಾಥೇಶ್ವರ ದೇವಾಲಯದ ಚಂಡಿಕೇಶ್ವರನ ದೇವಾಲಯದ ರಚನೆಯಲ್ಲಿ ಗಂಗರಕಾಲದ ರುದ್ರಕಾಂತ ಕಂಬಗಳನ್ನು ಬಳಸಿರುತ್ತಾರೆ. ಅಲ್ಲದೆ ವೈದ್ಯನಾಥೇಶ್ವರ ದೇವಾಲಯದ ಪಶ್ಚಿಮ ದಿಕ್ಕಿನಲ್ಲಿ ಬಿಡಿಯಾಗಿ ನಿಲ್ಲಿಸಿರುವ ಮಹಿಷಮರ್ಧಿನಿಯ ಶಿಲ್ಪವು ಗಂಗರ ಕಾಲದ್ದಾಗಿದೆ. ಈ ಎಲ್ಲಾ ಅಂಶಗಳನ್ನು ಗಮನಿಸಿದರೆ ವೈದ್ಯೇಶ್ವರ ದೇವಾಲಯವು ಗಂಗರಕಾಲದಲ್ಲಿ ಪಾತಾಳೇಶ್ವರ ಅಥವಾ ಮರಳೇಶ್ವರ ದೇವಾಲಯದಷ್ಟೆ ಸಣ್ಣ ದೇವಾಲಯವಾಗಿದ್ದಿತು. ತಲಕಾಡಿನ ಗಂಗರ ದೇವಾಲಯವೆಂದು ಗುರುತಿಸುವ ಪಾತಾಳೇಶ್ವರ, ಮರಳೇಶ್ವರ, ಅರ್ಕೇಶ್ವರ ಮತ್ತು ಮಲ್ಲಿಕಾರ್ಜುನ ದೇವಾಲಯಗಳಲ್ಲಿ ಗಂಗರಕಾಲದ ಮಹಿಷಾಸುರಮರ್ಧಿನಿಯ ಶಿಲ್ಪಗಳಿವೆ. ಅಂದರೆ ಶಿವನ ಅರ್ಧಾಂಗಿಯಾಗಿ ಚಾಮುಂಡಾಂಬಿಕೆಯನ್ನು ಗಂಗರು ಆರಾಧಿಸುತ್ತಿದ್ದ ಕ್ರಮ ಖಚಿತವಾಗುತ್ತದೆ.

ಈ ಹಿನ್ನೆಲೆಯಲ್ಲಿ ಗಮನಿಸಿದಾಗಲೂ ವೈದ್ಯನಾಥೇಶ್ವರ ದೇವಾಲಯದಲ್ಲಿರುವ ಚಾಮುಂಡೇಶ್ವರಿಯ ಶಿಲ್ಪವು ಮತ್ತು ಈ ದೇವಾಲಯದಲ್ಲಿರುವ ಲಿಂಗವು ಎಂ.ಎ.ಆರ್.ನ ಸಂಪಾದಕರು ಹೇಳುವಂತೆ ಗಂಗರ ಕಾಲದ ರಚನೆಯಾಗಿದ್ದು ಗಂಗರು ತಮಿಳು ಪ್ರದೇಶಗಳೊಂದಿಗೆ ಹೊಂದಿದ್ದ ಸಂಪರ್ಕದಿಂದಾಗಿ ಈ ದೇವಾಲಯದ ಲಿಂಗವನ್ನು ವೈದ್ಯೇಶ್ವರನೆಂದು ಕರೆದು ಆರಾಧಿಸಿರಬೇಕು. ಹಾಗೂ ಇತರ ಶೈವ ದೇವಾಲಯಗಳಂತೆ ಸಣ್ಣ ಆಲಯವೊಂದನ್ನು ನಿರ್ಮಿಸಿದ್ದರಬೇಕು.

ಹೊಯ್ಸಳರು ಗಂಗವಾಡಿಯನ್ನು ಜಯಿಸಿದ ನಂತರ ಈ ಪ್ರದೇಶದಲ್ಲಿ ಚೋಳರು ನಿರ್ಮಿಸಿದ ಎಲ್ಲಾ ಚತುರ್ವೇದಿ ಮಂಗಲಗಳನ್ನು ಪುನರ್ ನಾಮಕರಣ ಮಾಡಿ ದಾನ ನೀಡಿ ತಮ್ಮ ರಚನೆ ಎಂಬಂತೆ ಪ್ರತಿಬಿಂಬಿಸಿದರು.[8] ಈ ಹಿನ್ನೆಲೆಯಲ್ಲಿ ತಲಕಾಡಿನ ವೈದ್ಯನಾಥೇಶ್ವರ ದೇವಾಲಯದ ಪುನರ್ ರಚನೆಯನ್ನು ಗಮನಿಸಿದರೆ ಹೊಯ್ಸಳರ ಕಾಲದಲ್ಲಿ ಪೂರ್ಣವಾಗಿ ಜೀರ್ಣೋದ್ಧಾರಗೊಂಡು ಆನಂತರ ಮತ್ತೊಮ್ಮೆ ಹೊಯ್ಸಳರ ಅಂತ್ಯಕಾಲದಲ್ಲಿ ಅಥವಾ ವಿಜಯನಗರದ ಪ್ರಾರಂಭದ ಕಾಲದಲ್ಲಿ ಸಂಪೂರ್ಣವಾಗಿ ಪುನರ್ ನಿರ್ಮಾಣಗೊಂಡಿರುವ ಸಾಧ್ಯತೆಯನ್ನು ತಳ್ಳಿಹಾಕಲು ಸಾಧ್ಯವಿಲ್ಲ.

ಹೀಗಾಗಿ ವೈದ್ಯನಾಥೇಶ್ವರ ಸ್ವಾಮಿ ದೇವಾಲಯದಲ್ಲಿರುವ ಮೂಲ ಲಿಂಗವು ಚೋಳರ ಆಡಳಿತ ಪೂರ್ವದಲ್ಲಿ ಅಂದರೆ ಗಂಗರೇ ಸ್ಥಾಪಿಸಿರುವ ಸಾಧ್ಯತೆಗಳೇ ಹೆಚ್ಚಿದೆ. ಎಂ.ಎ.ಆರ್.ನ ಸಂಪಾದಕರು ಅಭಿಪ್ರಾಯ ಪಡುವಂತೆ ಚೋಳರ ಪೂರ್ವಕಾಲದಲ್ಲಿ ಸ್ಥಾಪಿಸಿದ ರಾಜರಾಜೇಶ್ವರ ಲಿಂಗದ ಭಕ್ತನಾದ ಮಾಧವ ಮಂತ್ರಿಯು ಈ ದೇವಾಲಯವನ್ನು ಪುನಃ ವಿಜಯನಗರದ ಪ್ರಾರಂಭದ ಕಾಲದಲ್ಲಿ ನಿರ್ಮಿಸಿರಬಹುದೆಂದು ನಮ್ಮ ಈ ಮೇಲಿನ ಜಿಜ್ಞಾಸೆಗೆ ಇಂಬುಗೊಡುವಂತೆ ಅಭಿಪ್ರಾಯಪಡುತ್ತಾರೆ.

ಪರಾಮರ್ಶನಗಳು

1. ಆಗಮಿಕ ಕೃಷ್ಣ ದೀಕ್ಷಿತರು, 1938, *ತಲಕಾಡಿನ ಕೈಪಿಡಿ,* ಶ್ರೀ ಶಾರದ ಪ್ರೆಸ್, ತಲಕಾಡು, ಪು. 10.
2. ಡಾ॥ ಡಿ.ವಿ.ದೇವರಾಜ್, 1996, *ಎ ರಿಪೋರ್ಟ್ ಆನ್ ಎಕ್ಸ್‌ಕವೇಷನ್ಸ್ ಆಟ್ ತಲಕಾಡ್ 1992–1993,* ಮೈಸೂರು, ಪು. 8–10.
3. ಮೈಸೂರು ಆರ್ಕಿಯಾಲಾಜಿಕಲ್ ರಿಪೋರ್ಟ್, 1937, ಪು. 8–14.
4. ಡಾ॥ ಡಿ.ವಿ.ದೇವರಾಜ್, *ಪೂರ್ವೋಕ್ತ,* ಪು. 8.
5. ಮೈಸೂರು ಆರ್ಕಿಯಾಲಾಜಿಕಲ್ ರಿಪೋರ್ಟ್, 1937, ಪು. 8–9.
6. *ಎ.ಕ.* ಸಂಪುಟ–5, ತಿ.ನ. 184.
7. ಮೈಸೂರು ಆರ್ಕಿಯಾಲಾಜಿಕಲ್ ರಿಪೋರ್ಟ್, 1932, 15–16, 1937, ಪು. 22–25.
8. *ಅದೇ,* 1937, ಪು. 15–16.

21. ಹಂಪಿ ಪರಿಸರದಲ್ಲಿ ವೈಷ್ಣವ ಧರ್ಮದ ಪ್ರಭಾವ

ಶ್ರೀಮತಿ ಪದ್ಮಜಾ ದೇಸಾಯಿ

ದಕ್ಷಿಣ ಭಾರತದ ಚರಿತ್ರೆಯಲ್ಲಿ ಸರ್ವಧರ್ಮ ಸಮನ್ವಯತೆಯನ್ನು ಸಾಧಿಸಿದ ಏಕೈಕ ಸಾಮ್ರಾಜ್ಯ ಮತ್ತು ಸುವರ್ಣ ಯುಗವನ್ನು ಸೃಷ್ಟಿಸಿ ವಿಶಿಷ್ಟ ರೀತಿಯಲ್ಲಿ ಆಳಿದ ಸಾಮ್ರಾಜ್ಯ ವಿಜಯನಗರವಾಗಿದೆ.[1]

ಹಂಪೆಯಲ್ಲಿ ಕ್ರಿ.ಶ. 1390ರಿಂದಲೇ ಅಂದರೆ ಇಮ್ಮಡಿ ಹರಿಹರನ ಕಾಲದಲ್ಲಿ ತುಂಗಭದ್ರೆಯ ತಟದಲ್ಲಿ ವೈಷ್ಣವ ದೇವಾಲಯಗಳ ರಚನೆ ಆರಂಭವಾಗಿರುತ್ತದೆ. ಯಾದವ ವಂಶದವರಾದ ಸಂಗಮರ ಕಾಲದಲ್ಲಿ ಹೊಯ್ಸಳ ಸಾಮ್ರಾಜ್ಯದ ಅವನತಿಯೊಂದಿಗೆ ವಿಜಯನಗರಕ್ಕೆ ಬಂದ ವೈಷ್ಣವರಿಗೂ ಆಶ್ರಿತರಾಗುತ್ತಾರೆ. ಮುಂದೆ ಹಂಪೆ ವಿಜಯನಗರ ಎರಡರಲ್ಲೂ ಇವರ ರಚನೆಗಳೇ ಜಾಸ್ತಿಯಾಗುತ್ತವೆ. ಹೀಗಾಗಿ ಸಾಕಷ್ಟು ಸಂಖ್ಯೆಯ ವೈಷ್ಣವರು ಈ ಸಾಮ್ರಾಜ್ಯದ ರಾಜಧಾನಿಗೆ ಬಂದು ನೆಲೆಯಿಸಿರಬೇಕು. ವೈಷ್ಣವ ಧರ್ಮವನ್ನು ಪ್ರತಿನಿಧಿಸುವಂತೆ ದೇವಾಲಯಗಳಾದ ನರಸಿಂಹ ದೇವಾಲಯ, ರಾಮಚಂದ್ರ (ಹಜಾರ ರಾಮಚಂದ್ರ) ದೇವಾಲಯ ಮತ್ತು ಅಚ್ಯುತ ದೇವಾಲಯಗಳು ರಚಿತವಾದವು. ಈ ಕಟ್ಟಡಗಳಲ್ಲೆಲ್ಲಾ ಬೃಹತ್ ರಚನೆಯೆಂದರೆ ವಿಠಲ ದೇವಾಲಯ. ಇಲ್ಲಿನ ವೈಷ್ಣವ ಸಂಪ್ರದಾಯಸ್ಥರು ಬಹುತೇಕ ಅಹೋಬಲದ ಪರಕಾಲ ಮಠಕ್ಕೆ ಸೇರಿದವರು. ಚಾತ್ರದ ವೈಷ್ಣವರು ಉಲ್ಲೇಖವೂ ಒಂದು ಶಾಸನದಲ್ಲಿ ಬಂದಿದೆ. ಒಟ್ಟಿನಲ್ಲಿ ವೈಷ್ಣವರ ಉಲ್ಲೇಖವೂ ಒಂದು ಶಾಸನದಲ್ಲಿ ಬಂದಿದೆ. ಒಟ್ಟಿನಲ್ಲಿ ವೈಷ್ಣವರ ಪ್ರಭಾವ ವಿಜಯನಗರ ತುಳುವರ ಕಾಲದಲ್ಲಿ ಉಚ್ಛ್ರಾಯದಲ್ಲಿತ್ತು. ಅಚ್ಯುತರಾಯ, ಸದಾಶಿವರಾಯನ ಕಾಲದಲ್ಲಿ ಪರಾಕಾಷ್ಠೆಗೆ ಮುಟ್ಟುತ್ತದೆ. ಅನೇಕ ಪ್ರದೇಶಗಳ ಅಧಿಕಾರಿಗಳು ವೈಷ್ಣವರೇ ಆಗಿದ್ದರು.

ಮಾಧ್ವ ಪಂಥಕ್ಕೆ ಸೇರಿದ ವೈಷ್ಣವರು ಹಂಪೆಯಲ್ಲಿದ್ದರು. ಆದರೆ ಕೃಷ್ಣದೇವರಾಯನ ಕಾಲದಲ್ಲಿ ಮಾಧ್ವಯತಿಗಳಾದ ವ್ಯಾಸತೀರ್ಥರು ವಿಜಯನಗರದಲ್ಲಿದ್ದರು. ಕೃಷ್ಣದೇವರಾಯ ವ್ಯಾಸತೀರ್ಥರಿಗೆ ಕ್ರಿ.ಶ. 1526ರಲ್ಲಿ ಅನೇಕ ಗ್ರಾಮಗಳನ್ನು ಮಾಧ್ವ ಬ್ರಾಹ್ಮಣರಿಗೆ ದಾನ ನೀಡುತ್ತಾನೆ. ಇವರ ಶಿಷ್ಯ ಬ್ರಾಹ್ಮಣ್ಯತೀರ್ಥರ ಉಲ್ಲೇಖವೂ ಈ ಶಾಸನದಲ್ಲಿ ಬಂದಿದೆ. ಶಾಸನವೊಂದರಲ್ಲಿ ಪ್ರಸಾದದ ವಿನಿಯೋಗದ ಪ್ರಸ್ತಾಪ ಬಂದಾಗ ವ್ಯಾಸರಾಜರ ಪಾಲನ್ನು ಉಲ್ಲೇಖಿಸಿದೆ.[2]

ಪ್ರಸ್ತುತ ಲೇಖನದ ಉದ್ದೇಶ ಹಂಪಿಯ ಪರಿಸರದಲ್ಲಿ ವೈಷ್ಣವ ಧರ್ಮದ ಪ್ರಭಾವವು ಯಾವ ಯಾವ ಹಿನ್ನೆಲೆಯನ್ನು ಒಳಗೊಂಡಿತ್ತು ಎಂಬುದನ್ನು ಪರಿಶೀಲಿಸುವುದಾಗಿದೆ. ಆದರೆ ವೈಷ್ಣವ ಧರ್ಮ ಧರ್ಮವನ್ನು ಪ್ರತಿನಿಧಿಸುವಂತಹ ದೇವಾಲಯಗಳು, ಶಿಲ್ಪಗಳು ಹೇರಳವಾಗಿ ಇಲ್ಲಿ ದೊರೆಯುತ್ತವೆ. ಇಲ್ಲಿರುವ ಶೈವ ದೇವಾಲಯಗಳಲ್ಲಿ ಸಾಕಷ್ಟು ಸಂಖ್ಯೆಯ ವೈಷ್ಣವ ಶಿಲ್ಪಗಳನ್ನು ಕಾಣುತ್ತೇವೆ. ಅಂದರೆ ಅಂದಿನ ಕಾಲದಲ್ಲಿನ ಸರ್ವಧರ್ಮ ಸಮನ್ವಯತೆಯನ್ನು ಎತ್ತಿ ತೋರಿಸುತ್ತದೆ. ಹಲವಾರು ಶಾಸನಗಳಲ್ಲಿ ವೈಷ್ಣವ ಧರ್ಮದ ಉಲ್ಲೇಖವನ್ನು ಕಾಣುತ್ತೇವೆ. ಒಟ್ಟಾರೆಯಾಗಿ ಹಂಪಿ ಪರಿಸರದಲ್ಲಿ ವೈಷ್ಣವ ಧರ್ಮ ಪಸರಿಸಿದ್ದನ್ನು ಕಾಣುತ್ತೇವೆ.

ಕರ್ನಾಟಕದ ಪ್ರಮುಖ ಧರ್ಮಗಳಲ್ಲಿ ವೈಷ್ಣವ ಧರ್ಮವು ಒಂದು. ವಿಷ್ಣುವನ್ನು ಪೂಜಿಸುವರು. ವೈಷ್ಣವ ಧರ್ಮದವರು ಎಂದು ಕರೆಯಲಾಗಿದೆ. ವಿಷ್ಣುವನ್ನು ಸರ್ವೋತ್ತಮ ಎಂದು ಕರೆಯಲಾಗಿದೆ.

ಹೊಯ್ಸಳ ಸಾಮ್ರಾಜ್ಯದ ಅವನತಿಯೊಂದಿಗೆ ವಿಜಯನಗರಕ್ಕೆ ಬಂದ ವೈಷ್ಣವ ಪಂಥದವರಿಗೆ ವಿಜಯನಗರದ ಮೊದಲ ರಾಜಮನೆತನದ ಸಂಗಮ ವಂಶಸ್ಥರು ಆಶ್ರಿತರಾಗಿದ್ದರು. ಮುಂದೆ ವಿಜಯನಗರ ಸಾಮ್ರಾಜ್ಯದಲ್ಲೆಲ್ಲ ವೈಷ್ಣವ ರಚನೆಗಳು ಹುಟ್ಟಿಕೊಂಡವು. ಹಂಪೆಯಲ್ಲಿ ಕ್ರಿ.ಶ. 1390ರಿಂದ ಅಂದರೆ ಇಮ್ಮಡಿ ಹರಿಹರನ ಕಾಲದಲ್ಲಿ ಸಾಯಣಯ್ಯ,

ಅಕ್ಷುದನಾಥ ಒಡೆಯ ಇವರ ಆಡಳಿತದಲ್ಲಿ ಶ್ರೀನಲಾನು ಚಕ್ರವರ್ತಿ ಅಯ್ಯ ಎನ್ನುವವನು ಪಂಪಾತೀರ್ಥದ ತುಂಗಭದ್ರೆಯ ತಟದಲ್ಲಿ ನರಸಿಂಹದೇವರ ಮಂಟಪವನ್ನು ಕಟ್ಟಿಸಿದ ವಿವರವಿದೆ. ಈ ದೇವರನ್ನು ಅಹೋಬಲ ನರಸಿಂಹದೇವರ, ಎಂದು ಕರೆಯಲಾಗಿದೆ.

ಧರ್ಮ ಮತ್ತು ದೇವಾಲಯಗಳ ಸಂಬಂಧ ಅಮೋಘವಾಗಿದೆ. ಧರ್ಮ ಬೆಳೆದಂತೆ ದೇವಾಲಯಗಳು ಬೆಳೆದವು. ವಿಜಯನಗರದಲ್ಲಿ ಧರ್ಮ ಮತ್ತು ದೇವಾಲಯಗಳ ಬೆಳವಣಿಗೆಯ ಚರಿತ್ರೆಯನ್ನು ಗಮನಿಸಿದರೆ ಸ್ಪಷ್ಟವಾಗುತ್ತದೆ. ಕಾರಣ ಒಂದೊಂದು ಧರ್ಮಕ್ಕೆ ಒಂದೊಂದು ದೇವಾಲಯ ನಿರ್ಮಾಣವಾಗುವ ರೂಢಿಯು ಆರಂಭವಾಯಿತು. ಈ ಹಿನ್ನೆಲೆಯಲ್ಲಿ ವಿಜಯನಗರದಲ್ಲಿ ವೈಷ್ಣವಧರ್ಮವು ಭದ್ರವಾದ ನೆಲೆ ಕಂಡುಕೊಂಡಿತು. ಈ ಧರ್ಮದ ದೇವರು ಹಾಗೂ ಸಮುದಾಯ ಇರುವುದು ಇತಿಹಾಸದುದ್ದಕ್ಕೂ ಗಮನಿಸಿ ದೇವಾಲಯಗಳು ಇರುವುದರಿಂದ ವೈಷ್ಣವ ಧರ್ಮವು ತನ್ನದೇ ಆದಂತಹ ವೈಶಿಷ್ಟ್ಯಗಳೊಂದಿಗೆ ಅಸ್ತಿತ್ವವನ್ನು ಪಡೆದುಕೊಂಡಿತು.

ಮೊಟ್ಟಮೊದಲನೆಯದಾಗಿ ಮಾಧ್ವ ಪಂಥದ ಯತಿಗಳಾದ ನರಹರಿತೀರ್ಥರ ಉಲ್ಲೇಖವು ಇದೆ. ನರಹರಿತೀರ್ಥರು ಹಂಪೆಗೆ ಬಂದು ನೆಲೆಸಿದರು. ಒರಿಸ್ಸಾದಿಂದ ಇವರು ಕ್ರಿ.ಶ. 1372ರಲ್ಲಿ ಹಂಪೆಯನ್ನು ಪ್ರವೇಶಿಸಿದರು. ಪ್ರಮುಖವಾದ ಮಾಧ್ವಯತಿಗಳ ವೃಂದಾವನಗಳ ಮೇಲೆ ಆಂಜನೇಯ ಶಿಲ್ಪಗಳನ್ನು ಇಟ್ಟಿರುವುದನ್ನು ಕಾಣುತ್ತೇವೆ.

ಹಂಪೆಯಲ್ಲಿರುವ ಹೆಬ್ಬಾಗಿಲುಗಳ ಮೇಲೆ ಆಂಜನೇಯ ಶಿಲ್ಪಗಳನ್ನು ಕಾಣುತ್ತೇವೆ. ಇಲ್ಲಿರುವ ಹೆಬ್ಬಾಗಿಲುಗಳ ಹೆಸರುಗಳು ಮಾಧ್ವ ಸಂಪ್ರದಾಯವನ್ನು ಪ್ರತಿನಿಧಿಸುತ್ತವೆ. ಮೊದಲನೆಯದಾಗಿ ಭೀಮನ (ಗಾಣಗಿತ್ತಿ ಜಿನಾಲಯ ಹತ್ತಿರ) ಬಾಗಿಲು ನಂತರ ಹನುಮನ ಬಾಗಿಲು ಮತ್ತು ಅದೇ ರೀತಿಯಾಗಿ ಮಾಧ್ವರ ಬಾಗಿಲು ಇರಬೇಕೆಂದು ಊಹಿಸಲಾಗಿದೆ. ಏಕೆಂದರೆ ಆಂಜನೇಯದಲ್ಲಿ ಮಧ್ವ ಭೀಮ ಹನುಮ ಎಂಬ ಅಂಶ ರೂಪಗಳನ್ನು ಹೊಂದಿರುವ ಶಿಲ್ಪಗಳು ಈ ಪರಿಸರದಲ್ಲಿವೆ.

ಮಾಧ್ವ ಯತಿಗಳಾದ ವ್ಯಾಸರಾಜರು ಹಂಪೆಯಲ್ಲಿ ಲೋಕಪಾವನಿ ಎಂಬ ಒಂದು ಗುರುಕುಲವನ್ನು ಸ್ಥಾಪಿಸಿದ್ದರು ಎಂಬ ಉಲ್ಲೇಖವಿದೆ. ಅ. ಸುಂದರ ಅವರು ವಿಜಯನಗರ ಅಧ್ಯಯನ ಸಂಪುಟದಲ್ಲಿ ಪ್ರಕಟಿಸಿರುವ ಲೇಖನದಲ್ಲಿ ವಿಷ್ಣುಮೂರ್ತಿಯ ಪ್ರಾಚೀನತೆಯ ಬಗ್ಗೆ ವಿವರಿಸಿದ್ದಾರೆ. ಹಿರೇಜಂತಕಲ್ಲಿನಲ್ಲಿರುವ ಹೆಬ್ಬಂಡೆಯ ಮೇಲಿರುವ ಭಾರತೀ ಮುಖ್ಯಪ್ರಾಣ ದೇವರ ರೇಖಾಚಿತ್ರದಲ್ಲಿ ತೋರಿಸಿದ್ದಾರೆ. ಶಿಷ್ಟ ಸಂಪ್ರದಾಯದ ದೇವಾಲಯವೊಂದನ್ನು ತುಂಗಭದ್ರಾ ನದಿಯ ದಂಡೆಯಲ್ಲಿ ಕಾಣಬಹುದು. ಹನುಮನನ್ನು ರಾಮಾಯಣದ ಹನುಮಂತನಾಗಿ, ಮಹಾಭಾರತದ ಭೀಮ, ನಂತರದ ಕಾಲದಲ್ಲಿ ಇವರು ರಾಜಮಾನ್ಯತೆಯನ್ನು ಪಡೆದಿದ್ದರು. ವ್ಯಾಸರಾಯರು 732 ಹನುಮಂತನ ವಿಗ್ರಹಗಳನ್ನು ಸ್ಥಾಪಿಸಿರುವುದಾಗಿ ತಿಳಿದಿದೆ. ಇವರು ಪ್ರತಿಷ್ಠಾಪಿಸಿದ ಒಂದು ವಿಗ್ರಹ 'ಯಂತ್ರೋದ್ಧಾರಕ ಹನುಮ' ಎಂದು ಪ್ರತೀತಿ.

ದೇವಾಲಯದ ಕೆಲವು ಭಾಗಗಳಲ್ಲಿ ಕಂಬಗಳಲ್ಲಿ ಹನುಮನ ಉಬ್ಬುಶಿಲ್ಪಗಳನ್ನು ಕಾಣಬಹುದು. ಇಲ್ಲಿ ಹನುಮನನ್ನು ವಿವಿಧ ಭಂಗಿಗಳಲ್ಲಿ ತೋರಿಸಲಾಗಿದೆ. ರಘುನಂದನತೀರ್ಥರ ಬೃಂದಾವನದ ಎದುರಿಗಿರುವ ಹನುಮನ ಶಿಲ್ಪವು ವಿಶಿಷ್ಟವಾಗಿದೆ. ಇಲ್ಲಿ ಹನುಮ ಚತುರ್ಭುಜನಾಗಿದ್ದು, ಮೇಲಿನ ಕೈಗಳಲ್ಲಿ ಚಕ್ರ, ಶಂಖಗಳಿದ್ದರೆ, ಕೆಳಗಿನ ಎರಡು ಕೈಗಳಲ್ಲಿ ಪುಸ್ತಕ, ಗದೆಗಳಿವೆ. ಇದು ಹನುಮ, ಭೀಮ ಮತ್ತು ಮಧ್ವರ ಸಮಾಗಮವೆಂದು ತಿಳಿಯಲಾಗಿದೆ.

ಕೃಷ್ಣದೇವರಾಯನು ಪಟ್ಟವನ್ನೇರಿದಾಗ ವ್ಯಾಸತೀರ್ಥರು ರಾಜನಿಗೆ ಆಪ್ತರಾಗಿ ರಾಜಗುರುಗಳು ಆದರು. 1513ರ ಶಾಸನದಲ್ಲಿ ಕೃಷ್ಣದೇವರಾಯನ ಶಾಸನದಲ್ಲಿ ವ್ಯಾಸರಾಜನನ್ನು ರಾಜಗುರು ಎಂದು ಉಲ್ಲೇಖಿಸಲಾಗಿದೆ. ರಾಜನು ಅತ್ಯಂತ

ಪ್ರೀತ್ಯಾದರಗಳಿಂದ ಗೌರವಿಸುತ್ತಿದ್ದ ಆ ವ್ಯಕ್ತಿ ಗುರುವಿನ ಸ್ಥಾನದಲ್ಲಿದ್ದ ಎಂದು ವರ್ಣಿಸಿದ್ದಾರೆ. ಇದೇ ರೀತಿಯ ವರ್ಣನೆಯನ್ನು ನ್ಯೂನಿಜ್ ತಿಳಿಸಿದ್ದಾನೆ. 'ಬಿಸುವಾಗ ರಾಜನು ಪ್ರತಿನಿತ್ಯ ಒಬ್ಬ ಬ್ರಾಹ್ಮಣ ವಿದ್ವಾಂಸನ ಪ್ರವಚನವನ್ನು ಕೇಳುತ್ತಿದ್ದನು. ಆತ ಸನ್ಯಾಸಿ' ಎಂದು ಚಿತ್ರಿಸಿದ್ದಾನೆ. ವ್ಯಾಸತೀರ್ಥರ ವಿನಃ ಇನ್ನೊಬ್ಬರು ರಾಜನ ಮೇಲಿನ ವಿಷಯವು ಮಾಧ್ವ ಸಂಪ್ರದಾಯದ ಪ್ರಭಾವವನ್ನು ಎತ್ತಿ ತೋರಿಸುತ್ತದೆ.[3]

ಹಂಪೆಯಲ್ಲಿರುವ ವೈಷ್ಣವ ಧರ್ಮದ ಪ್ರಭಾವವನ್ನು ಅರಿಯಲು ವೈಷ್ಣವ ಪಂಥದ ಶಿಲ್ಪಗಳೇ ಪ್ರಮುಖ ಸಾಕ್ಷಿಗಳಾಗಿವೆ. ಇಲ್ಲಿ ರಾಮ, ಕೃಷ್ಣ, ವೆಂಕಟೇಶ, ವಿಠಲ, ತಿರುವೆಂಗಳನಾಥ, ಲಕ್ಷ್ಮೀನಾರಾಯಣ ಮುಂತಾದ ದೇವತೆಗಳ ಶಿಲ್ಪಗಳಲ್ಲದೆ, ಮತ್ಸ್ಯ, ಕೂರ್ಮ, ನರಸಿಂಹ ಅವತಾರಗಳು, ವಿಷ್ಣು ಮೊಸಳೆಯ ಹಿಡಿತದಿಂದ ಗಜೇಂದ್ರನನ್ನು ಮೋಕ್ಷಗೊಳಿಸುವ ಶಿಲ್ಪ, ವಿಷ್ಣುವಿನ ಪತ್ನಿಯಾದ ಲಕ್ಷ್ಮೀ ಮತ್ತು ಭೂದೇವಿ, ಭಕ್ತರಾದ ಆಳ್ವಾರರು ವಾಹನವಾದ ಗರುಡನ ಶಿಲ್ಪಗಳನ್ನು ಮತ್ತು ವೈಷ್ಣವ ಧರ್ಮದ ಸಂಕೇತಗಳಾದ ಶಂಖ, ಚಕ್ರ ಮತ್ತು ನಾಮಗಳನ್ನು ಕೆತ್ತಲಾಗಿದೆ.[4] ರಾಮಾಯಣ, ಮಹಾಭಾರತ, ಭಾಗವತ, ಪುರಾಣದ ಕಥಾನಕ ಶಿಲ್ಪಗಳು ಶೈವ ಮತ್ತು ವೈಷ್ಣವ ದೇವಾಲಯಗಳಲ್ಲಿ ಮತ್ತು ಹುಟ್ಟುಬಂಡೆಯ ಮೇಲಿರುವ ರಂಗನಾಥನ ಶಿಲ್ಪಗಳು ಇವೆಲ್ಲವುಗಳು ಮಾಧ್ವ ತಾತ್ವಿಕತೆಯನ್ನು ಪ್ರತಿಬಿಂಬಿಸುತ್ತವೆ.[5]

ಅಡಿಟಿಪ್ಪಣಿಗಳು

1. ಅ. ಸುಂದರ, ವಿಜಯನಗರ ಕಾಲದ ದಶಾವತಾರ ಶಿಲ್ಪಗಳಲ್ಲಿ ವಿಷ್ಣುಮೂರ್ತಿಯ ಪರಂಪರೆ ಪ್ರಾಚೀನತೆ, *ವಿಜಯನಗರ ಅಧ್ಯಯನ*, ಸಂ. 1, ಪು. 109.
2. ಸಿವೆಲ್ ರಾಬರ್ಟ್, *ಎ ಫರ್‌ಗಾಟನ್ ಎಂಪೈರ್*, ಪು. 390.
3. ಶ್ಯಾಮಶಾಸ್ತ್ರೀ ಆರ್, ಎ ಫ್ಯೂ ಇನ್‌ಸ್ಕ್ರಿಪ್‌ಷನ್ಸ್ ಆಫ್ ಎನ್ಸಿಯಂಟ್ ಕಿಂಗ್ಸ್ ಆಫ್ ಆನೆಗೊಂದಿ, *ಕ್ವಾರ್ಟರ್ಲಿ ಜರ್ನಲ್ ಆಫ್ ದಿ ಮಿಥಿಕ್ ಸೊಸೈಟಿ*, 8, ಪು. 287–291.
4 ವರ್ಗೀಸ್ ಅನಿಲಾ, *ರಿಲಿಜಿಯಸ್ ಟ್ರೆಡಿಶನ್ಸ್ ಎಟ್ ವಿಜಯನಗರ*, ಪು. 91.
5. ಆರ್.ಹೆಚ್. ಕುಲಕರ್ಣಿ, ಮಾಧ್ವ ತಾತ್ವಿಕ ಹಿನ್ನೆಲೆಯಲ್ಲಿ ಹಂಪಿ ಪರಿಸರದ ಶಿಲ್ಪಗಳು, *ವಿಜಯನಗರ ಅಧ್ಯಯನ*, ಸಂ. 12, ಪು. 513–552

22. ಮಂಡ್ಯ ಜಿಲ್ಲೆಯ ಇಮ್ಮಡಿ ದೇವರಾಯನ ಕಾಲದ ಶಾಸನಗಳಲ್ಲಿ ದಾನದತ್ತಿಗಳು

ಡಾ॥ ಎಸ್.ಶಿವರಾಮು

ದಕ್ಷಿಣ ಭಾರತದ ಇತಿಹಾಸದಲ್ಲಿ ಕ್ರಿ.ಶ. 15ನೇ ಶತಮಾನದ ಪೂರ್ವಾರ್ಧದಲ್ಲಿ ಸುಮಾರು 25 ವರ್ಷಗಳ ಕಾಲ ವಿಜಯನಗರ ಸಾಮ್ರಾಜ್ಯದ ಸಾರ್ವಭೌಮನಾಗಿ ಮೆರೆದ ಮಹಾರಾಜಾಧಿರಾಜ, ರಾಜಪರಮೇಶ್ವರ, ವೀರಪ್ರತಾಪದೇವರಾಯನೆಂದೇ ಕರೆಯಲಾಗಿದ್ದ ಇಮ್ಮಡಿದೇವರಾಯನಿಗೆ 'ಗಜಬೇಟೆಕಾರ'ನೆಂತಲೂ ಕರೆಯಲಾಗುತ್ತಿತ್ತು. ಆತ ಗಜಬೇಟೆಯಲ್ಲಿ ನಿಪುಣನಾಗಿದ್ದರಿಂದ ಅವನಿಗೆ ಗಜಬೇಟೆಗಾರನೆಂದು ಕರೆದಿರಬಹುದು. ಅವನ ಆಡಳಿತದಲ್ಲಿ ಶಾಂತಿ ಸುವ್ಯವಸ್ಥೆ ನೆಲೆಗೊಂಡು ಸಾಮ್ರಾಜ್ಯವು ಸಾಹಿತ್ಯ, ಸಂಗೀತ, ಕೃಷಿ ಸಂಪದ್ಭರಿತವಾಗಿ ಉಚ್ಛ್ರಾಯ ಸ್ಥಿತಿಯನ್ನು ತಲುಪಿತು. ವಿದೇಶಗಳೊಂದಿಗೆ ವಾಣಿಜ್ಯ ಹಾಗೂ ವ್ಯಾಪಾರ ವ್ಯವಹಾರಗಳನ್ನು ಹೊಂದಿತ್ತು. ಇಮ್ಮಡಿದೇವರಾಯನು ಸಕಲಧರ್ಮ ಸಮನ್ವಯತೆಯನ್ನು ಸಂಪೂರ್ಣವಾಗಿ ದಯಪಾಲಿಸಿದನು. ಅವನು ಹಿಂದೂ ಧರ್ಮದ ರಕ್ಷಣೆಗಾಗಿ ಜನ್ಮತಾಳಿದ್ದ ವಿಜಯನಗರ ಸೇನೆಯಲ್ಲಿ ಮುಸಲ್ಮಾನರನ್ನೂ ನೇಮಿಸಿಕೊಂಡಿದ್ದನು. ತನ್ನ ಸಿಂಹಾಸನದ ಮುಂದೆ ಪವಿತ್ರವಾದ ಕುರಾನಿನ ಪ್ರತಿಯೊಂದನ್ನು ಇರಿಸಿದ್ದನು. ಈ ರೀತಿಯಲ್ಲಿ ಇಮ್ಮಡಿ ದೇವರಾಯನ ಕಾಲದಲ್ಲಿ ಹಲವು ಶಾಸನಗಳನ್ನು ಹೊರಡಿಸಿದ್ದು, ಅದರಲ್ಲಿ ವಿಶೇಷವಾಗಿ ಮಂಡ್ಯ ಜಿಲ್ಲೆಯ ಈತನ ಕಾಲದ ಶಾಸನಗಳಲ್ಲಿ ದಾನದತ್ತಿಗಳನ್ನು ತಿಳಿಸುವ ಪ್ರಯತ್ನವನ್ನು ಈ ಪ್ರಬಂಧದಲ್ಲಿ ಮಾಡಲಾಗಿದೆ.

ಶ್ರೀರಂಗಪಟ್ಟಣದ 25ನೇ ಶಾಸನವು ಇಮ್ಮಡಿದೇವರಾಯನ ರತ್ನಧೇನು ಮಹಾದಾನವನ್ನು ತಿಳಿಸುತ್ತದೆ. ಇದು 1430ರ ಅಕ್ಟೋಬರ್ 28 ಶನಿವಾರಕ್ಕೆ ಸರಿಯಾಗುತ್ತದೆ. ದಾನದ ಭಾಗ ಸಂಸ್ಕೃತದಲ್ಲಿಯೂ, ಮೇರೆಯನ್ನು ತಿಳಿಸುವ ಭಾಗ ಕನ್ನಡದಲ್ಲಿಯೂ ಇದೆ. ಇಮ್ಮಡಿ ದೇವರಾಯನು ತೋರಿ ನಾಡವೇಂಠೆಯದ ಮೇನಾಪುರ ಮಾಗಣೆಯೊಳಗಣ ಚಂದಿಗಾಲ ಗ್ರಾಮವನ್ನು ಪ್ರತಾಪದೇವರಾಯಪುರವೆಂದು ಮರುಹೆಸರಿಟ್ಟು ಅನೇಕ ಬ್ರಾಹ್ಮಣರಿಗೆ ವೃತ್ತಿಗಳನ್ನಾಗಿ ವಿಂಗಡಿಸಿ ದಾನವಾಗಿ ನೀಡಿರುವನು. ಈ ತಾಮ್ರಶಾಸನವನ್ನು ಬರೆದವನು ವರದಪಾಚಾರ್ಯ, ಎರಡನೆಯ ಹಲಗೆಯ ಹಿಂಭಾಗ ಚಂದಿಗಾಲ ಅಗ್ರಹಾರದ ಸೀಮೆಯನ್ನು ಹೇಳುವ ಭಾಗದಲ್ಲಿ ಬೆಲವಾಡಿ, ನಗುವನಹಳ್ಳಿ, ಆದಿಗೌಡನಕೆರೆ, ತಾಣಪನಹಳ್ಳಿ, ಮೇನಾಪುರ ನೆಲಾಪುರ ಮುಂತಾದವುಗಳನ್ನು ಹೆಸರಿಸಿದೆ.[1]

ಇದೇ ಶ್ರೀರಂಗಪಟ್ಟಣದ 3ನೇ ಶಾಸನವು ಇಮ್ಮಡಿ ದೇವರಾಯನು ರಾಜ್ಯವಾಳುತ್ತಿರುವಾಗ ಇವರ ನಿರೂಪದಿಂದ ದೇವರಾಜ ಒಡೆಯರು ಶ್ರೀರಂಗಪುರದ ಶ್ರೀವೈಷ್ಣವರು ಕೊಡುತ್ತಿದ್ದ ಅಡಿಕೆಸುಂಕ, ಮಗ್ಗ ಮತ್ತು ಇತರೆ ಸುಂಕಗಳಿಂದ ಬರುತ್ತಿದ್ದ ಆದಾಯವನ್ನು ಸೌಮ್ಯರಾಜನೆನಿಸಿದ ಶ್ರೀರಂಗನಾಥದೇವರಿಗೆ ವಸಂತೋತ್ಸವ ಪೂಜೆಗಾಗಿ ದಾನ ಮಾಡಿದ ವಿಷಯ ಉಲ್ಲೇಖಿಸುತ್ತದೆ. ಒಟ್ಟು ಮೂವತ್ತು ಹೊನ್ನನ್ನು ದಾನಬಿಟ್ಟ ವಿವರವಿದೆ.[2] ಶ್ರೀರಂಗಪಟ್ಟಣದ ಶ್ರೀರಂಗನಾಥ ದೇವಾಲಯದ ಭಂಡಾರದಲ್ಲಿರುವ ಕ್ರಿ.ಶ. 1447ರ ತಾಮ್ರಶಾಸನವು ವಿಜಯನಗರದ ಎರಡನೇ ದೇವರಾಯನ ಆಳ್ವಿಕೆಯ ಕಾಲಕ್ಕೆ ಸೇರಿದ್ದು, ಇದರಲ್ಲಿ ಕನ್ನಂಬಾಡಿ ಸ್ಥಳದ ಮೊದನಾಡು ವ್ಯಾಪ್ತಿಯಲ್ಲಿರುವ ಹೊಸಹಳ್ಳಿ ಗ್ರಾಮವನ್ನು ದತ್ತಿಬಿಟ್ಟ ವಿಚಾರವಿದೆ. ಮೇಲುಕೋಟೆಯ ಜೀಯರ್ ದೇವಾಲಯದದಲ್ಲಿರುವ ಕ್ರಿ.ಶ. 1458ರ ಶಾಸನವು ಇಮ್ಮಡಿ ದೇವರಾಯನ ಆಳ್ವಿಕೆಯ ಅವಧಿಯಲ್ಲಿ ತಿಮ್ಮಣ್ಣ ದಣ್ಣಾಯಕನ ಪತ್ನಿ ರಂಗಾಂಬಿಕೆಯು ರಂಗಮಂಟಪವನ್ನು ನಿರ್ಮಿಸಿದ ಬಗ್ಗೆ ಉಲ್ಲೇಖವಿದೆ.

ಈ ಮಂಟಪಕ್ಕಾಗಿ ಹೊಯ್ಸಳ ರಾಜ್ಯ ಕುರುವಂಕನಾಡವೇಂಠೆಯ ವ್ಯಾಪ್ತಿಯಲ್ಲಿದ್ದ ಬಲ್ಲೇನಹಳ್ಳಿ ಮತ್ತು ಯಳವದಹಳ್ಳಿಗಳನ್ನು ದತ್ತಿ ಬಿಟ್ಟ ವಿಚಾರವನ್ನು ಶಾಸನದಲ್ಲಿ ದಾಖಲಿಸಲಾಗಿದೆ.[3]

ಕ್ರಿ.ಶ. 1430ರ ಶ್ರೀರಂಗಪಟ್ಟಣದ ಒಂದು ಶಾಸನದ ಪ್ರಕಾರ ಸೈನ್ಯಕ್ಕೆ ತರಬೇತಿ ಹೊಂದಿದ ಮುಸಲ್ಮಾನ ಅಶ್ವಾರೋಹಿಗಳನ್ನು, ಬಿಲ್ಲಾರರನ್ನು ಸೇರಿಸಿಕೊಳ್ಳುವುದಕ್ಕಿಂತ ಮುಂಚಿತವಾಗಿ ಇಮ್ಮಡಿ ದೇವರಾಯನ ಸೇವೆಯಲ್ಲಿ ಸುಮಾರು 10,000 ಜನ ಅಶ್ವಾರೋಹಿಗಳಿದ್ದರು. ರಾಬರ್ಟ್ ಸಿವೆಲ್ ಹೇಳುವಂತೆ ಅವರು ಬಹುಶಃ ಉತ್ತರದಿಂದ ಬಂದವರು.[4] ಪಾಂಡವಪುರ ತಾಲ್ಲೂಕಿನ ಮೇಲುಕೋಟೆಯ ನಾರಾಯಣಸ್ವಾಮಿ ಗುಡಿಯ ಮುಂಭಾಗ ಪಾತಾಳಾಂಕಣದ ಒಂದು ಶಾಸನವು ವಿಜಯನಗರದ ವೀರಪ್ರತಾಪ ದೇವರಾಯ ಮಹಾರಾಯರು ಆಳುತ್ತಿರಲು ದೇವರಾಜ ಒಡೆಯರು ಶ್ರೀಸಂಪತ್ಕರ ನಾರಾಯಣ ದೇವರಿಗೆ ಧರ್ಮವಾಗಿ ವಸಂತೋತ್ಸವದ ತಿರುನಾಳಿನ ಮಧ್ಯಾಹ್ನದ ಅವಸರದ ಸಂಧಿ ಅಮೃತಪಡಿಗಾಗಿ 505 ಹಣವನ್ನು ನಂದಾದೀವಿಗೆ, ವನಮಾಲೆಗಾಗಿ ಹೊಸಹಳ್ಳಿ ಗ್ರಾಮದ ಹಿರಿಯ ಕೆರೆಯ ಆರು ಮತ್ತರು ಗದ್ದೆಯನ್ನು ದಾನ ನೀಡಿದ ವಿಷಯವನ್ನು ತಿಳಿಸುವುದಲ್ಲದೇ ಮಯಿಲಹಳ್ಳಿಯ ಭೀಮ ದೇವರಿಗೂ ದಾನ ಮಾಡಿದ ಉಲ್ಲೇಖವಿದೆ.[5]

ಶ್ರೀರಂಗಪಟ್ಟಣದ ದೇವಾಲಯದ ಭಂಡಾರದಲ್ಲಿರುವ ಕ್ರಿ.ಶ. 1447ರ ತಾಮ್ರಶಾಸನವು ಇಮ್ಮಡಿ ದೇವರಾಯನು ನಾಗಯ್ಯಭಟ್ಟನ ಮಗ ದೇವರೋಭಟ್ಟನಿಗೆ ಕನ್ನಂಬಾಡಿ ಸ್ಥಳದ ಮುದುನಾಡು ವ್ಯಾಪ್ತಿಯಲ್ಲಿದ್ದ ಹಾಗಲಹಳ್ಳಿಯನ್ನು ದತ್ತಿಬಿಟ್ಟ ವಿಚಾರವನ್ನು ಉಲ್ಲೇಖಿಸಿದೆ.

ಮಳವಳ್ಳಿಯ ಹುಸ್ಕೂರಿನ 32ನೇ ಶಾಸನವು ಸಂಗಮ ಸಂತತಿಯ ಎರಡನೇ ದೇವರಾಯನ ಕಾಲದ ದತ್ತಿಯ ಉಲ್ಲೇಖವನ್ನು ಹೊಂದಿದ್ದು, ಹುಸುಗೂರ ಕಲಿನಾಗಪ್ಪನವರ ಮಗ ವೀರಂಣಗೌಡರು ಬಸವಣ್ಣ ಮೂರ್ತಿಯನ್ನು ಮಾಡಿಸಿ, ಅದರ ಅಮೃತಪಡಿಗಾಗಿ ಹತ್ತು ಕೊಳಗ ಗದ್ದೆಯನ್ನು ದಾನವಾಗಿ ನೀಡಿರುವರು. ಇದಕ್ಕೆ ಯಾರಾದರೂ ತಪ್ಪಿದರೆ ಗಂಗೆ ತಡಿಯ ಕವಿಲೆಯ ಕೊಂದ ಪಾಪಕೆ ಹೋಗುವನು ನಾಯ ಮಾಂಸವನ್ನು ಬಯಸಿದವರು ಎಂಬ ಶಾಪವಿದೆ. ನಂಬಿಯೋಜನೆಂಬುವನು ಈ ಶಾಸನವನ್ನು ರಚಿಸಿದ್ದಾನೆ.[6] ಮಳವಳ್ಳಿಯ ಕ್ಯಾತನಹಳ್ಳಿ ಗ್ರಾಮದ ಊರ ಬಾಗಿಲಲ್ಲಿರುವ ಕ್ರಿ.ಶ. 1439ರ ಶಾಸನವು ಗಜಬೇಂಟೆಕಾರ ದೇವರಾಯ ಮಹಾರಾಯನು ಆಳ್ವಿಕೆ ಮಾಡುತ್ತಿರುವಾಗ ಅವನ ಪ್ರಧಾನಿ ಲಖಣ ದಂಡನಾಯಕನ ಈ ಕೆಳಗೆ ತಳಕಾಡನಾಡ ಅಧಿಕಾರಿಯಾದ ಪೆರುಮಾಳದೇವರಸನು ಕೇತನಹಳ್ಳಿಯನ್ನು ಮತ್ತು ರಠಳ್ಳಿಯನ್ನು ಕೀರ್ತಿ ನಾರಾಯಣದೇವರ ಕಾರ್ಯಕ್ಕೆ ದಾನವಾಗಿ ಬಿಡುತ್ತಾನೆ. ಆ ಗ್ರಾಮಗಳ ಸುಂಕ, ಮಗ್ಗ, ಮುದ್ರೆವೊಳವಾರು, ತೋಟ, ಗಾಣ, ಕಾವಲಿಸುಂಕ ಮುಂತಾದವುಗಳನ್ನು ತಳಕಾಡನಾಡ ಅಧಿಕಾರಿ ಪೆರುಮಾಳ ದೇವರಸನು ಬಿಟ್ಟ ದಾನವೆಂದು ಹೇಳಿದೆ.[7] ಇದೇ ಕಾಲದ ಇದೇ ಊರಿನ ಮತ್ತೊಂದು ಶಾಸನವು ಪೆರುಮಾಳದೇವರಸನು ಕೀರ್ತಿ ನಾರಾಯಣ ದೇವರ ನೈವೇದ್ಯಕ್ಕೆ ಮಗ್ಗ, ಸುಂಕ ಮೊಟ್ಟೆ ಸುಂಕ, ವೊಳವಾರು, ಹೊರವಾರು ಮುಂತಾದ ಹಲವಾರು ಸುಂಕವನ್ನು ಮನ್ನ ಮಾಡಿರುವುದನ್ನು ಉಲ್ಲೇಖಿಸಿದೆ.[8]

ಪಾಂಡವಪುರ ತಾಲ್ಲೂಕಿನ ಹೊಸಹಳ್ಳಿಯ ಶಾಸನವು ವಿಶಿಷ್ಟವಾಗಿದ್ದು, ಈ ಶಾಸನ ಕ್ರಿ.ಶ. 1446ಕ್ಕೆ ಸರಿಹೊಂದುತ್ತದೆ. ಈ ಶಾಸನದಲ್ಲಿ ಈ ಅವಧಿಯಲ್ಲಿ ವೀರ ಪ್ರತಾಪ ವಿಜಯರಾಯ ಮಹಾರಾಯರು ರಾಜ್ಯವನ್ನು ಆಳುತ್ತಿದ್ದಂತೆ ತಿಳಿಸಲಾಗಿದೆ. ಬೊಲರು ಕುಲ ಗಂಗಲರಾಜರ ಕುಮಾರರಾದ ತಿರುಮಲರಾಜರು ವೃಂದಾವನಕ್ಕೆ ದಾನ ನೀಡಿರುವ ಶಾಸನವಿದು. ಈ ಅವಧಿಯಲ್ಲಿ ಆಳುತ್ತಿದ್ದವನು ಇಮ್ಮಡಿ ದೇವರಾಯ. ಆದರೆ ಶಾಸನದಲ್ಲಿ ಶಕವರುಷ ಮತ್ತು ಸಂವತ್ಸರದ ಹೆಸರು ಸ್ಪಷ್ಟವಾಗಿರುವುದರಿಂದ ಇದು ಕ್ರಿ.ಶ. 1446 ರ ಅವಧಿಯದ್ದೇ ಆಗುತ್ತದೆ. ಆದರೆ ಶಾಸನದಲ್ಲಿ ಇಮ್ಮಡಿ ದೇವರಾಯನ ತಂದೆಯ ಹೆಸರಿರುವುದು ಆಶ್ಚರ್ಯದ ವಿಷಯವಾಗಿದೆ.[9]

ನಾಗಮಂಗಲ ತಾಲ್ಲೂಕಿನ ಕೆಳಗೆರೆ ಗ್ರಾಮದ ಕ್ರಿ.ಶ. 15ನೇ ಶತಮಾನದ ಲಕ್ಷಣವುಳ್ಳ ಶಾಸನವೂ ವಿಜಯನಗರದ ಪ್ರೌಢದೇವರಾಯನು ಆಳ್ವಿಕೆ ಮಾಡುತ್ತಿದ್ದಾಗ ಹೊನ್ನೆಯ ನಾಯಕನ ಮಗನಾದ ವರದೆಯ ನಾಯಕನು ಕೆಳಗೆರೆ ಗ್ರಾಮದಲ್ಲಿ ಮಲ್ಲಿಕಾರ್ಜುನ ದೇವಾಲಯವನ್ನು ಗರ್ಭಗೃಹ, ಸುಕನಾಸಿ ಹಾಗೂ ರಂಗಮಂಟಪಗಳನ್ನು (ನವರಂಗ) ಹೊಂದಿರುವಂತೆ ನಿರ್ಮಾಣ ಮಾಡಿದ್ದನ್ನು ಹಾಗೂ ಶೂದ್ರವಾಡವಾಗಿದ್ದ ಈ ಗ್ರಾಮವನ್ನು ಅಗ್ರಹಾರವನ್ನಾಗಿ ಪರಿವರ್ತನೆ ಮಾಡಿದ ಅಂಶವನ್ನು ಶಾಸನದಲ್ಲಿ ದಾಖಲಿಸಲಾಗಿದೆ. ಅಲ್ಲದೆ ಈತನು ಈ ಊರಿನ ಕೆರೆಯನ್ನು ಜೀರ್ಣೋದ್ಧಾರ ಮಾಡಿ ಕೆಳಗೆರೆಯ ವರದರಾಜ ಸಮುದ್ರವೆಂಬ ಹೆಸರಿಟ್ಟು ದಾನವಾಗಿ ನೀಡಿದ ವಿಷಯವಿದೆ.[10] ಇದೇ ಗ್ರಾಮದ ಮಲ್ಲಿಕಾರ್ಜುನ ದೇವಾಲಯದ ನವರಂಗದಲ್ಲಿರುವ ಶಾಸನವು ಮಲ್ಲಿಕಾರ್ಜುನ ದೇವರ ಸೇವೆಗಾಗಿ ಬ್ರಾಹ್ಮಣರಿಗೆ ಗದ್ದೆಯನ್ನು ಮತ್ತು ತೋಟವನ್ನು ದಾನಬಿಟ್ಟಂತೆ ವಿವರವಿದೆ. ಶಾಸನದ ದಾನದ ಭಾಗ ತ್ರುಟಿತವಾಗಿದೆ. ಶಾಸನದ ಕೊನೆಯಲ್ಲಿ ವರದ ನಾಯಕನನ್ನೂ ಮತ್ತು ಅವನ ತಂದೆ ಹೊನ್ನೆಯನಾಯಕನನ್ನು ಉಲ್ಲೇಖಿಸಿದೆ.[11]

ಮಳವಳ್ಳಿ ತಾಲ್ಲೂಕಿನ ಕಿರಗಸೂರು ಗ್ರಾಮದ ಕ್ರಿ.ಶ. 1440ರ ಶಾಸನವು ಠಾಣ್ಯದ ಬೆಳಕವಾಡಿಯ ವ್ಯಾಪ್ತಿಯಲ್ಲಿದ್ದ ಕಿರಗಸೂರಿನ ಗ್ರಾಮದಲ್ಲಿ ವಿಧಿಸಲಾದ ಮಗ್ಗ, ಮುದ್ರೆ, ಗಾಣ, ಕಾವಲಿ, ಅತದೆರೆ ಮೊದಲಾದ ತೆರಿಗೆಗಳನ್ನು ರದ್ದುಮಾಡಿ, ಸುಮಾರು ಆರು ವರಹಗಳನ್ನು ತಲಕಾಡಿನ ವೈದ್ಯನಾಥ ದೇವರಿಗೆ ಉಂಬಳಿಯಾಗಿ ನೀಡಿದ ಬಗ್ಗೆ ಉಲ್ಲೇಖಿಸುತ್ತದೆ. ತಲಕಾಡನ್ನು ಗಜಾರಣ್ಯಕ್ಷೇತ್ರವೆಂದು ಶಾಸನದಲ್ಲಿ ಕರೆಯಲಾಗಿದೆ. ಈ ದಾನಗಳನ್ನು ಪಟ್ಟಣದ ರಾಯಣ್ಣವೊಡೆಯನು ತಲಕಾಡಿನ ಪೆರುಮಾಳದೇವನೆಂಬ ವಿಜಯನಗರ ಅಧಿಕಾರಿಯ ಆಜ್ಞೆಯ ಮೇರೆಗೆ ಪಡೆದನೆಂದು ಶಾಸನದಿಂದ ತಿಳಿಯುತ್ತದೆ.[12]

ಮಂಡ್ಯ ಜಿಲ್ಲೆಯ ನಾಗಮಂಗಲದ ಪ್ರಭುಗಳು ವಿಜಯನಗರದ ಅರಸರಿಗೆ ಸಾಮಂತರಾಗಿದ್ದು, ಸಿಂಗಣ್ಣ ಒಡೆಯನ ಪುತ್ರ ತಿಮ್ಮಣ್ಣ ಡಣ್ಣಾಯಕ. ಈತ ವಿಜಯನಗರದ ಇಮ್ಮಡಿ ಪ್ರೌಢರಾಜನಿಗೆ ಮಂತ್ರಿಯಾಗಿದ್ದನು. ತುಂಬಾ ಪ್ರಭಾವಶಾಲಿ ಅಧಿಕಾರಿಯಾದ ಈತ ಅನೇಕ ಸತ್ಕಾರ್ಯಗಳನ್ನು ಮಾಡಿದ್ದನು. ಮೇಲುಕೋಟೆಯನ್ನು ಪುನರ್‌ನಿರ್ಮಾಣ ಮಾಡಿ ಶ್ರೀರಂಗಪಟ್ಟಣಕ್ಕೆ ಸ್ವಂತ ಖರ್ಚಿನಿಂದ ಕೋಟೆಯನ್ನು ಕಟ್ಟಿದ್ದನು. ಅಲ್ಲಿ ಕೋಟೆ ಕಟ್ಟಿದವರಲ್ಲಿ ಈತನೇ ಮೊದಲಿಗ. ಈತ ಅಲ್ಲಿನ ರಂಗನಾಥ ದೇವಾಲಯವನ್ನು ವಿಸ್ತರಿಸುವ ಕೆಲಸದಲ್ಲಿಯೂ ತೊಡಗಿದ್ದನು.

ಹೀಗೆ ಇಮ್ಮಡಿದೇವರಾಯ ವಿಜಯನಗರದ ಸುಪ್ರಸಿದ್ಧ ಅರಸರಲ್ಲಿ ಅಗ್ರಮಾನ್ಯನೆನಿಸಿದ್ದನು. ಈತನ ಕಾಲದಲ್ಲಿ ವಿಜಯನಗರ ಸಾಮ್ರಾಜ್ಯ ವಿಸ್ತಾರಗೊಂಡು ಅದು ಎಲ್ಲಾ ಕ್ಷೇತ್ರಗಳಲ್ಲೂ ಪ್ರಗತಿಯ ಶಿಖರವನ್ನು ತಲುಪಿತ್ತು. ಇವನ 24 ವರ್ಷಗಳ ವೈಭವ ಆಳ್ವಿಕೆಯಲ್ಲಿ ಮಂಡ್ಯ ಪ್ರದೇಶದಲ್ಲಿ ಹಲವು ದಾನದತ್ತಿಗಳನ್ನು, ಗ್ರಾಮದಾನಾದಿಗಳನ್ನು ನೀಡಿ ಈ ಪ್ರದೇಶವನ್ನು ಅಭಿವೃದ್ಧಿಪಡಿಸುವಲ್ಲಿ ದುಡಿದಿದ್ದಾನೆ. ವಿದೇಶಿ ಪ್ರವಾಸಿಗನಾದ ಅಬ್ದುಲ್ ರಜಾಕ್‌ನು ಇಮ್ಮಡಿ ದೇವರಾಯನ ರಾಜ್ಯದಲ್ಲಿ ನೆಲೆಸಿದ್ದ ದಾನದತ್ತಿ, ಶಾಂತಿ ಸಮೃದ್ಧಿಯನ್ನು ಯಾರು ಕಣ್ಣಿಂದ ನೋಡದ ಕಿವಿಯಿಂದ ಕೇಳದ ಸಾಮ್ರಾಜ್ಯ ಎಂದು ಮುಕ್ತಕಂಠದಿಂದ ಹೊಗಳಿದ್ದಾನೆ.

ಅಡಿ ಟಿಪ್ಪಣಿಗಳು

1. *E.C., VI. Sr.25, 1420 A.D., p. 359.*
2. *Ibid., VI, Sr. 3, 1431 A.D., p. 334.*
3. *Ibid., VI, Pp. 179, 1458 A.D., p. 254.*
4. *Ibid., III, Sr. 15.*
5. *Ibid., VI, Pp. 152, 1432 A.D., pp. 240-241.*

6. *Ibid., VII, ML. 32, 1440 A.D., p. 365.*
7. *Ibid., VII, Ml. 133, 1439 A.D., pp. 425-426.*
8. *Ibid., VII, Ml. 134, 1439 A.D., p. 426.*
9. *Ibid., VI. Pp. 218, 1446 A.D., p. 302 .*
10. *Ibid., VII, Ng. 58, 15 A.D., p. 31.*
11. *Ibid., VII, Ng. 59, 15 A.D, pp. 31-32.*
12. *Ibid., VII. Ml. 102, 1440 A.D., p. 404.*

23. ಸದಾಶಿವಮಹಾರಾಯನ ಧಾರ್ಮಿಕ ಶಾಸನಗಳು (ಕ್ರಿ.ಶ. 1542–1570)

ಡಾ॥ ಡಿ.ಎಂ. ನಾಗರಾಜು

"ತಿಮ್ಮಾಂಭಾಗರ್ಭರತ್ನ ರಂಗಕ್ಷಿತೀಂದ್ರ ಸಂಜಾತ
ಹೇಮಾದ್ರಿ ಮಹಾಮೇರುವಿನ ದಕ್ಷಿಣ ದಿಗ್‌ಭಾಗ ಜಂಬುದ್ವೀಪ
ಲಕ್ಷಇಪ್ಪತ್ತೈದು ಸಾವಿರ ಯೋಜನದ ಮಧ್ಯದ
ಆ ಕುಂತಳ ದೇಶಾಧಿಪತ್ಯಕೆ ಸಲ್ಲುವ ತುಂಗಭದ್ರಾ ತೀರದಿಂ
ಪಂಪಾಪತಿ ವಿರೂಪಾಕ್ಷನ ನಿರೂಪದಿಂ ವಿದ್ಯಾರಣ್ಯ ನಾಮಧೇಯದಿಂ
ಹರಿಹರರಾಯರು ಕಟ್ಟಿಸಿದ ... ನಿಂತ ವಿದ್ಯಾನಗರಿ ಸಿಂಹಾಸನಕೆ ಕರ್ತ್ತರಾದ
ಶ್ರೀಮನ್‌ಮಹಾರಾಜಾಧಿರಾಜ ರಾಜಪರಮೇಶ್ವರ ಶ್ರೀವೀರ ಪ್ರತಾಪ
ಶ್ರೀ ಸದಾಶಿವದೇವ ಮಹಾರಾಯರು ಸುಖ–ಸಂಕಥಾ ವಿನೋದದಿಂ
ಧರ್ಮ ಪ್ರತಿಪಾಲನೆಇಂ ಸುಖ ರಾಜಂಗೆಯ್ಯುತ್ತಿರಲು..."

ಹೇಮಾದ್ರಿ ಶಾಸನ ಪ್ರತಿಪಾದಿತ ಮಹಾದಾನವನ್ನು ಅನುಗ್ರಹಿಸುತ್ತಿದ್ದನೆಂದು ಆ ಶಾಸನವು ಅವನನ್ನು ಕೊಂಡಾಡಿದೆ. ಸದಾಶಿವನು ವಿಜಯನಗರದ ನ್ಯಾಯಸಮ್ಮತ ಹಾಗೂ ನಿಜವಾದ ಹಕ್ಕುದಾರನೆಂದು ತಾನು ಅಧಿಕೃತ ಮಹಾರಾಜನೆಂದು ರಾಜೋಚಿತ ಸಕಲ ಬಿರುದುಬಾವಲಿಗಳನ್ನು ಧರಿಸಿಕೊಂಡು ಅನೇಕ ದತ್ತಿಗಳನ್ನು ಹಾಕಿಕೊಟ್ಟನೆಂದು ತೋರಿಸುವ ಅನೇಕ ಶಾಸನಗಳು ನಮಗೆ ಲಭ್ಯವಿದೆ.

ತುಳುವ ವಂಶದ ಸದಾಶಿವರಾಯ ಮಹಾರಾಜನು ರಂಗರಾಯನ ಮಗನೆಂದು ಭಟ್ಕಳದ ಶಾಸನ ತಿಳಿಸುತ್ತದೆ.

ಕ್ರಿ.ಶ. 1541ರಲ್ಲಿ ಸದಾಶಿವನು ವಿಜಯನಗರದ ರತ್ನ ಸಿಂಹಾಸನದ ಅಭಿಷಿಕ್ತಮಹಾರಾಜನು ಅಂದರೆ ಪ್ರಜೆಗಳು ಅವನನ್ನು ವಿಜಯನಗರ ಸಿಂಹಾಸನದ ಉತ್ತರಾಧಿಕಾರಿ ಎಂದು ಮನ್ನಿಸಿದ್ದರು.

ಕ್ರಿ.ಶ. 1541ರ ಒಂದು ಶಾಸನ ಸದಾಶಿವನನ್ನು ವಿಜಯನಗರದ ಮಹಾಪ್ರಭುವೆಂದು ಸಮರ್ಥಿಸುವ ಒಂದು ಮಹತ್ವದ ಹಾಗೂ ನಿರ್ಣಾಯಾತ್ಮಕ ಘಟನೆಗೆ ತಿರುಪತಿ ಶಾಸನ ಪುಷ್ಟೀಕರಿಸುತ್ತದೆ. ದೇವಸ್ಥಾನದ ಶಾಸನಗಳಲ್ಲಿ ಸದಾಶಿವನ ಪ್ರಪ್ರಥಮ ಉಲ್ಲೇಖವಾಗುವ ಶಕ 1463 ಆಗಿದ್ದು ಅದು 21 ಜುಲೈ 1541ಕ್ಕೆ ಸರಿ ಹೊಂದುತ್ತದೆ ಎಂದು ಹೇಳಲಾಗಿದೆ.

ಸದಾಶಿವನ ಹೆಸರಿನಲ್ಲಿ 1542ರ ಎರಡು ಶಾಸನಗಳು ಕರ್ನೂಲ ಜಿಲ್ಲೆಯಲ್ಲಿ ದೊರಕಿವೆ. ಮಹಾರಾಜಸದಾಶಿವನ ಆದೇಶದ ಮೇರೆಗೆ ಬಾರ್ಕೂರು ಸೀಮೆಯ ಆಡಳಿತಾಧಿಕಾರಿಯಾಗಿ ನಿಯಮಿತನಾದ ಮಲಯಪ್ಪಅಯ್ಯನವರ ಆಜ್ಞಾನುಸಾರವಾಗಿ ಬಾರ್ಕೂರು ರಾಜ್ಯದಲ್ಲಿ ಅಧಿಕಾರಸಂಪನ್ನನಾಗಿದ್ದ ಆಚಪ್ಪ ಒಡೆಯರ ಅವರು ಮಹಾಪ್ರಭುವಿನ ಯಶೋದ್ಧಾರಕ್ಕಾಗಿ ಸುವರ್ಣವನ್ನು ದಾನ ಮಾಡಿದ್ದಾಗಿ 1542ರ ಶಾಸನದಲ್ಲಿ

ಉಲ್ಲೇಖಿಸಲಾಗಿದೆ. ಕ್ರಿ.ಶ. 1542ರ ಕಾಂಚೀಪುರದ ಎರಡು ಶಾಸನಗಳು ಮಹಾರಾಜನಿಗೆ ಧರ್ಮವಾಗಲೆಂದು ದತ್ತಿಕೊಟ್ಟಿದ್ದನ್ನು ಉಲ್ಲೇಖಿಸುತ್ತದೆ. ಅಚ್ಯುತನ ಮರಣಾನಂತರ ಸದಾಶಿವನು ನ್ಯಾಯಸಮ್ಮತ ಉತ್ತರಾಧಿಕಾರಿ ಎಂದು ಅವನನ್ನು ಸಮರ್ಥಿಸಿದ ಅನೇಕರು ಅವನ ಪಟ್ಟಾಭಿಷೇಕವಾಗಲೆಂದು ಭಗವಂತನ ಕೃಪೆಯನ್ನು ಯಾಚಿಸುತ್ತ ಅಂತಃಕರಣಪೂರ್ವಕವಾಗಿ ಈ ದತ್ತಿಗಳನ್ನು ಮಾಡಿದರು.

ಅನಂತಪುರ ಜಿಲ್ಲೆಯ ಹಿಂದುಪುರ ತಾಲ್ಲೂಕಿನ ಕೊಂಡಾಪುರದ ದೇವಾಲಯದಲ್ಲಿನ ಒಂದು ಶಾಸನ ಉತ್ತರಾಧಿಕಾರಕ್ಕಾಗಿ ವಿಭಿನ್ನ ಬಲಾಬಲಗಳಲ್ಲಿನ ಘರ್ಷಣೆಯಿಂದ ಉದ್ಭವಿಸಿದ ಸಂಕೀರ್ಣ ಪರಿಸ್ಥಿತಿಯ ಚಿತ್ರಣವನ್ನು ಕೊಡುತ್ತದೆ ಮತ್ತು ಸದಾಶಿವನನ್ನು ಶಾಶ್ವತವಾಗಿ ವಿಜಯನಗರದ ಸಿಂಹಾಸನಾಧೀಶ್ವರನನ್ನಾಗಿ ಮಾಡಬೇಕೆಂದು ಭಗವಂತನಿಗೆ ಪ್ರಾರ್ಥನೆ ಮಾಡಿದ್ದರ ಉಲ್ಲೇಖವಿದೆ.

ಸದಾಶಿವನು ವಿಜಯನಗರದ ಸಾಮ್ರಾಟನೆಂದು ಆಳ್ವಿಕೆ ಮಾಡಿದ್ದು ಸದಾಶಿವನು ವಿಜಯನಗರದ ಗೌರವಾನ್ವಿತ ಮಹಾಪ್ರಭು ಆಗಿದ್ದನು. ಸದಾಶಿವನು ವಿದ್ಯಾನಗರದಲ್ಲಿ ಶೋಭಾಯಮಾನವಾಗಿ ಬಹುಕಾಲ ರಾಜ್ಯವನ್ನಾಳಿದನು. ಸತ್ಯಸಂಧ, ಶರಣಾಗತರಕ್ಷಕ, ಚತುಸ್ಸಮುದ್ರಾಧೀಶ್ವರ ಕಲಿಯುಗದ ಚಕ್ರವರ್ತಿ, ವೀರಪ್ರತಾಪ ಸದಾಶಿವರಾಯ, ಕ್ಷಿತಿಭೂಪಾಲಕನೆಂದು ಯಶೋಕೀರ್ತಿದುಂದುಭಿಸಿದೆ. ಮಾಮಿಡಿಪುಂಡಿ ಶಾಸನದಲ್ಲಿ ಮಹಾಪ್ರಭುವಿನ ವ್ಯಕ್ತಿತ್ವದ ನಿರೂಪಣೆ ಇದೆ. ಅದರ ಮೇರೆಗೆ ಸದಾಶಿವನು ಮನೋಹರನು, ರಾಜಧುರಂಧರನು, ವೀರಾಧಿವೀರನು, ರಾಮರೂಪಿಶರ ವಿದ್ಯಾಚತುರನೂ, ದಾನವೀರನೂ ಆಗಿದ್ದನು.

ಹಂಪಿಯ ವಿಠಲಮಂದಿರದಲ್ಲಿ ದೊರಕಿರುವ ಕ್ರಿ.ಶ. 1543, 1544, 1555, 1558, 1563, 1564ರ ಶಾಸನಗಳು ವಿಶಿಷ್ಟ ಮಹತ್ವದ್ದಾಗಿವೆ. ಅವು ನಮಗೆ ಸದಾಶಿವನು 1543–64ರ ಕಾಲಾವಧಿಯಲ್ಲಿ ಸಾಮ್ರಾಟನಾಗಿ ರಾಜ್ಯವಾಳಿದ್ದಕ್ಕೆ ನಿಸ್ಸಂದಿಗ್ಧವಾದ ಪ್ರಮಾಣಗಳನ್ನು ಒದಗಿಸುತ್ತದೆ. ಈ ಶಾಸನಗಳ ಸಾಹಿತ್ಯರಚಯಿತರು ಹಾಗೂ ಲಿಪಿಕಾರರು ಅವನಿಗೆ ಮಹಾಸಾಮ್ರಾಟನ ಎಲ್ಲಾ ಬಿರುದುಗಳನ್ನು ಕೊಟ್ಟಿದ್ದಾರೆ. ಕ್ರಿ.ಶ. 1542–1565ರ ಕಾಲಾವಧಿಯಲ್ಲಿ ಅವನು ಮಹಾಸಾಮ್ರಾಟನಾಗಿ ವಿಜಯನಗರದ ರತ್ನಸಿಂಹಾಸನಾಧೀಶನಾಗಿ ರಾಜ್ಯವಾಳಿದ್ದಕ್ಕೆ ಸಾಮ್ರಾಜ್ಯದ ಹಲವೆಡೆಗೆ ಅನಾಕಾನೇಕ ಶಾಸನಗಳು ಇವೆ. ಅವನು ರಾಜಧಾನಿಯಲ್ಲೆಯೆ ತುಂಗಭದ್ರಾನದಿಯ ದಂಡೆಯ ಮೇಲೆ ಉಪಸ್ಥಿತರಿರುವ ವಿಠಲದೇವರ ಸಮಕ್ಷಮ ಅನೇಕ ದತ್ತಿಗಳನ್ನು ಕೊಟ್ಟಿದ್ದ ದಾಖಲೆಗಳಿವೆ.

ಸದಾಶಿವನ ಆಳ್ವಿಕೆಯ ಕಾಲದಲ್ಲಿ ಸ್ವತಃ ಸಾಮ್ರಾಟ ಸದಾಶಿವನು ಅವನ ಮಹಾಮಂತ್ರಿಗಳು ಹಾಗೂ ಪ್ರಜೆಗಳು ಧರ್ಮಾಚರಣೆಯಲ್ಲಿ ಅತ್ಯಾಸಕ್ತರಾಗಿ ಬಹು ದೊಡ್ಡ ಪ್ರಮಾಣದಲ್ಲಿ ಕಾರ್ಯಾನ್ವಿತರಾಗಿ ನೂತನ ದೇವಮಂದಿರಗಳ ನಿರ್ಮಾಣ ಮಾಡಿದ್ದು ಇನ್ನೂ ಕೆಲವನ್ನು ವಿಸ್ತಾರಗೊಳಿಸಿದ್ದು ಮತ್ತು ಅವುಗಳ ನಿರ್ವಹಣೆಗೆಂದು ನಿತ್ಯಪೂಜೆ, ದೀಪೋತ್ಸವ, ಉತ್ಸವಮೂರ್ತಿಗಳನ್ನು ಮೆರವಣಿಗೆಯಲ್ಲಿ ಸಾಗಿಸುವುದು, ಜನ್ಮೋತ್ಸವ ಇತ್ಯಾದಿ ವಿಶೇಷ ಉತ್ಸವಗಳನ್ನು ಆಚರಿಸುವುದಕ್ಕಾಗಿ ಧಾರಾಳವಾಗಿ ದಾನ ಮಾಡಿದ್ದನ್ನು ನೋಡಿದರೆ, ಆ ಪ್ರಮಾಣದಲ್ಲಿ ಧರ್ಮಾಚರಣೆ ಈ ಮೊದಲು ಎಂದೂ ಆಗಿರಲಿಲ್ಲವೆಂದು ಹೇಳಬೇಕು.

ಸದಾಶಿವನು ಸರ್ವಧರ್ಮಸಮನ್ವಯ ಆಚರಣೆಯನ್ನು ಪರಿಪಾಲಿಸುವ ಆದರ್ಶದ ಪ್ರತಿಜ್ಞೆ ಮಾಡಿದ ವಿಜಯನಗರ ಸಾಮ್ರಾಟನು ಶಿವ ಮತ್ತು ವಿಷ್ಣುಮಂದಿರಗಳಿಗೆ ಕೈ ಎತ್ತಿ ದಾನ ಮಾಡಿದ್ದು ನಿಜವಿದ್ದರೂ ಅವನು ಮತ್ತು ಅವನ ಪ್ರಜೆಗಳು ವೈಷ್ಣವ ಮತದಲ್ಲಿ ವಿಶೇಷ ಆಸಕ್ತಿಯುಳ್ಳವರಾಗಿದ್ದು ಇಲ್ಲಿ ನಾವು ಶೈವ ಧರ್ಮದ ಶಾಸನಗಳನ್ನು ಗಮನಿಸಿದಾಗ ಶೈವ ಧರ್ಮದ ಮೇಲೂ ಹೆಚ್ಚಿನ ಪ್ರಮಾಣದ ಶಾಸನಗಳನ್ನು ನಾವು ಕಾಣಬಹುದು.

ಕ್ರಿ.ಶ. 1542–1570ರವರೆಗೆ ಸದಾಶಿವರಾಯನು ಧಾರ್ಮಿಕವಾಗಿ ಮಂಡಳಿಕರು ಮಂತ್ರಿಗಳು ಮಾಡಿದ ದಾನದತ್ತಿ ದೇವಾಲಯಗಳ ನಿರ್ಮಾಣ ಜೀರ್ಣೋದ್ಧಾರ ಸೇವೆಗಳನ್ನು ಶೈವ ಶಾಸನಗಳ ಮೂಲಕ ನಾವು ತಿಳಿಯಬಹುದು.

ಕ್ರಿ.ಶ. 1542ರ ಗುಂಡಿಗನೂರು ಶಾಸನದಲ್ಲಿ ವಿರೂಪಾಕ್ಷದೇವರ ಅಮೃತಪಡಿಗೆ ಕುಱುಗೋಡು ಸೀಮೆಗೆ ಸಲುವ ಗುಂಡಿಗೆನೂರ ಗ್ರಾಮವನ್ನು ಪ್ರತಾಪದೇವರಾಯನು ಲಕ್ಷ್ಮೀಕಾಂತದೀಕ್ಷಿತರಿಗೆ ನೀಡಿದ್ದುದನ್ನು ಲಖಣದಣ್ಣಾಯಕನು ಅದನ್ನು ಅರಮನೆಗೆ ಮುಟ್ಟುಗೋಲು ಹಾಕಿಕೊಂಡು ಇದನ್ನು ಲಕ್ಷ್ಮೀಕಾಂತದೀಕ್ಷಿತರ ವಂಶಸ್ಥರ ಬಳಿ ಇದ್ದ ದಾಖಲೆಗಳನ್ನು ಪರಿಶೀಲಿಸಿ ಆ ವಂಶದವರಿಗೆ ಮತ್ತೆ ದಾನ ನೀಡಿದ ದಾಖಲೆಯಿದೆ. ಇದೇ ಕಾಲದ ಕೊಟಕಾಲು ಶಾಸನದಲ್ಲಿ ಕೊಟಯಕಲ್ಲು ಹನುಮಂತದೇವರ ಅಮೃತಪಡಿಗೆ ತೀರ್ಥದ ಛತ್ರದ ಸೇವೆಗೋಸ್ಕರ ಭೂಮಿ, ಒಂದು ನಿವೇಶನ ರಾಮರಾಜನ ಮಗ ಮಹಾಮಂಡಳೇಶ್ವರ ಕೋನೇಟ ತಿಮ್ಮಯ್ಯದೇವ ಮಹಾಅರಸು ಚಿನ್ನವನ್ನು ದಾನ ಮಾಡಿದ ದಾಖಲೆಯಿದೆ.

ಕ್ರಿ.ಶ. 1543ರ ಹಲುಗುಡೆ ಶಾಸನದಲ್ಲಿ ಕುರುಗೋಡ ಸಂಗಮೇಶ್ವರ ದೇವರ ಸೇವೆಗೋಸ್ಕರ ಚೆನಕುಂಟೆ ಗ್ರಾಮವನ್ನು ಗುಂಡಯ ಮಹಾರಾಯರ ಅಳಿಯ ಲಿಂಗರಾಜ ಸದಾಶಿವರಾಯರಿಗೆ ಪುಣ್ಯವಾಗಬೇಕೆಂದು ಶಾಸನ ತಿಳಿಸುತ್ತದೆ. ಕ್ರಿ.ಶ. 1544ರ ಬನಶಂಕರಿ ಶಾಸನದಲ್ಲಿ ಹಡಪದ ಯಱಿಕೃಷ್ಣಪ್ಪನಾಯಕನು ಬನದ ಮಹಾಮಯಿಯ ಅಮೃತಪಡಿ, ಅಂಗರಂಗ ವೈಭವಕ್ಕೆಂದು ಬಾದವಿ (ಬಾದಾಮಿ) ಸೀಮೆಗೆ ಸಲ್ಲುವ ಮಲಪಹಾರಿ ನದಿ ತೀರದ ದಾಣಕಸಿರಿವೊರನ್ನು ದಾನವಾಗಿ ನೀಡಿರುವುದನ್ನು ತಿಳಿಸುತ್ತದೆ. ಇದೇ ಕಾಲದ ಶಂಕರನಾರಾಯಣ ಗ್ರಾಮದ ಶಂಕರನಾರಾಯಣದೇವರ ಸೇವೆಗೋಸ್ಕರ ಚನ್ನಬೊಮ್ಮವೊಡೆಯರ ಶಿಷ್ಯರಾದ ದಬುಗೆಱಿವೊಡೆಯರು ಕ್ರಯವಾಗಿ ಭೂಮಿಯನ್ನು ಕೊಂಡು ದಾನನೀಡಿದ ವಿವರವಿದೆ.

ಕ್ರಿ.ಶ. 1545ರ ಹಂಪಿ ಶಾಸನದಲ್ಲಿ ರಾಮರಾಜನ ತಮ್ಮ ಪ್ರಧಾನಿ ತಿಂಮ್ಮರಾಜನ ದಳವಾಯಿ ಜಂಗಮಯ್ಯನು ಸದಾಶಿವರಾಯನಿಗೂ ಮತ್ತು ಪ್ರಧಾನಿ ತಿಂಮರಾಜನಿಗೂ ಪುಣ್ಯವಾಗಬೇಕೆಂದು ಕೃಷ್ಣರಾಜಪೇಟೆಯ ಹಿರಿಯ ಕಾಲುವೆಯ ಛತ್ರದ ಬಳಿ ದೇವಾಲಯ ಕಟ್ಟಿಸಿ ದೇವರಿಗೆ ಚಿನ್ನ, ಬೆಳ್ಳಿ, ಆಭರಣಗಳನ್ನು ಮಾಡಿಸಿ ಹಾಗೆಯೇ ಅಲ್ಲಿ ನಡೆಯುವ ಛತ್ರಕ್ಕೆ ಮತ್ತು ದೇವರ ಅಮೃತಪಡಿಗೆ ವ್ಯಾಪಾರಿಗಳು ದತ್ತಿಬಿಟ್ಟ ದಾಖಲೆಯಿದೆ. ಇದೇ ಕಾಲದ ಇದೇ ಊರಿನ ಶಾಸನದಲ್ಲಿ ಮಾಂಡಳಿಕ ಮಾದರಾಜುಮಲ್ಲರಾಜುವಿನ ಮೊಮ್ಮಗನೂ, ವಲ್ಲಭರಾಜು ಮತ್ತು ವೆಂಗಳಮ್ಮನ ಮಗನೂ ಆದ ತಿಮ್ಮರಾಜನು ದೊಡ್ಡ ಅಂಗಡಿಬೀದಿಯ ಪಶ್ಚಿಮಕ್ಕೆ ಮಾಧವದೇವರಿಗೆ 25 ಅಂಕಣಗಳ ರಂಗಮಂಟಪವನ್ನು ಕಟ್ಟಿಸಿ ತಿಮ್ಮರಾಜನು ತನ್ನ ತಂದೆತಾಯಿಗಳಿಗೆ ಪುಣ್ಯವಾಗಬೇಕೆಂದು ಕಟ್ಟಿಸಿ ಈ ಮಂಟಪವನ್ನು ದೇವರ ನಿತ್ಯೋತ್ಸವದ ಸಂದರ್ಭದಲ್ಲಿ ನೃತ್ಯಗೀತ ವೈಭವಗಳಿಗೆ ಬಳಸಬೇಕೆಂದು ಸೂಚಿಸುತ್ತದೆ. ಇದೇ ಕಾಲದ ಅಪರ್ ಅಹೋಬಿಲಮ್ ಶಾಸನದಲ್ಲಿ ಅಹೋಬಲೇಶ್ವರದೇವರ ಪೂಜೆ, ಸಹಸ್ರನಾಮ ಮತ್ತು ನೈವೇದ್ಯಕ್ಕೆ ಮೊಸರು ಅನ್ನ, ಪೂಜೆಗೋಸ್ಕರ ಮನವಾರಟ ಚಂನಮರಸಯನ ಮಗ ಕರಣಿಕ ಬುಮರಸ ಭೂಮಿ ದಾನನೀಡಿದ ದಾಖಲೆಯಿದೆ. ಇದೇ ಕಾಲದ ಬಿಳಿಗೆರೆ ಶಾಸನದಲ್ಲಿ ಶ್ರೀ ನಂಜುಂಡೇಶ್ವರ ದೇವರಿಗೆ ದಾನ ನೀಡಿದ ವಿವರವಿದೆ. ಶಾಸನ ಸವೆದಿದೆ. ಪುಟ್ಟನಪುರ ಶಾಸನದಲ್ಲಿ ಶ್ರೀರಂಗಪಟ್ಟಣದ ಉಭಯಕಾವೇರಿ ಮಧ್ಯದ ಗಂಗಾಧರ ಮುಂದೆ ಉಮ್ಮತ್ತೂರಿನ ವೀರಶೈವ ಮಠಕ್ಕೆ ಒಂದು ಗ್ರಾಮವನ್ನು ದಾನ ನೀಡಿದ ದಾಖಲೆಯಿದೆ.

ಕ್ರಿ.ಶ. 1546ರ ಕೋಟೇಶ್ವರ ಶಾಸನದಲ್ಲಿ ಕೋಟೇಶ್ವರ ದೇವರ ಕಾರ್ತಿಕ ಮಾಸದ ದಿನ 30ಕೆ ಪಂಚಾಮೃತಭಿಷೇಕ, ದೀಪಾರಾಧನೆ, ನೈವೇದ್ಯ, ಫಲಪೂಜೆ, ವ್ರಿಂದಾವನ ಪೂಜೆಗಳಿಗೂ ಸಾಂಗವಾಗಿ ನಡೆಸುವುದಕ್ಕೆ

ಹಾಗೂ ಶ್ರೀಸದಾಶಿವರಾಯರಿಗೆ ಮಿತ್ರೋರ್ಜಿತ ಆಯುರಾರೋಗ್ಯ ಅಯಿಶ್ವರಿಯಾಭಿವ್ರಿದ್ಧಿಯಾಗಬೇಕೆಂದು ಅಚಪ್ಪವೊಡೆಯನು 50 ವರಹವನ್ನು ದೇವರ ಸೇವೆಗೆ ದಾನ ನೀಡಿದ ವಿವರವಿದೆ.

ಕ್ರಿ.ಶ. 1547ರ ಅನಂತಪುರ ಶಾಸನದಲ್ಲಿ ಅನಂತಾಪುರದ ಮಲ್ಲಿಕಾರ್ಜುನ ದೇವಾಲಯ ಶಿಥಿಲವಾಗಿರಲು ಹರಪಂಣ ಎಂಬುವನು ಗುಡಿಯನ್ನು ಜೀರ್ಣೋದ್ಧಾರ ಮಾಡಿ ದೇವರ ಪ್ರತಿಷ್ಠೆ ಮಾಡಿ ಆವೂರಿನ ಕಮ್ಮಾರನಮಗ ತಿಂಮದಾಸರಿ ದೇವಾಲಯವು ತಮ್ಮ ವಂಶದವರೆಂದು ವಾದಿಸಿದಾಗ ಶ್ರೀನಿವಾಸಚಾರ್ಯ್ಯರೊಡನೆ ಅನೇಕರು ಸೇರಿ ಅದನ್ನು ಕ್ರಯವಾಗಿ ತೆಗೆದುಕೊಂಡು ಊರ ದೇವಾಲಯವಾಗಿ ಮಾರ್ಪಡಿಸಿದರು. ಇದೇ ಕಾಲದ ಅಮೃತಾಪುರದ ಅಮ್ರಿತೇಶ್ವರ ನಂದಾದೀವೆಗೆ ಮತ್ತು ಸೇವೆಗೋಸ್ಕರ ಮತ್ತು ರಾಮರಾಜಅಯ್ಯನವರಿಗೆ ಪುಂಣ್ಯವಾಗಬೇಕೆಂದು ಒಬ್ಬ ಅಧಿಕಾರಿ ಕೆಲವು ಕಂದಾಯ, ಸುಂಕ, ಕಡಿಮೆ ಮಾಡಿಸಿ ದಾನ ಕೊಟ್ಟ ಬಗ್ಗೆ ವಿವರವಿದೆ. ಪುರಗ್ರಾಮದ ಶಾಸನದಲ್ಲಿ ಮಕರ ಸಂಕ್ರಮಣ ಸಂದರ್ಭದಲ್ಲಿ ಶ್ರೀಪುರಸ್ಥಳದ ಸೋಮೇಶ್ವರದೇವರಿಗೆ ಮತ್ತು ರಾಜನಿಗೆ ಪುಂಣ್ಯವಾಗಬೇಕೆಂದು ಮತ್ತು ಕೃಷ್ಣನಾಯಕ ಮತ್ತು ಬಯ್ಯಪ್ಪನಾಯಕನಿಗೆ ಕೆಲವು ತೆರಿಗೆಗಳನ್ನು ನಿಗದಿಪಡಿಸಿ ತಂಮ್ಮಪ್ಪನಾಯಕನ ಮಗ ವೀರಪಣನಾಯಕನು ಭೂಮಿದಾನ ಮಾಡಿದ ದಾಖಲೆಯಿದೆ. ಕಳಸ ಶಾಸನದಲ್ಲಿ ಕಳಸನಾಥದೇವರಿಗೆ ಮಾಡಿದ ಧರ್ಮ ನಿತ್ಯ ರುದ್ರರತಿಗೆ ರುದ್ರಪೂಜೆ ಛತ್ರಕೆ ಕೊಟ್ಟ ಗ್ರಾಮ ಸೋಮವಾರಕೆ ಗ್ರಾಮದ ಬೆದ್ದಲು ಕಲ್ಲು ಗೂಡಲ ನಿಡವಲೆ 160 ಖ 110 ಒಟ್ಟು 270, 27 ವರಹಗಳನ್ನು ಸಾವಿರಗ್ರಾಮ, ಮೂರು ಪ್ರಭುಗಳ ಮುಂದಿಟ್ಟು ಕೆರವಸೆಯ ಚಂದಲದೇವಿಯರ ಕುವಾರರು ಅರಿರಾಯಕಂಡರದಾವಳಿ ವೀರಪಾಂಡ್ಯಪವೊಡೆಯರು ದಾನನೀಡಿದ ವಿವರವಿದೆ. ಇದೇ ಕಾಲದ ಮಲ್ಲಿಪಲ್ಲಿ ಶಾಸನದಲ್ಲಿ ಮರುಳನಹಳಿಯ ಬನದ ಚವುಂಡೇಶ್ವರಿ ದೇವತೆಯ ಅಮೃತಪಡಿಗೆ, ನಯಿವೆದ್ಯ ದೀಪಾರಾಧನೆಗೆ ಮುರಾರಿರಾವುತಆಯನವರು ಭೂಮಿ ದಾನ ನೀಡಿದ ದಾಖಲೆಯಿದೆ.

ಕ್ರಿ.ಶ. 1548ರ ಹಂಪಿ ಶಾಸನದಲ್ಲಿ ರಘುನಾಥದೇವರ ದೇವಾಲಯದ ಅಂಗರಂಗಭೋಗ ಪೂಜೆನಿರ್ವಹಿಸುವುದಕ್ಕೆ ತಿಂಗಳ ಗದ್ಯಾಣ 1/2, ನಿತ್ಯ 2, ಪ್ರಸಾದ ಪಡಿ 2, ಕೆಲವು ಭೂಮಿ ಹಿರಿಯ ಅಬ್ಬಿರಾಜನ ಮಗ ಒಬ್ಬನೇ ಮಗ ತಿಮ್ಮರಾಜನು, ಭೀಮರಾಜನ ಮಗ ಅಂಮಿನಮಲ್ಲರಾಜನಿಗೆ ಕೊಟ್ಟ ವಿವರವಿದೆ. ಇದೇ ಕಾಲದ ಪುಷ್ಪಗಿರಿ ಗ್ರಾಮದ ಶಾಸನದಲ್ಲಿ ಪುಷ್ಪಗಿರಿಯ ಮಲ್ಲಿಕಾರ್ಜುನ ದೇವರಿಗೆ ಧೂಪ, ದೀಪ, ನಯಿವೆದ್ಯ, ಅಂಗರಂಗವಯಿಭವ ಉಭ್ರಾಯವಾಗಿ ನಡೆಯಬೇಕು ಎಂದು ಜೋಡಿಯನೂರುವರಹಂನು ಬಸವನಾಯಕನು ದಾನನೀಡಿದ ದಾಖಲೆಯಿದೆ.

ಕ್ರಿ.ಶ. 1549ರ ಕರುವಂಗಿ ಶಾಸನದಲ್ಲಿ ರಾಮೇಶ್ವರಲಿಂಗಕ್ಕೆ ಅಂಗರಂಗ ವೈಭೋಗ ಅಮವಾಸೆ ಎಂಡಿನಚಹದಂಮಾನಾಹುಗೆ ಶಿವರಾತ್ರಿಯ ರತದುಸ್ತಹ ಕರಡೆ ಕಉಸಾಳ, ಡೋಳು, ಕಾಳೆ, ನಂದಾದೀವಿಗೆಗೆ ಮತ್ತು ರಾಜ್ಯಾಭ್ಯುದಯವಾಗಬೇಕೆಂದು ರಾಮಪಯ್ಯನ ಕಾರುಣ್ಯಕರ್ತರಾದ ಓರಿಯ ಬಸವಪ್ಪಾ, ಗವುಡಪ್ರಭುಗಳು ದಾನ ನೀಡಿದ ವಿವರವಿದೆ. ಇದೇ ಕಾಲದ ಹೊಸಪೇಟೆ ಶಾಸನದಲ್ಲಿ ಮಕರಸಂಕ್ರಾಂತಿ ಪುಣ್ಯ ಕಾಲದಲ್ಲಿ ಜಂಬುಕೇಶ್ವರ ಬೆಟ್ಟದ ಹನುಮಂತದೇವರ ನಯಿವೇದ್ಯಕ್ಕೆ ಅನಂತಶಯನ ದೇವರ ಅಮೃತಪಡಿಗೆ ಸಲುವ ಪಡಿ 4, ನಾಲ್ಕುಪಡಿ ಅಕ್ಕಿ ಪ್ರತಿದಿನ ದೇವರ ಸೇವೆಗೋಸ್ಕರ ದಾನನೀಡಿದ ವಿವರವಿದೆ.

ಕ್ರಿ.ಶ. 1550ರ ಕನಗವಿಪಲ್ಲೆ ಶಾಸನದಲ್ಲಿ ಆನೆಗೊಂದಿಯ ಲಿಂಗಧರನಾದ ಕಾಡವೀರ ಎಂಬುವನು ರಾಮರಾಜಯ್ಯನವರ ನಾಯಕತನಕ್ಕೆ ಸೇರಿದ ಕನಗೊಂಡನಹಳ್ಳಿಯ ವೀರೇಶ್ವರ ದೇವರ ಸೇವೆಗೆ ಆ ಗ್ರಾಮದಲ್ಲಿ

ಲಿಂಗಧಾರಿಗಳು ಲಿಂಗದೆರಿಯನ್ನು ಕೊಡುವಂತೆ ಬಿಟ್ಟುಕೊಟ್ಟಿದ್ದನ್ನು ಈ ಶಾಸನ ದಾಖಲಿಸಿದೆ. ಇದೇ ಕಾಲದ ಕೊಟನೂರು ಚೌಡೇಶ್ವರಿ ದೇವರ ದೇವಾಲಯದ ಸೇವಕರಿಗೆ ಬಿರಾಡ, ಹೊರಿಗೆ ತೆರಿಗೆಗಳನ್ನು ಮನ್ನಾ ಮಾಡಿ ಗುಂಡಮರಸಯನು ದಾನನೀಡಿದ ವಿವರವಿದೆ. ಇದೇ ಕಾಲದ ಬಾಗಳಿ ಶಾಸನದಲ್ಲಿ ಸ್ವಯಂಭುಕಲಿದೇವರ, ರಾತ್ರಿನೈವೇದ್ಯಗೋಸ್ಕರ ಭತ್ತ ಮತ್ತು ಚಿನ್ನವನ್ನು ಬಾಳಗುಳಿಯ ಪಟ್ಟಣಸ್ವಾಮಿಯಾದ ಲಕ್ಕಿಸೆಟ್ಟಿಯ ಹೆಂಡತಿ ಲಿಂಗಮ್ಮನು ತನ್ನ ಮಗ ಲಿಂಗಯ್ಯನಿಗೆ ಶುಭವಾಗಲೆಂದು ಸ್ತಾನಿಕ ದೇವರಾಸಿಜೀಯನ ಕೈಯಲ್ಲಿ ದಾನ ನೀಡಿದ್ದಾಳೆ.

ಕ್ರಿ.ಶ. 1551ರ ಒಡ್ಡಗೆರೆ ಶಾಸನದಲ್ಲಿ ಮೂಲಸ್ತಾನಲಿಂಗದ ಪೂಜೆ, ವೈಭೋಗ ಮತ್ತು ಸದಾಶಿವರಾಯನಿಗೆ ಪುಣ್ಯವಾಗಬೇಕೆಂದು ರಾಮರಾಜಯ್ಯನವರಿಗೆ ಒಡಗೆರೆಯೆಂಬ ಗ್ರಾಮವನ್ನು ದಾನ ನೀಡಿದ ದಾಖಲೆಯಿದೆ. ದಾರಪುರಂ ಶಾಸನದಲ್ಲಿ ಧಾರಪುರ ಈ ಗ್ರಾಮದಲ್ಲಿ ವರ್ಷದಲ್ಲಿ ಒಂದು ಸಲ ರಾಘವ ದೇವರ ಪಲ್ಲಕ್ಕಿಯ ಸೇವೆಗೋಸ್ಕರ ಕಂದಾಚಾರದ ತಿಂಮರಸಯ್ಯನವರ ಮಕ್ಕಳು ನಂಜಪಯ್ಯನವರೂ, ನಾಯಕರು, ಗೊಲ್ಲರು, ಬೆಸ್ತರು, ಕೆಲಸಗಾರರು, ಒಪ್ಪಿ ಕೆಲವು ನಿಗದಿಪಡಿಸಿದ ಹಣವನ್ನು ನೀಡಿದ ದಾಖಲೆಯಿದೆ. ಅನಂತಪುರ ಶಾಸನದಲ್ಲಿ ಮಲ್ಲಿಕಾರ್ಜುನನ ಸೇವೆಗೋಸ್ಕರ ಮಹಾಮಂಡಳೇಶ್ವರ ರಾಮರಾಜತಿರುಮಲರಾಜಯ್ಯನ ಮಗ ವಿಠಲರಾಜಯ್ಯ ಆಲುನಮಡುವಿನಲ್ಲಿ ಹಣ್ಣಿನ ತೋಟ ಕೊಂಡು ದಾನನೀಡಿದ ದಾಖಲೆಯಿದೆ.

ಕ್ರಿ.ಶ. 1552ರ ಕನಕಗಿರಿ ಶಾಸನದಲ್ಲಿ ತಿರುಮಲರಾಜಯ್ಯನ ಕಾರ್ಯಕರ್ತರಾದ ದಳವಾಯಿ ಚಂಡತ್ರಯ್ಯಂ ಎಂಬುವನು ಕನಕಗಿರಿ ದೇವರಿಗೆ ಒಂದು ಕೊಳಗದ ಭೂಮಿಯನ್ನು ಕ್ರಯವಾಗಿ ಕೊಂಡು ಭೂದಾನ ಮಾಡಿದಂತೆಯೂ ಇದರಲ್ಲಿ ದೇವರಕೊಳದಲ್ಲಿ ಸ್ನಾನ ಮಂಟಪದ ಹನುಮಂತ ಮತ್ತು ಆಳುವಾರ ದೇವರ ಪೂಜೆ ಮಾಡಬೇಕೆಂದು ವಿಧಿಸಿದಂತೆ ತಿಳಿಯುತ್ತದೆ. ಇದೇ ಕಾಲದ ಕಂಪಿಲಿ ಗ್ರಾಮದ ಕಂಪಿಲವಿರುಪಾಕ್ಷದೇವರ ಗುಡಿಯಲ್ಲಿವೊಂದು ಆಂಪಾದೇವಿಯ ಪ್ರತಿಷ್ಠೆಮಾಡಿ ಆಂಪಾದೇವಿಯ ಅಮೃತಪಡಿ ನೇವೇದ್ಯಕ್ಕೆ ಕರಿಬೇಡ ಗ್ರಾಮದಲ್ಲಿ ಸುಂಕದ ಬನದರಸರ ಮಕ್ಕಳು ಕರಿಬೇಡ ಸಂಕರಸರು ಭೂಮಿ ದಾನ ನೀಡಿದ ದಾಖಲೆಯಿದೆ. ಕಳಸದ ಶ್ರೀ ಕಳಸನಾಥದೇವರಿಗೆ ಸೋಮವಾರದ ಅಮೃತಪಡಿ ಇತರ ಎಲ್ಲಾ ಕಾರ್ಯ ಆಚರಣೆಗಳಿಗೆ ಕಳಸದ ಪಾರುಪತ್ಯವ ಮಾಡುವಾಗ ಸಾವಿರ ಗ್ರಾಮ ಮೂವರು ಪ್ರಭುಗಳ ಮುಂದೆ ಬೊಂಮರಾಜಅರಸರ ಮಕ್ಕಳೂ ಭಯಿರರ್ಸ್ಣಂಣಾಜಿಯು ದಾನನೀಡಿದ ವಿವರವಿದೆ. ಇಲ್ಲೂರು ಕೊತ್ತಪೇಟೆ ಶಾಸನದಲ್ಲಿ ವಿಲ್ಲೂರುನಲ್ಲಿ ಹೊಂದಿರುವ ಸಿದ್ಧಾಯಲಿಂಗ ದೇವಾಲಯಕ್ಕೆ ಶಿವರಾತ್ರಿ ಹಬ್ಬ ಆಚರಣೆಗೆ 24 ಕುಟುಂಬಗಳಿಗೆ ಮತ್ತು 56 ದೇಸಲವಾರುಗಳಿಗೆ ಪುಣ್ಯವಾಗಬೇಕೆಂದು ದೊಮ್ಮರಿಪನ್ನು (ಒಂದು ತೆರಿಗೆ) ದಾನ ನೀಡಿದ ದಾಖಲೆಯಿದೆ. ದೇವಾಪುರದ ಶಾಸನದಲ್ಲಿ ವಸಂತ ಮಲ್ಲಿಕರ್ಜುನ ದೇವರಿಗೆ ಎರಡು ಡೋಳು, ಎರಡು ನಾಗಸ್ವರ ನುಡಿಸುವುದಕ್ಕೋಸ್ಕರ ಪಂನುಲನುಂಕನಹಳ್ಳಿಯ ಗ್ರಾಮವನ್ನು ವೇಲೂರು ತಿಂಮಪ್ಪನಾಯಕನ ಮಗ ರಾಮಪ್ಪನಾಯಕರು ದಾನ ನೀಡಿದ ವಿವರವಿದೆ.

ಕ್ರಿ.ಶ. 1553ರ ಹಂಪಿ ಶಾಸನದಲ್ಲಿ ಅಳುವಾರಿದೇವ ದೇವರಿಗೆ ಪೂಜೆ ನಿರ್ವಹಣೆಗೋಸ್ಕರ 6 ಮುಡಿ ಭೂಮಿಯನ್ನು ದೇವರಿಗೆ ಕೊಟ್ಟು ಹಿರಿಯವಲಭಯ ಮತ್ತು ಚಿಕ್ಕವಲಭೆಯ ಮಕ್ಕಳಾದ ಅಯಿರಾಮನುಜನಿಗೆ ಒಪ್ಪಿಸಿದ ವಿವರವಿದೆ. ಕಗ್ಗಲು ಶಾಸನ ಸವೆದಿದೆ. ರೊದ್ದನಾಡಿನ ಪೆನುಗೊಂಡರಾಜ್ಯದ ಕೋಕಾಪುರದ ಸ್ಥಳದ ತಿಮ್ಮಸಮುದ್ರ ಎಂಬ ಪ್ರತಿನಾಮವಿರುವ ಕಗ್ಗಲಿನ ಮಲ್ಲಿಕಾರ್ಜುನ ದೇವರ ದೀಪಾರಾಧನೆಗೆ ದತ್ತಿಕೊಟ್ಟಿದ್ದನ್ನು

ದಾಖಲಿಸುತ್ತದೆ. ಇದೇ ಕಾಲದ ಕಂಚಿನ ಸಮುದ್ರ ಶಾಸನದಲ್ಲಿ ಕಂಚಿಸಮುದ್ರ ಪ್ರತಿನಾಮವಾದ ಪ್ರತಾಪದೇವರಾಯಪುರವೆಂಬ ಸೋಮೇಶ್ವರ ದೇವರಿಗೆ ಕಾರ್ತಿಕ ದೀಪಾರಾಧನೆಗೋಸ್ಕರ ವೀರಂಣವೊಡೆಯರ ಶಿಷ್ಯ (ಹೆಸರು ಸ್ಪಷ್ಟವಿಲ್ಲ) ಚಿನ್ನವನ್ನು ದಾನ ನೀಡಿದ ದಾಖಲೆಯಿದೆ. ಲಿಂಗಾಪುರ ಶಾಸನದಲ್ಲಿ ಚೆಂನರಾಯವೊಡೆಯರ ಮಗ ಲಿಂಗಣನಾಯಕರು ವಿರೂಪಾಕ್ಷಲಿಂಗ ಪ್ರತಿಷ್ಠೆ ಮಾಡಿಸಿ ಒಂದು ಛತ್ರ ಮತ್ತು ವಿರೂಪಾಕ್ಷಲಿಂಗ ಮತ್ತು ಬಸವೇಶ್ವರ ದೇವರಿಗೆ ಭೂಮಿದಾನ ನೀಡಿದ ವಿವರವಿದೆ. ಸಂತೇಬಾಚಹಳ್ಳಿ ಶಾಸನದಲ್ಲಿ ರಂಗಪಯನವರೂ ಬಾಚಿಹಳ್ಳಿಯ ವೀರಭದ್ರದೇವರ ಸ್ಥಾನಿಕ ಹೊಂನಹಲಗ ಲಿಂಗಂಣಗೆ ಭೂಮಿದಾನ ಕೊಟ್ಟ ದಾಖಲೆಯಿದೆ.

ಕ್ರಿ.ಶ. 1554ರ ಹಂಪಿ ಶಾಸನದಲ್ಲಿ ಆಲಮೇಲು ಮಂಗಮ್ಮ ದೇವಾಲಯ ದೀಪನಿರ್ವಹಣೆಗೋಸ್ಕರ ನಾಳಲಸ್ವಾಮಿ ಮದವೀರಣ್ಣ ತೆರಿಗೆಗಳಿಂದ ದಾನ ನೀಡಿದ್ದಾನೆ. ಹರದನಹಳ್ಳಿಯ ಶಾಸನದಲ್ಲಿ ಅಣಿಲೇಶ್ವರ ದೇವರಿಗೆ ಅಉಬಳದೇವ ಮಹಾಅರಸುಗಳು ದಾನ ನೀಡಿದ್ದಾರೆ. ರಾಗುಲಪಡು ಶಾಸನದಲ್ಲಿ ರಾಗನಹಾಳಿಗೆ ಪ್ರತಿನಾಮವಾದಂತ ಲಿಂಗಸಮುದ್ರ ಉರುಕೊಂಡೆ ಸೀಮೆಯೊಳಗಣ ಮುದನಾಡಿನಲ್ಲಿ ಹನುಮಂತದೇವರ ಕಾರ್ತಿಕದ ಪೂಜೆಗೆ ಮತ್ತು ರಾಯದುರ್ಗವೇಂಠಕ್ಕೆ ವಿದ್ಯಾಪ್ರವೀಣರಾದ ವಿದ್ವಜ್ಜನಾಧಾರರಾದ ಗೋವಿಂದಯ್ಯ, ಕೇಶವಯ್ಯ, ಮಂತ್ರಮಾರ್ಕ ಬಸವಯ್ಯ ದಕ್ಷಿಣಮೂರ್ತಿ, ಸುಂಕದವಲ್ಲಭಯ್ಯ ಪುಂಣ್ಯವಾಗಲಿ ಎಂದು ಧಾರೆಯನೆಱೆದು ಕೊಟ್ಟ ಶಾಸನವಿದು.

ಕ್ರಿ.ಶ. 1555ರ ಕಳಸ ಶಾಸನದಲ್ಲಿ ಕಳಸನಾಥದೇವರಿಗೆ ಪ್ರತಿದಿನದಲ್ಲಿ ಪಂಚಾಮೃತ ಅಭಿಶೇಕ ರಾತ್ರಲ್ಲು ರಂಗಪೂಜೆ ನಡೆವುದಕ್ಕೆ ಹೊರುನಾಡ ದೇವಣಹೆಗ್ಗಡೇರು ಸಾವಿರಗ್ರಾಮ ಮೂವರ ಪ್ರಭುಗಳ ಮುಂದಿಟ್ಟು ದಾನನೀಡಿದ ದಾಖಲೆಯಿದೆ. ಅವುಲಂಪಲ್ಲಿ ಶಾಸನದಲ್ಲಿ ಆನೆಗೊಂದಿಯ ಕೊಮರ ವೀರಯ್ಯನ ಮಗ ಕೊಮರವೀರ ಎಂಬುವನು ವಿರೂಪಾಕ್ಷಪುರದ ದೇವರಿಗೆ ಕಾರ್ತಿಕಪೂಜೆ ದೀಪಾರಾಧನೆಗೆ ಯಾರೋ ಮಹಂತರಿಗೆ ಭೂಮಿ ದತ್ತಿ ಕೊಟ್ಟಂತೆ ದಾಖಲಿಸಿದೆ. ತಿಮ್ಮಾಲಪುರ ಶಾಸನದಲ್ಲಿ ವಿಟಲದ ಸಮೀಪ ಅಳವರು ದೇವರ ಸೇವೆಗೋಸ್ಕರ ಅಳಿಯರಾಮರಾಯರಾಜಅರಸು ಗುತ್ತವಳಲ ಸೀಮೆ ಹಕಹಂದಿಗನೂರು ಗ್ರಾಮವನ್ನು ದಾನನೀಡಿದ ದಾಖಲೆಯಿದೆ.

ಕ್ರಿ.ಶ. 1556ರ ಗಣಿಗನೂರು ಶಾಸನದಲ್ಲಿ ಯಳವಂದೂರು ಶ್ರೀಗೌರೀಶ್ವರ ದೇವರ ಅಂಗರಂಗಭೋಗಕ್ಕೆ ಹದಿನಾರಸೀಮೆಯ ಪ್ರಭುದೇವರ ಗಂಡುಮಕ್ಕಳು ಚಾಮರಸಂಣನು ಗ್ರಾಮದಾನನೀಡಿದ ದಾಖಲೆಯಿದೆ. ಕಂಭದೂರ ಮಲ್ಲಿಕಾರ್ಜುನ ದೇವರಿಗೂ ಮತ್ತು ದೇವಾಲಯದ ಪಾರುಪತ್ಯಗಾರರಿಗೂ ತಂದೆ ತಂಮಸನಾಯಕರಿಗೆ ಪುಣ್ಯವಾಗಬೇಕೆಂದು ನಿರುಪಣನಾಯಕರು 50 ವರಹಗಳನ್ನು ಕೊಟ್ಟಿದ್ದನ್ನು ದಾಖಲಿಸುತ್ತದೆ.

ಕ್ರಿ.ಶ. 1559ರ ಪುಷ್ಪಗಿರಿ ಶಾಸನದಲ್ಲಿ ಜಾವಗಲ ಸೀಮೆಯೊಳಗಣ ಪುಷ್ಪಗಿರಿಯ ಮಲ್ಲಿಕಾರ್ಜುನ ದೇವರ ಅಂಗರಂಗ ವೈಭೋಗಕೋಸ್ಕರ ಹಳೇಬೀಡಗದ್ದೆಗಳನ್ನು ರಾಮಪ್ಪಯ್ಯನವರಿಗೆ ವಹಿಸಿದ ವಿವರವಿದೆ.

ಕ್ರಿ.ಶ. 1561ರ ಅರಕಟವೇಮುಲ ರಾಮೇಶ್ವರ ದೇವರಿಗೆ ವೀರಮುಷ್ಟಿಗಳಿಂದ ಲೇವಿ, ಪಡಿಭತ್ಯಪೈಡಿಪಾಕ ವೀರಮುಷ್ಟಿರಾಚಯ್ಯ ಮತ್ತು ಬೇರೆಯವರಿಗೆ ದಾನನೀಡಿದ ವಿವರವಿದೆ.

ಕ್ರಿ.ಶ. 1562ರ ಕೋಟೇಶ್ವರ ಶಾಸನದಲ್ಲಿ ಮಠ ಕಟ್ಟಿ ಉಮಾಮಹೇಶ್ವರ ದೇವರ ನೈವೇದ್ಯಕ್ಕೆ ಅಕ್ಕಿ ನಂದಾದೀವಿಗೆಗೆ ನಿತ್ಯಛತ್ರ ದಿನ 1ಕ್ಕೆ ಜನ 6ಕ್ಕೆ ಕೋಟೇಶ್ವರ ದೇವರ ಸೇವೆಗೋಸ್ಕರ ಬಸರೂರು ಗಣಪಸೆಟ್ಟಿಯ

ಮಗ ಚಟುಸೆಟ್ಟಿ ಭೂಮಿದಾನ ನೀಡಿದ ದಾಖಲೆಯಿದೆ. ಪುರ ಶಾಸನದಲ್ಲಿ ರಾಮೇಶ್ವರ ದೇವರ ಪ್ರತಿಷ್ಠಾಪಿಸಿ[ಬ]ಸವಪ್ಪನಾಯಕರ ಮಕ್ಕಳ [ತಿಂ]ಮ್ಮಪ್ಪನಾಯಕರ ತಮ್ಮ ವಿರುಪಾಕ್ಷನಾಯಕರು ದಾನನೀಡಿದ ವಿವರವಿದೆ. ಕುದುರೆಗುಂಡಿ ಶಾಸನದಲ್ಲಿ ವೀರಭದ್ರದೇವರ ಪೂಜೆ, ದೀಪ, ನೈವೇದ್ಯಕ್ಕೋಸ್ಕರ ಕಚಪನಾಯಕ ಅಯನವರ ಮಕ್ಕಳೂ ತಂಮಪನಾಯಕ ಅಯ್ಯನವರ ತಂಮಂದಿರು ದಾನ ನೀಡಿದ ವಿವರವಿದೆ.

ಕ್ರಿ.ಶ. 1563ರ ಯಲಪಿ ಕಗ್ಗಲ್ಲು ಶಾಸನದಲ್ಲಿ ಕೇಮಾನ ಬೆಳುಗಲ್ಲಿ ಸಿದ್ದೇಶ್ವರ ದೇವರ ಅಮೃತಪಡಿ ಅರ್ಚನಾವ್ರಿತ್ತಿಸೇವೆಗೋಸ್ಕರ ರಾಮರಾಜ ತಿರುಮಲರಾಜಯ್ಯದೇವ ಮಹಾಅರಸು ಭೂಮಿ ದಾನ ನೀಡಿದ ದಾಖಲೆಯಿದೆ. ಹಾಸನದ ಶ್ರೀ ವಿರೂಪಾಕ್ಷ ದೇವರಿಗೆ ಬಯ್ಯಪ್ಪನಾಯಕನ ಮಕ್ಕಳು ಕೃಷ್ಣಪ್ಪನಾಯಕನ ರಾಜ್ಯೋದಯ ಪುಣ್ಯವಾಗಬೇಕೆಂದು ಕಂದ ಚರಹ[ಕಾ]ಚಪ್ಪನಾಯಕನ ಮಕ್ಕಳು ತಂಮಪ್ಪನಾಯಕರು ತಂಮದಿರು ಬುಕ್ಕಣನಾಯಕರು ಉಂಬಳಿಯಾಗಿ ಸೆಟ್ಟಿಹಳ್ಳಿಯಲ್ಲಿ ಗದ್ದೆ, ಬೆದ್ದಲುಭೂಮಿ ಹಾಗೂ ಕೆಲವು ಗ್ರಾಮಗಳನ್ನು ಹಳದ ರಾಮೇಶ್ವರ ದೇವರ ಅಭಿಷೇಕ, ಅಮೃತಪಡಿಗೆ ಹುಳೇನಹಳ್ಳಿ ವಿಘ್ನೇಶ್ವರ ದೇವರಿಗೆ ಭೂಮಿ ದಾನನೀಡಿದ ದಾಖಲೆಯಿದೆ.

ಕ್ರಿ.ಶ. 1564ರ ಕುರುವಳ್ಳಿ ಶಾಸನದಲ್ಲಿ ತುಂಗಭದ್ರ ದಕ್ಷಿಣ ಭಾಗದಲ್ಲಿ ವೀಶ್ವೇಶ್ವರ ದೇವರ ಪ್ರತಿಷ್ಠಾಪಿಸಿ ಅಮೇಂದ್ರಪುರಿವೊಡೆಯರ ಶಿಷ್ಯರು ದೇವೇಂದ್ರಪುರೀವೊಡೆಯ ದೇವರಿಗೆ ಆರು ಗ್ರಾಮಗಳನ್ನು ಶಂಕರಭಟ್ಟನಿಗೆ ದಾನ ನೀಡಿದ ವಿವರವಿದೆ.

ಕ್ರಿ.ಶ. 16ನೇ ಶತಮಾನದಲ್ಲಿ ಸುತ್ತೂರು ಶಾಸನದಲ್ಲಿ ಸೋಮೇಶ್ವರ ದೇವರ ಅಮೃತಪಡಿಗೋಸ್ಕರ ರಾಮಪ್ಪಯನು ಭೂಮಿದಾನ ನೀಡಿದ್ದಾನೆ. ಇದೇ ಕಾಲದ ಬಸರೂರು ಶಾಸನದಲ್ಲಿ ಪಡುವಕೇರಿ ಮಹಾದೇವದೇವರ ಪೂಜೆಗೋಸ್ಕರ ಚೆಂಮಣ ಹೆಗ್ಗಡೆ ಅವನ ಹಿರಿಯ ಅಣ್ಣ ತಿಂಮಣಸೆಟರಟಿ 350 ವರಹಗಳನ್ನು ಸಾಲ ಪಡೆದು ದಾನನೀಡಿದ ದಾಖಲೆಯಿದೆ.

ವಿಜಯನಗರದ ಅರಸರು ವೈಯಕ್ತಿವಾಗಿ ಶೈವ ಧರ್ಮಕ್ಕೂ ವೈಷ್ಣವ ಧರ್ಮಕ್ಕೂ ಸೇರಿದವರಾಗಿದ್ದರು. ಅವರೆಲ್ಲರೂ ಪರಮ ಧರ್ಮಸಹಿಷ್ಣುಗಳಾಗಿದ್ದರು.

ಗ್ರಂಥಋಣ

1. *ಎ.ಆರ್.ಐ.ಇ.* ರಿಪೋರ್ಟುಗಳು
2. *ಎಸ್.ಐ.ಐ.* 9, ಭಾಗ–2. 15, 18, 20
3. *ಐ.ಎ.* ಸಂಖ್ಯೆ 10.
4. *ಎಪಿಗ್ರಾಫಿಯ ಕರ್ನಾಟಿಕ,* ಸಂಖ್ಯೆ 3, 4, 6, 7, 8, 9, 11, 12, 13

24. ಮಹಾಪ್ರಧಾನಿ ಬೈಚಯದಂಡನಾಯಕ ಮತ್ತು ಅವನ ವಂಶೀಯರು

ಶ್ರೀಮತಿ ಎಸ್. ಗಂಗಾಂಬಿಕೆ

ಬೈಚಯ ದಂಡನಾಯಕ ಮತ್ತು ಅವನ ವಂಶೀಯರು ಹೊಯ್ಸಳ ಮೂರನೆಯ ಬಲ್ಲಾಳನ ಕಾಲದಿಂದ (ಕ್ರಿ.ಶ. 1291–1343) ವಿಜಯನಗರದ ಪ್ರಖ್ಯಾತ ದೊರೆ ಕೃಷ್ಣದೇವರಾಯನ ಕಾಲದವರೆಗೂ (1509–29) ಸುಮಾರು ಮೂರು ಶತಮಾನಗಳ ಕಾಲ ಸಾಮ್ರಾಜ್ಯದ ಆಡಳಿತದ ವಿವಿಧ ನೆಲೆಗಳಲ್ಲಿ ನಿರ್ವಹಿಸಿದ ಪಾತ್ರವನ್ನು ಗುರುತಿಸುವುದು ಈ ಲೇಖನದ ಉದ್ದೇಶವಾಗಿದೆ. ಕರ್ನಾಟಕದ ಇತಿಹಾಸದಲ್ಲಿ ಈ ವಂಶೀಯರು ಗಣನೀಯ ಪಾತ್ರವನ್ನು ವಹಿಸಿರುವುದನ್ನು ವಿವಿಧ ಭಾಗಗಳಲ್ಲಿ ಚದುರಿಹೋಗಿರುವ ಶಾಸನಗಳು ಎತ್ತಿತೋರಿಸುವ ಸಂಗತಿಯನ್ನು ಇಲ್ಲಿ ಚರ್ಚಿಸಲಾಗಿದೆ.

ಮೊದಲನೇ ಬೈಚಯದಂಡನಾಯಕ

ಬೈಚಯದಂಡನಾಯಕನು ಹೊಯ್ಸಳ ಮೂರನೆಯ ಬಲ್ಲಾಳ ಹಾಗೂ ವಿಜಯನಗರದ ಸಂಗಮದೊರೆ ಒಂದನೆಯ ಬುಕ್ಕರಾಯನ ಕಾಲದಲ್ಲಿ ಸಮರ್ಥವಾಗಿ ಆಳ್ವಿಕೆ ನಡೆಸಿದ್ದನು. ಈತನ ಹೆಸರು ಶಾಸನಗಳಲ್ಲಿ ವೈಚಪ್ಪದಂಡನಾಯಕ, ವಯಿಚಯದಣ್ಣಾಯಕ, ಬೈಚಯದಣಾಯಕ, ಬೈಚೆಯದಂಡನಾಯಕ, ವೈಜಪ್ಪದಂಡನಾಯಕ, ಬಯಿಚಯ ದಂಡನಾಯಕ ಎಂದು ಉಲ್ಲೇಖಗೊಂಡಿದೆ.

ಬೈಚಯದಂಡನಾಯಕನ ಪ್ರಥಮ ಉಲ್ಲೇಖ ನಮಗೆ ಹೊಸಾಳದ ಕ್ರಿ.ಶ. 1333ರ ಶಾಸನದಲ್ಲಿ[1] ದೊರೆಯುತ್ತದೆ. ಈ ತ್ರುಟಿತ ಶಾಸನದನ್ವಯ ಪಟ್ಟದ ಪಿರಿಯರಸಿಯಾದ ಕಿಕ್ಕಾಯಿತಾಯಿಯ ಸಮ್ಮುಖದಲ್ಲಿ ಮಹಾಪ್ರಧಾನ ಬಯಿಚಯದಂಡನಾಯಕನು ಅಜ್ಜಣ್ಣ ಸಹಣಿ ಮತ್ತಿತರೊಡಗೂಡಿ ವೀರೇಶ್ವರ ದೇಗುಲಕ್ಕೆ ಕೆಲವು ಭೂದಾನಗಳನ್ನು ನೀಡಿದ್ದನು. ಇದೇ ಕಾಲಕ್ಕೆ ಸೇರಿದ ನೀಲವಾರದ ಮತ್ತೊಂದು ತ್ರುಟಿತ ಶಾಸನವು[2] ಅಲ್ಲಿನ ದುರ್ಗಾಭಗವತಿ ದೇಗುಲಕ್ಕೆ ಬೈಚಯದಂಡನಾಯಕನ ಅನುಮತಿಯ ಮೇರೆಗೆ ದಾನಗಳು ಸಂದಿರುವುದನ್ನು ತಿಳಿಸುತ್ತದೆ. ಹೊಸಾಳದ ಶಾಸನವೊಂದು[3] ತ್ರುಟಿತವಾಗಿರುವುದರಿಂದ ಬೈಚಯದಂಡನಾಯಕನ ಹೆಸರಷ್ಟೇ ತಿಳಿಯುತ್ತದೆ. ಕಾಲದ ಉಲ್ಲೇಖವಿರದ ಬೈಲೂರಿನ ಶಾಸನವು[4] ಮೂರನೆಯ ಬಲ್ಲಾಳನನ್ನು 'ಪಾಂಡ್ಯ ಚಕ್ರವರ್ತಿ' ಎಂದು ಕೀರ್ತಿಸುತ್ತಾ ಆತನ ಮಡದಿ ಕಿಕ್ಕಾಯಿತಾಯಿಯು ಬೈಲೂರನ್ನು ದಾನವಾಗಿ ನೀಡಿದುದನ್ನು ತಿಳಿಸುತ್ತದೆ. ಜೊತೆಗೆ ಮಹಾಪ್ರಧಾನ ಬೈಚಯದಂಡನಾಯಕನು ಅಲ್ಲಿ ಉಪಸ್ಥಿತನಾಗಿದುದನ್ನು ಉಲ್ಲೇಖಿಸುತ್ತದೆ.

ಅಂತೆಯೇ ಕ್ರಿ.ಶ. 1358ರ ಶಾಸನವು[5] (ತ್ರುಟಿತ) ಮಹಾಪ್ರಧಾನ ಪದವಿಯಲ್ಲಿ ಬೈಚಯದಂಡನಾಯಕನಿದ್ದುದನ್ನು ಮತ್ತು ಸೋಮೇಶ್ವರ ದೇಗುಲದ ಮುಂದಿನ ಜೈನ ಬಸದಿಗೆ ಸಂದ ದಾನವನ್ನು ಅಸ್ಪಷ್ಟವಾಗಿ ತಿಳಿಸುತ್ತದೆ.

ಕ್ರಿ.ಶ. 1359ರ ಸಖರಾಯಪಟ್ಟಣದ ಶಾಸನವು[6] ಬೈಚಯದಂಡನಾಯಕನು ತನ್ನ ಪರಿವಾರದವರೆಲ್ಲರನ್ನೂ ಕೂಡಿಕೊಂಡು ನಿಶಿಧಿಯಾದುದನ್ನು ದಾಖಲಿಸುತ್ತದೆ.

ಹೊಯ್ಸಳ ಸಾಮ್ರಾಟ ಮೂರನೆಯ ಬಲ್ಲಾಳನ ಪತ್ನಿ ಕಿಕ್ಕಾಯಿತಾಯಿಗೆ ಆಡಳಿತದಲ್ಲಿ ಬಲಗೈ ಭಂಟನಾಗಿದ್ದ ಬೈಚಯದಂಡನಾಯಕನು ಮುಂದೆ ವಿಜಯನಗರದ ಸಂಗಮ ದೊರೆ ಒಂದನೆಯ ಬುಕ್ಕರಾಯನ ಆಳ್ವಿಕೆಯ ಕಾಲದಲ್ಲಿ ತನ್ನ ಶೌರ್ಯ, ದಕ್ಷತೆ ಮತ್ತು ಆಡಳಿತಾತ್ಮಕ ನೈಪುಣ್ಯತೆಯ ಫಲವಾಗಿ ಮಂಗಳೂರು–ಬಾರಕೂರುಗಳ ಅಧಿಪನಾಗುತ್ತಾನೆ. ಈ ಅಂಶವನ್ನು ಮತ್ತೂ ಸೂಕ್ಷ್ಮವಾಗಿ ಪರಿಭಾವಿಸಿದರೆ, ಮೂರನೆಯ ಬಲ್ಲಾಳನ ಪಿರಿಯರಸಿ ಕಿಕ್ಕಯಿತಾಯಿಯು ಬಲ್ಲಾಳನ ಪರವಾಗಿಯೂ ಅವನ ಮರಣಾನಂತರ ಸ್ವತಂತ್ರವಾಗಿಯೂ ತುಳುನಾಡನ್ನು ಆಳುತ್ತಿದ್ದಳು. ಅವಳ ತರುವಾಯವು

ತುಳುನಾಡು ತನ್ನ ಸಮಸ್ತ ಸ್ವರೂಪವನ್ನು ಅರಿತಿದ್ದ ಬೈಚಯದಂಡನಾಯಕನ ವಶದಲ್ಲೇ ಉಳಿಯುತ್ತದೆ. ಮತ್ತೊಂದು ಸೂಕ್ಷ್ಮ ಲಕ್ಷ್ಯ ಸಂಗತಿಯೆಂದರೆ, ಈ ಬೈಚಯದಂಡನಾಯಕನು ಕುಮ್ಮಟದುರ್ಗದ ಬೈಚಯದಂಡನಾಯಕನಿಗಿಂತ ಭಿನ್ನನು. ಪ್ರಸ್ತುತ ಬೈಚಯ ದಂಡನಾಯಕನು ಜೈನಮತೀಯನಾಗಿದ್ದ ಸಂಗತಿ ನಮಗೆ ಶಾಸನಗಳಿಂದ ತಿಳಿದುಬರುತ್ತದೆ. ಈತನನ್ನು ಉಲ್ಲೇಖಿಸುವ ಮೊದಲ ಶಾಸನದ ಕಾಲ ಕ್ರಿ.ಶ. 1333. ಆದರೆ ತನ್ನ ಪರಿವಾರದೊಂದಿಗೆ ಸೇರಿಕೊಂಡು ನಿಷಧಿಯಾಗುವ ಕೊನೆಯ ಕಾಲ ಕ್ರಿ.ಶ. 1359. ಅಂದರೆ ಕಾಲು ಶತಮಾನಕ್ಕೂ ಹೆಚ್ಚು ಕಾಲ ಈತ ವಿಜಯನಗರದ ಆಡಳಿತ ಕಾಲದಲ್ಲಿ ಪ್ರಭಾವಶಾಲಿ ದಂಡನಾಯಕನಾಗಿ ಕಾರ್ಯನಿರ್ವಹಿಸಿದ ಸಂಗತಿ ಮುಖ್ಯವಾಗುತ್ತದೆ.

ಮೊದಲನೇ ಇರುಗಪ್ಪ ದಂಡನಾಯಕ

ಈತ ಮೊದಲನೆಯ ಬೈಚಯದಂಡನಾಯಕನ ಮಗ. ಇವನ ಹೆಸರು ಶಾಸನಗಳಲ್ಲಿ ಇರುಗಪ ಧರಣೀಶ, ಇರುಗಪ ದಂಡಾಧೀಶ, ಇರುಗಪ್ಪ ಮಂತ್ರಿ, ಯಿರುಗಪ್ಪ ಒಡೆಯರು, ಇರುಗ ದಂಡನಾಯಕ, ವಿರುಗಪ್ಪ ದಣಾಯಕ ಎಂದು ಮುಂತಾಗಿ ಉಲ್ಲೇಖಗೊಂಡಿದೆ.

ಗಂಗಾವತಿಯ ಕ್ರಿ.ಶ. 1342ರ ಶಾಸನವು[7] ಇವನ ಬಗ್ಗೆ ಮೊದಲ ಬಾರಿಗೆ ಮಾಹಿತಿ ನೀಡುತ್ತದೆ. ಅದರ ಪ್ರಕಾರ, ಇರುಗಪ್ಪನು ಆನೆಗೊಂದಿಯಲ್ಲಿ ಕಲ್ಲಿನಲ್ಲಿ ಬಸದಿಯನ್ನು ನಿರ್ಮಿಸುತ್ತಾನೆ. ಇದಕ್ಕೆ ಅವನ ತಂದೆ ಬೈಚಯದಂಡನಾಯಕನು ದಾನ ನೀಡುತ್ತಾನೆ. ಈ ಶಾಸನದಲ್ಲಿ ಇರುಗಪ್ಪನನ್ನು ಹೀಗೆ ಹೊಗಳಿದೆ:

> ಹರಿಹರ ಧರಣೀತ್ರಿ ಪ್ರಾಜ್ಯಾಸಾಮ್ರಾಜ್ಯಾ ಲಕ್ಷ್ಮೀಕುವಲಯ
> ಹಿಮಧಾಮಾಶೌರ್ಯಗಾಂಭಿರ್ಯ ಸಿಮಾ ಇರುಗಪ ಧರಣೀಶ.

ತಿರುಪ್ಪರುತ್ತಿಕುನ್ರು ಎಂಬ ಊರಿನ ಶಾಸನದನ್ವಯ[8] ಇರುಗಪ್ಪ ದಂಡನಾಯಕನು ಮಾವಂದೂರನ್ನು ಕಂಚಿಯ ಜೈನದೇಗುಲಕ್ಕೆ ಎರಡನೇ ಬುಕ್ಕರಾಯನಿಗೆ ಒಳಿತಾಗಲೆಂದು ಪ್ರಾರ್ಥಿಸಿ ದಾನ ನೀಡಿದನು.

ಹಿಂದೂಪುರದ ಚಿಲಮುತ್ತೂರಿನಲ್ಲಿ ಹೊಸದಾಗಿ ಕಲ್ಲುಮಂಚಿಗೆಯನ್ನು ಇರುಗಪ್ಪದಂಡನಾಯಕನು ಮಾಡಿಸಿದುದನ್ನು ಅದೇ ಊರಿನ ಶಾಸನ[9] ತಿಳಿಸುತ್ತದೆ. ಬೈಚಯದಂಡನಾಯಕನ ನಂತರ ಈತ ಮತ್ತೆ ಬಾರಕೂರು ರಾಜ್ಯದ ಅಧಿಕಾರಿಯಾಗಿ ಮುಂದುವರೆದಂತೆ ಕಂಡುಬರುತ್ತದೆ.

ಕ್ರಿ.ಶ. 1367ರ ವೇಳೆಗೆ ಇರುಗಪ್ಪ ದಂಡನಾಯಕನು ಬಾರಕೂರು ರಾಜ್ಯದ ಪ್ರಾಂತ್ಯಾಧಿಕಾರಿಯಾಗಿ ನಿಯುಕ್ತಿಗೊಳ್ಳುತ್ತಾನೆ. ಅಲ್ಲಿ ಮಣೆಗಾರಕೇರಿಯ ಬಸದಿಗೆ ದಾನ ನೀಡುತ್ತಾನೆ.[10] ಅವನ ಜೈನಧರ್ಮಪರ ಉನ್ನತ ಅಭಿಮಾನ ಹಲವೆಡೆ ಅನೇಕ ಸ್ವಧರ್ಮ ರಕ್ಷಣೆಯ ಮತ್ತು ಪ್ರಚುರತೆಯ ಕಾರ್ಯಕೈಗೊಳ್ಳುವಂತೆ ಮಾಡುತ್ತದೆ. ಹಂಪಿಯಲ್ಲಿಯೂ ಈತ ಕಂತುಜಿನಾಲಯವನ್ನು ಶಿಲೆಯಲ್ಲಿ ನಿರ್ಮಿಸಿದನು. ಇವನನ್ನು ಈ ಶಾಸನ[11] ಮನದುಂಬಿ ಹೊಗಳಿದೆ:

> ಆಸೀದಿರುಗ ದಂಡೇಶೋ ನಂದನೋ ಲೋಕನಂದನಃ
> ನ ಮೂರ್ತ್ತಾ ನಾಮೂರ್ತ್ತಾ ನಿಖಿಲಭುವನಾಭೋಗಿ
> ಕತಯಾ ಶರದ್ರಾಜದ್ರಾಕಾವಿಟ ನಿಟಲನೇತ್ರದ್ಯುತಿತತಯಾ ।
> ಪ್ರಭೂತಾ ಕೀರ್ತ್ತಿಸ್ಯಾ ಚಿರಮಿರಂಗದಂಡೇಶ ಕಥಯ
> ತ್ಯಾನೇಕಾಂತಾತ್ತಾತ್ಪರಮಿಹ ನ ಕಿಂಚಿನ್ಮತಮಿತಿ ॥
> ಸದ್ವಂಶ ಜೋಷಿ ಗುಣ ವಾನಪಿ ಮಾರ್ಗಣಾನಾಮಾಧಾರ
> ತಾಮಂಪಗ ತೋಪಿ ಚ ಯಸ್ಯ ಚಾಪಃ । ನಮ್ರಃ ಪರಾನ್ವಿನ
> ಮಯನ್ನಿರುಗಕ್ಷಿತೀಶಸ್ಯೋಚ್ಚೈರ್ಜ್ಜನಾಯ ಖಲು ಸಿಕ್ಷಯತೀವ ನೀತಿಂ ॥"

ಕಂಚಿಯ ಮತ್ತೊಂದು ಶಾಸನವು[12] ತಿರುಪ್ಪರುತ್ತಿಕುನ್ರು ಎಂಬ ಸ್ಥಳದಲ್ಲಿ (ಕಂಚಿಯ ಸಮೀಪ) ಮಂಟಪವನ್ನು ಪುಷ್ಪಸೇನ ಮುನಿಗಳ ಆಣತಿಯ ಮೇರೆಗೆ ನಿರ್ಮಿಸಿದರೆಂದು ತಿಳಿಸುತ್ತದೆ.

ನಿಲವಾರದ ಶಾಸನದನ್ವಯ, ಇರುಗಪ್ಪ ದಂಡನಾಯಕನ ಮನೆಯ ಅಧಿಕಾರಿಯಾಗಿದ್ದ ಬಯಿರಣ್ಣನು ದುರ್ಗಭಗವತಿ ದೇವಾಲಯವನ್ನು ಪುನರುದ್ಧಾರಗೊಳಿಸಿ ಅದಕ್ಕೆ ದಾನದತ್ತಿಗಳನ್ನು ನೀಡಿದನು. ಈ ಬಯಿರಣ್ಣನೇ ದುರ್ಗಭಗವತಿ ದೇವಾಲಯದ ವಿವಿಧ ಸೇವೆಗಳಿಗೆ, ಜೀರ್ಣೋದ್ಧಾರಕ್ಕೆ, ದೇಗುಲದ ಸೇವಕರಿಗೆ ದಾನ ನೀಡಿದುದನ್ನು ಇದೇ ಊರಿನ ಮತ್ತೊಂದು ಶಾಸನವು ತಿಳಿಸುತ್ತದೆ. ಇಲ್ಲಿಯೇ ದೊರೆತ ಇನ್ನೊಂದು ತ್ರುಟಿತ ಶಾಸನವು ಈ ಬಯಿರಣ್ಣನು ಇರುಗಪ್ಪ ದಂಡನಾಯಕರಿಗೆ ಒಳಿತಾಗಲೆಂದು ಮತ್ತೆ ದುರ್ಗಭಗವತಿ ದೇಗುಲಕ್ಕೆ ದಾನ ನೀಡಿರುವನು[13]

ಕ್ರಿ.ಶ. 1389ರ ವೇಳೆಗೆ ಇರುಗಪ್ಪ ದಂಡನಾಯಕನು ಬಾರಕೂರು ಮುಂತಾದ ತುಳುರಾಜ್ಯವನ್ನು ಧರ್ಮದಿಂದ ಪ್ರತಿಪಾಲಿಸುತ್ತಿದ್ದುದನ್ನು ಆ ಕಾಲದಲ್ಲಿ ಅಜ್ಜಸಾಹು ಎಂಬಾತ ಜಲಯಾತ್ರಿಯಾಗಿ (ಸಮುದ್ರಮಾರ್ಗವಾಗಿ) ಬಂದು ತುಳುರಾಜ್ಯದಲ್ಲಿ ಜಮೀನನ್ನು ಖರೀದಿಸಿ ಹುಂಚದ ಪಾರ್ಶ್ವನಾಥ ದೇವರಿಗೆ ದತ್ತಿ ನೀಡಿದ್ದಾನೆ.[14]

ಚಿನ್ನಕಾಟ್ಲದ (ಆಂಧ್ರಪ್ರದೇಶ) ಶಾಸನವು[15] ಇರುಗಪ್ಪನ ಸಮಕ್ಷಮದಲ್ಲಿ ಬ್ರಾಹ್ಮಣನೋರ್ವನು ಹದಗೆಟ್ಟಿದ್ದ ಕಾಲುವೆಯನ್ನು ಪುನರ್‌ನಿರ್ಮಿಸಿ ಕೃಷಿ ಚಟುವಟಿಕೆಗಳಿಗೆ ಪ್ರೋತ್ಸಾಹ ನೀಡಿದುದನ್ನು ತಿಳಿಸುತ್ತದೆ.

ಚಿತ್ತೂರಿನ ಶಾಸನವೊಂದು[16] ಬಹಳ ಮುಖ್ಯ ಸಂಗತಿಯನ್ನು ತಿಳಿಸುತ್ತದೆ. ತಿಪ್ಪಿಸೆಟ್ಟಿ ಮತ್ತು ತಿಮ್ಮಾಯಿ ಎಂಬ ಅಣ್ಣ ತಂಗಿಯರು ತಮ್ಮ ತಂದೆ-ತಾಯಿಗಳಿಗೆ ಪುಣ್ಯವಾಗಲಿ ಎಂದು ಉದ್ದಗಿರಿಯ ತಿರುವೇಂಗಳನಾಥನಿಗೆ ಕೆಲವು ಭೂದಾನಗಳನ್ನು ನೀಡಿದರು. ಈ ದಾನ ನೀಡಿದ ಕಾಲದಲ್ಲಿ ಇರುಗಪ್ಪ ದಂಡನಾಯಕನು ಪೆನುಗೊಂಡೆ ರಾಜ್ಯದ ಕೆಲ ಭಾಗಗಳಿಗೆ ಪ್ರಾಂತ್ಯಾಧಿಕಾರಿಯಾಗಿದ್ದನು. ಇದು ಇರುಗಪ್ಪ ದಂಡನಾಯಕನು ತನ್ನ ಜೀವಿತದಲ್ಲಿಯೇ ಪರಮೋಚ್ಚ ಸ್ಥಿತಿಗೇರಿದುದನ್ನು ತಿಳಿಸುತ್ತದೆ.

ಗುತ್ತಿಯ ತ್ರುಟಿತ ಶಾಸನದ[17] ಪ್ರಕಾರ ಇರುಗಪ್ಪ ದಂಡನಾಯಕನು ಪಾರ್ಶ್ವನಾಥ ಜಿನನಿಗೆ ಚೈತ್ಯಾಲಯವನ್ನು ನಿರ್ಮಿಸಿದ್ದನು.

ಕ್ರಿ.ಶ. 1342ರಿಂದ ಕ್ರಿ.ಶ. 1397 ಅಥವಾ 14ನೆಯ ಶತಮಾನದ ಅತ್ಯಂತ ಕೊನೆಯ ಭಾಗದವರೆಗಿನ ಕಾಲದ ಉಲ್ಲೇಖವಿರುವ ಶಾಸನಗಳು ಇರುಗಪ್ಪ ದಂಡನಾಯಕನು ಹೊಯ್ಸಳರ ಕಾಲದಲ್ಲಿ ದಂಡನಾಯಕ ಪದವಿಯಲ್ಲಿದ್ದವನು. ಮಹಾಪ್ರಧಾನನಾಗಿ, ಪ್ರಾಂತ್ಯಾಧಿಕಾರಿಯಾಗಿ ಸಂಗಮ ದೊರೆಗಳ ಕಾಲದಲ್ಲಿ ವಿಶೇಷ ಸ್ಥಾನವನ್ನು ಪಡೆದಿದ್ದನಲ್ಲದೆ ವಿಸ್ತಾರವಾದ ಹಲವು ಪ್ರದೇಶಗಳ ಒಡೆಯನಾಗಿಯೂ ಎಲ್ಲಿಯೂ ಯುದ್ಧಾದಿ ಹಿಂಸಾಕೃತ್ಯಗಳು ನಡೆಯದ ಹಾಗೆ ಶಾಂತಿ-ಸೌಹಾರ್ದತೆಗಳಿಂದ ರಾಜ್ಯಾಡಳಿತವನ್ನು ನಿರ್ವಹಿಸುತ್ತಿದ್ದನೆಂಬುದನ್ನು ತಿಳಿಸುತ್ತವೆ. ಇವನು ಒಬ್ಬ ಸಾಹಿತಿಯೂ ಆಗಿದ್ದು 'ನಾನಾರ್ಥರತ್ನಮಾಲ' ಎಂಬ ಕೃತಿಯನ್ನು ರಚಿಸಿರುವನು. ಇದರಲ್ಲಿ ಏಕಾಕ್ಷರ, ದ್ವ್ಯಕ್ಷರ, ತ್ರ್ಯಕ್ಷರ, ಚತುರಕ್ಷರ, ಸಂಕೀರ್ಣ, ಅವ್ಯಯ ಎಂಬ ಆರು ಖಂಡಗಳಿವೆ. ಈ ಕೃತಿಯು ಒಂದು ನಿಘಂಟಾಗಿದೆ.

ಮಲ್ಲಪ್ಪ ಒಡೆಯ

ಈತ ಮೊದಲನೆಯ ಇರುಗಪ್ಪ ಕಂಡನಾಯಕನ ಮಗ. ಈತನನ್ನು ಶಾಸನಗಳಲ್ಲಿ ಮಲ್ಲಯ್ಯ ದಂಡನಾಯಕ, ಮಲ್ಲಪ್ಪ ದಂಡನಾಯಕ, ಮಲ್ಲಪ್ಪ ಒಡೆಯ, ಮಲ್ಲಯ್ಯ ಒಡೆಯ ಎಂಬಿತ್ಯಾದಿಯಾಗಿ ಉಲ್ಲೇಖಿಸಲಾಗಿದೆ. ಈತನ ಪ್ರಥಮ ಉಲ್ಲೇಖ ಕೋಟೇಶ್ವರದ ಶಾಸನದಲ್ಲಿ[18] ಕಂಡುಬರುತ್ತದೆ. ಈ ತ್ರುಟಿತ ಶಾಸನವು ಮಲ್ಲಯ್ಯ ದಂಡನಾಯಕನು ನೀಡಿದ ದಾನವನ್ನು ತಿಳಿಸುತ್ತದೆ. ಬಾರಕೂರಿನ ಎರಡು ಶಾಸನಗಳು[19] ಮಹಾಪ್ರಧಾನನಾಗಿ ಮಲ್ಲಪ್ಪ ಒಡೆಯನು ಬಾರಕೂರು ರಾಜ್ಯವನ್ನು ಆಳುತ್ತಿದ್ದು ಸೆಟ್ಟಿವರ್ತಕರು ತೆಂಬುಲಕೆರೆಯ ಸೋಮನಾಥ ದೇವಾಲಯಕ್ಕೆ ಮತ್ತು ಛತ್ರಕ್ಕೆಂದು ದಾನ ನೀಡಿದುದನ್ನು ತಿಳಿಸುತ್ತವೆ.

ಬಾರಕೂರಿನ ಇನ್ನು ಕೆಲವು ಶಾಸನಗಳು[20] ತುಳು-ಹೈವೆ-ಕೊಂಕಣ ರಾಜ್ಯಗಳನ್ನು ಬಾರಕೂರನ್ನು ರಾಜಧಾನಿಯನ್ನಾಗಿಸಿ ಈತ ಆಳುತ್ತಿದ್ದುದನ್ನು ತಿಳಿಸುತ್ತವೆ. ಪರ್ಪಲೆಗುಡ್ಡೆಯ[21] ಶಾಸನವು ಈತ ಬಾರಕೂರು ರಾಜ್ಯವನ್ನು ಆಳುತ್ತಿದ್ದು, ಅವನ ಅಧೀನ ಅಧಿಕಾರಿ ನಾಗಪ್ಪ ಒಡೆಯನು ಕಾರ್ಕಳ ಮತ್ತು ಪದಕಲ್‌ಗಳ ನಖರರೊಡಗೂಡಿ ನೀಡಿದ ಭೂದಾನಗಳನ್ನು ತಿಳಿಸುತ್ತದೆ. ಪುಲಿವೆಂಕ್ಲದ ಶಾಸನವು[22] ಮಲ್ಲಪ್ಪ ಒಡೆಯನು ಪಾರ್ಣಪಲ್ಲೆಯಲ್ಲಿ ನಿರ್ಮಿಸಿದ್ದ ಕಾಲುವೆಯಲ್ಲಿ ನೀರು ಕಟ್ಟಿಕೊಂಡು ತೊಂದರೆಯುಂಟಾದಾಗ ಮಲ್ಲಪ್ಪ ಒಡೆಯನು ಅದನ್ನು ದುರಸ್ತಿಗೊಳಿಸಿದ ಸಂಗತಿಯನ್ನು ತಿಳಿಸುತ್ತದೆ.

ಮೊದಲನೆಯ ಬೈಚಯದಂಡನಾಯಕನು ಇಡೀ ತುಳುನಾಡನ್ನು ತನ್ನ ಕಣ್ಗಾವಲಿನಲ್ಲಿಟ್ಟುಕೊಂಡು ರಕ್ಷಿಸುತ್ತಿದ್ದನು. ಆದರೆ ಅವನ ನಂತರ ಬಂದ ಅವನ ಮಗ ಇರುಗಪ್ಪದಂಡನಾಯಕನು ಬಾರಕೂರು ಪ್ರಾಂತ್ಯಕ್ಕೆ ಮಾತ್ರ ಅಧಿಕಾರಿಯಾಗುತ್ತಾನೆ. ಇದೇ ಬಾರಕೂರು ಮುಂದೆ ಇರುಗಪ್ಪನ ಮಗ ಮಲ್ಲಪ್ಪ ಒಡೆಯನ ಪಾಲಾಗುತ್ತದೆ.

ಇಮ್ಮಡಿ ಬೈಚಯದಂಡನಾಯಕ

ಈತ ಮೊದಲನೆಯ ಇರುಗಪ್ಪದಂಡನಾಯಕನ ಮಗ. ಸಾಗರದ ಶಾಸನವು[23] ಈತ ಗೋವೆಯ ಪ್ರಾಂತಾಧಿಕಾರಿಯಾಗಿದ್ದು ಚಂದ್ರಗುತ್ತಿ ವೇಂಠೆಯಕ್ಕೆ ಸಲ್ಲುವ ಹೊರ್ರಹಡೆನಾಡ ಕಣ್ಣಪುರ ಗ್ರಾಮವನ್ನು 'ನಿಯತಶ್ರೋತ್ರವಾಗಿ', 'ಸರ್ವಮಾನ್ಯವಾಗಿ' ಬ್ರಾಹ್ಮಣರಿಗೆ ದಾನ ನೀಡಿದನು. ಇವನನ್ನು ಶಾಸನದಲ್ಲಿ ಭಾಸ್ಕರನೆಂದು ಕರೆಯಲಾಗಿದೆ.

ಕುಂದಪುರದ ಶಾಸನದನ್ವಯ[24] ಈತ ಬಾರಕೂರು ರಾಜ್ಯಕ್ಕೆ ರಾಜ್ಯಪಾಲನಾಗಿ ವರ್ಗಾವಣೆಗೊಳ್ಳುತ್ತಾನೆ. ಶ್ರೀ ನರಸಿಂಹಭಾರತಿಗಳಿಗೆ ಸಂದ ಭೂದಾನವನ್ನು ಈ ಶಾಸನ ತಿಳಿಸುತ್ತದೆ. ಮೂಡಬಿದಿರೆಯ ಶಾಸನವು[25] ಈತ ಮಂಗಳೂರು ರಾಜ್ಯವನ್ನು ಆಳುತ್ತಿದ್ದುದನ್ನು ಮತ್ತು ಐದು ಜನ ಬಲ್ಲಾಳರು, ಸೇನಬೋವ ಮೊದಲಾದ ಅಧಿಕಾರಿಗಳು ಖಂಡೋಗ್ರ ಪಾರ್ಶ್ವನಾಥ ಸ್ವಾಮಿಯ ಆರಾಧನೆಗೆಂದು ಕೆಲವು ಭೂದಾನಗಳನ್ನು ನೀಡಿದರು.

ಬೇಲೂರಿನ ಶಾಸನವು[26] ಬೈಚಯದಂಡನಾಯಕನು ಬೇಲೂರಿನ ಚನ್ನಕೇಶವಸ್ವಾಮಿಯ ಕೃತ್ತಿಕಾ ದೀಪೋತ್ಸವಕ್ಕೆ ದೀಪಸ್ತಂಭ ಹಾಗೂ ಡೋಲೋತ್ಸವಕ್ಕೆಂದು ಉಯ್ಯಾಲೆಯನ್ನು ಮಾಡಿಸಿದುದನ್ನು ತಿಳಿಸಿ ಅವನ ಪೂರ್ವಾನ್ವಯವನ್ನು, ಕೀರ್ತಿಯನ್ನು ಹೀಗೆ ಹೊಗಳಿದೆ:

ಶ್ರೀಮದ್ರಾಜಧಿರಾಜಂ ಹರಿಹರಧರಣೀಪಾಲಕಂ
ಪ್ರೀತಿಯನಿಸ್ಸೀಮಂ ಶ್ರೀ ಬೈಚದಂಡೇಶಂಗೆ ನಿಜ ಸಚಿವಂ
ಕೋವಿದಂ ಪುತ್ರಮಿತ್ರಸ್ತೋಮಮಂ ಬಾಪ್ಪೆಂಬಿನಂ ಸಜ್ಜನರು
ಪೊಗಳ್ವಿನಂ ಗಂಡಪೆಂಡಾರ ರಾಜ್ಯಪ್ರೇಮಂ ಕೈಸಾರ್ವಿನಂ
ಮುದ್ರಿಕೆಯನೊಲವಿನೀ ಪಟ್ಟಮಂ ಕಟ್ಟಿಕೊಟ್ಟಂ ॥

ಆ ಹರಿಹರನೃಪನನುಜಾತಂ ಮಹೀವಲ್ಲಭ ಬುಕ್ಕನೃಪನೊಳಂದತಿಶಯದಿಂ
ಬಹುರಾಜ್ಯಕಾರ್ಯಂ ಮಹಾವಿಭವದಿ ನಡೆ ಬೈಚದಂಡಾಧೀಶಂ.

ಈ ಪದ್ಯದಲ್ಲಿ ವರ್ಣಿತವಾಗಿರುವ ಬೈಚಪದಂಡಾಧೀಶನು ಈ ಶಾಸನೋಕ್ತ ಇಮ್ಮಡಿ ಬೈಚದಂಡನಾಯಕನ ತಾತ ಎಂಬುದು ಇಲ್ಲಿ ಸ್ಪಷ್ಟವಾಗಿದೆ.

ಕುಳೈನ ಶಾಸನದಂತೆ[27] ಬೈಚಯ ದಂಣಾಯಕನು ಚಿತ್ರಾಪುರದ ದುರ್ಗಾದೇವಿ ದೇಗುಲಕ್ಕೆ ಮತ್ತು ಅಲ್ಲಿಯ ಬ್ರಾಹ್ಮಣರಿಗೆ ಕೆಲವು ದಾನಗಳನ್ನು ನೀಡಿದನು.

ಸರಗೂರಿನ ಎರಡು ಶಾಸನಗಳು[28] ಬೈಚಯದಂಡನಾಥನಿಗೆ ತೆಪ್ಪದ ನಾಗಣ್ಣ ಒಡೆಯ ಎಂಬ ದಕ್ಷ ಅಧಿಕಾರಿಯಿದ್ದುದನ್ನು ತಿಳಿಸುತ್ತದೆ. ಈ ನಾಗಣ್ಣ ಒಡೆಯನು ಬೆಳಗುಳದ ಶ್ರೀ ಗೊಮ್ಮಟೇಶ್ವರನ ಅಂಗಭೋಗ, ರಂಗಭೋಗಗಳಿಗೆಂದು ತಮ್ಮ ಬಯನಾಡೊಳಗಣ ತೋಟಹಳ್ಳಿಯನ್ನು ದಾನಮಾಡಿದನು.

ಬನವಾಸಿಯ ಶಾಸನವು[29] ಬೈಚಯದಂಡನಾಯಕನು 1432–33ರ ವೇಳೆಗೆ ಗೋವೆ–ಗುತ್ತಿಯ ರಾಜ್ಯಕ್ಕೆ ರಾಜ್ಯಪಾಲನಾದುದನ್ನು ತಿಳಿಸುತ್ತದೆ. ಇವನ ಕೈಕೆಳಗೆ ಚಿಕ್ಕದೇವೊಡೆಯನ ಕುಮಾರ ಮಲ್ಲಣಯ್ಯನು ಬನವಾಸಿ ನಾಡನ್ನು ಆಳುತ್ತಿದ್ದಾಗ ಶ್ರೀ ಮಧುಕೇಶ್ವರ ಸ್ವಾಮಿಯ ಅಮೃತಪಡಿಗೆ ಸಲ್ಲಿಸಲಾಗಿದ್ದ ವಸ್ತುಗಳನ್ನು ಶತ್ರುಗಳು ಅಪಹರಿಸಿದಾಗ ಅಲ್ಲಿನ ರಾಯಣ್ಣ ನಾಯಕನು ಹೋರಾಡಿ ಮಡಿಯುತ್ತಾನೆ.

ಸಕಲೇಶಪುರದ ಶಾಸನದನ್ವಯ[30] ಬೈಚಯದಂಡನಾಯಕನು ಮೆಪಿನಾಡಿನ ಬೆಳಮೆ ಎಂಬ ಹಳ್ಳಿಯನ್ನು ಬೆಳಗುಳದ ಶ್ರೀ ಗುಂಮಟ ಸ್ವಾಮಿಗಳ ಅರ್ಚನಾವೃತ್ತಿಗೆಂದು ದಾನ ನೀಡಿದನು.

ಕ್ರಿ.ಶ. 1399ರಿಂದ 1433ರವರೆಗೆ ಇಮ್ಮಡಿ ಬೈಚನು ಕಾಲಕ್ರಮದಲ್ಲಿ ಗೋವೆ, ಬಾರಕೂರು, ಮಂಗಳೂರು, ಗುತ್ತಿ ರಾಜ್ಯಗಳನ್ನು ಆಳುತ್ತಾ ತನ್ನ ಆಳ್ವಿಕೆಯ ಪ್ರದೇಶದಲ್ಲಿ ಆಳರಸರ ಕೀರ್ತಿಗೆ ಧಕ್ಕೆಯಾಗದಂತೆ ಶಾಂತಿಯುತವಾಗಿ ಆಳುತ್ತಿದ್ದನು.

ಇಮ್ಮಡಿ ಇರುಗಪ್ಪ ದಂಡನಾಯಕ

ಈತ ಇರುಗಪ್ಪದಂಡನಾಯಕನ ಮತ್ತೋರ್ವ ಮಗ. ಸೊರಬದ ಶಾಸನವು[31] ಈತ ಎರಡನೇ ದೇವರಾಯನ ಪ್ರಧಾನಿಯಾಗಿ ಗುತ್ತಿ–ಗೋವೆಗಳನ್ನು ಆಳುತ್ತಿದ್ದುದಾಗಿ ತಿಳಿಸುತ್ತದೆ. ಈ ಶಾಸನದಲ್ಲಿ ಎಡೆನಾಡಿಗೆ ಮುಖ್ಯವಾದ ಕುಪ್ಪೆಯ ಹಳ್ಳಿ ಮಳಲಗದ್ದೆಯ ಬೊಂಮಗೌಡನು ತನ್ನ ಗುರು ನಾಗದೇವಯ್ಯಗಳ ಪರವಾಗಿ ಬನವಾಸಿಯನ್ನು ಮುತ್ತಿ ಹೋರಾಟದಲ್ಲಿ ಸಾಯುತ್ತಾನೆಂಬುದು ಉಕ್ತವಾಗಿದೆ.

ಸರ್ವಪ್ಪ ದಂಡನಾಯಕ

ಈತ ಮೊದಲನೆಯ ಬೈಚಯದಂಡನಾಯಕನ ಇನ್ನೋರ್ವ ಮಗ. ಉಡುಪಿಯ ಶಾಸನದ[32] ಪ್ರಕಾರ, ಸರ್ವಪ್ಪ ದಂಡನಾಯಕನು ಬಾರಕೂರು ರಾಜ್ಯದಲ್ಲಿನ ಮೂರುಕೇರಿಯ ಹಿರಿಯ ಬಸದಿಯ ಪಾರ್ಶ್ವನಾಥದೇವರಿಗೆ ನಿತ್ಯಾಭಿಷೇಕ, ಅರ್ಚನೆ, ಇತ್ಯಾದಿ ಸೇವೆಗಳಿಗೆಂದು ಭೂದಾನಗಳನ್ನು ನೀಡಿದನು. ಇದರ ಹೊರತಾಗಿ ಸರ್ವಪ್ಪ ದಂಡನಾಯಕನ ಬಗ್ಗೆ ಸದ್ಯಕ್ಕೆ ಹೆಚ್ಚಿನ ವಿಷಯ ತಿಳಿದುಬಂದಿಲ್ಲ.

ಗೋಪರಸ ಒಡೆಯ

ಈತ ಮೊದಲನೆಯ ಬೈಚಯದಂಡನಾಯಕನ ಮಗ. ಈತನ ಪ್ರಥಮ ಉಲ್ಲೇಖ ನಮಗೆ ಕ್ರಿ.ಶ. 15–12–1353ರ ಶಾಸನದಲ್ಲಿ[33] ದೊರೆಯುತ್ತದೆ. ಈತ ಬಾರಕೂರು ರಾಜ್ಯವನ್ನು ಆಳುತ್ತಿದ್ದು ಭೂಮಿ ಮತ್ತು ಸುವರ್ಣವನ್ನು ದೇಗುಲವೊಂದಕ್ಕೆ ದಾನ ನೀಡಿದುದನ್ನು ಈ ತ್ರುಟಿತ ಶಾಸನವು ತಿಳಿಸುತ್ತದೆ.

ಈತನು ಮಹಾಪ್ರಧಾನ ಪದವಿಯನ್ನು ಹೊಂದಿದ್ದನು. ಈ ಪದವಿಯಲ್ಲಿದ್ದುಕೊಂಡು ಬಾರಕೂರು ರಾಜ್ಯವನ್ನು ಆಳುತ್ತಿದ್ದುದನ್ನು ಉಡುಪಿಯ ಶಾಸನವು[34] ತಿಳಿಸುತ್ತದೆ. ಉಡುಪಿಯ ಮತ್ತೊಂದು ಶಾಸನವು[35] ಸಹ ಇದೇ ವಿಷಯವನ್ನು ತಿಳಿಸಿ, ಅಚವಾಡಿ ದೇಗುಲಕ್ಕೆ ಸಂದ ದಾನವನ್ನು ಉಲ್ಲೇಖಿಸುತ್ತದೆ. ಕಡೂರಿನ ಶಾಸನವು[36] ಸಹ ಈತ ಮಹಾಪ್ರಧಾನನಾಗಿ ಬಾರಕೂರು ರಾಜ್ಯವನ್ನು ಆಳುತ್ತಿದ್ದುದನ್ನು ತಿಳಿಸುತ್ತದೆ. ಕೃಷ್ಣ ಮಂಡಚನು ಬ್ರಾಹ್ಮಣರ ಆಹಾರಕ್ಕೆಂದು ಭೂದಾನ ನೀಡಿದ್ದನು. ಬಾರಕೂರಿನ ಮೂರು ಶಾಸನಗಳು ಅನುಕ್ರಮವಾಗಿ ಆತ ಬಾರಕೂರನ್ನು ಮಹಾಪ್ರಧಾನ ಪದವಿಯಲ್ಲಿ ಆಳುತ್ತಿದ್ದುದನ್ನು ತಿಳಿಸುತ್ತದೆ. ಕವುಂದ ಮಠ ಮತ್ತು ಕೆಲ್ಲಂಗೆರೆಯ ಮಠಗಳಲ್ಲಿ ವಿದ್ಯಾಭ್ಯಾಸದ ಬೆಳವಣಿಗೆಗೆ ಸಂದ ದಾನಗಳನ್ನು ಈ

ಶಾಸನಗಳು ಅರುಹುತ್ತವೆ. ಫಲಿಮಾರುವಿನ ಶಾಸನವು[38] ಗೋಪರಸ ಒಡೆಯನನ್ನು ಉಲ್ಲೇಖಿಸುತ್ತದೆಯಷ್ಟೆ. ಇವನ ಅಧಿಕಾರಿಯಾದ ಪಾರಿಯಪ್ಪರಾಜನು ಇವನ ಹೆಸರಿನಲ್ಲಿ ಕಲವೂರಿನಲ್ಲಿ ಗೋಪನಸಮುದ್ರವನ್ನು ನಿರ್ಮಿಸಿ ಕೃಷಿ ಚಟುವಟಿಕೆಗೆ ನೆರವು ನೀಡಿದುದನ್ನು ತಿಳಿಸುತ್ತದೆ.[39]

ಗೋಪರಸ ಒಡೆಯನು ರಾಜ್ಯಾಡಳಿತದ ಜೊತೆಗೆ ಕೃಷಿ, ವಿದ್ಯಾಭ್ಯಾಸ ಮತ್ತು ಧಾರ್ಮಿಕ ಚಟುವಟಿಕೆಗಳಿಗೆ ಮಹತ್ತ್ವ ನೀಡುತ್ತಾ ಬಾರಕೂರಿನ ಸರ್ವತೋಮುಖ ಬೆಳವಣಿಗೆಗೆ ಪ್ರಾಶಸ್ತ್ಯ ನೀಡಿದ್ದನು.

ರಾಯಣ್ಣ ಒಡೆಯ

ಈತ ಮೊದಲನೆಯ ಬೈಚಯದಂಡನಾಯಕನ ಇನ್ನೋರ್ವ ಮಗ. ಕ್ರಿ.ಶ. 1424ರ ಕುಂತವಲ್ಲಿಯ ಶಾಸನದಲ್ಲಿ[40] ಇವನ ಮೊದಲ ಉಲ್ಲೇಖ ದೊರೆಯುತ್ತದೆ. ಈ ತ್ರುಟಿತ ಶಾಸನವು ರಾಯಣ್ಣ ಒಡೆಯನು ರಾಜ್ಯಪಾಲನಾಗಿ ಬಾರಕೂರನ್ನು ಆಳುತ್ತಿದ್ದುದನ್ನು ಹಾಗೂ ರಾಮರಸ ಎಂಬಾತನಿಗೆ ಕೂಟಹಳ್ಳಿಯನ್ನು ಮಾದರಸನು ಮಾರಿದ ವಿಚಾರವನ್ನು ತಿಳಿಸುತ್ತದೆ.

ಕ್ರಿ.ಶ. 1425ರ ಶಾಸನವು[41] ರಾಯಪ್ಪ ಒಡೆಯನು ಆರಗದ ರಾಜ್ಯವನ್ನು ಆಳುತ್ತಿದ್ದಾಗ ಆರಗ ರಾಜ್ಯದಲ್ಲಿದ್ದ ನಿಡುವಲನಾಡೊಳಗಿನ ಹಲವರು ಸ್ಥಾನಿಕರಾದ ದೇವಣಯ್ಯನ ಮಗ ಬೋವಣಯ್ಯನಿಗೆ ಬೊಮ್ಮಿಯಕ್ಕ ಹೆಗ್ಗಡಿತಿಯರ ಮಗನು ತನ್ನ ಪ್ರಸ್ತದ ನಿಮಿತ್ತವಾಗಿ ದೇವರ ಪೂಜೆಗೆಂದು ಅನೇಕ ಕಡೆ ಗದ್ದೆಗಳನ್ನು ದಾನನೀಡಿದನು. ಇದೇ ವೇಳೆಯಲ್ಲಿ ಸಿರಿಗಿರಿನಾಥನು ಆರಗದ ರಾಜ್ಯವನ್ನಾಳುತ್ತಿದ್ದುದನ್ನು ಗಮನಿಸಿದರೆ ಬಹುಶಃ ಕೆಲಕಾಲ ತಂದೆ–ಮಕ್ಕಳಿಬ್ಬರೂ ಆರಗವನ್ನು ಆಳಿದಂತೆ ತೋರುತ್ತದೆ.

ರಾಯಣ್ಣ ಒಡೆಯನು ಸಾರ್ವಜನಿಕ ಕಾರ್ಯಗಳಿಗೂ ಗಮನನೀಡಿದ್ದನು. ಇದನ್ನು ಕೂಡ್ಲಿಯ ಶಾಸನವು[42] ಈ ರೀತಿ ತಿಳಿಸುತ್ತದೆ: ಮಹಾಪ್ರಧಾನ ರಾಯಣ್ಣ ಒಡೆಯನು ಆರಗರಾಜ್ಯದ ಆನವೇರಿ ನಾಡಿನ ಹನಗವಾಡಿ ಭಾಗದ ಹೊಳೆಯಹೊನ್ನೂರು ನಾಡನ್ನು ಆಳುತ್ತಿರುತ್ತಾನೆ. ಇವನು ತುಂಗಭದ್ರ ಸಂಗಮವಾದ ಕೂಡಲಿಯಲ್ಲಿ ಛತ್ರವನ್ನು ನಿರ್ಮಿಸುತ್ತಾನೆ. ಈ ಕಾರ್ಯಕ್ಕೆ ಹೊಳೆಯಹೊನ್ನೂರಿನ ಸಮಸ್ತರು ಕೂಡಿಕೊಂಡು ದಣ್ಣಾಯಕಪುರದ ಉತ್ಪತ್ತಿಯನ್ನು ದಾನವಾಗಿ ನೀಡಿದ್ದಾರೆ. ಇದರಲ್ಲಿ ಬರುವ ಹೊನ್ನುಗಳನ್ನು ದೇವಾಲಯಗಳಿಗೆ ಛತ್ರಕ್ಕೆ ಮತ್ತು ಸೇವೆಯನ್ನು ನಡೆಸುವವರಿಗೆ ಇಂತಿಷ್ಟೆಂದು ದಾನವಾಗಿ ಬಿಡಲಾಗಿದೆ.

ತನ್ನ ಅಧಿರಾಜ ಇಮ್ಮಡಿ ದೇವರಾಯನ ಮೇಲೆ ರಾಯಣ್ಣ ಒಡೆಯನಿಗೆ ರಾಜಭಕ್ತಿಯಿತ್ತು. ಕ್ರಿ.ಶ. 1448ರ ಬಾರಕೂರು ಶಾಸನದನ್ವಯ[43] ರಾಯಣ್ಣ ಒಡೆಯನು ಬಾರಕೂರು ರಾಜ್ಯವನ್ನು ಆಳುತ್ತಿರುತ್ತಾರೆ. ಈ ಅವಧಿಯಲ್ಲಿ ಇಮ್ಮಡಿ ದೇವರಾಯನಿಗೆ ಕಂಟಕ ಒದಗುತ್ತದೆ. ಈ ಕಂಟಕವು ಪರಿಹಾರವಾಗಿ ಆಯುಷ್ಯ ವೃದ್ಧಿಯಾಗಬೇಕೆಂದು ಚೋಳಿಯ ಕಲ್ಲಂಗೆರೆಯ ವಿನಾಯಕ ದೇವರಿಗೆ ಕೈಪಾಡಿಯ 74 ಒಕ್ಕಲಿಗ ಉತ್ಪತ್ತಿ 68 ಕಾಟಿ ಗದ್ಯಾಣವನ್ನು ದಾನ ನೀಡುವನು.

ಇದೇ ಕಾಲದ ಆಸುಪಾಸಿನಲ್ಲಿ ತುಳುನಾಡಿನ ಆಡಳಿತದಲ್ಲಿ ಮತ್ತೋರ್ವ ರಾಯಣ್ಣ ಒಡೆಯ ಮತ್ತು ಅವನ ಮೊಮ್ಮಗ ವಿಠಣ ಒಡೆಯನ ಉಲ್ಲೇಖಗಳು ಬರುತ್ತವೆ. ಆದರೆ ಈ ರಾಯಣ್ಣ ಒಡೆಯ ಬೈಚಯದಂಡನಾಯಕನ ಮಗ ರಾಯಣ್ಣ ಒಡೆಯನಿಗಿಂತ ಭಿನ್ನನು.

ಸಿರಿಗಿರಿನಾಥ ಒಡೆಯ

ಈತ ರಾಯಣ್ಣದಂಡನಾಯಕನ ಮಗ. ಇವನನ್ನು ಶಾಸನಗಳಲ್ಲಿ ಸಿರಿಗಿರಿನಾಥದೇವವೊಡೆಯ, ಶ್ರೀಗಿರೀಶ್ವರ, ಶ್ರೀಗಿರಿನಾಥ, ಶ್ರೀಗಿರಿನಾಥ ಒಡೆಯ, ಶ್ರೀ ಗಿರಿನಾಥದೇವ, ಸಿರಿಗಿರಿನಾಥ ಒಡೆಯ, ಸಿರಿಗಿರಿನಾಥ, ಸಿರಿಗಿರಿನಾಥ ಹೆಗ್ಗಡೆ

ಎಂಬುದಾಗಿ ಕರೆಯಲಾಗಿದೆ. 1408ರ ಶಾಸನವು[44] ಇವನನ್ನು ಮೊದಲು ಉಲ್ಲೇಖಿಸುತ್ತಾ ಸಿರಿಗಿರಿನಾಥದೇವವೊಡೆಯರು ಬಾರಕೂರು ರಾಜ್ಯವನ್ನು ಸಿಂಗಣದಂಡನಾಯಕನ ಅಧೀನದಲ್ಲಿ ಆಳುತ್ತಿದ್ದನು ಎಂಬುದನ್ನು ತಿಳಿಸುತ್ತದೆ.

ಆತ ಆರಗದ ರಾಜ್ಯವನ್ನು ಪಾಲಿಸುತ್ತಿದ್ದಾಗ ಸಾಂತಳಿಗೆಯ ತೀರ್ಥಮುತ್ತೂರಿನ ಶ್ರೀಶಂಕರ ಭಾರತಿ ಶ್ರೀಪಾದಂಗಳಿಗೆ ಸಾಂತಳಿಗೆಯ ನಾಡಿನ ಹಿರಿಯ ಹೊಳಲೂರು ಮಹಾಜನರು ಹಂಗರಬಯಲಿನ ಸ್ವಲ್ಪ ಭೂಮಿಯನ್ನು ದಾನ ಮಾಡುತ್ತಾರೆ.[45]

ಸಿರಿಗಿರಿನಾಥನು ಅಗ್ರಹಾರವಾದ ಬುಕ್ಕರಾಜಪುರದಲ್ಲಿನ ಮಠಕ್ಕೆ ಸೇರಿದ ಧರ್ಮಛತ್ರದ ನಿರ್ವಹಣೆಗೆ ಮತ್ತು ಮಠದಲ್ಲಿನ ಬ್ರಾಹ್ಮಣರ ಆಹಾರಕ್ಕೆಂದು ಭತ್ತದ ಗದ್ದೆಯನ್ನು ಹಾಗೂ ಸ್ವಲ್ಪ ಹಣವನ್ನು ದಾನ ನೀಡಿರುವುದನ್ನು ತೀರ್ಥಹಳ್ಳಿಯ ಶಾಸನ ತಿಳಿಸುತ್ತದೆ.[46] ಇದೇ ಸ್ಥಳದ ಮತ್ತೊಂದು ಶಾಸನವು ಸಿರಿಗಿರಿನಾಥನು ಅಖಂಡಬ್ರಹ್ಮೇಶ್ವರ ದೇವರ ಸೇವೆಗಳಿಗೆಂದು 55 ವರಹಗಳನ್ನು ದಾನವಿತ್ತುದನ್ನು ತಿಳಿಸುತ್ತದೆ.[47]

ಈತ ಆರಗವನ್ನು ಆಳುತ್ತಿರುವಾಗ ಆರಗದ ವೇಂಠೆಯ ಸಾಂತಳಿಗೆಯ ನಾಡಿನ ಸಿರಿಯಂಮ ಹೆಗ್ಗಡೆ, ಬೊಂಮಣ ಹೆಗ್ಗಡೆ, ಒಡಲ ನಾಗಪ್ಪ ಹೆಗ್ಗಡೆ, ಅಳಿಯಬೊಪ, ಆದಿನಾಗಣ ಹೆಗ್ಗಡೆ, ಮೊದಲಾದವರು ಕೂಡಿಕೊಂಡು ಹೆಬ್ಬರಡಿಯ ಹರಿಯಕ್ಕ ನಾಯಿಕಿತಿಗೆ ಅರಂವಳ್ಳಿಯ ಭೂಮಿಯನ್ನು ಕ್ರಯದಾನವಾಗಿ ನೀಡುವರು. ತಾನು ಕ್ರಯವಾಗಿ ಕೊಂಡ ಭೂಮಿಯನ್ನು ಆಕೆ ಅಮರೇಶ್ವರತೀರ್ಥ ಶ್ರೀಪಾದಂಗಳಿಗೆ ಮಠದ ಹತ್ತಿರ ಛತ್ರವನ್ನು ಕಟ್ಟಿಸಲು, ಯತಿಗಳಿಗಾಗಿ, ಪರದೇಶಿ ಬ್ರಾಹ್ಮಣರಿಗಾಗಿ, ಅಡುಗೆಯವರಿಗಾಗಿ ಧಾರೆಯೆರೆಯುತ್ತಾಳೆ.[48]

ಸಿರಿಗಿರಿನಾಥನ ಸೇವೆಯು ತಿರುಮಲ ತಿರುಪತಿಗೂ ಸಂದಿದೆ. ಆತ ಚಿನ್ನ ಮತ್ತು ರತ್ನಗಳಿಂದ ಕೂಡಿದ ಪಟ್ಟವನ್ನು ಶ್ರೀವೆಂಕಟೇಶ್ವರದೇವರಿಗೆ ಮಾಡಿಸಿದುದಾಗಿ ತಿರುಪತಿಯ ಶಾಸನವು ತಿಳಿಸುತ್ತದೆ.[49]

ತೀರ್ಥಹಳ್ಳಿಯ ಮತ್ತೊಂದು ಶಾಸನವು[50] ಸಿರಿಗಿರಿನಾಥನು ಆರಗವನ್ನು ಪಾಲಿಸುತ್ತಿದ್ದಾಗ ನಡೆದ ಘಟನೆಯೊಂದನ್ನು ತಿಳಿಸುತ್ತದೆ. ಸಾಂತಳಿಗೆ ನಾಡಿನ ಕೊಳವಳಿಗೆ ಗ್ರಾಮಕ್ಕೆ ಸೈನ್ಯವು ಬಂದು ಕಾದಿದಾಗ ಬೊಮ್ಮರಸ ಹೆಗ್ಗಡೆಯ ಪುಟ್ಟಹೆಗ್ಗಡೆಯು ಸೈನ್ಯವನ್ನು ಎದುರಿಸಿ ರಣರಂಗದಲ್ಲಿ ಕುಮಾರ ರಾಮನಾಥನಂತೆ ಪ್ರತಾಪವನ್ನು ಮೆರೆದು ಬಾಣಗಳ ಹೊಡೆತಕ್ಕೆ ಸಿಲುಕಿ ವೀರಮರಣವನ್ನಪ್ಪುತ್ತಾನೆ.

ಮೇಗರವಳ್ಳಿತಯ ಶಾಸನದ[51] ಪ್ರಕಾರ ಸಿರಿಗಿರಿನಾಥ ಒಡೆಯರ ಆಳ್ವಿಕೆಯ ಕಾಲದಲ್ಲಿ ಮೇಗರವಳ್ಳಿ ಗ್ರಾಮದ ಹೆಗ್ಗಡೆಯ ಅಳಿಯ ಬೈರಣ ಹೆಗ್ಗಡೆ, ಸುಂಕ ಹೆಗ್ಗಡೆ, ನಾಗಣ್ಣ ಹೆಗ್ಗಡೆ ಮುಂತಾದವರು ಕೂಡಿ ಸರ್ವಾನುಮತದಿಂದ ಶುದ್ಧ ಶೈವಾಗಮಿ ದೇವಣ ಆರಾಧ್ಯರಿಗೆ ಭೂದಾನ ನೀಡಿದರು.

ಕುರುವಳ್ಳಿಯ ಶಾಸನದ[52] ಪ್ರಕಾರ ಸಿರಿಗಿರಿನಾಥನು ಆರಗದ ರಾಜ್ಯವನ್ನು ಆಳುವಾಗ ನಿಡುವಲನಾಡಿನ ಹಲವು ಆಸ್ಥಾನಿಕ ದೇವಣ ಅಯ್ಯಗಳ ಮಕ್ಕಳು ಬೋವಣಯ್ಯಗಳಿಗೆ ಬೊಮ್ಮಿಯಕ್ಕ ಹೆಗ್ಗಡಿತಿಯರ ಮಕ್ಕಳು ತಮ್ಮ ತಾಯಿಗೆ ಪ್ರಸ್ತದ ದಿವಸದ ಕೊಡುಗೆಯಾಗಿ ಬಂದಿದ್ದ ಭೂಮಿಯನ್ನು ದಾನ ಮಾಡಿದರು. ಜೊತೆಗೆ ಮುತ್ತಪ್ಪರಸ ಹೆಗ್ಗಡೆಯು (ಬೊಂಮಿಯಕ್ಕ ಹೆಗ್ಗಡಿತಿಯ ಮಗ) ಧರ್ಮಛತ್ರದ ಕೆಲಸಗಳಿಗೆ ಶ್ರೀಗಂಗಾಧರಪುರಿ ಶ್ರೀಪಾದಂಗಳಿಗೆ ದಾನ ನೀಡಿರುವರು.

ಭಂಡಿಗಡೆ,[53] ಹೊಕ್ಕಲಬಯಲು,[54], ತೀರ್ಥಹಳ್ಳಿಯ[55] 15ನೆಯ ಶತಮಾನದ ಮಧ್ಯಭಾಗಕ್ಕೆ ಸೇರಿದ ಶಾಸನಗಳು (ತ್ರುಟಿತ) ದಾನದ ವಿವರಗಳನ್ನು ಅಸ್ಪಷ್ಟವಾಗಿ ತಿಳಿಸಿದರೂ ಸಿರಿಗಿರಿನಾಥನು ಕ್ರಿ.ಶ. 1448ರ ವರೆಗೂ ಆರಗ ರಾಜ್ಯವನ್ನು ಆಳುತ್ತಿದ್ದುದನ್ನು ಮಾತ್ರ ಸ್ಪಷ್ಟವಾಗಿ ತಿಳಿಸುತ್ತದೆ.

ಸಿರಿಗಿರಿನಾಥ ಒಡೆಯನು ಮೊದಲು ಬಾರಕೂರಿನ ರಾಜ್ಯಾಧಿಪತಿಯಾಗಿದ್ದು, ಆನಂತರ ತನ್ನ ತಂದೆ ರಾಯಣ್ಣ ದಂಡನಾಯಕನು ಆಳುತ್ತಿದ್ದ ಆರಗ ರಾಜ್ಯಕ್ಕೆ ಅಧಿಪನಾಗಿ ವರ್ಗಾವಣೆಗೊಳ್ಳುತ್ತಾನೆ. ಇತ್ತ ರಾಯಣ್ಣ ದಂಡನಾಯಕನು

ಕೆಲಕಾಲದವರೆಗೆ ತನ್ನ ಮಗನಾಳುತ್ತಿದ್ದ ಬಾರಕುರು ರಾಜ್ಯಕ್ಕೆ ಅಧಿಪನಾಗಿರುತ್ತಾನೆ. ಕ್ರಿ.ಶ. 1408ರಿಂದ 1448ರ ವರೆಗೂ ಆರಗ ರಾಜ್ಯದ ರಾಜ್ಯಪಾಲನಾಗಿ ಸಿರಿಗಿರಿನಾಥನು ಸುಸೂತ್ರವಾಗಿ ಆಡಳಿತ ನಡೆಸುತ್ತಿರುತ್ತಾನೆ.

ದೇವಪ್ಪದಂಡನಾಯಕ

ಈತ ಸಿರಿಗಿರಿನಾಥ ಒಡೆಯನ ಮಗ. ಈತನನ್ನು ಶಾಸನಗಳಲ್ಲಿ ದೇವಪ್ಪ ಒಡೆಯ ಎಂತಲೂ ಕರೆಯಲಾಗಿದೆ. ಈತ ವಿಜಯನಗರದ ದೊರೆ ಮಲ್ಲಿಕಾರ್ಜುನನ ಅಧೀನನಾಗಿ ಆರಗವನ್ನು 1463–1468ರ ವರೆಗೆ ಆಳುತ್ತಿದ್ದನು. ಈ ಅವಧಿಯಲ್ಲಿ ಆತ ಮಹಾಪ್ರಧಾನ ಪದವಿಯಿಂದ ಆರಗವನ್ನು ಆಳುತ್ತಿದ್ದನು. 1463ರ ಶಾಸನವು[56] ಆತ ದೊರೆಯಿಂದ ಸರಬಳಿಗೆ ಮತ್ತು ಅದರ ಉಪಗ್ರಾಮಗಳನ್ನು ದಾನವಾಗಿ ಪಡೆದು, ಅದನ್ನು ಅಗ್ರಹಾರವನ್ನಾಗಿ ಮಾಡಿ, ಹಲವು ವೃತ್ತಿಗಳಾಗಿ ವಿಂಗಡಿಸಿ, ವಿವಿಧ ಗೋತ್ರ ಸೂತ್ರಗಳಿಗೆ ಸೇರಿದ ಬ್ರಾಹ್ಮಣರಿಗೆ ದಾನನೀಡಿದನು. ನಂತರದ ಕಾಲದ (ತ್ರುಟಿತ) ಶಾಸನಗಳು[57] ಆತ ಆರಗ ರಾಜ್ಯವನ್ನು ಪಾಲಿಸುತ್ತಿದ್ದುದನ್ನು ಉಲ್ಲೇಖಿಸುತ್ತವೆ.

ಕ್ರಿ.ಶ. 15 ಮತ್ತು 16ನೆಯ ಶತಮಾನದ್ದೆಂದು ನಿರ್ಧರಿಸಿರುವ ಗಾಜಿನೂರಿನ ತ್ರುಟಿತ ಶಾಸನವು[58] ದೇವಪ್ಪದಂಡನಾಯಕರಿಗೆ ತಿಂಮಣ ಒಡೆಯನೆಂಬ ಮಗನಿದ್ದುದಾಗಿ ಮತ್ತು ಆತ ಮಾಗಣಿಯನಾಳುತ್ತಿದ್ದಾಗ ವೆಂಕಟನಾಯಕನು ಗಾಜನೂರಿನಲ್ಲಿ ರಂಗನಾಥದೇಗುಲವನ್ನು ನಿರ್ಮಿಸಿ ಅದಕ್ಕೆ ಭೂದಾನಗಳನ್ನು ನೀಡಿದುದನ್ನು ತಿಳಿಸುತ್ತದೆ.

ರತ್ನಪ್ಪ ಒಡೆಯ

ಸದ್ಯಕ್ಕೆ ದೊರೆತಿರುವ ಶಾಸನಾಧಾರಗಳಿಂದ ರತ್ನಪ್ಪ ಒಡೆಯನು ಬೈಚಯದಂಡನಾಯಕನ ವಂಶೀಯನೆಂದು ತಿಳಿದುಬಂದಿದೆ. ಇವನ ಪ್ರಥಮ ಉಲ್ಲೇಖವು ಮೂಡಬಿದಿರೆಯ[59] ಕ್ರಿ.ಶ. 25–08–1511ರ ಶಾಸನದಲ್ಲಿ ದೊರೆತಿದೆ. ಈ ಶಾಸನದಲ್ಲಿ ರತ್ನಪ್ಪ ಒಡೆಯನು ಕೃಷ್ಣದೇವರಾಯನ ಬಲಗೈ ಭಂಟನಾಗಿದ್ದ ವೀರನಾಗಿದ್ದನೆಂದು ಉಕ್ತವಾಗಿದೆ. ಕ್ರಿ.ಶ. 1511ರ ವೇಳೆಗೆ ರತ್ನಪ್ಪ ಒಡೆಯನು ಮಂಗಳೂರಿನ ಬಾರಕೂರು ರಾಜ್ಯವನ್ನು ಆಳುತ್ತಿರುತ್ತಾನೆ. ಇವನ ನಿರೂಪದಿಂದ ವಿಠರಸವೊಡೆಯರು ಬಿದಿರೆಯ ನಗರವನ್ನು ಆಳುತ್ತಿರುತ್ತಾರೆ. ಈ ಸಮಯದಲ್ಲಿ ಪುತ್ತಿಗೆಯಲ್ಲಿ ಚೌಟರು ಆಳುತ್ತಿರುತ್ತಾರೆ. ಇಂತಹ ಅವಧಿಯಲ್ಲಿ ಅಣ್ಣ ಸೇನಬೋವರು ಮತ್ತು ಸಾವಿರದವರು (ಒಂದು ಗುಂಪು) ಕೂಡಿ ಬಿದಿರೆಯ ಜೈನ ಮಠಾಧೀಶರಾದ ಅಭಿನವ ಚಾರುಕೀರ್ತಿ ಪಂಡಿತ ದೇವರ ಸಮ್ಮುಖದಲ್ಲಿ ಬಿದಿರೆಯ ಸೆಟ್ಟಿಕುಲದವರಿಗೆ, ನಾಲ್ವರು ಯಳಮೆಯೊಳಗಾದ ಜೈನ ಮುಖಂಡರಿಗೆ ಮತ್ತು ವ್ಯಾಪಾರಿಗಳಿಗೆ ತಾಮ್ರಶಾಸನವನ್ನು ಬರೆಯಿಸಿಕೊಟ್ಟು ಬಿದಿರೆಯ ಜೈನರ ತೊಂದರೆಗಳನ್ನು ನಿವಾರಿಸಿದರು. ಅಣ್ಣಸೇನಬೋವರ ಕಡೆಯವರು ಕಕ್ಕೆದಾಸುಸೆಟ್ಟಿ ಮತ್ತು ಅಡ್ಡಣೆ ಬಾಲ್ಯಮ್ಮ ಸೆಟ್ಟಿಯರ ಮನೆಯನ್ನು, ಸಕಲವನ್ನು ಜಪ್ತಿ ಮಾಡಿಕೊಂಡು ಹೋದಾಗ ಕಂಗಾಲಾದ ಎಲ್ಲ ಜೈನರು ಬಸದಿಗಳ ಬಾಗಿಲು ಮುಚ್ಚಿ ಊರಿನಿಂದ ವಲಸೆಹೋಗತೊಡಗಿದರು. ಇದರಿಂದ ಕಂಗಾಲಾದ ಅಣ್ಣ ಸೇನಬೋವನು ಜಪ್ತಿಮಾಡಿದ್ದ ಸಕಲವನ್ನು ಹಿಂದಕ್ಕೆ ಕೊಡಿಸಿ ಬಸದಿಯ ಬಾಗಿಲುಗಳನ್ನು ತೆಗೆಸಿ ಆ ಬಸದಿಗಳಿಗೆ ಕಾಣಿಕೆಗಳನ್ನು ಕೊಡುತ್ತಾನೆ. ಅಲ್ಲದೆ ಇನ್ನು ಮುಂದೆ ನಮ್ಮ ಜನರು ನಿಮ್ಮ ವಿಷಯಕ್ಕೆ ಬರುವುದಿಲ್ಲ; ನಿಮ್ಮ ಮನೆ ಬಾಗಿಲುಗಳಿಗೆ ಕಲ್ಲನ್ನು ಹಾಕುವುದಿಲ್ಲವೆಂದು ಪ್ರಮಾಣಮಾಡಿ ಸಂತೈಸುತ್ತಾನೆ. ಇಲ್ಲಿ ಯಾವ ಕಾರಣಕ್ಕಾಗಿ ಜೈನರ ಮನೆಗಳು ಜಪ್ತಿಯಾದವೆಂಬುದು ಸ್ಪಷ್ಟವಿಲ್ಲ. ಆದರೆ ರತ್ನಪ್ಪ ಒಡೆಯರ ಆಳ್ವಿಕೆಯ ಕಾಲದಲ್ಲಿ ಜೈನರ ಭದ್ರತೆಗೆ ಎದುರಾಗುವ ತೊಂದರೆಗಳು ಸಕಾಲದಲ್ಲಿ ಪರಿಹಾರಗೊಂಡು ಜೈನಧರ್ಮದ ಉಳಿವಿಗೆ ತಕ್ಕ ವಾತಾವರಣ ನಿರ್ಮಾಣಗೊಳ್ಳುತ್ತಿತ್ತು ಎಂಬುದು ಈ ಶಾಸನದಿಂದ ಮನದಟ್ಟಾಗುತ್ತದೆ.

ಕ್ರಿ.ಶ. 3–4–1512ರ ಶಾಸನದನ್ವಯ[60] ರತ್ನಪ್ಪ ಒಡೆಯನು ಮಂಗಳೂರು–ಬಾರಕೂರುಗಳನ್ನು ಆಳುತ್ತಿದ್ದನು. ಇವನ ಅಧೀನದಲ್ಲಿ ಆಡಳಿತದಲ್ಲಿ ನೆರವಾಗಿ ತಿಮ್ಮಯ್ಯ ದಂಡನಾಯಕನು ಕಾರ್ಯನಿರ್ವಹಿಸುತ್ತಿರುವನು.

ಕ್ರಿ.ಶ. 1–6–1512ರ ಶಾಸನದ ಪ್ರಕಾರ,[61] ಮಂಗಳೂರು–ಬಾರಕೂರುಗಳ ಅಧಿಪನಾಗಿ ರತ್ನಪ್ಪೊಡೆಯನು ಆಳುತ್ತಿದ್ದಾಗ ದೇವರಾಡಿಯಾದ ಕುಂದವೆಗ್ಗಡೆ ಮತ್ತು ತಿರುಮಲರಸರಾದ ಕಿಂನಿಕ ಹೆಗ್ಗಡೆ ಇಬ್ಬರೂ ಸೇರಿ ತಿರುಮಲರಾಯ ಚೌಟರಿಗೆ

ಒಪ್ಪಿಗೆ ಪತ್ರವನ್ನು ಬರೆದುಕೊಡುವರು. ಆ ವಿಷಯವನ್ನು ಪುತ್ತಿಗೆಯ ಸೋಮನಾಥ ದೇವರ ಸನ್ನಿಧಿಯಲ್ಲಿ ಶಾಸನದಲ್ಲಿ ಬರೆಯಿಸಿ ನಡೆಯಿಸುವರು. ಈ ಪತ್ರದ ವಿಷಯವೆಂದರೆ ಪುತ್ತಿಗೆ ಮತ್ತು ಇನ್ನೆರಡು ಸ್ಥಳಗಳ ದೊರೆಗಳು ಇನ್ನು ಮುಂದೆ ಒಂದು. ನಗಿರೆ ರಾಜ್ಯದ ಭೈರರಸ ಒಡೆಯರು ಏನಾದರೂ ಕಾಳಗಕ್ಕೆ ಬಂದರೆ ಈ ಮೂರು ದೊರೆಗಳು ಸೇರಿಕೊಂಡು ಅವನನ್ನು ಎದುರಿಸಬೇಕು. ಅದರ ಖರ್ಚು-ವೆಚ್ಚಗಳನ್ನು ಮೂರು ಮಂದಿಯರೂ ನೋಡಿಕೊಳ್ಳಬೇಕು. ನಮ್ಮ ನಮ್ಮ ಸೀಮೆಯ ಮೇಲೆ ಪರಸ್ಪರ ನಾವುಗಳು ಯುದ್ಧಮಾಡಬಾರದು. ಈ ವಿಷಯ ಅತ್ಯಂತ ಕೌತುಕಪೂರ್ಣವಾಗಿದೆ. ನಗಿರೆ ರಾಜ್ಯದ ಭೈರರಸನಿಂದ ಧಾಳಿಯ ಭೀತಿ ಇದ್ದುದ್ದು ಮತ್ತು ಅವನನ್ನು ಎದುರಿಸಲು ಮಂಗಳೂರು-ಬಾರಕೂರು ರಾಜ್ಯಗಳಲ್ಲಿ ರತ್ನಪ್ಪೊಡೆಯನ ಅಧೀನ ದೊರೆಗಳು ತಮ್ಮ ತಮ್ಮಲ್ಲಿ ಒಪ್ಪಂದ ಮಾಡಿಕೊಂಡು ಒಗ್ಗಟ್ಟಿನಿಂದ ಹೋರಾಡಲು ತೀರ್ಮಾನಿಸಿದುದು ಅಧಿರಾಜತ್ವದ ನಿಷ್ಠೆಯ ಜೊತೆಗೆ, ತಾವಿದ್ದ ನೆಲದ ಮೇಲಿನ ಅಭಿಮಾನಪೂರ್ಣತೆಯನ್ನು ಬಿಂಬಿಸುತ್ತದೆ.

ಕ್ರಿ.ಶ. 1512-13ರಲ್ಲಿಯೂ[62] ರತ್ನಪ್ಪ ಒಡೆಯನು ಮಂಗಳೂರು-ಬಾರಕೂರುಗಳ ರಾಜ್ಯಾಧಿಪತಿಯಾಗಿ ಮುಂದುವರಿಯುತ್ತಾನೆ. ಈ ಅವಧಿಯಲ್ಲಿಯೇ ತಿರುಮಲರಾಯ ಚಉಟರು, ದೇವರಾಡಿಯ ಒಡೆಯರಾದ ಕುಂದಹೆಗ್ಗಡೆಯರು ಒಪ್ಪಿ ತಿರುಮಲರಸರ ಕರಣಿಕರಾದ ಹೆಗ್ಗಡೆಯವರಿಗೆ ಒಂದು ಒಪ್ಪಂದಪತ್ರವನ್ನು ಬರೆದುಕೊಡುತ್ತಾರೆ. ಅದರ ಪ್ರಕಾರ, ನಗಿರೆಯ ಅರಸ ಭೈರರಸನು ಕಾಳಗಕ್ಕೆ ಎಂದರೆ ಮೂರು ಜನರೂ ಕೂಡಿ ಅವನೊಡನೆ ಕಾಳಗಮಾಡಬೇಕು. ಇದರ ವೆಚ್ಚವನ್ನು ಮೂರು ಜನರು ಸೇರಿ ಭರಿಸಬೇಕು. ನಮ್ಮ ನಮ್ಮ ಸೀಮೆಯ ಮೇಲೆ ನಾವು ಯುದ್ಧ ಮಾಡಬಾರದು. ಹೀಗೇನಾದರೂ ಯುದ್ಧಮಾಡಿದರೆ ಸೋಮನಾಥಲಿಂಗ, ವಿಶ್ವನಾಥ ಲಿಂಗಗಳನ್ನು ಕಿತ್ತ ದೋಷಬರುವುದು.

ಮೇಲಿನ ಎರಡು ಶಾಸನಗಳು ನಿರಂತರವಾಗಿ ಬಾರಕೂರು ರಾಜ್ಯಕ್ಕೆ ನಗಿರೆಯ ಭೈರರಸನಿಂದ ಧಾಳಿಯ ಸೂಚನೆಗಳು ದೊರೆತಿದ್ದವು. ಅದಕ್ಕಾಗಿ ಅಲ್ಲಿನ ಅಧೀನರಸರು ಕಾಲಕಾಲಕ್ಕೆ ತಮ್ಮತಮ್ಮಲ್ಲೇ ರಾಜಕೀಯ ಒಪ್ಪಂದಗಳನ್ನು ಕಾನೂನುಬದ್ಧವಾಗಿ ಮಾಡಿಕೊಂಡು ತಮ್ಮ ಸುತ್ತ ಭದ್ರ ವಾತಾವರಣವನ್ನು ಸೃಷ್ಟಿಸಿಕೊಳ್ಳುತ್ತಿದ್ದುದು ಸ್ಪಷ್ಟವಾಗುತ್ತದೆ.

29-12-1514ರ[63] ವೇಳೆಗೆ ಶತ್ರುಭೀತಿ ಸರಿದು ಶಾಂತಿಯುತ ಪರಿಸರ ಬಾರಕೂರಿನಲ್ಲಿ ನೆಲೆಸಿದಂತೆ ತೋರುತ್ತದೆ. ರತ್ನಪ್ಪೊಡೆಯನು ಬಾರಕೂರಿನಿಂದ ಆಳುತ್ತಿರುವಾಗ ಅವನ ಅಧಿಕಾರಿ ನಾಗಂಣಬಂಣಿಯು ತನ್ನ ಪಾಲಿಗೆ ಬಂದು ಉಪ್ಪಿನಕಳದ ಚತುಸ್ಸೀಮೆಯಲ್ಲಿ ಉದ್ಯಾವರದ ವೀರಭದ್ರದೇವರು, ವಿನಾಯಕದೇವರು ಹಾಗೂ ನಂದಳಿಕೆಯ ದೈವಗಳಿಗೆ ಭೂಮಿದಾನವನ್ನು, ಸೇವಾರ್ಥವಾಗಿ ಅಕ್ಕಿಮೂಟೆಗಳನ್ನು ದಾನ ಮಾಡಿರುವನು.

19-1-1515ರ[64] ಕಾಲಕ್ಕೆ ರತ್ನಪ್ಪೊಡೆಯನು ತನ್ನ ರಾಜನೀತಿ ನೈಪುಣ್ಯದಿಂದ, ಸಾಮರ್ಥ್ಯದಿಂದ ಕೃಷ್ಣದೇವರಾಯನಿಂದ ಗೌರವಕ್ಕೆ ಭಾಜನನಾಗಿರುತ್ತಾನೆ. 'ಮಂಗಳೂರು-ಬಾರಕೂರು ಮುಂತಾದ ತುಳುರಾಜ್ಯಗಳ ಅಧಿಪ', 'ಪಶ್ಚಿಮ ಸಮುದ್ರಾಧೀಶ್ವರ' ಎಂಬ ಬಿರುದುಗಳು ಅವನನ್ನು ಅಲಂಕರಿಸಿವೆ. ಈ ಅವಧಿಯಲ್ಲಿ ವರಾಂಗ ಸ್ಥಳದ ನೇಮಿನಾಥ ದೇವರ ಬಸದಿಗೆ ವಿಜಯನಗರದ ಹಿಂದಿನ ಅರಸ ವೀರಪ್ರತಾಪ ದೇವರಾಯರು ಬಸದಿಯ ಋಷಿ ಸಮುದಾಯದ ಆಹಾರಕ್ಕೆಂದು ದಾನ ನೀಡಿದ್ದ ಭೂಮಿಯಲ್ಲಿ ಅಜ್ಞಾನದಿಂದ ಹಿರಿಯರು ಅರಣ್ಯವನ್ನು ಬೆಳೆಸಿ ಆ ಪ್ರದೇಶವು ಉಪಯೋಗವಿಲ್ಲದಂತೆ ಮಾಡಿದ್ದರು. ಇದನ್ನರಿತ ದೇವೇಂದ್ರಕೀರ್ತಿ ಭಟ್ಟಾರಕರು ಕೃಷ್ಣದೇವರಾಯರಿಗೆ ನಡೆದ ವಿಷಯವನ್ನು ತಿಳಿಸುತ್ತಾರೆ. ಆಗ ಅರಸನ ಇದನ್ನು ಸಂಪರ್ಕಿಸಲು ರತ್ನಪ್ಪ ಒಡೆಯರಿಗೆ ಸೂಚಿಸುತ್ತಾನೆ. ರತ್ನಪ್ಪ ಒಡೆಯರು ಇದರ ವಿಚಾರಿಸಲಾಗಿ ಈ ತಪ್ಪನ್ನು ಅರಿತ ಮುದುರಾದಿಯ ಅಕ್ಕಮ್ಮ ಪೆರ್ಗ್ಗಡತಿ, ತಿರುಮಸಾಮಂತ, ಮಲುದೇವಿ, ಅಪ್ಪಯ್ಯ ಸೇನಬೋವ ಐನೂರುಸಾವಿರ ವರ್ಗದವರು ಒಪ್ಪಿಕೊಂಡು ಆ ಅರಣ್ಯವನ್ನು ಕಡಿಸಿ ಹಾಕಿ, ಆ ಸ್ಥಳದಲ್ಲಿ ಹಲಸು, ಮಾವು, ತೆಂಗು, ಅಡಿಕೆ ಮುಂತಾದವನ್ನು ಉಳಿಸಿ, ಇನ್ನು ಮುಂದೆ ಈ ಸ್ಥಳಕ್ಕೂ ನಮಗೂ ಸಂಬಂಧವಿಲ್ಲ, ಇದೆಲ್ಲವೂ ಬಸದಿಗೆ ಸೇರಬೇಕೆಂದು ಹೇಳಿ ಕೃಷ್ಣರಾಯರ ಭಂಡಾರಕ್ಕೆ ಹಿಂದಿರುಗಿಸುತ್ತಾರೆ. ಅಲ್ಲದೆ ಈ ದಾನವನ್ನು ನಮ್ಮ ವಂಶದಲ್ಲಿ ಹುಟ್ಟಿದ ಮುಂದಿನವರು ಪಾಲಿಸುತ್ತಾರೆ. ಇದಕ್ಕೆ ತಪ್ಪಿದರೆ 50 ವರ್ಷಗಳ ದಂಡವನ್ನು, ರಾಯರ ಭಂಡಾರಕ್ಕೆ ಸಲ್ಲಿಸುತ್ತೇವೆಂದು ಪ್ರಮಾಣೀಕರಿಸಿದ್ದಾರೆ. ಈ

ವಿವರಗಳು ರತ್ನಪ್ಪ ಒಡೆಯರ ಆಡಳಿತದ ಆಂತರಿಕ ನೀತಿಯಲ್ಲಿ ಪೃಥಕ್ಕರಿಸುತ್ತವೆಯಲ್ಲದೆ ನ್ಯಾಯಾಡಳಿತದ ಪಾರದರ್ಶಕ ನೀತಿಯನ್ನು ಸ್ಪಷ್ಟಪಡಿಸುತ್ತವೆ.

19–4–1515ರ[65] ಶಾಸನದ ಪ್ರಕಾರ, ಈ ಅವಧಿಯ ವೇಳೆಗೆ ರತ್ನಪ್ಪೊಡೆಯನ ಪ್ರಾಬಲ್ಯವು ವರ್ಧಿಸಿತ್ತು. ಆತ 'ಸಪ್ತಸಪ್ತತಿದುರ್ಗ್ಗಾಧೀಶ್ವರಂ', 'ಮೇದಿನೀಮೀಸರಗಂಡಂ', 'ಜೈನಪರವಾಗವೋದ್ಧರಣದತ್ತಾವಧಾನಂ', 'ಸಮ್ಯಕ್ತಗುಣರತ್ನಭೂಷಣಭೂಷಿತಂ' ಎಂದು ಕೀರ್ತಿ ಪಡೆದಿದ್ದನು. ಜೊತೆಗೆ ತನ್ನ ವಂಶದ ಪ್ರಖ್ಯಾತಿಯನ್ನು ಉತ್ತುಂಗಕ್ಕೇರಿಸಿದ್ದನೆಂಬುದಕ್ಕೆ "ಶ್ರೀಮದ್ಬೈಚ ದಂಡಾಧಿಪಗೋತ್ರಗಗನಮಂಡಲಮಾರ್ತ್ತಾಂಡ ಮಂಡಲಂ" ಎಂಬ ಬಿರುದು ಸಾಕ್ಷಿ ಒದಗಿಸುತ್ತದೆ. ಅವನ ಆಡಳಿತದ ಈ ಅವಧಿಯಲ್ಲಿ ಚಾರುಕೀರ್ತಿ ಪಂಡಿತದೇವರ ನಿರೂಪದಿಂದ ಮುನಿಭದ್ರದೇವರು ಜೈನಾಗಮ ಮಹತ್ತ್ವವನ್ನು ಉಪದೇಶ ಮಾಡಿದಾಗ ಇದನ್ನು ಕೇಳಿದ ಬಿದಿರೆಯ ಎಂಟು ಮಂದಿ ಸೆಟ್ಟಿಕಾರರು, ನಾಲ್ಕು ಎಳಮೆಗಳು ಮತ್ತು ಸಮಸ್ತರು ಕೂಡಿ ಪ್ರತಿನಿತ್ಯ ಜಿನಶಾಸ್ತ್ರ ನಡೆಸಬೇಕೆಂದೂ ಶಾಸ್ತ್ರದಾನಕ್ಕಾಗಿ 660 ದೊಡ್ಡ ವರಹಗಳನ್ನು ಕೊಟ್ಟು ತಾಮ್ರಪತ್ರ ಬರೆಸಿ ಪಾರ್ಶ್ವನಾಥ ದೇವರ ಭಂಡಾರಕ್ಕೆ ನೀಡುತ್ತಾರೆ. ಇದರಿಂದ 16ನೆಯ ಶತಮಾನದಲ್ಲಿ ತುಳುನಾಡಿನಲ್ಲಿ ರತ್ನಪ್ಪೊಡೆಯನ ಆಳ್ವಿಕೆಯ ಕಾಲದಲ್ಲಿ ಜೈನಧರ್ಮದ ಬೆಳವಣಿಗೆಗೆ, ಪ್ರಚುರತೆಗೆ ಯಾವ ಅಡ್ಡಿಯೂ ಇರದೆ ಸ್ವಚ್ಛಂದವಾಗಿ ಜೈನಧರ್ಮವು ಪ್ರವರ್ಧಮಾನದಲ್ಲಿತ್ತೆಂಬುದನ್ನು ಅರಿಯಬಹುದಾಗಿದೆ. ಈ ಕಾಲಘಟ್ಟದ ತರುವಾಯದ ಶಾಸನಗಳಲ್ಲಿ[66] ರತ್ನಪ್ಪೊಡೆಯನ ಉಲ್ಲೇಖವು ಮಾತ್ರ ಕಂಡುಬರುತ್ತದೆ. ಏಕೆಂದರೆ ಈ ವೇಳೆಗಾಗಲೆ ಅವನ ಮಗ ವಿಜಯಪ್ಪ ಒಡೆಯನು ಬಾರಕೂರು ರಾಜ್ಯವನ್ನು ಆಳುತ್ತಿರುತ್ತಾನೆ.

ವಿಜಯಪ್ಪ ಒಡೆಯ

ಈತ ತನ್ನ ತಂದೆ ರತ್ನಪ್ಪ ಒಡೆಯನು ಬಾರಕೂರು ಮಂಗಳೂರುಗಳನ್ನು ಆಳುತ್ತಿದ್ದಾಗಲೇ ಆಡಳಿತದಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದನು. ಕ್ರಿ.ಶ. 1514–1518ರ ವರೆಗಿನ ಇವನ ಶಾಸನಗಳು ಇದನ್ನು ಸ್ಪಷ್ಟಪಡಿಸುತ್ತವೆ. ಇವನ ಪ್ರಥಮ ಉಲ್ಲೇಖವು ಕ್ರಿ.ಶ. ಕ್ರಿ.ಶ. 9–12–1514ರ ಶಾಸನದಲ್ಲಿ[67] ಕಂಡುಬರುತ್ತದೆ. ಈ ಶಾಸನದ ಪ್ರಕಾರ ವಿಜಯಪ್ಪ ಒಡೆಯನು ಚಂದ್ರನಾಥಸ್ವಾಮಿಯ ದೀಪಾರಾಧನೆ ಮತ್ತು ಅಮೃತಪಡಿ ನೈವೇದ್ಯಗಳಿಗೆಂದು 60 ಕಾಟಿ ಗದ್ಯಾಣಗಳನ್ನು ದಾನ ನೀಡಿದನು. ಈ ದಾನವನ್ನು ಆತ ಕೃಷ್ಣದೇವರಾಯನಿಗೆ ಒಳಿತಾಗಲೆಂದು ಹಾರೈಸಿ ನೀಡಿರುವನು. ಇದೇ ಸದುದ್ದೇಶಕ್ಕೆಂದು ಪೆನುಗುಂದಿಯ ವೀರಸೇನಾದೇವಾಚಾರ್ಯರ ಸೇವಾರ್ಥಕ್ಕೆಂದು 150 ಕಾಟಿ ಗದ್ಯಾಣಗಳನ್ನು ದಾನ ನೀಡಿರುವನು.[68]

ಕ್ರಿ.ಶ. 1518ರ ಶಾಸನವು[69] ವಿಜಯಪ್ಪ ಒಡೆಯನು ಶ್ರೀರಘುನಾಥದೇವರ ಸೇವೆಗಾಗಿ ಹೆಮ್ಮಾಡಿ ಗ್ರಾಮವನ್ನು ಶಿಲಾಶಾಸನಸಮೇತವಾಗಿ ದಾನ ನೀಡಿರುವನು. ಈ ಗ್ರಾಮದ ಚತುಸ್ಸೀಮೆಯೊಳಗಾದ ಕುಳಕಾಲ ಒಂದಕ್ಕೆ ಕಾಟಿಗದ್ಯಾಣ 500, ಗಟ್ಟಿವರಹ ಗದ್ಯಾಣ 200 ವರಹಗಳನ್ನು ರಘುನಾಥದೇವರಿಗೆ ದಾನ ನೀಡಿದನು.

28–1–1519ರ ಶಾಸನವು[70] ಬಾರಕೂರು ರಾಜ್ಯವನ್ನು ವಿಜಯಪ್ಪನು ಆಳುತ್ತಿದ್ದುದನ್ನು ತಿಳಿಸಿ, ಆತ ಶ್ರೀಕೃಷ್ಣದೇವರ (ಪುತ್ತಿಗೆಯಲ್ಲಿನ) ಸೇವೆಗಾಗಿ ಅರಮನೆ ಭಂಡಾರಸ್ಥಳದ ಉದಯಂಗಲನಾಡಿನ ಪುತ್ತೆಯ ಗ್ರಾಮದ ತೆರಿಗೆಯನ್ನು ದಾನ ಮಾಡುತ್ತಾನೆ. ಇದರ ಜೊತೆಗೆ ಅನೇಕ ವರಹಗಳನ್ನು ಆತ ದಾನ ನೀಡಿದನು.

28–1–1519ರ ಶಾಸನದ ಪ್ರಕಾರ[71] ಬಾರಕೂರು ರಾಜ್ಯಾಧಿಪನಾದ ವಿಜಯಪ್ಪ ಒಡೆಯನು ವೇದನಿಧಿ ಒಡೆಯರು ಪೂಜೆಮಾಡುವ ಶ್ರೀಕೃಷ್ಣದೇವರ ಸೇವೆಗಾಗಿ ಉದಯಂಗಲ ನಾಡಿನ ಪುತ್ತೆಯ ಊರಿನಲ್ಲಿ ಅಕ್ಕಿಮೂಟೆ, ಗದ್ಯಾಣಗಳನ್ನು ದಾನನೀಡುವನು.

13–5–1519ರಲ್ಲಿ ವಿಜಯಪ್ಪೊಡೆಯನು[72] ಕೃಷ್ಣದೇವರಾಯನಿಗೆ ಶುಭವಾಗಲೆಂದು ಹಾರೈಸಿ ಅನೇಕ ಬ್ರಾಹ್ಮಣರಿಗೆ ಬಸರೂರು ಮತ್ತು ಕಂದವೂರುಗಳಲ್ಲಿನ ಕೆಲವು ಭೂಪ್ರದೇಶಗಳನ್ನು, ಗೃಹಗಳನ್ನು, ತೋಟಗಳನ್ನು ಆಕರವಾಗಿ ದಾನ

ನೀಡಿದನು. 14–5–1719ರ ಶಾಸನದನ್ವಯ[72ಅ] ಅರಸ ಕೃಷ್ಣದೇವರಾಯನಿಗೆ ಸಕಲೈಶ್ವರ್ಯ ವೃದ್ಧಿಯಾಗಲೆಂದು ವಿಜಯಪ್ಪನು ಪೆರಡೂರ ಅನಂತದೇವನಿಗೆ 100 ಅಕ್ಕಿ ಮುಡಿ, 180 ವರಗಳನ್ನು ನೀಡಿದನು.

25–10–1519ರ ಶಾಸನದನ್ವಯ[73] ವಿಜಯಪ್ಪೊಡೆಯರು ಬಾರಕೂರನ್ನು ಆಳುತ್ತಿದ್ದಾಗ ಸೆಟ್ಟಿಯ ಬಳಿಯ ತಿರುಮಲ ಸೆಟ್ಟಿಗಿತ್ತಿ ಪಡುವಕೇರಿಯಲ್ಲಿ ಮಠವೊಂದನ್ನು ನಿರ್ಮಿಸಿ ಅದರ ಶ್ರೇಯೋಭಿವೃದ್ಧಿಗಾಗಿ ಭೂಮಿ ಮತ್ತು ಸುವರ್ಣಗಳನ್ನು ದಾನ ನೀಡಿದಳು.

25–08–1519ರ ಶಾಸನವು[74] ತಿಳಿಸುವಂತೆ ವಿಜಯಪ್ಪೊಡೆಯ ಈಶ್ವರ ಉಪಾಧ್ಯ ಎಂಬುವವನಿಗೆ ಧರ್ಮಾರ್ಥವಾಗಿ ಭೂದಾನಗಳನ್ನು ನೀಡಿರುವನು.

1–4–1520ರ ಶಾಸನದ [75] ಪ್ರಕಾರ ವಿಜಯಪ್ಪ ಒಡೆಯರು ಬಾರಕೂರು ರಾಜ್ಯವನ್ನು ಆಳುತ್ತಿದ್ದಾಗ, ಸೆಟ್ಟಿವಾಡಿಯ ಅಲ್ಲಂಸೆಟ್ಟಿಯ ಮಗ ಸಂಕರಸೆಟ್ಟಿಯು ತನ್ನ ಮೊಮ್ಮಗಳಾದ ತಿರುಮಕ್ಕಗೆ ಮಕ್ಕಳಿಲ್ಲದ ಸಂಬಂಧ ಆಕೆಯ ಸ್ವತ್ತಿನ ಬಂಗಾರದಲ್ಲಿ ಒಂದು ಮಠವನ್ನು ಕಟ್ಟಿ ಅದರ ನಿರ್ವಹಣೆಗೆ ಗದ್ದೆ, ವರಹಗಳನ್ನು, ಬ್ರಾಹ್ಮಣರ ಆಹಾರಕ್ಕೆಂದು ಅಕ್ಕಿಮೂಟೆಗಳನ್ನು ಮತ್ತು ನಖರೇಶ್ವರ ಮಹಾದೇವಾಲಯಕ್ಕೆ ದಾನಗಳನ್ನು ನೀಡಿದನು.

1514–1520ರ ವರೆಗೆ ವಿಜಯಪ್ಪ ಒಡೆಯನು ತನ್ನ ತಂದೆಯ ಆಡಳಿತ ಭಾಗವಾದ ಬಾರಕೂರು ರಾಜ್ಯಕ್ಕೆ ಅಧಿಪನಾಗಿ ಜೈನ ಮತ್ತು ವೈದಿಕ ಧಾರ್ಮಿಕ ಸಂಸ್ಥೆಗಳಿಗೆ ದಾನಮಾಡುತ್ತಲೂ ಮಠಗಳ ನಿರ್ಮಾಣಕ್ಕೆ ಪ್ರೋತ್ಸಾಹ ನೀಡಿ ಈ ಪ್ರದೇಶದ ಶೈಕ್ಷಣಿಕ ಏಳಿಗೆಗೂ ಬೆಂಬಲವಾಗಿ ನಿಂತಿದ್ದನು.

ಕೆಲವು ಒಳನೋಟಗಳು


ಬೈಚಯದಂಡನಾಯಕ ಮತ್ತು ಅವನ ವಂಶೀಯರ ಇದುವರೆಗೂ ದೊರೆತಿರುವ 81ಕ್ಕೂ ಹೆಚ್ಚು ಶಾಸನಗಳನ್ನು ಅವಲೋಕಿಸಿದಾಗ ಒಟ್ಟಾರೆಯಾಗಿ ಇವರ ಶಾಸನಗಳಿಂದ ಕೆಲವು ಸೂಕ್ಷ್ಮ ಸಂಗತಿಗಳು ಅರಿವಿಗೆ ಬರುತ್ತವೆ. ಅವು:

1. ಆಡಳಿತದ ದೃಷ್ಟಿಯಿಂದ ತುಳುನಾಡು ಮೊದಲನೆಯ ಬೈಚಯದಂಡನಾಯಕನ ಬೆಂಗಾವಲಿನಲ್ಲಿ ಸುಭದ್ರವಾಗಿತ್ತು. ಎಲ್ಲಿಯವರೆಗೂ ಹೊಯ್ಸಳ ಅಧಿಪತ್ಯವಿತ್ತೋ ಅಲ್ಲಿಯವರೆಗೂ ಬೈಚಯದಂಡನಾಯಕ ಮಹಾಪ್ರಧಾನಿಯಾಗಿ ತುಳುನಾಡಿನಲ್ಲಿ ಪ್ರವರ್ಧಮಾನದಲ್ಲಿರುತ್ತಾನೆ. ಸಂಗಮ ದೊರೆಗಳ ಆಳ್ವಿಕೆ ಪ್ರಾರಂಭವಾಗುತ್ತಿದ್ದಂತೆ ಇವರ ವಿಶಾಲವಾದ ಭೂಪ್ರದೇಶದ ಒಡೆತನ ಕಡಿಮೆಯಾಗಿ ಮುಂದೆ ಅವನ ವಂಶೀಯರು ತುಳುನಾಡಿನ ಕೆಲಭಾಗಗಳ ಒಡೆತನ ಸಾಧಿಸುತ್ತಾರೆ. ಹೀಗಾಗಿ ಬಾರಕೂರು, ಮಂಗಳೂರು, ಗೋವೆ, ಗುತ್ತಿ, ಮಾಗಣಿ, ಆರಗಗಳೆಂಬ ಪ್ರತ್ಯೇಕ ಪ್ರಾಂತ್ಯಗಳಿಗೆ ಈ ವಂಶೀಯರು ಪ್ರಧಾನಿಗಳಾಗಿ, ರಾಜ್ಯಪಾಲರಾಗಿ, ಪ್ರಾಂತ್ಯಾಧಿಕಾರಿಗಳಾಗಿ ನೇಮಕಗೊಂಡು ಕರ್ತವ್ಯನಿರ್ವಹಿಸುತ್ತಾರೆ.
2. ಮೊದಲನೆಯ ಬೈಚನ ತೃತೀಯ ಪುತ್ರ ಗೋಪರಸದಂಡನಾಯಕನು ಬಾರಕೂರನ್ನು ಪ್ರಧಾನಿ ಹುದ್ದೆಯಿಂದ ಆಳುತ್ತಿರುತ್ತಾನೆ. ಅವನ ನಂತರ ಇದೇ ಬಾರಕೂರು ಗೋಪರಸನ ತಮ್ಮ ರಾಯಣ್ಣ ದಂಡನಾಯಕನ ಸುಪರ್ದಿಗೆ ಬರುತ್ತದೆ. ರಾಯಣ್ಣನ ನಂತರ ಅವನ ಮಗ ಸಿರಿಗಿರಿನಾಥ ದಂಡನಾಯಕನು ಕೆಲಕಾಲ ಬಾರಕೂರನ್ನು ಮತ್ತು ಮುಂದೆ ಆರಗ ರಾಜ್ಯದ ಅಧಿಪನಾಗುತ್ತಾನೆ. ಇದೇ ಆರಗವು ಸಿರಿಗಿರಿನಾಥನ ತುರುವಾಯ ಅವನ ಮಗ ದೇವಪ್ಪದಂಡನಾಯಕನ ಆಳ್ವಿಕೆಗೆ ಒಳಪಡುತ್ತದೆ. ಆದರೆ ದೇವಪ್ಪದಂಡನಾಯಕನ ಮಗ ತಿಮ್ಮಣ್ಣನಿಗೆ ಆರಗವು ದಕ್ಕದೆ ಹೋಗುತ್ತದೆ. ಇದಕ್ಕೆ ಕಾರಣ ಈ ವೇಳೆಗೆ ವಿಠಣ ಒಡೆಯ ಎಂಬಾತ ಆರಗವನ್ನು ಪೂರ್ಣವಾಗಿ ತನ್ನ ಮುಷ್ಟಿಯಲ್ಲಿಟ್ಟುಕೊಂಡಿರುತ್ತಾನೆ. ಹಾಗಾಗಿ ತಿಮ್ಮಣ್ಣ ಮಾಗಣಿಯ ಕಡೆ ಹೊರಟುಹೋಗುತ್ತಾನೆ. ಅತ್ತ ಆರಗದ

ಪರಿಸ್ಥಿತಿಯಲ್ಲಿ ಬೈಚಯದಂಡನಾಯಕನ ವಂಶೀಯರು ತಮ್ಮ ಅಸ್ತಿತ್ವವನ್ನು ಬಹುಕಾಲದವರೆಗೆ ಮುಂದುವರಿಸಲಾಗದಿದ್ದರೂ ಇತ್ತ ಬಾರಕೂರು, ಗೋವೆ, ಮಂಗಳೂರು, ಗುತ್ತಿ ರಾಜ್ಯಗಳು ಈ ವಂಶೀಯರ ಬಿಗಿಯಾದ ಮುಷ್ಟಿಯಲ್ಲಿ ಭದ್ರವಾಗಿರುತ್ತವೆ. ಇಮ್ಮಡಿ ಬೈಚಯದಂಡನಾಯಕನು ಗೋವೆ, ಬಾರಕೂರು, ಮಂಗಳೂರು, ಗುತ್ತಿ ರಾಜ್ಯಗಳಿಗೆ ಕಾಲಕ್ರಮದಲ್ಲಿ ಪ್ರಾಂತ್ಯಾಧಿಕಾರಿಯಾಗಿ ನಿಯುಕ್ತಿಯಾಗುತ್ತಾರೆ. ಅವನು ಗೋವೆ, ಗುತ್ತಿಗಳಿಂದ ವರ್ಗಾವಣೆಗೊಂಡು ಮಂಗಳೂರು-ಬಾರಕೂರು ರಾಜ್ಯಗಳಿಗೆ ರಾಜ್ಯಪಾಲನಾಗಿ ಬರುತ್ತಿದ್ದಂತೆ ಅತ್ತ ಗೋವೆ-ಗುತ್ತಿರಾಜ್ಯಗಳು ಇಮ್ಮಡಿ ಬೈಚನ ತಮ್ಮ ಇಮ್ಮಡಿ ಇರುಗಪ್ಪದಂಡನಾಯಕನ ವಶದಲ್ಲಿ ಉಳಿಯುತ್ತವೆ. ಈ ಎರಡು ಪ್ರಾಂತ್ಯಗಳಿಗೂ ಇಮ್ಮಡಿ ಇರುಗಪ್ಪನು ಪ್ರಧಾನಿಯಾಗಿರುತ್ತಾನೆ. ಇಮ್ಮಡಿ ಬೈಚಯದಂಡನಾಯಕನ ಮರಣದ ತರುವಾಯ ಅವನ ವಂಶೀಯರಾದ ರತ್ನಪ್ಪ ಒಡೆಯ ಮತ್ತು ವಿಜಯಪ್ಪ ಒಡೆಯರ ಕೈಯಲ್ಲಿಯೇ ಮಂಗಳೂರು-ಬಾರಕೂರು ರಾಜ್ಯಗಳು ಉಳಿಯುತ್ತವೆ ಎಂಬುದು ಲಕ್ಷ್ಯ ಸಂಗತಿ.

3. ಹೊಸಾಳ, ನಿಲವಾರ, ಗಂಗಾವತಿ, ಆನೆಗೊಂದಿ, ಹಿಂದೂಪುರ, ಕಂಚಿ, ಹಂಪಿ, ಚಿತ್ತೂರು, ಗುತ್ತಿ, ಕೋಟೇಶ್ವರ, ಪುಲಿವೆಂಡ್ಲ, ಸಾಗರ, ಸರಗೂರು, ಉಡುಪಿ, ಕಡೂರು, ಗಾಜನೂರು, ಮುಂತಾದ ಸ್ಥಳಗಳಲ್ಲಿ ದೊರೆತಿರುವ ಈ ವಂಶೀಯರ ಶಾಸನಗಳು ಅವರ ಧಾರ್ಮಿಕ ನಿಷ್ಠೆ-ಸಹಿಷ್ಣುತೆ, ಶೈಕ್ಷಣಿಕ ಆಸಕ್ತಿ, ಸಾರ್ವಜನಿಕ ಕಾರ್ಯಗಳನ್ನು ಸುಸೂತ್ರವಾಗಿ ನಿರ್ವಹಿಸುವ ಭದ್ರತೆಗಳನ್ನು ಮತ್ತು ಅಧಿರಾಜತ್ವದ ಬಗೆಗಿನ ಕಡುನಿಷ್ಠೆಯನ್ನು ಬಿಂಬಿಸುತ್ತವೆ.

ಒಟ್ಟಾರೆಯಾಗಿ ಮೊದಲನೆಯ ಬೈಚಯದಂಡನಾಯಕ ಮತ್ತು ಅವನ ವಂಶೀಯರ ಶಾಸನಗಳು ನಮ್ಮ ನಾಡಿನ ಸಾಂಸ್ಕೃತಿಕ ಮತ್ತು ರಾಜಕೀಯ ಚರಿತ್ರೆಗೆ ಅವರ ಕೊಡುಗೆಗಳನ್ನು ಸ್ಪಷ್ಟವಾಗಿ ತಿಳಿಸುತ್ತವೆ.



ಅಡಿಟಿಪ್ಪಣಿಗಳು

1. *ARSIE, 1928-29, Sl. No. 262.*
2. *ಅದೇ, 1928-29, Sl. No. 292.*
3. *ಅದೇ, 1931, Sl. No. 284.*
4. *ಅದೇ, 1929-30, Sl. No. 583.*
5. *Inscriptions of Vijayanagara Rulers, (Eds.) Srinivasa Ritti, B.R. Gopal, ICHR, New Delhi, Part-2, Vol. 1, Ins. No. 45.*
6. ಡಾ. ಕೆ. ವಸಂತಲಕ್ಷ್ಮಿ, ಸಖರಾಯಪಟ್ಟಣದ ಅಪ್ರಕಟಿತ ನಿಷಧಿ ಶಾಸನ, ಇ.ದ.-25, 2010, ಪು. 33-36.
7. *ಕನ್ನಡ ವಿ.ವಿ. ಶಾಸನ ಸಂಪುಟ-2,* ಕೊಪ್ಪಳ, ಗಂಗಾವತಿ, 21.
8. *Epigraphia Indica, Vol. VII, pp. 115-116.*
9. *SII, IX, Part 2, 142*
10. *ARIE, 1970, 71, Sl. No. 210.*
11. *ಕ.ವಿ.ವಿ.ಶಾ.ಸಂ.-3,* ಹಂಪಿ.
12. *E.I., Vol. VII, p. 116.*
13. *ARIE, 1928-29, Sl. No. 497, 499*
14. ಎ.ಕ., ಸಂಪುಟ 15, ಹೊಸನಗರ-114, ಮೈಸೂರು ವಿಶ್ವವಿದ್ಯಾನಿಲಯ.
15. *ARSIE - 1926, Sl.No. 306.*
16. *SII, XVI, No. 9.*
17. *B.R. Gopal (Ed.), Vijayanagara Inscriptions, Vol. 4, DAM, Mysore, 1996, AP-121.*
    Bellikoth Ramachandra Sharma (Ed.), Nanartha Rathnamala of Irugappa Dandadhinatha, Deccan College, Poona, 1954
18. *B.R. Gopal, Vijayanagara Inscriptions, Vol. 2, KN 980, DAM, Mysore, 1986.*
19. *ಅದೇ, KN. 1085, 1086.*
20. *ಅದೇ, KN. 1099, 1100, 1101, 1104, 1105.*
21. *ಅದೇ, KN. 1023, 1025.*
22. *Inscriptions of Vijayanagara Rulers, Vol. 1, Part 2, Ins. No. 625.*
23. ಎ.ಕ., ಸಂಪುಟ 15, ಸಾಗರ-95, ಮೈಸೂರು ವಿಶ್ವವಿದ್ಯಾನಿಲಯ.
24. *Inscriptions of Vijayanagara Rulers, Vol. I, Part 3, Ins. No. 380.*
25. ಅದೇ, 383.
26. ಎ.ಕ., ಸಂ. 9, ಬೇಲೂರು-90, ಮೈಸೂರು ವಿಶ್ವವಿದ್ಯಾನಿಲಯ.
27. *ARIE - 1928-29, Sl. No. 471.*
28. ಎ.ಕ., ಸಂ. 3, ಹೆಗ್ಗಡದೇವರಕೋಟೆ-91; *B.R. Gopal, Vijayanagara Inscriptions, Vol. 3, KN-1760.*
29. *Inscriptions of Vijayanagara Rulers, Vol. 1, Part-4, Ins. No. 609.*

30. ಎ.ಕ., ಸಂ. 9, ಸಕಲೇಶಪುರ–56, ಮೈಸೂರು ವಿಶ್ವವಿದ್ಯಾನಿಲಯ.
31. ಡಾ॥ ಡಿ.ವಿ. ಪರಮಶಿವಮೂರ್ತಿ (ಸಂ.), *ಪ್ರೌಢದೇವರಾಯನ ಶಾಸನಗಳು*, ಕನ್ನಡ ವಿಶ್ವವಿದ್ಯಾನಿಲಯ, 2007, ಶಾ.ಸಂ. 166.
32. *Inscriptions of Vijayanagar Rulers, Vol. I, Part-2, 231.*
33. *B.R. Gopal, Vijayanagara Inscriptions, Vol. 2, KN 1192.*
34. *ಅದೇ, KN. 1207.*
35. *ಅದೇ, KN. 1077.*
36. *ಅದೇ, KN. 1182.*
37. *ಅದೇ, KN. 1088, 1089, 1090.*
38. *ಅದೇ, KN. 1198.*
39. *ಅದೇ, Vol. 4, AP. 381.*
40. ಎ.ಕ., ಸಂ. 13, ತೀರ್ಥಹಳ್ಳಿ–117, ಮೈಸೂರು ವಿಶ್ವವಿದ್ಯಾನಿಲಯ.
41. *ಪ್ರೌಢದೇವರಾಯನ ಶಾಸನಗಳು*, ಸಂ. ಡಾ॥ ಡಿ.ವಿ. ಪರಮಶಿವಮೂರ್ತಿ, ಕನ್ನಡ ವಿ.ವಿ., ಶಾ.ಸಂ. 20.
42. *ಅದೇ*, 147.
43. *ಅದೇ*, 192
44. *ARIE, 1970-71, Sl. No. 222.*
45. ಎ.ಕ., ಸಂ. 13, ತೀರ್ಥಹಳ್ಳಿ–148, ಮೈಸೂರು ವಿಶ್ವವಿದ್ಯಾನಿಲಯ.
46. *Inscriptions of Vijayanagara Rulers, Vol. 1, Part 4, Ins. No. 532.*
47. ಎ.ಕ., ಸಂ. 13, ತೀರ್ಥಹಳ್ಳಿ–21, ಮೈಸೂರು ವಿಶ್ವವಿದ್ಯಾನಿಲಯ.
48. *Inscriptions of Vijayanagara Rulers, Vol. 1, Part 4, Ins. No. 552.*
49. *ಪ್ರೌಢದೇವರಾಯನ ಶಾಸನಗಳು*, ಶಾ.ಸಂ. 58.
50. *ಅದೇ*, 219.
51. *ಅದೇ*, 252.
52. *ಅದೇ*, 140
53. *Inscriptions of Vijayanagara Rulers, Vol. 1, Part 5, Ins. No. 708.*
54. *ಅದೇ*, 770.
55. ಎ.ಕ., ಸಂ. 13, ತೀರ್ಥಹಳ್ಳಿ–116, 237, 239, ಮೈಸೂರು ವಿಶ್ವವಿದ್ಯಾನಿಲಯ.
56. *ಅದೇ*, 155.
57. *ಅದೇ*, 177
58. *ಅದೇ*, 50
59. ಡಾ. ಡಿ.ವಿ. ಪರಮಶಿವಮೂರ್ತಿ (ಸಂ.), *ಕೃಷ್ಣದೇವರಾಯನ ಶಾಸನಗಳು*, ಸಂ. 1, ಹಂಪಿ, 2010, ಶಾ.ಸಂ. 16.
60. *ARSIE, 1930-31, Sl. No. 340.*
61. *ಕೃಷ್ಣದೇವರಾಯನ ಶಾಸನಗಳು*, ಶಾ.ಸಂ. 23.
62. *ಅದೇ*, 30.
63. *ಅದೇ*, 59.

64. *ಅದೇ,* 63.
65. *ಅದೇ,* 69.
66. *B.R. Gopal, Vijayanagara Inscriptions, Vol. 2, KN-526, KN 1027, 1020.*
67. *ಅದೇ, KN. 976.*
68. *ಅದೇ, KN. 977.*
69. *ಕೃಷ್ಣದೇವರಾಯನ ಶಾಸನಗಳು,* ಶಾ.ಸಂ. 112.
70. *ಅದೇ,* 115.
71. *ಅದೇ,* 114.
72. *SII, IX, pl. II, No. 511.*

72ಎ. *ಕೃಷ್ಣದೇವರಾಯನ ಶಾಸನಗಳು,* ಶಾ.ಸಂ. 120

73. *ಅದೇ,* 125
74. *ARSIE - 1953-54, Sl. No. 333.*
74. *ಕೃಷ್ಣದೇವರಾಯನ ಶಾಸನಗಳು,* ಶಾ.ಸಂ. 132.

ಆಧಾರ ಗ್ರಂಥಗಳು

1. ಡಾ. ಸೂರ್ಯನಾಥ ಕಾಮತ್, *ಕರ್ನಾಟಕದ ಸಂಕ್ಷಿಪ್ತ ಇತಿಹಾಸ,* ಜೂಪಿಟರ್ ಬುಕ್ಸ್, ಬೆಂಗಳೂರು ಮತ್ತು ಇತರೆಡೆಗಳು, 1999.
2. ಡಾ. ಕೆ.ವಿ. ರಮೇಶ್, *ತುಳುನಾಡಿನ ಇತಿಹಾಸ,* ಗೀತ ಬುಕ್ ಹೌಸ್, ಮೈಸೂರು, 1968.
3. *Tirupati Devasthanam's Inscriptions, Vols 1 to 6, Edited by Pandit V. Vijayaraghavacharya, Tirupati.*
4. *Nanartha Ratnamala of Irugapa Dandadhinatha, Critically edited by Bellikoth Ramachandra Sharma, Deccan College Post Graduate and Research Institute, Poona, 1954.*

25. ವಿಜಯನಗರ ಕಾಲದ ಭೂಹಿಡುವಳಿ ವ್ಯವಸ್ಥೆ

ಡಾ॥ ಎಚ್.ಈ. ಬಸವರಾಜಪ್ಪ

ವಿಜಯನಗರ ಅರಸರ ಕಾಲಾವಧಿಯ ಭೂಹಿಡುವಳಿ ವ್ಯವಸ್ಥೆ ಕುರಿತು ಪ್ರಸ್ತುತ ಲೇಖನದಲ್ಲಿ ವಿವೇಚಿಸಲಾಗಿದೆ. ದಕ್ಷಿಣ ಭಾರತದ ರಾಜಕೀಯ, ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ವ್ಯವಸ್ಥೆಯನ್ನು ರೂಪಿಸುವಲ್ಲಿ ವಿಜಯನಗರದ ಅರಸರು ಪ್ರಮುಖ ಪಾತ್ರವಹಿಸಿದರು. ವಿಜಯನಗರ ಕಾಲದ ಆಕರಗಳು ಮತ್ತು ಶಾಸನಗಳು ಆ ಕಾಲದ ಭೂಹಿಡುವಳಿ ವ್ಯವಸ್ಥೆ ಬಗ್ಗೆ ಸ್ಪಷ್ಟವಾದ ಚಿತ್ರಣವನ್ನು ನೀಡುವುದಿಲ್ಲ. ವಿಜಯನಗರ ಕಾಲಾವಧಿಯಲ್ಲಿ ಹಿಂದಿಗಿಂತ ಹೆಚ್ಚಿನ ಸ್ವಂತ ಭೂಮಿಯನ್ನು ಹೊಂದುವ ಪ್ರಕ್ರಿಯೆಗಳು ಆರಂಭವಾದವು. ಕಾರಣ ವೃತ್ತಿ ಕಸಬುಗಳು ಸಹ 14ನೇ ಶತಮಾನದ ನಂತರ ತಮ್ಮ ಮಹತ್ವ ಕಳೆದುಕೊಳ್ಳಲಾರಂಬಿಸಿದವು. ಪ್ರತಿಯೊಬ್ಬ ವ್ಯಕ್ತಿಯೂ ತನ್ನದೇ ಆದ ಸ್ವಂತ ಭೂಮಿಯನ್ನು ಹೊಂದಲು ಆಸೆಪಡುತ್ತಿದ್ದುದು ಅಂದಿನ ಸಹಜ ಬೆಳವಣಿಗೆಯಾಗಿತ್ತು. ಹೀಗಾಗಿ ಪ್ರತಿಯೊಬ್ಬ ವ್ಯಕ್ತಿಯೂ ಸ್ವಂತ ಭೂಮಿ ಹೊಂದಲು ಪ್ರಯತ್ನಿಸಿದನು. ಭೂಮಿಯನ್ನು ಹೊಂದುವುದು ಸಮಾಜದಲ್ಲಿ ಗೌರವದ ಪ್ರಶ್ನೆಯೂ ಆಗಿತ್ತು. ಭೂಮಿ ಆರ್ಥಿಕ ವ್ಯವಸ್ಥೆಯ ಒಂದು ಮಾರಾಟದ ವಸ್ತುವಾಗಿತ್ತು. ಅಂದಿನ ಕಾಲದಲ್ಲಿ ಯಾವ ರೀತಿಯ ಭೂಮಾಲೀಕತ್ವ ಅಸ್ತಿತ್ವದಲ್ಲಿತ್ತು ಎಂದು ವಿವರಿಸುವುದು ಕಷ್ಟದ ವಿಚಾರವೇ ಆಗಿದೆ. ಕಮ್ಮಟ ಎಂದರೆ ಕೃಷಿ ಭೂಮಿ ಎಂದಾಗುತ್ತದೆ. ರಾಜ್ಯದ ಕಾಡುಪ್ರದೇಶ, ಬರಡು ಭೂಮಿ, ಕೃಷಿಯೋಗ್ಯವಾದ ಎಲ್ಲಾ ಭೂಮಿ ಅರಸನಿಗೆ ಸೇರಿತ್ತು. ಭೂಮಿಯನ್ನು ಮಾರಾಟ ಮಾಡುವ, ದಾನ ನೀಡುವ ಹಾಗೂ ಕಾಣಿಕೆ ರೂಪದಲ್ಲಿ ಕೊಡುವ ಹಕ್ಕು ಪ್ರಾಪ್ತವಾಗುವುದು ಒಡೆತನ ಸ್ಥಾಪಿಸಿದಾಗ ಮಾತ್ರ. ಭೂಮಿಯ ಮೇಲೆ ಒಡೆತನವಿಲ್ಲದೆ ಮಾರಾಟ ಮಾಡುವುದು ಅಪರಾಧ ಹಾಗೂ ಅದು ಸಾಧ್ಯವಿರಲಿಲ್ಲ. ವಿಜ್ಞಾನೇಶ್ವರರ ಮಿತಾಕ್ಷರಾದಲ್ಲಿ ಇದೆ ಅಭಿಪ್ರಾಯವಿದೆ. ಬರ್ಟನ್ ಸ್ಟೈನ್ ವಿಜಯನಗರದಲ್ಲಿ "ಸೆಗ್‌ಮೆಂಟರಿ ಸ್ಟೇಟ್" ಎನ್ನುವ ರಾಜ್ಯ ವ್ಯವಸ್ಥೆ ಇತ್ತು ಎಂದು ಚರ್ಚಿಸಿದ್ದಾರೆ. ವಿಜಯನಗರ ಕಾಲದ ಎಲ್ಲಾ ತರಿ, ಖುಷ್ಕಿ, ಬಾಗಾಯ್ತ ಭೂಹಿಡುವಳಿಗಳಿಗೆ ಸಂಬಂಧಿಸಿದ ಕೃಷಿ ಹಕ್ಕುಗಳು, ನೀರಾವರಿ ಸೌಲಭ್ಯಗಳು, ನದಿಗಳು, ತೊರೆಗಳು, ಕೆರೆಗಳು ಇತ್ಯಾದಿಗಳ ಹಕ್ಕನ್ನು ನೀಡಲಾಗಿತ್ತು. ಉಂಬಳಿ ಅಥವಾ ತೆರಿಗೆರಹಿತ ಆಸ್ತಿ ಅಥವಾ ಗ್ರಾಮ, ಕೊಡಗಿ ಅಥವಾ ಸಾಮಾನ್ಯವಾದ ನೆಲದ ಉಡುಗೊರೆ, ಜೋಡಿ ಅಥವಾ ಸರಕಾರವು ತೆರಿಗೆಯನ್ನು ಮನ್ನಾ ಮಾಡಿದ ಭೂಮಿ, ಸರ್ವಮಾನ್ಯ ಅಥವಾ ಎಲ್ಲಾ ತೆರಿಗೆಗಳಿಂದ ಮುಕ್ತವಾಗಿ ನೀಡಲಾಗಿತ್ತು. ವಿಜಯನಗರ ಕಾಲದ ಬಹುತೇಕ ದಾನಶಾಸನಗಳು ದೇವಾಲಯ ಅಥವಾ ಅಗ್ರಹಾರಗಳಿಗೆ ದಾನ ನೀಡಿದ ಬಗ್ಗೆ ವಿವರ ನೀಡುತ್ತವೆ. ಈ ಮೂಲಕ ರಾಜಮನೆತನಕ್ಕೆ ಬ್ರಾಹ್ಮಣರ ಬೆಂಬಲವನ್ನು ಖಚಿತಪಡಿಸಲಾಗಿತು. ದಾನಗಳನ್ನು ಆನುವಂಶಿಕವಾಗಿ ಅನುಭವಿಸಬಹುದಾಗಿತ್ತು. ಭೂಮಾಲೀಕರಾಗಿ ಅವರು ಆಡಳಿತದ ಮತ್ತು ಕಂದಾಯದ ಹಕ್ಕುಗಳೊಂದಿಗೆ ಸ್ವಯಮಾಡಳಿತವನ್ನು ಅನುಭವಿಸುತ್ತಿದ್ದರು. ಪೋರ್ಚುಗೀಸ್ ಪ್ರವಾಸಿ ನ್ಯೂನಿಜ್ ಹೀಗೆ ಬರೆಯುತ್ತಾನೆ "ನೆಲವೆಲ್ಲವೂ ರಾಜನಿಗೆ ಸೇರಿದೆ. ಅವನಿಂದ ದಂಡನಾಯಕರು ಅದನ್ನು ಪಡೆದು ರೈತರಿಗೆ ವಹಿಸಿಕೊಡುತ್ತಾರೆ. ರೈತರು ದಂಡನಾಯಕರಿಗೆ ಉತ್ಪನ್ನದ ಹತ್ತನೆ ಒಂಬತ್ತು ಪಾಲನ್ನು ಸಲ್ಲಿಸುತ್ತಾರೆ, ಅದರಲ್ಲಿ ಅವರು ರಾಜನಿಗೆ ಅರ್ಧ ತೆರಿಗೆ ಸಲ್ಲಿಸುತ್ತಾರೆ" ಎಂದಿದ್ದಾನೆ. ಐದು ಬಗೆಯ ಭೂಹಿಡುವಳಿ ವ್ಯವಸ್ಥೆ ಜಾರಿಯಲ್ಲಿತ್ತು. ಅವುಗಳೆಂದರೆ ಗೇಣಿ, ಗುತ್ತಿಗೆ, ಸಿದ್ದಯ, ವರ, ನಿಗದಿ – ಈ ವ್ಯವಸ್ಥೆಗಳು ಒಂದೊಂದು ಭಾಗದಲ್ಲಿ ಒಂದೊಂದು ರೀತಿಯಲ್ಲಿದ್ದವು.

ವಿಜಯನಗರ ಕಾಲಾವಧಿಯಲ್ಲಿಯ ಭೂಹಿಡುಳಿಗಳ ಹಕ್ಕು ಒಂದು ಪ್ರಬಲ ಜಾತಿ ಅಥವಾ ಸಮುದಾಯದೊಂದಿಗೆ ಹೊಂದಿಕೊಂಡಿರುತ್ತಿತ್ತು. ಒಂದೊಂದು ಭಾಗದಲ್ಲಿ ಸಾಮಾನ್ಯವಾಗಿ ಒಂದೇ ಜಾತಿಗೆ ಸೇರಿದವರಾಗಿರುತ್ತಿದ್ದರು. ಒಂದು ಪ್ರಬಲ ರೈತ ಕುಟುಂಬವು ಅವರ ಗಂಡುಮಕ್ಕಳಿಗೆ ತಮ್ಮ ಭೂಹಿಡುವಳಿಗಳನ್ನು ಸಮನಾಗಿ ಪಾಲು ಮಾಡಿ ಕೊಡುತ್ತಿದ್ದರು. ಹೀಗಾಗಿ ಸಣ್ಣ ಸಣ್ಣ ಭೂಹಿಡುವಳಿಗಳಾಗಿ ಪರಿವರ್ತನೆಯಾಗುತ್ತಿದ್ದವು. ಮತ್ತೊಂದು ಗಮನ ಸೆಳೆಯುವ ಸಂಗತಿಯೆಂದರೆ ಭೂಮಿಯನ್ನು ಮಾರಾಟ ಮಾಡಬಹುದಾಗಿತ್ತು. ಒಬ್ಬನೇ ವ್ಯಕ್ತಿ ಹಲವು ಸಣ್ಣ ಭೂಹಿಡುವಳಿದಾರರಿಂದ ಭೂಮಿಯನ್ನು ಕೊಂಡುಕೊಂಡಿರುವ ಉದಾಹರಣೆಗಳು ದೊರಕುತ್ತವೆ. ಪ್ರಬಲ ಭೂಹಿಡುವಳಿದಾರರು ಸ್ಥಳೀಯವಾಗಿ ಬಹಳ ಪ್ರಬಲವಾಗಿದ್ದರು. ಇವರು ಸ್ಥಳೀಯ ಅಮರನಾಯಕರೊಂದಿಗೂ ಸಂಬಂಧ ಹೊಂದಿದ್ದರು. ವಿಜಯನಗರ ಕಾಲವಧಿಯಲ್ಲಿ ಕೆಲವು ಕಡೆ ಸ್ವತಂತ್ರ ರೈತರಿಂದ ಕೂಡಿದ ಗ್ರಾಮಗಳು ಇದ್ದವು.

ವಿಜಯನಗರಕಾಲದ ಹಲವಾರು ಶಾಸನಗಳು ಬ್ರಾಹ್ಮಣರಿಗೆ ಅಥವಾ ಅಗ್ರಹಾರಗಳಿಗೆ ಮತ್ತು ದೇವಾಲಯಗಳಿಗೆ ದಾನ ನೀಡಿದ ಮಾಹಿತಿ ನೀಡುತ್ತವೆ. ಹೀಗೆ ಭೂಮಿಯನ್ನು ಪಡೆದ ವ್ಯಕ್ತಿ ಅಥವಾ ಸಂಸ್ಥೆಯೆ ಆ ಭೂಮಿಯ ಮೇಲಿನ ಒಡೆತನವನ್ನು ಹೊಂದಿರುತ್ತಿತ್ತು. ಬ್ರಾಹ್ಮಣರಿಗೆ ದಾನವಾಗಿ ನೀಡುವ ಭೂಮಿಯನ್ನು ಬ್ರಹ್ಮದೇಯ ಎಂಬ ಹೆಸರಿನಿಂದ ಕರೆಯಲಾಗಿತ್ತು. ಅದೇ ರೀತಿ ಹಂಪೆ ವಿರೂಪಾಕ್ಷ ದೇವಾಲಯವು ಸೇರಿದಂತೆ ಹಲವು ಭೂದಾನ ಪಡೆದ ದೇವಾಲಯಗಳು ಭೂಮಾಲೀಕರಂತೆ ವರ್ತಿಸುತ್ತಿದ್ದವು. ದೇವಾಲಯಗಳು ಧಾರ್ಮಿಕ ಜೀವನದ ಕೇಂದ್ರಗಳಾಗಿದ್ದು ಸಾಮಾಜಿಕ, ರಾಜಕೀಯ, ಆರ್ಥಿಕ ಹಾಗೂ ಸಾಂಸ್ಕೃತಿಕ ಕಾರ್ಯಚಟುವಟಿಕೆಯಲ್ಲಿಯೂ ಪ್ರಭಾವಶಾಲಿ ಪಾತ್ರ ನಿರ್ವಹಿಸುತ್ತಿದ್ದವು. ಅದರಲ್ಲಿಯೂ ತಿರುಪತಿ ದೇವಾಲಯದ ಪಾತ್ರ ಅಗಾಧವಾಗಿತ್ತು.

ವಿಜಯನಗರ ಕಾಲದ ಭೂದಾನ ಶಾಸನಗಳಲ್ಲಿ ಆಗ ಸೇನಾಧಿಕಾರಿಗಳ ವಿಶಿಷ್ಟ ವರ್ಗವೊಂದು ಅಸ್ತಿತ್ವದಲ್ಲಿದ್ದುದಕ್ಕೆ ಸಾಕಷ್ಟು ವಿವರಗಳು ದೊರೆಯುತ್ತವೆ. ವಿಜಯನಗರದ ಅರಸರು ಸೈನ್ಯ ಸೇವೆಗಾಗಿ ಭೂ ಪ್ರದೇಶಗಳನ್ನು ನೀಡಿದರು. ಈ ಅಮರನಾಯಕರು ಸಾಮ್ರಾಜ್ಯದ ವ್ಯವಹಾರಗಳಲ್ಲಿ ಮುಖ್ಯವಾದ ಪಾತ್ರವನ್ನು ವಹಿಸತೊಡಗಿದರು. ಅಲ್ಲದೆ ತಮ್ಮ ಅಧಿಕಾರವ್ಯಾಪ್ತಿಯ ಪ್ರದೇಶದಲ್ಲಿ ಕಾನೂನು–ಸುವ್ಯವಸ್ಥೆಯ ಪಾಲನೆಯು ಸೇರಿತ್ತು. ಇದು ಮತ್ತೊಂದು ರೀತಿಯಲ್ಲಿ ಪ್ರಬಲ ಭೂಹಿಡುವಳಿ ವ್ಯವಸ್ಥೆಯ ನಿಯಂತ್ರಣದಲ್ಲಿ ಕೃಷಿ ಸ್ಪಷ್ಟವಾಗಿ ನಿಯಂತ್ರಿಸಲ್ಪಟ್ಟಿತ್ತು. ಕೆಳದಿ ರಾಜ್ಯದಲ್ಲಿ ಗಮನಿಸಬಹುದಾದ ಇನ್ನೊಂದು ಬೆಳವಣಿಗೆಯೆಂದರೆ ಷರತ್ತಿನ ಮೇಲೆ ಭೂಮಾನ್ಯಗಳನ್ನು ಕೊಡುವ ಪ್ರಕ್ರಿಯೆ. ಶಿವಮೊಗ್ಗ ಮತ್ತು ದಕ್ಷಿಣಕನ್ನಡ ಪ್ರದೇಶಗಳಲ್ಲಿ ತಮಗೆ ಅಧೀನರಾದ ನಾಯಕರನ್ನು ಅವರು ಸ್ಥಾಪಿಸಿದರು. ಅವರು ಕೆಳದಿಯ ಅರಸರಿಗೆ ವಿಧೇಯರಾಗಿದ್ದರು. ಕೆಳದಿಯರಸರು ವಿಜಯನಗರಕ್ಕೆ ವಿಧೇಯರಾಗಿದ್ದರು.

ಶಾಸನಗಳು ಭೂಮಿಯ ದಾನವನ್ನು ಅಷ್ಟ – ಭೋಗ – ತೇಜ – ಸ್ವಾಮ್ಯವನ್ನೂ (ಎಂಟು ಬಗೆಯ ಅನುಭೋಗಗಳ ಹಕ್ಕು) ಉಡುಗೊರೆ, ಮಾರಾಟ, ವಿನಿಮಯ ಮತ್ತು ಅಡಮಾನಗಳೆಂಬ ವ್ಯವಹಾರ ಚತುಷ್ಟಿಗಳನ್ನು (ನಾಲ್ಕು ಬಗೆಯ ವ್ಯವಹಾರಗಳು) ಹೇಳುತ್ತವೆ. ದಾನ ಮಾಡುವವನು ಮೊದಲು ಖಜಾನೆಗೆ ಹಣ ಕಟ್ಟಿ ತಾನು ಅದನ್ನು ಕೊಂಡುಕೊಳ್ಳುತ್ತಿದ್ದನು. ಆ ಮೇಲೆ ರಾಜನ ಅನುಮತಿಯನ್ನು ಪಡೆದು ಆ ಭೂಮಿಯನ್ನು ದಾನ

ಮಾಡುತ್ತಿದ್ದನು. ಉದಾಹರಣೆಗೆ ಅಚ್ಯುತರಾಯನ ಕಾಲದಲ್ಲಿ ಹೊಳಲ್ಕೆರೆ ಪ್ರದೇಶದಲ್ಲಿ ಹಡಪ ಬೈಯಪೇಂದ್ರ ನಾಯಕ ಒಬ್ಬ ಅಮರನಾಯಕನಾಗಿದ್ದನು. ಅವನು ವಿದ್ವಾಂಸರಾಗಿದ್ದ ಬ್ರಾಹ್ಮಣರಿಗೆ ಸ್ವಲ್ಪ ಭೂಮಿಯನ್ನು ದಾನವಾಗಿ ಕೊಡಬೇಕೆಂದು ಅರಸ ಅಚ್ಯುತರಾಯನ ಅನುಮತಿಯನ್ನು ಕೋರಿದನು. ಅವನು ಅನುಮತಿಯನ್ನು ನೀಡಿದನು. ಈ ವರ್ಗದ ಅಮರನಾಯಕರು ಯಾವುದೇ ಭೂದಾನ ಮಾಡುವ ಮೊದಲು ಅರಸನ ಅನುಮತಿಯನ್ನು ಪಡೆಯ ಬೇಕಾಗಿದ್ದುದನ್ನು ಇದು ತೋರಿಸುತ್ತದೆ.

ಕೆರೆಗಳ ನಿರ್ಮಾಣ ಹಾಗೂ ಅವುಗಳ ಉಸ್ತುವಾರಿಯ ಬಗ್ಗೆ ನೂರಾರು ಶಾಸನಗಳನ್ನು – ವಿಜಯನಗರದ ಅರಸರು ಸೇರಿದಂತೆ ಅವರ ಸಾಮಂತರು ನೀರಾವರಿ ಕಾರ್ಯಗಳಿಗೆಂದೇ ಕೆರೆಗಳನ್ನು ನಿರ್ಮಿಸಿ ನೀರಾವರಿಗೆ ಪ್ರೋತ್ಸಾಹಿಸಿದರು. ಇಲ್ಲಿ ಸಹ ಪ್ರಬಲ ಭೂಹಿಡುವಳಿದಾರರು ಅಥವಾ ಸಮಾಜದ ಉನ್ನತ ವರ್ಗ ಪ್ರಮುಖ ಪಾತ್ರವಹಿಸಿತ್ತು.

ಸಾಮಾನ್ಯವಾಗಿ ಕೆರೆಯನ್ನು ಕಟ್ಟಿಸಿದನಂತರ ಆ ಕೆರೆಯನ್ನು ಕಟ್ಟಿಸಿದವರಿಗೆ, ಆ ಕೆರೆಯ ಆಯಕಟ್ಟಿನ ಪ್ರದೇಶದಲ್ಲಿ ಭೂಹಿಡುವಳಿಯನ್ನು ನೀಡುತ್ತಿದ್ದುದು ವಾಡಿಕೆಯಲ್ಲಿತ್ತು. ಸಾಮಾನ್ಯವಾಗಿ ಮೂರರಲ್ಲಿ ಒಂದು ಭಾಗವು ಅವರಿಗೆ ಸೇರುತ್ತಿತ್ತು. ಕೆಲವು ನಿದರ್ಶನಗಳಲ್ಲಿ ಕೆರೆಯು ದೇವಸ್ಥಾನಕ್ಕೆ ಒಳಪಟ್ಟಿದ್ದರೆ, ಆ ಕೆರೆಯ ಆಯಕಟ್ಟಿನ ಉತ್ಪನ್ನಗಳು ದೇವಾಲಯಕ್ಕೆ ಸೇರುತಿದ್ದವು. ತ್ರಯಂಬಕಪುರದ ಶಾಸನವು ಈ ನಿಟ್ಟಿನಲ್ಲಿ ಬೆಳಕು ಚೆಲ್ಲುತ್ತದೆ. ಈ ಶಾಸನದಲ್ಲಿ ಒಟ್ಟು ಹದಿನೆಂಟು ಕೆರೆಗಳ ಆಯಕಟ್ಟಿನ ಉತ್ಪನ್ನಗಳು ತ್ರಯಂಬಕೇಶ್ವರ ದೇವರ ಸೇವೆಗೆ ಸಲ್ಲುತ್ತಿತ್ತು. ಕೆರೆಯನ್ನು ಕಟ್ಟಿದ ನಂತರ ಕೆಲವೊಂದು ಸಂದರ್ಭಗಳಲ್ಲಿ ಮಾರುವ ಹಕ್ಕು ಇತ್ತೆಂದು ತಿಳಿದು ಬರುತ್ತದೆ. ಆಂಧ್ರ ಪ್ರದೇಶದ ನೆಲ್ಲೂರು ಜಿಲ್ಲೆಯ ವೆಂಕಟಾಪೂರದ ಶಾಸನದಲ್ಲಿ ಇದರ ವಿವರಗಳು ದೊರಕುತ್ತವೆ. ಇದೊಂದು ಕ್ರಯ ಶಾಸನವಾಗಿರುವುದು ಮುಖ್ಯವಾದ ಸಂಗತಿಯಾಗಿದೆ.

ಕ್ರಿ.ಶ. 1410ರ ಶಾಸನವು ಕೆರೆ, ಕಾಲುವೆ ಮತ್ತು ಬಾವಿಗಳ ರಿಪೇರಿ ಕಾರ್ಯದ ವೆಚ್ಚವನ್ನು ಅಗ್ರಹಾರದ ಬ್ರಾಹ್ಮಣರು ಹಾಗೂ ದೇವಾಲಯದವರು ನಿರ್ವಹಿಸಿದರು.

ಕೆರೆಯನ್ನು ಕಟ್ಟಿಸಿದವನು ಬೋಯವೀಡು ಮತ್ತು ಕುಡುಚಿಲಪಾಡು ಎಂಬ ಗ್ರಾಮದಲ್ಲಿ ದಸವಂದದ ಪ್ರಕಾರವಾಗಿ ಕಟ್ಟಲಾದ ಕೆರೆಯನ್ನು ಬುಚನ ಬೋಯಡು ಎಂಬುವವನಿಗೆ ಆ ಕೆರೆಗೆ ಸಂಬಂಧಿಸಿದ ಎಲ್ಲಾ ಸ್ವಾಮ್ಯವನ್ನು ಒಳಗೊಂಡು ಮಾರುತ್ತಾನೆಂದು ಕ್ರಿ.ಶ. 1439ರ ಶಾಸನವು ಹೇಳುತ್ತದೆ. [ಎಫ್ ಕಾರ್ನ (ಹಳೆಯ) ಸಂ, *ಜೆಯು.* 149]

ಕ್ರಿ .ಶ. 1579ರ ಶಾಸನವು 'ಕೆರೆಯ ಕಟ್ಟುಗೂಡಿಗೆ" ಭೂಮಿಯನ್ನು ಕ್ರಷ್ಣಮನಾಯಕನೆಂಬ, ಓರ್ವ ಅಧಿಕಾರಿ ಕೋನಪ್ಪಗೌಂಡನಿಗೆ ನೀಡಿದ್ದನ್ನು ತಿಳಿಸಿದೆ. ಬೆಂಗಳೂರು ಜಿಲ್ಲೆಗೆ ಸೇರಿದ ಕ್ರಿ.ಶ. 1416ರ ಮತ್ತೊಂದು ಪ್ರಮುಖ ದಾಖಲೆಯು ಕೃಷ್ಣದೇವರಾಯನ ಕಾಲದಲ್ಲಿ ಕೇತಗೌಂಡನಿಗೆ 'ಕಟ್ಟುಗುತ್ತಿಗೆ ಮತ್ತು ಗೌಂಡಗೂಡಿಗೆ' ದಾನಗಳನ್ನು ನೀಡಿದ ಬಗೆಗೆ ಪ್ರಸ್ತಾಪಿಸಿದೆ. ಮೊದಲನೆಯದು ಭೂಮಿ ನೀಡಿದ್ದರ ಬಗೆಯದಾಗಿದ್ದರೆ, ಎರಡನೆಯದು ಹಳ್ಳಿಯ ಗೌಡಿಕೆಗೆ ಸಂಬಂದಿಸಿದೆ. ಈ ಎರಡೂ ಗೌರವಗಳು ಕೇತಗೌಡನಿಗೆ, ಸ್ಥಳೀಯ ಆಡಳಿತಗಾರನಾಗಿದ್ದ ಗೋಪನಾಯಕನ ಹೆಸರಿನಲ್ಲಿ ಕಟ್ಟಿದ ಗೋಪಸಮುದ್ರ ಕೆರೆಯನ್ನು ಕಟ್ಟಿಸಿದ್ದಕ್ಕೆ ನೀಡಲಾಗಿದೆ. ಈ ದಾನವನ್ನು

ದಾನಿಯ ಹೆಂಡತಿ ಹಾಗೂ ಮಕ್ಕಳ ಸಮ್ಮತಿಯನ್ನು ಪಡೆದೇ ನೀಡಲಾಯಿತೆಂದು ವಿವರಿಸಲಾಗಿದೆ. ಈ ದಾಖಲೆಯು ತಿಳಿಸುವಂತೆ ಹೊಸ ಹಳ್ಳಿಯೊಂದು ನಿರ್ಮಾಣಗೊಂಡು ಜನವಾಸಕ್ಕೆ ಅನುಕೂಲ ಮಾಡಲಾಗಿತ್ತು. ಈ ಹಳ್ಳಿಯ ಗೌಡಿಕೆಯನ್ನು ಅವನಿಗೆ ನೀಡಿದ ಬಗೆಗೆ ವಿವರವಿದೆ.

ಕೋಲಾರ ಜಿಲೆಯ ರಾಜಗುಂಡಲ "ಹಳ್ಳಿಯ ಕಟ್ಟುಗೊಡಿಗೆ"ಯ ಬಗ್ಗೆ ವಿವರವಾದ ಮಾಹಿತಿ ಇದೆ. ಕ್ರಿ.ಶ. 1497ರಲ್ಲಿ ನರಸಿಂಹ ದೇವಾಲಯದ ದೇವಪ್ಪ ಹಾಗೂ ಕೆರೆಯನ್ನು ಕಟ್ಟಿದ ನರಸಿಂಹ ದೇವನ ಮಧ್ಯೆ ಆದ ಒಪ್ಪಂದವನ್ನೂ ವಿವರಿಸಿದೆ. ಒಪ್ಪಂದದ ಪ್ರಕಾರ ನರಸಿಂಹ ದೇವನು ತನ್ನ ಹಣದಿಂದ, ಮಾವಿನಹಳ್ಳಕ್ಕೆ ಅಡ್ಡಲಾಗಿ ಒಡ್ಡನ್ನು ಹಾಕಿ, ನೂತನವಾದ ಕನ್ಯೆ ಕೆರೆಯನ್ನು ನಿರ್ಮಿಸಬೇಕು ಕೆರೆಯ ಆಯಕಟ್ಟಿನ ಪ್ರದೇಶವನ್ನು ಸಮ ಮಾಡಿ ಯಾವ ಅಡೆತಡೆ ಇಲ್ಲದೆ ನೀರು ಹರಿಯುವಂತೆ ಮಾಡಿದ್ದನ್ನು ಈ ಎಲ್ಲಾ ಕಾರ್ಯಗಳನ್ನು ಮಾಡಿದ್ದಕ್ಕೆ ಮೊದಲಿಗೆ ಆ ಭೂಮಿಯಲ್ಲಿ ಬೆಳೆದ ಫಸಲಿನಲ್ಲಿ 4 ಅಂಶಕ್ಕೆ ಭಾಗೀದಾರನಾಗಿದ್ದನು. ದಸವಂದ ಪದ್ಧತಿಯಂತೆ ಖರ್ಚು ಮಾಡಿದ ಹಣ ತೀರಿಹೋದ ಮೇಲೆ ಕೆರೆಯಿಂದ ಸಾಗು ಮಾಡಿದ ಅ ಭೂಮಿಯಲ್ಲಿ ಮಾತ್ರ ಇವನು ಭಾಗಿದಾರನಾಗಿದ್ದನು. ಆದರೆ ಕೆರೆಯ ಸಮಸ್ತ ಹೊಣೆಗಾರಿಕೆ ಇವನದಾಗಿತ್ತು. ಕೆರೆಯಡಿಯ ಭೂಮಿಯನ್ನು ಉಳುವವ ರೈತರಿಗೂ, ಕೂಲಿಗಾರರಿಗೆ ಅವನು ವಸತಿಗಾಗಿ ಜಮೀನು ನೀಡಬೇಕು. ಅವನು ಇವರಿಗೆ ಯಾವ ಕರವನ್ನು ವಿಧಿಸಬಾರದು. ಮುಂದುವರಿದು ನೀರಾವರಿ ಭೂಮಿಯು ಹೆಚ್ಚಿದಾಗ 3:7 ರಂತೆ ಭಾಗ ಪಡೆಯಬಹುದು ಎಂಬ ಎಲ್ಲಾ ವಿವರಗಳನ್ನು ಈ ಶಾಸನದಲ್ಲಿ ಕಾಣುತ್ತವೆ.

ವಿಜಯನಗರ ಕಾಲದ ಗ್ರಾಮೀಣ ಸಮುದಾಯವು ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ವಿಭಜಿಸಲ್ಪಟ್ಟಿತ್ತು. ವ್ಯವಸಾಯಕ್ಕೆ ಯೋಗ್ಯವಾದ ಭೂಮಿ ಯಥೇಚ್ಛವಾಗಿದ್ದರೂ ಭೂಹಿಡುವಳಿಯ ಒಡೆತನದ ವಿತರಣೆಯಲ್ಲಿ ಹೆಚ್ಚು ಅಸಮಾನತೆಯನ್ನು ಕಾಣಬಹುದು. ವೃತ್ತಿ ಕಸಬು ಅನುಸರಿಸಿ ಬದುಕುತ್ತಿದ್ದ ಹಲವು ಜಾತಿಗಳನ್ನು ಭೂರಹಿತ ರೈತರ ಒಂದು ಚಿಕ್ಕ ವರ್ಗವೆಂದು ಹೇಳಬಹುದು. ಅವರು ಚರ್ಮ ಹದಮಾಡುವವರು, ಕುಂಬಾರರು, ಮಡಿವಾಳರು, ನೇಕಾರರು (ಬಟ್ಟೆಗಳನ್ನು ನೇಯುವವರು), ಬಳೆಗಾರರು, ಬೆಸ್ತರು, ಗಾಣಿಗರು, ಮುಂತಾದವರು ಅಲ್ಲದೆ ಗ್ರಾಮ ಸೇವಾವರ್ಗಕ್ಕೆ ಸಮಾನರಾದಂಥ ಅವರು ಅಲ್ಪಸ್ವಲ್ಪ ಜಮೀನು ಹೊಂದಿದ್ದವರಾಗಿರಬಹುದು ಅಥವಾ ಇಲ್ಲದೇ ಇಲ್ಲದವರಾಗಿರಬಹುದು. ಅವರು ಇತರರ ಜಮೀನಿನಲ್ಲಿ ಕೆಲಸ ಮಾಡಿದುದಕ್ಕೆ ಬೆಳೆದ ಉತ್ಪನ್ನದಲ್ಲಿ ಒಂದಿಷ್ಟು ಪಾಲನ್ನು ಪಡೆಯುತ್ತಿದ್ದರು. ಕೆಲವೊಮ್ಮೆ ಅವರಿಗೆ ಬೇಸಾಯ ಮಾಡಿದ ಜಮೀನಿನ ಪಕ್ಕದಲ್ಲೇ ಬಂಜರು ಭೂಮಿ ಎಂದು ವರ್ಗೀಕರಿಸಿದ್ದ ಭೂಮಿಯಲ್ಲಿ ಅಲ್ಪಸ್ವಲ್ಪ ಭೂಮಿಯನ್ನು ನೀಡಲಾಗಿತ್ತು. ಒಟ್ಟಿನಲ್ಲಿ ಈ ಭೂರಹಿತ ವರ್ಗ ಬಿತ್ತನೆಯ ಮತ್ತು ಕಟಾವಿನ ಸಮಯದಲ್ಲಿ ಕೂಲಿ ಕೆಲಸಗಾರರಂತೆ ಕೃಷಿಭೂಮಿಯಲ್ಲಿ ಕೆಲಸಮಾಡುತ್ತಿದ್ದರು.

ವಿಜಯನಗರ ರಾಜ್ಯದಲ್ಲಿ ಭೂಹಿಡುವಳಿಗಳನ್ನು ಆನುವಂಶಿಕವಾಗಿ ಪಡೆದು ಅನುಭೋಗಿಸುವ ಹಕ್ಕನ್ನು ರೈತರು ಹೊಂದಿದ್ದರು. ಅಂದರೆ ಪ್ರತಿಯೊಬ್ಬ ಭೂಹಿಡುವಳಿದಾರನ ಸ್ವತಂತ್ರವಾದ ಭೂಹಿಡುವಳಿಗಳನ್ನು ಹೊಂದಿದ್ದನು. ಈ ಪ್ರದೇಶದಲ್ಲಿ ಭೂಹಿಡುವಳಿದಾರನು ನಿರ್ದಿಷ್ಟ ಮೊತ್ತದ ತೆರಿಗೆಯನ್ನು ಸರಕಾರಕ್ಕೆ ಸಲ್ಲಿಸುವ ಮೂಲಕ ಭೂಒಡೆತನವನ್ನು ಹೊಂದಿದ್ದನು. ಮೇಲಿನ ಶಾಸನ ಆಕರಗಳನ್ನು ಗಮನಿಸಿದರೆ ವಿಜಯನಗರ ಕಾಲಾವಧಿಯಲ್ಲಿ ಸಮಾಜದ ಒಂದು ವರ್ಗ ಕೆರೆಯ ಹಿಂದಿನ ಫಲವತ್ತಾದ ಭೂಹಿಡುವಳಿಗಳನ್ನು ತಮ್ಮ

ಅಧೀನದಲ್ಲಿ ಇಟ್ಟುಕೊಂಡಿರುವ ಬಗ್ಗೆ ವಿವರಗಳು ಸಿಗುತ್ತವೆ. ಭೂಮಾಲೀಕರು ಸ್ಥಳೀಯ ಸ್ವಯಮಾಧಿಕಾರವನ್ನು ಹೊಂದಿದ್ದರು. ಅರಸರು ಮತ್ತು ರೈತರ ನಡುವೆ ಈ ವರ್ಗ ಕಾಣಿಸಿಕೊಂಡು ಸಮಾಜದಲ್ಲಿ ನಿರ್ಣಾಯಕ ಪಾತ್ರ ವಹಿಸಲಾರಂಭಿಸಿದರು. ವಿಜಯನಗರ ಕಾಲಾವಧಿಯಲ್ಲಿಯು ಹೊಲಗಳಲ್ಲಿ ಕೆಲಸ ಮಾಡುವ ಜೀತದಾಳುಗಳಿಗೆ ಸಮಾಜದಲ್ಲಿ ಅಸ್ತಿತ್ವವೇ ಇರಲಿಲ್ಲ, ಭೂಮಿಯ ಒಡೆಯ ಮತ್ತು ಜೀತದಾಳುವಿನ ಸಂಬಂಧ ಶಾಶ್ವತವಾಗಿರುತ್ತಿತ್ತು. ಇದರಿಂದ ಒಡೆಯನಿಗೆ ವಿಧೇಯರಾದ ಆಳುಗಳು ದೊರಕುತ್ತಲೇ ಇರುವಂತಾಗಿತ್ತು. ಇದು ಭೂ ಒಡೆಯನ ಒಡೆತನವನ್ನು ಇನ್ನುಷ್ಟು ಗಟ್ಟಿಗೊಳಿಸಿತ್ತು. ಜೀತದಾಳುಗಳ ಜೀತವನ್ನು ಶಾಶ್ವತವನ್ನಾಗಿಸಿತ್ತು. ಹೀಗಾಗಿ ಭೂಮಿಯನ್ನು ಕೃಷಿ ಮಾಡಲು ಬಹುಸಂಖ್ಯೆಯ ಕೆಲಸಗಾರರ ಅವಶ್ಯವಿರುತ್ತಿತ್ತು. ಬಹುತೇಕವಾಗಿ ಕೂಲಿಕರರು ಪ್ರಬಲ ಭೂಹಿಡುವಳಿದಾರರ ಭೂಮಿಯಲ್ಲಿ ದುಡಿಯುತ್ತಿದ್ದರು.

ರಾಜನು ಕೊಂಡುಕೊಳ್ಳುವ ಯಾವ ಪ್ರಸ್ತಾಪವೂ ಇಲ್ಲದೆಯೇ, ಬೇಸಾಯದಲ್ಲಿದ್ದ ಹಳ್ಳಿಗಳನ್ನು ಪರಭಾರೆ ಮಾಡಿರುವುದನ್ನು ಹೇಳುವ ಅನೇಕ ಶಾಸನಗಳಿವೆ. ಅಂತಹ ಸಂದರ್ಭಗಳಲ್ಲಿ ಸರಕಾರವು ಅನುಭೋಗಿಗೆ ತನ್ನ ಹಕ್ಕುಗಳನ್ನು ಪ್ರದಾನ ಮಾಡುತ್ತಿತ್ತು. ಖಾಸಗಿ ಸೊತ್ತುಗಳ ಮೇಲೆ ರಾಜರಿಗಿದ್ದ ಹಕ್ಕೆಂದರೆ, ಭೂಹಿಡುವಳಿಗಳ ಉತ್ಪನ್ನದ ರಾಜಭಾಗವನ್ನು ಪಡೆಯುವ ಹಕ್ಕು. ಇತರ ಸಲ್ಲಿಕೆಗಳನ್ನು, ನಿರ್ದಿಷ್ಟಪಡಿಸಿದರೆ, ಕೂಡ ದಾನ ಮಾಡಲಾಗುತ್ತಿತ್ತು. ವಿಜಯನಗರದ ರಾಜ ಹರಿಹರನು ಒಂದಿಷ್ಟು ಭೂಮಿಯನ್ನು ದಾನ ಮಾಡಿದಾಗ, ಆ ಹಳ್ಳಿಯಲ್ಲಿ ಇನ್ನು ಮುಂದೆ ಯಾರು ಪಾವತಿಮಾಡುವ ಕಂದಾಯವನ್ನು ಅನುಭೋಗಿಗೆ ಹಸ್ತಾಂತರಿಸ ಬೇಕಾಗುವುದೊ ಅಂತಹ ಭೂಹಿಡುವಳಿದಾರರ ಪಟ್ಟಿ ತಯಾರಿಸಬೇಕೆಂದು ಸ್ಥಳೀಯ ಅಧಿಕಾರಿಗಳನ್ನು ಕೇಳಿದನು. ಅಂತಹ ಮಾಲೀಕರ ಹೆಸರುಗಳನ್ನು ಶಾಸನವು ಪಟ್ಟಿಮಾಡುತ್ತದೆ. ಮೊದಲು ಸರಕಾರಕ್ಕೆ ಕಂದಾಯ ಪಾವತಿಮಾಡುತ್ತಿದ್ದ ಅವರು ಈ ದಾನದ ಅನಂತರ ಅದನ್ನು ಸ್ವೀಕರಿಸಿದ ಅನುಭೋಗಿಗೆ ಪಾವತಿ ಮಾಡಬೇಕಾಗಿತ್ತು. ಇಲ್ಲಿ ತೆರಿಗೆ ಸಂಗ್ರಹಿಸುವ ಸರಕಾರದ ಹಕ್ಕನ್ನು ಅನುಭೋಗಿಗೆ ವರ್ಗಾಯಿಸಿದಂತಾಯಿತೇ ಹೊರತು ಒಡೆತನವನ್ನಲ್ಲ.

ಭೂದಾನ ನೀಡುವ ಪದ್ಧತಿ ಅರಸರಿಗಷ್ಟೆ ಸೀಮಿತವಾಗಿರಲಿಲ್ಲ. ವಿಜಯನಗರ ಕಾಲಾವಧಿಯಲ್ಲಿ ರಾಣಿಯರು, ಮಹಾಮಂಡಳೇಶ್ವರರು, ಸಾಮಂತರು, ಶ್ರೀಮಂತರು, ಅಧಿಕಾರಿವರ್ಗದವರು ಮುಂತಾದವರು ವಿವಿಧ ಭೂ ದಾನಗಳನ್ನು ನೀಡಿದ್ದಾರೆ. ಭೂಮಿಯನ್ನು ದಾನವಾಗಿ ಪಡೆದವರು ಪ್ರಭುತ್ವದ ಪರವಾಗಿಯೇ ಇರುತ್ತಿದ್ದರು. ಸಮಾಜದ ಕೆಳಸ್ತರದ ಅಧ್ಯಯನ ಕೈಗೊಂಡಾಗ ದಾನ ನೀಡುವ ವ್ಯವಸ್ಥೆಗೆ ಪೂರಕವಾಗಿಯೇ ಇತ್ತು ಎನ್ನುವುದು ಸ್ಪಷ್ಟವಾಗುತ್ತದೆ. ಭೂಹಿಡುವಳಿ ಆಧಾರಿತ ಅರ್ಥವ್ಯವಸ್ಥೆಯ ತಳಹದಿಯ ಮೇಲೆ ನಿಂತಿದ್ದ ಅಂದಿನ ರಾಜ್ಯ ವ್ಯವಸ್ಥೆ ಭೂಮಾಲೀಕ ಮಧ್ಯವರ್ತಿಗಳ ಸುತ್ತ ಹೆಣೆದುಕೊಂಡಿತ್ತು. ವಿಜಯನಗರ ಕಾಲಕ್ಕೆ ಭೂಮಾಲೀಕರು ಕೇಂದ್ರ ಸರಕಾರದಲ್ಲಿಯೂ ಪ್ರಮುಖ ಪಾತ್ರವಹಿಸುವಂತಾಯಿತು. ಅಂದಿನ ರಾಜ್ಯ ವ್ಯವಸ್ಥೆಯಲ್ಲಿ ಭೂಹಿಡುವಳಿದಾರರು ಭೂಒಡೆತನದ ಮತ್ತು ಸರಕಾರದ ನಡುವೆ ನಿಕಟ ಸಂಬಂಧ ಹೊಂದಿತ್ತು.

ಅಡಿ ಟಿಪ್ಪಣಿಗಳು

1. ಬರ್ಟನ್ ಸ್ಟೇನ್, *ಪೆಸೆಂಟ್ ಸ್ಟೇಟ್ ಅಂಡ್ ಸೊಸೈಟಿ ಇನ್ ಮೆಡೀವಲ್ ಸೌತ್ ಇಂಡಿಯಾ*. ಮದರಾಸು. ಆಕ್ಸ್‌ಫರ್ಡ್, 1998. ಪು. 25–36.
2. ಪ್ರೊ. ಬಿ. ಷೇಕ್ ಅಲಿ (ಪ್ರಧಾನ ಸಂಪಾದಕರು), ಪ್ರೊ. ಕೆ.ಎಸ್. ಶಿವಣ್ಣ (ಸಂಪುಟ ಸಂಪಾದಕರು), *ಕರ್ನಾಟಕ ಚರಿತ್ರೆ*, ಸಂಪುಟ–3, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, 1997. ಪು. 76.

3. ಎ.ಕ. 11, ಹೊಳಲ್ಕೆರೆ, 75.
4. *ಟೋಪೋಗ್ರಾಫಿಕಲ್ ಲಿಸ್ಟ್,* ಸಂ, 2 ವೆಲ್ಲೂರು, ಸಂ. ಎಕ 797.
5. ಸಿ.ಎಸ್. ವಾಸುದೇವನ್, *ಹಂಪಿ ಪರಿಸರದ ಕೆರೆಗಳು,* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2001, ಪು. 80.
6. ಕೆ. ಮೋಹನ್ ಕೃಷ್ಣ ರೈ, *ಪ್ರಭುತ್ವ ಮತ್ತು ಜನತೆ,* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2004, ಪು. 65.
7. ಎ.ಕ. 6, ಕೆ.ಪಿ. ಜಮೀನುದಾರರ ಪಾಲಿಗೆ ನೋಡಿ ಪತ್ರ, ಪು. 331
8. ಟಿ.ವಿ. ಮಹಾಲಿಂಗಂ, *ಸೌತ್ ಇಂಡಿಯನ್ ಪಾಲಿಟಿ,* ಮದರಾಸು, 1955, ಪು. 95–105.
9. ಡಿ.ಡಿ. ಕೊಸಾಂಬಿ, *ದಿ ಕಲ್ಚರ್ ಅಂಡ್ ಸಿವಿಲೈಜೇಷನ್ ಆಫ್ ಏನ್ಷಿಯಂಟ್ ಇಂಡಿಯಾ ಇನ್ ಹಿಸ್ಟಾರಿಕಲ್,* ನವದೆಹಲಿ, 1982.
10. ಬಿ.ಎ.ಸಾಲೆತೊರೆ, *ಸೋಶಿಯಲ್ ಅಂಡ್ ಪೊಲಿಟಿಕಲ್ ಲೈಫ್ ಇನ್ ದಿ ವಿಜಯನಗರ ಎಂಪೈರ್,* 1934, 45–67.
11. ಟಿ.ವಿ. ಮಹಾಲಿಂಗಂ, *ಅಡ್‌ಮಿನಿಸ್ಟ್ರೇಟಿವ್ ಅಂಡ್ ಸೋಶಿಯಲ್ ಲೈಫ್ ಅಂಡರ್ ವಿಜಯನಗರ,* ಭಾಗ 2 ಪು . 70
12. *ಎಫ್, ಕಾರ್ನ್* (ಹಳೆಯ) ಸಂ. ಎಂ, ಬಿ. 172
13. ಕೆ.ಎ. ನೀಲಕಂಠಶಾಸ್ತ್ರಿ , *ಫಾರೀನ್ ನೋಟೀಸಿಸ್ ಆಫ್ ಸೌತ್ ಇಂಡಿಯಾ,* ಮದರಾಸು, 1939, ಪು. 3, 6.

26. ಮಹಾದಂಡನಾಯಕ ಲಕ್ಕಣ್ಣ ದಂಡೇಶ ಕವಿ - ಒಂದು ಅಧ್ಯಯನ

ಜಯದೇವಪ್ಪ ಜೈನಕೇರಿ

ಕನ್ನಡ ನಾಡಿನ ಐತಿಹಾಸಿಕ, ಸಾಂಸ್ಕೃತಿಕ, ರಾಜಕೀಯ, ಮತ್ತು ಸಾಹಿತ್ಯ ಚರಿತ್ರೆಯಲ್ಲಿ ವಿಶೇಷವಾಗಿ ವೀರಶೈವ/ಲಿಂಗಾಯತ ಸಾಹಿತ್ಯ ಚರಿತ್ರೆಯಲ್ಲಿ ಉಲ್ಲೇಖನಾರ್ಹ ವ್ಯಕ್ತಿ ಲಕ್ಕಣ್ಣ ದಂಡೇಶ ಕವಿ. ಸಮಕಾಲೀನ ಶಾಸನಗಳಲ್ಲಿ ವಿದೇಶಿ ಪ್ರವಾಸಿಗರ ದಾಖಲೆಗಳಲ್ಲಿ ಮತ್ತು ನಂತರದ ಕವಿಗಳ ಸಾಹಿತ್ಯ ಕೃತಿಗಳಲ್ಲಿ ಲಕ್ಕಣ್ಣ ದಂಡೇಶರ ಉಲ್ಲೇಖ ಕಂಡುಬರುತ್ತದೆ. ಲಕ್ಕಣ್ಣೊಡೆಯ, ಲಕ್ಕಣ್ಣ ದಣ್ಣಾಯಕ, ಲಕ್ಕಮಂತ್ರಿಧರ, ಅಮಾತ್ಯ ಶಿರೋಮಣಿ, ದಕ್ಷಿಣ ಸಮುದ್ರಾಧಿಪತಿ ಮುಂತಾದ ಹೆಸರುಗಳಿವೆ. ಲಕ್ಕಣ್ಣ ದಂಡೇಶರನ್ನು ಕುರಿತು ಇದುವರೆಗೆ ಸುಮಾರು 21 ಶಾಸನಗಳು ದೊರಕಿವೆ. ಮೊದಲ ಶಾಸನ ಚಿತ್ರದುರ್ಗ ಜಿಲ್ಲೆ ರಾಮಗಿರಿಯಲ್ಲಿಯೂ ಕ್ರಿ.ಶ. 1410ರ ಕೊನೆಯ ಶಾಸನ ಉಲ್ಲೇಖ ಉಡುಪಿ ಸಮೀಪದ ಬಾರಕೂರು ಕ್ರಿ.ಶ. 1463ರಲ್ಲಿಯೂ ದೊರಕಿವೆ. ಈ ಎಲ್ಲ ಶಾಸನಗಳ ಆಧಾರದಿಂದ ಲಕ್ಕಣ್ಣ ದಂಡೇಶರ ಕಾಲವನ್ನು ಕ್ರಿ.ಶ. 1400ರಿಂದ 1470 ಎಂದು ಕವಿಚರಿತ್ರೆಕಾರರು ಊಹಿಸಿದ್ದಾರೆ. ಈ ಅವಧಿಯಲ್ಲಿ ವಿಜಯನಗರ ಸಾಮ್ರಾಜ್ಯವನ್ನು ನಾಲ್ವರು ಸಂಗಮ ವಂಶದ ದೊರೆಗಳು ಆಳಿದ್ದಾರೆ.

1. ಒಂದನೇ ದೇವರಾಯ (ಕ್ರಿ.ಶ. 1406–1422)
2. ವಿಜಯದೇವರಾಯ (ಕ್ರಿ.ಶ. 1422–1424)
3. ಎರಡನೇ ದೇವರಾಯ (ಪ್ರೌಢದೇವರಾಯ) (ಕ್ರಿ.ಶ. 1424– 1446)
4. ಮೂರನೇ ದೇವರಾಯ – ಮಲ್ಲಿಕಾರ್ಜುನ (ಕ್ರಿ.ಶ. 1446–1487)

ಲಕ್ಕಣ್ಣ ದಂಡೇಶ

ಈತನ ಜನ್ಮಸ್ಥಳ ಈಗಿನ ಕೋಲಾರ ಜಿಲ್ಲೆ ಮುಳಬಾಗಿಲು ತಾಲ್ಲೂಕಿನ ವಿರೂಪಾಕ್ಷಪುರ ಎಂದು ವಿದ್ವಾಂಸರು ನಿಶ್ಚಯಿಸಿದ್ದಾರೆ. ಕ್ರಿ.ಶ. 1431ರ ಶಾಸನಗಳಲ್ಲಿ, ಲಕ್ಕಣ್ಣನ ಕುರಿತ ವಿವರಗಳು ಕಂಡುಬರುತ್ತವೆ. ಮುಳಬಾಗಿಲು ತಾಲ್ಲೂಕಿನ 21 ಮತ್ತು 46ನೇ ಶಾಸನಗಳಲ್ಲಿ ಲಕ್ಕಣ್ಣದಂಡೇಶನು ವಿಷ್ಣುವರ್ಧನ ಗೋತ್ರದವನೆಂದೂ ಈತನ ತಂದೆ ಹೆಗ್ಗಡೆದೇವ, ತಾಯಿ ಓಮ್ಮಾಯಮ್ಮ, ಸಹೋದರ ಮಾದಣ್ಣನೆಂದೂ ತಿಳಿದು ಬರುತ್ತದೆ. ಈತನ ವಂಶಸ್ಥರು, ಮುಳಬಾಗಿಲು ತಾಲ್ಲೂಕಿನಲ್ಲಿ ಈಗಲೂ ಇದ್ದಾರೆಂದು ತಿಳಿದುಬರುತ್ತದೆ. ಹೊಯ್ಸಳ ವಂಶಸ್ಥರಾದ ಇವರು ಸಂಗಮ ವಂಶದ ಅರಸರ ಸಂಪರ್ಕಕ್ಕೆ ಬಂದು ಶೈವ ಧರ್ಮಕ್ಕೆ ಬಂದಿರಬಹುದೆಂದೂ ನಂತರ ವೀರಶೈವ ಧರ್ಮಕ್ಕೆ ಪರಿವರ್ತಿತರಾಗಿದ್ದಾರೆಂದು, *ವೀರಶೈವ ಧರ್ಮ ದರ್ಶನ* ಗ್ರಂಥದಲ್ಲಿ ಉಲ್ಲೇಖವಾಗಿದೆ.

ಬಾಲ್ಯದಿಂದಲೇ ಸಾಹಸಪ್ರಿಯನಾಗಿದ್ದ ಲಕ್ಕಣ್ಣನಿಗೆ ಉತ್ತಮ ಗುರುವಿನಿಂದ ಶಿಕ್ಷಣ ದೊರೆಯಿತು. ಸಕಲ ಶಾಸ್ತ್ರ ಪುರಾಣಗಳನ್ನು ಆಡಳಿತಕ್ಕೆ ಅವಶ್ಯಕವಾದ ಶುಕ್ರ ನೀತಿಯನ್ನು, ಬಿಲ್ಲು ವಿದ್ಯೆಯನ್ನು ಕಲಿತನು. ಬಲಶಾಲಿಯೂ, ದೃಢಕಾಯನೂ ಆಗಿದ್ದ ಲಕ್ಕಣ್ಣ ಸಹಜವಾಗಿ ತನ್ನ ಹುಟ್ಟೂರಿನ ಜನರ ಗಮನ ಸೆಳೆದನು. ಆತನ ಸಾಹಸ, ನಿಸ್ವಾರ್ಥ ಸೇವೆಗಳು ವಿಜಯನಗರ ಅರಸರ ಕಿವಿಗೆ ತಲುಪಿದವು. ಕ್ರಿ.ಶ. 1410ರಲ್ಲಿ ವಿಜಯನಗರದ ಅರಸರಾಗಿದ್ದ ಮುಮ್ಮಡಿ ಬುಕ್ಕರಾಯರು ಮುಳಬಾಗಿಲು ಸೀಮೆಗೆ ಸೇರಿದ ಕೆಲವು ಗ್ರಾಮಗಳ ಅಧಿಕಾರವನ್ನು ಲಕ್ಕಣ್ಣ ಮಾದಣ್ಣ ಸಹೋದರರಿಗೆ ನೀಡಿ, ಅವುಗಳಿಂದ

ಬರುವ ಆದಾಯದಿಂದ ಅಲ್ಲಿರುವ ವಿರೂಪಾಕ್ಷ ದೇವರ ನೈವೇದ್ಯ ದೀಪ ಸೇವೆಗಳನ್ನು ಮಾಡುವಂತೆ ಆದೇಶಿಸುತ್ತಾರೆ. ಈ ಕಾರ್ಯದಲ್ಲಿ ತೊಡಗಿದ ಲಕ್ಕಣ್ಣ ಸಹೋದರರು, ಸಮರ್ಥವಾಗಿ ಆಡಳಿತ ನಡೆಸಿ, ವಿರೂಪಾಕ್ಷ ದೇವಾಲಯವನ್ನು ಪುನರುಜ್ಜೀವನಗೊಳಿಸಿ ಪ್ರಾಕಾರ ಗೋಪುರಗಳನ್ನು ನಿರ್ಮಿಸುತ್ತಾರೆ. ದೇವಾಲಯದ ಆವರಣದಲ್ಲಿ ಸುಂದರವಾದ ಪುಷ್ಕರಣಿ ನಿರ್ಮಿಸಿ, ಗೋಪುರಕ್ಕೆ ಚಿನ್ನದ ಹೊದಿಕೆ ಹಾಕಿಸುತ್ತಾರೆ. ವಿಜಯನಗರದ ಅರಸರ ಉಪರಾಜಧಾನಿಯನ್ನಾಗಿ ರೂಪಿಸಿ, ಹಂಪೆಯಲ್ಲಿರುವಂತೆ, ವಿರೂಪಾಕ್ಷಪುರದ ದೇವಾಲಯದಲ್ಲಿಯೂ ವೈಭವದ ಪೂಜೆ ನಿತ್ಯೋತ್ಸವ, ದೀಪಾರಾಧನೆ ಏರ್ಪಡಿಸುತ್ತಾರೆ. ದೇವಾಲಯಕ್ಕೆ ದಾನದತ್ತಿಗಳನ್ನು ಸಂಗ್ರಹಿಸಿ ದಾನಿಗಳಿಗೆ, ಕವಿಗಳಿಗೆ ಕಲಾವಿದರಿಗೆ ಪ್ರೋತ್ಸಾಹ ನೀಡಿ ಗೌರವಿಸುತ್ತಾರೆ. ಮುಮ್ಮಡಿ ಬುಕ್ಕರಾಯನ ಪುತ್ರ ಪ್ರೌಢದೇವರಾಯನು ಕೂಡ ಬಾಲ್ಯದಲ್ಲಿ ಜೊತೆಯಲ್ಲೇ ವಿದ್ಯಾಭ್ಯಾಸ ಮಾಡಿದ್ದರಿಂದ ಲಕ್ಕಣ್ಣನೊಂದಿಗೆ ಆತ್ಮೀಯ ಗೆಳೆತನವಿದ್ದಿತು. ಈ ಕಾರಣಕ್ಕಾಗಿ ದೇವಾಲಯದ ಪುನರ್ ಪ್ರತಿಷ್ಠಾಪನಾ ಸಮಾರಂಭಕ್ಕೆ ಅರಸು ಪ್ರೌಢದೇವರಾಯರು ವಿರೂಪಾಕ್ಷಪುರಕ್ಕೆ ಬರುತ್ತಾರೆ. ಬಾಲ್ಯದ ಗೆಳೆಯನ ಆಡಳಿತ ಕ್ರಮ, ಜನಸೇವೆ, ಸಮಾಜಸೇವೆಯನ್ನು ಗಮನಿಸಿದ ಪ್ರೌಢದೇವರಾಯ, ಲಕ್ಕಣ್ಣನನ್ನು ಸಾಮ್ರಾಜ್ಯದ ಸೇವೆಗೆ ಬರುವಂತೆ ಆಹ್ವಾನಿಸುತ್ತಾರೆ. ಲಕ್ಕಣ್ಣನಿಗೆ ದಣ್ಣಾಯಕ ಪದವಿ ನೀಡಿ ವಿಜಯನಗರ ಸೇವೆಗೆ ನಿಯುಕ್ತಿಗೊಳಿಸುತ್ತಾರೆ.

ಲಕ್ಕಣ್ಣ ದಂಡೇಶ ಕವಿ ರಚಿಸಿರುವ *ಶಿವತತ್ವ ಚಿಂತಾಮಣಿ* ಕಾವ್ಯದ ಅಂತರಂಗದ ಅಂಶಗಳು, ಮತ್ತಿತರ ಕವಿಗಳ ಉಲ್ಲೇಖಗಳಿಂದ ಈತನನ್ನು ವೀರಶೈವ ಕವಿ ಎಂದು ಸಾಹಿತ್ಯ ಚರಿತ್ರಕಾರರು ಗುರುತಿಸಿದ್ದಾರೆ. ಲಕ್ಕಣ್ಣನ ಹೆಸರು ಬೆಳಕಿಗೆ ಬಂದದ್ದು ಸಂಗಮ ವಂಶದ ದೊರೆ ಇಮ್ಮಡಿ ಪ್ರೌಢದೇವರಾಯನ ಕಾಲದಲ್ಲಿ ಎನ್ನಬಹುದು. ವಿಜಯನಗರ ಅರಸು ಪ್ರೌಢದೇವರಾಯನ (ಕ್ರಿ.ಶ. 1424–1446) ಕಾಲವನ್ನು, ವೀರಶೈವದ ಉತ್ಕರ್ಷದ ಕಾಲ, ಸಮರ್ಥ ನಾಯಕತ್ವ, ದೇಶದಲ್ಲಿದ್ದ ಸುಭಿಕ್ಷ ನಿಷ್ಠಾವಂತ ಮಾಂಡಲೀಕರ, ತುಂಡರಸರ ಬೆಂಬಲದಿಂದ ಸಾಹಿತ್ಯ, ನೃತ್ಯ ಸಂಗೀತಗಳಿಗೆ ನಿರಂತರ ಪ್ರೋತ್ಸಾಹ ದೊರಕಿದವು. ಅನೇಕ ದೇವಾಲಯಗಳ ನಿರ್ಮಾಣ, ಬೃಹತ್ ದೇವಾಲಯ ಗೋಪುರಗಳು ನಿರ್ಮಾಣವಾದವು. ಪ್ರಾಚೀನ ದೇವಾಲಯಗಳ ಸಂರಕ್ಷಣಾ ಕಾರ್ಯಗಳು ನಡೆದವು. ವಿಜಯನಗರ ಸಾಮ್ರಾಜ್ಯ ವಿಸ್ತಾರವಾಯಿತು. ಪ್ರೌಢದೇವರಾಯನ ರಾಜ್ಯಾಡಳಿತದಲ್ಲಿ ಲಕ್ಕಣ್ಣ ದಣ್ಣಾಯಕ ಹುದ್ದೆಯಿಂದ ದಂಡೇಶನ ಹುದ್ದೆಗೆ ಏರಿ ಗೌರವದ ಸ್ಥಾನ ಪಡೆದನು. ಆಡಳಿತದಲ್ಲಿ ಹೆಚ್ಚಿನ ಅಧಿಕಾರ ಪ್ರಾಪ್ತವಾಯಿತು. ರಾಜರೊಂದಿಗಿನ ಆತ್ಮೀಯ ಸಂಬಂಧ ತಿಳಿಸುವ ಪದ್ಯವೊಂದು ಹೀಗಿದೆ.

ಧರೆಗಧಿಕ ಮೂರು ರಾಯನ ಗಂಡನಪ್ರತಿಮೆ, ಬಿರುದಂಕ ಗಜವೆಂಟೆಕಾರ ದೇವೆಂದ್ರ ಭೂವರನ, ಮಹದೈಶ್ವರ್ಯ ಶರಧಿ ಚಂದ್ರೋದಯನುದಾರ ಕರುಣಾಧಾರನು, ನಿರುಪಮಿತ ಸಪ್ತಾಂಗ ರಾಜ್ಯವರ್ಧನ ಕಳಾಧರನಮಲ ಕೀರ್ತಿಯುತ ಲಕ್ಕಣ ದಂಡೇಶ ವಿರಚಿಸಿದ (ಸಂಧಿ 1 ಪದ್ಯ 9) ಶಿವತತ್ವ ಚಿಂತಾಮಣಿಯ ನರಿದವರ ಚರಣಾಂಬುಜಕೆ ಶರಣು ಮತ್ತು ಇಭ ಭೇಂಟೆಕಾರ ದೇವೆಂದ್ರನುನ್ನತ ಕೆಳೆಯನು ಪ್ರೌಢದೇವರಾಯನು ಆಪ್ತಮಿತ್ರನೂ, ಆಡಳಿತಸಮರ್ಥನೂ ಆಗಿದ್ದ ಲಕ್ಕಣ್ಣ ದಂಡೇಶ ಬಹುಮುಖ ಪ್ರತಿಭಾವಂತ, ರಾಜ್ಯಾಭ್ಯುದಯಕ್ಕೆ ಕಾರಣನಾದ ಈತನ ಹೆಸರಿನಲ್ಲಿ ನಾಣ್ಯಗಳು ಮುದ್ರಿತವಾಗಿರುವುದು ವಿಶೇಷ. ತಮಿಳುನಾಡಿನಲ್ಲಿ ಚಲಾವಣೆಯಲ್ಲಿದ್ದ ನಾಣ್ಯಗಳ ಒಂದು ಬದಿಯಲ್ಲಿ ಆನೆಯ ಚಿತ್ರ ಇನ್ನೊಂದು ಬದಿಯಲ್ಲಿ "ಲಖಮಣ ದಣ್ಣಾಯಕ" ಎಂಬ ಕನ್ನಡ ಅಕ್ಷರಗಳು ಇವೆ. ಇವುಗಳಿಂದಾಗಿ ವಿಜಯನಗರ ಸಾಮ್ರಾಜ್ಯದಲ್ಲಿ ಚಕ್ರವರ್ತಿಗಳ ನಂತರದ ಅತ್ಯುನ್ನತ ಸ್ಥಾನ ಲಕ್ಕಣ್ಣ ದಂಡೇಶನಿಗಿತ್ತು ಎನ್ನಬಹುದು. ಸ್ವತಃ ಕವಿಯಾಗಿ, ಕವಿಜನಪೋಷಕನಾಗಿ, ಯುದ್ಧಗಳಲ್ಲಿ ಕಲಿಯಾಗಿ ಪ್ರಸಿದ್ಧನಾಗಿದ್ದಾನೆ. ಲಕ್ಕಣ್ಣ ದಂಡೇಶ ತನ್ನ ಸೈನ್ಯದೊಂದಿಗೆ ಕ್ರಿ.ಶ. 1431ರಲ್ಲಿ ದಕ್ಷಿಣ ರಾಜ್ಯಗಳ ಮೇಲೆ ದಂಡೆತ್ತಿ ಹೋದ ಉಲ್ಲೇಖಗಳು ಶಾಸನೋಕ್ತವಾಗಿವೆ. ದಕ್ಷಿಣದ ರಾಜ್ಯಗಳ ಉಸ್ತುವಾರಿಯ ಜೊತೆಗೆ ಅಲ್ಲಿ ಆಶ್ರಿತ ರಾಜರ ಗೌರವಕ್ಕೂ ಪಾತ್ರನಾಗಿದ್ದ ಲಕ್ಕಣ ದಂಡೇಶ, ದಕ್ಷಿಣ ಸಮುದ್ರವನ್ನು ದಾಟಿ ಸಿಂಹಳದ ಮೇಲೆ ದಂಡಿನೊಡನೆ

ಹೋಗಿ ಅಂದಿನ ಆರನೇ ಪರಾಕ್ರಮಬಾಹುವನ್ನು ಸೋಲಿಸಿದನು. ಆತನಿಂದ ಕಪ್ಪ ಕಾಣಿಕೆಗಳನ್ನು ಪಡೆದದ್ದಲ್ಲದೆ, ಸಿಂಹಳದ ರಾಜಕುಮಾರಿಯೊಂದಿಗೆ ಪ್ರೌಢದೇವರಾಯನಿಗೆ ವಿವಾಹಮಾಡಿಸಿದನೆಂದು ತಿಳಿದುಬರುತ್ತದೆ. ಸಿಂಹಳ ದ್ವೀಪದ ಜನಪದರ ಹಾಡುಗಳಲ್ಲಿ ಇಂದಿಗೂ ಲಕ್ಕಣ್ಣ ದಂಡೇಶನ ಧಾಳಿಯ, ಶೌರ್ಯದ ವರ್ಣನೆಯಿದೆ ಎಂದು ವಿದ್ವಾಂಸರು ದಾಖಲಿಸಿದ್ದಾರೆ. ಸಿಂಹಳದ ಜೈತ್ರ ಯಾತ್ರೆಯಿಂದ ಹರ್ಷಿತಮಾದ ಪ್ರೌಢದೇವರಾಯ, ಲಕ್ಕಣ್ಣ ದಂಡೇಶನಿಗೆ "ದಕ್ಷಿಣ ಸಮುದ್ರಾಧಿಪತಿ" ಎಂಬ ಬಿರುದು ನೀಡಿ ಸನ್ಮಾನಿಸುತ್ತಾನೆ. ಜೊತೆಗೆ ರಾಜ್ಯದ ನ್ಯಾಯಮಂತ್ರಿಯಾಗಿ, ಪ್ರಧಾನಿಯಾಗಿ ನೇಮಿಸಿ ಗೌರವಿಸುತ್ತಾನೆ. ಈತನ ಕಾಲದಲ್ಲಿ ವಿಜಯನಗರದಲ್ಲಿ ವಿದೇಶ ರಾಯಭಾರಿಯಾಗಿದ್ದ ಅಬ್ದುಲ್ ರಜಾಕ್, ಲಕ್ಕಣ್ಣ ದಂಡೇಶನ ಶೌರ್ಯಗಳನ್ನು ಆಡಳಿತ ವಿಧಾನಗಳನ್ನು, ಮುಕ್ತಕಂಠದಿಂದ ಹೊಗಳಿ ದಾಖಲಿಸಿದ್ದಾನೆ. ಬಹಮನೀ ಸುಲ್ತಾನರ ವಿರುದ್ಧ ಹೋರಾಡಿದ ಲಕ್ಕಣ್ಣ ದಂಡೇಶನ ಪರಾಕ್ರಮವನ್ನು ನಂತರದ ಸಿದ್ದನಂಜೇಶ ಕವಿ ತನ್ನ ಕಾವ್ಯದಲ್ಲಿ ಪ್ರಶಂಸಿಸಿದ್ದಾನೆ.

ಶಿವತತ್ವ ಚಿಂತಾಮಣಿ

ಏಕಕಾಲದಲ್ಲಿ ದಂಡನಾಯಕನೂ, ಮಂತ್ರಿಯೂ ಆಗಿದ್ದ ಲಕ್ಕಣ್ಣ ದಂಡೇಶ ಅದ್ವಿತೀಯ ಕವಿಯಾಗಿಯೂ ಪ್ರಸಿದ್ಧನಾಗಿದ್ದಾನೆ. ಅಧಿಕಾರ, ಕೀರ್ತಿ, ಗೌರವಗಳನ್ನು ಸಂಪಾದಿಸಿ, ಉದಾರ ಚರಿತನೂ, ಧರ್ಮಭೀರುವು ಆಗಿದ್ದ ಲಕ್ಕಣ್ಣ ದಂಡೇಶ ಸಹೃದಯ ಕವಿಯಾಗಿಯೂ ಕಂಡುಬರುತ್ತಾನೆ. ಲಕ್ಕಣ್ಣ ದಂಡೇಶನಿಂದಾಗಿ, ಪ್ರೌಢದೇವರಾಯನ ಕಾಲವನ್ನು ವೀರಶೈವ/ವಚನ ಸಾಹಿತ್ಯದ ಪುನರುಜ್ಜೀವನ ಯುಗವೆಂದು ಕವಿಚರಿತ್ರೆಕಾರರು ಗುರುತಿಸಿದ್ದಾರೆ. ಕವಿ ಜನ ಪೋಷಕನಾದ ಚಕ್ರವರ್ತಿಯ ಆಸ್ಥಾನದಲ್ಲಿ ದಂಡನಾಯಕನಾಗಿದ್ದ ಲಕ್ಕಣ್ಣ ದಂಡೇಶ, ವೀರಶೈವ ವಚನ ಸಾಹಿತ್ಯದತ್ತ ಆಕರ್ಷಿತನಾಗಿದ್ದು ವಿಶೇಷ. ತಾನು ಸ್ವತಃ ಕವಿಯಾಗಿ ಶಿವತತ್ವ ಚಿಂತಾಮಣಿಯಂತಹ ಅಮೂಲ್ಯ ಕೃತಿಯನ್ನು ರಚಿಸಿರುವುದು ಮತ್ತೂ ವಿಶೇಷ ಎನ್ನಬಹುದು. ಈ ಕೃತಿಯನ್ನು ವಾರ್ಧಕ ಷಟ್ಪದಿಯಲ್ಲಿ ಕವಿ ರಚಿಸಿದ್ದಾನೆ. 54 ಸಂಧಿಗಳಲ್ಲಿ 2221 ಪದ್ಯಗಳನ್ನು ಕೃತಿ ಒಳಗೊಂಡಿದೆ. 'ಎನಗಿಂತ ಕಿರಿಯರಿಲ್ಲ, ಶಿವಭಕ್ತರಿಗಿಂತ ಹಿರಿಯರಿಲ್ಲ' ಎನ್ನುವ ಕಿಂಕರತ್ವ ಕವಿಯದು. ಎಲ್ಲ ಪದ್ಯಗಳ ಕೊನೆಯಲ್ಲಿ "ಚರಣಾಂಬುಜಕೆ ಶರಣು" ಎಂಬ ಪದ ಪ್ರಯೋಗ ಮಾಡಿ ತನ್ನ ವಿನೀತ ಭಾವವನ್ನು ವ್ಯಕ್ತಪಡಿಸಿದ್ದಾನೆ. ಶಿವನ ಇಪ್ಪತ್ತೈದು ಲೀಲೆಗಳು, ಭುವನ ಕೋಶ, ಶಿವಲೋಕ ವರ್ಣನೆ, ಶಿವ–ನಂದಿಯರ ಸಂವಾದ, ಬಸವಚರಿತ, ಗಣಪ್ರಶಂಸೆ ಲಿಂಗಧಾರಣೆ, ಶಿವಪೂಜಾವಿಧಿ, ಪಾದೋದಕ ಪ್ರಸಾದ ಮಹಿಮೆ, ಶಿವಾಧಿಕ್ಯ, ಮಾಹೇಶ್ವರಾಚರಣೆ ಮುಂತಾದ ಆಧ್ಯಾತ್ಮಿಕ ವಿಷಯಗಳು ಈ ಕೃತಿಯಲ್ಲಿ ಪ್ರತಿಪಾದಿಸಲ್ಪಟ್ಟಿವೆ. ಈ ಕೃತಿಯ ಶ್ರೇಷ್ಠತೆಯನ್ನು ಗುರುತಿಸಲು **ಗುರುವಚನದಮೃತಮಂ ಶತಿ ಪುರಾಣಾಗಮದ ಪರಮಾರ್ಥದ ಮೃತಮಂವರ ಪುರಾತನ ವಚನ ಪರಿಯಾಯದಮೃತಮಂ ಶಿವ ತಾಂತ್ರಿಕರು ಪೇಳ್ದ ಸಿದ್ಧಾಂತವೆನಿಪಮೃತಂ ॥ ಪರಮಾನುಭಾವದನುಮಪ ಗೋಷ್ಠಿಯಮೃತದೊಳು । ಬೆರೆಸಿ ಮಥನಿಸಿ ಪಡೆದ ಲಕ್ಕಣ್ಣ ದಂಡೇಶ । ಧರಿಸಿರ್ಪ ತತ್ವ ಚಿಂತಾಮಣಿಯನರಿವವರ ಚರಣಾಂಬುಜಕ್ಕೆ ಶರಣು ॥ ಇದು ವೀರಶೈವ ಸಿದ್ಧಾಂತ ತಂತ್ರದ ಸೂತ್ರ । ವಿದು ಸಕಲ ವೇದಾಗಮದ ಶಿಖಾಸೂತ್ರ ವಿಂ । ತಿದು ಪರಮ ನಿರ್ವಾಣ ಪರಿಪದವೆನಿಪ ಶಾಂಭವೀಯ ಯೋಗದ ಸೂತ್ರವು ॥**

ಮೇಲಿನ ಪದ್ಯಗಳು ಸಾಕ್ಷಿಯಾಗಿವೆ. ಕೃತಿಯ ಆರಂಭದಲ್ಲಿ ಶಿವಸ್ತುತಿ ಇದೆ. ನಂತರದಲ್ಲಿ ಕೃತಿಕಾರ ವಿರೂಪಾಕ್ಷನೆನೆಸಿದ ಮಹಾಲಿಂಗ ಮೂರ್ತಿ ಪಾಶುಪದ ಸದ್ವ್ರತ ಗುಣಾಗ್ರಣಿ, ಮಲ್ಲಿಕಾರ್ಜುನ ಗುರು, ಬಸವಣ್ಣ, ಅಲ್ಲಮಪ್ರಭು, ಚನ್ನಬಸವಣ್ಣ ಮುಂತಾದ ಶರಣರನ್ನು ಸ್ತುತಿಸಿದ್ದಾನೆ. ಚಿಂತಾಮಣಿ ಎಂಬುದು ಅಮೂಲ್ಯ ರತ್ನಗಳಲ್ಲೊಂದು ಬೇಡಿದ್ದನ್ನು ಕೊಡುವ ಇಷ್ಟಾರ್ಥ ಸಿದ್ದಿಯನ್ನು ಕರುಣಿಸುವ ವಸ್ತುವಿಶೇಷ. ಈ ಕೃತಿಯು ಶಿವಸ್ವರೂಪವನ್ನರಿತವರಿಗೆ ಜೀವತತ್ವವನ್ನರಿತವರಿಗೆ

ಚಿಂತಾಮಣಿಯಾಗಿದೆ ಎಂಬುದು ಕವಿಯ ಭಾವ. ಗುರುವಚನ, ಶ್ರುತಿ ಪುರಾಣಗಮಗಳ ಸಾರವನ್ನು ತಿಳಿಯುವ ರತ್ನ ಎಂದು ಕವಿ ಲಕ್ಕಣ್ಣ ದಂಡೇಶ ತನ್ನ ಕಾವ್ಯದಲ್ಲಿ ಹೇಳಿಕೊಂಡಿದ್ದಾನೆ.

ವಿಜಯನಗರ ಅರಸು ಪ್ರೌಢದೇವರಾಯ ಮತ್ತು ಲಕ್ಕಣ್ಣ ಬಾಲ್ಯದ ಗೆಳೆಯರು. ಒಬ್ಬರೇ ಗುರುವಿನ ಬಳಿ ವಿದ್ಯೆ ಕಲಿತವರು. ಬೆಳೆದು ದೊಡ್ಡವರಾದ ಮೇಲೆಯೂ ಗೆಳೆತನವನ್ನು ಉಳಿಸಿಕೊಂಡು ವಿಜಯನಗರ ಸಾಮ್ರಾಜ್ಯದ ಸೇವೆಯಲ್ಲಿ ತೊಡಗಿ ದಂಡೇಶ ದಂಡನಾಯಕ, ಮಹಾಮಂತ್ರಿಯಾದವನು. ತಾನು ಪ್ರೌಢದೇವರಾಯನ ಮಹದೈಶ್ವರ್ಯ ಶರಧಿ ಚಂದ್ರೋದಯನು, ಸಪ್ತಾಂಗ ರಾಜ್ಯವರ್ಧನ ಕಳಾಧನಮಲ ಕೀರ್ತಿಯುತ ಲಕ್ಕಣ್ಣ ದಂಡೇಶ ಎಂದು ತನ್ನ ಕಾವ್ಯದಲ್ಲಿ ಕರೆದುಕೊಂಡಿದ್ದಾನೆ. ಪ್ರೌಢದೇವರಾಯನ ಆಸ್ಥಾನದಲ್ಲಿ ರಾಜನ ನಂತರದ ಸ್ಥಾನ ಲಕ್ಕಣ್ಣ ದಂಡೇಶನದು. ಮಹಾ ಅಮಾತ್ಯನಾಗಿ, ನ್ಯಾಯಾಧೀಶನಾಗಿ, ಯುದ್ಧದ ಕಲಿಯಾಗಿ ಪ್ರೌಢದೇವರಾಯನ ಅಂತರಂಗದ ಗೆಳೆಯನಾಗಿಯೂ ಕಂಡುಬರುತ್ತಾನೆ. ರಾಜ್ಯದಲ್ಲಿ ಶಾಂತಿ ನೆಲೆಸುವಂತೆ ಲಕ್ಷಣ ಬಲವನ್ನು ಕ್ರಮಗೊಳಿಸಿ, ಸುಮಾರು 47 ವರ್ಷಗಳ ಕಾಲ ರಾಜ್ಯಾಡಳಿತವನ್ನು ಯಶಸ್ವಿಯಾಗಿ ನಡೆಸಿದ ಲಕ್ಕಣ್ಣ ದಂಡೇಶ ವಿಜಯನಗರ ಸಾಮ್ರಾಜ್ಯದ ಉತ್ಕರ್ಷಕ್ಕೆ ಕಾರಣನಾಗಿದ್ದಾನೆ. ಆಡಳಿತದಲ್ಲಿ ಅನೇಕ ಸುಧಾರಣೆಗಳನ್ನು ಮಾಡಿ ಜನಸಾಮಾನ್ಯರೂ ನೆಮ್ಮದಿಯಿಂದ ಬದುಕುವಂತೆ ಶ್ರಮಿಸಿದ್ದಾನೆ. ವಿವಾಹ ಶುಲ್ಕ ರದ್ದು ಮಾಡಿ ಕನ್ಯಾಶುಲ್ಕ, ವರದಕ್ಷಿಣೆಗಳನ್ನು ಬಹಿಷ್ಕರಿಸಿದ್ದಾನೆ. ಅನೇಕ ಕೆರೆಗಳನ್ನು ಕಟ್ಟಿಸಿದ್ದಾನೆ. ಭೂಮಿ ಅಳತೆಗಾಗಿ, "ರಾಯಾವಿಭಾಡನ ಪದಿನೆಟ್ಟಕೋಲ್" ಎಂಬ ಈಗಿನ 18 ಅಡಿ ಉದ್ದದ ಕೋಲನ್ನು ಬಳಕೆಗೆ ತಂದಿದ್ದಾನೆ. ಸಂತೆಗಳನ್ನು ಏರ್ಪಡಿಸಿ ಕೃಷಿ ಉತ್ಪನ್ನಗಳ ಮಾರಾಟ ವಿನಿಮಯಕ್ಕೆ ಅವಕಾಶ ಕಲ್ಪಿಸಿದ್ದಾನೆ. ತೆರಿಗೆ ಅಧಿಕಾರಿಗಳಿಂದ, ಗ್ರಾಮರಕ್ಷಕರಿಂದ ಕಿರುಕುಳಕ್ಕೆ ಅವಕಾಶವಿಲ್ಲದಂತೆ ಕಟ್ಟಲೆ ವಿಧಿಸಿದ್ದಾನೆ. ಅನೇಕ ದೇವಾಲಯಗಳನ್ನು ನಿರ್ಮಿಸಿ, ಪ್ರಾಚೀನ ದೇವಾಲಯಗಳನ್ನು ಜೀರ್ಣೋದ್ಧಾರ ಮಾಡಿಸಿ ನಿತ್ಯಪೂಜೆಗೆ, ನಂದಾದೀಪಕ್ಕೆ ದಾನದತ್ತಿ ನೀಡಿದ್ದಾನೆ. ವಿಜಯನಗರದ ಸಾಮ್ರಜ್ಯದ ಸಂಪದಭಿವೃದ್ಧಿಗೆ ಕಾರಣನಾಗಿದ್ದಾನೆ. ಕವಿಯಾಗಿಯೂ ಪ್ರಸಿದ್ಧನಾಗಿದ್ದಾನೆ.

ಲಕ್ಕಣ್ಣ ದಂಡೇಶ ರಚಿತ *ಶಿವತತ್ವ ಚಿಂತಾಮಣಿ* ಒಂದು ನೀತಿಬೋಧಕ ಮಹಾಕಾವ್ಯ. ವೀರಶೈವ/ಲಿಂಗಾಯುತ ತತ್ವಬೋಧೆಗಳನ್ನು ಒಳಗೊಂಡಿದೆ. ರಾಜನ ಆಸ್ಥಾನದಲ್ಲಿ ತಾನೇ ತನ್ನ ಮಹಾಕಾವ್ಯವನ್ನು ಸಮಕಾಲೀನ ಕವಿಗಳು ಮತ್ತು ವಿದ್ವಜ್ಜನರ ಮುಂದೆ ಓದಿ ಎಲ್ಲರ ಮೆಚ್ಚುಗೆ ಪಡೆದಿದ್ದಾನೆ. ಸಮಕಾಲೀನ ಕವಿಗಳಾದ ಜಕ್ಕಣಾರ್ಯ, ನಾಗರಸ, ಗುರುರಾಯ ಮುಂತಾದವರು ವೀರಶೈವ/ಲಿಂಗಾಯತರ ಪ್ರಾಚೀನ ಕಾವ್ಯಗಳನ್ನು ಶರಣರ ವಚನಗಳ ಅಧ್ಯಯನ ಪರಿಷ್ಕರಣೆಯಲ್ಲಿ ತೊಡಗುವಂತೆ ಪ್ರೇರೇಪಿಸಿ ಅವುಗಳನ್ನು ರಕ್ಷಿಸಿದ್ದಾನೆ. ವೀರಶೈವ/ಲಿಂಗಾಯುತ ಮಠ ಪರಂಪರೆಗೆ ಕಾರಣನಾಗಿದ್ದಾನೆ ಮಹಾಕವಿ ಲಕ್ಕಣ್ಣ. 12ನೇ ಶತಮಾನದ ವಚನಗಳ ಸಂಗ್ರಹ, ಸಂಪಾದನೆ, ವ್ಯಾಖ್ಯಾನ, ಬೆಡಗಿನ ವಚನಗಳನ್ನು ಅರ್ಥೈಸುವ ಕಾರ್ಯಕ್ಕೆ ಚಾಲನೆ ನೀಡಿದ್ದಾನೆ. ಈತನ ಕಾಲವನ್ನು ವಿಜಯನಗರ ರಾಜ್ಯದ ಮತ್ತು ವೀರಶೈವ ಸಾಹಿತ್ಯದ ಉತ್ಕರ್ಷದ ಕಾಲವೆಂದು ವಿದ್ವಾಂಸರು ದಾಖಲಿಸಿದ್ದಾರೆ. ಶಿವತತ್ವ ಚಿಂತಾಮಣಿಯು ಧಾರ್ಮಿಕ ಕೃತಿ ಮಾತ್ರವಲ್ಲ. ಅದು ಚಾರಿತ್ರಿಕ ಕೃತಿಯಾಗಿ, ಪೌರಾಣಿಕ ಕೃತಿಯಾಗಿ, ಅಂದಿನ ಕಾಲಘಟ್ಟದ ಸಾಂಸ್ಕೃತಿಕ ಕೃತಿಯಾಗಿ, ಜೊತೆಗೆ ಸಾಹಿತ್ಯಿಕ ಕೃತಿಯಾಗಿಯೂ ವಿದ್ವಾಂಸರು ಗುರುತಿಸಿದ್ದಾರೆ. ಶಿವತತ್ವ ಚಿಂತಾಮಣಿಯ ಕಾವ್ಯದ ಸ್ವರೂಪವನ್ನು ಮೂರು ವಿಧವಾಗಿ ವಿಂಗಡಿಸಬಹುದು. 1) ಶಿವತತ್ವ ಹಾಗೂ ಶಿವಲೀಲಾ ಕಥಾ ಪ್ರಸ್ಥಾನ, 2) ಪುರಾತನ ಮತ್ತು ನೂತನ ಶರಣರ ಕಥಾ ಪ್ರಸ್ಥಾನ, 3) ಷಟ್‌ಸ್ಥೂಲ ತತ್ವ ಪ್ರಸ್ಥಾನ, ಎಂಬುದು ಈ ಕೃತಿಯ ವೈಶಿಷ್ಟ್ಯ. ಶಿವಕಾರುಣ್ಯವನ್ನು ಗಳಿಸಿದ ಲೌಕಿಕರು ಅಂದರೆ ಮೇಲುವರ್ಗದವರ ದೃಷ್ಟಿಯಲ್ಲಿ ಕೀಳು ಎಂದೆನಿಸಿಕೊಂಡ ಸಾಮಾನ್ಯರನ್ನು ವಿವಿಧ ಕಾಯಕ ಜೀವಿಗಳನ್ನು ಕವಿ ಲಕ್ಕಣ್ಣ ದಂಡೇಶ ವಿನಯಪೂರ್ವಕವಾಗಿ ಸ್ಮರಿಸಿದ್ದಾನೆ. ಪ್ರತಿಯೊಂದು ಪದ್ಯದ ಕೊನೆಯಲ್ಲಿ **ತಿಳಿದವರ ಚರಣಾಂಬುಜಕೆ ಶರಣು ಅರಿವವರ ಚರಣಾಂಬುಜಕೆ ಶರಣು, ಎಂಬುವವರ ಚರಣಾಂಬುಜಕೆ ಶರಣು** ಎಂದು ಮುಕ್ತಾಯವಾಗುತ್ತವೆ.

ಧಾರ್ಮಿಕ

ವೀರಶೈವ ಸಿದ್ಧಾಂತ ಪ್ರತಿಪಾದನೆ ಕೃತಿಯ ಪ್ರಮುಖ ಲಕ್ಷಣ. ವೀರಶೈವ ತತ್ವ ಆಚರಣೆಗಳನ್ನು ಸೈದ್ಧಾಂತಿಕ ಹಿನ್ನೆಲೆಯಲ್ಲಿ ನಿರೂಪಿಸಲಾಗಿದೆ. ಸಾಧಕನ ಪೂರ್ವ ಸಿದ್ಧತೆಗಳು, ಭಕ್ತಿಯ ಆಚರಣೆ, ಷಟ್‌ಸ್ಥಲಸಿದ್ಧಾಂತ, ಅಷ್ಟಾವರಣಗಳ ವರ್ಣನೆ, ಶಿವಾದ್ವೈತ ಸಿದ್ಧಾಂತ ಪ್ರತಿಪಾದನೆ, ಶಿವತತ್ವ ಪಾರಮ್ಯ ಮುಂತಾದ ವಿಷಯಗಳನ್ನು ಕಾವ್ಯದಲ್ಲಿ ನಿರೂಪಿಸಲಾಗಿದೆ. ಸಮಕಾಲೀನ ಶರಣರ ಉಲ್ಲೇಖವಿರುವ ಭಾಗ ಈ ಕೃತಿಯಲ್ಲಿ ಕುತೂಹಲಕರವೂ, ಅಧ್ಯಯನಯೋಗ್ಯವೂ ಆಗಿದೆ. 38ನೇ ಸಂಧಿಯಲ್ಲಿರುವ ಸುಮಾರು 256 ಪದ್ಯಗಳಲ್ಲಿ ಆರುನೂರು ಶರಣರ ವೃತ್ತಾಂತಗಳಿವೆ. ಇವರೆಲ್ಲರೂ ಕ್ರಿ.ಶ. 1400ರಿಂದ 1450ರ ಕಾಲಾವಧಿಯಲ್ಲಿದ್ದವರು ಎಂಬುದು ವಿಶೇಷ. ಶರಣರಲ್ಲಿ ವಿವಿಧ ಕಾಯಕ ಜೀವಿಗಳಿದ್ದು, ಜೀವಿಸಿದ್ದ ಸ್ಥಳ ಮತ್ತು ಅವರು ಕೈಗೊಂಡ ಕಾಯಕಗಳ ಸಂಕ್ಷಿಪ್ತ ವಿವರಗಳಿವೆ. ಈ ಶರಣರು, ಕರ್ನಾಟಕ, ಆಂಧ್ರ, ತಮಿಳುನಾಡು, ಮಹಾರಾಷ್ಟ್ರ, ಗುಜರಾತ್, ಒರಿಸ್ಸಾ ಮುಂತಾದ ಪ್ರದೇಶಗಳಿಗೆ ಸೇರಿದವರಾಗಿದ್ದು ಉಲ್ಲೇಖನಾರ್ಹ ಸಂಗತಿ. ಕವಿ ದಾಖಲಿಸಿರುವ ಶರಣರಲ್ಲಿ ವಿವಿಧ ಕಾಯಕ ಜೀವಿಗಳಿದ್ದು, ತಮ್ಮದೇ ಆದ ವಿಭಿನ್ನ ಮಾರ್ಗಗಳಲ್ಲಿ ಸಾಧನೆ ಮಾಡಿದ ಎಲ್ಲಾ ವರ್ಗದ ವಿವಿಧ ಕುಲದವರೂ ಇದ್ದಾರೆ. ಲಕ್ಕಣ ದಂಡೇಶ ರಾಜ್ಯದ ಉನ್ನತ ಅಧಿಕಾರಿಯಾಗಿದ್ದು ಎಲ್ಲ ಮಾಹಿತಿಗಳನ್ನು ವ್ಯಾಪಕವಾಗಿ ಸಂಗ್ರಹಿಸಲು ಸಾಧ್ಯವಾಗಿರಬಹುದು. ಈ ಕಾವ್ಯದಿಂದಾಗಿ ವೀರಶೈವದ ಮಹತ್ವವನ್ನು ವಿಶಾಲತೆಯನ್ನು ಅರಿಯಬಹುದಾಗಿದೆ. ಈ ಹಂತದಲ್ಲಿ ಕವಿ ಒಬ್ಬ ಚರಿತ್ರಕಾರನಾಗಿ ಕಂಡುಬರುತ್ತಾನೆ. ಶರಣ ನುಲಿಯ ಚಂದಯ್ಯ, ಶರಣೆ ಗುಡ್ಡಮ್ಮೆಯ ವಿವರಗಳು ಮೊದಲಿಗೆ ಈ ಕೃತಿಯಲ್ಲಿ ಉಲ್ಲೇಖವಾಗಿವೆ. ವರದಾನಿ ಗುಡ್ಡ ಮಾಬೆಯ ಕಥೆ ಕಾವ್ಯದಲ್ಲಿ ಉಲ್ಲೇಖವಾಗಿದೆ. ಈಕೆ ಶಾಸನೋಕ್ತ ಶಿವಶರಣೆ, ವೀರಶೈವ ಧರ್ಮರಕ್ಷಣೆಗಾಗಿ ಈಗ ಆಂಧ್ರದಲ್ಲಿರುವ ಅಲಂಪುರದಲ್ಲಿ ಬ್ರಹ್ಮೇಶ್ವರ ಲಿಂಗದ ಪುನರ್‌ಪ್ರತಿಷ್ಠಾಪನೆಗೆ ಹೋರಾಡಿದ ವೀರ ಮಹಿಳೆ. ಈ ಕೃತಿಯ ಕುರಿತು ನಂತರದ ಪ್ರೌಢರಾಯನ ಕಾವ್ಯ, ಸಿದ್ಧನಂಜೇಶ್ವರನ ಗುರುರಾಜ ಚಾರಿತ್ರ, ಭೈರವೇಶ್ವರ ಕಾವ್ಯದ ಕಥಾಮಣಿ ಸೂತ್ರ ರತ್ನಾಕರ ಇತ್ಯಾದಿ ಗ್ರಂಥಗಳಿಗೆ ಶಿವತತ್ವ ಚಿಂತಾಮಣಿ ಗ್ರಂಥವೇ ಆಕರವಾಗಿದೆ ಎಂದಿದ್ದಾರೆ ವಿದ್ವಾಂಸರು. ಲಕ್ಕಣ್ಣ ದಂಡೇಶನು ಸಂಸ್ಕೃತ ಮತ್ತು ಕನ್ನಡ ಎರಡೂ ಭಾಷೆಗಳಲ್ಲಿ ಪಾಂಡಿತ್ಯ ಹೊಂದಿದ್ದನು. ವೀರಶೈವ ಧಾರ್ಮಿಕ ಸಂಸ್ಕೃತಿಯನ್ನು ನಾಡಿನ ಮೂಲೆ ಮೂಲೆಗೆ ತಲುಪಿಸಿದ ಕೀರ್ತಿಗೆ ಪಾತ್ರನಾಗಿದ್ದಾನೆ.

ಕಾಯಕಗಳು

ಲಕ್ಕಣ್ಣ ದಂಡೇಶ ಕವಿ ತನ್ನ ಕಾಲಘಟ್ಟದ ಶರಣರ ಗಣಂಗಳ ಕಾಯಕವನ್ನು ಚಿತ್ರಿಸಿರುವುದು ಆತನಿಗಿದ್ದ ಸಾಮಾಜಿಕ ಕಳಕಳಿಗೆ ಸಾಕ್ಷಿಯಾಗಿದೆ. ಲಕ್ಕಣ್ಣ ಹೆಸರಿಸಿರುವ 600 ಗಣಂಗಳಲ್ಲಿ 126 ಗಣಂಗಳು ಅವಲಂಬಿಸಿದ್ದ 56 ಕಾಯಕಗಳನ್ನು ಉಲ್ಲೇಖಿಸಿದ್ದಾರೆ. ಅಡಕೆವರಸದಕಾಯಕ, ಆರಂಭಕಾಯಕ, ಉಪ್ಪಲಿಕಕಾಯಕ, ಎಲೆಕಾಯಕ, ಕನ್ನಡಿಕಾಯಕ, ಕೋರಿಯಕಾಯಕ, ಗಾಂಧಿಗರಕಾಯಕ, ಸೊಪ್ಪೆಯಕಾಯಕ, ಕಡಗದಕಾಯಕ, ಬಿದಿರಿನಕಾಯಕ, ಸೂಜಿಕಾಯಕ, ಮುಂತಾದವುಗಳನ್ನು ಹೆಸರಿಸಬಹುದು. ಈ ಎಲ್ಲಾ ಕಾಯಕಗಳನ್ನು ಅರ್ಥೈಸುವುದರ ಮೂಲಕ ವಿಜಯನಗರ ಕಾಲದ ಆರ್ಥಿಕ ಸಾಮಾಜಿಕ ಸ್ಥಿತಿಗಳನ್ನು ಅರಿಯಲು ಸಾಧ್ಯ. ಈ ವಿಷಯದಲ್ಲಿ ತಲಸ್ಪರ್ಶಿ ಅಧ್ಯಯನ ನಡೆಯಬೇಕಾಗಿದೆ. ಲಕ್ಕಣ್ಣ ದಂಡೇಶರ ದೃಷ್ಟಿಯಲ್ಲಿ ಯಾವ ಕಾಯಕವೂ ಕೀಳಲ್ಲ, ಯಾವ ಕಾಯಕವೂ ಮೇಲೂ ಅಲ್ಲ. ಸಮಾಜಿಕ ಸ್ವಾಸ್ಥ್ಯೆಗೆ, ಸಂಪದಭಿವೃದ್ಧಿಗೆ ದೇಶದ ಭದ್ರತೆಗೆ, ಸತ್ಯಶುದ್ಧವಾದ ಎಲ್ಲ ಕಾಯಕಗಳೂ ಅಗತ್ಯ ಎಂಬ ಅರಿವಿತ್ತು ಎನ್ನಬಹುದು. ರಾಜ್ಯಾಡಳಿತಕ್ಕೆ ಭಕ್ತಿಗೆ ಕೊಟ್ಟಷ್ಟೇ ಆದ್ಯತೆಯನ್ನು ಪ್ರಾಶಸ್ತ್ಯವನ್ನು ಎಲ್ಲಾ ಕಾಯಕಗಳಿಗೂ ನೀಡಿದ್ದಾನೆ. ಶಿವತತ್ವ ಚಿಂತಾಮಣಿ ಒಂದು ಧಾರ್ಮಿಕ ಕಾವ್ಯವಾದರೂ ಅದು 15ನೇ ಶತಮಾನದ ದಕ್ಷಿಣ ಭಾರತದ ಭೌಗೋಳಿಕ, ಔದ್ಯೋಗಿಕ, ಆರ್ಥಿಕ

ಸ್ಥಿತಿಗತಿಗಳನ್ನು ತಿಳಿಸುವ ಅತ್ಯುತ್ತಮ ಆಕರ ಗ್ರಂಥಕಾವ್ಯವಾಗಿದೆ. ಈ ಕಾಯಕಗಳಲ್ಲಿ ಮುಖ್ಯವಾಗಿ ಗಮನಿಸಬೇಕಾದ ಕಾಯಕಗಳಲ್ಲಿ, ಓದಿಸುವ ಕಾಯಕ, ವಚನಗಾಯನ ಕಾಯಕ, ಪುರಾಣ ಕಾಯಕ ಮುಂತಾದವುಗಳು. ಎಲ್ಲ ಕಾಯಕಗಳಿಗೂ ತಿಲಕಪ್ರಾಯವಾದ ಅರಿವು ಜ್ಞಾನವನ್ನು ಪ್ರಜೆಗಳಿಗೆ ನೀಡಿ ಅವರನ್ನು ಸತ್ಪ್ರಜೆಗಳನ್ನಾಗಿ ಮಾಡುವ ಕಾರ್ಯದಲ್ಲಿ ವಿಜಯನಗರ ಅರಸರು ಮುಂಚೂಣಿಯಲ್ಲಿದ್ದರೆಂಬ ಸಂಗತಿ ತಿಳಿದುಬರುತ್ತದೆ. ಲಕ್ಕಣ್ಣ ದಂಡೇಶರಿಗೆ ವೀರಶೈವ ಸಿದ್ಧಾಂತದ ಬಗೆಗಿದ್ದ ಗೌರವವನ್ನು ಕಾಣಬಹುದು. ರುದ್ರಲೀಲೆಯಲ್ಲಿ ಬರುವ ವರಾಹನ ಚಿತ್ರವನ್ನು ಹೀಗೆ ವರ್ಣಿಸಿದ್ದಾರೆ. **ಸೆಡೆದ ಕಿವಿ, ಬಿಡಗಣ್ಣು ನಿಡುವಾಡೆ, ಗಿರಿಯಂತೆ ಜಡಿವ ರೋಮಮಂ ಸುಳಿವ ನಾರೈವ ನಾಸಿಕದ ಅಡಿಗಡಿಗೆ ತಲೆಗೂಡಿಸಿ ಘುಡುಘುಡಿಸಿ ಮುಂಗಾಲ ಕೆರವುತಂ ಶಿರವಬಾಗಿ** ಎನ್ನುವ ಕವಿ ಕಾಡುಹಂದಿಯ ಸ್ವಭಾವವನ್ನು ನೈಜವಾಗಿ ಚಿತ್ರಿಸಿ ತನ್ನ ಕವಿತಾಸಾಮರ್ಥ್ಯವನ್ನು ತೋರಿದ್ದಾನೆ.

ಸಾಹಿತ್ಯಿಕ ಅಂಶಗಳು

ಶಿವತತ್ವ ಚಿಂತಾಮಣಿಯಲ್ಲಿ ಬರುವ ವರ್ಣನೆಗಳು ಕೇವಲ ವರ್ಣನೆಗಾಗಿ ಬರದೆ ಶಿವತತ್ವವನ್ನು ಸಾರುವ ಪ್ರತೀಕಗಳಾಗಿ ಕಂಡುಬರುತ್ತಿರುವುದು ಕವಿಪ್ರತಿಭೆಗೆ ಸಾಕ್ಷಿಯಾಗಿದೆ. ಪಾರ್ವತಿ ಪರಮೇಶ್ವರರ ರಾಸ ಕ್ರೀಡೆಯ ಭವ್ಯ ಚಿತ್ರಣವನ್ನು ಕೆಳಗಿನ ಪದ್ಯದಲ್ಲಿ ಕಾಣಬಹುದು: **ಎಲ್ಲಿ ಉದ್ಯಾನವನವೆಲ್ಲಿ ರಮ್ಯ ಸ್ಥಾನವೆಲ್ಲಿ, ಶೈತ್ಯಾಗಾರವೆಲ್ಲಿ ಪಲ್ಲವ ಗೃಹಗಳೆಲ್ಲಿ, ಗಿರಿಕಂದರ ವಿಹಾರ ಸ್ಥಳಂ ಭದ್ರಮಣಿ ಮಾಡಭವನಮೆಲ್ಲಿ ಅಲ್ಲಿಗಲ್ಲಿಗೆ ಲೋಕಜನನಿ ಸಹಿತೆಲ್ಲೆಡೆ ಯೊಳುಲ್ಲಸಿತ ಮುಖಬಾಗಿ ಸೌಖ್ಯದಿಂದ ಕ್ರೀಡಿಸಿದ ಮಲ್ಲಿಕಾರ್ಜುನನ ಸುಖಲೀಲೆಯೆನಲರಿಪುವನ ಚರಣಾಂಬುಜಕೆ ಶರಣು** ಎನ್ನುವ ಕವಿ ಪ್ರಕೃತಿಯನ್ನು ಗಿರಿ ಕಂದರಗಳನ್ನು ಉದ್ಯಾನಗಳನ್ನು ತಂಪಾದ ಗೃಹಭವನಗಳನ್ನು ಬಳಸಿ ಸಾಹಿತ್ಯಿಕವಾಗಿಯೂ ತನ್ನ ಕವಿತಾ ಸಾಮರ್ಥ್ಯವನ್ನುಮೆರೆದಿದ್ದಾರೆ. ಕನ್ನಡದ ನುಡಿಗಟ್ಟುಗಳನ್ನು, ಗಾದೆಗಳನ್ನು ಉಪಮೆ, ಲೋಕೋಕ್ತಿಗಳನ್ನು ಅಲಂಕಾರೋಕ್ತಿಗಳನ್ನು ಬಳಸಿರುವುದನ್ನು ಕೆಳಗಿನ ಸಾಲುಗಳಲ್ಲಿ ಕಾಣಬಹುದು.

ಮರುಳ ನೋರ್ವಂ ತನ್ನ ತಾಯ್ ಬಂಜೆಯೆಂದಂತೆ, ಗೋವು ತನ್ನಯ ಕರುವಿಗಂ ನಲಿದು ತೋರೆವಂತೆ, ಭಿತ್ತಿಯೊಳ್ ಬರಿದಿರ್ದ ಚಿತ್ರಮಯ ಪಾಪೆಯಂತೆ, ಆಕಾಶದೊಳು ಪೊಳೆವಮಿಂದ್ರಚಾಪದಂತೆ, ಕನಸಿನೊಳು ನವನಿಧಿ ನಡೆದು ನೀಲಾದ್ರಿಗೊಲಿದು, ಕೈಕಾಲು ಮೂಡಿದವೋ, ಬೇವಿನ ಮರಕ್ಕೆ ಬೆಲ್ಲವ ಕಟ್ಟೆಕಟ್ಟಿ, ಗೋವಿನ ಹಸಿಯ ಹಾಲನೆರೆದಡಂ ತನ್ನ ಗುಣಹೋದುದೇ? ಕೈಯ್ಯ ನೀರಂ ಚೆಲ್ಲಿ ಬಯಲು ದೊರೆಗೆ ಸಲೆ ಪರಿವಂತೆ, ಉದ್ದದಿಂದ ಬಿದ್ದವರನೊದ್ದೊದ್ದು ಕೊಲುವಂತೆ, ರೂಪನರಿದ ಬಳಿಕ ದರ್ಪಣದ ಹಂಗೇಕೆ?, ಜಾತಸ್ಯ ಮರಣವೆಂಬುದು ತಪ್ಪದು ರೋಗಿ ಬಲ್ಲನೆ ಯಣ್ಣೆವಾಲ ರುಚಿಯಂ – ಮುಂತಾದ ನಾಣ್ಣುಡಿಗಳನ್ನು ರೂಪಕಗಳನ್ನು ಪ್ರಯೋಗಿಸಿ ಕಾವ್ಯ ರಚಿಸಿದ್ದಾನೆ ಲಕ್ಕಣ್ಣ ದಂಡೇಶ ಕವಿ. ಜನಸಾಮಾನ್ಯರಿಗೂ ಪರಿಚಿತವಾಗಿರುವ ವಸ್ತುಗಳನ್ನು ಉದಾಹರಿಸಿ, ಅರ್ಥವಾಗುವ ಸರಳ ವಾಕ್ಯಗಳನ್ನು ಬಳಸಿರುವುದು ವಿಶೇಷ. ಸಾಹಿತ್ಯಿಕವಾಗಿ ಶಿವತತ್ವ ಚಿಂತಾಮಣಿ ಗ್ರಂಥ, ಪುರಾಣಕೃತಿಯಾದರೂ ಲಕ್ಕಣ್ಣ ದಂಡೇಶ ಕವಿ ತನ್ನ ಪ್ರತಿಭೆಯನ್ನು ಬಳಸಿ ಇದನ್ನು ಸುಂದರ ಕಾವ್ಯವನ್ನಾಗಿಸಿದ್ದಾನೆ. ಭಕ್ತಿರಸದೊಂದಿಗೆ ಇತರ ರಸಗಳನ್ನು ಪೋಷಕವಾಗಿ ಬಳಸಿ ಕಾವ್ಯಪ್ರಕಾರವನ್ನು ಶ್ರೀಮಂತಗೊಳಿಸಿದ್ದಾರೆ. ಶಿವಾಗಮ ಮತ್ತು ಪುರಾಣಗಳನ್ನು ಆಧರಿಸಿ ರಚಿತವಾದ ಈ ಕೃತಿಯಲ್ಲಿ ಸಂಸ್ಕೃತ ಪದಗಳನ್ನು ಜೊತೆಗೆ ಅಂದಿನ ಕಾಲದ ಕೆಲವು ಫಾರಸಿ ಶಬ್ಧಗಳನ್ನು ಹಿತಮಿತವಾಗಿ ಪ್ರಯೋಗಿಸಿರುವುದು ಕಂಡುಬರುತ್ತದೆ. ನೂತನ ಗಣಂಗಳ ಕುರಿತ ಬರೆದ ವೀರಶೈವ ಕವಿಗಳಲ್ಲಿ ಲಕ್ಕಣ್ಣ ದಂಡೇಶನೆ ಪ್ರಥಮ ಕವಿ ಎಂದು ಕವಿ ಚರಿತ್ರೆಕಾರರು ಗುರುತಿಸಿದ್ದಾರೆ.

ಚಾರಿತ್ರಿಕ ಮಹತ್ವ

ವಿಜಯನಗರ ಚಕ್ರವರ್ತಿ ಪ್ರೌಢದೇವರಾಯ, ಕಳಿಂಗದ ಗಜಪತಿಯನ್ನು ಗೆದ್ದುದರಿಂದಾಗಿ ಆತನಿಗೆ "ಗಜಬೇಂಟೆಕಾರ" ಎಂಬ ಬಿರುದು ಪ್ರಾಪ್ತವಾಯಿತು. ಈ ಬಿರುದನ್ನು ಆತನ ಆಪ್ತನಾದ ಲಕ್ಕಣ್ಣ ದಂಡೇಶ ತನ್ನ ಕಾವ್ಯದಲ್ಲಿಯೂ ಬಳಸಿ, ಪ್ರೌಢದೇವರಾಯನಲ್ಲಿ ತನಗಿದ್ದ ಗೌರವವನ್ನು ವ್ಯಕ್ತಪಡಿಸಿದ್ದಾನೆ. **ಧರೆಗಧಿಕ ಮೂರು ರಾಯರ ಗಂಡನ ಪ್ರತಿಮ ಬಿರುದಂಗ ಗಜವೇಂಟೆಕಾರ ದೇವೇಂದ್ರ ಭೂವರಸ** ಎಂದಿದ್ದಾನೆ. ಚಾರಿತ್ರಿಕವಾಗಿಯೂ ಮಹತ್ವವುಳ್ಳ ಶಿವತತ್ವ ಚಿಂತಾಮಣಿ ಕಾವ್ಯ ಗ್ರಂಥದಲ್ಲಿ ವಿಜಯನಗರಿಯಲ್ಲಿ ಪ್ರೌಢದೇವರಾಯ ರಾಜ್ಯವಾಳುತ್ತಿದ್ದ ಸಂಗತಿಯನ್ನು ಕವಿ ಉಲ್ಲೇಖಿಸಿ ತನ್ನ ನಿಷ್ಠೆಯನ್ನು ವ್ಯಕ್ತಪಡಿಸಿದ್ದಾನೆ. **ನಿಜಭುಜ ಪರಾಕ್ರಮದಿ ಮೂರುರಾಯರೆನಿಪ್ಪ ಗಜಘಟೆಗಳನ್ನು ವಿದಾರಿಸಿ, ಪಂಚಮುಖನಾಗಿ, ಸುಜನರಂ ಪರಿರಕ್ಷಿಸುತ ಶಿವಾರ್ಚಕರಿಗನಿಶಂ ಸಮಾಧಾನವಿತ್ತು, ವೃಜಿನ ಹರ ಪಂಪಾ ವಿರೂಪಾಕ್ಷ ಚರಣಮ ಭಜಿಸುತಂ ವಿಜಯಕಲ್ಯಾಣ ಪುರದೊಳು ಮೆರೆವ, ವಿಜಯನೆನೆ ದೇವರಾಜೇಂದ್ರನ್.....** ಮುಂತಾಗಿ ಕವಿ ವರ್ಣಿಸಿದ್ದಾನೆ. ಪ್ರೌಢದೇವರಾಯ ಪಟ್ಟಾಭಿಷಿಕ್ತನಾದ ನಂತರ ಹಂಪೆಯ ವಿರೂಪಾಕ್ಷ ದೇವಾಲಯದ ಸಂಕೀರ್ಣವನ್ನು ವಿಸ್ತರಿಸಿ, ನಾಲ್ಕು ದಿಕ್ಕುಗಳಲ್ಲಿ ಗೋಪುರ ನಿರ್ಮಿಸಿ, ಕಳಸ ಸ್ಥಾಪಿಸಿ, ಸುತ್ತ ಕೋಟೆ ಗೋಡೆ ನಿರ್ಮಿಸಿ, ರಥಬೀದಿಯನ್ನು ವಿಶಾಲಗೊಳಿಸಿದ ಸಂಗತಿಗಳನ್ನು ಕವಿ ತನ್ನ ಕಾವ್ಯದಲ್ಲಿ ಉಲ್ಲೇಖಿಸಿದ್ದಾನೆ.

ದೇವಲೋಕದ ಸಕಲ ವೈಭವಂಗಳು ಸಹಿತ ಭೂವಿನುತ ವಿಜಯಕಲ್ಯಾಣ ಪುರಕೆಯ್ತಂದು ಭಾವಜವಿದಾರಿ ಪಂಪಾ ವಿರೂಪಾಕ್ಷ ಭವನದ ನಾಲ್ಕು ದೆಸೆಗಳಲ್ಲಿ, ತೀವಿಕಕ್ಕಿರೆಗಿರೆದ ಮಣಿಗಳಸ ಕೋಟೆಗಳ, ಲಾವಣ್ಯತರ ಗೋಪುರಂಗಳು ರಚಿಸಿದಂ, ರಾಜಧಾನಿಯ ಒಡೆಯ ವಿರೂಪಾಕ್ಷ ದೇವಾಲಯ ಜೀರ್ಣೋದ್ಧಾರ ಮಾಡಿಸಿ ರಥಗಳನ್ನು ನಿರ್ಮಿಸಿ, ಸಾಂಸ್ಕೃತಿಕ ಸೇವೆಗಳನ್ನು ಉತ್ಸವಗಳನ್ನು ಆರಂಭಿಸಿ, ವಿಜಯನಗರ ವೈಭವದ ವರ್ಣನೆ ಮಾಡಿ, ಕಾವ್ಯದಲ್ಲಿ ದಾಖಲಿಸಿರುವ ಕವಿಗಳಲ್ಲಿ ಲಕ್ಕಣ್ಣ ದಂಡೇಶನೆ ಮೊದಲಿಗನೆಂದು ಕವಿ ಚರಿತ್ರಕಾರರು ಉಲ್ಲೇಖಿಸಿದ್ದಾರೆ. ಕವಿಯ ಪ್ರಕಾರ ವಿಜಯನಗರವು, **ಪರಹಿತದ ಬೀಡು ಸತ್ಯದ ನುಡಿಯ ನಡುನಾಡು ಕರುಣಾಬ್ಧಿಯಿಕ್ಕೆ ಕಾಮಿತ ಸುಖದ ತೆಕ್ಕೆ ಶಶಿಧರನ ಸಾಮರ್ಥ್ಯದಾಗರ, ಸದಾಚಾರ ಸದ್ಭಕ್ತಿಗಳ ಜನ್ಮಭೂಮಿ, ಪರತರ ಶಿವಾನುಭಾವಿಗಳ ಪರಿಮಿತ ಗೃಹಂ..........** ಮುಂತಾಗಿ ವರ್ಣಿಸಿದ್ದಾನೆ. ವಿಜಯನಗರ ಸ್ಥಾಪಕರು ವಿದ್ಯಾರಣ್ಯರು ಎಂಬ ಪ್ರತೀತಿ ಇದೆ. ಆದರೆ ಶಾಸನಗಳಲ್ಲಿ ಮತ್ತು ಸಾಹಿತ್ಯ ಕೃತಿಗಳಲ್ಲಿ ಉಲ್ಲೇಖವಾಗಿರುವಂತೆ ಸಂಗಮ ವಂಶದ ದೊರೆಗಳಿಗೆ ರಾಜಗುರುಗಳಾಗಿದ್ದವರು, ಶೈವ–ವೀರಶೈವ ಮತಾವಲಂಬಿಗಳಾದ ಕ್ರಿಯಾಶಕ್ತಿ ಮುನಿಗಳು. ಈ ಕ್ರಿಯಾಶಕ್ತಿ ಮುನಿಗಳ ಉಲ್ಲೇಖ ಕ್ರಿ.ಶ. 1347ರ ಸೊರಬ ಶಾಸನದಲ್ಲಿ ಮತ್ತು ಗಂಗಾದೇವಿ ವಿರಚಿತ *ವೀರಕಂಪಣ್ಣರಾಯ ಚರಿತ* ಕಾವ್ಯದಲ್ಲಿ ಕಂಡುಬರುತ್ತದೆ. ಸಂಗಮ ವಂಶದ ರಾಜಗುರುಗಳಾದ ಕ್ರಿಯಾಶಕ್ತಿ ಮುನಿಗಳ ಉಲ್ಲೇಖವನ್ನು ಲಕ್ಕಣ್ಣ ದಂಡೇಶನೂ ತನ್ನ ಕಾವ್ಯದಲ್ಲಿ ಹೀಗೆ ವರ್ಣಿಸಿದ್ದಾನೆ: **ಸತ್ಕ್ರಿಯಾಶಕ್ತಿ ನಾಮಂ ಪಡೆದು ವರ್ತಿಸುತ್ತ, ಭಕ್ತಿ ಮುಕ್ತಿಗಳ ನೀವುತ ಸಂಸ್ಕೃತಿಯೊಳತಿವಿರಕ್ತ, ಭವದೊಳಾಚರಿಪ ಸುಮಾರ್ಗ ಕ್ರಿಯಾ ಶಕ್ತಿಯತಿ, ರಾಯನೆ ವಿರುಪಾಕ್ಷ** ಎಂದು ಸ್ಮರಿಸಿದ್ದಾನೆ.

ದೇವಗಿರಿಯನ್ನು ಆಳಿದ ಯಾದವ ದೊರೆ ರಾಮಚಂದ್ರನನ್ನು (ಕ್ರಿ.ಶ. 1279–1309) ಕುರಿತು **ದೇವಗಿರಿನಾಳ್ವ ಅತಿದಾನಿ ಮನ್ನೆಯ ರಾಮರಸ** (ಸಂಧಿ 38 ಪದ್ಯ 139) ಎಂದು ಉಲ್ಲೇಖಿಸಿ ಆತನು ವೀರಶೈವನಾಗಿದ್ದನೆಂದು ಸೂಚಿಸಿದ್ದಾನೆ. ಚಾರಿತ್ರಿಕ ಮಹತ್ವದ ದೃಷ್ಟಿಯಿಂದ ಶಿವತತ್ವ ಚಿಂತಾಮಣಿ ಗ್ರಂಥದ ಅಧ್ಯಯನ ಸಮಗ್ರವಾಗಿ ನಡೆಯಬೇಕಾಗಿದೆ.

ಪೌರಾಣಿಕ ಮಹತ್ವ

ಶಿವತತ್ವ ಚಿಂತಾಮಣಿ ಕಾವ್ಯ, ಪುರಾಣಕೃತಿಯಾಗಿಯೂ ಮಹತ್ವದ ಸ್ಥಾನ ಪಡೆದಿದೆ. ಕೃತಿಯಲ್ಲಿ ಶಿವಪಾರ್ವತಿಯರ ಮತ್ತು ಶಿವಶರಣರ ಕಥೆಗಳನ್ನು ಒಳಗೊಂಡಿರುವುದು ವಿಶೇಷ. ಶಿವನ 25 ಲೀಲೆಗಳು ಕಾವ್ಯದಲ್ಲಿ ಪ್ರಸ್ತಾಪಿಸಲ್ಪಟ್ಟಿವೆ. ಸಂಸ್ಕೃತದಲ್ಲಿದ್ದ ಶಿವನ ಲೀಲೆಗಳನ್ನು ಮೊದಲಬಾರಿಗೆ ಕನ್ನಡದಲ್ಲಿ ಸಮಗ್ರವಾಗಿ ಚಿತ್ರಿಸಲಾಗಿದೆ. ವೀರಶೈವ ಸಾಹಿತ್ಯದ ಪುನರುಜ್ಜೀವನ ಸಂದರ್ಭದಲ್ಲಿ ರಚಿತವಾಗಿರುವ ಶಿವತತ್ವ ಚಿಂತಾಮಣಿ ಕೃತಿಯಲ್ಲಿ ವೀರಶೈವ ಸಿದ್ಧಾಂತದ ಪ್ರತಿಪಾದನೆ ಕಂಡುಬರುತ್ತದೆ. ವೀರಶೈವ ಧರ್ಮದ ತತ್ವ ಆಚರಣೆಗಳನ್ನು ಸೈದ್ಧಾಂತಿಕ ಹಿನ್ನೆಲೆಯಲ್ಲಿ ನಿರೂಪಿಸಲಾಗಿದೆ.

ಕನ್ನಡದಲ್ಲಿ ಬಳಕೆಯಲ್ಲಿದ್ದ ಗಾದೆಗಳನ್ನು ನಾಣ್ಣುಡಿಗಳನ್ನು ರೂಪಕಗಳನ್ನಾಗಿ ಬಳಸಿ, ಸರಳವಾಗಿ ಕೃತಿ ರಚಿಸಿದ್ದಾನೆ ಕವಿ ಲಕ್ಕಣ್ಣ ದಂಡೇಶ. ಉಪಮೆಗಳು ಲೋಕೋಕ್ತಿಗಳು, ನಿದರ್ಶನಗಳು, ಜನಸಾಮಾನ್ಯರಿಗೆ ಪರಿಚಿತವಾದ ವಸ್ತು ವಿಶೇಷಗಳನ್ನು ಕಾವ್ಯ ಒಳಗೊಂಡಿದೆ. ಸುಂದರವಾದ (ನಡುಗನ್ನಡ) ಭಾಷಾ ಶೈಲಿಯಲ್ಲಿ ರಚಿತವಾಗಿರುವ ಶಿವತತ್ವ ಚಿಂತಾಮಣಿ ಕೃತಿ ಸರಳವಾಗಿ ಓದಿಸಿಕೊಳ್ಳುತ್ತದೆ. ಈ ಕೃತಿಯ ಪ್ರಭಾವ ಸಮಕಾಲೀನ ಮತ್ತು ನಂತರದ ಕವಿಗಳ ಮೇಲೆ ಆಗಿರುವುದನ್ನು ಕಾಣಬಹುದು. ಗುಬ್ಬಿಯ ಮಲ್ಲಣಾರ್ಯ (ಕ್ರಿ.ಶ. 1513), ಸಿದ್ಧನಂಜೇಶ (ಕ್ರಿ.ಶ. 1650) ಕ್ರಮವಾಗಿ ತಮ್ಮ ವೀರಶೈವಾಮೃತ ಮಹಾಪುರಾಣ ಮತ್ತು ಬಸವಲಿಂಗನ ಬಸವೇಶ್ವರ ಪುರಾಣ ಮುಂತಾದ ಕೃತಿಗಳು ಲಕ್ಕಣ್ಣ ದಂಡೇಶನ ಶಿವತತ್ವ ಚಿಂತಾಮಣಿ ಕಾವ್ಯದಿಂದ ಸ್ಫೂರ್ತಿ ಪಡೆದು ಉಪಕೃತರಾಗಿದ್ದಾರೆ ಎಂದು ಕವಿಚರಿತ್ರೆಕಾರರು ಗುರುತಿಸಿದ್ದಾರೆ.

ವಿಜಯನಗರ ಕಾಲದ ಐತಿಹಾಸಿಕ, ಧಾರ್ಮಿಕ, ಸಾಮಾಜಿಕ ಆರ್ಥಿಕ ಸಂಗತಿಗಳನ್ನು ತಿಳಿಯಬಹುದಾದ ಮಹತ್ವದ ಕಾವ್ಯ ಕೃತಿ ಶಿವತತ್ವ ಚಿಂತಾಮಣಿ. ಕನ್ನಡ ಸಾಹಿತ್ಯದಲ್ಲಿ ಚಾರಿತ್ರಿಕ ಸಂಗತಿಗಳನ್ನು, ಆ ಕಾಲದ ಉಪಯುಕ್ತ ಮಾಹಿತಿಗಳನ್ನು ಒಳಗೊಂಡ ಕೃತಿಗೆ ಐತಿಹಾಸಿಕವಾಗಿ, ಸಾಂಸ್ಕೃತಿಕವಾಗಿ ಮಹತ್ವ ಸ್ಥಾನವಿದೆ. ವೀರಶೈವ ಪುರಾಣ ಕೃತಿ ಎಂದು ಕರೆಯಲ್ಪಟ್ಟಿದ್ದರೂ, ಶಿವ ಲೀಲೆಗಳು, ವೀರಶೈವ ತತ್ವಗಳು ಶರಣದ ಕಥೆಗಳು, ಶರಣ ಕಾಯಕಗಳನ್ನು ಒಳಗೊಂಡ ಅಪರೂಪದ ಕೃತಿ ಲಕ್ಕಣ್ಣ ದಂಡೇಶರ **ಶಿವತತ್ವ ಚಿಂತಾಮಣಿ** ಕಾವ್ಯ ಓದಿದವರ, ಕೇಳಿದವರ ಚರಣಾಂಬುಜಕೆ ಶರಣು.

ಆಕರಗಳು

1. ಮುಗಳಿ ರಂ.ಶ್ರೀ, *ಕನ್ನಡ ಸಾಹಿತ್ಯ ಚರಿತ್ರೆ,* 1993, ಪ್ರಕಾಶಕರು: ಗೀತಾ ಬುಕ್ ಹೌಸ್, ಮೈಸೂರು.
2. ನರಸಿಂಹಾಚಾರ್ಯ ಆರ್., *ಕರ್ನಾಟಕ ಕವಿ ಚರಿತೆ,* 1973, ಪ್ರಕಾಶಕರು: ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು–18.
3. ಡಾ॥ ಅನಂತಮೂರ್ತಿ ಯು.ಆರ್., (ಪ್ರ.ಸಂ.) *ವೀರಶೈವ ಧರ್ಮದರ್ಶನ,* ಸಂಪುಟ 2, 2003, ಪ್ರಕಾಶಕರು: ಜೆ.ಎಸ್.ಎಸ್. ಗ್ರಂಥಮಾಲೆ, ಮೈಸೂರು.
4. ಡಾ॥ ಉಮಾದೇವಿ ಸಿ.ಯು., *ಲಕ್ಕಣ್ಣ ದಂಡೇಶ,* 2006, ಪ್ರಕಾಶಕರು: ಬಸವ ತತ್ವ ಪ್ರಚಾರ ಹಾಗೂ ಸಂಶೋಧನಾ ಕೇಂದ್ರ, ಬೆಂಗಳೂರು–98.
5. ಬಸಪ್ಪ ಎಸ್.ಎಂ.ಪಂ. (ಸಂ.), *ಶಿವತತ್ವ ಚಿಂತಾಮಣಿ,* 1960, ಪ್ರ. ಮೈಸೂರು ವಿಶ್ವವಿದ್ಯಾನಿಲಯ.

27. ಹರಪನಹಳ್ಳಿ ತಾಲ್ಲೂಕಿನ ಕೆರೆ, ಬಾವಿ ಇತ್ಯಾದಿ

ಡಾ॥ ಹರಿಹರ ಶ್ರೀನಿವಾಸರಾವ್

ನೀರು ನಾಗರಿಕತೆಗೆ ಮೂಲ. "ಜಲಂ ಜೀವನಂ" ಇದು ಋಗ್ವೇದದ ವಾಕ್ಯ. ಎಲ್ಲ ಕಡೆಗಳಲ್ಲೂ ನದಿಗಳು ಹರಿಯುವುದು ಸಾಧ್ಯವಿಲ್ಲದ ಕಾರಣ ಕೃತಕ ಜಲಾಕರಗಳ ನಿರ್ಮಾಣ ಅನಿವಾರ್ಯವೆನಿಸಿತು. ಹಳ್ಳಿಗಳು, ಗ್ರಾಮಗಳು, ಪಟ್ಟಣಗಳಲ್ಲಿ ಜನವಸತಿ ಪ್ರಾರಂಭವಾದಂತೆ ಅವುಗಳ ಉಪಯೋಗದ ಸಲುವಾಗಿ ನೀರಿನ ನೆಲೆಗಳನ್ನು ಸೃಷ್ಟಿಸುವ ಕೈಂಕರ್ಯ ಮೊದಲಿಟ್ಟಿತು. ಹೀಗೆ ಜನವಸತಿಗೆ ತಕ್ಕಂತೆ ಬಾವಿ, ಕೆರೆ ಕಟ್ಟೆ, ಕುಂಟೆ, ಹೊಂಡ, ಸರೋವರ, ಸಮುದ್ರ, ಅಣೆಕಟ್ಟು, ಕಟ್ಟೆ, ಮೊದಲಾದ ಜಲಕಾಯಗಳು ಕಟ್ಟಲ್ಪಟ್ಟವು. ಕೆರೆ ಕಟ್ಟೆಗಳಿಗೂ, ದೇವರು, ಗುಡಿಗುಂಡಾರಗಳಿಗೂ ಅವಿನಾಭಾವದ "ನಂಟು" ಇರುವುದನ್ನು ಜನಪದ, ಐತಿಹ್ಯ, ಇತಿಹಾಸ, ಶಾಸನ, ಸಾಹಿತ್ಯ ಇತ್ಯಾದಿ ಆಧಾರಗಳಿಂದ ತಿಳಿದುಬರುತ್ತದೆ. "ಊರಿಗೊಂದು ಕೆರೆ ಇರಬೇಕು ಇಲ್ಲವೇ ಎರೆ ಇರಬೇಕು" ಎನ್ನುವುದು ನಮ್ಮ ಜಾಣ ಜಾನಪದರ ಅಂಬೋಣ. ಈ ಸರಳ ನುಡಿ ಜನರು ಕೆರೆಗೆ ಕೊಟ್ಟ ಪ್ರಾಧಾನ್ಯತೆಯ ಸಂಕೇತವಲ್ಲವೇ?

ಕೆರೆನಿರ್ಮಾಣ ಒಂದು ಸಂಕೀರ್ಣ ವಿಚಾರ. ಇದರಲ್ಲಿ ಧಾರ್ಮಿಕ ನಂಬಿಕೆ ಅಂದರೆ ಜೀವನದ ಸಾರ್ಥಕತೆಯನ್ನು ಕಂಡುಕೊಂಡವರು ನಮ್ಮ ಜನಗಳು. ಅದು ಸಿದ್ಧರಾಮರಂತಹ ಯೋಗಪುರುಷರಾಗಿರಲಿ, ಚಕ್ರವರ್ತಿ, ರಾಜ, ರಾಣಿ, ಸೇನಾಪತಿ, ಶ್ರೀಮಂತ ಅಥವಾ ಶ್ರೀಸಾಮಾನ್ಯರಾಗಿರಲಿ ಇಂತಹವರುಗಳೆಲ್ಲ ತಮ್ಮ ಬದುಕಿನ ಸಾರ್ಥಕತೆಯನ್ನು ಕಂಡುಕೊಂಡಿರುವುದು ಈ ಮಣ್ಣಿನ ಐತಿಹಾಸಿಕ ಕೆರೆ ಕಟ್ಟೆಗಳನ್ನು ಕಟ್ಟಿ, ಉಳಿಸಿ, ಬೆಳೆಸುವ ಪರಂಪರೆಯಲ್ಲಿಯೇ. ಹೀಗೆ ಕೆರೆಗಳು ವ್ಯಕ್ತಿಸ್ವರೂಪದಲ್ಲಿ ನಿರ್ಮಾಣವಾಗಿದ್ದರೂ, ಸೃಷ್ಟಿಯ ಮೂಲ ಭೂತಧಾತುಗಳಲ್ಲಿ ಎರಡನೆಯ ಪ್ರಮುಖ ಕಾರಣವಾಗಿರುವ ಜಲದ ಅವಶ್ಯಕತೆಗೆ ತಕ್ಕಂತೆ ಅಂದಂದಿಗೆ ಲಭ್ಯವಿದ್ದ ತಂತ್ರಜ್ಞಾನಗಳನ್ನು ಬಳಸಿಕೊಂಡು ಬೆಳೆದು ನಿಂತಿರುವ ಹಾಗೂ ಇಂದಿಗೂ ಲಕ್ಷಾಂತರ ಜನ–ಜೀವಿಗಳಿಗೆ ಜೈವಿಕ ನೆಲೆಗಳೆನಿಸಿವೆ. ಈ ಎಲ್ಲ ಸು–ಲಕ್ಷಗಳಿಗೆ ಹರಪನಹಳ್ಳಿ ತಾಲ್ಲೂಕಿನ ವಿಜಯನಗರ ಕಾಲದ ಕೆರೆಗಳು ಪ್ರತ್ಯಕ್ಷ ಹಾಗೂ ಪರೋಕ್ಷ ಪ್ರಮಾಣಗಳೆನಿಸಿವೆ ಎನ್ನುವುದನ್ನು ಇಲ್ಲಿ ಪ್ರಸ್ತುತ ಪಡಿಸಲಾಗಿದೆ.

ಹೊಯ್ಸಳರ ಹಾಗೂ ಯಾದವರನಂತರ ಕರ್ನಾಟಕವನ್ನಾಳಿದವರು ವಿಜಯನಗರದ ಅರಸರು. ಇವರ ತವರು ಜಿಲ್ಲೆ (ಹಿಂದೆ ಬಳ್ಳಾರಿ, ಈಗ ದಾವಣಗೆರೆ ಜಿಲ್ಲೆ) ಹರಪನಹಳ್ಳಿ ತಾಲ್ಲೂಕಿನಲ್ಲಿ ಕೃಷ್ಣದೇವರಾಯ, ಅಚ್ಯುತರಾಯ ಹಾಗೂ ಸದಾಶಿವರಾಯನ ಕಾಲದ ಶಾಸನಗಳಲ್ಲಿ ಕೆರೆ ಮತ್ತು ನೀರಿಗೆ ಸಂಬಂಧಿಸಿದಂತಹ ಶಾಸನಗಳು ಕ್ವಚಿತ್ತಾಗಿ ಕಂಡುಬಂದರೂ ಕೆಲವು ಮಹತ್ವದ ವಿಚಾರಗಳನ್ನು ಹೊಂದಿವೆ. ಕೆರೆ ಕಟ್ಟಿಸಲು ಹೆಚ್ಚು ಹಣ ಬೇಕಾಗುತ್ತಿದ್ದುದರಿಂದ ರಾಜರೂ, ಸಾಮಂತರೂ, ಶ್ರೀಮಂತರೂ ಅಥವಾ ಪ್ರಭಾವಶಾಲಿಗಳಾದ ಸನ್ಯಾಸಿಗಳು ಅಂತಹ ಕಾರ್ಯಗಳಿಗೆ ಮುಂದೆ ಬರುತ್ತಿದ್ದರು. ತಮ್ಮ ರಾಜನಿಗೆ ಒಳ್ಳೆಯದಾಗಬೇಕೆಂಬ ಆಶಯದ ಹಿನ್ನೆಲೆಯಿಂದಲೇ ತಮ್ಮ ಸ್ವಾಧೀನದಲ್ಲಿದ್ದ ಹಳ್ಳಿಗಳನ್ನು ದಾನ ಕೊಟ್ಟು ಕೆರೆ ನಿರ್ಮಿಸಲು ಸಹಾಯಮಾಡುತ್ತಿದ್ದರು. ಶಾಲಿವಾಹನ ಶಕೆ 1446ನೆಯ ಸ್ವಭಾನು ಸಂವತ್ಸರದ ಕಾರ್ತಿಕ, ಶು. 12, ಸೋಮವಾರದ ದಿನ (ಕ್ರಿ.ಶ.7–11–1524), ಆರ್ಯಕ್ಷತ್ರಿಯ ಕುಲದ ಮುರಾರಿ ರಾವುತ್ತನ ಮಗನಾದ "ಸಣರಾವುತ್ತನು ದೇವರು ಭಟ್ಟರ ಮಗನಾದ ನಾರಾಯಣ ಭಟ್ಟನಿಗೆ ಉಚ್ಚಂಗಿ ನಾಡಿನ ಒಳಗಿದ್ದ ಚಟ್ಟಣ ಹಳ್ಳಿಗ್ರಾಮವನ್ನು ದಾನ

ನೀಡಿದುದನ್ನು ಹೀಗೆ ಉಲ್ಲೇಖಿಸುತ್ತದೆ. (ಶಾ.ಸಂ. 3, ಪು. 456, *ಬಳ್ಳಾರಿ ಜಿಲ್ಲೆಯ ಶಾಸನ ಸಂಪುಟ*, ಹಂಪಿ ಕನ್ನಡ ವಿಶ್ವವಿದ್ಯಾಲಯ, 1998)

7–14ನೇ ಸಾಲುಗಳು. ಕ್ರಷ್ಣರಾಯ ಮಹಾರಾಯರು ವರ್ಣಧ(ಂ)ರ್ಮಗಳನೂ ಪ್ರತಿಪಾಲಿಸಿ ಪೃಥ್ವೀರಾಜ್ಯಂಗೆಯಿಉತ್ತಯಿರೆಲೂ ಆರ್ಯ ಕ್ಷತ್ರಿಯಕುಲದ ಕಾಶ್ಯಪ ಗೋತ್ರದ ರುಕುಶಾಖೆಯ ಆಶ್ವಲಾಯನ ಸೂತ್ರದ ಮುರಾರಿರಾಉತ್ತರ ಮಕ್ಕಳು (ವಿ)ಸಣರಾಉತ್ರರೂ ಗವುತಮ ಗೋತ್ರದ ಯಜುಶಾಖೆಯ ಬಹುಧಾನ್ಯ ಸೂತ್ರದ ದೇವರು ಭಟರ ಮಕ್ಕಳು ನಾರಾಯಣ ಭಟ್ಟರಿಗೆ ಕೊಟ ದಾನಪಟೆಯ ಕ್ರಮವೆಂತ್ತೆಂದರೆ...

16 ಸಾ.–20 ಶ್ರೀ ಕೃಷ್ಣರಾಯ ಮಹಾರಾಯರೂ ನಮಗೆ ನಾಯಕತನಕೆ ಪಾಲಿಸಿದ ಉಚ್ಚಂಗಿ ವೇಂಠೆಯಕೆ ಸಲುವ ಕವಿಳಿಚರ್ವಿನ ಸೀಮೆಯ ವೊಳಗಣ ಚಟನಹಳಿಯ ಗ್ರಾಮವನೂನಾಲು ನಿಮಗೆ ಧಾರೆಯನೆರೆದು ಕೊಟೆವಾಗಿ...

ಸಾ.26–40 ಗೆ ಕೃಷ್ಣರಾಯ ಮಹಾರಾಯರಿಗೆ ಪು(ಂ)ಣ್ಯವಾಗಬೇಕೆಂದು ಉಥ್ಥಾನ ದ್ವಾದಶಿ ಕಾಲದಲೂ ತುಂಗಭದ್ರಾತೀರದಲಿ ಹರಿಹರನಾಥದೇವರ ಸಂನಿಧಿಯಲೂ ಸಹಿರ(ಂ)ಣ್ಯೋದಕದಾನ ಧಾರೆಯಂ ನೆರೆದು ಕೊಟೆವಾಗಿ ಆ ಗ್ರಾಮಕೆ ಸಲುವಂಥಾ ಮಣೆಯಪಕೆವೊಳಗಾದ ವಾರ .. ಸುಂಕ ತಳವಾರಿಕೆ .... ಗ್ರಾಮವರ್ತ್ತನೆ ನಾಡಸೇನಬೋವಿಕೆ ಹೆಗ್ಗಾರು ಮರನ ಗುತ್ತಗೆ ಹೇರುಗಾಣತೆರು... ಉಂಟಾದ ಮಣೆಯಪಾಕ ಗ್ರಾಮಕೆ ಸಲುವ ಚತುಸೀಮೆಯ ವೊಳಗಣ ಕಾಡಾರಂಭ ನೀರಾರಂಭ ..... ಅಣೆ ಅಚ್ಚುಗಟ್ಟು ....

50ನೇ ಸಾಲು ನಿಮ್ಮ ಪುತ್ರ ಪಉತ್ರಪಾರಂಪರೆಯಾಗಿ ......

51 ಸಾಲು. ದಾನಾಧಿಕ್ರಯಯೋಗ್ಯವಾದ ಸುಖದಲೂ ಅನುಭವಿಸೂದೂ ಯೆಂದು ಕೊಟ ದಾನಪಟ್ಟೆ ಯಂತಪ್ಪುದಕ್ಕೆ ಸಾಕ್ಷಿಗಳು...

ಮುಂದೆ ಶಾಪಾಶಯವಿದೆ.

ಈ ಶಾಸನದಿಂದ ತಿಳಿದು ಬರುವ ಮುಖ್ಯಾಂಶಗಳನ್ನು ಹೀಗೆ ಪಟ್ಟಿಮಾಡಬಹುದು:

1. ಕೃಷ್ಣದೇವರಾಯನು ವರ್ಣಧರ್ಮನಿಷ್ಠೆಯಿಂದ ರಾಜ್ಯ ಭಾರಮಾಡುತ್ತಿದ್ದುದು. ಇಲ್ಲಿ ವರ್ಣಧರ್ಮ ಎಂದರೆ ಯಾವುದೇ ಜನಾಂಗದವರಾಗಲೀ ಅವರವರ ಯೋಗ್ಯತೆಗೆ ತಕ್ಕಂತೆ ಮರ್ಯಾದೆ ಮಾಡುವುದು ಎಂದೂ ಅರ್ಥೈಸಬಹುದು. ಇಲ್ಲಿ ಕ್ಷತ್ರಿಯ ಕುಲದ ಮುರಾರಿರಾಉತ್ತರ ಮಕ್ಕಳು (ವಿ)ಸಣರಾಉತ್ರನು ಚಕ್ರವರ್ತಿಯಿಂದ ಅಂತಹ ಗೌರವಕ್ಕೆ ಪಾತ್ರನಾಗಿದ್ದಾನೆ. ಆತ ರಾಯನಿಗೆ ಯಾವ ರೀತಿಯಲ್ಲಿ ಸಹಾಯ ಮಾಡಿದ್ದನೆಂದು ಶಾಸನ ಹೇಳುವುದಿಲ್ಲ.

2. ಸಾಮಾನ್ಯವಾಗಿ ಹಿಂದಿನ ಕಾಲದಲ್ಲಿ ಅಜ್ಜನ ಹೆಸರನ್ನಾಗಲೀ, ತಂದೆಯ ಹೆಸರನ್ನಾಗಲೀ ಮಕ್ಕಳಿಗೆ ಇಡುವ ರೂಢಿಯಲ್ಲಿತ್ತು. ಈಗಲೂ ಇಂತಹ ಪದ್ಧತಿ ಕೆಲವರಲ್ಲಿ ಇದೆ. ಹೀಗಾದಾಗ ಫಲಾನುಭವಿಗಳು ಯಾರು ಎನ್ನುವ ಪ್ರಶ್ನೆ ಸಹಜವಾಗಿ ಗೊಂದಲಕ್ಕೆ ಈಡುಮಾಡುತ್ತದೆ. ಇಂತಹ ಗೊಂದಲಗಳು ಉಂಟಾಗದಿರಲಿ ಎಂದೇ ಹಿಂದಿನವರು ತಂದೆಯ ಹೆಸರು ಅದರ ಜೊತೆಗೆ ಗೋತ್ರ ಸೂತ್ರಗಳನ್ನೂ ಸಾಧ್ಯವಾದಾಗಲೆಲ್ಲಾ ಪ್ರಸ್ತಾಪಿಸುತ್ತಾರೆ. ಈ ಶಾಸನದಲ್ಲಿ ದಾನ ಕೊಟ್ಟವರ ಹಾಗೂ ದಾನ ತೆಗೆದುಕೊಂಡವರ ಹೆಸರಿನ ವಿವರ ಮೂರು ಸಾರಿ ಪ್ರಸ್ತಾಪಿಸಲಾಗಿದೆ.

3. (ವಿ)ಸಣರಾವುತನು ಕ್ಷತ್ರಿಯ ಕುಲಕ್ಕೆ ಸೇರಿದವನೆಂದೂ ಅವನಿಗೆ ಉಚ್ಚಂಗಿ ವೇಂಠೆಯ ನಾಯಕತ(ತ್ವ)ನದ ಗೌರವವನ್ನು (ಒಂದು ರೀತಿಯ ಮೇಲ್ದರ್ಜೆ) ಕೃಷ್ಣದೇವರಾಯನು ಕೊಟ್ಟಿದ್ದನೆಂದೂ ತಿಳಿದು ಬರುತ್ತದೆ. ಆಗ ಉಚ್ಚಂಗಿ ವೇಂಠೆ ಒಂದು ದೊಡ್ಡ ಆಡಳಿತ ಘಟಕವಾಗಿತ್ತೆಂದು ತಿಳಿಯಬಹುದಾಗಿದೆ. ಈ ಬಹುಮಾನದ ಗೌರವಕ್ಕೆ ಪೂರಕವಾಗಿಯೇ ತನ್ನ ರಾಜನಿಗೆ ಒಳ್ಳೆಯದಾಗಲಿ ಎನ್ನುವ ಸದುದ್ದೇಶದಿಂದ ಆತನ ಹೆಸರಿನಲ್ಲಿ ಅಂದು (ಇಂದೂ) ಪ್ರಸಿದ್ಧಿ ಹೊಂದಿರುವ ತುಂಗಭದ್ರಾತೀರದಲ್ಲಿ (ಇಂದಿನ ಹರಿಹರ) ನೆಲೆಸಿರುವ ಹರಿಹರನಾಥದೇವರ ಸಂನಿಧಿಯಲ್ಲಿ ಉಥ್ಥಾನ ದ್ವಾದಶಿ ಅಂದರೆ ತುಳಸೀ ಹಬ್ಬದ ಪುಣ್ಯಕಾಲದಲ್ಲಿ, ಸ ಹಿರಣ್ಯೋದಕ (ಭಂಗಾರದ ನಾಣ್ಯವನ್ನು ನೀರಿನೊಂದಿಗೆ ಊರ ಎಲ್ಲ ಪ್ರಮುಖರ ಮುಂದೆ ಸಾಕ್ಷಿ ಸಹಿತ ಬಿಡುವುದು). ಇಲ್ಲಿ ಉತ್ಥಾನ ದ್ವಾದಶಿಯನ್ನೇ ಆರಿಸಿಕೊಳ್ಳಲು ಇನ್ನೊಂದು ಊಹಿಸಬಹುದಾದ ಕಾರಣವೆಂದರೆ ಕ್ಷತ್ರಿಯರಿಗೆ/ಮರಾಠರಲ್ಲಿ ಇಂದಿಗೂ ಉಥ್ಥಾನ ದ್ವಾದಶಿಯ ತುಳಸಿ ಪೂಜೆ ಶ್ರೇಷ್ಠವೆಂದು ಹಬ್ಬವಾಗಿ ಆಚರಿಸುವುದು ರೂಢಿಯಲ್ಲಿದೆ.

4. "ಮಣೆಯಪಕ ಗ್ರಾಮಕೆ ಸಲ್ಲುವ ಚತುಸ್ಸೀಮೆಯ ವೊಳಗಣ ಕಾಡಾರಂಭ, ನೀರಾರಂಭ, ಅಣೆ ಅಚ್ಚುಗಟ್ಟು" ಇವು ಕೆರೆ ಜಲ ತಂತ್ರಜ್ಞಾನಕ್ಕೆ ಸಂಬಂಧಿಸಿದ ಪಾರಿಭಾಷಿಕ ಶಬ್ದಗಳಾಗಿವೆ. ಒಂದು ಪ್ರದೇಶದಲ್ಲಿದ್ದ ಕಾಡನ್ನು ಕಡಿದು ಸಣ್ಣ ಪುಟ್ಟ ದಿಣ್ಣೆಗಳನ್ನು ಸಮಮಾಡಿ ಕೆರೆ ಕಟ್ಟಲು ಅನುವಾಗುವಂತೆ ಮಾಡುವುದು ಕಾಡಾರಂಭ. ಮಳೆ ನೀರಿನಿಂದ ಮಾಡುವ ಬೇಸಾಯದ ಜಮೀನಿನ ಮೇಲಿನ ಕಂದಾಯ ಎಂದೂ ಇನ್ನೊಂದು ಅರ್ಥವಿದೆ.

5. ಕೆರೆ ಕಟ್ಟಿದ ಮೇಲೆ ನೀರು ನಿಲ್ಲುವಂತೆ ಮಾಡಿ ಅದರ ತೂಬು, ಕೋಡಿಗಳನ್ನು ತಾಂತ್ರಿಕ ರೀತಿಯಿಂದ ವ್ಯವಸ್ಥೆಗೊಳಿಸಿ, ಅದರಿಂದ ನೀರಾವರಿಯಾಗುವ ಹೊಲ, ತೋಟ, ಗದ್ದೆಗಳಿಂದ ಬರುವ ಸುಂಕ ಅಥವಾ ತೆರಿಗೆಯೇ ನೀರಾರಂಭ. ನದಿ, ಹಳ್ಳ ಮೊದಲಾದವುಗಳ ಪ್ರವಾಹವನ್ನು ತಡೆದು ಜಲಾಶಯವನ್ನು ನಿರ್ಮಿಸಲು ಹಾಕಿರುವ ಅಡ್ಡಗಟ್ಟೆಯೇ "ಆಣೆಕಟ್ಟು". ಕೆರೆಯ ನೀರನ್ನು ಉಪಯೋಗಿಸಿ ವ್ಯವಸಾಯಕ್ಕೆ ಉಪಯೋಗಿಸುವ ಭೂಮಿಯ ವಿಸ್ತೀರ್ಣವನ್ನು "ಅಚ್ಚುಕಟ್ಟು" ಎನ್ನುತ್ತಾರೆ.

6. ವಿಜಯನಗರ ಕಾಲದ ಗ್ರಾಮ ಜಲ ನಿರ್ವಹಣೆಯ ಸಂಘನೆಯು ಹೇಗೆ ಇತ್ತು ಎನ್ನುವುದನ್ನು ಶ್ರೀ ಜಿ.ಎಸ್ ದೀಕ್ಷಿತರು *ಕೆರೆ ನೀರಾವರಿ* (ಪು. 147) ಪುಸ್ತಕದಲ್ಲಿ ಹೀಗೆ ತಿಳಿಸುತ್ತಾರೆ. ಪ್ರತಿಯೊಂದು ಹಳ್ಳಿಯಲ್ಲಿಯೂ ಹನ್ನೆರಡು ಜನ ಅಧಿಕಾರಿಗಳಿದ್ದರು. ವಿಜಯನಗರದ ಕಾಲದಲ್ಲಿ ಇವರನ್ನು ಆಯಗಾರರು ಎನ್ನುತ್ತಿದ್ದರು. ಇಂತಹ ಆಯಗಾರರು ಈ ಕೆಳಗಿನಂತಿದ್ದರು :

ಅಧಿಕಾರಿ	ಅವರು ಮಾಡುತ್ತಿದ್ದ ಕೆಲಸ
ಶ್ಯಾನಭೋಗ	ಲೆಕ್ಕಿಗ (ಇವತ್ತಿನ ವಿಲೇಜ್ ಅಕೌಂಟೆಂಟ್)
ಗೌಂಡ	ಮುಖ್ಯಸ್ಥ
ಕಮ್ಮಾರ	ಕಬ್ಬಿಣದ ಕೆಲಸಗಾರ
ಬಡಗಿ	ಮರಗೆಲಸದವ
ಪಂಚಾಂಗಿ	ಪಂಚಾಂಗ ಹೇಳುವಾತ

ನಾಯಿಂದ	ಕ್ಷೌರಿಕ
ಮಾದಿಗ	ಚಪ್ಪಲಿ ಹೊಲಿಯುವಾತ
ಅಕ್ಕಸಾಲಿ	ಚಿನ್ನ ಬೆಳ್ಳಿ ಕೆಲಸದವ
ನೀರುಗಂಟಿ	ಕೆರೆಗಳ ಕಾವಲಿನಾಳು
ತಳಾರಿ	ಹಳ್ಳಿಯ ಕಾವಲಿನಾಳು
ಕುಂಬಾರ	ಮಡಿಕೆ ಮಾಡುವವ

ಈ ಹನ್ನೆರಡು ಮಂದಿಯು ಗ್ರಾಮಸೇವಕರು. ಅವರ ಅಧಿಕಾರ ವಂಶಪಾರಂಪರ್ಯವಾಗಿ ತಂದೆಯಿಂದ ಮಗನಿಗೆ ಹೋಗುತ್ತಿತ್ತು. ತಮಗೆ ಕಷ್ಟ ಉಂಟಾದಾಗ ತಮ್ಮ ಹುದ್ದೆಯನ್ನು ವಿಕ್ರಯಿಸುವ ಇಲ್ಲವೇ ಅಡ ಇಡುವ ಅಧಿಕಾರ ಅವರಿಗೆ ಇತ್ತು. "ತಳವಾರಿಕೆ .... ಗ್ರಾಮವರ್ತ್ತನೆ(?) ನಾಡಸೇನಬೋವಿಕೆ" ಇವು ಇಲ್ಲಿಯ ಶಾಸನೋಕ್ತ ಶಬ್ದಗಳು. ನಿಮ್ಮ ಪುತ್ರ ಪಉತ್ರಪಾರಂಪರೆಯಾಗಿ (ಶಾಸನದ 50-51ನೇ ಸಾಲು)...... ದಾನಾಧಿಕ್ರಯಯೋಗ್ಯವಾದ ಸುಖದಲೂ ಅನುಭವಿಸೂದೂ ಯೆಂದು ಕೊಟ ದಾನಪಟ್ಟೆ.

ಈ ರೀತಿಯ ಕೆಲಸದ ಸ್ಥಿರತೆ ಇದ್ದುದರಿಂದಲೇ ಚಿಕ್ಕಂದಿನಿಂದಲೂ ಆಯಾವೃತ್ತಿಯಲ್ಲಿ ಸಹಜವಾಗಿಯೇ ಪರಿಣತಿಯನ್ನು ಪಡೆಯುತ್ತ ಅದಕ್ಕೆ ಬೇಕಾದ ಎಲ್ಲ ಸಲಕರಣೆಗಳನ್ನೂ ತಾವೇ ಸ್ಥಳೀಯವಾಗಿಯೇ ತಯಾರಿಸಿಕೊಂಡು ಹೆಚ್ಚು ಸ್ವಾವಲಂಬಿಯಾಗಿದ್ದರು. ಈ ವ್ಯವಸ್ಥೆ ಭಾರತದ ಮೂಲೆ ಮೂಲೆಗಳಲ್ಲೂ ಅನೂಚಾನವಾಗಿ ನಡೆದು ಬಂದಿದ್ದು ಉಳುವವನೇ ಒಡೆಯ ಎನ್ನುವ ಕಾನೂನು ಬರುವತನಕವೂ ಮುಂದುವರೆದಿತ್ತು.

ಚಟ್ನಹಳ್ಳಿ ಕೆರೆಯ ಇತ್ತೀಚಿನ ವಿವರಗಳು

ಹರಪನಹಳ್ಳಿ ತಾಲ್ಲೂಕು ಅರಸಿಕೆರೆ ಹೋಬಳಿಗೆ ಸೇರಿರುವ ಈ ಗ್ರಾಮವು ತಾಲ್ಲೂಕು ಕೇಂದ್ರದಿಂದ 35 ಕಿ.ಮೀ. ದೂರದಲ್ಲಿದೆ. ಈ ಕೆರೆಯು ಜಿಲ್ಲಾ ಪಂಚಾಯಿತಿ ವ್ಯಾಪ್ತಿಯಲ್ಲಿರುವ ಸಣ್ಣಕೆರೆಗಳ ಗುಂಪಿಗೆ ಸೇರಿದ್ದು 15.17 ಹೆಕ್ಟೇರ್ ಭೂಮಿಗೆ ನೀರೊದಗಿಸುವ (ಸಣ್ಣಕೆರೆ ಎಂದರೆ 40 ಹೆಕ್ಟೇರ್ ವ್ಯಾಪ್ತಿ) ಸಾಮರ್ಥ್ಯ ಹೊಂದಿದೆ. ಈ ಜಲಾನಯನ ಪ್ರದೇಶದಲ್ಲಿ ಬೀಳುವ ವಾರ್ಷಿಕ ಸರಾಸರಿ ಮಳೆ 65367 ಮಿ.ಮೀ. ಸರ್ವೆ ನಂ. 453, ಅಚ್ಚುಕಟ್ಟು: 15.17 ಹೆಕ್ಟೇರ್; ಏರಿಯ ಉದ್ದ 954.23 ಮೀ.; ಏರಿಯ ಎತ್ತರ 3.60 ಮೀ.; ಏರಿಯ ಮೇಲ್ಭಾಗದ ಅಗಲ : 2.75 ರಿಂದ 3.66; ಎಡ ಕಾಲುವೆ ಉದ್ದ : 0.22 ಕಿ.ಮೀ. ತೂಬಿನ ಸಂಖ್ಯೆ: ಒಂದು.

ಕೆರೆಗುಡಿಹಳ್ಳಿ ಶಾಸನ

ಕ್ರಿ.ಶ. 1527ಕ್ಕೆ ಸೇರುವ ಈ ಶಾಸನದಲ್ಲಿ ನಾಗರಸಯ್ಯ ಎನ್ನುವವನು ಕೊಟ್ಟೂರು ಸೀಮೆಯ ಪಾರುಪತ್ಯ ಮಾಡುತ್ತಿದ್ದಾಗ ಈತನ ನಿರೂಪದಂತೆ (ಕೇಳಿಕೆ/ಬಿನ್ನಹ) ರಂಗದಾಸನಮಗ ತಿಂಮರಸನು ಅರಸಿಕೆರೆಯಲ್ಲಿ ಅಧಿಕಾರ ಮಾಡುತ್ತಿದ್ದಾಗ, ಅಲ್ಲಿಯ ಕೆರೆಯ ತೂಬು ಮುರಿದಿದ್ದು ಅದನ್ನು ಜೀರ್ಣೋದ್ಧಾರ ಮಾಡಿಸುತ್ತಾನೆ. ಹೀಗೆ ಮಾಡುವಾಗ ಹಿಂದೆ ಇದ್ದ ತೂಬು ಕೆಟ್ಟಿರುವುದನ್ನೂ, ಆ ತೂಬನ್ನು ಬಿಚ್ಚಿಸಿ ಸೋಧಿಸಿ ಬುಲುಮಾನದ

(ಹೆಚ್ಚು ಉದ್ದ, ಅಗಲ, ಎತ್ತರ, ಭಾರ) ಕಲ್ಲಿನಿಂದ ಕಟ್ಟಿಸಿ, ಗಾರೆಯನ್ನೂ ಉಪಯೋಗಿಸಿ ಭದ್ರಮಾಡಿಸುತ್ತಾನೆ. ಈ ತಿಮ್ಮರಸನು ಎಂತಹ ವ್ಯಕ್ತಿಯಾಗಿದ್ದನೆಂದರೆ ನೀರೊಳಗೆ ಲೆಖ್ಖಬರೆದಷ್ಟು ಮೆಲ್ಲಗೆ ಮಾತನಾಡಿದರೂ ಕೂಡಾ ಅದು ಕಲ್ಲಿನಮೇಲೆ ಬರೆದ ಶಾಸನದಷ್ಟು ನಿಖರವಾಗಿ ಕಾರ್ಯಗತಗೊಳ್ಳುತ್ತಿತ್ತು ಎಂದು ಶಾಸನಕಾರನು ಬಣ್ಣಿಸಿದ್ದಾನೆ. (ಇಲ್ಲಿ ಕೆ.ಎಸ್. ನರಸಿಂಹ ಸ್ವಾಮಿಯವರ ಸಾಲು "ನೀರೊಳಗೆ ವೀಣೆ ಮಿಡಿದಂತೆ" ಎನ್ನುವ ಆಪ್ಯಾಯಮಾನವಾದ ಕನ್ನಡದ ವಿಶಿಷ್ಟ ಉಪಮೆಯೊಂದು 586 ವರ್ಷಗಳ ಮುಂಚೆಯೇ ಶಾಸನದಲಿಯೂ ಬಳಕೆಯಾಗಿದೆ ಎನ್ನುವುದು ಶಾಸನಕಾರನ ಕಾವ್ಯಪ್ರಯೋಗಶೀಲತೆಗೊಂದು ಅತ್ಯುತ್ತಮ ಉದಾಹರಣೆಯಾಗಿದೆ.) ಈ ಶಾಸನದ ಇನ್ನೊಂದು ವಿಶೇಷವೇಂದರೆ ಶಾಪಾಶಯದಲ್ಲಿಯೂ ಇಂತಹುದೇ ಒಂದು ಪ್ರಯೋಗ ಇರುವುದು. "ಪೊಡ ತಪಿದರೆ ತಪ್ಪನು ನಡೆಯಲ್ಬುಲ ನೀತಿಗಳೆನಲು ಪಡುಲ್ಮುಡಲಿ ಕಡಲುಕ್ಕಿ ಹರಿದು ಹೋಗಲಿನುಡಿತಪಿಲ ಬಾಪು ರಮಗಯ ತಿಂಮನು". ಎಂದರೆ ಈ ಶಾಸದಲ್ಲಿ ಬರೆದಿರುವಂತೆ ಯಾರಾದರೂ ನಡೆದುಕೊಳ್ಳದಿದ್ದರೆ ಪೂರ್ವದಿಂದ ಪಶ್ಚಿಮದವರೆಗೂ ಸಮುದ್ರ ಉಕ್ಕಿ ಹರಿದು ಜಲಪ್ರಳಯವಾಗಲಿ ಎಂದು ಅರ್ಥೈಸಬಹುದಾಗಿದೆ. ಶಾಸನ ಕೆತ್ತಿದವನು ಕೆಲವು ಕಡೆ ಕಾಗುಣಿತ ತಪ್ಪು ಮಾಡಿರುವುದು ಕಂಡು ಬರುತ್ತದಾದರೂ ಅಂದಿನ ಕಾಲದಲ್ಲಿ ತೂಬುಗಳ ನಿರ್ಮಾಣ/ಮರುನಿರ್ಮಾಣದ ತಾಂತ್ರಿಕತೆಯನ್ನು, ಗಾರೆಯ ಉಪಯೋಗವನ್ನೂ ತಿಳಿಸುತ್ತದೆ.

ಕೆರೆಗುಡಿಹಳ್ಳಿಯು ಹರಪನಹಳ್ಳಿ ತಾಲ್ಲೂಕಿಗೆ ಒಳಪಟ್ಟಿರುವ ಅರಸೀಕೆರೆಯ ಇನ್ನೊಂದು ದಡದಲ್ಲಿ ಇರುವ ಗ್ರಾಮವಾಗಿದೆ. ತಾಲ್ಲೂಕಿನಿಂದ 20 ಕಿ.ಮೀ. ದೂರದಲ್ಲಿದ್ದು ಅರಸೀಕೆರೆಗೇ ಒಳಪಟ್ಟಿದೆ. ಇದು ಸಣ್ಣ ನೀರಾವರಿ ಇಲಾಖೆಗೆ ಸಂಬಂಧಿಸಿದೆ. ನೊಳಂಬರ ರಾಣಿಯೊಬ್ಬಳು ಕ್ರಿ.ಶ. 8ನೇ ಶತಮಾನದಲ್ಲಿ ಕಟ್ಟಿಸಿದ್ದರಿಂದ ಇದನ್ನು "ನೊಳಂಬರಸಿಕೆರೆ" ಎಂದೂ ಕರೆಯುತ್ತಾರೆ. ಆದರೆ ಇದಕ್ಕೆ ಆಧಾರವಾದ ಶಾಸನವು ಅಲ್ಲಿ ಕಾಣಸಿಗುವುದಿಲ್ಲ. ಮೇಲೆ ತಿಳಿಸಿರುವಂತೆ ವಿಜಯನಗರದ ಕೃಷ್ಣದೇವರಾಯನ ಕಾಲದಲ್ಲಿ ಚಿನ್ನ ಭಂಡಾರದ ತಿಮ್ಮರನಸ ಮಗ ನಾರಣಪ್ಪನ್ನು ರಾಯಸದ ಕೆಲಸ ಮಾಡುತ್ತಿದ್ದನು. ಅರಸಿಕೆರೆ ಆಗ ಕೊಟ್ಟೂರು ಸೀಮೆಗೆ ಒಳಪಟ್ಟಿತ್ತು. ನಾಗರಸನೆಂಬುವನು ಕೊಟ್ಟೂರು ಸೀಮೆಯ ಪಾರುಪತ್ತೇದಾರನಾಗಿದ್ದ. ರಂಗರಸನ ಮಗ ತಿಮ್ಮರಸನು ಕೆರೆಯ ತೂಬನ್ನು ಪುನರ್ ನಿರ್ಮಿಸಿದ.

ಅರಸಿ ಕೆರೆಯ ಈಗಿನ ವಿವರ

ಸರ್ವೆ ನಂ. 123/3; ಕೆರೆ ಅಚ್ಚುಕಟ್ಟು : 122.090 ಹೆಕ್ಟೇರ್; ಕೆರೆಯ ಜಲಾನಯನ ಪ್ರದೇಶ: 534.25 ಚ.ಕಿ.ಮೀ.; ಜಲಾವೃತ ಪ್ರದೇಶ: 9.03 ಹೆಕ್ಟೇರ್; ಕೆರೆಯ ಸಾಮರ್ಥ್ಯ: 32.30 ಎಂ.ಸಿ.ಎಫ್.ಟಿ.; ಏರಿಯ ಉದ್ದ : 1200.00 ಮೀ.; ಏರಿಯ ಎತ್ತರ: 9.20 ಮೀ.; ಏರಿಯ ಮೇಲ್ಭಾಗದ ಅಗಲ: 3.66 ರಿಂದ 3.88 ಮೀ.; ಎಡ ಕಾಲುವೆಯ ಉದ್ದ : 1.50 ಕಿ.ಮೀ. ಬಲ ಕಾಲುವೆಯ ಉದ್ದ :1.02 ಕಿ.ಮೀ.; ತೂಬಿನ ಸಂಖ್ಯೆ : ಎರಡು.


ವಿಶೇಷ: ಮುಂಜಾನೆ ಮತ್ತು ಸಂಜೆಯ ಸಮಯದಲ್ಲಿ ಬಿಳಿ ಕೊಕ್ಕರೆಗಳು ಗುಂಪು ಗುಂಪಾಗಿ ನೆರೆಯುತ್ತವೆ. ಇವನ್ನು ಇಲ್ಲಿ ನೀರುಗೋಳಿಗಳೆಂದು ಕರೆಯುತ್ತಾರೆ. ಈ ದೃಶ್ಯ ನೋಡುಗರ ಕಣ್ಣಿಗೆ ಹಬ್ಬವನುಂಟುಮಾಡುತ್ತದೆ. ಕೆರೆಯನ್ನು ಶುದ್ಧೀಕರಿಸಿ, ಉದ್ಯಾವನ ನಿರ್ಮಿಸಿದರೆ ಒಳ್ಳೆಯ ಪ್ರವಾಸಿ ತಾಣವನ್ನಾಗಿ ಅಭಿವೃದ್ಧಿಪಡಿಸಬಹುದು.

ಸಾರಾಂಶ

ಹೀಗೆ ಹರಪನ ಹಳ್ಳಿ ತಾಲ್ಲೂಕಿನಲ್ಲಿ ದೊರೆಯುವ ವಿಜಯನಗರ ಕಾಲದ ಶಾಸನಗಳು ಸಂಖ್ಯೆಯಿಂದ ನಾಲ್ಕು ಎನಿಸಿದರೂ, ಅವುಗಳು ವಿಶಿಷ್ಟ ವೈವಿಧ್ಯತೆಯ ದ್ಯೋತಕವೆನಿಸಿವೆ,

ಆಕರಗಳು

1. ನಮ್ಮೂರ ಕೆರೆಗಳು, ಬಸವರಾಜ ಕುಂಚೂರು, ದಾವಣಗೆರೆ
2. ಬಳ್ಳಾರಿ ಜಿಲ್ಲೆಯ ಶಾಸನ ಸಂಪುಟ, ಪ್ರಕಟಣೆ ಹಂಪಿ ಕನ್ನಡ ವಿಶ್ವವಿದ್ಯಾಲಯ, ವಿದ್ಯಾರಣ್ಯ.
3. ಕೃತಜ್ಞತೆ: ಚಿತ್ರ ವಿವರ ಮತ್ತು ಸಹಾಯ, ಬಸವರಾಜ ಕುಂಚೂರು, ದಾವಣಗೆರೆ.



ಅರಸಿಕೆರೆ—ಹಿರೇಕೆರೆ

28. ಪ್ರೌಢದೇವರಾಯನ ನೂರೊಂದು ವಿರಕ್ತರು

ಬಿ.ಎಂ. ಚಂದ್ರಶೇಖರಯ್ಯ

ಪ್ರೌಢದೇವರಾಯನೆಂದೇ ಸುವಿಖ್ಯಾತನಾದ ಇಮ್ಮಡಿ ದೇವರಾಯನು (ಕ್ರಿ.ಶ. 1424–1446) ವಿಜಯನಗರ ಸಾಮ್ರಾಜ್ಯವನ್ನು ಕೇವಲ 22 ವರ್ಷಗಳ ಕಾಲ ಆಳಿದ್ದರೂ, ಅದರ ಸಾಂಸ್ಕೃತಿಕ, ಧಾರ್ಮಿಕ, ರಾಜಕೀಯ ಮತ್ತು ಸಾಮಾಜಿಕ ವೈಭವ, ಶಕ್ತಿ ಸಾಮರ್ಥ್ಯಗಳ ಧವಳಕೀರ್ತಿಯನ್ನು ದಿಗ್‌ದಿಗಂತದವರೆಗೂ ಪಸರಿಸುವಂತೆ ಮಾಡಿದವರಲ್ಲಿ ಮೊದಲಿಗನಾಗಿದ್ದನು. ದೇವರಾಯನ ದಿಗ್ವಿಜಯಗಳು, ಸಾಹಿತ್ಯ ಕಲೆಗಳಿಗೆ ನೀಡಿದ ನೆರವು, ಪ್ರೋತ್ಸಾಹ, ಬಹಮನಿಸುಲ್ತಾನರ ವಿರುದ್ಧ ನಡೆಸಿದ ಹೋರಾಟಗಳು, ಸಾಮ್ರಾಜ್ಯದಾದ್ಯಂತ ಕೈಗೊಂಡ ಸಮಗ್ರ ಅಭಿವೃದ್ಧಿಕಾರ್ಯಗಳು ಅವನನ್ನು ಅತ್ಯಂತ ಜನಪ್ರಿಯ ಸಾಮ್ರಾಟನನ್ನಾಗಿ ಮಾಡಿದ್ದವು. ಆತನ ಕಾಲದ ಅನೇಕ ಶಾಸನಗಳು, ಸಾಮ್ರಾಜ್ಯದ ಉನ್ನತ ಆದರ್ಶಗಳಿಗೆ ಉಚಿತವಾದ ಗುಣ, ವಿಶೇಷಣಗಳಿಂದ ಕೂಡಿದ್ದನೆಂದು ದೇವರಾಯನನ್ನು ಬಣ್ಣಿಸಿವೆ. ಕನ್ನಡ, ಸಂಸ್ಕೃತ, ತೆಲುಗು ಮತ್ತು ತಮಿಳು ಕವಿಗಳು ತಮ್ಮ ಕೃತಿಗಳಲ್ಲಿ ರಾಯನನ್ನು ಅತಿಶಯವಾಗಿ ಕೊಂಡಾಡಿದ್ದಾರೆ. ಹಾಗೆಯೇ, ವಿಜಯನಗರವನ್ನಾಳಿದ ಅರಸರಲ್ಲೇ ಆತನು ಅತ್ಯಂತ ಶ್ರೇಷ್ಠನೆಂದು ಹೊಗಳಿವೆ.

ವಿಜಯನಗರ ರಾಜ್ಯದ ಸಂಸ್ಥಾಪನೆಯ (ಕ್ರಿ.ಶ. 1336) ಶ್ರೇಯಸ್ಸು ಶೂರರೂ, ಸಾಹಸಿಗಳೂ, ಧರ್ಮಪರಾಯಣರೂ ಆದ ಸಂಗಮನ ಐದು ಜನ ಪುತ್ರರಿಗೆ ಸಲ್ಲುತ್ತದೆ. ಸಂಗಮನು ಹಂಪೆಯ ಪರಿಸರದ ಸಣ್ಣದೊಂದು ಸಂಸ್ಥಾನದ ಒಡೆಯನಾಗಿದ್ದು ಸದ್ವಂಶದಲ್ಲಿ ಹುಟ್ಟಿದವನು, ಯಾದವಕುಲದಲ್ಲಿ ಜನಿಸಿದವನು ಎಂಬ ಗೌರವಕ್ಕೆ ಪಾತ್ರನಾದವನು. ಆತನ ಮಕ್ಕಳಾದ ಹರಿಹರ, ಬುಕ್ಕಣ್ಣ, ಕಂಪಣ್ಣ, ಮಾರಪ್ಪ ಮತ್ತು ಮುದ್ದಪ್ಪ ಅವರುಗಳಲ್ಲಿ ಮೊದಲಿನ ಇಬ್ಬರು ಸೋದರರು ರಾಜ್ಯಸ್ಥಾಪನೆಯ ಮಹಾನ್ ಕಾರ್ಯದಲ್ಲಿ ಮಹತ್ವದ ಪಾತ್ರವನ್ನು ವಹಿಸಿದ ಕಾರಣದಿಂದ ವಿಜಯನಗರ ಸಂಸ್ಥಾಪಕರೆಂಬ ಕೀರ್ತಿಗೆ ಪಾತ್ರರಾಗಿದ್ದಾರೆ !

ಸಂಗಮ ವಂಶದ ಅರಸರೆಲ್ಲರೂ ಕಾಳಾಮುಖ ಪಂಥದ ಆಚಾರ್ಯರುಗಳನ್ನು ತಮ್ಮ ಕುಲಗುರುಗಳೆಂದು ಪರಿಗಣಿಸಿದ್ದರು. ಅದರಿಂದಾಗಿ ಹರಿಹರ, ಒಂದನೆಯ ಬುಕ್ಕರಾಯ, ಇಮ್ಮಡಿ ಹರಿಹರ, ದೇವರಾಯ, ಇಮ್ಮಡಿ ದೇವರಾಯ ಮತ್ತು ಅವರ ಸಚಿವರಾಗಿದ್ದ ಮಾರಪ್ಪ, ಮುದ್ದಣ್ಣ, ವೀರಣ್ಣೊಡೆಯ ಇವರುಗಳಿಗೆ ಕ್ರಿಯಾಶಕ್ತಿ ಪರಂಪರೆಯ ಗುರುಗಳು ರಾಜಗುರುಗಳಾಗಿದ್ದ ಸಂಗತಿ ತಿಳಿದುಬರುತ್ತದೆ. ಇದು ಅಂದಿನ ದಿನಗಳಲ್ಲಿ ಬಹುಪ್ರಬಲವಾಗಿದ್ದ ಶೈವ ಪಂಥ. ಪ್ರಜೆಗಳೂ ಹಾಗೂ ರಾಜ್ಯ ಪರಿಪಾಲಿಸುವ ದೇಶಾಧಿಪತಿಗಳೂ ಈ ಪಂಥಕ್ಕೆ ವಿಶೇಷ ಗೌರವ ನೀಡುತ್ತಿದ್ದರು. ದೇವಾಲಯಗಳಿಗೆ ದಾನದತ್ತಿಗಳನ್ನು ಬಿಡುವ ಕಾಲದಲ್ಲಿ ಈ ಆಚಾರ್ಯರುಗಳ ಕಾಲುತೊಳೆದು (ಕಾಲಂಕರ್ಚಿ) ಅವುಗಳನ್ನು ನೆರವೇರಿಸುತ್ತಿದ್ದರು. ಅವರು ಬಹಳ ಉನ್ನತ ಮಟ್ಟದ ವಿದ್ವಾಂಸರಾಗಿರುತ್ತಿದ್ದರು. ಅವರ ವೇದ ವೇದಾಂತ, ಶಿವಾಗಮಗಳು, ಉಪನಿಷತ್‌ಗಳಲ್ಲದೆ ಸಾಹಿತ್ಯದಲ್ಲಿ ಕಾವ್ಯ, ನಾಟಕಗಳು ಕರತಲಾಮಲಕವಾಗಿರುತ್ತಿದ್ದವು. ಚಾಲುಕ್ಯರಿಂದ ಹಿಡಿದು ವಿಜಯನಗರದ ಅರಸರವರೆಗೂ, ಎಲ್ಲ ರಾಜವಂಶಗಳ ಅರಸರೂ ಈ ಕಾಳಾಮುಖ (ಪಾಶುಪತ) ಆಚಾರ್ಯರುಗಳನ್ನು ಗೌರವಿಸಿ ಆಶ್ರಯ ನೀಡಿದ್ದರು. ಶಾಸನಗಳಲ್ಲಿ ಇವರನ್ನು 'ಶ್ರೀಮದ್‌ರಾಜಗುರು', 'ಮಹಾಮಂಡಲಾಚಾರ್ಯ', 'ರಾಯರಾಜಗುರು'ಗಳೆಂದು ಸಂಬೋಧಿಸಲಾಗಿದೆ. ಸಾಮಾನ್ಯವಾಗಿ ಅವರು ಮಠಾಧಿಪತಿಗಳಾಗಿದ್ದು, ಅದಕ್ಕೆ ಸೇರಿದ ದೇವಾಲಯದ ಆಡಳಿತವನ್ನು ನೋಡಿಕೊಳ್ಳುತ್ತಿದ್ದರು. ಈ ಪಂಥದ ಯತಿಗಳನ್ನು ಕಾಳಾಮುಖ ಆಚಾರ್ಯರೆಂದು ಕರೆಯಲಾಗಿದೆ. ಕಾಳಾಮುಖ ಪಂಥವು ಪಾಶುಪತಧರ್ಮದ ಒಂದು ಶಾಖೆಯಾಗಿದ್ದು, ಮಧ್ಯಯುಗೀನ ಕರ್ನಾಟಕದಲ್ಲಿ ಬಹಳ ಪ್ರಭಾವಶಾಲಿಯಾಗಿತ್ತು !

ಬಳ್ಳಿಗಾವೆಯ ಕೇದಾರೇಶ್ವರ ದೇವಾಲಯವು ಕಾಳಾಮುಖ ಪಂಥದ ಅತ್ಯಂತ ಹೆಸರಾಂತ ಕೇಂದ್ರವಾಗಿತ್ತು. ಬನವಾಸಿ ಪ್ರದೇಶದಲ್ಲಿ ಶಿವದೇವಾಲಯಗಳಲ್ಲಿ ಸ್ವಾಮಿತ್ವ ಹೊಂದಿದ ಅನೇಕ ಸ್ವಾಮಿಗಳಿದ್ದರು. ಆ ದೇವಾಲಯಗಳು ಭೂಮಿ ಹಾಗೂ ಅಪಾರ ಸಂಪತ್ತನ್ನು ಹೊಂದಿದ್ದವು. ಕ್ರಿ.ಶ. 806ರ ನಂದಿಯ ಶಾಸನವು ತಿಳಿಸುವಂತೆ, ಬಾಣ ವಂಶದ ರಾಜ ವಿದ್ಯಾಧರನ ರಾಣಿ ರತ್ನಾವಳಿಯು (ರಾಷ್ಟ್ರಕೂಟ ರಾಜಕುಮಾರಿ) ಕಾಳಾಮುಖ ಗುರು ಕಾಲಶಕ್ತಿಯ ಪ್ರಧಾನ ಶಿಷ್ಯ ಈಶ್ವರದೇವನಿಗೆ ಭೂಮಿಯನ್ನು ದಾನಮಾಡಿದಳು. ಆತನು ನಂದಿಯ ಭೋಗನಂದೀಶ್ವರ ದೇವಾಲಯದ ಮಠದ ಅಧ್ಯಕ್ಷನೆಂದು ಹೇಳಿದೆ. ಈ ಪಂಥದ ಮುನಿಗಳು 'ರಾಶಿ' ಮತ್ತು 'ಶಕ್ತಿ' ಎಂಬ ಹೆಸರಿನಿಂದ ಕೊನೆಗೊಂಡ ಹೆಸರಿನ ಎರಡು ಗುಂಪುಗಳಿಗೆ ಸೇರಿದ್ದರು. ಕೊಟ್ಟೂರಿನಲ್ಲಿ ದೊರೆತಿರುವ ಆರನೆಯ ವಿಕ್ರಮಾದಿತ್ಯನ ಕ್ರಿ.ಶ. 1112ರ ಶಾಸನದಲ್ಲಿ ದೇವಾಲಯದ ಅರ್ಚಕರಾದ 'ಅಮೃತರಾಶಿ' ಪಂಡಿತರಿಗೆ ರಾಮೇಶ್ವರ ದೇವರ ಅರ್ಚನೆಗಾಗಿ ನೀಡಿದ ಭೂದಾನದ ಬಗ್ಗೆ ತಿಳಿಸಲಾಗಿದೆ.

ಕಾಳಾಮುಖರು ರಾಜಮನೆತನಗಳಲ್ಲಿ ಪ್ರಭಾವ ಬೀರಲು ಸಾಧ್ಯವಾದದ್ದು ಚಾಲುಕ್ಯ ಚಕ್ರವರ್ತಿ ಇಮ್ಮಡಿ ಜಗದೇಕಮಲ್ಲ ಜಯಸಿಂಹನ (1014–41) ಕಾಲದಲ್ಲಿ ಮತ್ತು ಅನಂತರ. ಇವನು ವಚನಕಾರ, ಶರಣ, ದೇವರ ದಾಸಿಮಯ್ಯನ ಶಿಷ್ಯೆಯಾಗಿದ್ದ ತನ್ನ ರಾಣಿ ಸುಗ್ಗಲಾದೇವಿಯಿಂದಾಗಿ ಜೈನಧರ್ಮದಿಂದ ಶೈವಧರ್ಮ ಕಾಳಾಮುಖ ಪಂಥಕ್ಕೆ ಮತಾಂತರ ಹೊಂದಿದ್ದನು. ಈ ಸಂಬಂಧವಾಗಿ ವಾದಿರುದ್ರಗಣ ಲಕುಲೀಶ್ವರಪಂಡಿತನ ಹೆಸರನ್ನು ಪ್ರಸ್ತಾಪಿಸಲಾಗಿದೆ. ಅನಂತರ ಜಗದೇಕಮಲ್ಲನ ಮೊಮ್ಮಗ ಇಮ್ಮಡಿ ಸೋಮೇಶ್ವರನ (ಕ್ರಿ.ಶ. 1068–76) ಕಾಲದಲ್ಲಿ ಈ ಪಂಥವು ಪ್ರಬಲವಾಯಿತೆಂಬುದರಲ್ಲಿ ಯಾವುದೇ ಸಂದೇಹವಿಲ್ಲ. ಆಗ ಅದು ಅತ್ಯಂತ ಜನಪ್ರಿಯವಲ್ಲದೆ ಪ್ರಭಾವಶಾಲಿಯೂ ಆಯಿತು. 'ರಾಜಗುರು'ವೆಂದು, 77 ದೇವಾಲಯಗಳಿಗೆ ಒಡೆಯನೆಂದು ಪ್ರಕೀರ್ತಿತನಾಗಿದ್ದ ಕಾಳಾಮುಖ ಗುರು ಸರ್ವೇಶ್ವರ ಶಕ್ತಿದೇವನ (ಸು. ಕ್ರಿ.ಶ. 1070) ಮಹಿಮೆಯನ್ನು ಶಾಸನಗಳು ಕೊಂಡಾಡಿವೆ. ಇಮ್ಮಡಿ ಸೋಮೇಶ್ವರನ ನಂತರ ತ್ರಿಭುವನಮಲ್ಲ ಆರನೆಯ ವಿಕ್ರಮಾದಿತ್ಯನು (ಕ್ರಿ.ಶ. 1076–1127) ತಾನು ಜೈನಧರ್ಮದಲ್ಲಿ ವಿಶ್ವಾಸ ಹೊಂದಿದ್ದರೂ, ಕಾಳಾಮುಖರಿಗೂ ಮನಃಪೂರ್ವಕವಾಗಿ ಪ್ರೋತ್ಸಾಹವನ್ನು ನೀಡಿದನು.

ಕರ್ನಾಟಕದ ಕಾಳಾಮುಖಪಂಥದ ಇತಿಹಾಸದಲ್ಲಿ ಕೊನೆಯ ಮಹಾನ್ ಹೆಸರೆಂದರೆ ಕ್ರಿಯಾಶಕ್ತಿಯದು (ಸು. ಕ್ರಿ.ಶ. 1336). ಅವರನ್ನು ಶಾಸನಗಳಲ್ಲಿ 'ಶ್ರೀಮದ್ ರಾಜಗುರು ಮಹಾಮಂಡಲಾಚಾರ್ಯ ವಾಣೀವಿಲಾಸ ಕ್ರಿಯಾಶಕ್ತಿ'ಯೆಂದೂ 'ಶಿವಗುರು ಕಾಶೀವಿಲಾಸ ಕ್ರಿಯಾಶಕ್ತಿ' ಮತ್ತು 'ರಾಜರಾಜಗುರು'ವೆಂದೂ ಕೊಂಡಾಡಲಾಗಿದೆ. ಅವರು ಸುಪ್ರಸಿದ್ಧ ಶೃಂಗೇರಿಯ ವಿದ್ಯಾರಣ್ಯರ ಹಿರಿಯ ಸಮಕಾಲೀನರಾಗಿದ್ದರು. ಅವರಿಬ್ಬರೂ ಒಂದೇ ವ್ಯಕ್ತಿಯೆಂದು ಭಾವಿಸಿದವರಿದ್ದಾರೆ. ಶಾಸನಗಳು ವರ್ಣಿಸುವಂತೆ, ಈ ಕ್ರಿಯಾಶಕ್ತಿ ದೇವರು ವಿಜಯನಗರ ಸ್ಥಾಪಕರಾದ ಹರಿಹರ, ಬುಕ್ಕ ಮತ್ತು ಇಮ್ಮಡಿ ಹರಿಹರ ಅವರ ಕುಲಗುರುವಾಗಿದ್ದು, ರಾಜ್ಯಸ್ಥಾಪನೆಯಲ್ಲಿ ಮಹತ್ವದ ಪಾತ್ರವಹಿಸಿದ್ದರು. ಅವರು ಕ್ರಿಯಾಶಕ್ತಿ ದೇವರನ್ನು ಸಾಕ್ಷಾತ್ ಗಿರೀಶ(ವಿರೂಪಾಕ್ಷ)ನೆಂದೇ ಭಾವಿಸಿ ಪೂಜಿಸುತ್ತಿದ್ದರು. ಇಮ್ಮಡಿ ಹರಿಹರ ಮಹಾರಾಜನ ಮೇಲೆ ಅವರ ಪ್ರಭಾವ ಎಷ್ಟಿತ್ತೆಂದರೆ, ಅವರ ಅನುಮತಿ ಪಡೆದನಂತರವೇ ಕ್ರಿ.ಶ. 1395ರಲ್ಲಿ ಬುಕ್ಕರಾಯನು ಶೃಂಗೇರಿಯ ವಿದ್ಯಾಶಂಕರದೇವಾಲಯಕ್ಕೆ ದತ್ತಿ ಬಿಟ್ಟನೆಂದು ಮುಳಬಾಗಿಲ ಶಾಸನವು ತಿಳಿಸುತ್ತದೆ.

ಶಾಸನಗಳು ಹಾಗೂ ಸಾಹಿತ್ಯಿಕ ಆಧಾರಗಳು ತಿಳಿಸುವಂತೆ ಕ್ರಿಯಾಶಕ್ತಿ ಗುರುಗಳ ಒಂದು ಪರಂಪರೆಯೇ ಇದ್ದು, ಅವರು ವಿಜಯನಗರದ ಅರಸರ ಕುಲಗುರುಗಳಾಗಿದ್ದರು. ಆ ಪೀಠದ ಗುರುಗಳೆಲ್ಲರ ಹೆಸರುಗಳು ಕ್ರಿಯಾಶಕ್ತಿ ಎಂಬ ಪದದಿಂದ ಕೊನೆಗೊಳ್ಳುತ್ತಿದ್ದವು. ಹಾಗೆಯೇ ಇವರುಗಳೆಲ್ಲಾ ಯಾರು ಯಾರು ಯಾವ ಅರಸರುಗಳ ಕಾಲದಲ್ಲಿದ್ದರೆಂದು ನೋಡಬಹುದು (1) ವಾಣಿವಿಲಾಸ ಕ್ರಿಯಾಶಕ್ತಿಯವರು ಒಂದನೆಯ ಹರಿಹರ ಹಾಗೂ ಒಂದನೆಯ ಬುಕ್ಕರಾಯನಿಗೆ ಕುಲಗುರುವಾಗಿದ್ದು, ರಾಜ್ಯಸ್ಥಾಪನೆಯಲ್ಲಿ ನೆರವಾಗಿದ್ದರು. (2) ಕಾಶೀವಿಲಾಸ ಕ್ರಿಯಾಶಕ್ತಿದೇವರು ಕುಮಾರ ಕಂಪಣ,

ಇಮ್ಮಡಿ ಬುಕ್ಕ, ಮಾರಪ್ಪ ಇವರುಗಳಿಗೆ ಗುರುವಾಗಿದ್ದರು. (3) ಕ್ರಿಯಾಶಕ್ತಿ ಪಂಡಿತರು ಇಮ್ಮಡಿ ಹರಿಹರ, ಮೊದಲನೆಯ ದೇವರಾಯ, ಇಮ್ಮಡಿ ಕಂಪಣರಿಗೆ ಗುರುವಾಗಿದ್ದರು. (4) ಚಂದ್ರಭೂಷಣ ಕ್ರಿಯಾಶಕ್ತಿದೇವರು ವಿಜಯರಾಯ ಹಾಗೂ ಪ್ರೌಢದೇವರಾಯನಿಗೆ ರಾಜಗುರುವಾಗಿದ್ದರು. ತೆಲುಗುಕವಿ ಶ್ರೀನಾಥನು ಈತನಕೃಪೆಗೆ ಪಾತ್ರನಾಗಿದ್ದನು. (5) ಮಲ್ಲಿಕಾರ್ಜುನ ಕ್ರಿಯಾಶಕ್ತಿದೇವರು ಪ್ರೌಢದೇವರಾಯ ಹಾಗೂ ಲಕ್ಕಣ ದಂಡೇಶನಿಗೆ ರಾಜಗುರುಗಳಾಗಿದ್ದರು.

ಮೇಲ್ಕಂಡ ರೀತಿಯಲ್ಲಿ ವಿಜಯನಗರದ ಸಂಗಮ ವಂಶದ ಅರಸರೆಲ್ಲರಿಗೂ ಕ್ರಿಯಾಶಕ್ತಿಯತಿಗಳು ರಾಜಗುರುಗಳಾಗಿದ್ದರಿಂದಾಗಿ ಪ್ರೌಢದೇವರಾಯನಿಗೆ ಸಹಜವಾಗಿಯೇ ವೀರಶೈವಧರ್ಮದಲ್ಲಿ ಅಪಾರ ಶ್ರದ್ಧೆ, ಭಕ್ತಿಗಳುಂಟಾದವು. ಆತನ ಕಾಲದಲ್ಲಿ ವೀರಶೈವಧರ್ಮಕ್ಕೆ ಅಗಾಧವಾದ ಪ್ರೋತ್ಸಾಹ ದೊರೆಯಿತು. ಅದು ನೂರೊಂದು ವಿರಕ್ತರು ಹಂಪೆಯಲ್ಲಿ ನೆಲೆಸಿ, ವೀರಶೈವಧರ್ಮ ಮತ್ತು ವಚನ ಸಾಹಿತ್ಯದ ಪುನರುಜ್ಜೀವನ ಮತ್ತು ಪುನರ್ನಿರ್ಮಾಣದ ಕಾರ್ಯದಲ್ಲಿ ತೊಡಗಿಸಿಕೊಳ್ಳಲು ನೆರವಾಯಿತು. ಪ್ರೌಢದೇವರಾಯನೇ ಸ್ವತಃ ವೀರಶೈವ ಧರ್ಮಾವಲಂಬಿಯಾದುದರಿಂದಾಗಿ ಆತನ ಮಂತ್ರಿಗಳು ಮತ್ತು ಅಧಿಕಾರಿಗಳೂ ಆ ಧರ್ಮಕ್ಕೆ ನೆರವಾಗಲು ಮುಂದಾದರು.

ಪ್ರೌಢದೇವರಾಯನ ಅನೇಕ ಶಾಸನಗಳಲ್ಲಿ ಆತನು ವೀರಶೈವಧರ್ಮೀಯನೆಂಬುದಾಗಿ ಹೇಳಲಾಗಿದೆ. ಆತನನ್ನು "ಶುದ್ಧ ಶಿವಾಚಾರಸಂಪನ್ನ" ಎಂದು ಕರೆಯಲಾಗಿದೆ. ತೀರ್ಥಹಳ್ಳಿಯ ಶಾಸನದಲ್ಲಿ "ಸ್ಮರಹರ ಚರಣ ಧ್ಯಾನ ಸಂತಾನ ಪುಣ್ಯ ಶ್ರೇಣಿ ಮಾಕಂಡವಾಟ ಸಮಧಿಕ ಸುಸಮಾಧಾನಚೈತ್ರಾಗಮ" ಎಂದೂ, ಶಿವಮೊಗ್ಗ ಜಿಲ್ಲೆಯ ತೆಂಗಿನಪುರದ ವೀರಭದ್ರ ದೇವಾಲಯದಲ್ಲಿರುವ ಶಾಸನದಲ್ಲಿ "ವೀರಶೈವಾಗಮಸಾರಸಂಪನ್ನ" ಎಂಬುದಾಗಿಯೂ ಕರೆಯಲಾಗಿದೆ. ಇದರಿಂದ ಆತನು ವೀರಶೈವಧರ್ಮೀಯರ ಮಗನಾಗಿ ಜನಿಸಿದವನೆಂದು ಹೇಳಬಹುದಾಗಿದೆ.

ದೇವರಾಯನ ಆಳ್ವಿಕೆಯನ್ನು ಅತ್ಯಂತ ಯಶಸ್ವಿ ಹಾಗೂ ಉಜ್ವಲವಾದುದು ಎಂದು ಬಣ್ಣಿಸಲಾಗಿದೆ. ಕೃಷ್ಣಾನದಿಯಿಂದ ಕನ್ಯಾಕುಮಾರಿಯವರೆಗೆ ವಿಸ್ತರಿಸಿದ್ದ ಸಾಮ್ರಾಜ್ಯದೆಲ್ಲೆಡೆಯಲ್ಲಿ ಶಾಂತಿ, ಸುವ್ಯವಸ್ಥೆಗಳು ನೆಲೆಸಿದ್ದವು. ಆ ಕಾಲದಲ್ಲಿ ನಡೆದ ಸಾಹಿತ್ಯ, ಸಂಸ್ಕೃತಿ ಚಟುವಟಿಕೆಗಳು ಗುಣಮಟ್ಟ ಹಾಗೂ ಪ್ರಮಾಣಗಳಲ್ಲಿ ಅದ್ಭುತವಾಗಿದ್ದವು. ಅಸಂಖ್ಯಾತ ಕವಿಗಳು, ಕಲಾವಿದರು ಹಾಗೂ ವಿದ್ವಾಂಸರಿಗೆ ಆತನ ಉದಾರ ಆಶ್ರಯವು ದೊರೆತಿದ್ದಿತು. ಆತನ ಕಾಲವನ್ನು "ಕನ್ನಡ ಸಾಹಿತ್ಯದ ಉತ್ಕರ್ಷಕಾಲ"ವೆಂದು ನಿರಾತಂಕವಾಗಿ ಹೇಳಬಹುದು. ಅದರಲ್ಲೂ ಅದು ವೀರಶೈವ ಸಾಹಿತ್ಯಕ್ಕೆ ಹೆಚ್ಚು ಅನ್ವಯಿಸುತ್ತದೆ.

ಹನ್ನೆರಡನೆಯ ಶತಮಾನದಲ್ಲಿ ಬಸವಣ್ಣನವರ ಕಾಲದಲ್ಲಿ ಬಲಿಷ್ಠಗೊಂಡ ವೀರಶೈವ ಧರ್ಮವು ಅನಂತರ ಸ್ವಲ್ಪ ಕಳೆಗುಂದಿತು. ಅದು ಪ್ರೌಢದೇವರಾಯನ ಕಾಲದಲ್ಲಿ ಮತ್ತೆ ನೂರೊಂದು ವಿರಕ್ತರ ಪರಿಶ್ರಮದಿಂದಾಗಿ ಪುನರುತ್ಥಾನವನ್ನು ಹೊಂದಿತು ಎಂಬುದು ನಿರ್ವಿವಾದವಾದ ಸಂಗತಿಯಾಗಿದೆ. ಅದರ ಅಭಿವೃದ್ಧಿಗೆ ಪ್ರೌಢದೇವರಾಯನು ಇನ್ನಿಲ್ಲದಷ್ಟು ಬೆಂಬಲವನ್ನು ಮನಃಪೂರ್ವಕವಾಗಿ ನೀಡಿದನು. ಪ್ರಭುತ್ವದ ಬೆಂಬಲದಿಂದಾಗಿ ವೀರಶೈವಧರ್ಮದ ಪುನರುಜ್ಜೀವನ ಕಾರ್ಯ ಅತ್ಯಂತ ಸಮರ್ಪಕವಾಗಿ, ಮತ್ತು ಯಶಸ್ವಿಯಾಗಿ ಮುನ್ನಡೆಯಿತು. ಹನ್ನೆರಡನೆಯ ಶತಮಾನದ ಶಿವಶರಣರು ಪ್ರಭುತ್ವವನ್ನು ಪ್ರಶ್ನಿಸಿದರು ಮತ್ತು ನಿರಾಕರಿಸಿದರು ! ಆದರೆ, ಹದಿನೈದನೆಯ ಶತಮಾನದ ಶರಣ ಪರಂಪರೆಯ ವಿರಕ್ತರು, ಪ್ರಭುತ್ವವನ್ನೇ ವೀರಶೈವವನ್ನಾಗಿಸಿದರು ! ಪ್ರಭುತ್ವವನ್ನು ತಮ್ಮೆಡೆಗೆ ಒಲಿಸಿಕೊಂಡು ತಮ್ಮ ಕಾರ್ಯಸಾಧನೆಗೆ ಅನುವು ಮಾಡಿಕೊಂಡರು. ಆದ್ದರಿಂದಲೇ, ಪ್ರೌಢದೇವರಾಯನ ಕಾಲವನ್ನು "ವೀರಶೈವ ಸಮುದ್ಧರಣಯುಗ"ವೆಂದು ಪರಿಗಣಿಸಲಾಗಿದೆ. ಷಟ್‌ಸ್ಥಲಸಿದ್ಧಾಂತ, ವೀರಶೈವ ತತ್ವ ಪ್ರತಿಪಾದನೆ, ಸ್ಥಲ ಕಟ್ಟುಗಳಿಗೆ ಅನುಗುಣವಾಗಿ ಬಸವಾದಿಶರಣರ ವಚನಗಳ ವಿಂಗಡಣೆ, ಸ್ವರ ವಚನಗಳ ರಚನೆ, ವಚನಗಳಿಗೆ ಟೀಕೆ ಮೊದಲಾದ ಗುರುತರ ಕಾರ್ಯಗಳು ರಾಯನಕಾಲದಲ್ಲಿ ಅವ್ಯಾಹತವಾಗಿ ನಡೆದವು.

ವೀರಶೈವ ಧರ್ಮವು ಅಂದಿನ ಎಲ್ಲ ಶೈವ ಪಂಥಗಳನ್ನು ತನ್ನೊಳಗುಮಾಡಿಕೊಂಡು ಅವುಗಳ ಉತ್ತಮಾಂಶಗಳನ್ನು ಒಪ್ಪಿಕೊಂಡು ಸಕಲಜೀವಾತ್ಮರಿಗೆ ಲೇಸನ್ನೇ ಬಯಸುವ ವಿನೂತನ ಧರ್ಮವಾಗಿ ರೂಪುಗೊಂಡಿತು. ತನ್ನ ತೆಕ್ಕೆಯೊಳಗೆ

ಬಂದ ಮುಮುಕ್ಷುಗಳಿಗೆಲ್ಲರಿಗೂ ಮುಕ್ತಿಯ ಮಾರ್ಗವನ್ನು ತೋರಿಸುವ ಧರ್ಮವಾಯಿತು ! ವ್ಯಕ್ತಿ ಸ್ವಾತಂತ್ರ್ಯ, ಸ್ತ್ರೀ ಪುರುಷ ಸಮಾನತೆ, ಸರಳ ಆಚರಣೆಗಳು, ಶುದ್ಧ ಚಾರಿತ್ರ್ಯ ನಿರ್ಮಾಣ ಮೊದಲಾದ ಹೊಸ ಪರಿಕಲ್ಪನೆಗಳೊಂದಿಗೆ ಮೂಡಿ ಬಂದ ಈ ನೂತನ ಧರ್ಮವು ಅಂದಿನ ಶ್ರೇಣೀಕೃತ ಸಮಾಜದಲ್ಲಿ ಕ್ರಾಂತಿಕಾರ ಬದಲಾವಣೆಗಳನ್ನೇ ತಂದಿತು. ಅವರು ತಮ್ಮ ಅನುಭವ ಮತ್ತು ಅನುಭಾವಗಳ ಅನಿಸಿಕೆಗಳನ್ನು ಮಾತಿನ ರೂಪದಲ್ಲಿ ಒಡನುಡಿದಾಗ ಉದಿಸಿದುದೇ ವಚನ. ಈ ವಚನಗಳ ರಚನೆಯಂತೂ ಸಾಹಿತ್ಯಕ್ಷೇತ್ರದಲ್ಲಿ ಅಪೂರ್ವ ಹೊಸತನಕ್ಕೆ ಕಾರಣವಾಯಿತು. ಸಮಾಜದ ವಿಭಿನ್ನ ಹಿನ್ನೆಲೆಯಿಂದ ಬಂದ ಶರಣರು ತಮ್ಮ ಆಧ್ಯಾತ್ಮಿಕ ಅನುಭವಗಳನ್ನು, ಸಾಮಾಜಿಕ ನಿಲುವುಗಳನ್ನು ಸಿದ್ಧಸೂತ್ರದ ಶಾಸ್ತ್ರೀಯ ಚಂಪೂ ಶೈಲಿಯನ್ನು ನಿರಾಕರಿಸಿ, ಸರಳ ವಚನ ರೂಪದಲ್ಲಿ ಹೇಳತೊಡಗಿದರು.

ನೂರೊಂದು ವಿರಕ್ತರು

ಹನ್ನೆರಡನೆಯ ಶತಮಾನದಲ್ಲಿ ಕಲ್ಯಾಣದಲ್ಲಿ ನಡೆದ ಕ್ರಾಂತಿಯಿಂದಾಗಿ ಚದುರಿಹೋದ ವಚನ ಸಾಹಿತ್ಯ ಸಂಪತ್ತನ್ನು ಮತ್ತೆ ಸಂಗ್ರಹಿಸಿ ಅವುಗಳನ್ನು ಷಟ್‌ಸ್ಥಲಗಳಿಗೆ ಅನುಗುಣವಾಗಿ ಮರುಜೋಡಣೆ ಮಾಡಿದವರು ಹಂಪಿ–ವಿಜಯನಗರದಲ್ಲಿ ನೆಲೆಸಿದ್ದ ನೂರೊಂದು ವಿರಕ್ತರು. ಅವರು ವೀರಶೈವ ಸಿದ್ಧಾಂತವನ್ನು ನಿರೂಪಿಸುವ ಹೊಸಪದ್ಧತಿಯ ಬರವಣಿಗೆಯಲ್ಲಿ ತೊಡಗಿದರು. 15ನೆಯ ಶತಮಾನದಲ್ಲಿ ಪ್ರೌಢದೇವರಾಯನ ಆಶ್ರಯದಲ್ಲಿ ವಿಜಯನಗರದಲ್ಲಿ ನಡೆದ ಈ ಎರಡನೆಯ ಚಳುವಳಿಯಲ್ಲಿ ವೀರಶೈವ ಧಾರ್ಮಿಕ ಸಾಹಿತ್ಯದ ಸಂಗ್ರಹ, ಕ್ರೋಡೀಕರಣ ಹಾಗೂ ಸಂರಕ್ಷಣೆ ತೀವ್ರಗತಿಯಲ್ಲಿ ನಡೆಯಿತು. ಅದರಿಂದಾಗಿ, ವಚನಸಾಹಿತ್ಯವು ಈಗ ಪುನಶ್ಚೇತನಗೊಂಡಿತು. ನೂರೊಂದು ವಿರಕ್ತರಲ್ಲಿ ಪ್ರಮುಖರಾದ ಮಹಾಲಿಂಗದೇವ, ಜಕ್ಕಣಾರ್ಯ, ಲಕ್ಕಣ ದಂಡೇಶ, ಮಗ್ಗೆಯ ಮಾಯಿದೇವ, ಚಾಮರಸ, ಕಲ್ಲುಮಠದ ಪ್ರಭುದೇವ, ಕರಸ್ಥಲದ ನಾಗಿದೇವ, ಬತ್ತಲೇಶ್ವರ ಮೊದಲಾದವರು ಷಟ್‌ಸ್ಥಲಗಳನ್ನು ಸಾಧಕರಿಗೆ ಅನುಕೂಲವಾಗುವಂತೆ ನೂರೊಂದು ಸ್ಥಲಗಳಾಗಿ ವಿಂಗಡಿಸಿ, ಆ ಸ್ಥಲಗಳಿಗೆ ಅನುಗುಣವಾಗಿ ವಚನಗಳನ್ನು ಸಂಯೋಜಿಸಿ ಹೇಳಿದರು. ಈ ನೂರೊಂದು ಸ್ಥಲಗಳಿಗನುಗುಣವಾಗಿ ಸಾಧಕನು ಆಚರಿಸುತ್ತಾ ನಡೆದರೆ ಷಟ್‌ಸ್ಥಲ ಜ್ಞಾನವು ಆತನಿಗೆ ಲಭಿಸುತ್ತದೆ. ಲಿಂಗಾಂಗಸಾಮರಸ್ಯದಲ್ಲಿ ಮಿಂದ ಸಾಧಕನು ಐಕ್ಯಸ್ಥಲದಲ್ಲಿ ಶೂನ್ಯಸಂಪಾದನೆಯನ್ನು ಸಾಧಿಸಿ ಪರಮಾತ್ಮನಲ್ಲಿ ಐಕ್ಯನಾಗುವನು. ಹೀಗೆ ಷಟ್ ಸ್ಥಲಗಳನ್ನೊಳಗೊಂಡ ನೂರೊಂದು ಸ್ಥಲಗಳನ್ನು ಆಚರಿಸಿ ಮುಕ್ತಿ ಪಡೆದವರೇ ನೂರೊಂದು ವಿರಕ್ತರು.

ಈ ನೂರೊಂದು ವಿರಕ್ತರನ್ನು ಕುರಿತು ವಿವರಿಸುವ ಅನೇಕ ಕೃತಿಗಳು ರಚನೆಯಾಗಿವೆ. ಅವುಗಳಲ್ಲಿ ಪ್ರಮುಖವಾದವುಗಳೆಂದರೆ, ಲಕ್ಕಣ ದಂಡೇಶನ 'ಶಿವತತ್ವ ಚೂಡಾಮಣಿ' (1430); ಗುಬ್ಬಿಯ ಮಲ್ಲಣಾರ್ಯನ 'ವೀರಶೈವಾಮೃತ ಮಹಾಪುರಾಣ' (1530); ಕಿಕ್ಕೇರಿಯಾರಾಧ್ಯ ನಂಜುಂಡನ 'ಭೈರವೇಶ್ವರ ಕಾವ್ಯ' (1550); ಅದೃಶ್ಯಕವಿಯ 'ಪ್ರೌಢರಾಯನ ಕಾವ್ಯ' (1580); ವಿರೂಪಾಕ್ಷ ಪಂಡಿತನ 'ಚೆನ್ನಬಸವಪುರಾಣ' (1584); ಸಿದ್ಧನಂಜೇಶನ 'ರಾಘವಾಂಕ ಚರಿತೆ' (1550); ರುದ್ರಕವಿಯ 'ಕರಸ್ಥಲದ ನಾಗಲಿಂಗನಚರಿತ್ರೆ' (1650); ಶಾಂತಲಿಂಗದೇಶಿಕನ 'ಭೈರವೇಶ್ವರ ಕಾವ್ಯದ ಕಥಾಸೂತ್ರ ರತ್ನಾಕರ' (1672) ಮತ್ತು ಮೋದಿಯರುದ್ರನ 'ನೂರೊಂದು ವಿರಕ್ತರ ಕಾವ್ಯ' (1737).

ಲಕ್ಕಣ ದಂಡೇಶನ 'ಶಿವತತ್ವ ಚಿಂತಾಮಣಿ'ಯು ನೂರೊಂದು ವಿರಕ್ತರನ್ನು ಉಲ್ಲೇಖಿಸಿದ ಮೊದಲ ಕಾವ್ಯವಾಗಿದೆ ಅದರಲ್ಲಿ ವಿರಕ್ತರ ಹೆಸರುಗಳನ್ನು ಹೇಳದಿದ್ದರೂ, ಅವರ ವಿಚಾರವಾಗಿ ಕೆಲವಾರು ಸಂಗತಿಗಳನ್ನು ತಿಳಿಸುತ್ತದೆ. ಗುಬ್ಬಿಯ ಮಲ್ಲಣಾರ್ಯನು ಕೆಲವೊಂದು ಯತಿಗಳ ಹೆಸರುಗಳನ್ನು ಹೇಳಿರುವನಾದರೂ ಅವರನ್ನು ವಿರಕ್ತರೆಂದು ಕರೆದಿಲ್ಲ. ಆದರೆ, ನಂತರದ ಕವಿಗಳು ಅವರುಗಳನ್ನು ವಿರಕ್ತರೆಂದು ಹೇಳಿದ್ದಾರೆ. ಆದರೆ, ಕಿಕ್ಕೇರಿಯಾರಾಧ್ಯ ನಂಜುಂಡನು ತನ್ನ ಕಾವ್ಯದಲ್ಲಿ ಮೊದಲ ಬಾರಿಗೆ ನೂರೊಂದು ವಿರಕ್ತರನ್ನು ಉಲ್ಲೇಖಿಸಿದ್ದಾನೆ. ಸಿದ್ಧನಂಜೇಶನು ತನ್ನ 'ರಾಘವಾಂಕಚರಿತ್ರೆ'ಯಲ್ಲಿ ಕರಸ್ಥಲದ ನಾಗಿದೇವ, ಕರಸ್ಥಲದ ವೀರಣಾರ್ಯ (ಪ್ರೌಢದೇವರಾಯನ ಅಳಿಯ), ನಿರ್ವಾಣಿ ಬೋಳೇಶ, ಬತ್ತಲೇಶ್ವರ, ಹೇಡೆಯ ಶಾಂತ, ಮಿಡಿಬಿಲ್ಲ ಶಾಂತ ಇವರ ಹೆಸರು ಹೇಳಿದ್ದಾನೆ. ಇವರೆಲ್ಲರೂ ಪ್ರೌಢದೇವರಾಯ ಮತ್ತು ಲಕ್ಕಣ

ದಂಡೇಶರ ಸಮಕಾಲೀನರು.

ಅದೃಶ್ಯ ಕವಿಯ 'ಪ್ರೌಢದೇವರಾಯನ ಕಾವ್ಯ'ವು ಪುರಾಣವಾದರೂ, ಐತಿಹಾಸಿಕ ಮಹತ್ವವುಳ್ಳದ್ದಾಗಿದೆ. ನೂರೊಂದು ವಿರಕ್ತರು ಹಾಗೂ ಪ್ರೌಢದೇವರಾಯನ ಸಂಬಂಧಗಳು ಇದರಲ್ಲಿ ವಿಶದವಾಗಿದೆ. ವಿಶೇಷವಾಗಿ ಚಾಮರಸನು ನೂರೊಂದು ವಿರಕ್ತರಲ್ಲಿ ಒಬ್ಬನೆಂದು ಸ್ಪಷ್ಟವಾಗಿ ತಿಳಿದುಬರುತ್ತದೆ. ವಿರೂಪಾಕ್ಷ ದಂಡಿತನ 'ಚೆನ್ನಬಸವಪುರಾಣ'ವು ಸಂಗಮವಂಶದ ಉದಯದಿಂದ ಅಂತ್ಯದವರೆಗಿನ ಚಾರಿತ್ರಿಕ ಅಂಶಗಳನ್ನೊಳಗೊಂಡಿದೆ. ಕರಸ್ಥಲದ ವೀರಣ್ಣೊಡೆಯನು ರಾಜಯೋಗಿಯಂತಿದ್ದರೂ, ಪ್ರೌಢದೇವರಾಯನ ಮಗಳನ್ನು ಮದುವೆಯಾಗಿ, ರಾಯನ ಸಚಿವನಾಗಿ, ಬದುಕಿನಲ್ಲಿ ಬಹಳ ಸ್ಥಿತ್ಯಂತರಗಳನ್ನು ಕಂಡು ವಿರಕ್ತರ ಮುಖಂಡನಾಗಿರುವುದು ಕಂಡುಬರುತ್ತದೆ.

ರುದ್ರಕವಿಯು ತನ್ನ ಕಾವ್ಯದಲ್ಲಿ, ಹಂಪೆಯಲ್ಲಿ ನಡೆದ ಗಣಪತಿ ಉತ್ಸವದ ನಂತರ, ಅದರ ವಿಸರ್ಜನೆಗೆ ಪ್ರೌಢದೇವರಾಯನು ಮೆರವಣಿಗೆಯಲ್ಲಿ ನೂರೊಂದು ವಿಕ್ತರೊಂದಿಗೆ ಭಾಗವಹಿಸಿದ್ದನೆಂದು ಬಣ್ಣಿಸಿದ್ದಾನೆ. ಶಾಂತಲಿಂಗದೇಶಿಕನು, ಹಂಪೆಯ ನೂರೊಂದು ವಿರಕ್ತರು ಮಹಾಲಿಂಗದೇವನ 'ಏಕೋತ್ತರ ಶತಸ್ಥಲ' ಕೃತಿಯನ್ನು ನಗರದಲ್ಲಿ ಮೆರವಣಿಗೆ ಮಾಡಿದರೆಂದು ಹೇಳಿದ್ದಾನೆ.

ಮೋದಿಯ ರುದ್ರನು ತನ್ನ 'ನೂರೊಂದು ವಿರಕ್ತರ ಕಾವ್ಯ'ದಲ್ಲಿ ಮೊಟ್ಟಮೊದಲ ಬಾರಿಗೆ ನೂರೊಂದು ವಿರಕ್ತರ ಹೆಸರನ್ನು ಹೇಳಿದ್ದಾನೆ. ನೂರೊಂದು ವಿರಕ್ತರ ಚರಿತ್ರೆಗಳನ್ನು ಸಂಗ್ರಹಿಸಿ ಅದನ್ನು ಕರಸ್ಥಲದ ವೀರಣ್ಣೊಡೆಯನು ಪ್ರೌಢದೇವರಾಯನಿಗೆ ವಿವರಿಸಿ ಹೇಳಿದಂತೆ ಈ ಕಾವ್ಯವನ್ನು ರಚಿಸಲಾಗಿದೆ.

ನೂರೊಂದು ವಿರಕ್ತರ ಎಲ್ಲರ ಜೀವನಚಿತ್ರಗಳೂ ಪೂರ್ಣವಾಗಿ ದೊರೆತಿಲ್ಲ. ಆದರೆ, ನೂರೊಂದು ವಿರಕ್ತರು ಇದ್ದರು ಎಂಬುದಾಗಿ ಅನೇಕ ಕವಿಗಳು ಹೇಳುತ್ತಾರೆ. ನೂರೊಂದು ಸ್ಥಲಗಳನ್ನು ಅನುಕ್ರಮವಾಗಿ ಆಚರಿಸಿ ಮುಕ್ತಿ ಪಡೆದ ನೂರೊಂದು ವಿರಕ್ತರು ಆ ಕಾಲದಲ್ಲಿ ಹಂಪೆಯಲ್ಲಿದ್ದರು ಎಂಬುದನ್ನು ಎಲ್ಲರೂ ಒಪ್ಪುತ್ತಾರೆ. ವೀರಶೈವ ಧರ್ಮದ ಪುನರುತ್ಥಾನದ ಆ ಕಾಲದಲ್ಲಿ ನೂರೊಂದು ಸ್ಥಲಗಳಿಗೆ ಅನುಗುಣವಾಗಿ ನೂರೊಂದು ಸಂಖ್ಯೆಯ ವಿರಕ್ತರ ಹೆಸರುಗಳನ್ನು ಜೋಡಿಸಬೇಕಾದ ಶ್ರದ್ಧಾಭಕ್ತಿಯ ಪರಿಣಾಮವಾಗಿ ನೂರೊಂದು ಸಂಖ್ಯೆಯ ವಿರಕ್ತರಿದ್ದರು ಎಂದು ಹೇಳಿರಬಹುದಾದ ಸಾಧ್ಯತೆಯಿದೆ. ಆದರೆ, ವಾಸ್ತವವಾಗಿ ಈ ಸಂಖ್ಯೆ ಇನ್ನೂ ಹೆಚ್ಚಿರುವ ಸಾಧ್ಯತೆಯಿದೆ.

ನೂರೊಂದು ವಿರಕ್ತರಲ್ಲಿ ಎಲ್ಲರೂ ಸಾಹಿತ್ಯ ರಚನೆಯ ಸಾಹಸಕ್ಕೆ ಕೈ ಹಾಕಿದವರಲ್ಲ. ಆದರೆ, ಸಾಹಿತ್ಯ ರಚಿಸಿದವರಲ್ಲಿ ಕೆಲವರೆಂದರೆ ಮಹಾಲಿಂಗದೇವ, ಜಕ್ಕಣಾರ್ಯ, ಶ್ರೀ ಗಿರೀಂದ್ರ, ಕುಮಾರ ಬಂಕನಾಥ, ಮಗ್ಗೆಯ ಮಾಯಿದೇವ, ಚಾಮರಸ, ಕಲ್ಲುಮಠದ ಪ್ರಭುದೇವ, ಗುರುಬಸವ, ಕರಸ್ಥಲದ ವೀರಣ್ಣೊಡೆಯ, ಕರಸ್ಥಲದ ನಾಗಿದೇವ, ಬತ್ತಲೇಶ್ವರ, ನಿರ್ವಾಣಿ ಬೋಳೇಶ ಹಾಗೂ ಇನ್ನೂ ಅನೇಕ ವಿರಕ್ತ ಸಾಹಿತಿಗಳು ನಿಜವಾದ ಅರ್ಥದಲ್ಲಿ ನೂರೊಂದು ವಿರಕ್ತರು. ಷಟ್‌ಸ್ಥಲ ಸಿದ್ಧಾಂತದ ಸಾಕಾರಮೂರ್ತಿಗಳಾಗಿ ಬಾಳಿ ಬದುಕಿ, ನೂರೊಂದು ಸ್ಥಲಗಳನ್ನು ಜೀವನದಲ್ಲಿ ಅಳವಡಿಸಿಕೊಂಡು, ವೀರಶೈವ ಶೂನ್ಯ ಸಂಪಾದನೆಯನ್ನು ಸಾಧಿಸಿದ ಆ ಲೀಲಾಪುರುಷರೇ ನೂರೊಂದು ವಿರಕ್ತರು !

29. ಹಂಪಿ ಪರಿಸರದಲ್ಲಿ ವಿಜಯನಗರ ಕಾಲದ ಮತ್ತಷ್ಟು ಉಪನಗರಗಳು

ಡಾ॥ ಸಿ. ಮಹದೇವ

ದಕ್ಷಿಣ ಭಾರತದಲ್ಲಿ ಚರಿತ್ರೆಯಲ್ಲಿ ಹಂಪಿಯದು ಗಮನಾರ್ಹ ಅಧ್ಯಾಯ. ವಿಜಯನಗರ ಕುರಿತಂತೆ ಈವರೆವಿಗೂ ಹಲವಾರು ಅಧ್ಯಯನಗಳು ನಡೆದಿವೆ, ನಡೆಯುತ್ತಲಿವೆ. ವಿಜಯನಗರಪೂರ್ವದ ಹಂಪಿ ಪರಿಸರ ಮಾನವ ಆವಾಸಸ್ಥಾನವೇ ಆಗಿದೆ. ಅವನು ಬಿಟ್ಟುಹೋಗಿರುವ ಪ್ರಾಚ್ಯಾವಶೇಷಗಳು ನಮ್ಮನ್ನು ಮೂಕವಿಸ್ಮಿತರನ್ನಾಗಿ ಮಾಡುತ್ತವೆ. ಇನ್ನು ವಿಜಯನಗರ ಸಾಮ್ರಾಜ್ಯ ಸ್ಥಾಪನೆಯಾದ ಮೇಲಂತೂ ಇಡೀ ಭಾರತವೇ ಏಕೆ – ಜಗತ್ತೇ – ಹಂಪಿಯ ಕಡೆಗೆ ಮುಖ ಮಾಡಿತು. ವಿಜಯನಗರಸಾಮ್ರಾಜ್ಯದ ಕೀರ್ತಿ ಯುರೋಪ್ ಮತ್ತು ಏಷಿಯಾದ ದೇಶಗಳಿಗೆ ಹಬ್ಬಿತು. ಆ ದೇಶದ ಪ್ರವಾಸಿಗರು ತಾವು ನೋಡಿದ ವಿಜಯನಗರವನ್ನು ತಮ್ಮ ಬರಹಗಳಲ್ಲಿ ದಾಖಲಿಸಿ ಸಾಕ್ಷಿಗಳಾಗಿದ್ದಾರೆ. ಇಂತಹ ಪ್ರಸಿದ್ಧಿಗೆ ಕಾರಣವಾದ ಅಂಶಗಳು ಹಲವಾರಿವೆ. ಅವುಗಳಲ್ಲಿ ವಿಜಯನಗರದ ನಗರ ಯೋಜನೆಯು ಸಹ ಒಂದು. ನಗರ ನಿರ್ಮಾಣ, ಸ್ಥಳ ಆಯ್ಕೆ, ಮೂಲಭೂತ ಸೌಕರ್ಯಗಳು, ನೀರು ಸರಬರಾಜು ವ್ಯವಸ್ಥೆ, ಸಾಲು ಮಾರುಕಟ್ಟೆ ಮಂಟಪಗಳು, ದೇವಾಲಯಗಳು, ಅರಮನೆಗಳು, ವಸತಿಗೃಹಗಳು, ರಕ್ಷಣಾ ಕಟ್ಟಡಗಳು, ಅಣೆಕಟ್ಟು ಮತ್ತು ಕಾಲುವೆಗಳು, ಕೆರೆ ಕಟ್ಟೆಗಳು ಮೊದಲಾದ ನಿರ್ಮಾಣಗಳು ವಿಜಯನಗರಕ್ಕೆ ಕಿರೀಟಪ್ರಾಯವಾಗಿದ್ದವು ಹಾಗು ನಗರೀಕರಣಕ್ಕೆ ಮಾದರಿಯಾಗಿದ್ದವು.

ಈಗಾಗಲೇ ಅನೇಕ ವಿದ್ವಾಂಸರು ವಿಜಯನಗರ ಪಟ್ಟಣ ಹಾಗೂ ಅದರ ಉಪನಗರಗಳನ್ನು ಕುರಿತು ಸಂಶೋಧನ ಲೇಖನಗಳನ್ನೂ ಬರೆದು ಪ್ರಕಡಿಸಿದ್ದಾರೆ. ಈ ಮೂಲಕ ವಿಜಯನಗರದ ನಗರೀಕರಣದ ಬೆಳವಣಿಗೆಯನ್ನು ವಿಶ್ಲೇಷಿಸಿದ್ದಾರೆ. ವಿಜಯನಗರವು ಚದುರಿದಂತೆ ಅಲ್ಲಲ್ಲಿ ಉಪನಗರಗಳಿಂದ ಕೂಡಿತ್ತು. ವಿಜಯನಗರ ಪಟ್ಟಣದ ಕೇಂದ್ರಭಾಗ ಈಗಿನ ಹಂಪಿಯ ಅರಮನೆ ಪ್ರದೇಶವಾಗಿತ್ತು. ಇದರ ನಾಲ್ಕೂ ದಿಕ್ಕುಗಳಲ್ಲಿ ಉಪನಗರಗಳು ನೆಲೆಗೊಂಡಿದ್ದವು. ಅವುಗಳೆಂದರೆ ಕೃಷ್ಣಾಪುರಪೇಟೆ,[1] ಕಮಲಾಪುರ,[2] ವರದಜರಾಜಮ್ಮನ ಪಟ್ಟಣ,[3] ಅಚ್ಯುತರಾಯಪೇಟೆ,[4] ವಿಠಲಾಬಜಾರು,[5] ಮಾಲ್ಯವಂತ ರಘುನಾಥ ದೇವಾಲಯದ ಪರಿಸರದ ವಸತಿ ಪ್ರದೇಶ, ಮುಸ್ಲಿಂ ವಸತಿಪ್ರದೇಶ, ಕಡೆರಾಮಪುರ,[6] ತಿರುಮಲಾದೇವಿಯರ ಪಟ್ಟಣ,[7] ಅನಂತಶಯನಗುಡಿ,[8] ಮಲಪನಗುಡಿ,[9] ನಾಗಲಾಪುರ[10] ಇವುಗಳ ಗುರುತಿಸುವಿಕೆಗೆ ವಿದೇಶಿ ಬರಹಗಾರರ ಲೇಖನಗಳು, ಶಾಸನಗಳು, ದೇವಾಲಯಗಳು ಮತ್ತಿತರ ವಿಜಯನಗರ ಕಾಲದ ಪ್ರಾಚ್ಯಾವಶೇಷಗಳು ನೆರವಾಗಿವೆ.

ಈ ಮೇಲೆ ತಿಳಿಸಿದ ಉಪನಗರಗಳಲ್ಲದೆ ಹಂಪಿ ಪರಿಸರದಲ್ಲಿ ಮತ್ತಷ್ಟು ಉಪನಗರಗಳಿದ್ದ ಬಗ್ಗೆ ಅಲ್ಲಿ ಅಳಿದುಳಿದಿರುವ ಪ್ರಾಚ್ಯಾವಶೇಷಗಳು ಸುಳಿವು ನೀಡುತ್ತವೆ. ಸದ್ಯ ಅವುಗಳ ಹೆಸರುಗಳು ಯಾವುವೆಂಬುದು ತಿಳಿದುಬರುವುದಿಲ್ಲ. ಆದರೂ ಅವು ವಿಜಯನಗರ ಪಟ್ಟಣದ ಉಪನಗರಗಳಾಗಿದ್ದವೆಂಬುದು ಗಮನಾರ್ಹ ಸಂಗತಿ. ಈ ಉಪನಗರಗಳನ್ನು ಕ್ಷೇತ್ರಕಾರ್ಯದ ಮೂಲಕ ಗುರುತಿಸಲಾಗಿದೆ.

ಮೊದಲನೆಯದಾಗಿ, ಈಗಿನ ಕನ್ನಡ ವಿಶ್ವವಿದ್ಯಾಲಯದ ಪ್ರಧಾನ ದ್ವಾರದ ಉತ್ತರಕ್ಕಿರುವ ಜಮೀನಿನ ನಡುವೆ ಇರುವ ದೇವಾಲಯದ ಅಸ್ತಿತ್ವದಿಂದಾಗಿ ಉಪನಗರವೊಂದನ್ನು ಗುರುತಿಸಬಹುದು. ಅಂದರೆ ಈಗಿನ ಹಳ್ಳಿಕೆರೆಯ ಈಶಾನ್ಯಕ್ಕೆ ಈ ದೇವಾಲಯವಿದೆ. ಈ ದೇವಾಲಯದ ಪೂರ್ವ ಮತ್ತು ಆಗ್ನೇಯ ಭಾಗಗಳು ಉಪನಗರದ ವಸತಿ ಪ್ರದೇಶಗಳಾಗಿದ್ದವು. ಮುಖ್ಯವಾಗಿ ಇದು ಕೃಷಿಕರ ಮತ್ತು ಪಶುಪಾಲಕರ ವಸತಿಗ್ರಾಮವಿರಬಹುದು. ಏಕೆಂದರೆ ಈ ಗ್ರಾಮ ಹಂಪಿಯಿಂದ ಆಗ್ನೇಯ ದಿಕ್ಕಿನಲ್ಲಿ ಕೊನೆಯ ಗ್ರಾಮವಾಗಿದೆ. ಇಲ್ಲಿಂದಾಚೆಗೆ ಮಳೆಯಾಶ್ರಿತ ಕೃಷಿಭೂಮಿ ಮತ್ತು ಬೆಟ್ಟಗುಡ್ಡಗಳ ಪರಿಸರವನ್ನು ಕಾಣುತ್ತೇವೆ.

ಮೇಲೆ ಹೇಳಿದ ದೇವಾಲಯವು ಶ್ರೀವೈಷ್ಣವ ಪರಂಪರೆಗೆ ಸೇರಿದ್ದಾಗಿದೆ. ಸ್ಥಳೀಯ ಕೃಷಿಕರು ಈ ದೇವಾಲಯವನ್ನು ಕರಸಗಲ್ ಗುಡಿ ಎಂದು ಕರೆಯುತ್ತಾರೆ. ದೇವಾಲಯದ ಗರ್ಭಗೃಹ ಬಿದ್ದುಹೋಗಿದ್ದು, ಉಳಿದಂತೆ ಅರ್ಧಮಂಟಪ ಮತ್ತು ನವರಂಗ ಭಾಗಗಳನ್ನು ಹೊಂದಿದೆ. ಮುಂಭಾಗದಲ್ಲಿ ಮಹಾದ್ವಾರವಿದ್ದು, ಅದಕ್ಕೆ ಹೊಂದಿಕೊಂಡಂತಿದ್ದ ಪ್ರಾಕಾರ ಗೋಡೆಯು ಸಹ ಬಿದ್ದುಹೋಗಿದೆ.

ಮಹಾದ್ವಾರ ಮತ್ತು ನವರಂಗದ ಮಧ್ಯದಲ್ಲಿ ದೀಪಸ್ತಂಭವಿದ್ದು, ಅದು ಸಹ ಭಗ್ನಗೊಂಡು ನೆಲಕಚ್ಚಿದೆ. ಪಕ್ಕದಲ್ಲೆ ಬಲಿಪೀಠವನ್ನು ಕಾಣಬಹುದು. ಮಹಾದ್ವಾರದ ಎಡಜಗಲಿಯಲ್ಲಿ ಆಳ್ವಾರರ ಪ್ರತಿಮೆ ಮತ್ತು ಆಂಜನೇಯನ ಶಿಲ್ಪಗಳಿವೆ. ದೇವಾಲಯ ಆವರಣದ ಆಗ್ನೇಯ ಮೂಲೆಯಲ್ಲಿ ಹಾಳುಬಿದ್ದ ಮಂಟಪವಿದೆ. ಬಹುಶಃ ಇದು ಅಡುಗೆ ಮನೆ ಇರಬಹುದು.

ನವರಂಗದ ಕಂಬಗಳು ಚೌಕರಚನೆಯಲ್ಲಿದ್ದು, ಮಧ್ಯದ ನಾಲ್ಕು ಕಂಬಗಳ ಮುಖಗಳಲ್ಲಿ ಶ್ರೀವೈಷ್ಣವ ಪರಂಪರೆಗೆ ಸೇರಿದ ಉಬ್ಬುಶಿಲ್ಪಗಳವೆ. ಅಜ್ಞಾತವಾಗಿ ಉಳಿದಿರುವ ಈ ಹಾಳುಗುಡಿಯನ್ನು ಸಂರಕ್ಷಿಸಬೇಕಿದೆ. ಉಳಿದಂತೆ ಇಲ್ಲಿ ಯಾವುದೇ ಶಾಸನವಾಗಲಿ ಅಥವಾ ಪ್ರಧಾನ ದೇವರ ಬಿಡಿಶಿಲ್ಪಗಳಾಗಲಿ ಕಾಣಬರುವುದಿಲ್ಲ.

ಈ ದೇವಾಲಯದ ಅನತಿ ದೂರದಲ್ಲಿ ಪೋತಪ್ಪನ ಗುಡಿ ಎಂದು ಕರೆಯಲಾಗುವ ಭಗ್ನ ದೇವಾಲಯ ಮಂಟಪವಿದೆ. ಇದರಲ್ಲಿ ದೇವಿ, ಸ್ತಂಭ ಮತ್ತಿತರ ಶಿಲ್ಪಾವಶೇಷಗಳಿವೆ. ಇವುಗಳನ್ನು ಸ್ಥಳೀಯ ಕಮಲಾಪುರದ ವಾಲ್ಮೀಕಿ ಸಮುದಾಯದವರು ಪೂಜಿಸುತ್ತಾರೆ. ಈ ಸ್ಮಾರಕಗಳ ಅಸ್ತಿತ್ವ, ನೈರುತ್ಯ ಭಾಗದಲ್ಲಿರುವ ಕೆರೆ (ಅಳ್ಳಿಕೆರೆ) ಹಾಗೂ ಪೂರ್ವಕ್ಕಿರುವ ಬಯಲು ಪ್ರದೇಶಗಳು ಇಲ್ಲಿ ವಿಜಯನಗರ ಕಾಲದಲ್ಲಿ ಜನ ವಸತಿ ಇತ್ತೆಂಬುದನ್ನು ಸ್ಥಿರೀಕರಿಸುತ್ತವೆ. ಈ ಉಪನಗರದ ಹೆಸರು ಸದ್ಯ ಏನೆಂಬುದು ತಿಳಿದುಬರುವುದಿಲ್ಲ.

ಎರಡನೆಯದಾಗಿ, ಈಗಿನ ಹೊಸ ಮಲಪನಗುಡಿಯ ಪಶ್ಚಿಮ, ಉತ್ತರ ಮತ್ತು ಪೂರ್ವಭಾಗದ ಕೃಷಿ ಭೂಮಿಗಳ ನಡುವೆ ವಿಜಯನಗರ ಕಾಲದ ಭಗ್ನ ದೇವಾಲಯಗಳು ಕಂಡುಬರುತ್ತವೆ. ಗಾಳೆಮ್ಮನ ಗುಡಿ ಹಿಂಭಾಗದಲ್ಲಿ ಹೊಸಪೇಟೆ–ಕಮಲಾಪುರ ರಸ್ತೆಗೆ ಹೊಂದಿಕೊಂಡಂತೆ ಇರುವ ಶಿಖರವನ್ನು ಒಳಗೊಂಡ ಗರ್ಭಗೃಹವನ್ನು ಕಾಣಬಹುದು. ಇದು ದೇವಾಲಯವೊಂದರ ಮುಖ್ಯ ಗರ್ಭಗೃಹವಾಗಿದೆ. ಇತ್ತೀಚೆಗೆ ಕೇಂದ್ರ ಪುರಾತತ್ವ ಇಲಾಖೆಯವರು ಈ ಗರ್ಭಗೃಹವನ್ನು ಸಂರಕ್ಷಿಸಿದ್ದಾರೆ. ಈ ಸ್ಮಾರಕದ ಉತ್ತರಕ್ಕೆ ವಿಶಾಲವಾದ ಹೊಲಭೂಮಿ ಇದ್ದು ಸಮತಟ್ಟಾಗಿದೆ. ಬಹುಶಃ ಇದು ವಿಜಯನಗರ ಕಾಲದ ಜನವಸತಿ ನೆಲೆಯಾಗಿರಬಹುದು. ಈ ಗುಡಿಯಿಂದ ಪಶ್ಚಿಮಕ್ಕೆ ಅಂದರೆ ಹೊಸಪೇಟೆಗೆ ಸಾಗುವ ರಸ್ತೆಯಲ್ಲಿ ಸುಮಾರು ಮುನ್ನೂರು ಮೀಟರ್‌ಗಳ ಅಂತರದಲ್ಲಿ ಹೊಸಮಲಪನಗುಡಿ ಬಸ್‌ನಿಲ್ದಾಣದ ಎದುರು ವಿಜಯನಗರ ಕಲದ ಭಗ್ನ ಗರ್ಭಗೃಹವೊಂದನ್ನು ಕಾಣುತ್ತೇವೆ. ಪೊದೆಗಳ ಮಧ್ಯದಲ್ಲಿರುವ ಈ ಗರ್ಭಗೃಹ ದಕ್ಷಿಣ ಪಾರ್ಶ್ವದಲ್ಲಿ ಬಿದ್ದಿದ್ದ ಕಲ್ಲು ಚಪ್ಪಡಿಗಳು ಇತ್ತೀಚೆಗೆ ರಸ್ತೆ ಅಗಲೀಕರಣದ ಸಂದರ್ಭಲ್ಲಿ ಸ್ಥಳಾಂತರಗೊಂಡಿವೆ. ಇಲ್ಲಿಂದ ಪಶ್ಚಿಮಕ್ಕೆ ಸ್ವಲ್ಪ ದೂರದಲ್ಲಿ ಇದೇ ರಸ್ತೆಯ ಎಡಭಾಗದ ಹೊಲದ ನಡುವಿನ ಪೊದೆಯಲ್ಲಿ ಭಗ್ನಮಂಟಪವೊಂದರ ಅವಶೇಷಗಳು ಕಂಡುಬರುತ್ತವೆ. ಈ ಎಲ್ಲ ಭಗ್ನ ಸ್ಮಾರಕಗಳು ಒಂದೇ ಉಪನಗರಕ್ಕೆ ಸಂಬಂಧಿಸಿವೆ. ಅಂದರೆ ಈಗಿನ ಹೊಸಮಲಪನಗುಡಿ ಪ್ರದೇಶದಲ್ಲಿ ವಿಜಯನಗರ ಕಾಲದ ಜನವಸತಿ ಇದ್ದು, ಕಾಲಕ್ರಮೇಣ ಹಾಳುಬಿದ್ದಂತೆ ಕಾಣುತ್ತದೆ. ಪುನಃ ಇತ್ತೀಚಿನ ದಶಕಗಳಲ್ಲಿ ಜನರು ಇಲ್ಲಿ ಮರುವಸತಿಗೊಂಡಿರುವುದು ಗಮನಾರ್ಹ. ಈ ದೇವಾಲಯಗಳ ಸುತ್ತಲಿನ ಪ್ರದೇಶವು ವಿಜಯನಗರ ಕಾಲದಲ್ಲಿ ವಸತಿ ಪ್ರದೇಶವಾಗಿದ್ದ ಅಂಶವನ್ನು ಅಲ್ಲಿನ ವಿಸ್ತಾರವಾದ ಮೈದಾನ ಪ್ರದೇಶದಿಂದ ಗುರುತಿಸಬಹುದಾಗಿದೆ[11] ಹಾಗೂ ಅವಶೇಷಗಳಾಗಿ ಅಳಿದುಳಿದು ದುಃಸ್ಥಿತಿಯಲ್ಲಿರುವ, ಮೇಲೆ ಹೇಳಿದ ದೇವಾಲಯಗಳು ಸಹ ವಿಜಯನಗರ ಕಾಲದ ಉಪನಗರವನ್ನು ಗುರುತಿಸಲು ನೆರವಾಗುತ್ತವೆ. ಈ ಉಪನಗರದ ಸ್ಥಳನಾಮ ಏನೆಂಬುದು

ತಿಳಿದುಬರುವುದಿಲ್ಲ. ಭವಿಷ್ಯದ ಸಂಶೋಧನೆಯಲ್ಲಿ ಮನಗಾಣಬಹುದೆಂಬ ಆಶಯವಿದೆ. ಈ ಉಪನಗರಕ್ಕೆ ಸಂಬಂಧಿಸಿದ ಕೆರೆಯೊಂದನ್ನು ಇದೇ ಲೇಖಕರು ಗುರುತಿಸಿದ್ದಾರೆ ಹಾಗೂ ಗಾಳಮ್ಮನ ಗುಡಿಯ ಪೂರ್ವಕ್ಕಿರುವ ಆಂಜನೇಯ ದೇವಾಲಯಗಳು ವಿಜಯನಗರ ಕಾಲದ ಉಪನಗರಕ್ಕೆ ಸಂಬಂಧಿಸಿವೆ.

ಮೂರನೆಯ ಉಪನಗರವನ್ನು ಹೊಸಪೇಟೆಯಿಂದ ಹಂಪಿಗೆ ಹೋಗುವ ಮುಖ್ಯರಸ್ತೆಯಲ್ಲಿ, ಅನಂತಶಯನಗುಡಿ ಮತ್ತು ಕೊಂಡನಾಯಕನಹಳ್ಳಿ ಗ್ರಾಮಗಳ ನಡುವೆ ಗುರುತಿಸುವ ಪ್ರಯತ್ನ ಮಾಡಲಾಗಿದೆ. ಕೊಂಡನಾಯಕನಹಳ್ಳಿಗೆ ಮೊದಲು ಎಡಭಾಗದ ಕೃಷಿಭೂಮಿಯ ನಡುವೆ ವಿಜಯನಗರ ಕಾಲದ ದೇವಾಲಯವೊಂದಿದೆ. ಅಳಿದುಳಿದು ಭಗ್ನ ಸ್ಥಿತಿಯಲ್ಲಿರುವ ಈ ದೇವಾಲಯದ ಪರಿಸರದಲ್ಲಿ ವಿಜಯನಗರ ಕಾಲದ ಉಪನಗರವಿತ್ತೆಂಬುದನ್ನು ಗ್ರಹಿಸಬಹುದು. ಜನವಸತಿ ಸ್ಥಳಾಂತರಗೊಂಡರೂ ದೇವಾಲಯ ಮತ್ತಿತರ ಪ್ರಾಚ್ಯಾವಶೇಷಗಳು ಅಲ್ಲಿಯೇ ಇರುತ್ತಿದ್ದವು. ಇದರಿಂದಾಗಿ ಹಳೆಯ ಜನವಸತಿ ನೆಲೆಗಳನ್ನು ಗುರುತಿಸಲು ಸಾಧ್ಯವಾಗುತ್ತದೆ.

ನಾಲ್ಕನೆಯ ಉಪನಗರವನ್ನು ತುಂಗಭದ್ರಾ ಜಲಾಶಯದ ಮುಂಭಾಗದಲ್ಲಿ ಹಾಯ್ದುಹೋಗಿರುವ ರಾಷ್ಟ್ರೀಯ ಹೆದ್ದಾರಿ ಹದಿಮೂರರಲ್ಲಿ ನದಿ ಬಲದಂಡೆಯಲ್ಲಿ ಗುರುತಿಸಲಾಗಿದೆ. ಬಲಕೆಳಮಟ್ಟದ ಕಾಲುವೆಗೆ ಹೊಂದಿಕೊಂಡಂತಿರುವ ವಿಜಯನಗರ ಕಾಲದ ದೇವಾಲಯದ ಮಹಾದ್ವಾರ ಗೋಪುರ ತನ್ನ ಭವ್ಯತೆಯಿಂದಾಗಿ ಈ ಉಪನಗರದ ಮಹತ್ವವನ್ನು ಕಲಿಸಿಕೊಡುತ್ತದೆ. ಈ ದೇವಾಲಯವನ್ನು ಸದ್ಯ ಗಣೇಶಗುಡಿ ಎಂದು ಕರೆಯುತ್ತಾರೆ. ಸಮೀಪದಲ್ಲಿ ಆಂಜನೇಯನ ಗುಡಿ ಇದ್ದು, ಈ ಪ್ರದೇಶವನ್ನು ಬಾಣದ ಪೇಟೆ ಎಂದು ಕರೆಯುತ್ತಾರೆ. ಜಲಾಶಯದ ನಿರ್ಮಾಣ ಹಾಗೂ ಹೊಸ ಕಾಲುವೆಗಳ ರಚನೆಯಿಂದಾಗಿ ಇಲ್ಲಿನ ಜನವಸತಿ ಬೇರೆಡೆಗಳಿಗೆ ಸ್ಥಳಾಂತರಗೊಂಡಿದೆ.

ಪ್ರಸ್ತುತ ದೇವಾಲಯದ ಪೂರ್ವ ಮತ್ತು ದಕ್ಷಿಣ ಭಾಗಗಳಲ್ಲಿ ಹಳೆ ಊರಿನ ನಿವೇಶನವಿದ್ದ ಬಗ್ಗೆ ಸೂಚನೆಗಳು ದೊರೆಯುತ್ತವೆ. ಕಾಲುವೆಗಳ ನಿರ್ಮಾಣದ ಜೊತೆಗೆ ಕೃಷಿ ವಿಸ್ತರಣೆಯಿಂದಾಗಿಯೂ ಜನವಸತಿ ಸ್ಥಳಾಂತರಗೊಂಡಿತ್ತೆನ್ನಬಹುದು. ಕಾಲುವೆಗಳ ನಿರ್ಮಾಣ ಕಾಲದಲ್ಲಿ ಇಲ್ಲಿನ ಐದು ದೇವಾಲಯಗಳು ಹಾಳಾದವೆಂದು ಸ್ಥಳೀಯರು ತಿಳಿಸುತ್ತಾರೆ. ಕಾಲುವೆಗಳಲ್ಲಿ ನೀರು ಕಡಿಮೆಯಾದಾಗ ಹಳೆ ದೇವಾಲಯದ ಅಡಿಪಾಯದ ಅವಶೇಷಗಳು ಕಾಣಿಸುವುದಾಗಿ ಸ್ಥಳೀಯರು ತಿಳಿಸುತ್ತಾರೆ.

ಪೂರ್ವಾಭಿಮುಖವಾಗಿರುವ ದೇವಾಲಯವು ಗರ್ಭಗೃಹ, ಅಂತರಾಳ, ಸಭಾಮಂಟಪಗಳನ್ನು ಹೊಂದಿದ್ದು ನವೀಕರಣಗೊಂಡಿದೆ. ಸರಳವಾದ ಅಧಿಷ್ಠಾನದ ಮೇಲಿರುವ ಗರ್ಭಗೃಹ ಮತ್ತು ಅಂತರಾಳ ಭಾಗಗಳು ವಿಜಯನಗರ ಕಾಲದ ರಚನೆಗಳಾಗಿವೆ. ಸಭಾಮಂಟಪ ಇತ್ತೀಚಿನ ನಿರ್ಮಾಣವಾಗಿದೆ. ಗರ್ಭಗೃಹದ ಹೊರಭಿತ್ತಿ ಬಿದ್ದುಹೋಗಿದ್ದು, ಜೀರ್ಣೋದ್ಧಾರ ಮಾಡಿಲ್ಲ. ಒಳಭಿತ್ತಿಯ ಹೊರಮೈಯನ್ನು ಸುಣ್ಣಬಣ್ಣಗಳಿಂದ ಮುಚ್ಚಲಾಗಿದೆ. ಅಧಿಷ್ಠಾನವು ಜಗತಿ, ಉಪಾನ, ಭಿತ್ತಿ, ಕಂಠ ಮತ್ತು ಉರ್ಧ್ವೋಪಾನಗಳಿಂದ ಕೂಡಿದೆ. ಗರ್ಭಗೃಹದ ಮೇಲೆ ಸಿಮೆಂಟಿನ ಶಿಖರವನ್ನು ನಿರ್ಮಿಸಿದ್ದಾರೆ. ದೇವಾಲಯವು ಉತ್ತರಾಭಿಮುಖವಾಗಿರುವ ಮಹಾದ್ವಾರವನ್ನು ಹೊಂದಿದೆ. ಮಹಾದ್ವಾರವು ಮೇಲೆ ರಾಯಗೋಪುರವನ್ನು ಹೊಂದಿದ್ದು, ಭಗ್ನಗೊಂಡಿದೆ. ಸದ್ಯ ಇಟ್ಟಿಗೆ ರಚನೆಯ ಎರಡು ಹಂತಗಳು ಉಳಿದುಬಂದಿವೆ. ಈ ದೇವಾಲಯ ಈವರೆಗೆ ಎಲ್ಲಿಯೂ ಪ್ರಸ್ತಾಪವಾಗಿಲ್ಲ.[12]

ಗರ್ಭಗೃಹದಲ್ಲಿ ಪೀಠದ ಮೇಲೆ ಗಣಪತಿ ಶಿಲ್ಪವಿದೆ. ಬಹುಶಃ ಇದು ಮೂಲತಃ ಶಿವಾಲಯವಾಗಿರಬೇಕು. ನವೀಕರಣದ ಸಂದರ್ಭದಲ್ಲಿ ಗಣಪತಿಯನ್ನು ಮುಖ್ಯ ಗರ್ಭಗೃಹದಲ್ಲಿರಿಸಿದಂತೆ ಕಾಣುತ್ತದೆ. ಅಂತರಾಳ ದ್ವಾರದ ಬಲಬದಿಯಲ್ಲಿ ಗೋಗ್ರಹಣಕ್ಕೆ ಸಂಬಂಧಿಸಿದ ವೀರಗಲ್ಲಿದೆ. ಸಾಮಾನ್ಯವಾಗಿ ಪ್ರಾಚೀನ ಕರ್ನಾಟಕದಲ್ಲಿ ಶಿವದೇವಾಲಯದ

ಮುಂಭಾಗದಲ್ಲಿ ವೀರಗಲ್ಲುಗಳು ಮತ್ತು ಸತಿಕಲ್ಲುಗಳನ್ನು ನೆಡುವ ಪದ್ಧತಿ ಇತ್ತು. ಇಲ್ಲಿರುವ ವೀರಗಲ್ಲನ್ನು ಗಮನಿಸಿದಾಗ ಈ ದೇವಾಲಯ ಮೂಲತಃ ಶಿವ ದೇವಾಲಯವಾಗಿರಬಹುದೆನಿಸುತ್ತದೆ. ಕ್ರಿ.ಶ. 1885ರ ನಕಾಸೆಯ ಪ್ರಕಾರ ಈ ದೇವಾಲಯವನ್ನು ಹಾಳಾದ ಬೆನಕನಗುಡಿ ಎಂದು ಕರೆಯಲಾಗುವುದೆಂದು ದೇವಾಲಯದ ಅರ್ಚಕರು ತಿಳಿಸುತ್ತಾರೆ. ಅರ್ಚಕರು ವಾಲ್ಮೀಕಿ ಸಮುದಾಯಕ್ಕೆ ಸೇರಿದ್ದು, ಅಲ್ಲಿಯೇ ನೆಲೆಸಿರುತ್ತಾರೆ.

ದೇವಾಲಯದ ಮುಂದಿನ ಬಲಿಪೀಠದ ಮುಂಭಾಗದಲ್ಲಿ ಸ್ಮರಣೆ ಕಲ್ಲೊಂದನ್ನು ನೆಡಲಾಗಿದೆ. ಅರ್ಚಕರ ಮಗ ಏಕಲವ್ಯ ಗುಜ್ಜಲನ ಹೆಸರಿನಲ್ಲಿರುವ ಈ ಸ್ಮರಣೆ ಕಲ್ಲನ್ನು 23-11-2004ರಲ್ಲಿ ನೆಡಲಾಗಿದೆ. ಈ ಕಲ್ಲಿನ ನಾಲ್ಕೂ ಮುಖಗಳಲ್ಲಿ ಕನ್ನಡದ ಬರಹವಿದೆ.

ದಕ್ಷಿಣ ಮುಖ	**ಪೂರ್ವ ಮುಖ**
ಜ 26-03-74	ಸ್ಮರಣೆ
ಕಾ ಅ. 2003	
ಉತ್ತರ ಮುಖ	**ಪಶ್ಚಿಮ ಮುಖ**
ದಿ. ಏಕಲ	ವ್ಯ ಗುಜ್ಜಲ

ಈ ಸ್ಮರಣೆ ಕಲ್ಲಿನ ಮೇಲೆ ಹರಕೆ ಕಲ್ಲನ್ನು ಇಡಲಾಗಿದೆ. ಅದನ್ನು ತಿರುಗಿಸಿದರೆ ಅವರ ಇಷ್ಟಾರ್ಥಗಳು ನೆರವೇರುತ್ತವೆ ಎಂದು ನಂಬಲಾಗಿದೆ. ಇದನ್ನು ಈಗ ಒಟ್ಟಾಗಿ ಹರಕೆಕಲ್ಲು ಎಂದು ಕರೆಯುತ್ತಾರೆ.

ಈ ಮೇಲಿನ ನಾಲ್ಕು ಉಪನಗರಗಳ ನೆಲೆಗಳು ಕೃಷಿ ಚಟುವಟಿಕೆಯ ಪರಿಣಾಮವಾಗಿ ಭೂಮೇಲ್ಮೈ ಸ್ವರೂಪದಲ್ಲಿ ಸಾಕಷ್ಟು ಬದಲಾವಣೆಯನ್ನು ಹೊಂದಿದೆ. ದೇವಾಲಯಗಳ ಅಸ್ತಿತ್ವದಿಂದಾಗಿ ಈ ಉಪನಗರಗಳ ನೆಲೆಯನ್ನು ಗುರುತಿಸಲು ಸಾಧ್ಯವಾಗಿದೆ. ಸ್ಥಳೀಯರು ಈ ದೇವಾಲಯಗಳ ಬಗೆಗೆ ಭಕ್ತಿ ಮತ್ತು ನಂಬಿಕೆಗಳನ್ನು ಉಳಿಸಿಕೊಂಡಿದ್ದಾರೆ. ಹಂಪಿ ಪರಿಸರದಲ್ಲಿರುವ ವಿಜಯನಗರ ಕಾಲದ ಪ್ರತಿಯೊಂದು ಉಪನಗರಗಳು ತಮ್ಮದೇ ಆದ ದೇವಾಲಯಗಳು, ಕೆರೆಕಟ್ಟೆಗಳು ಹಾಗೂ ಕೃಷಿ ಭೂಮಿಯನ್ನು ಹೊಂದುವ ಮೂಲಕ ನಿರ್ದಿಷ್ಟ ಅಂತರವನ್ನು ಕಾಯ್ದುಕೊಂಡಿದ್ದವು. ಈ ಸ್ವರೂಪದ ನಗರ ಯೋಜನೆಯು ಇಂದಿಗೂ ಪ್ರಸ್ತುತ ಮತ್ತು ಆದರ್ಶವಾಗಿದೆ. ಪ್ರಸ್ತುತ ಗುರುತಿಸಲಾಗಿರುವ ಮೇಲಿನ ನಾಲ್ಕೂ ನೆಲೆಗಳು ವಿಜಯನಗರ ಕಾಲಕ್ಕೆ ಉಪನಗರಗಳಾಗಿದ್ದವು. ಈ ಕುರಿತು ಇನ್ನು ಹೆಚ್ಚಿನ ಅಧ್ಯಯನಗಳು ನಡೆಯಬೇಕಿದೆ.

ಅಡಿ ಟಿಪ್ಪಣಿಗಳು ಮತ್ತು ಗ್ರಂಥಸೂಚಿ

1. *ಸೌತ್ ಇಂಡಿಯನ್ ಇನ್ಸ್ಕ್ರಿಪ್ಷನ್ಸ್, iv*, ನಂ. 255.
2. *ಅದೇ, ix, ii*, ನಂ. 230
3. *ಅದೇ*, ನಂ. 595.
4. ದೇವಕುಂಜರಿ ಡಿ., 1983, *ಹಂಪಿ*, ಆರ್ಕಿಯಾಲಾಜಿಕಲ್ ಸರ್ವೇ ಆಫ್ ಇಂಡಿಯಾ, ನ್ಯೂ ಡೆಲ್ಲಿ, ಪು. 12.
5. ಸೋಮಶೇಖರ ಎಸ್.ವೈ., 1997, *ಹಂಪೆಯ ಬಜಾರುಗಳು*, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು. 8.
6. ಮಹದೇವ ಸಿ., 2002, *ಹೊಸಪೇಟೆ ತಾಲ್ಲೂಕು ದರ್ಶನ*, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು. 81.
7. *ಅದೇ*, ಪು. 82.
8. *ಅದೇ*, ಪು. 134.
9. *ಅದೇ*, ಪು. 132.

10. ದೇವರಕೊಂಡಾರೆಡ್ಡಿ (ಸಂ.), 1998, *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ* 1, ಹೊಸಪೇಟೆ, ನಂ. 28.

11. ಸಾಮಾನ್ಯವಾಗಿ ಕರ್ನಾಟಕದ ಯಾವುದೇ ಹಳೆ ಊರುಗಳ ನೆಲೆಯನ್ನು ಪರಿಶೀಲಿಸಿದಾಗ ಅದನ್ನು ಕೃಷಿ ಭೂಮಿಯನ್ನು ವಿಸ್ತರಿಸಿಕೊಂಡಿರುವುದನ್ನು ಮನಗಾಣುತ್ತೇವೆ. ಆದರೆ ದೇವಾಲಯ, ಅದರ ವಾಸ್ತು ಭಾಗಗಳು, ಶಾಸನ, ವೀರಗಲ್ಲು, ಮತ್ತಿತರ ಪ್ರಾಚ್ಯಾವಶೇಷಗಳನ್ನು ಮಾತ್ರ ಸ್ಥಳಾಂತರಿಸುವುದಿಲ್ಲ. ಏಕೆಂದರೆ ಗ್ರಾಮೀಣರಲ್ಲಿ ಕೃಷಿ ಮತ್ತು ಮಳೆಗೆ ಸಂಬಂಧಿಸಿದಂತೆ ಪ್ರಾಚ್ಯಾವಶೇಷಗಳನ್ನು ನಂಬಿ ಪೂಜಿಸುವ ಆಚರಣೆ ಪ್ರಬಲವಾಗಿದೆ. ಹೀಗಾಗಿ ಅವು ಇದ್ದ ಸ್ಥಳದಲ್ಲೇ ಇದ್ದು, ಕಳ್ಳಕಾಕರ ಹಾಗೂ ನಿಧಿಗಳ್ಳರ ದುರಾಸೆಗೆ ಬಲಿಯಾಗಿ ಅವನತಿ ಹಾದಿ ಹಿಡಿದಿವೆ. ಈ ಪ್ರಾಚ್ಯಾವಶೇಷಗಳ ಅಸ್ತಿತ್ವವೇ ಪ್ರಾಚೀನ ವಸತಿ ನೆಲೆಗಳ ಗುರುತುಗಳಾಗಿವೆ.

12. ಸುರೇಶ್ ಕೆ.ಎಂ., ವಾಸುದೇವ ಬಡಿಗೇರ, ಮಾಡಲಗೇರಿ ಕೊಟ್ರೇಶ್, ಎಸ್.ವೈ. ಸೋಮಶೇಖರ, 1999, *ಕರ್ನಾಟಕ ದೇವಾಲಯ ಕೋಶ,* ಬಳ್ಳಾರಿ ಜಿಲ್ಲೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

30. ವಿಜಯನಗರ ಸೆಕ್ಸೆಂಟಿನರಿ ಕಮೆಮೊರೇಷನ್ ವಾಲ್ಯೂಮ್: ಅವಲೋಕನ

ರಮೇಶ ನಾಯಕ

ವಿಜಯನಗರ ಸಾಮ್ರಾಜ್ಯದ ಇತಿಹಾಸ ಕುರಿತಿರುವ ಲೇಖನಗಳು ಈ ಕೃತಿಯಲ್ಲಿವೆ. ಇಪ್ಪತ್ತನೆಯ ಶತಮಾನದ ಮೊದಲೆರಡು ದಶಕಗಳಲ್ಲಿ ದೇಶೀಯ ವಿದ್ವಾಂಸರು ವಿಜಯನಗರದ ಬಗೆಗೆ ಮಂಥನಮಾಡಿ ರೂಪಿಸಿದ ಚರ್ಚೆಗಳಿವು. ಸಾಮ್ರಾಜ್ಯ ಸ್ಥಾಪನೆಯ ಆರುನೂರನೆಯ ವರ್ಷದ ಸ್ಮರಣೆಗಾಗಿ ಇಂಥದೊಂದು ಗ್ರಂಥವನ್ನು 1936ರಲ್ಲಿ ಪ್ರಕಟಿಸಲಾಯಿತು. ಇದಕ್ಕೆ 'ವಿಜಯನಗರ ಸೆಕ್ಸೆಂಟಿನರಿ ಕಮೆಮೊರೇಷನ್ ವಾಲ್ಯೂಮ್' ಎಂಬ ಹೆಸರಿಡಲಾಯಿತು. ಇದನ್ನು ಷಷ್ಠ್ಯಬ್ದಿ ಸ್ಮರಣ ಸಂಪುಟವೆಂದೂ ಕರೆಯಲಾಗುತ್ತದೆ. ವಿಜಯನಗರ ಇತಿಹಾಸ ಅಧ್ಯಯನಕಾರರಿಗೆ ಇದೊಂದು ಬಹು ಉಪಯುಕ್ತವಾದ ಆನುಷಂಗಿಕ ಆಕರಗ್ರಂಥ. ಇದನ್ನು ಧಾರವಾಡದ ಕರ್ನಾಟಕ ಇತಿಹಾಸ ಸಂಶೋಧನ ಸಂಸ್ಥೆಯ *(Karnataka Historical Research Society)* ಸಹಯೋಗದೊಂದಿಗೆ ವಿಜಯನಗರ ಎಂಪೈರ್ ಸೆಕ್ಸೆಂಟಿನರಿ ಅಸೋಸಿಯೇಶನ್‌ವರು ಪ್ರಕಟಿಸಿದ್ದಾರೆ. ಸ್ಮರಣಸಂಪುಟದ ಕಾರ್ಯದರ್ಶಿಯಾಗಿದ್ದ ಶ್ರೀಯುತ ಡಿ.ಪಿ.ಕರಮಕರ ಅವರ ಮುನ್ನುಡಿ ಇದರಲ್ಲಿದೆ. ಇದರ ರಚನೆಯ ಪೂರ್ವಪಾದಿಯಲ್ಲಾದ ಸಂಗತಿಗಳನ್ನು ಸಂಕ್ಷಿಪ್ತವಾಗಿ ದಾಖಲಿಸಲಾಗಿದೆ.

ಈ ಲೇಖನಗಳಲ್ಲಿ ವ್ಯಕ್ತವಾಗಿರುವ ದೃಷ್ಟಿಕೋನಗಳು ಮುಂದಿನ ದಿನಗಳಲ್ಲಿ ವಿಜಯನಗರ ಇತಿಹಾಸದ ಬಗೆಗೆ ಬರೆದ ಬರವಣಿಗೆಗಳ ಮೇಲೆ ಗಾಢವಾದ ಪ್ರಭಾವ ಬೀರಿದವು. ಆಧುನಿಕ ಕರ್ನಾಟಕದ ಕಲ್ಪನೆಯ ಬೇರುಗಳು ಇದರಲ್ಲಿ ದಾಖಲಾದವು. ರಾಜಕೀಯ, ಧಾರ್ಮಿಕ ಹಾಗೂ ಭಾಷಿಕ ನೆಲೆಗಳನ್ನೊಳಗೊಂಡ ಅಖಂಡ ಕರ್ನಾಟಕದ ಕಲ್ಪನೆಗಳು ಈ ಲೇಖನಗಳಲ್ಲಿ ವ್ಯಕ್ತವಾದವು. ನಮ್ಮ ನಾಡಿನ ಸಾಂಸ್ಕೃತಿಕ ಬರಹಗಳ ಮೇಲೆ ದಟ್ಟವಾದ ಪರಿಣಾಮ ಬೀರಿದ ಇಂಥ ಮಹತ್ವದ ಕೃತಿಯಲ್ಲಿರುವ ಚರ್ಚೆಗಳು ಮುಂದಿನ ದಿನಗಳಲ್ಲಿ ಬೇರೆ ಬೇರೆ ಆಯಾಮಗಳನ್ನು ಪಡೆದವು. ಅವು ಇತಿಹಾಸ ಮತ್ತು ಸಂಸ್ಕೃತಿಯ ಚಿಂತಕರನ್ನು ವಿವಿಧ ನೆಲೆಯಲ್ಲಿ ಆಲೋಚಿಸುವಂತೆ ಮಾಡಿದವು. ವಿಜಯನಗರ ಇತಿಹಾಸ ಬರವಣಿಗೆಯ ಲೇಖನಾಶಾಸ್ತ್ರದಲ್ಲಿ ಹೆಚ್ಚಿನ ವಿಮರ್ಶೆಗೆ ಒಳಗಾಗಿರುವ ಈ ಕೃತಿಯ ರಚನೆಗೆ ಇದ್ದ ಪ್ರಮುಖ ಕಾರಣಗಳನ್ನು ಕುರಿತು ವಿವರಿಸುವುದು ಈ ಲೇಖನದ ಉದ್ದೇಶ.

ವಿಜಯನಗರ ಸಾಮ್ರಾಜ್ಯ ಸ್ಥಾಪನೆಯ ಆರುನೂರನೆಯ ವರ್ಷದ ಸವಿನೆನಪಿಗಾಗಿ ಹಂಪಿಯಲ್ಲೊಂದು ವಿಚಾರ ಸಂಕಿರಣ ಮಾಡುವಂತೆ ಹುಬ್ಬಳ್ಳಿಯ ಶಹರದಲ್ಲಿದ್ದ ಶ್ರೀಯುತ ಪಿ.ಎನ್.ಬೆಂಗೇರಿ ಅವರು ಸೂಚಿಸಿದರು. ಇಂಥ ಮಹತ್ವಪೂರ್ಣ ಕಾರ್ಯಕ್ಕಾಗಿ 1933ರಲ್ಲಿ ಸಂಘವೊಂದನ್ನು ರಚಿಸಲಾಯಿತು. ನಾಡಿನ ಸಮಸ್ತ ಜನತೆಗೆ ಹಾಗೂ ವಿದ್ವಾಂಸರಿಗೆ ಈ ಕಾರ್ಯದಲ್ಲಿ ಪಾಲ್ಗೊಳ್ಳುವಂತೆ ಮನವಿಮಾಡಿಕೊಳ್ಳಲಾಯಿತು. ಸಮಾರಂಭದ ನೆನಪಿಗಾಗಿ ಸ್ಮರಣ ಸಂಪುಟವೊಂದನ್ನು ರೂಪಿಸಲು ನಿರ್ಧರಿಸಲಾಯಿತು. ಅಲ್ಲದೇ ಹಂಪಿಯಲ್ಲಿ ಮರೆಯಲಾಗದ ಸಾಂಸ್ಕೃತಿಕ ಸಮಾರಂಭವೊಂದನ್ನು ಆಯೋಜಿಸಬೇಕೆಂದು ನಿಶ್ಚಿಯಿಸಲಾಯಿತು ಎಂದು ಶ್ರೀಯುತ ಕರಮಕರ ಅವರು ತಮ್ಮ ಮುನ್ನುಡಿಯಲ್ಲಿ ವಿವರಿಸಿದ್ದಾರೆ. ಈ ಹಿನ್ನಲೆಯಲ್ಲಿ ಸಂಬಂಧಿಸಿದ ಸಂಸ್ಥೆಯು ಭವ್ಯವಾದ ಸಮಾರಂಭಕ್ಕೆ ಪೂರ್ವಭಾವಿಯಾಗಿ ಬೇರೆ ಬೇರೆ ಸ್ಥಳಗಳಲ್ಲಿ ಮೂರು ಸಮ್ಮೇಳನಗಳನ್ನು ವ್ಯವಸ್ಥೆಗೊಳಿಸಿತು. ಮೊದಲ ಸಭೆಯನ್ನು 1933ರಲ್ಲಿ ಹುಬ್ಬಳ್ಳಿಯಲ್ಲಿಯೇ ಮಾಡಲಾಯಿತು. ಈ ಸಮಾರಂಭದ ಅಧ್ಯಕ್ಷತೆಯನ್ನು ಸಂಸ್ಕೃತಿಚಿಂತಕರಾದ ಶ್ರೀಯುತ ಡಿ.ವಿ.ಗುಂಡಪ್ಪನವರು ವಹಿಸಿಕೊಂಡಿದ್ದರು. ಎರಡು ಮತ್ತು ಮೂರನೆಯ ಸಮಾರಂಭಗಳನ್ನು ಕ್ರಮವಾಗಿ ರಾಯಚೂರು (1933) ಮತ್ತು ಮುಂಬೈನಲ್ಲಿ (1935) ಆಯೋಜಿಸಲಾಯಿತು. ರಾಯಚೂರಿನಲ್ಲಾದ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀಯುತ ಎಮ್.ಎಸ್.ಶ್ರೀಧರ (ಸೊಲ್ಲಾಪುರನಲ್ಲಿದ್ದ ಪ್ರಸಿದ್ಧ ವಕೀಲರು) ಅವರು ವಹಿಸಿದ್ದರು. ಮುಂಬೈನಲ್ಲಿ ನಡೆದ ಸಮ್ಮೇಳನದ

ಘನ ಅಧ್ಯಕ್ಷತೆಯನ್ನು ವಹಿಸಿದವರು ಪ್ರಸಿದ್ಧ ಇತಿಹಾಸಚಿಂತಕರಾಗಿದ್ದ ಭಾಸ್ಕರ ಆನಂದ ಸಾಲೆತೊರೆ ಅವರು. ಕ್ರಿ.ಶ. 1936ರಲ್ಲಿ ಅಂತಿಮವಾಗಿ ಹಂಪಿಯಲ್ಲೊಂದು ಸಮಾರೋಪ ಸಮಾರಂಭವನ್ನು ವಿಜೃಂಭಣೆಯಿಂದ ಮಾಡುವ ಉದ್ದೇಶವನ್ನು ಎಲ್ಲ ಕಡೆಗೂ ಪ್ರಚುರಪಡಿಸಲಾಯಿತು.

ಈ ಮೂರು ಸಮಾರಂಭಗಳಲ್ಲಿ ವಿಜಯನಗರ ಸಾಮ್ರಾಜ್ಯದ ಇತಿಹಾಸ ಕುರಿತಂತೆ ದೇಶದ ಪ್ರತಿಷ್ಠಿತ ಇತಿಹಾಸ ತಜ್ಞರು, ಸಂಸ್ಕೃತಿ ಚಿಂತಕರು, ರಾಜಕೀಯ ವಿದ್ಯಮಾನಗಳನ್ನು ಅರಿತಿದ್ದ ಮೇಧಾವಿಗಳು ಹಾಗೂ ಸಾಮಾನ್ಯ ಆಸಕ್ತರೆಲ್ಲರು ಭಾಗವಹಿಸಿ ತಮ್ಮ ಅಭಿಪ್ರಾಯಭೇದಗಳನ್ನು ಮಂಡಿಸುವ ವ್ಯವಸ್ಥೆ ಮಾಡಲಾಯಿತು. ಇಂಥ ಸಭೆಗಳು ಸಮಾರೋಪ ಸಮಾರಂಭಕ್ಕೆ ಬೇಕಾದ ಪೂರ್ವತಯಾರಿಗಳನ್ನು ಅಂತಿಮಗೊಳಿಸಿದವು. ಅಲ್ಲದೇ ಸಭೆಗಳಲ್ಲಿ ವ್ಯಕ್ತವಾಗುವ ವಿಚಾರಗಳನ್ನೆಲ್ಲ ಸೇರಿಸಿ ಸ್ಮರಣಸಂಪುಟವನ್ನು ರಚಿಸಿ ಬಿಡುಗಡೆಗೊಳಿಸುವ ಕಾರ್ಯವನ್ನು 1936ಕ್ಕೆ ನಿಗದಿಗೊಳಿಸಲಾಯಿತು. ವಿಜಯನಗರ ಇತಿಹಾಸ ಅಥವ ಚರಿತ್ರೆಯ ಕುರಿತು ಕನ್ನಡದಲ್ಲಿ ಮೊಟ್ಟಮೊದಲ ಇಂಥ ಮಹತ್ವಪೂರ್ಣ ಆಕರಗ್ರಂಥ ತರುವ ಉದ್ದೇಶವನ್ನು ಈ ಸಂಸ್ಥೆಯು ಹೊಂದಿತ್ತು. ಅಲ್ಲದೇ ಸಾಂಸ್ಥಿಕ ರೂಪದಲ್ಲಿ ಕನ್ನಡ ಭಾಷೆ ಹಾಗೂ ರಾಷ್ಟ್ರೀಯತೆ ವಿಚಾರಗಳನ್ನು ಬೆಂಬಲಿಸುವ ಇತಿಹಾಸಚಿಂತಕರನ್ನೊಳಗೊಂಡ ವೇದಿಕೆಯನ್ನು ನಿರ್ಮಿಸುವ ಬಹುಮುಖ್ಯ ಸದಾಶಯಗಳನ್ನು ಹೊಂದಲಾಗಿತ್ತು. ಪ್ರಧಾನವಾಗಿ ಆರುನೂರನೆಯ ಹುಟ್ಟುಹಬ್ಬದ ಸವಿನೆನಪಿನ ನೆಪದಲ್ಲಿ ಕನ್ನಡದ ಸಾಮ್ರಾಜ್ಯವನ್ನು ಸಾರ್ವತ್ರೀಕರಣಗೊಳಿಸುವುದು. ಅಂದರೆ ದೇಶವ್ಯಾಪಿಯಲ್ಲಿ ಕನ್ನಡದ ಇತಿಹಾಸ ಮತ್ತು ಸಂಸ್ಕೃತಿಯನ್ನು ಪ್ರಚುರಪಡಿಸುವುದಾಗಿತ್ತು. ವಿಜಯನಗರ ಸಾಮ್ರಾಜ್ಯವನ್ನು ಕನ್ನಡಿಗರೇ ಕಟ್ಟಿ ಬೆಳೆಸಿದರು ಎಂಬ ವಿವರಗಳನ್ನು ಕನ್ನಡೇತರ ಜಗತ್ತಿಗೂ ತಿಳಿಸುವುದು ಸ್ವಾತಂತ್ರ್ಯಸೇನಾನಿಗಳಿಗೆ ಮತ್ತು ವಿದ್ವಾಂಸರಿಗೆ ಹೆಮ್ಮೆಯ ಸಂಗತಿಯಾಗಿತ್ತು. ಆದ್ದರಿಂದ ಇಂಗ್ಲೀಷ್‌ನಲ್ಲಿ ಸಹ ಈ ಸ್ಮರಣಸಂಪುಟವನ್ನು ಬಿಡುಗಡೆಗೊಳಿಸುವ ಠರಾವನ್ನು ಇದೇ ಸಮಿತಿಯು ಕೈಗೊಂಡಿತು. ನಿಯೋಜಿತ ಕಾರ್ಯಕ್ರಮಗಳು ಯಶಸ್ವಿಯಾದನಂತರ ಮುಂದಿನ ದಿನಗಳಲ್ಲಿ ಸಾಮ್ರಾಜ್ಯದ ವಿವರಗಳ ಬಗೆಗೆ ಪ್ರಕಟವಾಗುತ್ತಿರುವ ಇಂಥ ಮಹತ್ವಪೂರ್ಣ ಆಕರಗ್ರಂಥವನ್ನು ಬೇರೆ ಬೇರೆ ಭಾಷೆಯಲ್ಲಿ ಅನುವಾದಿಸಿ ಪ್ರಚಾರಗೊಳಿಸುವ ಉದ್ದೇಶವನ್ನು ಸಹ ಹೊಂದಲಾಗಿತ್ತು. ಅಂತಿಮವಾಗಿ ಹಂಪಿಯಲ್ಲಿಯೇ ಈ ಸಂಪುಟವು ಬಿಡುಗಡೆಯಾಗಬೇಕು, ಸಮ್ಮೇಳನ ನಡೆಯುವ ದಿನಗಳಲ್ಲಿ ಐತಿಹಾಸಿಕ ವಸ್ತುಪ್ರದರ್ಶನ ಮತ್ತು ಜನರಿಗೆ ಸಾಮ್ರಾಜ್ಯ ಕುರಿತು ತಿಳುವಳಿಕೆ ಮೂಡಿಸುವ ಕಾರ್ಯಗಳು ಪ್ರಕಟಗೊಳ್ಳಬೇಕು ಎಂದು ನಿರ್ಣಯಿಸಲಾಯಿತು. 1936ರ ಡಿಸೆಂಬರ್ 25ರಂದು ನಡೆಯಬೇಕಾದ ಕಾರ್ಯಕ್ರಮದ ಕುರಿತಾಗಿರುವ ರೂಪು-ರೇಷೆಗಳನ್ನು ಮೊದಲೇ ನಿರ್ಧರಿಸಲಾಗಿತ್ತು.

ವಿಜಯನಗರ ಸಾಮ್ರಾಜ್ಯವು ಕನ್ನಡ ಅಥವ ಕರ್ನಾಟಕ ಸಾಮ್ರಾಜ್ಯವಾದರೂ ಅದರ ಸಾಂಸ್ಕೃತಿಕ ವ್ಯಾಪ್ತಿ ದಕ್ಷಿಣದ ಪರ್ಯಾಯ ಪ್ರದೇಶಕ್ಕೆ ಸಂಬಂಧಿಸಿದ್ದು. ಹಾಗಾಗಿ ಆಯೋಜಿಸಿಕೊಂಡಿರುವ ಸಮಾರಂಭವು ದಕ್ಷಿಣ ಭಾರತದ ಎಲ್ಲ ಜನರಿಗೂ ಸಂಬಂಧಿಸಿದ್ದು ಎಂಬ ಸಂಗತಿಗಳನ್ನು ಪ್ರಚುರಪಡಿಸಲಾಯಿತು. ಸದಾಶಯ ಹೊಂದಿದ ಇಂಥ ಕಾರ್ಯಕ್ರಮಕ್ಕೆ ಎಲ್ಲರ ಸಹಕಾರ ಮುಖ್ಯವಾಯಿತು. ಆದ್ದರಿಂದ ಸಂಯೋಜನಾ ಸಂಸ್ಥೆಯ ವತಿಯಿಂದ ಆನೆಗುಂದಿ ಸಂಸ್ಥಾನದ ಮಹಾರಾಣಿ, ಮದ್ರಾಸ್‌ಪ್ರಾಂತದ ಗರ್ವನರ್ ಹುದ್ದೆಯ ಜವಾಬ್ದಾರಿಗಳನ್ನು ನಿರ್ವಹಿಸುತ್ತಿದ್ದ ಶ್ರೀಯುತ ಸಿ.ಪಿ.ರಾಮಸ್ವಾಮಿ ಅಯ್ಯರ್ ಅವರ, ಮೈಸೂರು ಪ್ರಾಂತದ ದಿವಾನರಾಗಿದ್ದ ಶ್ರೀಯುತ ಸರ್ ಮಿರ್ಜಾ ಇಸ್ಮಾಯಿಲ್ ಅವರ, ಸ್ವಾತಂತ್ರ್ಯ ಸೇನಾನಿ ಪಟ್ಟಾಬಿ ಸೀತಾರಾಮಯ್ಯ, ಪ್ರಸಿದ್ಧ ಇತಿಹಾಸಕಾರರಾದ ಎಸ್.ಕೆ.ಅಯ್ಯಂಗಾರ್ ಹಾಗೂ ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯ ಡೈರೆಕ್ಟರ್ ಜನರಲ್‌ರಾಗಿದ್ದ ಬ್ಲಾಕಿಸ್ಟನ್ ಅವರ ಸದಾಶಯವನ್ನು ಈ ಸಮಾರಂಭಕ್ಕೆ ಕೋರಲಾಯಿತು.

ಸ್ಮರಣಸಂಪುಟವು ಮುಖ್ಯವಾಗಿ ವಿಜಯನಗರ ಕಾಲೀನ ರಾಜಕೀಯ, ಸಾಹಿತ್ಯ, ಧಾರ್ಮಿಕ ಮತ್ತು ಕಲೆ-ಸಂಸ್ಕೃತಿಯ ವಿವರಗಳ ಬಗೆಗೆ ಹೆಚ್ಚಿನ ಮಾಹಿತಿಗಳನ್ನು ಕ್ರೋಡೀಕರಿಸುವ ಯೋಜನೆಗಳಿಗೆ ಬದ್ಧವಾಗಿ ರಚಿತಗೊಂಡಿತು. ವಿಜಯನಗರ ಸಾಮ್ರಾಜ್ಯದ ಬಗೆಗೆ ಆಸಕ್ತರಿರುವ ದೇಶದ ಪ್ರಸಿದ್ಧ ಇತಿಹಾಸಕಾರರ ಅಭಿಪ್ರಾಯಗಳನ್ನು ಸಂಗ್ರಹಿಸುವ

ಹಾಗೂ ಅವರ ಸಹಕಾರ ಪಡೆಯುವ ಪ್ರಯತ್ನಗಳು ಜೊತೆ ಜೊತೆಯಾಗಿ ನಡೆದವು. ಮುಖ್ಯವಾಗಿ ವಿಜಯನಗರ ಇತಿಹಾಸದ ಬಗೆಗೆ ವಿಶೇಷ ಆಸಕ್ತಿ ಹೊಂದಿದಂತಹ ರಾಷ್ಟ್ರೀಯವಾದಿ ಚಿಂತನೆಗಳನ್ನು ಪ್ರತಿಪಾದಿಸುವ ಇತಿಹಾಸಕಾರರಾಗಿದ್ದ ಎಸ್.ಕೆ.ಅಯ್ಯಂಗಾರ್, ಬಿ.ಎ.ಸಾಲೆತೊರೆ, ಕೆ.ಎನ್.ದೀಕ್ಷಿತ್ (ಉಪನಿರ್ದೇಶಕರು, ಎ.ಎಸ್.ಐ) ಮತ್ತು ಎಂ.ಎಚ್.ಕೃಷ್ಣ ಅವರ ವಿಶೇಷ ನೆರವನ್ನು ಗ್ರಂಥರಚನೆಯಲ್ಲಿ ಪಡೆಯಲಾಯಿತು. ಷಷ್ಟ್ಯಬ್ದಿಯ ಕಾರ್ಯಕ್ರಮದ ಸಂಯೋಜನಾ ಸಂಸ್ಥೆಯ ಅಧ್ಯಕ್ಷರಾಗಿದ್ದ ಶ್ರೀಯುತ ವಿ.ಬಿ.ಹಾಲಭಾವಿ, ಇದರ ಪ್ರಧಾನ ಕಾರ್ಯದರ್ಶಿಗಳಾಗಿದ್ದ ಶ್ರೀಯುತ ಜಿ.ಎಸ್.ಕುಲಕರ್ಣಿ, ಅಲ್ಲದೇ ಕರ್ನಾಟಕ ಇತಿಹಾಸ ಸಂಶೋಧನಾ ಮಂಡಳಿಯ ಕಾರ್ಯದರ್ಶಿಗಳಾಗಿದ್ದ ಶ್ರೀಯುತ ಎನ್.ಎಸ್.ಕಮಲಾಪುರ ಹಾಗೂ ಇತಿಹಾಸಾಸಕ್ತರು ಮತ್ತು ಸ್ವಾತಂತ್ರ್ಯಹೋರಾಟಗಾರರು ಆಗಿದ್ದ ಆರ್.ಎಸ್.ಹುಕ್ಕೇರಿಕರ ಅವರಂಥ ಮಹನೀಯರು ಇಂಥದೊಂದು ಮಹತ್ವಪೂರ್ಣ ಸ್ಮರಣಸಂಪುಟ ಹೊರಬರಲು ಅವಿರತವಾಗಿ ದುಡಿದವರು ಎಂದು ಸ್ಮರಣ ಸಂಪುಟಕ್ಕೆ ಮುನ್ನುಡಿ ಬರೆದಿರುವ ಶ್ರೀಯುತ ಡಿ.ಪಿ.ಕರಮಕರ ಅವರು ತಮ್ಮ ಮಾತುಗಳ ಮೂಲಕ ಸ್ಮರಿಸಿದ್ದಾರೆ.

ವಿವಿಧ ಆಶಯಗಳನ್ನು ಹೊಂದಿದ್ದ ಷಷ್ಟ್ಯಬ್ದಿ ಕಾರ್ಯಕ್ರಮ ಹಾಗೂ ಸ್ಮರಣ ಸಂಪುಟ ರೂಪಗೊಳ್ಳಲು ಕೆಲವು ಮಹತ್ವದ ಕಾರಣಗಳಿವೆ. ಮುಖ್ಯವಾಗಿ ವಸಾಹತುಶಾಹಿ ಆಲೋಚನೆಗಳ ಪ್ರತಿಸ್ಪರ್ಧಿಯಾಗಿ ನಮ್ಮ ರಾಷ್ಟ್ರೀಯ ಚಿಂತನೆಗಳನ್ನು ಕಟ್ಟಿಕೊಡುವ ಬಹುಮುಖ್ಯ ಉದ್ದೇಶ ಹೊಂದಲಾಗಿತ್ತು. ರಾಷ್ಟ್ರನಿರ್ಮಾಣ ಹಾಗೂ ಸಂಸ್ಕೃತಿ ಎಂಬ ಪರಿಕಲ್ಪನೆಗಳನ್ನು ಸಾಕಾರಗೊಳಿಸಲು ನಮ್ಮ ನೆಲದಲ್ಲಿ ಗತಿಸಿಹೋದ ಸಂಗತಿಗಳೇ ಈ ರೀತಿಯ ಸಾಕ್ಷಿ ಆಗಿ ನಿಂತಿವೆ. ಅವು ಇತಿಹಾಸ ನಿರ್ಮಾಣ ಮಾಡಲು ಬೇಕಾದ ಆಕರಗಳಾಗಿದ್ದವು. ಅವುಗಳನ್ನು ಅರ್ಥೈಸಿ ಪುನರ್ ರೂಪಿಸುವುದು ಅಂದಿನ ಜರೂರಾದ ಕಾರ್ಯಗಳಾದವು. ಈ ರೀತಿಯ ಸಾಕ್ಷಿಗಳ ಪರಿಧಿಯಲ್ಲಿಯೇ ಯೂರೋಪಿನ ಚಿಂತನೆಗಳು ಸಹ ಹುಟ್ಟಿಕೊಂಡಿದ್ದವು. ಹಾಗಾಗಿ ಅವರ ಮಾದರಿಯಲ್ಲಿಯೇ ಅವರು ಒಪ್ಪಬಹುದಾದ ಆಕರಗಳನ್ನು ನಮ್ಮ ಇತಿಹಾಸದಲ್ಲಿಯೇ ಹುಡುಕಬೇಕಾಗಿತ್ತು. ಅವು ಮಾತ್ರ ರಾಷ್ಟ್ರೀಯವಾದ ಎಂಬ ಬಿಟ್ಟ ಸ್ಥಳವನ್ನು ತುಂಬುವ ಸಾಮರ್ಥ್ಯವನ್ನು ಹೊಂದಿದ್ದವು. ಈ ಹಿನ್ನಲೆಯಲ್ಲಿ ಇಂಥದೊಂದು ಯೋಜನೆ ಹುಟ್ಟಿಕೊಂಡಿತು.

ವಿಜಯನಗರ ಸಾಮ್ರಾಜ್ಯದ ರಾಜಕೀಯ ಇತಿಹಾಸ ಕುರಿತು ಮೊಟ್ಟಮೊದಲಿಗೆ ಆಮೂಲಾಗ್ರವಾಗಿ ವಿವರಗಳನ್ನು ಪ್ರಕಟಿಸಿದ ಕೀರ್ತಿ ಶ್ರೀಯುತ ರಾಬರ್ಟ್ ಸಿವೆಲ್ ಅವರಿಗೆ ಸಲ್ಲುತ್ತದೆ. 'ಎ ಫರ್‌ಗಾಟನ್ ಎಂಪೈರ್' ಎಂಬ ಹೆಸರಿನಲ್ಲಿ ಅದನ್ನು ಪ್ರಕಟಿಸಲಾಯಿತು. ಲಂಡನ್ನಿನ ಸ್ವಾನ್‌ಸೊನ್ನೆನ್ ಸ್ವೈನ್ ಕಂಪನಿಯು ಕ್ರಿ.ಶ.1900ರಲ್ಲಿ ಈ ಪುಸ್ತಕವನ್ನು ಅಚ್ಚು ಹಾಕಿಸಿತು. ತನ್ನ ಪ್ರಾಂತದಲ್ಲಿ (ಮದ್ರಾಸ್) ಇಂಥದೊಂದು ಬೃಹತ್ ಸಾಮ್ರಾಜ್ಯ ಆಳಿ ಅಳಿದುಹೋಗಿದೆ ಎಂಬ ಮಾಹಿತಿಗಳನ್ನು ತನ್ನ ಮೇಲಧಿಕಾರಿಗಳಿಗೆ ನೀಡುವುದು ಆತನ ಮುಖ್ಯ ಉದ್ದೇಶವಾಗಿತ್ತು. ಇಂಥ ಕಾರಣಗಳಿಗಾಗಿಯೇ ಇದನ್ನು ರಚಿಸಲಾಯಿತು. ಇದು ಸಹ ವಸಾಹತುಶಾಹಿ ಒಲವುಗಳಿಂದ ಕೂಡಿದ ಪ್ರಭಾವ ವಲಯದಿಂದ ತಪ್ಪಿಸಿಕೊಳ್ಳಲಾಗಲಿಲ್ಲ ಎಂಬ ಅಭಿಪ್ರಾಯಗಳು ವಿದ್ವತ್‌ಲೋಕದಲ್ಲಿ ಜನಜನಿತವಾಗಿವೆ. ಅಲ್ಲದೇ ಎರಡು ಬೃಹತ್ ಸಾಮ್ರಾಜ್ಯಗಳು ತಮ್ಮ ಸ್ವಹಿತಾಸಕ್ತಿಗಳಿಗಾಗಿಯೇ ನಡೆಸಿದ ಶುದ್ಧ ರಾಜಕೀಯ ಹೋರಾಟಗಳಾಗಿದ್ದವು. ಆದರೂ ನಿಜಸಂಗತಿಗಳನ್ನು ಮರೆಮಾಚಿ ಮತೀಯ ಮೂಸೆಯಲ್ಲಿ ಪ್ರಕಟಗೊಳಿಸುವ ಹುನ್ನಾರಗಳು ನಡೆದವು. ಈ ಮೂಲಕ ಮೊದಲೇ ಉದ್ವಿಗ್ನಗೊಂಡಿದ್ದ ಪರಿಸ್ಥಿತಿಯು ಮತ್ತಷ್ಟು ಬಿಗಡಾಯಿಸುವಂತಾಯಿತು. ಸಿವೆಲ್‌ನಂಥ ಚರಿತ್ರೆಕಾರನಿಂದ ವಿಜಯನಗರ ಇತಿಹಾಸದ ವಿವರಗಳಲ್ಲಿ ರಕ್ತಸಿಕ್ತ ಅಧ್ಯಾಯಗಳು ಸೃಷ್ಟಿಗೊಂಡವು. ಇದರ ಪ್ರಭಾವ ಅಷ್ಟಕ್ಕೇ ನಿಲ್ಲಲಿಲ್ಲ. ಸೀಮಿತವಾದ ಚೌಕಟ್ಟಿನಲ್ಲಿ ಸೃಷ್ಟಿಗೊಂಡಿದ್ದ ಆಕರ ಹಾಗೂ ವಿಚಾರ-ವಿವರಗಳನ್ನು ಉಪಯೋಗಿಸಿಕೊಂಡು ಇನ್ನೊಂದು ಬಗೆಯ ಮತೀಯ ದೃಷ್ಟಿಕೋನದ ವಿವರಗಳನ್ನು 'ನೆವರ್ ಟು ಬಿ ಫರ್‌ಗಾಟನ್ ಎಂಪಾಯರ್' ಎಂಬ ಗ್ರಂಥವು ಹುಟ್ಟು ಹಾಕುವುದರಲ್ಲಿ ಯಶಸ್ವಿಯಾಯಿತು. ಫರ್‌ಗಾಟನ್ (ಮರೆತುಹೋದ) ಎಂಬುದಕ್ಕೆ ಸಮರ್ಥವಾದ ವಿವರಗಳನ್ನು ನೀಡುವಲ್ಲಿ ಸಿವೆಲ್ ಸೋತುಹೋಗಿದ್ದಾನೆ ಎಂದು ಗ್ರಂಥಕರ್ತರಾದ ಬಿ.ಸೂರ್ಯನಾರಾಯಣ ರಾವ್ ಬಲವಾಗಿ ಪ್ರತಿಪಾದಿಸಿದರು. 1905ರಲ್ಲಿ ಪ್ರಕಟವಾದ ಈ ಕೃತಿಯಲ್ಲಿ ನಾಡನ್ನಾಳಿದ ಎಲ್ಲ ಮನೆತನಗಳ ಬಗೆಗಿನ ವಿವರಗಳು ಅನಗತ್ಯವಾಗಿದ್ದರೂ ಇದರಲ್ಲಿ ದಾಖಲಾದವು. ಬಾದಾಮಿ

ಚಾಲುಕ್ಯರಿಂದ ಹಿಡಿದು ವಿಜಯನಗರದ ಅರಸರವರೆಗಿನ ಎಲ್ಲ ರಾಜಮನೆತನಗಳು ಪರಸ್ಪರ ರಕ್ತಸಂಬಂಧಗಳನ್ನು ಹೊಂದಿರುವಂಥವು. ಅವು ಯಾವುದೇ ಅಡೆ-ತಡೆ ಇಲ್ಲದೇ ಮುಂದುವರೆದವು. ಪ್ರಾರಂಭದಲ್ಲಿ ಹುಟ್ಟಿಕೊಂಡ ಒಂದೇ ಮನೆತನವೇ ನಿರಂತರವಾಗಿ ವಿಜಯನಗರದವರೆಗೂ ಬೆಳೆದುಬಂತು ಎಂಬ ಬುಡರಹಿತ ತರ್ಕಗಳನ್ನು ಸೃಷ್ಟಿಸಿದರು. ಇಂಥ ಅಭಿಪ್ರಾಯಗಳು ಇನ್ನೊಂದು ಬಗೆಯ ಗೊಂದಲಗಳಿಗೆ ಕಾರಣೀಭೂತ ಅಂಶಗಳಾದವು. ಈ ಕೃತಿಯ ಲೇಖಕರು ಅತಿಶಯೋಕ್ತಿಯಿಂದ ಕೂಡಿದ ವಿವರಗಳನ್ನು ಹುಟ್ಟುಹಾಕುವಲ್ಲಿ ಪ್ರಯತ್ನಪಟ್ಟರೇ ಹೊರತು ವಾಸ್ತವಗಳ ಹಿನ್ನಲೆಯಲ್ಲಿ ನೈಜಚರಿತ್ರೆ ಕಟ್ಟುವ ವಸ್ತುನಿಷ್ಠತೆಯ ವಿಚಾರಗಳು ಸೊರಗಿಹೋದವು.

ವಿಜಯನಗರದ ಇತಿಹಾಸ ಬರವಣಿಗೆಯ ಕುರಿತಾಗಿರುವ ಈ ಎರಡು ಆಚಾರ್ಯಕೃತಿಗಳು ತಮ್ಮ ತಮ್ಮ ವಿಚಾರಗಳನ್ನು ಪ್ರತಿಪಾದಿಸುವಲ್ಲಿ ನೇರವಾದ ಸಂಘರ್ಷಕ್ಕೆ ಇಳಿದವು. ಹಾಗಾಗಿ ಚರಿತ್ರೆ ಬರವಣಿಗೆಗಳಲ್ಲಿ ಇರಬೇಕಾದ ಯಥಾರ್ಥತೆ, ನೈಜತೆ, ವಸ್ತುನಿಷ್ಠತೆ ಹಾಗೂ ವೈಜ್ಞಾನಿಕತೆ ಎಂಬ ಆಶಯಗಳು ದೀಪದ ಕೆಳಗಿನ ಕತ್ತಲೆಯಲ್ಲಿ ಮರೆಯಾಗಿ ಹೋದವು. 1910ರ ಹೊತ್ತಿಗೆ ಇಂಥ ಅಧ್ಯಯನಗಳು ವಿದೇಶಿ ಮತ್ತು ಸ್ವದೇಶಿ ವಿದ್ವಾಂಸರನ್ನು ಸೂಜಿಗಲ್ಲಿನಂತೆ ಸೆಳೆದವು. ಅಲ್ಲದೇ ವಿಜಯನಗರದ ಇತಿಹಾಸ ಎಂಬುದು ಕೇವಲ ಕರ್ನಾಟಕ ಅಥವ ಕನ್ನಡನಾಡಿಗೆ ಮಾತ್ರ ಸೀಮಿತವಾಗಿ ಉಳಿಯಲಿಲ್ಲ. ನಮ್ಮ ನೆಲದಲ್ಲಿ ಘಟಿಸಿರುವ ರಾಜಕೀಯ ಹಾಗೂ ಧಾರ್ಮಿಕ ವಿದ್ಯಮಾನಗಳನ್ನು ಈಗಾಗಲೇ ಬೇರೆ ಬೇರೆ ರೀತಿಯಲ್ಲಿ ಬಳಸಿಕೊಂಡಿದ್ದ ವಸಾಹತುಶಾಹಿ ಆಡಳಿತಗಾರರಿಗೆ ದಕ್ಷಿಣ ಭಾರತದ ಇತಿಹಾಸಲೋಕ ವಿಜಯನಗರ ಚರಿತ್ರೆ ಕುರಿತು ತಕ್ಕದಾದ ಪ್ರತಿಸ್ಪರ್ಧಿ ವಿಚಾರಗಳನ್ನು ಹುಟ್ಟುಹಾಕುವ ಕಾರ್ಯದಲ್ಲಿ ತೊಡಗಿತು. ಇದೆಲ್ಲವು ನಮ್ಮ ಹೊಣೆಗಾರಿಕೆ ಎಂದು ಪರಿಭಾವಿಸಲಾಯಿತು. ಆದರೆ ವಸಾಹತು ಆಲೋಚನೆಗಳು ಆದರೆ ದೇಶೀಯ ವಿದ್ವಾಂಸರನ್ನು ಪ್ರಭಾವಿಸದೇ ಬಿಡಲಿಲ್ಲ. ಮುಖ್ಯವಾಗಿ ತಮಿಳಿನ ಹಾಗೂ ಕನ್ನಡದ ಮೇಲ್ಜಾತಿಯ ಇತಿಹಾಸ-ಸಂಸ್ಕೃತಿಯ ಚಿಂತಕರು ವಿಜಯನಗರ ಸಾಮ್ರಾಜ್ಯದ ಇತಿಹಾಸಕ್ಕೆ ಅವಶ್ಯವಾಗಿರುವ ಆಕರಗಳನ್ನು ಹುಡುಕಲಾರಂಭಿಸಿದ್ದರು. ಇಂಥ ವಿಚಾರಧಾರೆಗಳಿಗೆ ಮುಖ್ಯ ಕಾರಣಗಳೆಂದರೆ ಯೂರೋಪಿಯನ್ನರಲ್ಲಾಗುತ್ತಿದ್ದ ವಿಚಾರ ಬದಲಾವಣೆಗಳು. ಹತ್ತೊಂಬತ್ತನೆಯ ಶತಮಾನದ ಐರೋಪ್ಯ ಚಿಂತನೆಗಳಲ್ಲಿ ರಾಷ್ಟ್ರದ ಕಲ್ಪನೆಗಳು ಅಥವ ರಾಷ್ಟ್ರೀಯವಾದಿ ವಿಚಾರಗಳು ಹುಟ್ಟಿಕೊಂಡಿದ್ದವು. ಆಸ್ತಿ-ಅಂತಸ್ತು, ಧರ್ಮ-ಜಾತಿ, ಕೀಳು-ಮೇಲು, ಬಡವ-ಬಲ್ಲಿದ, ಗಣ್ಯ-ಸಾಮಾನ್ಯ ಮತ್ತು ಸಮರ್ಥ-ಅಸಮರ್ಥ ಎಂಬ ವಿಚಾರಗಳೆಲ್ಲವು ಬುಡಮೇಲಾಗಿ ರಾಷ್ಟ್ರೀಯ ಕಲ್ಪನೆಗಳು ಮುಂಚೂಣಿಗೆ ಬಂದವು. ರಾಷ್ಟ್ರಕ್ಕೆ ನಿರ್ದಿಷ್ಟವಾದ ಭೌಗೋಳಿಕ ಪ್ರದೇಶ ಹಾಗೂ ಭಾಷೆ ಬೇಕು ಹೊರತು ಉಳಿದ ಯಾವ ವಿಷಯಗಳೂ ಮುಖ್ಯವಲ್ಲ ಎಂದು ಪ್ರತಿಪಾದಿಸಲಾಯಿತು. ಉಪಭೋಗತಾವಾದಿಗಳ ಆಲೋಚನೆಗಳ ಪ್ರಭಾವಕ್ಕೆ ಒಳಗಾಗಿ ಯೂರೋಪಿನಲ್ಲಿದ್ದ ಸಾಮ್ರಾಜ್ಯಶಾಹಿ ವ್ಯವಸ್ಥೆಗಳು ಜನಸಾಮಾನ್ಯರ ಕೊಚ್ಚಿಕೊಂಡು ಹೋದವು. ಯಾಜಮಾನ್ಯದ ಕಬಂಧ ಬಾಹುಗಳಿಂದ ಬಂಧಮುಕ್ತಗೊಳ್ಳಲು ಕಂಡುಕೊಂಡ ಉಪಾಯಗಳೆಂದರೆ ರಾಷ್ಟ್ರೀಯವಾದದ ಕಲ್ಪನೆಗಳಾಗಿದ್ದವು. ಇದೇ ಪರಿಣಾಮಗಳು ಸಹ ನಮ್ಮ ನೆಲದಲ್ಲಿಯೂ ಕಾಣಿಸಿಕೊಂಡವು.

ಭಾರತವು ಅಗಣಿತ ಭಾಷೆಯ ಹಲವು ಸಂಸ್ಕೃತಿಗಳನ್ನು ಒಳಗೊಂಡು ಹೊಂದಾಣಿಕೆಯ ನೆಲೆಯಲ್ಲಿ ತಾತ್ಕಾಲಿಕವಾಗಿ ನಿರ್ಮಾಣಗೊಂಡಿರುವ ಪ್ರದೇಶ. ಹಾಗಾಗಿ ಈ ದೇಶವು ಎಂದಿಗೂ ಒಂದು ರಾಷ್ಟ್ರವಾಗಿರಲಿಲ್ಲವೆಂದು ಕಟು ವ್ಯಂಗ್ಯೋಕ್ತಿಗಳ ಪ್ರಹಾರವನ್ನು ವಸಾಹತುಶಾಹಿ ಚರಿತ್ರೆಕಾರರು ಈಗಾಗಲೇ ಸೃಷ್ಟಿಸಿದ್ದರು. ಇಂಥ ಟೀಕೆಗಳನ್ನು ಬಲವಾಗಿ ಅಲ್ಲಗಳೆದ ನಮ್ಮ ರಾಷ್ಟ್ರೀಯ ಹೋರಾಟಗಾರರು ಭಾರತಕ್ಕೂ ಭವ್ಯವಾದ ಚರಿತ್ರೆ ಇದ್ದೇ ಇದೆ, ಅದು ಎಲ್ಲಾ ಕಾಲಕ್ಕೂ ಪ್ರವಹಿಸುತ್ತಾ ಬಂದಿದೆ, ಅದನ್ನು ನೋಡುವ ವ್ಯವಧಾನ ಇರಬೇಕು ಎಂಬ ಪ್ರತಿವಾದಗಳನ್ನು ಹೂಡಲಾಯಿತು. ಈ ಹಿನ್ನಲೆಯಲ್ಲಿ ಇಪ್ಪತ್ತನೆಯ ಶತಮಾನದ ಪ್ರಾರಂಭದಲ್ಲಿ ನಮ್ಮ ರಾಷ್ಟ್ರೀಯವಾದಿ ಹೋರಾಟಗಾರರು ಪ್ರಭುತ್ವಶಾಹಿ ವಿರುದ್ಧ ಬಲಯುತವಾದ ಹೋರಾಟವನ್ನು ಗಟ್ಟಿಗೊಳಿಸಲಾರಂಭಿಸಿದರು. ಅವರ ಆಲೋಚನಾ ವಿಧಾನಗಳ ವಿರುದ್ಧ ಹೂಡಲು ನಮ್ಮ ಬತ್ತಳಿಕೆಯಲ್ಲೂ ಅಷ್ಟೇ ಬಿರುಸಾದ ಬಾಣಗಳ ಉಪಸ್ಥಿತಿಯ ಅವಶ್ಯಕತೆ ಇತ್ತು. ಇಂಥ ಆಕರಗಳನ್ನೇ ರಾಷ್ಟ್ರೀಯವಾದಿ ಚರಿತ್ರೆಕಾರರು ಪ್ರಭುತ್ವದ ವಿರುದ್ಧ ಬಡಿದಾಡುತ್ತಿದ್ದ ಹೋರಾಟಗಾರರಿಗೆ ರೂಪಿಸಿಕೊಡಲಾರಂಭಿಸಿದರು.

ಪೂರಕವಾದ ಪ್ರಬಲ ಸಾಕ್ಷಿಗಳು ಕೆಲವೇ ವರ್ಷಗಳಲ್ಲಿ ಅಗಣಿತ ಪುಟಗಳಲ್ಲಿ ದಾಖಲಾಗುವುದರ ಮೂಲಕ ಆಡಳಿತಗಾರರನ್ನು ವಿಚಲಿತಗೊಳಿಸಿದವು. ಅಲ್ಲದೇ ಎಲ್ಲಕ್ಕಿಂತ ಮುಖ್ಯವಾಗಿ ವಸಾಹತುಶಾಹಿ ಚರಿತ್ರೆಕಾರರು ಹುಟ್ಟುಹಾಕಿದ್ದ ಮತೀಯ ಕೋಮುವಾದದ ಅವಘಡಗಳನ್ನು ನಿರಾಕರಿಸಿ ಧಾರ್ಮಿಕ ಸೌಹಾರ್ದತೆಯ ಭಾವನೆಗಳನ್ನು ಬಲಗೊಳಿಸುವುದು ಎಲ್ಲ ಸಮುದಾಯಗಳಿಗೂ ಅವಶ್ಯಕವಾಗಿತ್ತು. ವಿಶಾಲವಾಗಿದ್ದ ಭಾರತವು ವಿವಿಧ ಆಚಾರ–ವಿಚಾರಗಳನ್ನು ಹೊಂದಿದ್ದರೂ ಮನದಾಳದಲ್ಲಿ ಒಂದೇ ರಾಷ್ಟ್ರದ ಕಲ್ಪನೆ ಎಲ್ಲ ಕಾಲಕ್ಕೂ ಎಲ್ಲಾ ಜನರಲ್ಲಿ ಬೇರೂರಿದೆ ಎಂದು ಇತಿಹಾಸ ಮತ್ತು ಸಂಸ್ಕೃತಿ ಚಿಂತಕರು ಪ್ರತಿಪಾದಿಸಿದರು. ಹಾಗಾಗಿ ನಮ್ಮತನದ ಬದುಕಿಗಾಗಿ ನಮ್ಮ ಭಾಷೆ, ಸಂಸ್ಕೃತಿ ಮತ್ತು ಅಧಿಕಾರವು ತತ್‌ಕ್ಷಣವೇ ದಮನಕಾರಿ ವಸಾಹತುಶಾಹಿ ಆಲೋಚನೆಗಳಿಂದ ಬಿಡುಗಡೆಗೊಳ್ಳಬೇಕು ಎಂಬ ಗುದ್ದಾಟಗಳು ಮುಂಚೂಣಿಗೆ ಬಂದವು. ದಾದಾಬಾಯಿ ನವರೋಜಿ, ಗೋಪಾಲಕೃಷ್ಣ ಗೋಖಲೆ, ಬಾಲಗಂಗಾಧರ ತಿಲಕ, ಸುಬ್ರಹ್ಮಣ್ಯ ಅಯ್ಯರ್ ಹಾಗೂ ಮಹಾತ್ಮ ಗಾಂಧೀಜಿ ಅವರ ನೇತೃತ್ವದಲ್ಲಿ ವಿಮೋಚನೆಯ ಹೋರಾಟಗಳು ಇಪ್ಪತ್ತನೆಯ ಶತಮಾನದ ಪೂರ್ವಪಾದದಲ್ಲಿಯೇ ತೀವ್ರಗೊಂಡವು. ಈ ಹೋರಾಟದ ಪರಿಣಾಮಗಳು ಅನೇಕ ಬಗೆಯ ಚಿಂತನೆಗಳು ಹುಟ್ಟಿಕೊಳ್ಳಲು ಬಹುಮುಖ್ಯವಾದ ಕಾರಣಗಳಾದವು. ಇಂಥ ಪ್ರಭಾವದಲ್ಲಿಯೇ ವಿಜಯನಗರ ಸೆಕ್ಸೆಂಟಿನರಿ ಕಮೆಮೊರೇಷನ್ ವಾಲ್ಯೂಮ್ ಎಂಬ ಗ್ರಂಥವು ಹುಟ್ಟಿಕೊಂಡಿತು.

ರಾಷ್ಟ್ರೀಯವಾದಿ ವಿಚಾರಧಾರೆಯ ಪ್ರಮುಖ ಹೋರಾಟಗಾರರಾಗಿದ್ದು ಬಾಲಗಂಗಾಧರ ತಿಲಕರ ಸ್ವದೇಶಿ ಚಳುವಳಿ ಹಾಗೂ ರಾಷ್ಟ್ರೀಯ ಶಿಕ್ಷಣದಂಥ ಹೊಸ ವಿಚಾರಗಳು ನಮ್ಮ ಕನ್ನಡ ನಾಡನ್ನು ಗಾಢವಾಗಿ ಪ್ರಭಾವಿಸಿದವು. ಉತ್ತರ ಕರ್ನಾಟಕದ ಧಾರವಾಡ ಪ್ರದೇಶದಲ್ಲಿ ಅದರ ಪರಿಣಾಮಗಳು ಇನ್ನೂ ತೀವ್ರವಾಗಿದ್ದವು. ಸ್ಮರಣ ಸಂಪುಟದ ಮೂಲಕ ವೈಚಾರಿಕ ಹೋರಾಟ ರೂಪಿಸುವ ಕಾರ್ಯಗಳು ಬಲಗೊಂಡವು. ಆದರೆ ಅವು ಸಹ ಐರೋಪ್ಯನ ಚಿಂತನಾ ಕ್ರಮಗಳಿಂದ ತಪ್ಪಿಸಿಕೊಳ್ಳಲಾಗಲಿಲ್ಲ. ಒಂದು ರೀತಿಯಲ್ಲಿ ಅವರು ಹಾಕಿಕೊಟ್ಟ ವಿಚಾರಗಳ ಮುಂದುವರಿಕೆಯೇ ಆಗಿತ್ತು. ಆದರೂ ತರ್ಕಕ್ಕೆ ಪ್ರತಿ ತರ್ಕವನ್ನು ಎಬ್ಬಿಸಿ ನಿಲ್ಲಿಸುವ ಅವಶ್ಯಕತೆಯ ಜರೂರಿನಲ್ಲಿ ನಮ್ಮ ರಾಷ್ಟ್ರೀಯವಾದಿ ಚರಿತ್ರೆಕಾರರು ಗತಚರಿತ್ರೆ ಮೂಲಕ ಭವ್ಯಭಾರತ ಕಲ್ಪನೆಯನ್ನು ಕಾಣಲಾರಂಭಿಸಿದರು. ಇದಕ್ಕೆ ವಿಜಯನಗರದ ಚರಿತ್ರೆಯು ಹೊರತಾಗಲಿಲ್ಲ. ಈಗಾಗಲೇ ವಸಾಹತುಶಾಹಿ ಚರಿತ್ರೆಕಾರರು ನಿರ್ಮಿಸಿದ್ದ ನೀಲಿನಕ್ಷೆಯ ನೆರಳಿನಲ್ಲಿ ವಿಜಯನಗರ ಸೆಕ್ಸೆಂಟಿನರಿ ಕಮೆಮೊರೇಷನ್ ವಾಲ್ಯೂಮ್ ರಚನೆಯಾಗಿದ್ದರೂ ಮುಂದಿನ ದಿನಗಳಲ್ಲಿ ಅದರಲ್ಲಿರುವ ಚರ್ಚೆಗಳು ಬೇರೆ ರೂಪ ತಾಳಿದವು. ಅದೇ ಸಂದರ್ಭದಲ್ಲಿ ಅಖಂಡ ರಾಷ್ಟ್ರೀಯತೆಯ ಕಲ್ಪನೆಗಳೂ ಸ್ವಲ್ಪಮಟ್ಟಿಗೆ ಪಕ್ಕಕ್ಕೆ ಸರಿದವು. ವಿಜಯನಗರ ಚರಿತ್ರೆ ಬರವಣಿಗೆಗಳಲ್ಲಿ ರಾಷ್ಟ್ರೀಯತೆ ಕಲ್ಪನೆಗಳಿಗಿಂತ ಉಪರಾಷ್ಟ್ರೀಯತೆಯ ಹೊಸ ಕಲ್ಪನೆಗಳು ಗರಿಗಟ್ಟಿದವು. ಹಾಗಾಗಿ ಅಳಿದುಹೋಗಿರುವ ಸಾಮ್ರಾಜ್ಯದ ಮೂಲ ಸ್ಥಾಪಕರು ಯಾರು? ಮತ್ತು ಅವರು ಯಾವ ಭಾಷೆಗೆ ಸಂಬಂಧಪಟ್ಟವರು? ಅದು ಯಾರ ಪ್ರೇರಣೆಯಿಂದ ಹುಟ್ಟಿಕೊಂಡಿತು? ಅವರ ಕುಲಮೂಲಗಳು ಯಾವವು ಎಂಬ ಗಹನವಾದ ವಿಚಾರಗಳು ಎದ್ದು ನಿಂತವು. ಇಂಥ ವಾದಗಳು ಜನ್ಮತಾಳಲು ಮುಖ್ಯ ಕಾರಣಗಳೆಂದರೆ ರಾಷ್ಟ್ರಕ್ಕಿಂತ ನಾಡಿನ ಪರಿಕಲ್ಪನೆಗಳು ಮುಖ್ಯವಾದವು. ರಾಷ್ಟ್ರ ನಿರ್ಮಾಣಕ್ಕೆ ಬೇಕಾದ ಅತಿ ಅವಶ್ಯ ಘಟಕವೆಂದರೆ ನಿರ್ದಿಷ್ಟ ಭೌಗೋಳಿಕ ಪ್ರದೇಶ. ಇದು ಸಾರ್ವಕಾಲಿಕ ಸಂಗತಿ. ಇದನ್ನು ಸಂಕುಚಿತಗೊಳಿಸಿ ಭಾಷೆಯು ಹೆಚ್ಚಿನ ಪ್ರಾಧಾನ್ಯ ಪಡೆಯುವಂತೆ ಅಭಿಪ್ರಾಯಗಳು ಮಂಡನೆಯಾದವು. ನಮ್ಮಲ್ಲಿ ರಾಷ್ಟ್ರನಿರ್ಮಾಣದ ಪರಿಕಲ್ಪನೆಗಳಿಗೆ ಬೇಕಾದ ಅಂಶಗಳೇ ಬೇರೆಯಾಗಿದ್ದವು. ಐರೋಪ್ಯರ ಚಿಂತನೆಗಳ ಮೂಸೆಯಲ್ಲಿ ಹುಟ್ಟಿಕೊಂಡ ಅಂಶಗಳು ನಮಗೆ ಒಗ್ಗುವುದು ಕಷ್ಟವೇ ಆಗಿತ್ತು. ಹಾಗಾಗಿ ನಿರ್ದಿಷ್ಟ ಪ್ರದೇಶ ಎಂಬ ಆಶಯಗಳಿಗಿಂತ ಭಾಷೆ ತುಂಬಾ ಮಹತ್ವದ ಸ್ಥಾನಪಡೆಯಿತು. ಒಂದು ಭಾಷೆಯನ್ನು ಆಡುವ ಜನತೆ ಕಟ್ಟಿಕೊಂಡಿರುವ ಪ್ರದೇಶವೇ ರಾಷ್ಟ್ರವೆಂಬ ವಿಚಾರಧಾರೆಗಳು ಬಲಗೊಂಡವು. ಇದೇ ವಿಚಾರಗಳನ್ನು ಉಪರಾಷ್ಟ್ರೀಯತೆ ಎಂಬ ಅರ್ಥದಲ್ಲಿ ಅಭಿಪ್ರಾಯಿಸಲಾಯಿತು. ಅಂದರೆ ತಮಿಳು ಭಾಷೆಯನ್ನು ಆಡುವವರು ಪ್ರದೇಶ ತಮಿಳು ರಾಷ್ಟ್ರ. ಅದರಂತೆ ಕನ್ನಡ ಮತ್ತು ತೆಲುಗು ಭಾಷೆಯನ್ನು ನುಡಿಯುವ ಪ್ರದೇಶ ಕನ್ನಡ ರಾಷ್ಟ್ರ ಮತ್ತು ತೆಲುಗು ಅಥವಾ ಆಂಧ್ರ ರಾಷ್ಟ್ರ ಎಂಬ

ಕಲ್ಪನೆಗಳು ಇಪ್ಪತ್ತನೆಯ ಶತಮಾನದ ಪ್ರಾರಂಭದಲ್ಲಿಯೇ ಬಲಗೊಳ್ಳುತ್ತಾ ಬಂದವು. ಇಂಥ ವಿಚಾರಗಳು ವಿಜಯನಗರ ಚರಿತ್ರೆಯ ಬರವಣಿಗೆಯನ್ನು ಬಾಧಿಸದೇ ಬಿಡಲಿಲ್ಲ. 1936ರಲ್ಲಿ ಪ್ರಕಟಗೊಂಡಿರುವ ಈ ಗ್ರಂಥದ ಮೂಲ ಉದ್ದೇಶ ಕನ್ನಡ ರಾಷ್ಟ್ರೀಯತೆಯ ಕಲ್ಪನೆಯನ್ನು ಕಟ್ಟಿಕೊಡುವುದಾಗಿತ್ತು. ಆದರೆ ವಿಚಾರ ಭೇದಗಳ ಪರಿಣಾಮದಿಂದ ಉದ್ದೇಶಿಸಿದ ಕಾರ್ಯಗಳನ್ನು ಸಾಧಿಸಲಾಗಲಿಲ್ಲ. ಕೇವಲ ಸಾಮ್ರಾಜ್ಯದ ಮೂಲ ಚೂಲಗಳ ಬಗೆಗಿನ ವಿವರಗಳು ಹೆಚ್ಚಿನ ಮಹತ್ವ ಪಡೆದವು. ಅಲ್ಲದೆ ಅವು ಧಾರ್ಮಿಕ ಸಂಗತಿಗಳ ಪರಿಧಿಯಲ್ಲಿಯೇ ಪ್ರಕಟವಾದವು.

ಸ್ಮರಣ ಸಂಪುಟದಲ್ಲಿನ ಹೆಚ್ಚಿನ ಲೇಖನಗಳು ಧರ್ಮ ಮತ್ತು ಭಾಷೆಗೆ ಸಂಬಂಧಿಸಿದ ಚೌಕಟ್ಟಿನಲ್ಲಿ ನಿರ್ವಹಿಸಿದಂತವು. ರಾಷ್ಟ್ರದಲ್ಲಿ ಉಪರಾಷ್ಟ್ರವನ್ನು ಕಟ್ಟುವ ಧಾವಂತಕ್ಕೆ ಕನ್ನಡ ಹಾಗೂ ತೆಲುಗು ಭಾಷೆಯನ್ನು ಪ್ರತಿಪಾದಿಸುವ ಇತಿಹಾಸ ಮತ್ತು ಸಂಸ್ಕೃತಿಯ ವಿದ್ವಾಂಸರು ಪೈಪೋಟಿಗಿಳಿದರು. ಆದರೆ ಅದೇ ಕಾಲಕ್ಕೆ ಎಸ್.ಕೆ.ಅಯ್ಯಂಗಾರಂಥ ವಿದ್ವಾಂಸರಿಗೆ ಹಿಂದೂ ರಾಷ್ಟ್ರೀಯತೆಯೇ ಪ್ರಧಾನವಾದ ವಿಷಯವಾಯಿತು. ಧರ್ಮ, ಭಾಷೆ ಮತ್ತು ರಾಷ್ಟ್ರ ಎಂಬ ಕಲ್ಪನೆಗಳ ಪರಿಧಿಯಲ್ಲಿಯೇ ಈ ಗ್ರಂಥದಲ್ಲಿರುವ ಬಹುತೇಕ ಲೇಖನಗಳು ಚರ್ಚೆಯಲ್ಲಿ ತೊಡಗಿದಂತೆ ಭಾಸವಾಗುತ್ತದೆ. ವಿಜಯನಗರದ ಅರಸರು ಮಾಡಿದ ಹೋರಾಟಗಳನ್ನು ಮುಂದಿನ ದಿನಗಳಲ್ಲಿ ಮರಾಠರು ಮಾಡಿದರು ಎಂಬ ಮಾತುಗಳು ಬಲಗೊಂಡವು. ಅಲ್ಲದೇ ಮರಾಠ ರಾಷ್ಟ್ರವನ್ನು ಮೊಗಲರ ವಿರುದ್ಧ ದೃಢವಾಗಿ ನಿಲ್ಲಿಸಿದ್ದ ಶಿವಾಜಿ ಮಹಾರಾಜರಿಗೂ ವಿಜಯನಗರ ಸಾಮ್ರಾಜ್ಯವೇ ಮೂಲಪ್ರೇರಣೆಯಾಯಿತು ಎಂಬ ಸಂಗತಿಗಳನ್ನು ಈ ಗ್ರಂಥದ ಮೂಲಕ ಪ್ರಚುರಪಡಿಸಲಾಯಿತು. ಸಾಹಿತ್ಯದ ವಿಚಾರಗಳ ಕುರಿತು ವಿದ್ವಾಂಸರಾದ ಡಿ.ಎಲ್.ನರಸಿಂಹಾಚಾರ್ಯರು ವಿಜಯನಗರ ಕಾಲದ ಸಾಹಿತ್ಯ ಎಂಬ ಶೀರ್ಷಿಕೆಯಲ್ಲಿ ಲೇಖನವೊಂದನ್ನು ಬರೆದಿದ್ದಾರೆ. ಅದು ವಿಜಯನಗರ ಕಾಲದ ಸಾಹಿತ್ಯದ ಬೆಳವಣಿಗೆ ಕುರಿತು ಹೇಳುವುದಕ್ಕಿಂತ ಕನ್ನಡ ಸಾಹಿತ್ಯವು ಬೆಳೆದು ಬಂದ ವಿರಾಟ ರೂಪವನ್ನು ವಿವರಿಸುತ್ತದೆ. ಸಂಶೋಧನಾ ಆಸಕ್ತಿಗಳಿಗಿಂತ ಕನ್ನಡದ ಬೆಳವಣಿಗೆಗೆ ಮತ್ತು ಉಳಿವಿಗಾಗಿ ಸಾಹಿತ್ಯಕಾರರು ನಿರ್ಮಿಸಬಹುದಾದ ಅವಶ್ಯಕತೆಗಳನ್ನು ಪ್ರತಿಪಾದಿಸುವ ಮುಖ್ಯ ಉದ್ದೇಶವೇ ಅವರದಾಗಿತ್ತು ಎಂದು ತೋರುತ್ತದೆ. ಕನ್ನಡ ರಾಷ್ಟ್ರದ ಕಲ್ಪನೆಯಲ್ಲಿ ಭಾಷೆ ಮಾತ್ರ ಮಹತ್ವದ ಪಾತ್ರವಹಿಸುವ ಸಶಕ್ತ ವಿಚಾರವೆಂಬ ವಿಶ್ವಾಸದ ನುಡಿಗಳು ಅವರಲ್ಲಿದ್ದವು. ವಿಜಯನಗರದಲ್ಲಿದ್ದ ಕೋಟೆ–ಕೊತ್ತಲಗಳು, ಗುಡಿ–ಗುಂಡಾರಗಳು, ಶಿಲ್ಪ ಹಾಗೂ ಚಿತ್ರಗಳ ಕುರಿತಂತೆ ಪ್ರಮುಖವಾದ ಚರ್ಚೆಗಳು ನಡೆದಿರುವ ಬಗೆಗೆ ಇದರಲ್ಲಿ ಸುಳಿವುಗಳಿಲ್ಲ. 1917ರಲ್ಲಿ ಎ.ಎಚ್.ಲಾಂಗ್‌ಹರ್ಸ್ಟ್ ಪ್ರಕಟಿಸಿದ 'ಹಂಪಿ ರೂಯಿನ್ಸ್'ನಲ್ಲಿರುವ ವಿವರ ಹಾಗೂ ಅಭಿಪ್ರಾಯಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಪ್ರಸ್ತುತ ಗ್ರಂಥದಲ್ಲಿಯೂ ಬಳಸಿಕೊಳ್ಳಲಾಯಿತು. ನಮ್ಮ ಪತ್ಯಗಳ ಹಿನ್ನಲೆಯಲ್ಲಿ ವಾಸ್ತುಶಿಲ್ಪ ಮತ್ತು ಕಲೆಯ ಕುರಿತು ವಿಚಾರಪೂರ್ಣ ಲೇಖನವನ್ನು ಪ್ರಕಟಿಸುವ ಪ್ರಯತ್ನವನ್ನು ಅಂದಿನ ವಿದ್ವಾಂಸರಲ್ಲಿ ಯಾರೊಬ್ಬರಿಂದಲೂ ಆಗಲಿಲ್ಲವೆಂದು ಅಭಿಪ್ರಾಯಿಸಬಹುದು.

ವಿಜಯನಗರ ಸೆಕ್ಸೆಂಟಿನರಿ ಕಮೆಮೊರೇಷನ್ ವಾಲ್ಯೂಮ್ ಕುರಿತು ವ್ಯಕ್ತವಾಗುವ ಅಭಿಪ್ರಾಯಗಳೆಂದರೆ ವಿಜಯನಗರ ಚರಿತ್ರೆ ಕುರಿತು ಪ್ರಯತ್ನಪೂರ್ವಕವಾಗಿ ಮಂಡಿಸಿದ ಚಿಂತನೆಗಳನ್ನು ಒಂದು ಕಡೆಗೆ ತರುವ ಮಹೋದ್ದೇಶವನ್ನು ಹೊಂದಲಾಗಿತ್ತು. ಇಂಥ ಕಾರ್ಯದಲ್ಲಿ ಹೋರಾಟಪ್ರಿಯರು ಉತ್ಸಾಹದಿಂದ ಪಾಲ್ಗೊಂಡರು. ಅಲ್ಲದೇ ವಸಾಹತುಶಾಹಿ ನಿರ್ಮಿಸಿದ ಚರಿತ್ರೆಯ ಆಲೋಚನೆಗಳಿಗೆ ತಿರುಗೇಟು ನೀಡುವುದು, ಹಿಂದುತ್ವದ ವಿಚಾರಗಳ ಮೂಲಕ ಅಳಿದು ಹೋದ ವಿಜಯನಗರ ಸಾಮ್ರಾಜ್ಯದ ವಿವರಗಳನ್ನು ರಾಷ್ಟ್ರವಾಹಿನಿಗೆ ಸೇರಿಸುವುದು, ನಿರಂತರತೆಯಿಂದ ಕೂಡಿದ ಕನ್ನಡದ ಭವ್ಯ ಪರಂಪರೆಯನ್ನು ಕಟ್ಟಿನಿಲ್ಲಿಸುವುದು ಹಾಗೂ ಅಖಂಡ ಭಾರತೀಯ ರಾಷ್ಟ್ರೀಯತೆಯನ್ನು ದೃಢವಾಗಿ ನಿಲ್ಲುಸುವಲ್ಲಿ ಈ ಸಾಮ್ರಾಜ್ಯವು ನೀಡಿದ ಕೊಡುಗೆಗಳನ್ನು ಪೂರಕ ಅಂಶಗಳಾಗಿ ಪರಿಭಾವಿಸುವ ಉದ್ದೇಶಗಳಿದ್ದವು. ಮುಖ್ಯವಾಗಿ ರಾಷ್ಟ್ರದಲ್ಲೊಂದು ಉಪರಾಷ್ಟ್ರದ ಪರಿಕಲ್ಪನೆಗಳನ್ನು ಅಂದಿನ ಚರಿತ್ರೆ ಬರವಣಿಗೆಕಾರರು ಸೃಷ್ಟಿಸಿದರು. 1936ರ ಸಮ್ಮೇಳನ ಹಾಗೂ ಸ್ಮರಣ ಸಂಪುಟವು ಭವಿಷ್ಯದ ಕನ್ನಡ ನಾಡು ಅಥವ ಕರ್ನಾಟಕದ ಕಲ್ಪನೆಗಳನ್ನು ಕಟ್ಟಿಕೊಳ್ಳುವ ಹೋರಾಟಕ್ಕೆ ಮುಖ್ಯ ವೇದಿಕೆಯಾಯಿತು. ಭೌತಿಕ ಕರ್ನಾಟಕವನ್ನು ಕಟ್ಟುವ ಆಲೋಚನೆಗಳಿಗೆ ಇತಿಹಾಸದ ಅಧ್ಯಯನದ ಪೂರ್ವಸೂರಿಗಳು ಸೃಷ್ಟಿಸಿರುವ ಈ ಲೇಖನಗಳು ಮುನ್ನುಡಿಯಂತೆ ಸೃಷ್ಟಿಗೊಂಡವು.

ಗ್ರಂಥಋಣ

1. ರಾಬರ್ಟ್ ಸಿವೆಲ್, *ಎ ಫರ್‌ಗಾಟನ್ ಎಂಪೈರ್,* 1900, ಸ್ವಾನ್‌ಸೊನ್ನೆಸ್ಟೈನ್ ಕಂಪನಿ, ಲಂಡನ್.
2. ಎ.ಎಚ್. ಲಾಂಗ್‌ಹರ್ಸ್ಟ್, *ಹಂಪಿ ರೂಯಿನ್ಸ್,* 1998, ಏಶಿಯನ್ ಎಜ್ಯುಕೇಷನಲ್ ಸರ್ವೀಸ್, ನ್ಯೂ ದೆಹಲಿ.
3. *ವಿಜಯನಗರ ಸೆಕ್ಸೆಂಟಿನರಿ ಕಮೆಮೋರೇಷನ್ ವಾಲ್ಯೂಮ್,* 1936, ವಿಜಯನಗರ ಎಂಪೈರ್ ಸೆಕ್ಸೆಂಟಿನರಿ ಅಸೋಸಿಯೇಶನ್, ಧಾರವಾಡ.
4. ಬರ್ಟನ್ ಸ್ಟೈನ್, *ವಿಜಯನಗರ,* 1997, ಕೇಂಬ್ರಿಡ್ಜ್ ಯುನಿವರ್‌ಸಿಟಿ ಪ್ರೆಸ್, ಕೇಂಬ್ರಿಡ್ಜ್.
5. ಸದಾನಂದ ಕನವಳ್ಳಿ, *ಮರೆತುಹೋದ ಮಹಾಸಾಮ್ರಾಜ್ಯ ವಿಜಯನಗರ,* 2006, ಕವಿವಿ, ಹಂಪಿ.
6. ಬಾಲಸುಬ್ರಹ್ಮಣ್ಯ (ಅನು), *ಮರೆಯಲಾಗದ ಮಹಾಸಾಮ್ರಾಜ್ಯ,* 2000, ಕವಿವಿ, ಹಂಪಿ.

31. ಪಿ.ಬಿ. ದೇಸಾಯಿಯವರ ಅರವೀಡು ಮನೆತನದಾಳ್ವಿಕೆ ಕುರಿತ ಇತಿಹಾಸ ಲೇಖನ ಕಲೆ

ಡಾ॥ ಬಿ.ಸಿ. ರಾಕೇಶ್

ವಿಜಯನಗರ ಕಾಲದ ಅರವೀಡು ಮನೆತನದ ಆಳ್ವಿಕೆಯನ್ನು ಕುರಿತು ಪಿ.ಬಿ. ದೇಸಾಯಿಯವರು ವಿವರಿಸಿದ ಇತಿಹಾಸ ಲೇಖನಕಲೆಯ ವಿವರಣೆ ಇಲ್ಲಿದೆ. ಅರವೀಡು ಮನೆತನವು ಕ್ರಿ.ಶ. 1570 ರಿಂದ 1681ರವರೆಗೆ ಆಳ್ವಿಕೆಯನ್ನು ಮಾಡಿತು. ಅರವೀಡು ವಂಶದ ಅಳಿಯ ರಾಮರಾಯ ಈ ವಂಶದ ಬಲಿಷ್ಠ ವ್ಯಕ್ತಿ. ಇವನ ಪತನಾನಂತರ ಅರವೀಡು ವಂಶ ಸ್ವತಂತ್ರವಾಗಿ ಆಳತೊಡಗಿತು. ಈ ಕಾರಣದಿಂದ ವಿಜಯನಗರ ಸಾಮ್ರಾಜ್ಯದಲ್ಲಿ ಅರವೀಡು ಮನೆತನ ವಿಶೇಷವಾದ ಪಾತ್ರವನ್ನು ನಿರ್ವಹಿಸುತ್ತದೆ. ರಾಮರಾಯನ ಕಾಲದಲ್ಲಿ ತಾಳಿಕೋಟೆ ಯುದ್ಧ ನಡೆದು ವಿಜಯನಗರದ ಅವನತಿ ಪ್ರಾರಂಭವಾಗಿರುತ್ತದೆ. ಇಂಥ ಸಂದಿಗ್ಧ ಸಮಯದಲ್ಲಿ ವಿಜಯನಗರ ಸಾಮ್ರಾಜ್ಯದ ಪರಂಪರೆಯನ್ನು ಮುಂದುವರಿಸಿದವರು ಅರವೀಡು ವಂಶದವರು. ಸಾಮ್ರಾಜ್ಯ ಸ್ಥಾಪನೆಯಾದ ಬಳಿಕ ಸ್ವರಾಜ್ಯವನ್ನು ಪರಿಪಾಲಿಸಿ ಸ್ವಧರ್ಮ ಮತ್ತು ಸ್ವಸಂಸ್ಕೃತಿ ಇವುಗಳನ್ನು ವಿಜಯನಗರದ ಅರಸರು ಸಂವರ್ಧಿಸಬೇಕೆಂಬ ಸಾಹಸದಿಂದ ಹೋರಾಡಿದರು. ಈ ಹಿಂದೆ ಆಡಳಿತ ಮಾಡಿದ ಮೂರು ಮನೆತನಗಳಿಗಿಂತ ಅದರಲ್ಲಿ ಅಳ್ವಿಕೆ ಮಾಡಿದ ಅರಸರು ಒಂದೇ ವಂಶಕ್ಕೆ ಸೇರಿದವರೆಂಬ ಭಾವನೆ ವ್ಯಕ್ತವಾಗುತ್ತದೆ. ವಿಜಯನಗರ ಚರಿತ್ರೆಯಲ್ಲಿ ಸಾಮ್ರಾಜ್ಯವಾಳಿದ ವ್ಯಕ್ತಿಗಳ ಚರಿತ್ರೆಗಿಂತ ಸಾಮ್ರಾಜ್ಯಕ್ಕೆ ಹೆಚ್ಚಿನ ಮಾನ್ಯತೆಯನ್ನು ನೀಡಿದ ವಿವರಣೆಯನ್ನು ನಾವು ಕಾಣಬಹುದು.

ರಾಕ್ಕಸತಂಗಡಿ ಯುದ್ಧದನಂತರ ವಿಜಯನಗರ ಸಾಮ್ರಾಜ್ಯವು ಅನಾಮಧೇಯವಾಗಲಿ, ನಾಮಾವಶೇಷವಾಗಲಿ ಆಗಲಿಲ್ಲ. ಅದು ಮುಂದೆ ಬಾಳಿತು, ಸಾಮ್ರಾಜ್ಯವೆಂದು ಬಾಳಿತು. ವಿಜಯನಗರದ ಪರಂಪರೆ, ಅಭಿಮಾನ, ಗೌರವಗಳನ್ನು ಕಾಯಲು ಹೆಣಗಿತು. ಹೆಣಗುತ್ತಾ ಸುಮಾರು ಒಂದು ನೂರು ವರ್ಷಗಳವರೆಗೆ ಜೀವಿಸಿತು ಎನ್ನುವಂತಹ ವಿಚಾರವನ್ನು ಪಿ.ಬಿ.ದೇಸಾಯವರು ವ್ಯಕ್ತಪಡಿಸಿದ್ದಾರೆ. ಆ ಕಾಲದಲ್ಲಿಯೂ ಕೆಲವೆಡೆ ಬೀರಿದ ಬೆಳಕು ಅವಲೋಕನೀಯವಾಗಿದೆ.

ತುಳುವಮನೆತನ ಕೊನೆಗಾಲದಲ್ಲಿ ರಾಮರಾಯನ ಮನೆತನದ ಚರಿತ್ರೆಯು ವಿಜಯನಗರ ಅಸ್ತಮಾನದ ವೃತ್ತಾಂತವಾಗಿದೆ. ಇವರು ಚಂದ್ರವಂಶಿಯೆಂದು ತಮ್ಮನ್ನು ಹೇಳಿಕೊಂಡಿದ್ದಾರೆ. ಪಿನ್ನಮನು ಈ ವಂಶದ ಐತಿಹಾಸಿಕ ಮೂಲಪುರುಷ, ಇವನ ಮಗ ಸೋಮದೇವನು. ಇವನ ಮೊಮ್ಮಗ ಅರವೀಟಿ ಬುಕ್ಕನು, ಇವನ ಮಗನೆ ರಾಮರಾಜನು, ಈತನು ಕರ್ನೂಲು ಪ್ರಾಂತವನ್ನು ಆಳುತ್ತಿದ್ದನು. ಈತನ ಮಗನು ಶ್ರೀರಂಗನು, ಶ್ರೀರಂಗನ ಮಕ್ಕಳಲ್ಲಿ ಅಳಿಯ ರಾಮರಾಯ, ತಿರುಮಲ, ವೆಂಕಟಾದ್ರಿ ಈ ಮೂವರು ಪ್ರಖ್ಯಾತರಾದರು. ಸದಾಶಿವರಾಯನ ಆಳ್ವಿಕೆಯಲ್ಲಿ ರಾಮರಾಯನ ಚರಿತ್ರೆಯನ್ನು ನಾವು ನೋಡಿದ್ದೇವೆ. ರಾಮರಾಯನ ವಧೆಯಾದ ಬಳಿಕ ಸಾಮ್ರಾಜ್ಯದ ಎಲ್ಲಾ ಆಡಳಿತವನ್ನು ತಿರುಮಲನು ಪ್ರತ್ಯಕ್ಷವಾಗಿ ತನ್ನ ಕೈಯಲ್ಲಿ ತೆಗೆದುಕೊಂಡನು. ಮುಂದೆ ಸದಾಶಿವರಾಯನ ಕೊಲೆಯಾಗಲು, ತಿರುಮಲನು ರಾಜ್ಯಾಭಿಷೇಕವನ್ನು ಮಾಡಿಸಿಕೊಂಡು ವಿಜಯನಗರದ ಅಧಿಪತಿಯಾದನು (1570). ಅಧಿಪತಿಯಾದ ನಂತರ ಹಲವು ನಾಯಕರು, ಅರಸರು, ಅಧಿಕಾರಿಗಳು ಈತನ ಪ್ರಭುತ್ವವನ್ನು ಒಪ್ಪಿಕೊಳ್ಳದೆ ವಿರೋಧ ವ್ಯಕ್ತಪಡಿಸಿದರು ರಾಕ್ಷಸ ತಂಗಡಗಿಯ ಯುದ್ಧದ ನಂತರ ಆದ ಬೆಳವಣಿಗಳನ್ನು ಕುರಿತು ವಿವರಿಸಲಾಗಿದೆ. ರಾಯನ ಹೊಸ ರಾಜಧಾನಿಯಾದ ಪೆನುಗೊಂಡದ ಮೇಲೆ ಬಿಜಾಪುರದ ಸುಲ್ತಾನ ಏರಿ ಬಂದನು. ಆಗ ರಾಯನ ಸೇನಾನಿಯಾದ ಚೆನ್ನಪ್ಪ ನಾಯಕನು ಹಗೆಯನ್ನು ಎದುರಿಸಿ ರಾಜಧಾನಿಯಿಂದ

ಹಿಮ್ಮೆಟ್ಟಿಸಿದನು. ನಂತರ ಹಲವು ಪ್ರದೇಶಗಳನ್ನು ವಿಜಯನಗರಕ್ಕೆ ಸೇರಿಸಲಾಯಿತು. ತನ್ನ ರಾಜ್ಯದಲ್ಲಿ ಮೂರು ಭಾಗಗಳಾಗಿ ವಿಂಗಡಿಸಿ, ಅದರ ಉಸ್ತುವಾರಿಯನ್ನು ಅವನ ಮೂರು ಮಕ್ಕಳಿಗೆ ವಹಿಸಿದನು. ಬಲಿಷ್ಠರಾದ ನಾಯಕರುಗಳು ಸಾಮ್ರಾಜ್ಯ ನಿಷ್ಠರಾಗಿದ್ದು ಸಾಮ್ರಾಜ್ಯದ ಗೌರವವನ್ನು ಉಳಿಸಿದರು. ಮದುರೆಯ ನಾಯಕರು, ತಂಜಾವೂರ ನಾಯಕರು, ಜಿಂಜಿಯ ನಾಯಕರು, ಕೆಳದಿಯ ನಾಯಕರು, ಮೈಸೂರ ಅರಸರು, ಯಲಹಂಕದ ಪ್ರಭುಗಳು, ಮುಂತಾದವರ ವಿವರಣೆಯನ್ನು ನೀಡಿದ್ದಾರೆ. ಪೆನುಗೊಂಡೆ ಎರಡನೇ ರಾಜಧಾನಿಯಾಗಿ ಮೆರೆದ ಮತ್ತು ಶ್ರೀರಂಗನು ಯುವರಾಜನಾಗಿ ನಿಯುಕ್ತನಾದ ಕುರಿತು ವಿಚಾರಗಳನ್ನು ಈ ಅಧ್ಯಾಯದಲ್ಲಿ ವಿವರಿಸಿದ್ದಾರೆ.

ತಿರುಮಲನು ಸ್ವಧರ್ಮದಲ್ಲಿ ಆಸಕ್ತಿಯುಳ್ಳವನೂ, ವಿದ್ಯಾಪಕ್ಷಪಾತಿಯೂ ಆಗಿದ್ದನು. ಸ್ವತಃ ಮಾರ್ಮಿಕ ಪಂಡಿತನು ಮತ್ತು ಆಶ್ರಯದಾತನು ಆಗಿದ್ದನು. ರಾಜಕೀಯ ಚರಿತ್ರೆಯನ್ನು ಅವಲೋಕಿಸಿದಾಗ ಧೀರನಾದ ಸೇನಾಪತಿ, ಚತುರನಾದ ಮಂತ್ರಿ, ವಿವೇಕಿಯಾದ ಅರಸು ಈ ಮೂರು ಗುಣಗಳು ಈತನಲ್ಲಿ ನೆಲಸಿದ್ದು ಕಂಡುಬರುತ್ತದೆ. ಈತನು 'ಧರಣಿವರಾಹ' ಎಂಬ ಬಿರುದನ್ನು ಧರಿಸಿದನು. ಸದಾಶಿವರಾಯನ ಕೊಲೆಯು, ರಾಜಧಾನಿಯ ಸ್ಥಳಾಂತರ, ಸಾಮ್ರಾಜ್ಯವನ್ನು ಮೂರು ವಿಭಾಗಗಳಾಗಿ ಹಂಚಿದ್ದು ಇವನು ಮಾಡಿದ ತಪ್ಪುಗಳಾಗಿವೆ. ತಿರುಮಲರಾಯನು 1578ರಲ್ಲಿ ಕಾಲಾಧೀನನಾದಮೇಲೆ, ಆತನ ಉಳಿದ ಮಕ್ಕಳಲ್ಲಿ ಹಿರಿಯವನಾದ ಶ್ರೀರಂಗರಾಯನು ವಿಜಯನಗರದ ಅಧಿಪತಿಯಾದ ಬಗ್ಗೆ ವಿವರಣೆಯನ್ನು ನೀಡಲಾಗಿದೆ.

ಇಪ್ಪತ್ತೊಂದನೆಯ ವಿಲಾಸದಲ್ಲಿ ಶ್ರೀ ರಂಗರಾಯನನ್ನು ಕುರಿತು ವಿವರಿಸಲಾಗಿದೆ. ಶ್ರೀ ರಂಗರಾಯನು ಕ್ರಿ.ಶ. 1578 ರಿಂದ 1585ರವರೆಗೆ ಅಳ್ವಿಕೆ ಮಾಡಿದನು. ತಂದೆಯಂತೆ ಅತಿ ಸಂಕಟಮಯವಾದ ಕಾಲದಲ್ಲಿ ಸಾಮ್ರಾಜ್ಯದ ಸೂತ್ರಗಳು ಶ್ರೀ ರಂಗರಾಯನ ಕೈಯಲ್ಲಿ ಬಂದವು. ಈಗಾಗಲೇ ಬಲಗೊಂಡ ಸಾಮ್ರಾಜ್ಯ ವಿನಾಶಕ ಶಕ್ತಿಗಳು ಅಖಂಡವಾಗಿ ಕಾರ್ಯತತ್ಪರವಾಗಿದ್ದವು. ರಾಯನು ಇವುಗಳನ್ನು ವಿರೋಧಿಸಲು ಸಾಹಸಪಟ್ಟನು. ಈತನ ಪರಿಶ್ರಮಗಳು ಕೆಲವು ಅಂಶದಿಂದ ಸಫಲವಾದವು. ತಮ್ಮಂದಿರ ಸಹಾಯದಿಂದ ಈತನು ಕೈಗೊಂಡ ಉಪಾಯಗಳು ಸಾಮ್ರಾಜ್ಯದ ವಿನಾಶವನ್ನು ಕೆಲಕಾಲ ತಡೆದು ನಿಲ್ಲಿಸಿದವು. ಇದಕ್ಕೂ ಹೆಚ್ಚಿನ ಸಾಮರ್ಥ್ಯವನ್ನು ತತ್ಪರತೆಯನ್ನು ಈತನು ತೋರಿಸಬೇಕಾಯಿತು. ರಾಜ್ಯದಲ್ಲಿ ಅನೇಕ ದಂಗೆಗಳನ್ನು ಹತ್ತಿಕ್ಕಿದನು. ಸಾಹಿತ್ಯಕ್ಕೆ ಹೆಚ್ಚಿನ ಪ್ರೋತ್ಸಾಹ ನೀಡಿದನು. ಇಂತಹ ಪ್ರತಿಕೂಲ ಪರಿಸ್ಥಿತಿಯಲ್ಲಿಯೂ ಕಳೆಗುಂದಿದ ಸಾಮ್ರಾಜ್ಯ ವೈಭವವನ್ನು ಅಂಶತಃ ಕಳೆಯೇರಿಸಿದ ಶ್ರೇಯಸ್ಸು ಈತನಿಗೆ ಸಲ್ಲುತ್ತದೆ. ಈ ಎಲ್ಲಾ ವಿವರಣೆಯನ್ನು ಇಪ್ಪತ್ತೊಂದನೆಯ ವಿಲಾಸದಲ್ಲಿ ದೇಸಾಯಿಯವರು ವಿವರಿಸಿದ್ದಾರೆ.

ಇಪ್ಪತ್ತೆರಡನೆಯ ವಿಲಾಸದಲ್ಲಿ ವೆಂಕಟಪತಿದೇವರಾಯ ಕ್ರಿ.ಶ. 1585ರಿಂದ 1614ರವರೆಗೆ ಆಳ್ವಿಕೆ ಮಾಡಿದ ವಿವರಣೆಯನ್ನು ನೀಡಿದ್ದಾರೆ. ಮುಖ್ಯವಾಗಿ ಸಾಮ್ರಾಜ್ಯಶಕ್ತಿಯ ಪುನರುಜ್ಜೀವನ, ಮಂಡಲಾಧಿಪತಿಗಳ ಪ್ರಾಬಲ್ಯ ಕುರಿತು ವಿವರಿಸಲಾಗಿದೆ. ತಂದೆಯ ಕಾಲದಿಂದಲು ರಾಜ್ಯ ಕಾರ್ಯದಲ್ಲಿ ವಿಶೇಷವಾದ ಭಾಗವನ್ನು ಸ್ವೀಕರಿಸಿ, ಅನೇಕ ಅನುಭವಗಳನ್ನು ಪಡೆದವನು, ಪರಾಕ್ರಮಿಯೂ ಆದ ಈತನ ಆಳ್ವಿಕೆಯು ಬಲಶಾಲಿಯಾಯಿತು. ಗೋವಳಕೊಂಡ, ಉದಯಗಿರಿ, ಮುಂತಾದ ಪ್ರದೇಶಗಳ ಸಾಮಂತರು ಅಧೀನರಾದರು. ಕೃಷ್ಣೆಯವರೆಗಿನ ವಿಜಯನಗರದ ಎಲ್ಲಾ ಪ್ರಾಂತ್ಯದ ಮೇಲೆ ವಿಜಯ ಸಾಧಿಸಿ ಉತ್ತರದ ಮೇರೆಯಾಯಿತು, ಪೆನುಗೊಂಡೆಯ ಮೇಲೆ ನಿಜಾಮಶಹನ ದಾಳಿಯನ್ನು ಯಶಸ್ವಿಯಾಗಿ ಎದುರಿಸಿದನು. ಇದೆ. ಸಂದರ್ಭದಲ್ಲಿ ಅಕ್ಬರನು ಅಹ್ಮದನಗರದ ಮೇಲೆ ದಾಳಿಮಾಡಿ ವಿಜಯನಗರಕ್ಕೆ ರಾಯಭಾರಿಯನ್ನು ಕಳುಹಿಸಿದನು ಮುಂದೆ ಹೊರಗಿನ ಶತ್ರುಗಳನ್ನು ಪ್ರತಿಭಟಿಸುತ್ತಿರುವಾಗ ಆಂತರಿಕ ಶತ್ರುಗಳು ಹೆಚ್ಚಿದರು. ಅವರನ್ನು ತನ್ನ ಹತೋಟಿಗೆ ತೆಗೆದುಕೊಂಡನು. ಮದುರೆ, ಜಿಂಜಿ, ಮೈಸೂರು ಮುಂತಾದ ನಾಯಕರು ದಂಗೆ ಎದ್ದರು. ಅವರನ್ನು ತನ್ನ ಹತೋಟಿಗೆ

ತೆಗೆದುಕೊಂಡು ಸ್ವಲ್ಪಕಾಲ ಶಾಂತಿ ನೆಲಸುವಂತೆ ಮಾಡಿದನು. ರಾಜ ಒಡೆಯನು ಎಂದಿಗೂ ವೆಂಕಟಪತಿರಾಯನಿಗೆ ವಿಧೇಯನಾಗಿಯೇ ಇದ್ದನು. ರಾಯನ ಇನ್ನೊಬ್ಬ ಮಾಂಡಲಿಕನಾದ ಏಚಮನಾಯಕ, ಪೋರ್ಚುಗೀಸರು, ಡಚ್, ಇಂಗ್ಲೀಷರು ದಕ್ಷಿಣ ಭಾರತದಲ್ಲಿ ಕಾಲಿಟ್ಟರು, ಅವರಿಗೆ ಮಿಶನರಿಗಳನ್ನು ಸ್ಥಾಪಿಸಲು ಅನುಮತಿಯನ್ನು ನೀಡಿದನು. ಈ ಅನುಮತಿಯನ್ನು ಪಡೆಯುವುದರ ಜೊತೆಗೆ ಯುರೋಪಿನ ಇತರೆ ದೇಶಗಳು ಯುದ್ಧ ಸಾಮಗ್ರಿಗಳನ್ನು ಪೂರೈಸಿ ಇಲ್ಲಿನ ಸಂಬಾರ ಪದಾರ್ಥ, ಬಟ್ಟೆಯನ್ನು ಪಡೆದು ಜೊತೆಗೆ ವಿದೇಶಿ ವ್ಯಾಪಾರ ಇವರ ಪಾಲಾಯಿತು. ಇದರಿಂದ ಯೂರೋಪಿಯನ್ನರು ಹೆಚ್ಚು ಧನವಂತರಾದರು. ಹೀಗೆ ಹಲವಾರು ಬದಲಾವಣೆಗಳು ದಕ್ಷಿಣ ಭಾರತದಲ್ಲಿ ಆಗಿರುವುದನ್ನು ಈ ಅಧ್ಯಾಯದಲ್ಲಿ ವಿವರಿಸಲಾಗಿದೆ.

ಇಪ್ಪತ್ತಮೂರನೆಯ ವಿಲಾಸದಲ್ಲಿ ವೆಂಕಟಪತಿ ದೇವರಾಯನ ಶೀಲ-ಸ್ವಭಾವ-ಕರ್ತೃತ್ವವನ್ನು ಕುರಿತು ವಿವರಿಸಲಾಗಿದೆ. ಪೆನುಗೊಂಡೆ ಇವನ ರಾಜಧಾನಿಯಾಗಿದ್ದಿತು. ಜೊತೆಗೆ ಚಂದ್ರಗಿರಿಯಲ್ಲಿ ಕೂಡ ಕಾಲವನ್ನು ಕಳೆಯುತ್ತಿದ್ದನು. ಎರಡನೆಯ ರಾಜಧಾನಿಯು ಆಗಿದ್ದಿತು. ಶಾಂತಿಪ್ರಧಾನವಾದ ರಾಯನ ಆಳ್ವಿಕೆಯ ಧರ್ಮ, ವಿದ್ಯೆ, ಸಾಹಿತ್ಯ, ಕಲೆ ಇವುಗಳ ಬೆಳವಣಿಗೆಯ ದೃಷ್ಟಿಯಿಂದ ವಿಜಯನಗರದ ಇತಿಹಾಸದಲ್ಲಿ ಚಿರಸ್ಮರಣೀಯವಾಗಿದೆ. ವೈಷ್ಣವ ಅನುಯಾಯಿ ಆಗಿದ್ದರೂ ಮಾಧ್ವ, ಶಂಕರ, ವೀರಶೈವ, ಜೈನ, ಕ್ರೈಸ್ತರಿಗೂ ಪ್ರೋತ್ಸಾಹ ನೀಡಿದನು. ಧರ್ಮದಂತೆ ವಿದ್ಯೆಯಲ್ಲಿಯೂ ರಾಯನಿಗೆ ವಿಶೇಷವಾದ ಆಸಕ್ತಿಯಿದ್ದಿತು. ತಾತಾಚಾರ್ಯರು, ಅಪ್ಪಯ್ಯದೀಕ್ಷಿತನು ರಾಯನಿಂದ ಮನ್ನಣೆಯನ್ನು ಪಡೆದಿದ್ದರು. ಸುಧೀಂದ್ರತೀರ್ಥರು, ಮಾಟ್ಯ ಆನಂತನು, ಭಟ್ಟಾಕಳಂಕನು ರಾಯನಿಂದ ಪೋಷಿತನಾದನು. ಮದುರೆ ದಕ್ಷಿಣ ಪ್ರಾಂತ್ಯದಲ್ಲಿ ವಿದ್ಯೆಯ ಕೇಂದ್ರವಾಗಿದ್ದಿತು. ಹೀಗೆ ಹಲವಾರು ವಿಶೇಷತೆಯನ್ನು ಹೊಂದಿದ ಕಾಲವಾಗಿತ್ತು. ಅನೇಕ ಮಹತ್ವದ ಸಂವಿಧಾನಗಳಿಂದ ತುಂಬಿದ ರಾಯನ ಈ ಆಳ್ವಿಕೆಯು ಈ ಮನೆತನದ ಚರಿತ್ರೆ ವಿಜಯನಗರದ ಚರಿತ್ರೆಯಲ್ಲಿಯೂ ಸಂಸ್ಮರಣೀಯವಾಗಿದೆ. ಸಾಮ್ರಾಜ್ಯವು ಮತ್ತೆ ಚೇತರಿಸಿಕೊಂಡಿದ್ದು, ತನ್ನ ಉಜ್ವಲವಾದ ಪೂರ್ವ ವೈಭವದ ಪಥವನ್ನು ಆಕ್ರಮಿಸಲು ಆರಂಭಿಸಿತು. ರಾಯನು ಹಿಂದಿನ ಅಳ್ವಿಕೆಯಲ್ಲಿಯ ಬರಿಯ ಆತ್ಮರಕ್ಷಣೆಯ ನೀತಿಯನ್ನು ಬದಿಗಿರಿಸಿ, ವಿಜಯನಗರದ ಪ್ರದೇಶಗಳನ್ನು ಗೌರವವನ್ನು ಮರಳಿ ಸೆಳೆದುತಂದನು. ಕೃಷ್ಣೆ-ತುಂಗಭದ್ರೆಗಳು ವಿಜಯನಗರದ ಉತ್ತರದ ಗಡಿಗಳಾಗಿ ನಿಂತವು. ಸುವ್ಯವಸ್ಥಿತವಾದ ಆಡಳಿತ, ಅದರಿಂದ ದೇಶದಲ್ಲಿ ನೆಲೆಸಿದ ಶಾಂತಿ, ಈ ಶಾಂತಿಯ ಮೂಲಕ ಧರ್ಮ, ವಿದ್ಯೆ, ಸಾಹಿತ್ಯ, ಕಲೆ ಮುಂತಾದವುಗಳ ಬೆಳವಣಿಗೆಯಿಂದ ಜನಾಂಗದಲ್ಲಿ ಉಂಟಾದ ನಾಗರಿಕತೆಯ ಉತ್ಕರ್ಷ, ಇವುಗಳ ವಿಚಾರದಿಂದಲೂ ಈ ರಾಯನ ಆಳ್ವಿಕೆಯು ಅಭಿನಂದನೀಯವಾಗಿದೆ. ಇಪ್ಪತ್ತಮೂರನೆಯ ವಿಲಾಸದಲ್ಲಿ ವೆಂಕಟಪತಿರಾಯನ ಜೀವನ ಸಾಧನೆಯನ್ನು ಕುರಿತು ವಿವರಿಸಲಾಗಿದೆ.

ಇಪ್ಪತ್ತನಾಲ್ಕನೆಯ ವಿಲಾಸದಲ್ಲಿ ಮುಮ್ಮಡಿ ಶ್ರೀರಂಗರಾಯ ಕ್ರಿ.ಶ. 1614ರಿಂದ 1616ರವರೆಗೆ ಆಳ್ವಿಕೆ ಮಾಡಿದ ವಿವರಣೆಯನ್ನು ಒಳಗೊಂಡಿದೆ. ಶ್ರೀರಂಗನು ನಿರ್ಭಾಗ್ಯನೂ ಬಲು ಹೇಡಿಯೂ ಆಗಿದ್ದನು. ಆತನ ದುರ್ಬಲತೆ ಮತ್ತು ಅಯೋಗ್ಯತೆಯು ವಿರೋಧಿಗಳಿಗೆ ತಮ್ಮ ಪಕ್ಷವನ್ನು ಬಲಪಡಿಸಿಕೊಳ್ಳಲು ಅವಕಾಶ ಸಿಕ್ಕಿತು. ಚಿಕ್ಕರಾಯ – ಜಗರಾಯನ – ಶ್ರೀರಂಗನ ಕುರಿತು ಶ್ರೀರಂಗನನ್ನು ಕೆಳಗೆ ಇಳಿಸಿದ ವಿವರಗಳನ್ನು ಒಳಗೊಂಡಿದೆ. ಜಗರಾಯನಿಗೆ ಮತ್ತು ಏಚಮನಾಯಕರ ಸಂಬಂಧ ಕುರಿತು ವಿವರಿಸಲಾಗಿದೆ. ಜಗರಾಯನ ಹೀನಕೃತ್ಯಗಳನ್ನು ಏಚಮನಾಯಕ ಶ್ರೀರಂಗನ ನಡುವಿನ ಮಗ ರಾಮದೇವನನ್ನು 1615ರಲ್ಲಿ ಪಟ್ಟಕ್ಕೆ ಕುಳ್ಳಿರಿಸಿದನು. ಮದುರೆಯ ನಾಯಕ, ಜಿಂಜಿಯ ಸಾಮಂತ ಅರಸರು, ತಂಜಾವೂರ ನಾಯಕರು ವಿರೋಧಿಗಳಾಗಿದ್ದರು. ಜಗರಾಯನು ಇವರ ಪಕ್ಷಕ್ಕೆ ಸೇರಿದನು. ಏಚಮನಾಯಕ ಮತ್ತು ರಘುನಾಥ ನಾಯಕರುಗಳ ಸಂಬಂಧ ಮತ್ತು ಕಾಳಗಕ್ಕೆ ಸಿದ್ಧತೆಯನ್ನು ಮಾಡಿಕೊಂಡರು. ಈ ಯುದ್ಧವು 1617ರ ಜುಲೈ ತಿಂಗಳಲ್ಲಿ ನಡೆಯಿತು. ಯುದ್ಧದಲ್ಲಿ ರಾಜಪಕ್ಷದವರು ವಿಜಯಿಯಾದರು. ಈ ಎಲ್ಲಾ ವಿಷಯಗಳನ್ನು ಅಧ್ಯಾಯದಲ್ಲಿ ವಿವರಿಸಲಾಗಿದೆ.

ನಾಲ್ಮಡಿ ರಾಮದೇವರಾಯ ಕ್ರಿ.ಶ. 1615–32ರವರೆಗೆ ಆಳ್ವಿಕೆ ಮಾಡಿದನು. ಏಚಮನಾಯಕ ಇವನಿಗೆ ಸಹಾಯಕನಾಗಿ ಇಮ್ಮಡಿ ವೆಂಕಟಪತಿ ರಾಯನು ಯುವರಾಜ ಪದವಿಯನ್ನು ಪಡೆದು ರಾಜ್ಯ ಕಾರ್ಯದಲ್ಲಿ ನೆರವಾದನು. ಮೈಸೂರು, ಕೆಳದಿ, ಮತ್ತು ತಂಜಾವೂರ ಅರಸರು ವಿಧೇಯರಾಗಿದ್ದರು. ಮದುರೆಯ ರಘುನಾಥರಾಯನು ವಿಧೇಯನಾಗಿದ್ದನು. ಡಚ್ ಮತ್ತು ಇಂಗ್ಲೀಷರ ಸಂಬಂಧಗಳು, ಪೋರ್ಚಗೀಸರೊಂದಿಗಿನ ಕಾದಾಟ, ರಾಮದೇವರಾಯನ ಆಡಳಿತವು ನಿಸ್ಸತ್ವವೂ, ನಿಸ್ತೇಜವೂ ಆಯಿತು. ಅಂತಃಕಲಹದಿಂದ ವಿಜಯನಗರದ ಅಂತಃಶಕ್ತಿಯು ಕುಂಠಿತವಾಯಿತು. ವಿಪತ್ತಿಗೆ ತುತ್ತಾದ ದಕ್ಷಿಣ ಭಾರತೀಯ ಜನಾಂಗವು ಬಹುಕಾಲ ತೊಳಲಿ ಬಳಲಿ ಬೆಂಡಾಗಬೇಕಾಯಿತು. ಇಂತಹ ಸಂದರ್ಭದಲ್ಲಿ ಸಾಮಂತರು ರಾಜ್ಯದ ಸಂಸ್ಕೃತಿಯನ್ನು ಪೋಷಿಸಿ ಬೆಳೆಸಿದರು. 1632ರಲ್ಲಿ ರಾಯನು ಮರಣ ಹೊಂದಿದನು. ಆತನ ತರುವಾಯ ಅಳಿಯ ರಾಮರಾಯನ ಮೊಮ್ಮಗನು ಪಟ್ಟವೇರಿದನು.

ಇಮ್ಮಡಿ ವೆಂಕಟಪತಿರಾಯನು 1632ರಿಂದ 1642ರವರೆಗೆ ಆಳ್ವಿಕೆಮಾಡಿದನು. ಈತನ ಆಳ್ವಿಕೆಯು ಶಾಂತಿಪ್ರಧಾನವಾದರೂ ಬಲಶಾಲಿಯಾಗಲಿಲ್ಲ. ಹಿಂದಿನ ಆಳ್ವಿಕೆಯಲ್ಲಿ ಉಂಟಾದ ಪ್ರಭುತ್ವದ ಅಸಮರ್ಥತೆಯು ಮತ್ತು ಮಂಡಲ ರಾಜ್ಯಗಳ ಪ್ರಾಬಲ್ಯವು ಮುಂದುವರಿದು ಸಾಮ್ರಾಜ್ಯವು ಹೆಚ್ಚು ಹೆಚ್ಚು ಬಲಗೊಂಡಿತು. ಮದುರೆಯೊಂದಿಗಿನ ಸಂಬಂಧ, ಮೈಸೂರು ದೊರೆಯೊಂದಿಗಿನ ಸಂಬಂಧ, ಪರಸ್ಪರ ರಾಜ್ಯ ವಿಸ್ತಾದರಲ್ಲಿ ತೊಡಗಿದ್ದ ವಿವರಣೆಯನ್ನು ಒಳಗೊಂಡಿದೆ. ಈ ಸಮಯದಲ್ಲಿ ಇಂಗ್ಲೀಷ್–ಪೋರ್ಚುಗೀಸರಲ್ಲಿಯ ವಾಣಿಜ್ಯಸ್ಪರ್ಧೆಯು ಶಾಂತವಾಗಿ, ಈ ಎರಡು ಜನಾಂಗಗಳಲ್ಲಿ ಸೌಹಾರ್ದದ ಒಡಂಬಡಿಕೆಯಾಯಿತು. ವೆಂಕಟಪತಿರಾಯನು ಇದಕ್ಕೆ ತನ್ನ ಸಮ್ಮತಿಯನ್ನು ನೀಡಿದನು. ವಿಜಯನಗರದ ಇಳಿಗಾಲದಲ್ಲಿ ಉದಯವಾದ ಇಂಗ್ಲೀಷರ ಕೇಂದ್ರ ನಗರಗಳಲ್ಲಿ ಒಂದಾದ ಮದ್ರಾಸ್ ನಗರವಾಗಿ ಪರಿಣಮಿಸಿದೆ. ಗೋವಳಕೊಂಡದ ಅಬ್ದುಲ್ಲಾ ಕುತುಬಶಹನು ಉದಯಗಿರಿ ಕೋಟೆಯನ್ನು ವಶಪಡಿಸಿಕೊಂಡ ವಿವರಣೆಯನ್ನು ನೀಡಲಾಗಿದೆ. ಈ ಎಲ್ಲಾ ವಿವರಣೆಯನ್ನು ಇಪ್ಪತ್ತನಾಲ್ಕನೆಯ ವಿಲಾಸದಲ್ಲಿ ನೀಡಲಾಗಿದೆ.

ಇಪ್ಪತ್ತೈದನೆಯ ವಿಲಾಸದಲ್ಲಿ ನಾಲ್ವಡಿ ಶ್ರೀರಂಗರಾಯರು ಕ್ರಿ.ಶ. 1642 ರಿಂದ 1656ರ ನಡುವೆ ಆಳ್ವಿಕೆ ಮಾಡಿದ ವಿವರಣೆಯನ್ನು ನೀಡಲಾಗಿದೆ. ರಾಯನ ಆಳ್ವಿಕೆಯ ಕಾಲವು ಗಲಿಬಿಲಿಯ ಮತ್ತು ಆಡಳಿತದಲ್ಲಿ ಅನುಭವವಿಲ್ಲದೆ ನಡೆದು ಹೋಯಿತು. ಡಚ್ಚರು, ಇಂಗ್ಲೀಷರು ಮತ್ತು ಗೋವಳಕೊಂಡದ ಸೇನೆಯೊಂದಿಗಿನ ಸಂಬಂಧ ಮದ್ರಾಸನಲ್ಲಿ ನ್ಯಾಯ ಮತ್ತು ಆಡಳಿತದ ಅಧಿಕಾರವನ್ನು ದಯಪಾಲಿಸಿದನು. ದಕ್ಷಿಣ ಭಾರತದಲ್ಲಿ ಮೊಗಲರು – ಅಹಮದ್‌ನಗರ, ವಿಜಾಪುರ, ಗೋವಳಕೊಂಡ ಮತ್ತು ವಿಜಯನಗರ ಕುರಿತು ವಿವರಿಸಲಾಗಿದೆ. ವಿಜಾಪುರದ ಸೇನಾಪತಿಯಾದ ರಣದುಲ್ಲಾಖಾನನು ಶಹಜಿಯೊಂದಿಗೆ ವಿಜಯನಗರದ ಪಶ್ಚಿಮ ಭಾಗದ ಮೇಲೆ ದಾಳಿ ಮಾಡುತ್ತಾ ಹಲವು ಪ್ರದೇಶಗಳನ್ನು ಆಕ್ರಮಿಸಿದ. ಮೈಸೂರು, ಬೆಂಗಳೂರು, ವೆಲ್ಲೂರು, ಜಿಂಜಿ, ಕೊಲ್ಲೂರು, ದೊಡ್ಡಬಳ್ಳಾಪುರ, ಸಿರಾ ಮುಂತಾದ ಪಟ್ಟಣಗಳು ಇವರ ವಶವಾದ ವಿವರಣೆಯನ್ನು ಕಾಣಬಹುದು. ವೆಂಕಟಾದ್ರಿ ನಾಯಕನ ದ್ರೋಹದಿಂದ ಗೋವಳಕೊಂಡದ ಮೇಲುಗೈ ಸಾಧಿಸಿತು. ವಿಜಾಪುರ – ಗೋವಳಕೊಂಡ, ದಂಡುಗಳು ಸೇರಿಕೊಂಡು ವೆಲ್ಲೂರನ್ನು ಮುತ್ತಿದ ವಿವರಣೆಯಿದೆ. ರಾಯನು ಸೋತು ಕೆಳದಿಯ ನಾಯಕನಿಂದ ಸಹಾಯ ಪಡೆದು ವೆಲ್ಲೂರನ್ನು ಮರಳಿ ಪಡೆದನು. ಶ್ರೀ ರಂಗರಾಯನು ರಾಜ್ಯದ ಒಳಗಡೆಯ ಶತ್ರುಗಳು ಹಾಗೂ ಹೊರಗಡೆಯ ಶತ್ರುಗಳನ್ನು ಎದುರಿಸಬೇಕಾಯಿತು. ವಿಜಾಪುರದ ಸೈನಿಕರು ದಕ್ಷಿಣದಲ್ಲಿ ಮುನ್ನುಗ್ಗಿದರು. ತಂಜಾವೂರ ಮದುರೆಯ ರಾಜ್ಯಗಳಲ್ಲಿ ನುಗ್ಗಿದರು. ಈ ಸಂದರ್ಭದಲ್ಲಿ ದಕ್ಷಿಣದಲ್ಲಿ ಆದ ಬೆಳವಣಿಗೆಗಳು ಮತ್ತು ರಾಜ್ಯ ಕಂದಾಯ ನೀತಿಗಳನ್ನು ಕುರಿತು ವಿವರಿಸಲಾಗಿದೆ. ರಾಯನು ಮೈಸೂರು ರಾಜರ ಮನವಿಯ ಮೇರೆಗೆ ಬೇಲೂರಿನಲ್ಲಿ ಬಂದು ನೆಲೆಸಿದನು. ಮೈಸೂರು ಮತ್ತು ಕೆಳದಿಯ ನಾಯಕರು ವಿಧೇಯರಾಗಿದ್ದಿರು. ಗೋವಳಕೊಂಡದೊಡನೆ ಯುದ್ಧಮಾಡುವಲ್ಲಿ ಮೈಸೂರಿನ ಸಹಾಯವನ್ನು ಪಡೆದು ಅದನ್ನು ಸೋಲಿಸಿದನು. ಮದುರೆಯ

ನಾಯಕನು ಶ್ರೀರಂಗರಾಯನಿಗೆ ಸಹಾಯವನ್ನು ಮಾಡದೆ ವಿರೋಧಿಗಳನ್ನು ಯುದ್ಧ ಮಾಡಲಿಕ್ಕೆ ಆಹ್ವಾನಿಸಿದನು. ಎರಡನೆಯ ಸಲ ಮದುರೆಯ ನಾಯಕನ ಘೋರವಾದ ದ್ರೋಹದಿಂದ ಹತಪ್ರಭನಾದ ರಾಯನು ಮನದಲ್ಲಿ ಕುದಿಯುತ್ತಾ ಬೇಲೂರಿಗೆ ಬಂದನು. ಈ ರೀತಿಯಾಗಿ ಶ್ರೀರಂಗರಾಯನು ತನ್ನ ಸಾಮ್ರಾಜ್ಯದಲ್ಲಿ ಬರುವ ಸಮಾಂತರವನ್ನು ಹತೋಟಿಯಲ್ಲಿ ಇಟ್ಟುಕೊಳ್ಳದೆ ಅವರ ಕುತಂತ್ರಗಳಿಂದ ಕೊನೆಗೆ ಸಾಮ್ರಾಜ್ಯಚ್ಯುತನಾದ ಶ್ರೀರಂಗರಾಯನು ಸಾಮ್ರಾಜ್ಯವಿಲ್ಲದ ದೊರೆಯಾದನು.

ಇಪ್ಪತ್ತಾರನೆಯ ವಿಲಾಸದಲ್ಲಿ ಸಾಮ್ರಾಜ್ಯಚ್ಯುತನಾದ ಶ್ರೀರಂಗರಾಯನು ಕ್ರಿ.ಶ. 1656 ರಿಂದ 81ರವರೆಗೆ ಕೊನೆಯ ಹೋರಾಟಗಳನ್ನು ಮಾಡಿ ಸಾಮ್ರಾಜ್ಯವನ್ನು ಕಟ್ಟುವ ಪ್ರಯತ್ನವನ್ನು ಮಾಡುತ್ತಾನೆ. ಮೈಸೂರು ಮತ್ತು ಮದುರೆಯ ಸಂಬಂಧವನ್ನು ಕುರಿತು ಈ ಯುದ್ಧದಲ್ಲಿ ಗೆದ್ದರೆ ಮರಳಿ ಸಾಮ್ರಾಜ್ಯವನ್ನು ಸ್ಥಾಪಿಸುವ ರಾಯನ ಹಂಬಲ ಈಡೇರಲಿಲ್ಲ. ಔರಂಗಜೇಬನ ದಂಡಯಾತ್ರೆ ದಕ್ಷಿಣ ಭಾರತದಲ್ಲಿ ಮುಂದುವರೆಯಿತು. ಶಹಜಿ ವಿಜಯನಗರಕ್ಕೆ ವೈರಿಯಾಗಿ ಅವನ ಮಗ ಶಿವಾಜಿಯು ಬಲಗೊಂಡು, ಸ್ವತಂತ್ರವಾಗಿ ತನ್ನ ರಾಜ್ಯವನ್ನು ಸ್ಥಾಪಿಸುವ ಕಾರ್ಯವನ್ನು ಭರದಿಂದ ಸಾಗಿಸಿದನು.

ಕಂಠೀರವ ನರಸಿಂಹರಾಜ ಒಡೆಯರು ಕ್ರಿ.ಶ. 1659ರಲ್ಲಿ ನಿಧನರಾದರು. ಇದರಿಂದ ಶ್ರೀರಂಗರಾಯನು ಕಟ್ಟಿದ ಕನಸು ಭಗ್ನವಾಯಿತು. ಮುಂದಿನ 22 ವರ್ಷಗಳಲ್ಲಿ ಅನೇಕ ಕಷ್ಟಗಳನ್ನು ಎದುರಿಸಿ ಸುಮ್ಮನೆ ಕುಳಿತಿರಲಿಲ್ಲ. ಎಡೆಬಿಡದೆ ಸಾಮ್ರಾಜ್ಯಕ್ಕಾಗಿ ಕೊನೆಯವರೆಗೆ ಹೋರಾಡಿದನು. 1663ರಲ್ಲಿ ಚಂದ್ರಗಿರಿ, 1669ರಲ್ಲಿ ಪೆನುಗೊಂಡವನ್ನು ವಶಪಡಿಸಿಕೊಂಡನು. ಕಳೆದುಹೋದ ಸಾಮ್ರಾಜ್ಯಾಧಿಕಾರವು ಆತನಿಗೆ ಎಂದೂ ಪ್ರಾಪ್ತವಾಗಲಿಲ್ಲ. ಶ್ರೀರಂಗರಾಯನು ಸೈನ್ಯ ದುರವಸ್ಥೆಯನ್ನು ಅನುಭವಿಸುತ್ತಿದ್ದರೂ ಸಾಮ್ರಾಜ್ಯದ ಬಗೆಗಾಗಲಿ, ರಾಯನ ಬಗೆಗಾಗಲಿ ಜನತೆಯಲ್ಲಿಯೂ ನಾಯಕರಲ್ಲಿಯೂ ಗೌರವ, ಅಭಿಮಾನ, ಆದರಗಳು ಕೂಡಲೆ ಅಳಿದುಹೋಗಲಿಲ್ಲವೆಂಬುದು ಅಭಿನಂದನೀಯವಾದ ಒಂದು ಸನ್ನಿವೇಶವಾಗಿದೆ. ಮೈಸೂರಿನ ಅರಸರು, ವಿಜಯನಗರದ ಕೀರ್ತಿಯನ್ನು ರಾಯನ ಗೌರವವನ್ನು ಉಳಿಸಲು ಯಥಾಶಕ್ತಿ ಹೆಣಗಾಡಿದರು. ಮದುರೆಯನಾಯಕನು ಬಿಜಾಪುರದವರನ್ನು ಅಭಿನಂದಿಸಿದನು, ಇದರಿಂದ ಮೈಸೂರು ಮತ್ತು ಮದುರೆ ನಾಯಕರು ಕಾದಾಟದಲ್ಲಿ ತೊಡಗಿದರು. ವಿಜಯನಗರ ಸಾಮ್ರಾಜ್ಯವನ್ನು ಕೊನೆಯದಾಗಿ ಆಳಿದ ಅರವೀಡು ಮನೆತನವು ಕರ್ನಾಟಕ ಸಾಮ್ರಾಜ್ಯಕ್ಕೂ ಕೊನೆಯದಾದ ಅರಸುಮನೆತನವಾಗಿದೆ. ಅಂದು ಆರನೆಯ ಶತಮಾನದಲ್ಲಿ ಬಾದಾಮಿಯ ಚಾಲುಕ್ಯರಿಂದ ಸಾಮ್ರಾಜ್ಯವನ್ನು ಆಳಲು ಆರಂಭಿಸಿದ ಕರ್ನಾಟಕವು 17ನೆಯ ಶತಮಾನದಲ್ಲಿ ಅರವೀಡು ಮನೆತನದ ಸಮಾಪ್ತಿಯೊಂದಿಗೆ ಸಾಮ್ರಾಜ್ಯಾಧಿಕಾರವನ್ನು ಕಳೆದುಕೊಂಡಿತು. ಇದರ ಮುಂದೆ ಕರ್ನಾಟಕವು ಬಲಿಷ್ಠವಾಗಿ ಸಾಮ್ರಾಜ್ಯವೆಂದು ಎಂದೂ ತಲೆಯೆತ್ತಲಿಲ್ಲ. ಕರ್ನಾಟಕದ ಸಾಮ್ರಾಜ್ಯದ ನೀಳವಾದ ಮಾಲಿಕೆಯ ಒಂದು ತುದಿಗೆ ಒಂದನೆಯ ಪುಲಿಕೇಶಿಯು ಇದ್ದರೆ, ಅರವೀಡು ವಂಶದ ಆಳ್ವಿಕೆಯು ವಿಜಯನಗರದ ಅಳಿಗಾಲದ ಚರಿತ್ರೆಗೆ ಒಂದು ಬಗೆಯ ಕಾಂತಿಯನ್ನು ನೀಡುವಂತಹದಾಗಿದೆ.

ಇಪ್ಪತ್ತನೆಯ ವಿಲಾಸದಿಂದ ಇಪ್ಪತ್ತೆಂಟನೆಯ ವಿಲಾಸದವರೆಗೆ ಅರವೀಡು ಮನೆತನದ ಕುರಿತು ವಿವರಗಳನ್ನು ಪಿ.ಬಿ. ದೇಸಾಯಿಯವರು ತಮ್ಮದೇ ಆದ ಶೈಲಿಯಲ್ಲಿ ಇಡೀ ದಕ್ಷಿಣ ಭಾರತದ ಇತಿಹಾಸವನ್ನು ಸ್ಪಷ್ಟವಾಗಿ ಚಿತ್ರಿಸುವಂತಹ ಪ್ರಯತ್ನವನ್ನು ಮಾಡಿದ್ದಾರೆ. ವಿಜಯನಗರ ಸಾಮ್ರಾಜ್ಯ 300 ವರ್ಷಗಳ ಕಾಲ ಆಳ್ವಿಕೆ ಮಾಡಿ ತಾಳಿಕೋಟೆಯುದ್ಧದಲ್ಲಿ ಅಳಿದುಹೋಯಿತು ಎಂದು ತಿಳಿದು, ಅದು ಮರಳಿ ತನ್ನ ಅಭ್ಯುದಯವನ್ನು ಅರವೀಡು ವಂಶ ಅದನ್ನು ಮತ್ತಷ್ಟು ಕಾಲ ರಕ್ಷಿಸುವ ಪ್ರಯತ್ನವನ್ನು ಮಾಡಿತು. ಈ ಕಾಲದಲ್ಲಿ ಅನೇಕ ಸಾಹಿತ್ಯಿಕ ಕೃತಿಗಳು ಹೊರಬಂದವು, ಅದರ ಜೊತೆಗೆ ಕನ್ನಡ ಸಾಮ್ರಾಜ್ಯದ ಕಲ್ಪನೆಯನ್ನು ಪಿ.ಬಿ. ದೇಸಾಯವರು ಕನ್ನಡಿಗರ ಮನೆತನ ರಾಮರಾಯನಿಂದ ಆರಂಭವಾಗಿ ವಿಜಯನಗರದ ರಕ್ಷಣೆ ಮಾಡಿ ಕೊನೆಗೆ ಶ್ರೀ ರಂಗರಾಯನ ಕಾಲದಲ್ಲಿ ಛಿದ್ರವಾಯಿತು. ದಕ್ಷಿಣ ಭಾರತದಲ್ಲಿ ಮದುರೆಯ ನಾಯಕರು.

ಜಿಂಜಿಯ ನಾಯಕರು, ಮೈಸೂರು ಒಡೆಯರು, ಕೆಳದಿ ನಾಯಕರು, ಇಂಗ್ಲೀಷರು, ಡಚ್ಚರು, ಫ್ರೆಂಚರು ಮತ್ತು ಇನ್ನೂ ಮುಂತಾದ ಅಂಶಗಳನ್ನು ಕುರಿತು ಎಂಟು ವಿಲಾಸಗಳಲ್ಲಿ ವಿವರಿಸಿದ್ದಾರೆ. ಸ್ವರಾಜ್ಯ ಪರಿಪಾಲನೆ ಮತ್ತು ಸ್ವ-ಸಂಸ್ಕೃತಿಯ ಸಂವರ್ಧನೆ ಈ ವಿಜಯನಗರದ ಉಜ್ವಲವಾದ ಧ್ಯೇಯ ಪರಂಪರೆಗಳು, ಈ ಮನೆತನಕ್ಕೂ ಆದರ್ಶಗಳಾಗಿದ್ದವು. ಸಾಮ್ರಾಜ್ಯದ ಅಧಿಷ್ಠಾಯಕ ದೈವತ್ವವು ಎಂದಿನಂತೆ 'ಶ್ರೀ ವಿರೂಪಾಕ್ಷನೆ'. ವಿಜಯನಗರ ಸಾಮ್ರಾಜ್ಯವು ಇಲ್ಲಿಯ ಅರಸರು ವಿಜಯನಗರದ ಅರಸರೆಂದೂ ತೋರಿ, ಹಾಗೆ ಅವರಿಂದ ಸ್ವರಾಜ್ಯ ಪರಿಪಾಲನೆ ಮತ್ತು ಸ್ವ-ಸಂಸ್ಕೃತಿಯ ಸಂವರ್ಧನೆ, ಈ ಎಲ್ಲಾ ವಿಷಯಗಳು ವಿಜಯನಗರದ ಆಳ್ವಿಕೆಯ ಅಳಿಗಾಲದ ಚರಿತ್ರೆಗೆ ಒಂದು ಬಗೆಯ ಕಾಂತಿಯನ್ನು ನೀಡುವಂತಾಹುದಾಗಿದೆ.

ಆಧಾರ

ಪಾಂಡುರಂಗದೇಸಾಯಿ, *ವಿಜಯನಗರ ಸಾಮ್ರಾಜ್ಯ*, ಧಾರವಾಡ-1936.

32. ವಿಜಯನಗರ – ಸುರಪುರ ಸಂಸ್ಥಾನದ ಸಂಬಂಧ

ಡಾ॥ ಅಮರೇಶ ಯತಗಲ್

ವಿಜಯನಗರದೊಂದಿಗೆ ತಮ್ಮ ಪೂರ್ವಜರ ಸಂಬಂಧವನ್ನು ಹೊಂದಿದ ಸುರಪುರ ಸಂಸ್ಥಾನವು ಯಾದಗಿರಿ ಜಿಲ್ಲೆಯ ಕೃಷ್ಣಾ ಹಾಗೂ ಭೀಮಾನದಿಗಳ ಮಧ್ಯದಲ್ಲಿದೆ. ಈ ಸಂಸ್ಥಾನವು ಕ್ರಿ.ಶ.1636ರಿಂದ 1858ರವರೆಗೆ ಅಸ್ಥಿತ್ವದಲ್ಲಿತ್ತು. ಈ ಸಂಸ್ಥಾನದಲ್ಲಿ 12 ಜನ ನಾಯಕ ಅರಸರು ಆಳ್ವಿಕೆಯನ್ನು ಮಾಡಿದ್ದಾರೆ. ಇವರಿಗೆ 'ಗೋಸಲ ವಂಶ'ದವರೆಂದು[1] ಕರೆಯುತ್ತಾರೆ. 'ಗೋಸಲ' ಎಂಬುದು ಬೇಡ (ನಾಯಕ) ಜನಾಂಗದಲ್ಲಿರುವ ಬೆಡಗು.[2] ಸುರಪುರದ ಪೂರ್ವಜರು ಮೊದಲು ಗೋವುಗಳನ್ನು ಸಲಹುತ್ತಿದ್ದುದರಿಂದ ಅವರಿಗೆ ಗೋಸಲವರು ಎಂದು ಕರೆದಿರುವ ಸಾಧ್ಯತೆ ಇದೆ. ಗುಹನಿಂದ ಪ್ರಾರಂಭಗೊಂಡ ಈ ವಂಶದ ಮೂಲ ಪ್ರದೇಶ ರತ್ನಗಿರಿ ರಾಜ್ಯವೆಂಬುದು ನಿರ್ವಿವಾದ.[3] ರತ್ನಗಿರಿ ಸದ್ಯ ಆಂಧ್ರಪ್ರದೇಶದ ಅನಂತಪುರ ಜಿಲ್ಲೆಯ ಮಡಕಶಿರ ತಾಲೂಕಿನ ಒಂದು ಪ್ರಮುಖ ಪಟ್ಟಣವಾಗಿದೆ. ಇವರು ಬೇಟೆಯನ್ನೇ ಮೂಲ ಕಸುಬನ್ನಾಗಿಸಿಕೊಂಡು ಅಲೆಮಾರಿಗಳಾಗಿ ವಲಸೆ ಹೊರಟು ಆಂಧ್ರದ ಗಡಿ ಭಾಗದಲ್ಲಿ ಬೀಡುಬಿಟ್ಟರು.

ಸುರಪುರ ಸಂಸ್ಥಾನದ ವಂಶದ ಮೂಲ ಪುರುಷ ನರಸಿಂಹ ನಾಯಕ, ಈತನ ಮಗ ವೀರ ಬೊಮ್ಮನಾಯಕ, ಈತನ ಮಗ ಸಿಂಗಪ್ಪ ನಾಯಕ, ಈತನ ಮಗ ಒಡೇರ ನಾಯಕ, ಈತನ ಮಗ ಕಲ್ಲಪ್ಪ ನಾಯಕ ಇವರುಗಳು. ಮೊದಲು ಸಾರಂಗಕೊಳ್ಳದಲ್ಲಿ ಹಾಗೂ ಅದರ ಸುತ್ತಮುತ್ತಲ ಗುಡ್ಡಗಾಡು ಪ್ರದೇಶದಲ್ಲಿದ್ದರು. ಈ ಸಾರಂಗಕೊಳ್ಳವು ಶ್ರೀಶೈಲದ ಪರ್ವತದಲ್ಲಿ ಬರುತ್ತದೆ. ಅಲ್ಲಿಂದ ಕಲ್ಲಪ್ಪ ನಾಯಕನು ತುಂಬಳಕ್ಕೆ ಬರುತ್ತಾನೆ. ಅಲ್ಲಿಂದ ಕಂಪಿಲಿಗೆ ಬರುತ್ತಾನೆ. ಇದು ಗಂಗಾವತಿ ತಾಲ್ಲೂಕಿನಲ್ಲಿದೆ. ಅಲ್ಲಿಂದ ತಾವರಗೇರಿ ಮಾರ್ಗಹಿಡಿದು ಮುದಗಲ್ಲಿಗೆ ಬರುತ್ತಾನೆ. ಈತನಿಗೆ ಏಳು ಜನ ಮಕ್ಕಳಿದ್ದರು. ಆ ಮಕ್ಕಳಿಗೆಲ್ಲಾ ಹನುಮಪ್ಪ ನಾಯಕರೆಂದೇ ಹೆಸರಿಟ್ಟಿರುತ್ತಾನೆ. ಇವರ ಆರಾಧ್ಯದೈವ ಹನುಮಂತನ ಪ್ರಭಾವ ಇದಕ್ಕೆ ಕಾರಣವಿರಬಹುದಾಗಿದೆ. ಆದರೆ ನಂತರದಲ್ಲಿ ಸುರಪುರ ಸಂಸ್ಥಾನ ಸ್ಥಾಪನೆಯಾದ ಮೇಲೆ ಇವರು ವೆಂಕಟರಮಣನ ಭಕ್ತರಾದರು.

ಕಪಟರಾಳ ಕೃಷ್ಣರಾವ್‌ರವರು ಉಲ್ಲೇಖಿಸುವಂತೆ ಸುರಪುರ ಸಂಸ್ಥಾನದಲ್ಲಿ ಬರೆಯಲ್ಪಟ್ಟ 'ಕೈಫಿಯತ್ತು'[4]ನಲ್ಲಿದ್ದಂತೆ 'ಮುಸ್ತಫಾಖಾನ್' ಎಂಬ ಮುದಗಲ್ಲಿನ ದುರ್ಗಾಧಿಪತಿಯು ಕಲ್ಲಪ್ಪನಾಯಕನನ್ನು ಕರೆತಂದು ಮುದುಗಲ್ಲಿನಲ್ಲಿ ಇರಿಸಿದನು. ನಂತರ ಕೃಷ್ಣದೇವರಾಯನು ರಾಯಚೂರು ಯುದ್ಧದಲ್ಲಿ ಜಯಗಳಿಸಿದ ನಂತರವೂ ಈತನು ಮುದಗಲ್ಲಿನಲ್ಲಿಯೇ ವಾಸವಾಗಿದ್ದನು.

ಮುದಗಲ್ಲಿನಲ್ಲಿ ವಾಸವಾಗಿದ್ದ ಸುರಪುರ ಸಂಸ್ಥಾನದ ಪೂರ್ವಜ ಕಲ್ಲಪ್ಪ ನಾಯಕ ವಾಸವಾದ ಓಣಿಯನ್ನು ಗೋಸಲ ಪೇಟೆ[5] ಎಂದು ಕರೆಯುತ್ತಾರೆ. ಇಂದಿಗೂ ಈ ಪೇಟೆ ಇದೆ. ಗೋಸಲವೆಂಬುದು ಇವರ ವಂಶವನ್ನು ಸೂಚಿಸುತ್ತದೆ. ಈ ಪೇಟೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಬೇಡರು ವಾಸವಾಗಿದ್ದರು. ನಂತರದಲ್ಲಿ ಇವರು ಬೇರೆ ಬೇರೆ ಕಡೆಗೆ ತೆರಳಿರಬಹುದಾದ ಸಾಧ್ಯತೆ ಇದೆ. ಹೀಗಾಗಿ ಇಂದು ಇಲ್ಲಿ ಬೇಡರ ಮನೆಗಳು ಇಲ್ಲ.

ಈ ಓಣಿಯಲ್ಲಿ 'ಗೋಸಲರಾಯ'[6] ಎಂಬ ಮಾರುತಿ ದೇವಾಲಯ ಇದೆ. ಮುದಗಲ್ಲಿನಲ್ಲಿ ದೊರೆತ ಶಾಸನವೊಂದು ಗೋಸಲರಾಯನನ್ನು ಹೆಸರಿಸುತ್ತಾ, ಆತನನ್ನು ಕಲಿಯುಗದ ಕರ್ಣನೆಂದು[7] ಹೇಳುತ್ತದೆ. ಗೋಸಲರಾಯ ದೇವಾಲಯದ ಹಿಂಭಾಗದಲ್ಲಿ ಕ್ರಿ.ಶ. 1560ರ ಕಾಲದ ಶಾಸನವಿದೆ[8] ಎಂದು ಕಪಟರಾಳ ಕೃಷ್ಣರಾವ್ ಅವರು ಹೇಳುತ್ತಾರೆ. ಆದರೆ ಅದು ಇಂದು ಲಭ್ಯವಿಲ್ಲ. ಈ ಶಾಸನ ಇಂದು ದೊರೆತ್ತಿದ್ದರೆ, ಅದರಿಂದ ಇನ್ನೂ ಕೆಲವು ಮಾಹಿತಿಗಳು ಲಭ್ಯವಾಗಬಹುದಿತ್ತು.

ಮುದಗಲ್ಲಿನಲ್ಲಿರುವ ಈ 'ಗೋಸಲಪೇಟೆ' ಹಾಗೂ 'ಗೋಸಲರಾಯನ ದೇವಾಲಯ' ಸುರಪುರದ ಗೋಸಲವಂಶದ ಅರಸರಿಗೂ ಇರುವ ಸಂಬಂಧವನ್ನು ತಿಳಿಸುತ್ತವೆ.

ಕಲ್ಲಪ್ಪ ನಾಯಕನ ಮಕ್ಕಳಾದ ಏಳು ಹನುಮಪ್ಪ ನಾಯಕರ ವಿವರ ಇಂತಿದೆ :

ಹಿರೆ ಹನುಮಪ್ಪ ನಾಯಕ
↓
ಇಮ್ಮಡಿ ಹನುಮಪ್ಪ ನಾಯಕ
↓
ಮುಮ್ಮಡಿ ಹನುಮಪ್ಪ ನಾಯಕ
↓
ನಾಲ್ವಡಿ ಹಣಮ ನಾಯಕ
↓
ಕರಿ ಹಣಮ ನಾಯಕ
↓
ಬಿಲ್ಲ ಹಣಮ ನಾಯಕ
↓
ಚಿನ್ನ ಹಣಮ ನಾಯಕ

ಹಿರೇ ಹನುಮಪ್ಪನಾಯಕನು ಮುದಗಲ್ಲಿನಿಂದ ನಾಲತ್ವಾಡ (ಇದು ವಿಜಾಪೂರ ಜಿಲ್ಲೆಯ ಮುದ್ದೇಬಿಹಾಳ ತಾಲ್ಲೂಕಿನಲ್ಲಿದೆ.) ಕೊಡೇಕಲ್ಲಿಗೆ (ಇದು ಯಾದಗಿರಿ ಜಿಲ್ಲೆಯ ಸುರಪುರ ತಾಲ್ಲೂಕಿನಲ್ಲಿದೆ) ಬಂದು, ಅಲ್ಲಿ ದೇಶಗತಿಯನ್ನು ಸಂಪಾದಿಸುತ್ತಾನೆ. ಈತನ ವಂಶಸ್ಥರುಗಳೇ ಕೊಡೇಕಲ್ ನಾಯಕರು. ಇದೊಂದು ಚಿಕ್ಕ ಸಂಸ್ಥಾನವಾಗಿತ್ತು. ಈ ಸಂಸ್ಥಾನದ ಕುರಿತು ಸಂಶೋಧನೆಯ ಅಗತ್ಯತೆ ಇದೆ.

ಇಮ್ಮಡಿ ಹನುಮಪ್ಪನಾಯಕನು ಸೊಂಡೂರು (ಬಳ್ಳಾರಿ ಜಿಲ್ಲೆಯ ತಾಲೂಕು ಪ್ರದೇಶ), ಕೋಸಗಿಯಲ್ಲಿ (ಆಂಧ್ರಪ್ರದೇಶದ ಆದವಾನಿ ಸಮೀಪದಲ್ಲಿದೆ) ಬಂದು ನೆಲೆಸಿದನು. ಈತನ ವಂಶಸ್ಥರಿಗೆ ಕೋಸಗಿ ದೊರೆಗಳೆಂದು ಕರೆಯುತ್ತಾರೆ.

ಮುಮ್ಮಡಿ ಹನುಮಪ್ಪನಾಯಕನು ಕೋಳಕೂರ, ರದ್ದೇವಾಡಗಿ, ಬೀದರ್ ಮಾರ್ಗವಾಗಿ ವರ್ಧಾಡಕ್ಕೆ ತೆರಳಿದನು. ನಂತರ ಆ ಭಾಗದ ದೊರೆಯಾದನು. ಈತನ ಕುರಿತಾಗಿಯೂ ಸಂಶೋಧನೆಯ ಅಗತ್ಯತೆ ಇದೆ. ನಾಲ್ವಡಿ ಹನುಮನಾಯಕನು ಕೌಲಗಿ, ನಿಡಗುಂದಿ ಹಾಗೂ ಕೆರೂರು ಕಡೆ ಹೋದನು. ಈತನಿಗೆ 'ಸೌಜಂಗ' ಎಂಬ ಹೆಸರಿದೆ. ಸೌಜಂಗ ಎಂದರೆ ನೂರು ಯುದ್ಧಗಳನ್ನು ಮಾಡಿ ಗೆಲುವನ್ನು ಸಾಧಿಸಿದವನು ಎಂದರ್ಥ. ಅಂತಹ ಶೂರನಾದವನು. ಕರಿಹಣಮನಾಯಕನು ದಕ್ಷಿಣ ಭಾಗಕ್ಕೆ ಹೋದನು. ಬಿಲ್ಲ ಹಣಮನೂ ದಕ್ಷಿಣ ಭಾಗಕ್ಕೆ ಹೋದನು. ಇವರೀರ್ವರ ಕುರಿತು ಹೆಚ್ಚಿಗೆ ಮಾಹಿತಿ ಲಭ್ಯವಾಗುವುದಿಲ್ಲ. ಇವರು ತಂಜಾವೂರು, ಮಧುರೆ, ಜಿಂಜಿ ನಾಯಕರ ಮೂಲ ಪುರುಷರಾಗಿರಬಹುದು ಎಂಬ ಅಭಿಪ್ರಾಯಗಳಿವೆ. ಈ ಕುರಿತು ಸಂಶೋಧನೆಯಾಗುವ ಅವಶ್ಯಕತೆ ಇದೆ. ಕಲ್ಲಪ್ಪ ನಾಯಕನ 7ನೆಯ ಮಗನಾದ ಚಿನ್ನ ಹಣಮನಾಯಕನು ಕಕ್ಕೇರಿಯಲ್ಲಿ (ಯಾದಗಿರಿ ಜಿಲ್ಲೆಯ ಸುರಪುರ ತಾಲ್ಲೂಕಿನಲ್ಲಿದೆ) ಬಂದು ನೆಲೆಸಿದನು.[9] ಈತನ ವಂಶಜರುಗಳು ಆ ನಂತರದಲ್ಲಿ ಸುರಪುರ ಹಾಗೂ ಗುಡಗುಂಟಿ ಸಂಸ್ಥಾನವನ್ನು ಸ್ಥಾಪಿಸುತ್ತಾರೆ.

ಈ ಕಲ್ಲಪ್ಪ ನಾಯಕನ ಮಕ್ಕಳಾದ ಏಳು ಜನ ಹನುಮಪ್ಪ ನಾಯಕರ ಪ್ರತೀಕವಾಗಿ ಮುದಗಲ್ಲಿನ ಗುಡ್ಡದ ಮೇಲೆ ಇಂದಿಗೂ ಏಳು ಮುಖದ ಹನುಮನ ಮೂರ್ತಿ ಇದೆ.[10] ಇವರುಗಳು ನಂತರದಲ್ಲಿ ಬೇರೆ ಬೇರೆ ಕಡೆ ತೆರಳಿ ಸ್ವತಂತ್ರ ಸಂಸ್ಥಾನಗಳನ್ನು ಹಾಗೂ ದೇಶಗತಿಗಳನ್ನು ಸ್ಥಾಪಿಸಿದ ಕುರಿತಾಗಿ ಸಮಗ್ರವಾದ ಸಂಶೋಧನೆಯನ್ನು ಕೈಗೊಂಡರೆ ಈ ಸಂಸ್ಥಾನದ ಪೂರ್ವಜರ ಕುರಿತು ಹೊಸ ಬೆಳಕು ಚೆಲ್ಲಿದಂತಾಗುತ್ತದೆ.

ಚಿನ್ನ ಹಣಮ ನಾಯಕರ ನಂತರದಲ್ಲಿ :

ಹಾವಿ ನಾಯಕ

↓

ಪೆದ್ದ ಸೋಮನಾಯಕ

↓

ಎಗ್ರ ಸಿಂಗನಾಯಕ

↓

ಮದರಿ ನಾಯಕ

↓

ವೀರ ಝುಂಪನಾಯಕ

↓

ಬಲಿಸೋಮ ನಾಯಕ

↓

ಹಿರೇ ಪಾಮನಾಯಕ

ಇವರುಗಳು ಕರಡಿಕಲ್ಲು, ಐದುಭಾವಿ, ಗಡ್ಡಿ, ಚೆಂದನಕೇರಿ, ಬೈಚಬಾಳ ಮುಂತಾದ ಪ್ರದೇಶಗಳಲ್ಲಿ ಆಳ್ವಿಕೆ ನಡೆಸಿದ ಕುರಿತಾದ ಮಾಹಿತಿಗಳಿವೆ. ವಿಜಯನಗರದ ಅರಸರು ಇವರನ್ನು ಕೃಷ್ಣಾ ಮತ್ತು ಭೀಮಾನದಿಯ ನಡುವಿನ ಸಗರನಾಡಿನಲ್ಲಿ[11] ಬಿಗಿ ಕಾವಲಿಗಾಗಿ ನೇಮಿಸಿದರು. ಬಹುಮನಿ ಮತ್ತು ವಿಜಯನಗರದ ಮಧ್ಯೆ ನಡೆದ ಅನೇಕ ಯುದ್ಧಗಳು ಈ ಸಗರನಾಡ ಭಾಗದಲ್ಲಿ ನಡೆದವು. ಈ ಭಾಗ ಸುರಪುರ ಸಂಸ್ಥಾನದ ಪೂರ್ವಜರ ಅಧೀನದಲ್ಲಿದ್ದು, ವಿಜಯನಗರದ ಪರವಾಗಿ ತಮ್ಮ ಶಕ್ತಿ, ಶೌರ್ಯ, ಸಾಹಸಗಳನ್ನು ತೋರಿಸಿದವರು. ಉತ್ತರದ ಭಾಗದಿಂದ ವಿಜಯನಗರದ ಮೇಲೆ ಧಾಳಿಗೈಯ್ಯುವವರು ಸಗರನಾಡಿನ ಮೂಲಕವೇ ಬರಬೇಕಾಗಿತ್ತು. ಆ ವೈರಿಗಳು ಬರದಂತೆ ನೋಡಿಕೊಂಡ ಈ ನಾಯಕರ ಮೇಲೆ ವಿಜಯನಗರದ ಅರಸರಿಗೆ ಹೆಚ್ಚು ವಿಶ್ವಾಸವಿದ್ದಿತು.

ಗುಲಬರ್ಗಾ, ರಾಯಚೂರು ಹಾಗೂ ಇತರ ಮುಸ್ಲಿಂ ನಗರಗಳ ಮೇಲೇರಿ ಹೊರಟ ಕೃಷ್ಣದೇವರಾಯನ ದಂಡಯಾತ್ರೆಯಲ್ಲಿ ಸಗರನಾಡಿದ ಬೇಡ ಪಡೆಗಳು ಪ್ರತ್ಯಕ್ಷವಾಗಿ ಪಾಲ್ಗೊಂಡಿದ್ದವು. ಅಲ್ಲದೇ ಮುದಗಲ್ಲು ಯುದ್ಧದಲ್ಲಿ ವಿಜಯನಗರವನ್ನು ಬೆಂಬಲಿಸಿದ ಬೇಡ ಪಾಳೆಯಗಾರರು ಸುರಪುರದ ಪೂರ್ವಜರಾಗಿದ್ದರು[12] ಎಂಬುದು ವಿಶೇಷವಾದುದು.

ನಂತರದಲ್ಲಿ ಈ ಸಗರನಾಡು ಪ್ರದೇಶವು ಇಲ್ಲಿಯ ಬೇಡನಾಯಕರ ವಶಕ್ಕೆ ಬಂದಿತು. "ಸಗರನಾಡಿನ ಕೇಂದ್ರಕೋಟೆಯಂತಿದ್ದ ಸಗರದುರ್ಗವನ್ನು ಬಹುಮನಿಗಳಿಂದ ವಶಪಡಿಸಿಕೊಂಡ ವಿಜಯನಗರದ ಅರಸ ಅಳಿಯ ರಾಮರಾಯನು 'ಸಗರ ಸಂಕ್ರಮಣ ಧುರೀಣ'ನೆಂಬ ಬಿರುದನ್ನು ಧರಿಸಿದನು. ತನ್ನ ಅಧೀನದಲ್ಲಿದ್ದ ಈ ಭಾಗವನ್ನು ಸಗರನಾಡಿನ ಬೇಡ ನಾಯಕ ಪಾಳೆಯಗಾರರ ಒಡೆತನಕ್ಕೆ ನೀಡಿದನು".[13]

ವಿಜಯನಗರದ ಅಂತಿಮ ಯುದ್ಧವಾದ ತಾಳಿಕೋಟೆ ಯುದ್ಧ ನಡೆದುದು ಸಗರನಾಡಿನ ಪರಿಸರದಲ್ಲಿ. ಈ ಯುದ್ಧದಲ್ಲಿ ಪಾಲ್ಗೊಂಡ ಪಾಳೆಯಗಾರರ ಸಮೀಕ್ಷೆಯಲ್ಲಿ ಸುರಪುರದವರೂ ಸೇರಿರುವರು. ಇವುಗಳ ಕುರಿತು ಪ್ರೊ॥ ಲಕ್ಷ್ಮಣ್ ತೆಲಗಾವಿಯವರು ಸಂಶೋಧನೆ ಕೈಗೊಂಡಿರುವರು.

ಹೀಗೆ ವಿಜಯನಗರದ ಸಂರಕ್ಷಣೆಗೆ ಕಂಕಣಬದ್ಧರಾಗಿ ಹೋರಾಡಿದ ಸುರಪುರ ಸಂಸ್ಥಾನದ ಪೂರ್ವಜರು ತಾಳಿಕೋಟೆ ಯುದ್ಧದಲ್ಲಿ (ಕ್ರಿ.ಶ. 1565) ಪ್ರಮುಖ ಪಾತ್ರವಹಿಸಿರುವರು. ಹಿರೇ ಪಾಮನಾಯಕನ ಕಾಲಕ್ಕಾಗಲೇ ಈ ಯುದ್ಧ ಮುಗಿದಿತ್ತು. ನಂತರದಲ್ಲಿ ವಿಜಯನಗರವನ್ನು ಐದು ಶಾಹಿ ಮನೆತನಗಳು ಹಂಚಿಕೊಂಡವು. ಆಗ ವಿಜಾಪುರದ ಆದಿಲ್‌ಶಾಹಿಗಳ ಒಡೆತನಕ್ಕೆ ಒಳಪಟ್ಟ ಪಾಳೆಯಪಟ್ಟುಗಳಲ್ಲಿ ಸುರಪುರವೂ ಸೇರಿ, ನಂತರ ಅವರ ಅಧೀನದಲ್ಲಿ ಹಿರೇಪಾಮನಾಯಕ, ಜಕ್ಕಪ್ಪ ದೇಸಾಯಿ, ಗಡ್ಡಿ[14] ಪಿಡ್ಡನಾಯಕ, ಹಸರಂಗಿ ಪಾಮನಾಯಕನವರೆಗೆ ವಿಜಾಪುರದ ಆದಿಲ್‌ಶಾಹಿಗಳ ಅಧೀನದಲ್ಲಿ ಆಳ್ವಿಕೆ ಮಾಡಿದರು. ಪೀತಾಂಬರ ಬಹಿರಿ ಪಿಡ್ಡನಾಯಕನಿಂದ (ಕ್ರಿ.ಶ. 1687–1726) ನಾಲ್ವಡಿ ವೆಂಕಟಪ್ಪ ನಾಯಕನವರೆಗೆ (ಕ್ರಿ.ಶ. 1842–1858) ಸುರಪುರದ ಅರಸರು ಸ್ವತಂತ್ರವಾಗಿ ಆಳ್ವಿಕೆ ಮಾಡಿದರು. ನಂತರದಲ್ಲಿ ಈ ಮನೆತನದ ವಂಶಜರು ಹೈದರಾಬಾದ್ ನಿಜಾಮ ಹಾಗೂ ಬ್ರಿಟಿಷರ ಅಧೀನದಲ್ಲಿ 1948 ಸೆಪ್ಟೆಂಬರ್ 17ರ ವರೆಗೆ ಆಳ್ವಿಕೆ ಮಾಡಿದರು.

ಸುರಪುರ ಸಂಸ್ಥಾನದ ಪೂರ್ವಜರು ವಿಜಯನಗರದ ಅಧೀನದಲ್ಲಿದ್ದರು ಎನ್ನುವುದಕ್ಕೆ ಬ್ರಿಟಿಷರ ಅವಧಿಯಲ್ಲಿ ಕ್ರಿ.ಶ 1842 ಡಿಸೆಂಬರ್ 10ರಿಂದ ಆಡಳಿತಾಧಿಕಾರಿಯಾಗಿ ಆಗಮಿಸಿದ ಮೆಡೋಸ್ ಟೇಲರ್‌ನೂ ಸಹ ತನ್ನ 'ಹಿಸ್ಟರಿ ಆಫ್ ಮೈ ಲೈಫ್' ಕೃತಿಯಲ್ಲಿ "ಸುರಪುರ ಸಂಸ್ಥಾನದ ಮನೆತನದ ಮೂಲ ಪುರುಷರು ರತ್ನಗಿರಿಯಲ್ಲಿಯ ಪಾಳೆಯಗಾರರು. ವಿಜಯನಗರ ಅರಸರ ಸಾಮ್ರಾಜ್ಯದ ಮೇರೆಯನ್ನು ಮುಸಲ್ಮಾನ್ ಬಾದಶಾಹರ ದಾಳಿಯಿಂದ ಸಂರಕ್ಷಿಸುವುದಕ್ಕಾಗಿ, ಅವರನ್ನು ಎದುರಿಸಲು, ಶೂರ ಜನರನ್ನು ಕೃಷ್ಣಾ ಮತ್ತು ತುಂಗಭದ್ರಾ ನಡುವಿನ ಪ್ರದೇಶದಲ್ಲಿ ನೆಲೆಗೊಳಿಸಿದರು. ಸುರಪುರ ಅರಸರ ಮೂಲ ಪುರುಷರು ವಿಜಯನಗರದ ರಾಜರ ಅಧೀನಕ್ಕೊಳಪಟ್ಟವರು"[15] ಎಂದಿದ್ದಾರೆ. ಈ ಎಲ್ಲಾ ಅಂಶಗಳು ವಿಜಯನಗರದೊಂದಿಗೆ ಸುರಪುರ ಸಂಸ್ಥಾನದ ಪೂರ್ವಜರ ಸಂಬಂಧವನ್ನು ವಿವರಿಸುತ್ತವೆ.

ಹೀಗೆ ಸುರಪುರ ಸಂಸ್ಥಾನದ ಪೂರ್ವಜರು ವಿಜಯನಗರ ಸಾಮ್ರಾಜ್ಯದಲ್ಲಿ ಸೈನಿಕರಾಗಿ, ದೇಸಾಯಿಗಳಾಗಿ ದೋ–ಅಬ್ ಹಾಗೂ ಸಗರನಾಡಿನ ಪ್ರದೇಶದಲ್ಲಿ ಆಳ್ವಿಕೆ ಮಾಡಿದುದು ವಿಶೇಷವಾಗಿದೆ. ಈ ಕುರಿತಾಗಿ ಇನ್ನೂ ಸಮಗ್ರವಾದ ಸಂಶೋಧನೆಯಾಗುವ ಅವಶ್ಯಕತೆ ಇದೆ.

ಅಡಿ ಟಿಪ್ಪಣಿಗಳು

1. 'ಗೋಸಲ' ಎಂಬುದು ಗೋಶಾಲಾದಿಂದ ಬಂದುದಾಗಿದೆ ಎಂಬ ಅಭಿಪ್ರಾಯವೂ ಇದೆ. ಗೋ+ಶಾಲಾ=ಗೋಶಾಲಾ. ಹಸುಗಳನ್ನು ಸಾಕುವ ಕೊಟ್ಟಿಗೆ ಇದಾಗಿದ್ದು, ಅಂದು ಗೋವುಗಳನ್ನು ಸಾಕುವುದು ಒಂದು ಪುಣ್ಯದ ಕೆಲಸವಾಗಿತ್ತು. ಸುರಪುರದ ಅರಸರು ಗೋವುಗಳನ್ನು ಸಾಕುತ್ತಿದ್ದರು ಎಂಬ ಅಭಿಪ್ರಾಯವೂ ಇದೆ.
2. ಗೋತ್ರಗಳನ್ನು ಕುಲಗಳೆಂದು, ವಂಶಗಳೆಂದು ಕರೆಯುತ್ತಾರೆ. ಆದರೆ ಬೇಡ ಜನಾಂಗದಲ್ಲಿ ಬೆಡಗು ಎಂಬ ಪಾರಿಭಾಷಿಕ ಪದ ಬಳಕೆಯಲ್ಲಿದೆ. ಇದು ಬೇಡ ಜಾತಿಯ ಶಬ್ದ. ಇದು ಶುದ್ಧ ದ್ರಾವಿಡ ಶಬ್ದ. (ವೇಡನ್+ಕು+ವೇಡಂಕು>ವೇಡಂಗು>ಬೇಡಂಗು>ಬೆಡಗು) ಬ್ರಾಹ್ಮಣನ ಬ್ರಾಹ್ಮಣತನಕ್ಕೆ ಬ್ರಾಹ್ಮಣ್ಯವೆಂದು ಹೆಸರು. ಹಾಗೆಯೇ ಬೇಡನ ಬೇಡತನಕ್ಕೆ 'ಬೆಡಗು' ಎಂದು ಹೆಸರು ಎಂದು ಪ್ರೊ॥ ಎಂ.ವಿ. ಚಿತ್ರಲಿಂಗಯ್ಯನವರು ಅಭಿಪ್ರಾಯಪಡುತ್ತಾರೆ.
3. *Colonel Philip Meadows Taylor, Story of My Life, 1920, p. 224.*

4. ಸುರಪುರ ಸಂಸ್ಥಾನಕ್ಕೆ ಸಂಬಂಧಿಸಿದಂತೆ ಕಪಟರಾಳ ಕೃಷ್ಣರಾವ್ ಅವರು ಸುರಪುರ ಸಂಸ್ಥಾನ ಇತಿಹಾಸ ಕೃತಿಯಲ್ಲಿ ಸುರಪುರದ ಆರು ಕೈಫಿಯತ್ತುಗಳನ್ನು ಉಲ್ಲೇಖಿಸುತ್ತಾರೆ. ಅದರಲ್ಲಿ ಅನೇಕ ಅಂಶಗಳನ್ನು ಪ್ರಸ್ತಾಪಿಸುತ್ತಾರೆ. ಆದರೆ ಸದ್ಯ ಈ ಕೈಫಿಯತ್ತುಗಳು ಲಭ್ಯವಿಲ್ಲ. ಅವುಗಳನ್ನು ಸಂಶೋಧಿಸಿ ಪ್ರಕಟಿಸುವ ಅವಶ್ಯಕತೆ ಇದೆ.
5. ಮುದಗಲ್ಲಿನಲ್ಲಿ ಐದು ಪೇಟೆಗಳಿದ್ದವು. ಅವುಗಳೆಂದರೆ ಸೋಮವಾರ ಪೇಟೆ, ವೆಂಕಟರಾಯ ಪೇಟೆ, ಗೋಸಲರಾಯ ಪೇಟೆ, ಹಳೇ ಪೇಟೆ (ಪುರಾನಿ ಪೇಟೆ) ಹಾಗೂ ಮೇಗಳ ಪೇಟೆ (ಉಪರ್ ಪೇಟೆ) ಇಂದಿಗೂ ಈ ಹೆಸರುಗಳಿಂದ ಕರೆಯಲ್ಪಡುತ್ತವೆ.
6. ಸುರಪುರದ ಅರಸರು ಸುರಪುರದಲ್ಲಿ ಶ್ರೀ ವೇಣುಗೋಪಾಲ ಸ್ವಾಮಿಯ ಮಂದಿರದ ಪೂರ್ವಕ್ಕಿರುವ ಸಣ್ಣ ಹನುಮದೇವರನ್ನು ಮೊಟ್ಟ ಮೊದಲು ಸ್ಥಾಪಿಸಿದರು. ಆತನೇ ಸುರಪುರದಲ್ಲಿ ಮೊಟ್ಟ ಮೊದಲು ಸ್ಥಾಪನೆಗೊಂಡ ಗೋಸಲರಾಯ. ಇದು ಮುದಗಲ್ಲಿನ ಗೋಸಲರಾಯನನ್ನು ನೆನಪಿಸುತ್ತದೆ.
7. ಡಾ॥ ದೇವರಕೊಂಡಾರೆಡ್ಡಿ ಮತ್ತು ಇತರರು(ಸಂ), *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-7,* ರಾಯಚೂರು ಜಿಲ್ಲೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, 2003, ಪು. 193.
8. ಕಪಟರಾಳ ಕೃಷ್ಣರಾವ್, *ಸುರಪುರ ಸಂಸ್ಥಾನ ಇತಿಹಾಸ,* 1977, ಪು. 5.
9. ಕಪಟರಾಳ ಕೃಷ್ಣರಾವ್, *ಅದೇ,* ಪು. 1-2.
10. ಕ್ಷೇತ್ರಕಾರ್ಯದಲ್ಲಿ ಇದನ್ನು ನಾನೇ ಸಂಶೋಧಿಸಿದ್ದೇನೆ.
11. ಸಗರನಾಡು ಎಂದರೆ "ಕಲಬುರ್ಗಿ ಜಿಲ್ಲೆಯಲ್ಲಿ ಹರಿಯುವ ಭೀಮಾ ಮತ್ತು ಕೃಷ್ಣಾ ನದಿಗಳ ಮಧ್ಯವರ್ತಿಯಾದ ಸೀಮೆ". ಈ ಸಗರನಾಡಿನ ಗಡಿರೇಖೆಗಳೆಂದರೆ ಪೂರ್ವದಲ್ಲಿ ಎಡದೊರೆ ಎರಡು ಸಾಸಿರ, ಪಶ್ಚಿಮದಲ್ಲಿ ತರ್ದವಾಡಿ ಸಾಸಿರ, ಉತ್ತರದಲ್ಲಿ ಅಲಂಸೆ ಸಾಸಿರ, ದಕ್ಷಿಣದಲ್ಲಿ ಕರಡಿಕಲ್ಲು ಮುನ್ನೂರು ಪ್ರದೇಶಗಳಿದ್ದವು.
12. ರಂಗರಾಜ ದೇವೇಂದ್ರಪ್ಪ, *ಸುರಪುರ ಸಂಸ್ಥಾನ : ಒಂದು ಅಧ್ಯಯನ,* ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಮಹಾಪ್ರಬಂಧ, 1995, ಪು. 11.
13. *Aiyyangar, S.K., Sources of Vijayanagar Hisotry, 1919, p. 183.*
14. 'ಗಡ್ಡಿ' ಎಂಬುದು ವಿಶೇಷಣವಾಗಿದೆ. ಇದನ್ನೆ ಸೇರಿಸಿ ಗಡ್ಡಿ ಪಿಡ್ಡನಾಯಕ ಎಂದು ಕರೆಯಲಾಗಿದೆ. 'ಗಡ್ಡಿ' ಎಂಬುದು ಇವರ ಆಡಳಿತದ ಪ್ರಾರಂಭದ ಪ್ರದೇಶವಾಗಿದೆ. ಈ ಗಡ್ಡಿಯು ಕಕ್ಕೇರಿ ಸಮೀಪದಲ್ಲಿ ಕೃಷ್ಣಾ ನದಿಯು ಹರಿಗಡಿದು ಚಿಕ್ಕ ಚಿಕ್ಕ ನಡುಗಡ್ಡೆಗಳಾಗಿವೆ. ಇವುಗಳು ಸುಮಾರು ನಾಲ್ಕರಿಂದ ಐದು ಕಿ.ಮೀ. ವಿಸ್ತಾರವನ್ನು ಹೊಂದಿವೆ. ಅವುಗಳಲ್ಲಿ ಜಂಗಿನಗಡ್ಡಿ, ಮೇಲಿನಗಡ್ಡಿ, ನೀಲಕಂಠರಾಯನಗಡ್ಡಿ, ಬೆಣಚಿನಗಡ್ಡಿ, ನೀಲದೇವರಗಡ್ಡಿ, ಹಾಗೂ ದೇವರಗಡ್ಡಿಗಳು ಪ್ರಮುಖವಾದವುಗಳು, ಇವರು ಪ್ರಾರಂಭದಲ್ಲಿ ಈ ಗಡ್ಡಿಗಳಲ್ಲಿ ವಾಸವಾಗಿದ್ದರಿಂದಲೇ ಇವರ ಹೆಸರಿನ ಹಿಂದೆ ಗಡ್ಡಿ ಎಂಬ ವಿಶೇಷಣ ಸೇರಿದೆ.
15. ಕಪಟರಾಳ ಕೃಷ್ಣರಾವ್, *ಪೂರ್ವೋಕ್ತ,* ಪು. 4; *Colonel Philip Meadows Taylor, Story of My Life, 1920, p. 224.*

33. ವಿಜಯನಗರಕಾಲದ ತಾಂಬೂಲ

ಡಾ॥ ಎನ್. ನಂದೀಶ್ವರ

ಭಾರತೀಯ ಭೋಜನ ಸಂಪ್ರದಾಯದಲ್ಲಿ ಕಾಣುವ ಶ್ರೀಮಂತಿಕೆ, ರಸಿಕತೆಗೆ ತಾಂಬೂಲ ಚರ್ವಣವು ಅತ್ಯುತ್ತಮ ಉದಾಹರಣೆ ಎನ್ನಬಹುದು. ನಮ್ಮ ನಾಡಿನವರು ಅಷ್ಟಭೋಗಗಳನ್ನು ಬಹು ಉತ್ಸಾಹದಿಂದ ನಡೆಸಿಕೊಂಡು ಬಂದವರು ಮತ್ತು ನಮ್ಮ ಊಟ ಉಪಚಾರಗಳಲ್ಲಿ ತಾಂಬೂಲಕ್ಕೆ ಅವರು ಕೊಟ್ಟ ಪ್ರಾಶಸ್ತ್ಯ ಅಸದೃಶವಾದುದು. ತಾಂಬೂಲ ನಮ್ಮ ಜನರ ಅವಿಭಾಜ್ಯ ಅಂಗ. ಅದು ಭಾರತೀಯರ ಜೀವನದಲ್ಲಿ ಕ್ರಮ ಕ್ರಮವಾಗಿ ಎಷ್ಟು ಪ್ರಾಮುಖ್ಯತೆಯನ್ನು ಪಡೆಯಿತೆಂದರೆ, ಅವರ ಸಾಮಾಜಿಕ, ಧಾರ್ಮಿಕ ಜೀವನದಲ್ಲಿ ಅದಕ್ಕೊಂದು ಮಹತ್ವದ ಸ್ಥಾನ ದೊರೆಯಿತು. ತಾಂಬೂಲ ಭೋಜನಾ ನಂತರ ಸವಿಯುವ ರುಚಿಕರವಾದ, ಆರೋಗ್ಯದಾಯಕವಾದ ವಸ್ತು ಮಾತ್ರವಲ್ಲ ಸಾರ್ವಜನಿಕ ಶುಭ ಮುಹೂರ್ತಗಳಲ್ಲಿ ಧಾರ್ಮಿಕ ಸಮಾರಂಭಗಳಲ್ಲಿ ಅತ್ಯವಶ್ಯಕವಾಗಿ ಬಳಸುವ ವಸ್ತುವಾಗಿ ಪರಿಣಮಿಸಿದೆ.

ಭಾರತೀಯರ ಜನಜೀವನದಲ್ಲಿ ತಾಂಬೂಲ ಬಹಳ ಹಿಂದಿನಿಂದಲೂ ಹಾಸುಹೊಕ್ಕಾಗಿ ಬೆರತು ಹೋಗಿದೆ. ಅದಿಲ್ಲದೆ ಅವರ ಜೀವನ ನೀರಸ. ಆಸೇತುಹಿಮಾಚಲ ಪರ್ಯಂತ ಯಾವುದೇ ಊರಿಗೆ ಭೇಟಿ ಇತ್ತರೂ ವೀಳ್ಯದೆಲೆಯ ಪ್ರಭಾವವಿಲ್ಲದೆಡೆಯಿಲ್ಲ, ಆದರೆ ಎಷ್ಟು ಹಿಂದಿನಿಂದ ತಾಂಬೂಲ ತನ್ನ ಪ್ರಭಾವವನ್ನು ಬೀರುತ್ತಾ ಬಂದಿದೆ ಎಂಬುದನ್ನು ಖಚಿತವಾಗಿ ಹೇಳಲು ಬರುವಂತಿಲ್ಲ. "ಸುಡು ತಾಂಬೂಲವಿಹೀನ ವಕ್ತ್ರವ"[1] ವೀಳ್ಯದ ವಿಷಯವಾಗಿ ವೈದ್ಯಗ್ರಂಥಗಳು ವಿಸ್ತಾರವಾಗಿ ತಿಳಿಸುತ್ತವೆ. ವೇದ ವಾಙ್ಮಯದಲ್ಲಿ ವೀಳ್ಯದೆಲೆಯ ಪ್ರಸ್ತಾಪವಿಲ್ಲ. ಇದು ಬಹುಶಃ ಪಾಲಿನೇಷಿಯ ಪ್ರಾಂತದಿಂದ ತೆಂಗಿನಮರ ಮುಂತಾದುವುಗಳೊಡನೆ ಮೊದಲು ದಕ್ಷಿಣದೇಶಕ್ಕೆ ಬಂದು ಅನಂತರ ಉತ್ತರದೇಶದಲ್ಲಿ ವ್ಯಾಪಿಸಿತೆಂದು ಊಹಿಸಲಾಗಿದೆ.

ಕನ್ನಡ ಸಾಹಿತ್ಯ ಕೃತಿಗಳಲ್ಲೂ ನಾವು ತಾಂಬೂಲದ ಹೆಸರನ್ನು ಕೇಳುತ್ತಲೇ ಇರುತ್ತೇವೆ. ಕನಕದಾಸರ 'ಮೋಹನತರಂಗಿಣಿ'ಯಲ್ಲಿ ದ್ವಾರಕಾಪುರ ವರ್ಣನೆಯಲ್ಲಿ "ಲಲಿತ ಬೆಳ್ಳಲೆಗಳಂಗಡಿಗಳೊಪ್ಪಿದವ" ಎಂದು ಬೆಳ್ಳಲೆಯ ಅಂಗಡಿಗಳೂ ಇದ್ದವೆಂದು ತಿಳಿಸಿರುವರು.[2] ಹೊಸಮಲೆಯದುರ್ಗದಲ್ಲಿ ವಾಸಿಸುತ್ತಿದ್ದ ಬೇರೆ ಬೇರೆ ವೃತ್ತಿಯವರ ಕೇರಿಗಳನ್ನು ಹೇಳುವಾಗ ನಂಜುಂಡಕವಿ, 'ಹಡಪಿಗರ' (ಅಡಪವಳ್ಳರ) ಕೇರಿಯೂ ಇತ್ತೆಂದು ಹೇಳುವನು.[3] ರಾಜನ ಬಳಿ ವೀಳ್ಯದ ವ್ಯವಸ್ಥೆಯನ್ನು ನೋಡಿಕೊಳ್ಳಲು ಹಡಪದ ಎಂಬ ವೀಳಯದ ಒಬ್ಬ ಅಧಿಕಾರಿ ಇರುತ್ತಿದ್ದನು[4] ಎಂಬುದನ್ನು ತಿಳಿದಾಗ ವೀಳ್ಯವು ಎಷ್ಟೊಂದು ಪ್ರಾಮುಖ್ಯತೆಯನ್ನು ಪಡೆದಿತ್ತೆಂದು ತಿಳಿದುಬರುತ್ತದೆ. ತೊರವೆ ರಾಮಾಯಣದಲ್ಲಿ "....ಕಾಳಸಿಗ ತಂಬುಲಿಗ ಜಂಗಮ ಜೋಗಿಗಳ ಜಂಗುಳಿಗ ಗೇರಿಗಳೊಳಗೆ..." ಎಂದು 'ತಂಬುಲಿಗರ' ಕೇರಿಯ ವಿವರಣೆ ದೊರೆಯುತ್ತದೆ. ಸಮರದಲ್ಲಿದ್ದ ಬೇರೆ ಬೇರೆ ವೃತ್ತಿಯ ಸೈನಿಕರನ್ನು ಹೇಳುವಾಗ 'ರಾಮನಾಥ ಚರಿತೆ'ಯಲ್ಲಿ ಕವಿ ಹೇಳಿರುವ "ಹಡಪದ ಬಲ್ಲುಗ"ನ ಹೆಸರನ್ನು ಗಮನಿಸಬಹುದು.[5] ಜನರ ಅಂತಸ್ತು ಯಾವುದೇ ಇರಲಿ ಅವರ ಸ್ಥಾನಮಾನದ ಪರಿವೆ ಇಲ್ಲದೆ ಎಲ್ಲ ಜನರ ಕೈಯ್ಯಿ ಬಾಯಿಗಳಲ್ಲಿ ಸದಾ ತಾಂಬೂಲವಿರುತ್ತಿತ್ತು. "ತಾಂಬೂಲ ವಿಹೀನವಕ್ತ್ರ ಅತಿ ನಿಕೃಷ್ಟ"[6] ಎಂದು ಪಾಲ್ಕುರಿಕೆ ಸೋಮನಾಥನು 'ಸೋಮೇಶ್ವರ ಶತಕ'ದಲ್ಲಿ ಹೇಳುತ್ತಾನೆ.

ಸಮರಕ್ಕೆ ಸಾಗುತ್ತಿದ್ದ ಬಂಟರ ಕೈಯಲ್ಲೂ ಅಡಕೆಲೆ[7] ರಾಣಿ ರತ್ನಾಜಿ ಅಲಂಕರಿಸಿಕೊಂಡು ಹೊರಟಾಗ, "ಕತ್ತರಿಸಿದ ಬಿಳಿಯೆಲೆ ಕೈಯ್ಯೊಳಗೆ ಪೊರೆಯೆತ್ತಿದಡಕೆ ಬಾಯೊಳಗೆ"[8] ದ್ರೌಪದಿಯ ಸ್ವಯಂವರಕ್ಕೆಂದು ಬಂದು ನೆರೆದ ನೃಪರ ಕೈಯಲ್ಲಿ "ಮಡಿಸಿದೆಲೆಯೊಳಗೆ ಬಾಯೊಳಗೆಡಸಿದೆಲೆ..."[9] ಹೀಗೆ ಸದಾಕಾಲದಲ್ಲೂ ತಾಂಬೂಲ ಎಲ್ಲ ಜನರ

ಮನಸ್ಸನ್ನೂ ಸೂರೆಗೊಂಡಿತ್ತು. ಬಾರ್ಬೋಸನು ಹೆಂಗಸರು, ಗಂಡಸರು ಹಗಲೂ ರಾತ್ರಿ, ಮನೆಯ ಒಳಗೆ ಹೊರಗೆ, ಬೀದಿ ಬಂಕಗಳಲ್ಲಿ ಎಚ್ಚರವಾಗಿರುವಾಗಲೆಲ್ಲ, ಮಲಗಿರುವಾಗ ಈ ಎಲೆಯನ್ನು ಒಂದೇ ಸಮನೆ ಅಗಿಯುತ್ತಿರುತ್ತಾರೆ ಎಂದು ತಿಳಿಸಿರುತ್ತಾನೆ.[10]

ಎಲ್ಲಾ ಕಾಲದಲ್ಲೂ ತಾಂಬೂಲ ಹಾಕುವುದು ಜನರ ಒಂದು ಸ್ವಭಾವವಾಗಿದ್ದರೂ ಸಂಪ್ರದಾಯದ ದೃಷ್ಟಿಯಿಂದ ತಾಂಬೂಲ ಹಾಕುವುದಕ್ಕೆ ಕೆಲವು ನಂಬಿಕೆಗಳು ಬೆಳೆದುಬಂದಂತೆ ಕಂಡುಬರುತ್ತದೆ. ಉಂಡ ಹೊಟ್ಟೆಗೆ ತಾಂಬೂಲವೇ ಹೊರತು, ಹಸಿದ ಹೊಟ್ಟೆಗಲ್ಲ: "ಪಸಿದವಗೆ ತಾಂಬೂಲ..... ಬಿಸಿಲಿಂದ ಬಂದವರಿಗೆ ತಪ್ತ ಜಲ ಸೊಗೆಯಿಪುದೆ".[11] ಊಟವಾದ ಮೇಲೆ ತಾಂಬೂಲ ಹಾಕುವುದು ಒಂದು ಸಾಮಾನ್ಯ ಪದ್ಧತಿ. ಆ ಪದ್ಧತಿಯನ್ನು ಇಂದಿಗೂ ನಾವು ಕಾಣಬಹುದು. ದೊಡ್ಡ ದೊಡ್ಡ ಭೋಜನ ಸಮಾರಂಭಗಳಾದರೂ ಕೂಡ, ಊಟವಾದ ನಂತರ, ಪನ್ನೀರಿನಿಂದ ಚಿಮುಕಿಸಿ, ಶ್ರೀಗಂಧವನ್ನು ಕರತಲಕಿತ್ತು, ಕರ್ಪೂರವೆರಸಿ ವೀಳೆಯವನ್ನು ಕೊಡುವುದು ಪದ್ಧತಿ.[12] ಜನರು ತಾಂಬೂಲವನ್ನು ಹಾಕುವಾಗ ಕೆಲವು ವೇಳೆ ಪಚ್ಚ ಕರ್ಪೂರವನ್ನು ಸೇರಿಸಿಕೊಳ್ಳುತ್ತಾರೆ ಎಂದು ಹೇಳಿದ ಅಬ್ದುಲ್‌ರಜಾಕ್ ರಾಜನನ್ನು ವಿದೇಶೀಯರು ಭೇಟಿಮಾಡಲು ಹೋದಾಗಲೆಲ್ಲಾ ಒಂದು ಕಟ್ಟು ವಿಳ್ಯದೆಲೆ, ಫನಂ ನಾಣ್ಯಗಳ ಚೀಲ ಮತ್ತು ಒಂದಿಷ್ಟು ಮಿತ್ಕಾಲ್ ಕರ್ಪೂರ ಬಹುಮಾನವಾಗಿ ಅವರಿಗೆ ಕೊಡುತ್ತಿದ್ದರು ಎಂದು ಹೇಳುವರು[13].

ವೀಳ್ಯದೆಲೆಯನ್ನು ಹಾಕುವುದೂ ಸಿದ್ಧಪಡಿಸುವುದೂ ಒಂದು ಕಲೆ, ಅದಕ್ಕೆ ಸಂಬಂಧಪಟ್ಟ ಹಾಗೆ ಅದೆಷ್ಟು ಪರಿಕರಗಳು, ಸಿದ್ಧತೆಗಳು ! ನಮ್ಮ ರಸಿಕ ಕವಿಗಳು ಅದನ್ನು ಸುಂದರವಾಗಿ ವರ್ಣಿಸಿದ್ದಾರೆ. ತಾಂಬೂಲಕ್ಕಾಗಿ ಎಂತಹ ಎಲೆಗಳನ್ನು ಉಪಯೋಗಿಸಬೇಕು ಎಂಬುದನ್ನು ಬಸವರಾಜನ 'ಶಿವತತ್ತ್ವರತ್ನಾಕರ'ವು ವಿವರಿಸುತ್ತದೆ. ತಾಂಬೂಲಕ್ಕಾಗಿ ಕರ್ಪೂರವಲ್ಲಿ ಅಥವಾ ನಾಗವಲ್ಲಿಯ ಎಲೆಗಳನ್ನು ಉಪಯೋಗಿಸಬೇಕು. ಇವು ಚೆನ್ನಾಗಿ ನೀರಿರುವ ಉತ್ತಮ ಭೂ ಪ್ರದೇಶದಲ್ಲಿ ಸುಮಾರು ಒಂದು ವರ್ಷಕಾಲ (ಮೀರದೆ) ಚಪ್ಪರದಲ್ಲಿಯೇ ನದಿ ನೀರಿನಿಂದ ಬೆಳೆದಿರಬೇಕು. ಸ್ವಲ್ಪ ಬಿಳಿ ಬಣ್ಣದಲ್ಲಿದ್ದು ಹಿಂಭಾಗ ಮತ್ತು ತುದಿ ಸುತ್ತಲೂ ಸ್ವಲ್ಪ ಕಪ್ಪಾಗಿರಬೇಕು. ಕನಿಷ್ಟ ಬಳ್ಳಿಯಲ್ಲಿ ಐವತ್ತೆರಡು ಎಲೆಗಳಿರಬೇಕು. ಅಂತಹ ಎಲೆಗಳನ್ನು ಪೆಟ್ಟಿಗೆಯಲ್ಲಿ ಹಾಕಿ ಮುಚ್ಚಿಟ್ಟು ಉಪಯೋಗಿಸಬೇಕು. ಇದೇ ರೀತಿಯ ಅಭಿಪ್ರಾಯ 'ಮಾನಸೋಲ್ಲಾಸ'ವು ವ್ಯಕ್ತಪಡಿಸುತ್ತದೆ[14].

ಮೂರನೇ ಸೋಮೇಶ್ವರನ 'ಮಾನಸೋಲ್ಲಾಸ'ವು ಎಂತಹ ಸುಣ್ಣವನ್ನು ವೀಳ್ಯದಲ್ಲಿ ಉಪಯೋಗಿಸಬೇಕು ಎಂಬುದನ್ನು ತಿಳಿಸುತ್ತಾ "ಬೆಟ್ಟ ಮತ್ತು ನೀರಿನ ಮೂಲಗಳಿಂದ ಸುಣ್ಣವು ಲಭಿಸುತ್ತದೆ. ಸುಣ್ಣದ ಕಲ್ಲುಗಳನ್ನು ಸುಟ್ಟು ತಯಾರಿಸಿದ, ಮುತ್ತಿನ ಚಿಪ್ಪುಗಳಿಂದ ತಯಾರಿಸಿದ ಸುಣ್ಣಗಳನ್ನು (ಡಬ್ಬಿ) ಪೆಟ್ಟಿಗೆಯಲ್ಲಿ ತುಂಬಿಸಿಟ್ಟು ಉಪಯೋಗಿಸಬೇಕು".[15] ಅಪಕ್ವ ಉಜ್ವಲ ಸ್ವಚ್ಚವಾಗಿರುವ ಅದು ಕರ್ಪೂರ ಸ್ಫಟಿಕದಂತಿರಬೇಕು.[16]

ಮೂರನೇ ಸೋಮೇಶ್ವರನ 'ಮಾನಸೋಲ್ಲಾಸ'ವು ಎಂತಹ ಅಡಿಕೆಯನ್ನು ತಾಂಬೂಲಕ್ಕೆ ಉಪಯೋಗಿಸಬೇಕು ಎಂಬುದನ್ನು ಈ ರೀತಿಯಾಗಿ ತಿಳಿಸುತ್ತದೆ. ನೈಲವರ್ತಿಪುರದಲ್ಲಿ ಈಶ್ವರಪುರದಲ್ಲಿ ಇಲ್ಲವೆ ಕಂಡಿಕಾಪುರದಲ್ಲಿ ಬೆಳೆದು, ಚೆನ್ನಾಗಿ ಬಲಿತ ಅಡಿಕೆಯ ಫಲಗಳನ್ನು, ಪಾಟಲವರ್ಣದ್ದಾಗಿಯೂ ಕಷಾಯ ಮತ್ತು ಮಧುರ ರುಚಿವುಳ್ಳದ್ದಾಗಿಯೂ ತುಂಡು ತುಂಡಾಗಿ ಕತ್ತರಿಸಿದ್ದನ್ನಾಗಿಯೂ ಮಾಡಿ, ತೊಳೆದು ಒಣಗಿಸಿ ಕುಟ್ಟಬೇಕು. ಕಸ್ತೂರಿ ಪುಡಿಯಲ್ಲಿ ಅದನ್ನು ಬೆರೆಸಬೇಕು. ಮನೋಹರವಾದ ಅದನ್ನು ನೆರಳಿನಲ್ಲಿ ಒಣಗಿಸಬೇಕು. ಅಡವಿಯಲ್ಲಿ ಬೆಳೆದ ಅಡಿಕೆಮರದ ಎಳೆಯಕಾಯಿಗಳನ್ನು ಸಿಪ್ಪೆ ಸಹಿತವಾಗಿ ಚೆನ್ನಾಗಿ ಕುದಿಸಬೇಕು. ಆಮೇಲೆ ಸಿಪ್ಪೆಯನ್ನು ತೆಗೆದುಹಾಕಿ ನೆರಳಿನಲ್ಲಿ ಒಣಗಿಸಬೇಕು. ಅವುಗಳನ್ನು ನಾಲ್ಕು ಭಾಗಗಳಾಗಿ ಕತ್ತರಿಸಿ, ತಾಂಬೂಲಕ್ಕಾಗಿ ಉಪಯೋಗಿಸಬೇಕು.[17]

ಬಸವರಾಜನ 'ಶಿವತತ್ತ್ವರತ್ನಾಕರ'ವು ಎಂತಹ ಪಚ್ಚ ಕರ್ಪೂರವನ್ನು ತಾಂಬೂಲಕ್ಕೆ ಉಪೋಗಿಸಬೇಕು ಎಂಬುದನ್ನು ತಿಳಿಸುತ್ತದೆ. "ಮಲಯ ಪರ್ವತದ ಶಿಖರದಲ್ಲಿನ ಬಳ್ಳಿಗಳ ರಸದಿಂದ ಪಡೆದ, ಪಾಕ ಮಾಡದೇ ಇರುವ ಪಚ್ಚಕರ್ಪೂರವು ಸ್ವಚ್ಚವಾಗಿರುತ್ತದೆ. ಮಾವಿನ ಹಣ್ಣಿನಂತೆ ಸುವಾಸನೆಯಿಂದ ಕೂಡಿದ ಇದರ ಹೆಸರು ಈಶವಾಸ ಎಂದು ಹೆಸರು. ಇದು ಸಹಜವಾದ ಪಚ್ಚಕರ್ಪೂರ. ಕಸ್ತೂರಿ ಪುಡಿಯಿಂದ ಕೂಡಿದ ಪಚ್ಚಕರ್ಪೂರವನ್ನು ತಾಂಬೂಲಕ್ಕಾಗಿ ಉಪಯೋಗಿಸಬೇಕು. ಕಸ್ತೂರಿ, ಪಚ್ಚಕರ್ಪೂರ, ಡಕ್ಕೊಲ (ಬಾಲ ಮೆಣಸು), ಜಾತೀಪುಷ್ಪ ಮುಂತಾದ ಪರಿಮಳ ದ್ರವ್ಯದೊಡಗೂಡಿದ ಅರಳಿನ ಹಿಟ್ಟನ್ನು ವೀಳ್ಯದೊಡನೆ ಸೇವಿಸಬಹುದು. ಇದು ಹೃದಯಕ್ಕೆ ಹಿತಕರವೂ ಹೌದು. ಕಗ್ಗಿಲೆ ಕಷಾಯದಿಂದ ತಯಾರಿಸಿದ ಕಾಚು, ಶ್ರೀಗಂಧದ ಪುಡಿ, ಪಚ್ಚಕರ್ಪೂರ ಇವುಗಳನ್ನು ಸಮ ಪ್ರಮಾಣದಲ್ಲಿ ಸೇರಿಸಿ, ಸಣ್ಣ ಚೂರು ಕಸ್ತೂರಿಯನ್ನು ಸೇರಿಸಿ ನುಣ್ಣನೆ ಅರೆದು ಚಿಕ್ಕಚಿಕ್ಕ ಮಾತ್ರೆಗಳನ್ನು ತಯಾರಿಸುವುದು. ಇವನ್ನು ವೀಳ್ಯದೊಡನೆ ಸೇವಿಸುವುದರಿಂದ ತ್ರಿದೋಷ (ವಾತ, ಪಿತ್ತ ಮತ್ತು ಕಫ) ಶಮನವಾಗುತ್ತದೆ. ಸ್ವರವರ್ಧನೆ ಮತ್ತು ಹಲ್ಲುಗಳು ಗಟ್ಟಿಯಾಗುತ್ತವೆ. ಕಗ್ಗಿಲೆಚಕ್ಕೆಯ ಕಷಾಯದಿಂದ ತಯಾರಿಸಿದ ಕಾಚು ಒಂದು ಭಾಗ, ಇದರ ಅರ್ಧದಷ್ಟು ಚಂಗಲ್‌ಕೋಷ್ಟ, ಒಂದು ಚೂರು ಜಾಯಿಕಾಯಿ, ಲಿಂಬೇಗಿಡದ ಮೊಗ್ಗು, ಮಾದಲಫಲದ ಮೊಗ್ಗು ಇವೆಲ್ಲವನ್ನೂ ಸೇರಿಸಿ, ವೀಳ್ಯದೊಡನೆ ಸೇವಿಸುವುದರಿಂದ ಬಾಯಿ ತುಂಬಾ ಕೆಂಪಾಗುತ್ತದೆ. ಪಚ್ಚ ಕರ್ಪೂರದೊಡನೆ ಸೇರಿದ ವೀಳ್ಯವನ್ನು ಮೊದಲು ತಿನ್ನಬೇಕು. ನಂತರ ಅಡಿಕೆಯೊಡನೆ ವೀಳ್ಯದ ಸೇವನೆ ಮಾಡಬೇಕು.[18]

ಬಸವರಾಜನ 'ಶಿವತತ್ತ್ವರತ್ನಾಕರ'ವು ತಾಂಬೂಲದಲ್ಲಿ ಯಾವ ಸಮಯದಲ್ಲಿ ಯಾವ ವಸ್ತು ಹೆಚ್ಚಾಗಿರಬೇಕು, ಅದರಿಂದ ಏನು ಪ್ರಯೋಜನ ಎಂಬುದನ್ನು ತಿಳಿಸುತ್ತದೆ. ವೀಳ್ಯದಲ್ಲಿ ಬೆಳಿಗ್ಗೆ ಅಡಿಕೆ ಹೆಚ್ಚಾಗಿರಬೇಕು. ಮಧ್ಯಾಹ್ನ ಸುಣ್ಣ ಹೆಚ್ಚಿರಬೇಕು. ಸಾಯಂಕಾಲದಲ್ಲಿ ವೀಳ್ಯದೆಲೆ ಹೆಚ್ಚಾಗಿರಬೇಕು. ಈ ರೀತಿ ತಾಂಬೂಲ ಸೇವನೆಯಿಂದ ಇದು ಆಯುಸ್ಸನ್ನು, ಆರೋಗ್ಯವನ್ನೂ ಹೆಚ್ಚಿಸುತ್ತದೆ.[19]

ಬಸವರಾಜನ 'ಶಿವತತ್ತ್ವರತ್ನಾಕರ'ವು ಎಂತಹ ವೀಳ್ಯದೆಲೆಯನ್ನು ಸೇವಿಸಬಾರದು ಎಂಬುದನ್ನು ತಿಳಿಸುತ್ತಾ, ಬಹಳಷ್ಟು ಎಳಸಾದ ಅಥವಾ ಬಲಿತ, ಹುಳು ಹಿಡಿದ, ಒಂದು ವರ್ಷಕ್ಕಿಂತಲೂ ಹೆಚ್ಚು ಕಾಲ ಗಿಡದಲ್ಲಿದ್ದ, ಸುಟ್ಟುಹೋದ, ಒಣಗಿದ, ಕಪ್ಪಾದ, ಕೊಳೆತ, ಚುಕ್ಕೆ ಇದ್ದ ವೀಳ್ಯದೆಲೆಯನ್ನು ಸೇವಿಸಲೇಬಾರದು.[20]

ಬಸವರಾಜನ 'ಶಿವತತ್ತ್ವರತ್ನಾಕರ'ವು ವೀಳ್ಯದೆಲೆಯ ಯಾವ ಭಾಗ ತಿಂದರೆ ದೋಷ ಉಂಟಾಗುತ್ತದೆ ಎಂಬುದನ್ನು ತಿಳಿಸುತ್ತದೆ. ವೀಳ್ಯದೆಲೆಯ ಬುಡದಲ್ಲಿ (ತೊಟ್ಟಿನ) ಭಾಗದಲ್ಲಿ ರೋಗವಿರುತ್ತದೆ. ತುದಿ ತಿಂದರೆ ಪಾಪಬರುತ್ತದೆ. ಹರಿದು ಹೋದ ಎಲೆಯು ಆಯಸ್ಸನ್ನು ಕಡಿಮೆ ಮಾಡುತ್ತದೆ. ಎಲೆಯಲ್ಲಿನ ನರಗಳು (ದಂಟುಗಳು) ಬುದ್ಧಿಯನ್ನು ಕುಂಠಿತ ಗೊಳಿಸುತ್ತವೆ. ಆದ್ದರಿಂದ ತುದಿ, ಬುಡ ಮತ್ತು ನರಗಳನ್ನು ತೆಗೆದು ಹಾಕಿ ತಿನ್ನಬೇಕು ಎಂಬುವುದಾಗಿ ತಿಳಿಸಿದೆ.[21]

ಬಸವರಾಜನ 'ಶಿವತತ್ತ್ವರತ್ನಾಕರ' ಕೃತಿಯು ವೀಳ್ಯದೆಲೆಯ ತುಂಬ ದೇವತೆಗಳ ವಾಸವಿದೆ ಎಂಬ ವಿಷಯವನ್ನು ವಿವರಿಸುತ್ತದೆ. ವೀಳ್ಯದೆಲೆಯ ತುದಿಯಲ್ಲಿ ಲಕ್ಷ್ಮಿಯ ವಾಸ, ಬಲಭಾಗದಲ್ಲಿ ಬೃಹಸ್ಪತಿಯ ವಾಸ, ಮಧ್ಯದ ದಂಟಿನ ಭಾಗದಲ್ಲಿ ಸರಸ್ವತಿಯ (ಅಲಕ್ಷ್ಮೀಯ) ವಾಸ, ಎಡಭಾಗದಲ್ಲಿ ಪಾರ್ವತಿಯ ವಾಸ, ಎಲೆಯ ಒಳಭಾಗದಲ್ಲಿ ವಿಷ್ಣುವಿನ ವಾಸ, ಹಿಂಭಾಗದಲ್ಲಿ ಚಂದ್ರನ ವಾಸ, ಎಲ್ಲ ಮೂಲೆಗಳಲ್ಲೂ ಶಿವನ ವಾಸ, ಬುಡದಲ್ಲಿ ಮೃತ್ಯುವಿನ ವಾಸ, ಎಲ್ಲಾ ಭಾಗಗಳಲ್ಲೂ ಮನ್ಮಥನ ಆವಾಸವಿರುತ್ತದೆ ಎಂಬುದಾಗಿ ತಿಳಿಸುತ್ತದೆ.[22]

ಬಸವರಾಜನು ತಾಂಬೂಲವನ್ನು ಜನ ಕೇವಲ ಬಾಯಿ ಚಪಲಕ್ಕಾಗಿ ಉಪಯೋಗಿಸುತ್ತಿರಲಿಲ್ಲ. ಅದನ್ನು ಅನೇಕ ಆರೋಗ್ಯದಾಯಕ ಗುಣಗಳಿಗಾಗಿ ಉಪಯೋಗಿಸುತ್ತಿದ್ದರು ಎಂಬುದನ್ನು ವಿವರಿಸಿದ್ದಾನೆ. ವೀಳ್ಯದೆಲೆ ವಾತಶಾಮಕ ಕಫವೃದ್ದಿಯನ್ನು ಅಡಿಕೆ ನಿವಾರಿಸುತ್ತದೆ. ಸುಣ್ಣ ಅಗ್ನಿಮಾಂದ್ಯನಾಶಕ, ಖದಿರ ಸಾರವು (ಕಾಚು) ಪಿತ್ತಶಾಮಕ.[23] ಜಾಯಿಕಾಯಿಯಲ್ಲಿ ವಗರು ಮತ್ತು ಖಾರ ರಸಗಳಿವೆ. ಉಷ್ಣವೀರ್ಯ ಮತ್ತು ಲಘು ಗುಣಗಳಿದ್ದು, ಕಂಠರೋಗ, ವಾತಾತಿಸಾರ ಪ್ರಮೇಹರೋಗ ಹರವು ಆಗಿರುತ್ತದೆ. ವೃಷ್ಯವೂ (ಉತ್ತೇಜಕ) ಅಗ್ನಿದೀಪಕವೂ ಆಗಿರುತ್ತದೆ. ಲವಂಗವು ಖಾರ ಮತ್ತು ಮಧುರವಾಗಿಯೂ ಲಘು ಗುಣದಿಂದ ಕೂಡಿದ್ದಾಗಿಯೂ ಇರುತ್ತದೆ. ಕಣ್ಣಿಗೆ ಬಲಕಾರಕ, ಕ್ಷಯ ರೋಗವನ್ನೂ ನಿವಾರಿಸುತ್ತದೆ. ಪಚ್ಚಕರ್ಪೂರವು ಶೀತ ಮತ್ತು ಮೃದುಗುಣಗಳಿಂದ ಕೂಡಿರುತ್ತದೆ. ಬಾಯಾರಿಕೆ, ವಾಂತಿ, ಶೀತ (ಥಂಡಿ) ಶೂಲ(ನೋವು)ಗಳನ್ನು ನಿವಾರಿಸುತ್ತದೆ. ಹಸಿವನ್ನೂ ಹೆಚ್ಚಿಸುತ್ತದೆ. ಕೆಮ್ಮು, ದಮ್ಮು, ಮೈಯುರಿ, ಬಾಯಿವಾಸನೆ ಅತಿಯಾದ ಮೇದಸ್ಸು (ಕೊಬ್ಬು) ಹೆಚ್ಚು ಬೆವರುವುದು ಇವುಗಳನ್ನು ನಿವಾರಿಸುತ್ತದೆ. ಕಣ್ಣಿಗೆ ಶಕ್ತಿದಾಯಕ, ದೇಹಕ್ಕೂ ಉತ್ತೇಜಕ. ಪ್ರಿಯಂಗುವು (ಪ್ರೇಂಖಣ ಕುಸುಮ) ಶೀತವೀರ್ಯವುಳ್ಳದ್ದು, ವಾತಜ್ವರ, ರಕ್ತ ಪಿತ್ತ, ಬಾಯಿ ಒಣಗುವಿಕೆ, ದಾಹಗಳನ್ನು ನಿವಾರಿಸುತ್ತದೆ. ಹೃದಯ ಉತ್ತೇಜಕವೂ ಶುಕ್ರವರ್ಧಕವೂ ಆಗಿರುತ್ತದೆ. ತಾಂಬೂಲದ ಅತಿಸೇವನೆಯಿಂದ ಹಲ್ಲು ಅಲುಗಾಡಲು ಪ್ರಾರಂಭವಾಗುತ್ತವೆ. ಮೈ ಬಿಳುಚುತ್ತದೆ. ಕಣ್ಣಿನ ಬೇನೆಗಳೂ, ಬಲಕ್ಷಯವೂ ಉಂಟಾಗುತ್ತದೆ. ವಿಶೇಷವಾಗಿ ಕುಷ್ಠ, ಪ್ರಮೇಹ ಮತ್ತು ಮೂತ್ರ ರೋಗಗಳುಂಟಾಗುತ್ತವೆ. ಹಾಲು ಕುಡಿದು ಒಂದು ಮುಹೂರ್ತ(48 ನಿಮಿಷ)ದೊಳಗೆ ವೀಳ್ಯ ತಿಂದರೆ ಎದೆಯಲ್ಲಿ ನೋವು ಕಂಡುಬರುತ್ತದೆ ಮತ್ತು ಕೂಡಲೇ ಪಿತ್ತವು ಹೆಚ್ಚುತ್ತದೆ. ಆದ್ದರಿಂದ ಹಾಲು ಕುಡಿದು ಒಂದು ಮಹೂರ್ತದ ನಂತರವೇ ವೀಳ್ಯ ತಿನ್ನಬೇಕು".[24] ಅಬ್ದುಲ್‌ರಜಾಕ್‌ನು ತಾಂಬೂಲ ವಿಶೇಷತೆಯ ಬಗ್ಗೆ ಈ ರೀತಿ ತಿಳಿಸಿದ್ದಾನೆ. ಹೊಟ್ಟೆ ತುಂಬ ಊಟ ಮಾಡಿದಾಗ ವೀಳ್ಯ ಹಾಕಿಕೊಂಡರೆ ಆಹಾರ ಜೀರ್ಣವಾಗುತ್ತದೆ. ವೀಳ್ಯದೆಲೆ ಎಷ್ಟು ಬಲವರ್ಧಕ, ಎಷ್ಟು ಕಾಮೋತ್ತೇಜಕ ಗುಣಗಳು ಎಷ್ಟೊಂದು ಎಂಬುದನ್ನು ವರ್ಣಿಸಲಾರೆ. ಈ ವೀಳ್ಯದೆಲೆಯ ಗುಣವೇ ಇರಬೇಕು. ಈ ದೇಶದ ರಾಜ ತನ್ನ ಅಂತಃಪುರದಲ್ಲಿ ಲೆಕ್ಕವಿಲ್ಲದಷ್ಟು ಸ್ತ್ರೀಯರನ್ನೂ ಹೊಂದಿರುವುದಕ್ಕೆ ತಾಂಬೂಲದ ಮೋಹಕ ಪ್ರಭಾವವೇ ಕಾರಣವಾಗಿರಬೇಕು.[25] ತಾಂಬೂಲವನ್ನು ಗಾಯಕ್ಕೆ ಔಷಧಿಯಾಗಿಯೂ ಉಪಯೋಗಿಸುತ್ತಿದ್ದರೆಂದು ತೋರುತ್ತದೆ. ಕಾಡಿನಲ್ಲಿ ಬೇಟೆಯಾಡುವಾಗ ಮೃಗಗಳಿಂದ ಗಾಯಗೊಂಡ ಬೇಡರನ್ನು ಬೇಡತಿಯರು, ಎತ್ತಿ ಹಿಡಿದು ತಾಂಬೂಲದಿಂದ ಗಾಯವನ್ನು ಒತ್ತಿ ಬಿಗಿದು ಕಟ್ಟಿ ಹೊತ್ತು ನಡೆದರು ಎಂದು ನಂಜುಂಡ ಕವಿ 'ರಾಮನಾಥ ಚರಿತೆ'ಯಲ್ಲಿ ಹೇಳುತ್ತಾನೆ.[26] ದೇವರಿಗೆ ನಡೆಸುವ ಅನೇಕ ಸೇವೆಗಳಲ್ಲಿ ತಾಂಬೂಲ ಸೇವೆಯೂ ಒಂದು. ಪುರಂದರದಾಸರು ದೇವಪೂಜೆಯ ಸಮಯದಲ್ಲಿ, ಶ್ರೀ ಹರಿಯನ್ನು ಉದ್ದೇಶಿಸಿ "ತಾಂಬೂಲವ ಕೊಳ್ಳೂ ಅಂಬುಜಾಕ್ಷಿ ಮೋದದಿಂ ಮಡಚಿ ಕೊಡುತ್ತಾಳೆ" ಎಂದು, "ಚಕ್ಕಡಿ ಅಡಿಕೆ ಕೇದಿಗೆ ಕಾಜ್ ಕೂಡಿದ ಏಲಕ್ಕಿ ಜಾಯಿಕಾಯಿ ಲವಂಗ ಜಾಯಪತ್ರೆ ಮೌಕ್ತಿಕದ ಸುಣ್ಣ ಕರ್ಪೂರ ಬೆರೆಸಿ ತಾರುಕ್ಮಿಣಿ ದೇವಿ ಸಮರ್ಪಿಸುತ್ತಾಳೆ" ಎಂದು ಹೇಳುತ್ತಾರೆ.[27]

ತಾಂಬೂಲ ವರ್ಜರು

ಕಳಲೆವೀರರಾಜನ 'ಸಕಲ ವೈದ್ಯ ಸಂಹಿತಾ ಸಾರಾರ್ಣವ'ವು ಯಾವ ರೋಗದವರು ತಾಂಬೂಲವನ್ನು ಉಪಯೋಗಿಸಬಾರದೆಂದು ತಿಳಿಸಿರುವುದು. ಬಡವಾದ ದೇಹದವರು, ಕ್ಷಯ ರೋಗದವರೂ, ಜ್ವರವುಳ್ಳವರೂ. ಮೂಗಿನಲ್ಲಿ ರಕ್ತ ಬೀಳುವ ರೋಗದವರೂ, ಮೂರ್ಛೆರೋಗ, ಮೇಹರೋಗ, ರೋಗ ಕಾಣಿಸಿದ ಪ್ರಥಮ ಕಾಲದಲ್ಲಿಯೂ, ಪಾಂಡುರೋಗವುಳ್ಳವರೂ, ಹಸಿವಿನಿಂದ ಕಂಗೆಟ್ಟಿರುವವರೂ. ತಾಂಬೂಲವನ್ನು ಉಪಯೋಗಿಸಬಾರದೆಂದು ತಿಳಿಸಿರುವುದು[28].

ತಾಂಬೂಲವನ್ನು ಸಿದ್ಧಪಡಿಸುವಾಗ ಇರಬೇಕಾದ ಎಚ್ಚರಿಕೆಯನ್ನು ನಿಜಗುಣರು 'ವಿವೇಕ ಚಿಂತಾಮಣಿ'ಯಲ್ಲಿ ಹೇಳಿದ್ದಾರೆ. ಅಡಕೆಯು ನೋಡದೆ ಎಲೆಯು ತೊಳೆಯದೆ, ಸುಣ್ಣವನ್ನು ಶೋಧಿಸದೆ ತಾಂಬೂಲಕ್ಕೆ ಉಪಯೋಗಿಸಬಾರದೆಂದು ತಿಳಿಸಿರುವರು. ವೀಳ್ಯದೆಲೆ ಮತ್ತು ಅದರ ಪರಿಕರಗಳನ್ನು ಇಡುವುದಕ್ಕೆ ಸಂಚಿ ಅಥವಾ ಹಡಪ ಎಂದೂ ಅದನ್ನು ಹಿಡಿದಿರುವವನಿಗೆ ಸಂಚಿಯವ ಅಥವಾ ಹಡಪಿಗನೆಂದು[29] ಹೆಸರು. (ಹದಿಬದೆಯ ಧರ್ಮದ ಸಂಚಿಯ ಹೊನ್ನಮ್ಮನನ್ನು ನೆನೆಯಬಹುದು) "ಸಂಚಿಯಿಲ್ಲದ ವೀಳೆ ಮಂಚವಿಲ್ಲದ ನಿದ್ರೆ ಕಿಲುಬಿದ ಕಂಚಿನಂತಕ್ಕು"[30] ಎಂದು ಹೇಳಿದ ಸರ್ವಜ್ಞ, ಸಂಚಿಯ ಸ್ಥಾನವನ್ನು ಸ್ಪಷ್ಟಪಡಿಸಿದ್ದಾನೆ. ಸಂಚಿ ಇಲ್ಲದವರು ತಮ್ಮ ಉತ್ತರೀಯದ ಅಥವಾ ಯಾವುದಾದರೂ ಬಟ್ಟೆಯ ತುದಿಯಲ್ಲಿ ತಾಂಬೂಲದ ಪರಿಕರಗಳನ್ನು ಕಟ್ಟಿರುವರು. ನಾರಾಯಣಪ್ಪ ಇಂತಹ ಒಂದು ಚಿತ್ರವನ್ನು ಕೊಡುತ್ತಾನೆ. "…. ದೌತೌಂಕುಶದೊಳಗೆ (ಬಿಳಿಯ ಬಟ್ಟೆಯೊಳಗೆ) ತುಂಬುಲವ ಕಟ್ಟಿದ ರಕುಟುಪಾಧ್ಯರ (ರಕಟು-ಹರಕು ಚಿಂದಿ) ಮೋರೆಯನು".[31] ಹಳ್ಳಿಗಳ ಕಡೆ ಈಗಲೂ ಸಾಮಾನ್ಯವಾಗಿ ಹೆಂಗಸರೂ ಗಂಡಸರೂ ಸೆರಗಿನ ತುದಿಯಲ್ಲಿ ಎಲೆ ಅಡಿಕೆಯನ್ನು ಕಟ್ಟಿರುವುದನ್ನು ಕಾಣಬಹುದು.

ತಾಂಬೂಲ ಹಾಕುವವರ ಕೆಲವು ಚಿತ್ರ ವಿಚಿತ್ರ ಪದ್ಧತಿಗಳನ್ನೂ, ಅವರ ಹಾವ ಭಾವಗಳನ್ನು ನಮ್ಮ ಕವಿಗಳು ನೈಜವಾಗಿ ಚಿತ್ರಿಸಿದ್ದಾರೆ. ತಾಂಬೂಲ ಹಾಕುವ ಜನ ಸಾಮಾನ್ಯವಾಗಿ ಬಾಯಲ್ಲಿ ತಾಂಬೂಲದ ರಸ ತುಂಬಿಕೊಂಡು, ಮಾತನಾಡುವ ಸಮಯ ಬಂದಾಗ ತಂಬುಲ(ಳ) ಉಗುಳಿ ಮಾತನಾಡುವರು. "ಉಗುಳಿದನು ತಂಬುಲವ ನಾನೇ ಹೋಗುವೆನಹಿತ ರಣಕೆನುತ".[32] ನೃತ್ಯ, ನಾಟಕ ಮುಂತಾದ ಮನೋರಂಜನೆಯಲ್ಲಿ ರಾಜರು, ಜನರ ಮಧ್ಯೆ ಮಧ್ಯೆ ತಾಂಬೂಲ ಹಾಕಿಕೊಂಡು ಸವಿದು, ಆಗಾಗ ತಾಂಬೂಲ ಉಗುಳಿ ನೀರು ಕುಡಿದು ಬಾಯಿ ಶುದ್ಧಿ ಮಾಡಿಕೊಳ್ಳುವುದು ಒಂದು ಸಾಮಾನ್ಯ ದೃಶ್ಯವಾಗಿತ್ತೆಂದು ತೋರುತ್ತದೆ. "ಗಿಂಡಿಯ ನೀರ ಮುಕ್ಕಳಿಸಿಯುಗಳುತೋಜೆಗೊಂಡು ವೀಳೆಯವ ಕೈಗೊಳುತ ಮಂಡಲಿಕರ ಮುಂದೆಮೊಡೆಯನೋಳ್ಪನು ತನ್ನ ಮಂಡೆಯೊಲೆದು ಪಾತ್ರಗಳನು"[33] "ನಟನಟಿಯೆಂಬ ಬೆಳ್ಳಿಲೆಯ ಫಳಿಗೆಯನು ಕಟಿಕಟಿಯೆನೆ ಕಚ್ಚಿ ಕೊಳುತ ನಟನವ ನೋಡಿ ನಗುತ ನೋಡುವನು ರಾಯ…."[34] ಕೂರುಗುರಿಂದ ವೀಳ್ಯದೆಲೆಯ ನಾರು ತೆಗೆದು, ಸೀಳಿ, ಸುಣ್ಣವನ್ನು ಎಲೆಗೆ ಸವರಿ, ಅದನ್ನು ಸುರುಳಿ ಸುತ್ತಿ ಬೆರಳಸಂದಿಯಲ್ಲಿ ಸಿಕ್ಕಿಸಿಕೊಂಡು ಅದನ್ನು ಬೇಕೆಂದಾಗ ಕಟಕಟನೆ ಕಚ್ಚಿ ತಿನ್ನುವ[35] ಸಂದರ್ಭಗಳನ್ನು ವಿದೇಶಿ ಪ್ರವಾಸಿಗರೂ ಗಮನಿಸಿದ್ದಾರೆ.[36]

ತಾಂಬೂಲದಲ್ಲಿ ಅದರ ರಸವೇ ಜೀವಾಳವೆಂದು ಕಾಣುತ್ತದೆ. ಆ ರಸವನ್ನು ಬಾಯಲ್ಲಿ ಸದಾ ತುಂಬಿಕೊಂಡಿದ್ದರೆ ಅವರಿಗೆ ಅದರ ಆನಂದ, ತಾಂಬೂಲದ ರಸ ಗಂಟಲಿಗಿಳಿದಾಗ ಅದೆಂತಹ ಶೋಭೆ, "ಬಿಂಗದ ಕುಪ್ಪಿಗೆಗಿಳಿವ ಕುಂಕುಮದ ನಿರಂಗದಿ ತಾಂಬೂಲ ರಸವನುಂಗುವಾಗಿದಿರಿಗೆ ತೋರುವುದರಸನ ನುಂಗೊರಳೇನ ಬಣ್ಣಿಪೆನು".[37] ತಾಂಬೂಲ ಸವಿಯುವಾಗ ಒಮ್ಮೊಮ್ಮೆ ತುಟಿಯ ಮಧ್ಯದಿಂದ ರಸ ಒಸರಿ, ಬಾಯಿಬಿಟ್ಟರೆ ಸೂಸುತ್ತದೆ. 'ಗದುಗಿನ ಭಾರತ'ದಲ್ಲಿ ನಾರಾಣಪ್ಪ ಇಂತಹ ಒಂದು ಚಿತ್ರವನ್ನು ಕೊಟ್ಟಿದ್ದಾನೆ. "ಅಳಲುವೀ ಧೃತರಾಷ್ಟ್ರ ನುರುಕಳಕಳವ ಕೇಳಿದು ಕರ್ಣ ಶಕುನಿಗಳುಲಿದು ತಂಬೂಲ ಸೊಸೆನಕ್ಕರು ಹೊಯ್ದು ಕರತಳವ".[38] ಅಬ್ದುಲ್‌ರಜಾಕನು ಈ ತಾಂಬೂಲದ ರಸವನ್ನು ಕುರಿತು ರಸವನ್ನು ಒಮ್ಮೊಮ್ಮೆ ಉಗಿಯುತ್ತಾರೆ. ಅದು ಕೆಂಪುಬಣ್ಣಕ್ಕಿರುತ್ತದೆ. ವೀಳ್ಯವನ್ನು ಹಾಕಿಕೊಂಡಾಗ ಮುಖವು ಬಣ್ಣವೇರಿ ತೇಜಸ್ಸು ಕಾಣಿಸುತ್ತದೆ. ದಾಕ್ಷಾರಸವನ್ನು ಕುಡಿದರೆ ಬರುವಂಥ ಮತ್ತು ಬರುತ್ತದೆ ಎಂದು ಸಾರವತ್ತಾಗಿ ವರ್ಣಿಸಿರುವನು.[39]

ತಾಂಬೂಲ ಸೇವನೆಯಲ್ಲಿ ನಲ್ಲನಲ್ಲೆಯರ ರಸಿಕತೆಯನ್ನು ನಮ್ಮ ಕವಿಗಳು ವಿವರಿಸಿದ್ದಾರೆ. ಚಿಂತೆಯಿಂದ ಕೂಡಿದ ರಾಣಿ ರತ್ನಾಜಿಯನ್ನು ಸಂತೈಸುವಾಗ ಕಂಪಿಲ, ಆಕೆಯ ನುಣ್ಗಲ್ಲವ ಪಿಡಿದು, ಬಾಯೊಳು ಬಾಯನಿಟ್ಟು

ಕುಡುಕುದಂಬುಲವಿಕ್ಕಿ (ಕುಡುಕುದಂಬಲ?) ಕರುಳ ನೇವರಿಸಿದನು. ಊಟದಲ್ಲಿ ಗಂಡನ ಎಂಜಲನ್ನು ಹೆಂಡತಿ ತಿನ್ನುವ ಒಂದು ಪದ್ಧತಿ ಮದುವೆಯಿಂದಲೇ ಪ್ರಾರಂಭವಾಗಿ ಬೆಳೆದುಬಂದಿದೆ. ಹಾಗೆಯೇ ತಾಂಬೂಲದಲ್ಲು ಎಂಜಲು ತಿನ್ನುವ ಪದ್ಧತಿ ಇದ್ದಿರಬೇಕೆಂದು ಕಂಡುಬರುತ್ತದೆ. ಈ ನಲ್ಲನಲ್ಲೆಯರ ಪ್ರೇಮದ ಪರಮಾವಧಿ ಒಬ್ಬರೊಬ್ಬರ ಬಾಯಿಂದ ತಾಂಬೂಲವನ್ನು ಕೊಳ್ಳುವರೆಗೂ ಹೋಗಿರುತ್ತದೆ. ಭರತೇಶನ ಬಳಿಯಲ್ಲಿದ್ದ ಅವನ ಹೆಂಡತಿಯರು ಮಡಿ ಮಡಿದೆಲೆಯ ಘಳಿಗೆಯ ನಲ್ಲನ ಕೈಗೆ ಕೊಡುತ ನಡೆದರು ಕೆಲಬರು ಕೊಡದೆ ಕೆಲಬರು ಮತ್ತವನ ಬಾಯ್ದೆರೆ ಗೂಡುತಡಿಯಿಟ್ಟರಧಿಕ ಲೀಲೆಯೊಳು. ಬಾಯ್ದೆರದೆಲೆಯ ಘಳಿಗೆಯ ಕೆಲಬರೂಡಿ ಕೆಲರವನ ಬಾಯ್ದೆರೆದರ್ಧ ಘಳಿಗೆಯ ಕೊಟ್ಟರ್ಧವನೊಯ್ದು ಕೊಂಬರು ತಮ್ಮ ಬಾಯ್ಗೆ ಎಂಬುದಾಗಿ 'ಭರತೇಶ ವೈಭವ'ದಲ್ಲಿ ತಿಳಿಸಿರುತ್ತಾರೆ.[40]

ಜನರು ತಮ್ಮ ದೈನಂದಿನ ಜೀವನದಲ್ಲಿ ಊಟ ತಿಂಡಿಗಳಿಗೆಂದು ಹೇಗೆ ಹಣವನ್ನು ಗೊತ್ತುಪಡಿಸುತ್ತಿದ್ದರೋ ಹಾಗೆ ತಾಂಬೂಲದ ಖರ್ಚಿಗೆಂದು ಸ್ವಲ್ಪ ಹಣವನ್ನು ತಮ್ಮ ಆದಾಯದಲ್ಲಿ ತೆಗೆದಿಡುತ್ತಿದ್ದರು. ಬೊಂಬೆಯ ಲಕ್ಕನ 'ಹರಿಶ್ಚಂದ್ರ ಸಾಂಗತ್ಯ'ದಲ್ಲಿ ಹರಿಶ್ಚಂದ್ರ ತನ್ನ ಪತ್ನಿ ಪುತ್ರರನ್ನು ಮಾರಿ ಒಡೆಯನ ಋಣ ತೀರಿತೆಂದು ಭಾವಿಸಿ ಹಣವನ್ನು ನಕ್ಷತ್ರಿಕನ ಕೈಗೆ ಕೊಟ್ಟಾಗ ಅವನು ಹೇಳುವುದೇನು? "ಕೊಟ್ಟವೆ ನಾಲ್ವತ್ತೆಂಟು ಸಾವಿರವೆನೆ ದುಷ್ಟಮುನಿಗೆ ಬಂದಿತಾಗಿ ಇಷ್ಟು ದಿನ ನನ್ನ ಊಟ ವೀಳ್ಯಕೆ ಸರಿಕೊಟ್ಟುದಿಲ್ಲ ಸಾಲಕೆಂದು".[41] ನೀನು ಈಗ ಕೊಟ್ಟಿದ್ದು ನನ್ನ ಊಟ ವೀಳ್ಯದ ಖರ್ಚಿಗಾಯಿತು ಎಂಬ ಹೇಳಿಕೆ ಅತ್ಯಂತ ಕುತೂಹಲಕಾರಿಯಾಗಿದೆ.

ಸಮಾಜದಲ್ಲಿ ತಾಂಬೂಲ ತನ್ನದೇ ಆದ ಸ್ಥಾನಮಾನವನ್ನು ಘನತೆ ಗೌರವಗಳನ್ನು ಬೆಳೆಸಿಕೊಂಡು ಬಂದಿದೆ. ತಾಂಬೂಲ ಅನ್ನುವುದರ ಅರ್ಥ ವ್ಯಾಪ್ತಿ ಬರಬರುತ್ತ ಕೇವಲ ವಿಸ್ತಾರಗೊಂಡು ಅದು ಜನರು ಬಹಳವಾಗಿ ಉಪಯೋಗಿಸುವ ಒಂದು ವಸ್ತು ಅನ್ನುವುದಕ್ಕಿಂತ ಹಿರಿದಾದ ಅರ್ಥವನ್ನು ಬೆಳೆಸಿಕೊಂಡಿದೆ. ದೊಡ್ಡವರ ಜೊತೆಯಲ್ಲಿ ಕುಳಿತು ತಾಂಬೂಲ ಹಾಕುವ ಒಂದು ಅವಕಾಶ ವ್ಯಕ್ತಿಗೆ ದೊರಕಿದರೆ ಅದು ಒಂದು ಅಪೂರ್ವ ಅವಕಾಶ ಮತ್ತು ಅದು ಸಮಾಜದಲ್ಲಿ ಅವರು ಗಳಿಸಿರುವ ಸ್ಥಾನದ ಮಹತ್ವವನ್ನು ತಿಳಿಸುತ್ತದೆ. ವಿಜಯನಗರದಲ್ಲಿ ಜಟ್ಟಿಗಳಿಗೆ, ದೇವದಾಸಿಯರಿಗೆ ಎಂತಹ ಗೌರವವಿತ್ತು ಎಂಬುದನ್ನು ಹೇಳುವಾಗ ಪ್ರವಾಸಿ ಪಾಯೇಸ್ ಈ ಸ್ತ್ರೀಯರು ರಾಜನ ಅಂತಃಪುರದ ಸ್ತ್ರೀಯರ ಬಳಿಗೆ ಹೋಗಬಹುದಲ್ಲದೆ, ಅವರೊಡನೆ ಕುಳಿತು ಎಲೆ ಅಡಿಕೆ ಸೇವಿಸಬಹುದು, ಬೇರೆ ಯಾರಿಗೂ, ಅವರು ಎಷ್ಟೇ ದೊಡ್ಡವರಾದರೂ ಇಂಥ ಅವಕಾಶ ಸಿಕ್ಕುವುದಿಲ್ಲ ಎಂದು ಹೇಳುವನು[42].

ಈ ರೀತಿಯಲ್ಲಿ ತಾಂಬೂಲವು ಪ್ರಾಚೀನ ಕಾಲದಿಂದಲೂ ಶ್ರೀಮಂತಿಕೆಯ, ರಸಿಕತೆಯ ಪೂಜನೀಯ ವಸ್ತುವಾಗಿ ಉಪಯೋಗಿಸುತ್ತಿರುವುದನ್ನು ಕಾಣಬಹುದಾಗಿದೆ.

ಅಡಿ ಟಿಪ್ಪಣಿಗಳು

1. ಪಾಲ್ಕುರಿಕೆ ಸೋಮನಾಥನ *ಸೋಮೇಶ್ವರ ಶತಕ*, (ಸಂ.) ಬೆಳ್ಳಾವೆ ವೆಂಕಟನಾರಾಯಣಪ್ಪ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 1970, ಪ. 21.
2. ಕನಕದಾಸರ *ಮೋಹನ ತರಂಗಿಣಿ*, (ಸಂ.) ಆರ್.ಸಿ. ಹಿರೇಮಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, 1973. 3–13, ನೋಡಿ *ಬೈರವೇಶ್ವರ ಕಾವ್ಯ*, 24–81.
3. ನಂಜುಂಡಕವಿಯ *ರಾಮನಾಥ ಚರಿತೆ, ಭಾಗ. 1–2*, (ಸಂ.) ಹೆಚ್. ದೇವಿರಪ್ಪ, ಮೈಸೂರು ವಿಶ್ವವಿದ್ಯಾಲಯ, ಮೈಸೂರು. 1959–64, 4–111.
4. ಡಾ॥ ಜಿ. ಶಿವರುದ್ರಪ್ಪ, *ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ* ಭಾಗ 1. ಸಂ. 4, ಪು. 25.
5. ನಂಜುಂಡಕವಿಯ *ಪೂರ್ವೋಕ್ತ*, 11–57.

6. ಪಾಲ್ಕುರಿಕೆ ಸೋಮನಾಥನ *ಪೂರ್ವೋಕ್ತ,* ಪ. 21.
7. ನಂಜುಂಡಕವಿಯ *ಪೂರ್ವೋಕ್ತ,* 41–61 ; ಭೀಮಕವಿಯ *ಬಸವಪುರಾಣ* (ಸಂ.) ಇಷ್ಟಲಿಂಗಪ್ಪ ಸಿದ್ದಪ್ಪ ಪಾವಟೆ ಮತ್ತು ಇತರರು, ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ, ಧಾರವಾಡ, 1969, 61–6. ವೀರದಂಬುಲ.
8. ನಂಜುಂಡಕವಿಯ *ಪೂರ್ವೋಕ್ತ,* 21–37.
9. ರತ್ನಾಕರವರ್ಣಿಯ *ಭರತೇಶ ವೈಭವ,* (ಸಂ) ಪಿ. ಮಂಗೇಶರಾವ್, ಜೈನ ಯುವಕ ಸಂಘ, ಪುತ್ತೂರು, 1923, 71–15.
10. ನಾಗೇಗೌಡ. ಹೆಚ್.ಎಲ್., *ಪ್ರವಾಸಿ ಕಂಡ ಇಂಡಿಯಾ,* ಸಂ. 2, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ಸಂ. 2. ಪು. 276.
11. ಅದೃಶ್ಯ ಕವಿಯ *ಪ್ರೌಢರಾಯನ ಕಾವ್ಯ,* (ಸಂ.) ಸುಬ್ರಹ್ಮಣ್ಯಶಾಸ್ತ್ರಿ ಮತ್ತು ಸಂ.ಶಿ. ಭೂಸನೂರ ಮಠ, ಮಿಂಚಿನಬಳ್ಳಿ ಕಾರ್ಯಾಲಯ, ಧಾರವಾಡ, 1957, 6–58.
12. *ಬೈರವೇಶ್ವರ ಕಾವ್ಯ,* ಪು. 174, ಪದ್ಯ 198; *ಗದುಗಿನ ಭಾರತ,* 7–16.
13. ನಾಗೇಗೌಡ. ಹೆಚ್.ಎಲ್., *ಪೂರ್ವೋಕ್ತ,* ಸಂ.2, ಪು. 162.
14. ಕೆಳದಿ ಬಸವರಾಜ ಸಂಕಲಿಸಿದ *ಶಿವತತ್ತ್ವರತ್ನಾಕರ,* ಸಂ. 1, 2, (ಸಂ.) ಮಲ್ಲೇಪುರಂ ಜಿ. ವೆಂಕಟೇಶ, ಪ್ರಸರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 1999, ಪು. 528.
15. *ಅದೇ.*
16. ಕಲ್ಯಾಣ ಚಾಲುಕ್ಯ ಚಕ್ರವರ್ತಿ ಸರ್ವಜ್ಞ ಸೋಮೇಶ್ವರ ವಿರಚಿತ *ಮಾನಸೋಲ್ಲಾಸ,* (ಪ್ರ.ಸಂ.) ಎಂ.ಎಂ. ಕಲಬುರ್ಗಿ, ಕನ್ನಡ ಅನುವಾದ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, 1998, ಪು. 298.
17. *ಅದೇ.*
18. ಕೆಳದಿ ಬಸವರಾಜ ಸಂಕಲಿಸಿದ *ಪೂರ್ವೋಕ್ತ,* ಪು. 528.
19. *ಅದೇ.*
20. *ಅದೇ.*
21. *ಅದೇ.* ಪು. 529.
22. *ಅದೇ.*
23. *ಅದೇ.*
24. *ಅದೇ.*
25. ನಾಗೇಗೌಡ. ಹೆಚ್.ಎಲ್., *ಪೂರ್ವೋಕ್ತ,* ಸಂ. 2, ಪು. 162.
26. ನಂಜುಂಡಕವಿಯ *ಪೂರ್ವೋಕ್ತ,* 27–127.
27. ಪುರಂದರದಾಸರು, *ಪುರಂದರದಾಸರ ಕೀರ್ತನೆಗಳು,* ಉಡುಪಿ, 1966, 3–84.
28. ಕಳಲೆ ವೀರರಾಜೇಂದ್ರ, *ಸಕಲವೈದ್ಯ ಸಂಹಿತ ಸಾರಾರ್ಣವ,* ಮೈಸೂರು, 1945, ಪು. 53.
29. ಹಡಪ–ಹಡಪಿಗ : "ಬಿತ್ತರದ ತಾಂಬೂಲ ಸಂಗ್ರಹಂ ಅಕ್ಕುಂ" (ಮಂಗರಾಜ, ಪು. 265 ಉಲ್ಲೇಖ, *ಕನ್ನಡ ನಿಘಂಟು,* ಪು. 709) ವಿರಕ್ತ ತೋಂಟದಾರ್ಯನ *ಸಿದ್ದೇಶ್ವರ ಪುರಾಣ,* (ಸಂ.) ಪಿ.ಆರ್. ಕರಿಬಸವಶಾಸ್ತ್ರಿ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, 1960, 2–58. "ಆರೋಗಣೆಯ ಮಾಡಿ ಯಡಕೆಯ ತೆಗೆದು ವೀಳಯಂಗೊಳ್ಳೋಳ್ವಲ್ಲಿ ಹಡಪದೊಳಗೆ" ನೋಡಿ; ಲಕ್ಕಣ್ಣದಂಡೇಶ ವಿರಚಿತ *ಶಿವತತ್ತ್ವ ಚಿಂತಾಮಣಿ,* (ಸಂ.) ಎಸ್. ಬಸಪ್ಪ, ಪ್ರಾಚ್ಯ ವಿದ್ಯಾ ಸಂಶೋಧನಾಲಯ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, 1966, 13–7: ಸಂಚಿ; ನ್ಯೂನಿಜನು ಸಹಗಮನದ ವಿಚಾರವನ್ನು ಹೇಳುವಾಗ, ಅಗ್ನಿಗೆ ಬೀಳುವುದಕ್ಕೆ ಮುಂಚೆ, ಆ ಸತಿಯಾಗಲಿರುವ ಹೆಂಗಸರು, ಅಗ್ನಿಕುಂಡಕ್ಕೆ ವೀಳದೆಲೆ ಇಡುವ ಚೀಲವನ್ನು (ಸಂಚಿ) ಕನ್ನಡಿ, ಬಾಚಣಿಗೆ ಮುಂತಾದವುಗಳನ್ನು ಎಸೆದಳೆಂದು ಹೇಳುವನು. ನೋಡಿ. ನೂನಿಜ್‌ನ *ಎ ಫರ್‌ಗಾಟನ್ ಎಂಪೈರ್,* ಪು. 373.

30. *ಸರ್ವಜ್ಞನ ವಚನಗಳು*, 1733; ಸಂಚಿಯ ಅವಶ್ಯಕತೆಯನ್ನು ಹೇಳಿದ ಸರ್ವಜ್ಞ ಇನ್ನೊಂದು ವಚನದಲ್ಲಿ' "ಸುಣ್ಣವಿಲ್ಲದ ವೀಳೆ.... ಮಳಲೊಳಗೆ ಎಣ್ಣೆ ಹೊಯ್ದಂತೆ". (*ಸರ್ವಜ್ಞನ ವಚನಗಳು*, 1721) ಎಂದು ಸುಣ್ಣದ ಅಗತ್ಯವನ್ನು ಹೇಳುತ್ತಾನೆ; ನೋಡಿ: ಪುರಂದರದಾಸರು, *ಪುರಂದರದಾಸರ ಕೀರ್ತನೆಗಳು*, 2–84 (ಸುಣ್ಣವಿಲ್ಲ ಭಾಗವತರೆ ವೀಳ್ಯ ಹಾಕುವವನಲ್ಲ ವ್ಯಾಧಿಸ್ಥ ಗಂಡಸು...").
31. *ಗದುಗಿನ ಭಾರತ*, 18–8.
32. ಕುಮಾರ ವಾಲ್ಮೀಕಿಯ *(ನರಹರಿ) ತೊರವೆಯ ರಾಮಾಯಣ*, (ಸಂ.) ಹೊ. ರಾಮಸ್ವಾಮಿಶಾಸ್ತ್ರಿ, ಬೆಂಗಳೂರು 1870, 2–20–1.
33. ರತ್ನಾಕರವರ್ಣಿಯ ಪೂರ್ವೋಕ್ತ, 12–94.
34. ಅದೇ, 12–95.
35. ಕನಕದಾಸರ *ಮೋಹನ ತರಂಗಿಣಿ*, (ಸಂ.) ಆರ್.ಸಿ. ಹಿರೇಮಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, 1973, 16–32–34.
36. "ವೀಳೆಯದೆಲೆಗೆ ಸುಣ್ಣವನ್ನು ಹಚ್ಚಿ ಸುರುಳಿ ಮಾಡಿ ಬಾಯಲ್ಲಿಟ್ಟು ಅಗಿಯುತ್ತಾರೆ. ಒಂದೊಂದು ಸಲ ನಾಲ್ಕಾರು ಎಲೆಗಳನ್ನು ಬಾಯಲ್ಲಿ ಹಾಕಿಕೊಂಡು ಅಗಿಯುವುದುಂಟು" (ನಾಗೇಗೌಡ. ಹೆಚ್.ಎಲ್., *ಪೂರ್ವೋಕ್ತ*, ಪು. 162).
37. ರತ್ನಾಕರವರ್ಣಿಯ *ಪೂರ್ವೋಕ್ತ*, 6–55.
38. ಗುಬ್ಬಿ ಮಲ್ಲಣ್ಣನ *ಗಣಭಾಷಿತ ರತ್ನಮಾಲೆ*, (ಸಂ.) ಪ್ರಭುಸ್ವಾಮಿಗಳು, ಶ್ರೀ ಬಾಲಲೀಲಾ ಮಹಾಂತ ಶಿವಯೋಗೀಶ್ವರ ಗ್ರಂಥಮಾಲೆ, ಧಾರವಾಡ, 1948, 17–8.
39. ನಾಗೇಗೌಡ. ಹೆಚ್.ಎಲ್., *ಪೂರ್ವೋಕ್ತ*, ಪು. 162.
40. ರತ್ನಾಕರವರ್ಣಿಯ *ಪೂರ್ವೋಕ್ತ*, 15–10.
41. ಎನ್. ಬಸವಾರಾಧ್ಯ (ಸಂ.) ಬೊಂಬೆಯ ಲಕ್ಕನ *ಹರಿಶ್ಚಂದ್ರ ಸಾಂಗತ್ಯ*, 3–113.
42. ರಾಬರ್ಟ್ ಸಿವೆಲ್, *ಎ ಫರ್‌ಗಾಟನ್ ಎಂಪೈರ್*, ಪು. 234.

34. ಹಿರೇಗುತ್ತಿ ಭೋಜರ ಆಳ್ವಿಕೆ ಮತ್ತು ನಾಡಗುತ್ತಿಯ ರಾಜಾ ಹರಿಹರನ ವಿದ್ಯಾನಗರಿ ರಾಜ್ಯ ಸ್ಥಾಪನೆ

ಗಣಪತಿ ಕೆರೆಮನೆ

ಉತ್ತರ ಕನ್ನಡ ಜಿಲ್ಲೆಯ ಹಿರೇಗುತ್ತಿಯ 'ಬ್ರಹ್ಮಜಟಕ ದೇವಾಲಯ, ಶ್ರೀ ಮಹಾಲಿಂಗೇಶ್ವರ ದೇವಾಲಯ ಮತ್ತು ಭೋಜರ ಬೌದ್ಧಬಿಕ್ಕು ಅನ್ನಧಾನ ಧರ್ಮಶಾಲೆ ಇವುಗಳು 1500 ವರ್ಷಗಳಷ್ಟು ಪುರಾತನವಾದವುಗಳೆಂದು ಇಲ್ಲಿರುವ ಶಿಲಾಶಾಸನ ಮತ್ತು ತಾಮ್ರಶಾಸನಗಳಿಂದ ಗುರುತಿಸಿಕೊಂಡು ರಾಜ್ಯ ಐತಿಹಾಸಿಕ ಸ್ಮಾರಕಗಳೆನಿಸಿಕೊಂಡಿವೆ.

ಶ್ರೀ ಮಹಾಲಿಂಗೇಶ್ವರ ದೇವಾಲಯದ ಆವರಣದಲ್ಲಿ ಸ್ಥಾಪಿತ ಶಿಲಾಶಾಸನವು ವಿಜಯನಗರದ ಸಾಮ್ರಾಟ ಪ್ರತಾಪ ದೇವರಾಯನ ಶಾಸನವಾಗಿದೆ. ಇವರ ಅಜ್ಜಂದಿರಾದ ಹರಿಹರ ಮತ್ತು ನಾಲ್ಕು ಸಹೋದರರ ಒಗ್ಗಟ್ಟಿನ ನೀತಿ, ಹೋರಾಟದ ಜಾಣ್ಮೆ, ಧೈರ್ಯ, ಸಾಹಸಗಳಿಂದ ಅಂದು ಅಲ್ಲಾವುದ್ದೀನ ಖಿಲ್ಜಿ ಮಲ್ಲಿಕಾಫರ್ ತುಘಲಕ್ ಮಹಮ್ಮದರಂತಹ ಮೂರ್ತಿಭಂಜಕ ವಿನಾಶಕಾರಿ ದಾಳಿಕಾರರನ್ನು ದಕ್ಷಿಣ ಭಾರತದಿಂದ ಹೊಡೆದಟ್ಟಿದ್ದರ ಐತಿಹಾಸಿಕ ಮೂಲ ಸ್ಥಳವು ಹಿರೇಗುತ್ತಿ ನಾಡಗುತ್ತಿ ರಾಜ್ಯವಾಗಿದೆ ಮತ್ತು ಇದು ಚಿಕ್ಕಗುತ್ತಿಯ ಹರಿಹರನ ಚರಿತ್ರೆಯಾಗಿದೆ.

1. ಹಿರೇಗುತ್ತಿ ಭೋಜರ ಇತಿಹಾಸ ತಿಳಿಸುವ ತಾಮ್ರ ಪತ್ರವು ರಾಷ್ಟ್ರೀಯ ದಾಖಲೆ ಸೇರಿರುತ್ತದೆ. ಇದು ಹಿರೇಗುತ್ತಿಯ ದಿ॥ ಉದಂಡ ಬೊಮ್ಮಯ್ಯ ಗಾಂವಕರರವರ ಪೂರ್ವಜರಿಂದ, ಮೂರನೆಯ ಶತಮಾನದಿಂದ ಸಂರಕ್ಷಿಸಿಕೊಂಡು ಬಂದಿರುತ್ತದೆ. ಅಂದಿನ ಭೋಜ ಸಾಮ್ರಾಟ ಅಸಂಕಿತ ವರ್ಮನ್ ಕೊಟ್ಟಿರುವ ಮೂರು ತಾಮ್ರಶಾಸನ ಫಲಕಗಳು ಮತ್ತು ಅದಕ್ಕೆ ಸಂಬಂಧಿಸಿದಂತೆ ಇಲ್ಲಿರುವ ಬೌದ್ದಬಿಕ್ಕು ಅನ್ನಧಾನ ಧರ್ಮಶಾಲೆ ಮತ್ತು ದತ್ತಿಬಿಟ್ಟಿರುವ ಭೂಮಿವರ್ಣನೆಯು ಈ ತಾಮ್ರ ಪತ್ರದಲ್ಲಿದೆ.

2. ವಿಜಯನಗರ ಸಾಮ್ರಾಟ ಪ್ರತಾಪ ದೇವರಾಯನು ಸ್ಥಾಪಿಸಿದ ದಾನ ಶಾಸನ ಶಿಲೆ ಇಲ್ಲಿದೆ. ಹರಿಹರನ ಮೊದಲಿನ ರಾಜ್ಯ (1335) ನಾಡಗುತ್ತಿ–12'ರ ಅರಮನೆಯನ್ನು ಮತ್ತು ಚಿಕ್ಕಗುತ್ತಿಯಲ್ಲಿ ಹರಿಹರನ ಕುಟುಂಬವು ಬಾಳಿದ ಮನೆಯನ್ನು ಅವರ ರಾಜಗುರುಗಳಾದ ವಿದ್ಯಾತೀರ್ಥರಿಗೆ ದಾನಮಾಡಿದ್ದನ್ನು ದಾಖಲಿಸಿದ್ದಂತ ಶಾಸನ ಶಿಲೆಯನ್ನು ನಾಡಗುತ್ತಿ ಅರಮನೆಯ ದೇವಾಲಯದ ಆವರಣದಲ್ಲಿ ಸ್ಥಾಪಿಸಲಾಗಿದೆ.

3. ಚಿಕ್ಕಗುತ್ತಿಯ ಶ್ರೀ ಆದಿನಾಥ ತೀರ್ಥಂಕರ ಕ್ಷೇತ್ರದಲ್ಲಿ ಸಲ್ಲೇಖನ ಮರಣ ವ್ರತಾಚರಣೆಯಿಂದ ನಿರ್ವಾಣ ಹೊಂದಿದ್ದರ ಕುರಿತು ಲಭ್ಯವಿರುವ ನಾಲ್ಕು ಶಿಲಾಫಲಕಗಳು ಆಧಾರವಾಗಿವೆ.

4. ಶಿವಪುರವನ್ನಾಳಿದ ಭೋಜರ ಸಾಮಂತ ಅರಸ ಸ್ಥಾನಿಕರಾಜನು ಹಿರೇಗುತ್ತಿ ಘಜನಿ (ಖಜಾನ) ಭೂಮಿಯನ್ನು ದಾನಮಾಡಿದ್ದರ ಬಗ್ಗೆ ಅರಗಾ ಶಾಸನಾಧಾರವಿರುತ್ತದೆ.

ಈ ಮೇಲಿನ ನಾಲ್ಕು ಮುಖ್ಯ ಆಧಾರಗಳಾದ ಶಿಲಾಶಾಸನಗಳು, ತಾಮ್ರಶಾಸನಗಳು, ಕರ್ನಾಟಕದ ಪುರಾತನ ಇತಿಹಾಸದ ಮೇಲೆ ಹೊಸಬೆಳಕುಚೆಲ್ಲಿ, ಅಧ್ಯಯನಕ್ಕೆ ಹೊಸ ಅಧ್ಯಾಯ ಹುಟ್ಟು ಹಾಕಿರುತ್ತದೆ.

ಮಹಾಲಿಂಗೇಶ್ವರ ದೇವಾಲಯ ಹಾಗೂ ನಾಡಗುತ್ತಿ ರಾಜ್ಯದ ಅರಮನೆ ಶಾಸನ

ಈ ದೇವಾಲಯವು 1500 ವರ್ಷಗಳಷ್ಟು ಪುರಾತನವಾದುದೆಂದು ಶಿಲ್ಪಶಾಸ್ತ್ರಜ್ಞರ ಲಿಖಿತ ಅಭಿಪ್ರಾಯವಿದೆ. ಸುಮಾರು 40 ವರ್ಷಗಳ ಹಿಂದೆ ಈ ದೇವಾಲಯದ ಮೂರು ದಿಕ್ಕಿಗೆ ಹಳೆಯದಾದ ಆದರೆ ಭದ್ರವಾದ ಛಾವಣಿಯ

ಊರಹಂಚಿನ ವಿಶಾಲ ಕಟ್ಟಡವಿತ್ತು. (ಈ ಕಟ್ಟಡದಲ್ಲಿ ಹಿರೇಗುತ್ತಿ ಪ್ರೌಢಶಾಲೆ ನಡೆಯುತಿತ್ತು) ಈ ಕಟ್ಟಡಕ್ಕೆ ತಾಗಿಕೊಂಡಂತೆ ಸಾಗುವ ಕಿರಿಯ ಅಗಲದ ರಸ್ತೆಯಿದ್ದು ರಸ್ತೆಯ ಇನ್ನೊಂದು ಪಕ್ಕದಲ್ಲಿ ಲ್ಯಾಟರೈಟ್ ಕಲ್ಲಿನಿಂದ ನಿರ್ಮಾಣವಾಗಿದ್ದ ಬಹು ಪುರಾತನ ಪುಷ್ಕರಣಿಯಿತ್ತು. ಇದು ದೇವಾಲಯ ಮತ್ತು ಬೌದ್ದ ಬಿಕ್ಷುಗಳಿಗೆ, ಧರ್ಮಶಾಲೆಗೆ ನೀರೊದಗಿಸುತ್ತಿರಬಹುದು. ಈ ದೇವಾಲಯದ ಆವರಣದಲ್ಲಿ ವಿಜಯನಗರ ಸಾಮ್ರಾಟ ಪ್ರತಾಪದೇವರಾಯನ ದಾನಶಾಸನ ಶಿಲೆಯಿದೆ. ಹಾಗೂ ಕೆಲವು ಶಿಲಾಶಾಸನ ಫಲಕಗಳಿವೆ. ಇಲ್ಲಿ ಸ್ಥಾಪಿತವಾಗಿರುವ ದಾನಶಾಸನ ಶಿಲೆಯು ಇಂದು ಐತಿಹಾಸಿಕವಾಗಿ ಬಹು ಪ್ರಾಮುಖ್ಯತೆಯನ್ನು ಪಡೆದುಕೊಂಡಿದೆ. ಇತ್ತೀಚಿನ ಕೆಲವು ವರ್ಷಗಳಲ್ಲಿ ಆರರಿಂದ ಎಂಟು ಶಾಸನ ಶಿಲೆಗಳು ಕಳ್ಳರ ಪಾಲಾಗಿದೆ ಎನ್ನಬಹುದು ಇದರಿಂದ ಪೂರಕವಾದ ಇತಿಹಾಸವು ಕುಂಠಿತವಾಗಿದೆ.

ನಾಡಗುತ್ತಿ 12 ಅರಮನೆ ಶಾಸನ

ಪ್ರತಾಪ ದೇವರಾಯನ ಶಾಸನದಿಂದ ತಿಳಿಯುವುದೇನೆಂದರೆ ಮಹಾಲಿಂಗೇಶ್ವರ ದೇವಸ್ಥಾನದ ಮೂರು ದಿಕ್ಕಿಗೆ ಇದ್ದ ವಿಶಾಲ ಕಟ್ಟಡವು ಹರಿಹರನ ಮೊದಲ ರಾಜ್ಯ "ನಾಡಗುತ್ತಿ-12" ರಾಜ್ಯದ ಅರಮನೆಯಾಗಿದೆ. *[Buchanan (Mysore- III-110) mentions a revenue accountant in Canara whose records went back the conquest by Harihara in 1335... In support Sir T. Munro (Report 31 May- 1800...)]* ಉತ್ತರ ಕನ್ನಡದಲ್ಲಿ (ಕೆನರಾ) ಹರಿಹರನು ಗೆದ್ದ ರಾಜ್ಯದ ಅರಮನೆ ಇರುವ ಕುರಿತು ಬೇರೆಲ್ಲಿಯೂ ಶಾಸನಗಳಲ್ಲಿ ಇಲ್ಲದ್ದರಿಂದ ಕ್ರಿಶ. 1335ರಲ್ಲಿ ಹರಿಹರನು ಗೆದ್ದುಕೊಂಡ ರಾಜ್ಯ ನಾಡಗುತ್ತಿ-12 ಅರಮನೆಯು ಶಾಸನ ನಿಲ್ಲಿಸಿರುವ ಮಹಾಲಿಂಗೇಶ್ವರ ಮಠವೇ ಆಗಿರುವ ಸಾಧ್ಯತೆ ಇದೆ. ನಾಡಗುತ್ತಿ-12 ರಾಜ್ಯವು ಉತ್ತರ ಕನ್ನಡ ಜಿಲ್ಲೆಯಲ್ಲಿದೆ. ನಾಡಗುತ್ತಿಯು ಆಂಧ್ರ ರಾಜ್ಯದ ಅನಂತಪುರ ಜಿಲ್ಲೆಯಲ್ಲಿ ಇರುವುದಿಲ್ಲ. ಉತ್ತರ ಕನ್ನಡ ಜಿಲ್ಲೆಯ ಚಂದಾವರ ರಾಜ್ಯದ ಬೀರದೇವನ ಶಾಸನದಲ್ಲಿ 10ನೇ ಶತಮಾನ ಕಾಲದಲ್ಲಿ ನಾಡಗುತ್ತಿಯನ್ನು ಗುತ್ತಿ ರಾಜ್ಯವೆಂದು ಕರೆಯಲಾಗಿದೆ.

ಇಲ್ಲಿಯ ಶಾಸನ ಪಾಠದ ಮುಖ್ಯಾಂಶಗಳು

ಶಾಸನದ 7ನೇ ಸಾಲಿನಲ್ಲಿ – 'ವಿಜಯನಗರ ಸಾಮ್ರಾಜ್ಯದಭ್ಯುದಯದಲ್ಲಿ .... ತಾ ದಿಕ್ಷಿತರಹ ವಿದ್ಯಾತಿರತ ಶ್ರೀಪಾದಂಗಳಿಗೆ ಕೊಟ್ಟ ಸಾಸನ ಪತ್ರ'

ಶಾಸನದ 9ನೇ ಸಾಲಿನಲ್ಲಿ – 'a a . ನಾಡಗುತ್ತಿ-12ರ ವೊಳಗೆ ಉಳ್ಳ ಅರಮನೆ a a . '

ಶಾಸನದ 14ನೇ ಸಾಲಿನಲ್ಲಿ – '.......ಅದಕ್ಕೆ ಬಂದ ಹಿರಿಯಗುತ್ತಿ ಚಿಕ್ಕಗುತ್ತಿಯ ಬಾಳಸ್ಥಮನೆ ಮುಂತಾದವನ್ನು ದಾರೆಯನಿಕ್ಕಿ' a a a a

ಶಾಸನದ 18ನೇ ಸಾಲಿನಲ್ಲಿ – .'.......ರಾಯರ ಸ್ವಹಸ್ತದಿಂ ಯಿಚ್ಚೊಪ್ಪೊಡೆಯರು ದಾರಪುರಕ ಮೂಲವಾಗಿ ಅಚಂದ್ರಾರ್ಕ ಸ್ಥಾಯಿಯಾಗಿ ಕೊಟ್ಟರು'.

ಅಂದರೆ ವಿಜಯನಗರ ಸಾಮ್ರಾಟ ಪ್ರತಾಪದೇವರಾಯನು ಅವರ ಈ ಮಠದ ಗುರುಗಳಾದ ವಿದ್ಯಾತೀರ್ಥರಿಗೆ ಸ್ವ ಹಸ್ತದಿಂದ 'ನಾಡಗುತ್ತಿ-12' ಅರಮನೆಯನ್ನು ಮತ್ತು ಚಿಕ್ಕಗುತ್ತಿಯಲ್ಲಿರುವ ಹರಿಹರನ ಕುಟುಂಬ ಬಾಳಿದ ಮನೆ ಸ್ಥಳವನ್ನು ನೀರೆರೆದು ದಾನಶಾಸನ ಮಾಡಿಕೊಟ್ಟಿದ್ದನು. ಹೊನ್ನಾವರದ ರಾಜ್ಯಾಧಿಕಾರಿ– ಯಿಚ್ಚಪ್ಪೊಡೆಯರು ಸಾಮಾಟ್ರ ಪತ್ರಾಪದೇವರಾಯನು ದಾನ ಕೊಡುವ ಕಾರ್ಯಕ್ಕೆ ನೀರಿನ ಧಾರೆಯೆರೆದರು – ಎಂದು ಈ ಶಾಸನದಲ್ಲಿ ಉಲ್ಲೇಖವಿದೆ ಈ ಶಾಸನವನ್ನು ಡಾ॥ ಎಸ್.ಡಿ. ಶೆಟ್ಟಿಯವರು ನಿಖರವಾಗಿ ಓದಿದ್ದರಿಂದ ಬೆಳಕಿಗೆ ಬಂದು ಹರಿಹರಬುಕ್ಕರು ಎಲ್ಲಿಯವರು? ಎನ್ನುವ ಕುರಿತಂತೆ ಶಾಸನಾದಾರವಿಲ್ಲದ ತಾರ್ಕಿಕ ಹೇಳಿಕೆಗಳಿಗೆ ತೆರೆಯೆಳೆದಿದೆ. ಮತ್ತು ಹರಿಹರ ಬುಕ್ಕರು ಹಿರೇಗುತ್ತಿಯ ಚಿಕ್ಕಗುತ್ತಿಯವರು ಅವರು ಬಾಳ್ವೆಮಾಡಿದ ಮನೆಯ ಸ್ಥಳವು ಚಿಕ್ಕಗುತ್ತಿಯೆಂದು ಈ ಶಾಸನವು ನಿಖರವಾಗಿ ಉತ್ತರಿಸಿರುತ್ತದೆ.

ಪ್ರತಾಪ ದೇವರಾಯನು ಬುಕ್ಕನ ಮೊಮ್ಮಗನು, ಮಧುರೆಯ ಅರಸ ವೀರಕಂಪಣ್ಣ ಮತ್ತು ಗಂಗಾದೇವಿಯರ ಮಗನು. ಹರಿಹರನಿಗೆ ಮಕ್ಕಳಿಲ್ಲದ್ದರಿಂದ ಪ್ರತಾಪ ದೇವರಾಯನನ್ನು ಗುಣವಂತೆಯ ಶಾಸನದಲ್ಲಿ ಹರಿಹರನ ಪ್ರಿಯಪತ್ರರೆಂದು ಕರೆಯಲಾಗಿದೆ. ಇವನ ತಾಯಿ ಕವಿಯಿತ್ರಿ ಗಂಗಾದೇವಿಯು "ವೀರ ಕಂಪಣ್ಣ ಚರಿತ್ರೆ – ಮಧುರಾ ವಿಜಯಂ" ಸಂಸ್ಕೃತ ಕಾವ್ಯ ರಚಿಸಿದ ಇತಿಹಾಸ ಪ್ರಸಿದ್ಧ ಕವಿಯಿತ್ರಿಯಾಗಿದ್ದಾಳೆ. ಯುದ್ದದಲ್ಲಿ ಗಾಯಗೊಂಡ ಕಂಪಣ್ಣನು ಮಡಿದ ನಂತರ ಪ್ರತಾಪದೇವರಾಯನು ಮಧುರೆಯ ಅರಸನಾದನು. ಅನಂತರದಲ್ಲಿ ವಿಜಯನಗರ ಸಾಮಾಟದ ಹಕ್ಕುದಾರನಾಗಿ ವಿಜಯನಗರ ಸಾಮ್ರಾಜ್ಯಾಧಿಪತಿಯಾದನು.

ಸಾಮ್ರಾಟ ಪ್ರತಾಪದೇವರಾಯನು ಕೂಸಾಗಿದ್ದಾಗ ನಾಮಕರಣ ಮಾಡಿದ ಹೆಸರುಗಳು ಬೊಮ್ಮಣ್ಣ ನಾಯಕ. ಬೋಮಯ್ಯ ನಾಯಕ, ಸಣ್ಣಯ್ಯ ನಾಯಕನೆಂದು ನಾಮಕರಣ ಹೆಸರಿಂದ ಕರೆಯಲಾಗಿದೆ. ಬೊಮ್ಮಯ ನಾಯಕನ ಅಜ್ಜಿ ಸಾಮ್ರಾಟ ಬುಕ್ಕನ ಹೆಂಡತಿ ಇವಳ ಹೆಸರು ಬೊಮ್ಮಿದೇವಿ ನಾಯಕಿ, ಜೊಮ್ಮದೇವಿ ನಾಯಕಿ ಎಂದಿರುವುದರಿಂದ ಅಜ್ಜಿಯ ಹೆಸರನ್ನು ಮೊಮ್ಮನಿಗೆ ಬೊಮ್ಮಣ್ಣನೆಂದು, ಬೊಮ್ಮಯ್ಯನೆಂದು ಇಟ್ಟಿರಬಹುದು.

ಚಿಕ್ಕಗುತ್ತಿಯ ಆದಿನಾಥ ತೀರ್ಥಂಕರ ಸನ್ನಿಧಿಯಲ್ಲಿ ಮರಣ ವ್ರತಾಚರಣೆ ಮಾಡಿ ಸಲ್ಲೇಖನ ನಿರ್ವಾಣ ಹೊಂದಿದ್ದರ ಲಭ್ಯ ಶಾಸನ ಫಲಕ ಒಂದರಿಂದ ಬೊಮ್ಮಿದೇವಿ ನಾಯಕಿಯು ಸ್ವಂತ ಊರು ಚಿಕ್ಕಗುತ್ತಿಯಲ್ಲಿ ನಿರ್ವಾಣ ಹೊಂದಿದ್ದಾಳೆದು. ಹೇಳಬಹುದಾಗಿದೆ.

"ನಾಡಗುತ್ತಿ–12" ರಾಜ್ಯದಲ್ಲಿ ಹರಿಹರನಿಗೆ ಇಬ್ಬರು ಗುರುಗಳಿದ್ದರು. ಒಬ್ಬರು ಹಿರೇಗುತ್ತಿ ಶಿಲಾಶಾಸನದಲ್ಲಿ ಬಂದಿರುವ ಶ್ರೀ ವಿದ್ಯಾತೀರ್ಥಗುರುಗಳು. ಮತ್ತೊಬ್ಬರು ಕಾಳಮುಖಗುರು – ಶ್ರೀ ಕ್ರಿಯಾಶಕ್ತಿ ಗುರುಗಳು. ಶ್ರೀ ಕ್ರಿಯಾಶಕ್ತಿ ಗುರುಗಳ ಕುರಿತು ಶಾಸನವು ನಾಡಗುತ್ತಿ ರಾಜ್ಯದ ಭಾವಿಕೇರಿಯಲ್ಲಿ ಇರುತ್ತಿದ್ದು, ಕ್ರೀಯಾಶಕ್ತಿ ಗುರುಗಳು ಗೋಕರ್ಣದ ಮಹಾಬಲೇಶ್ವರನಿಗೆ ಭೂಮಿದಾನ ಅರ್ಪಿಸಿದ್ದರ ಕುರಿತು ಶಾಸನವಿರುತ್ತದೆ. ಇದರಿಂದ ಕ್ರಿಯಾಶಕ್ತಿ ಗುರುಗಳು ಕೂಡಾ ವಿದ್ಯಾತೀರ್ಥರಂತೆ ಉನ್ನತಾಧಿಕಾರದ ಗುರುಗಳಾಗಿ ಹರಿಹರನ ಸೇವೆಯಲ್ಲಿದ್ದರೆಂದು ಅರ್ಥವಾಗುತ್ತದೆ. ಮುಂದೆ ಇದೇ ಇಬ್ಬರೂ ಗುರುಗಳು ವಿದ್ಯಾನಗರಿ ರಾಜಧಾನಿಯಲ್ಲಿ ಹರಿಹರನಿಗೆ ಪಟ್ಟಗಟ್ಟಿ ರಾಜಗುರುಗಳಾಗಿರುತ್ತಾರೆ.

ಪ್ರತಾಪ ದೇವರಾಯನ ಕುಟುಂಬದ ಬಾಳ್ವೆಮನೆ ಚಿಕ್ಕಗುತ್ತಿಯ ಕುರಿತು. ಇಲ್ಲಿ ಲಭ್ಯವಾಗಿರುವ ಸಲ್ಲೇಖನ ಶಿಲಾಫಲಕಗಳು ಚಿಕ್ಕಗುತ್ತಿಯ ಇತಿಹಾಸವನ್ನು ತಿಳಿಸುತ್ತವೆ. ಚಿಕ್ಕಗುತ್ತಿಯು ಕ್ರಿ.ಶ. ಪೂರ್ವದಿಂದಲೇ ಜೈನಧರ್ಮೀಯರಿಗೆ ಪುಣ್ಯಕೇತ್ರವಾಗಿತ್ತೆಂದು ಇಲ್ಲಿ ಲಭ್ಯವಾಗಿರುವ ನಾಲ್ಕು ಸಲ್ಲೇಖನ ಫಲಕಗಳಿಂದ ಅರ್ಥವಾಗುತ್ತದೆ.

ಇಲ್ಲಿ ಕುಳಿತಿರುವ ಭಂಗಿಯಲ್ಲಿ ಸುಮಾರು 4' ಎತ್ತರದ ತೀರ್ಥಂಕರ ಮೂರ್ತಿಯಿದೆ. ತೀರ್ಥಂಕರ ಮೂರ್ತಿಯ ತಲೆಯ ಮೇಲೆ ಜುಟ್ಟು ಇದೆ. ಆದ್ದರಿಂದ ಈ ಮೂರ್ತಿಯನ್ನು ಆದಿನಾಥ ತೀರ್ಥಂಕರ ಮೂರ್ತಿಯೆಂದು ಜೈನಧರ್ಮೀಯರು ಹೇಳುತ್ತಾರೆ. ಈ ಮೂರ್ತಿಯ ಆದಿನಾಥತೀರ್ಥಂಕರ ಮೂರ್ತಿಯೆಂಬುದನ್ನು ಇಲ್ಲಿರುವ ಸಲ್ಲೇಖನ ವ್ರತದ ಶಿಲಾಫಲಕದಲ್ಲಿ ಬರೆಯಲಾಗಿದೆ.

ಸಲ್ಲೇಖನ ಮರಣ ವ್ರತ ಶಿಲಾಫಲಕವೊಂದರಲ್ಲಿ –

"ಶ್ರೀಮತು ಸಯ್ಯಾಪತ್ರದೊಳು ಚಿಕ್ಕಶೆಟ್ಟಿಯರುಂ.......... ಸುಪುತ್ರ ಬೊಮ್ಮಿಶೆಟ್ಟಿಯರು ಮುಖ್ಯವಾಗಿ ಸದುಶನಗರಂಗಳ್ .... ಶ್ರೀ ಮೂಲ ಸಂಘ ಕಾನೂರುಗಣದ ಯಾದಿನಾಥ ಸ್ವಾಮಿ ಪ್ರತಿಮೆ ಮಾಡಿಸಿ ಕೃತಾರ್ಥರಾದರು,' (ಸದುಶ ನಗರ = ಸೋದೆ ನಗರ) ಈ ಸಲ್ಲೇಖನ ಫಲಕದಿಂದ ಬೊಮ್ಮಿ ಶೆಟ್ಟಿ ಸೋದೆ ನಗರದವನೆಂದು ಮತ್ತು ಈ ಮೂರ್ತಿ ನಿರ್ಮಿತಕಾಲದಲ್ಲಿ ಸೋದೆ ರಾಜ್ಯವಿತ್ತೆಂದು ತಿಳಯಬಹುದಾಗಿದೆ. ಸೋದೆಯ ರಾಜ್ಯವಂಶಸ್ಥರಿಗೆ ಮತ್ತು ಪ್ರಜೆಗಳಿಗೆ ಆ ಕಾಲದಲ್ಲಿ ಚಿಕ್ಕಗುತ್ತಿಯು ಯಾತ್ರಾಸ್ಥಳವಾಗಿದ್ದಿರಬಹುದು.

ಸಲ್ಲೇಖನ ಶಿಲಾಫಲಕ ಇನ್ನೊಂದರಲ್ಲಿ : 'ಈಶ್ವರ ಸಂವತ್ಸರ ಫಾಲ್ಗುಣಮಾಸ ಶುಕ್ಲಪಕ್ಷ ಸಪ್ತಮಿ ಸೋಮವಾರದಂದು ಸೋದೆಯ ಮುಡುಪಿ ಸ್ವರ್ಗಸ್ಥನಾದ ಮಹಾ ಶ್ರೀ. ಶ್ರೀ. ಶ್ರೀ...... (ಸಂವತ್ಸರವು ಇಸವಿಯಲ್ಲಿ ಕ್ರಿ.ಶ. 1032) (ಮುಡುಪಿ=ಮುನಿ)

ಈ ಶಿಲಾಫಲಕಗಳಿಂದ ಅರ್ಥವಾಗುವುದೇನೆಂದರೆ ಸೋದೆ ರಾಜ್ಯದ ಧರ್ಮಗುರು ಪೀಠವು ಚಿಕ್ಕಗುತ್ತಿಯ ಶ್ರೀ ಆದಿನಾಥ ಬಸದಿಯಾಗಿತ್ತೆಂದು ತಿಳಿದುಬರುತ್ತದೆ. ಮತ್ತು 13ನೇ ಶತಮಾನ ಕಾಲದಲ್ಲಿಯೇ ಚಿಕ್ಕಗುತ್ತಿಯು ಅತಿಪುರಾತನ ಜೈನಬಸದಿಯಾಗಿತ್ತೆನ್ನಬಹುದು. ಸೋದೆಯ ಮುನಿಗಳು ಚಿಕ್ಕಗುತ್ತಿಗೆ ಬಂದು ನಿರ್ವಾಣರಾಗಿದ್ದಾರೆ. ಸೋದೆಯ ಅರಸಪ್ಪನ 9 ರಾಣಿಯರು ಕೂಡ ಚಿತೆಯೇರಿ ಸತಿಯಾದುದರ ಚಿತ್ರಸಹಿತ ಶಿಲ್ಪವು ಮಹಾಲಿಂಗೇಶ್ವರ ದೇವಾಲಯದ ಆವರಣದಲ್ಲಿದೆ.

ಭೋಜ ತಾಮ್ರಶಾಸನ ಮತ್ತು ರಾಜಧಾನಿ ಶಿವಪುರ

ಕರ್ನಾಟಕ ಇತಿಹಾಸ ಚರಿತ್ರೆಯಲ್ಲಿ ಕೆಲವೇ ಸ್ಥಳಗಳಲ್ಲಿ ಭೋಜಚರಿತ್ರೆಯ ಕುರಿತು ವಿರಳವಾಗಿ ಆಧಾರಗಳು ದೊರಕುತ್ತಿದ್ದು ಅವುಗಳು ಕೂಡಾ ನಿಖರವಾಗಿ ಲಭ್ಯವಾಗದಿದ್ದರಿಂದ ಕರ್ನಾಟಕ ಚರಿತ್ರೆಯಲ್ಲಿ ಭೋಜರ ಇತಿಹಾಸ ಸೇರ್ಪಡೆಯಾಗದೆಯೇ ಉಳಿದಿದೆಯೆನ್ನಬಹುದು. ಭೋಜರ ಕುರಿತು ಹಿರೇಗುತ್ತಿ ಮಹಾಲಿಂಗೇಶ್ವರ ದೇವರ ಮೊಕ್ತೆಸರರ ಮನೆಯಲ್ಲಿ ತಾಮ್ರ ಪತ್ರ ಶಾಸನವು ಲಭ್ಯವಿದೆ. ಇದು ಕ್ರಿ.ಶ. 4ನೇ ಶತಮಾನ ಕಾಲದಷ್ಟು ಹಿಂದಿನದೆಂದು ಇತಿಹಾಸ ಸಂಶೋಧಕರು ದಾಖಲಿಸಿರುತ್ತಾರೆ. ಹಿರೇಗುತ್ತಿಯ ಬ್ರಹ್ಮಜಿನಾಲಯದ ಎದುರಿಗೆ ಇರುವ ಬೌದ್ಧಬಿಕ್ಷು ಅನ್ನದಾನ ಧರ್ಮಶಾಲೆಯು ಭೋಜಮಹಾರಾಜ ಅಸಂಕಿತ ಮರ್ಮನಿಂದ ನಿರ್ಮಿಸಲ್ಪಟ್ಟಿತ್ತೆಂದು ಈ ತಾಮ್ರಶಾಸನದಲ್ಲಿ ದಾಖಲೆಯಿದೆ. ಅದರಂತೆ ಹಿರೇಗುತ್ತಿಯ ಘಜಣಿ ಭೂಮಿಯನ್ನು (ಖಜಾನ ಭೂಮಿ) ಬೌದ್ಧಭಿಕ್ಷುಗಳ ಧರ್ಮಶಾಲೆಗೆ ದತ್ತಿ ಬಿಟ್ಟಿರುವ ಭೂಮಿ ವರ್ಣನೆಯು ಹಿರೇಗುತ್ತಿಗೆ ಸರಿ ಹೊಂದುತ್ತದೆ. ಭೋಜಸಾಮ್ರಾಟರು ಸಾಮಂತ ಅರಸರಿಗೆ ತಾಮ್ರಶಾಸನ ಕೊಡುತ್ತಿದ್ದರೆಂದು ಡಾ॥ ಪಿ.ಬಿ. ದೇಸಾಯಿಯವರು ಶಾಸನ ವಿವರಣೆಯಲ್ಲಿ ಬರೆದಿದ್ದಾರೆ.

ಭೋಜ ಅರಸರು ಹಿರೇಗುತ್ತಿಯಿಂದ ಪೂರ್ವಕ್ಕೆ 3 ಕೀ.ಮೀ ಅಂತರದಲ್ಲಿರುವ ಶಿವಪುರವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಸುಮಾರು 400 ವರ್ಷಗಳ ಕಾಲ ಜನಪರವಾದ ಅಭಿವೃದ್ಧಿಕಾರ್ಯಗಳನ್ನು ಕೈಗೊಂಡಿರುವುದು ಇಂದಿಗೂ ಉಳಿದಿದೆ. ಭೋಜರ ಕಾಲದಲ್ಲಿ ಶಿವಪುರದಲ್ಲಿ ಪ್ರಸಿದ್ಧ ವಿದ್ಯಾಪೀಠವಿತ್ತೆಂದು ತಿಳಿದುಬರುತ್ತದೆ. ಚಾಲುಕ್ಯ ಒಂದನೇ ಪುಲಕೇಶಿಯು ಈ ವಿದ್ಯಾಪೀಠಕ್ಕೆ ಭೂದಾನ ಮಾಡಿದ ದಾಖಲೆ ಇದೆ. ಭೋಜರ ಇನ್ನೊಂದು ಶಾಸನದಲ್ಲಿ ಚಾಲುಕ್ಯ ಮಂಗಳೇಶನು ಶಿವಪುರದ ಮಾಂಡಲೀಕ ಸ್ಥಾನಿಕರಾಜನು ಮಾತಿಗೆ ತಪ್ಪಿದನೆಂದು ಅವನ ಮೇಲೆ ದಾಳಿ ಮಾಡಿ ಕ್ರಿ. ಶ. 592ರಲ್ಲಿ ಶಿವಪುರದ ರಾಜ ಸ್ಥಾನಿಕ ಭೋಜನನ್ನು ಸೋಲಿಸಿ ಕೊಲ್ಲುತ್ತಾನೆ. ರಾಜ ಸ್ಥಾನಿಕ ಭೋಜನು ಕಪಾಲಿವರ್ಮನ್ ಭೋಜನ ಮಾಂಡಲೀಕ ಅರಸನಾಗಿದ್ದನು ಎನ್ನಲಾಗಿದೆ.

ಸ್ಥಾನಿಕ ಭೋಜನು ಹಿರೇಗುತ್ತಿಯ ಖಜ್ಜಾನ ಭೂಮಿಯನ್ನು (ಉಪ್ಪು ನೀರಿನ ಘಜನಿ ಭೂಮಿ) ಭವಾರ್ಯ ಎಂಬ ಪಂಡಿತನಿಗೆ ದಾನ ಕೋಡುತ್ತಾನೆ. ಈ ಘಜಣಿ ಭೂಮಿಗೆ ಉಪ್ಪು ನೀರು ನುಗ್ಗದಂತೆ ಮೃತ್ತಿಕೆಯ ಕಟ್ಟನ್ನು ಭೋಜರು ನಿರ್ಮಾಣಮಾಡಿದ್ದರು ಮೃತ್ತಿಕೆಯ ಕಟ್ಟಿನ ಮೇಲೆ ಭೋಜರ ದೇವಸ್ತಾನಗಳಿವೆ ಈ ದೇವಸ್ಥಾನಗಳನ್ನು 'ಬೊಬ್ಬರು (ಭೋಜರು) ದೇವಸ್ಥಾನ' ಎನ್ನುತ್ತಾರೆ. ಅಥವಾ 'ಬೊಬ್ಬರ ದೇವರು' ಎನ್ನುತ್ತಾರೆ. ಭೋಜರ ರಾಜಧಾನಿ ಶಿವಪುರವು ಹಿರೇಗುತ್ತಿಯ ಶಿವಪುರವೇ ಆಗಿರುತ್ತದೆ. ಶಿವಪುರ ಹೆಸರಿನ ಸ್ಥಳಗಳು ಬೇರೆಡೆಗಳಲ್ಲಿ ಇದ್ದರು ಕೂಡ ಅಲ್ಲಿ ಉಪ್ಪು ನೀರಿನ ಕಜ್ಜಾನ ಭೂಮಿ (ಘಜನಿ ಭೂಮಿ) ಇರುವ ಸಾಧ್ಯತೆ ಇಲ್ಲ ಮತ್ತು ಶಿವಪುರಕ್ಕೆ ಹತ್ತಿರದಲ್ಲಿ ಬರ್ಗಿಗ್ರಾಮ (ವಾರಿಯಂಕ) ಇರುವ ಸಾಧ್ಯತೆಯೂ ಇಲ್ಲ. ಹೀಗಿದ್ದರಿಂದ ಐತಿಹಾಸಿಕ ಭೋಜರ ಶಿವಪುರ ಗ್ರಾಮವು ಹಿರೇಗುತ್ತಿಗೆ ಹೊಂದಿದ ಭೋಜರ ರಾಜಧಾನಿ ಗ್ರಾಮವಾಗಿದೆ. ಕ್ರಿ.ಶ. 592ರ ನಂತರ ಭೋಜರ ಅವನತಿ ಕಾಲದಲ್ಲಿ ಭೋಜರ ಮಾಂಡಲಿಕ ಅರಸರು ಸೇನಾಪತಿಗಳು ಅಲ್ಲಲ್ಲಿ ತುಂಡರಸರಾದರು ರಾಜರು ಎಂಬುದು ಚಂದಾವರದ ಬೀರ ದೇವನ ಶಾಸನದಿಂದ ತಿಳಿದು ಬರುತ್ತದೆ. ಹಿರೇಗುತ್ತಿ, ಕಣಗೀಲ, ಮೊಗಟ್ಟಾ, ಅಂಕೋಲಾ, ಚಂದಾವರ ಸೋಂದೆ ಮುಂತಾದ

ಸ್ಥಳಗಳಲ್ಲಿ ರಾಜ್ಯ ಕಟ್ಟಿಕೊಂಡ ಸೇನಾನಾಯಕರು ರಾಜರಾಗಿ ಆಳತೊಡಗಿದರು ಚಂದಾವರ ಶಿಲಾಶಾಸನದಲ್ಲಿ ದಾಖಲೆಯಂತೆ ಕ್ರಿ.ಶ. 1219 (ಹಿರೇಗುತ್ತಿ) ಗುತ್ತಿಯನ್ನು ಮಲ್ಲಿದೇವ ನಾಯಕ ಆಳುತ್ತಿದ್ದನು. ಮತ್ತು ಮೊಗಟಾವನ್ನು 1287ರಲ್ಲಿ ನಾರಾಯಣನಾಯಕ ಆಳುತ್ತಿದ್ದನು. ಗುತ್ತಿ ಶಲ್ಯಾನಾಯಕನನ್ನು 1219ರಲ್ಲಿ ಚಂದಾವರದ ಬೀರದೇವರಾಜನು ಸೂಳಗೇರೆಯಲ್ಲಿ (ತಾಲೂಕು ಕಾರವಾರ) ಯುದ್ಧದಲ್ಲಿ ಕೊಲ್ಲುತ್ತಾನೆ. ಕಾರವಾರದಲ್ಲಿ ಗುತ್ತಿಂಬೀರ ಮೂರ್ತಿ ಇರುತ್ತದೆ. ಹಿರೇಗುತ್ತಿ, ಚಿಕ್ಕಗುತ್ತಿ, ನಾಡಗುತ್ತಿ ಈ ಹೆಸರುಗಳಿಗೆ 'ಗುತ್ತಿ' ಎಂಬುದು ಮೂಲ ಹೆಸರು.

ಕ್ರಿ.ಶ. 1311ರಲ್ಲಿ ದೆಹಲಿ ಸುಲ್ತಾನನ ಸೇನೆಯು ಮಲಿಖಾಫರ್ ನೇತ್ರತ್ವದಲ್ಲಿ ದ್ವಾರಸಮುದ್ರವನ್ನು ಮುತ್ತಿತು 1326ರಲ್ಲಿ ಮಹಮ್ಮದ ತುಘಲಕ್ ಸೇನೆ ಆಕ್ರಮಣ ಮಾಡಿತು. ಈ ವೇಳೆಗೆ ದಕ್ಷಿಣ ಭಾರತದ ಹಿಂದು ರಾಜಮನೆತನಗಳೆಲ್ಲವು ನಾಶವಾಗಿ ಹೊಯ್ಸಳ ಮೂರನೇ ಬಲ್ಲಾಳನು ಮಹಮ್ಮದಿಯರಿಗೆ ಪುನಃ ಪುನಃ ಕಪ್ಪಕೊಟ್ಟು ಅಭಲನಂತೆ ಉಳಿದುಕೊಂಡಿದನ್ನು ಬಲ್ಲಾಳನಿಗೆ ಆಗ ವಯಸ್ಸಾಗಿತ್ತು. ಬಲ್ಲಾಳನ ಮಗ ವಿರುಪಾಕ್ಷ ಬಲ್ಲಾಳನು ಮಮ್ಮದಿಯ ಸೇನೆ ಎದುರಿಸಲಾರದಂತಿದ್ದನು. ಬಲ್ಲಾಳನ ರಾಣಿ ಕೃಷ್ಣೇಯಿ ತಾಯಿ ಸೇನಾಪತಿಗಳಾದ ಹರಿಹರ ಸಹೋದರರ ಸಾಮರ್ಥ್ಯವನ್ನು ಅರಿತ್ತಿದ್ದಳು. ಹರಿಹರನ ಮಗಳನು ತನ್ನ ತಮ್ಮ ಬಲ್ಲಪ್ಪನಿಗೆ ಮದುವೆ ಮಾಡಿಕೊಂಡಿದಳು. ಬಲ್ಲಾಳನು ದೋರಸಮುದ್ರದಿಂದ ತನ್ನ ರಾಜಧಾನಿಯನ್ನು ಭಟ್ಕಳಕ್ಕೆ ಬದಲಾಯಿಸಿದ್ದನು. ಕೃಷ್ಣೇಯೆ ತಾಯಿ ಬಲ್ಲಾಳನ ಸಾಮ್ರಾಜ್ಯದ ಸಾಮಂತಿಕೆಯನ್ನು ಹರಿಹರ ಬುಕ್ಕ ಸಹೋದರರಿಗೆ ಒಪ್ಪಿಸಿದಳು. "ನಾಡಗುತ್ತಿ-12" ರಾಜ್ಯದ ಒಂದೇ ಕುಂಟುಬದ ಒಕ್ಕಟ್ಟಿನಲ್ಲಿ ಹರಿಹರ-ಹಂಪೆ-ಆನೆಗುಂದಿಯನ್ನು, ಕಂಪಣ್ಣ-ತಿರುಪತಿ, ಮುದ್ದಣ್ಣ-ಮುಳಬಾಗಿಲು, ಮಾದಣ್ಣ-ಚಂದ್ರಗುತ್ತಿ, ಬುಕ್-ದೋರಸಮುದ್ರವನ್ನು ಕೃಷ್ಣೆಯೀ ತಾಯಿಯ ಆಶೀರ್ವಾದದ ಹಿರಿತನದಲ್ಲಿ ವಿಭಾಗ ಮಾಡಿಕೊಂಡು ಆಳ್ವಿಕೆ ನಡೆಸಿದರು.

ಕ್ರಿ.ಶ. 1336ರಲ್ಲಿ ಹಿರೇಗುತ್ತಿಯ ರಾಜಾ ಹರಿಹರ ಬುಕ್ಕ ಸಹೋದರರು ವಿಜಯನಗರದಲ್ಲಿ ರಾಜ್ಯ ಸ್ಥಾಪನೆ ಮಾಡಿದಾಗ ಅವನ ಸೈನ್ಯ ಮತ್ತು ಸೇನಾಪತಿಗಳಾಗಿ ಹೋದವರಲ್ಲಿ ಸ್ಥಳೀಯ ನಾಡಗುತ್ತಿ ರಾಜ್ಯದ ಮತ್ತು ಸೋಂದೆ ರಾಜ್ಯದ ಸೈನ್ಯ ಮತ್ತು ಸೇನಾಪತಿಗಳಿದ್ದರೆಂಬ ಬಗ್ಗೆ ಇತಿಹಾಸ ದಾಖಲೆಗಳು ಲಭ್ಯವಿರುತ್ತದೆ. ಇವರಲ್ಲಿ ಸೋಂದೆಯ ಮಂಗಮಹಾಪ್ರಭುವು ಪ್ರಮುಖನಾಗಿರುತ್ತಾನೆ. ಮಂಗಮಹಾಪ್ರಭುವು ಹರಿಹರನ ತಮ್ಮ ಕಂಪಣ್ಣನ ಸೇನಾಪತಿಯಾಗಿ ಚಂದ್ರಗಿರಿಗೆ (ತಿರುಪತಿ) ಹೋಗಿದ್ದನು. ಚಂದ್ರಗಿರಿಯ ಸೇನಾಪತಿ ಮಂಗ ಮಹಾಪ್ರಭುವು ತನ್ನ ಮಗಳನ್ನು ಸೋಂದೆಯ ರಾಜ ಅರಸಪ್ಪ ನಾಯಕನಿಗೆ ಮದುವೆ ಮಾಡಿಕೊಟ್ಟಿದ್ದನು. ಅಳಿಯನಾದ ಸೋಂದೆ ರಾಜ ಅರಸಪ್ಪ ನಾಯಕನು ಯುದ್ಧದಲ್ಲಿ ಮಡಿದಾಗ ಮಂಗಮಹಾಪ್ರಭು ಸೇನಾಪತಿಯು ತಿರುಪತಿಯಿಂದ ಸೋಂದೆಗೆ ಬಂದ ರಾಜಪ್ರತಿನಿಧಿಯಾಗಿ ಸೋಂದೆಯನ್ನು ಆಳಿದ್ದರ ಕುರಿತು ದಾಖಲೆಗಳಿವೆ ಮತ್ತು ಮುಂದೆ ಅಳಿಯ ಅರಸಪ್ಪ ರಾಜಾನ ಪೀಳಿಗೆಗೆ (ಮೊಮ್ಮಕ್ಕಳಿಗೆ) ರಾಜ್ಯ ಭಾರವನ್ನು ಒಪ್ಪಿಸಿದ್ದಾನೆ ಸೋಂದೆ ರಾಜ್ಯದ ಅರಸಪ್ಪ ಯುದ್ಧದಲ್ಲಿ ಮಡಿದಾಗ ಅವನ ಒಂಬತ್ತು ರಾಣಿಯರು ಚಿತೆ ಏರಿ ಸತಿ ಹೋದ ಸಚಿತ್ರ ಶಿಲೆಯನ್ನು ಹರಿಹರನ "ನಾಡಗುತ್ತಿ 12" ಅರಮನೆ ಆವರಣದಲ್ಲಿ ನಿಲ್ಲಿಸಲಾಗಿದೆ. ಸೊಂದೆ ಮತ್ತು ವಿಜಯನಗರದ ವೈವಾಹಿಕ ಸಂಬಂಧವು ಹರಿಹರನ ಕಾಲದಿಂದ ಕೃಷ್ಣ ದೇವರಾಯನ ಕಾಲದವರೆಗೆ ಮುಂದುವರೆಯುವುದು ಕಾಣಬಹುದಾಗಿದೆ. ಕೃಷ್ಣದೇವರಾಯನ ತಂದೆ ನರಸನಾಯಕನ ತಂಗಿ ಸೋಂದೆಯ ಎರಡನೆಯ ಅರಸಪ್ಪನ ರಾಣಿಯಾಗಿರುತ್ತಾಳೆ. ಅಂದರೆ ಸಾಮ್ರಾಟ ಕೃಷ್ಣದೇವರಾಯನ ಸೋದರತ್ತೆಯ ಮನೆ ಸೋಂದೆ. ನರಸನಾಯಕನ ಮಗಳು ಸೊಂದೆಯ ವೆಂಕಟಪತಿ ಮಡದಿಯಾಗಿದ್ದಳು. ರಾಜಾ ವೆಂಕಟಪತಿ ನಾಯಕನು ಕೃಷ್ಣ ದೇವರಾಯನಿಗೆ ಭಾವನಾದ ಹಿರಿತನದಿಂದ ಕೃಷ್ಣದೇವರಾಯನ ಪಟ್ಟಾಭೀಷೇಕವನ್ನು ನೇರವೆರಿಸಿದನು ಎನ್ನಲಾಗಿದೆ.

ತಾಳಿಕೋಟೆ ಯುದ್ಧದಲ್ಲಿ ವಿಜಯನಗರಕ್ಕೆ ಸೋಲಾಗಿತ್ತು. 1570ರಲ್ಲಿ ಸದಾಶಿವರಾಯನ ಕೊಲೆಯಾಯಿತು. ಈ ಸೋಲಿನ ಸಂಕಟದ ಸಮಯದಲ್ಲಿ ವಿಜಯನಗರದ (ಕೃಷ್ಣದೇವರಾಯನ) ರಾಜ ಕುಟುಂಬವು ಸೋಂದೆಯ ನೆಂಟರ ಮನೆಯಲ್ಲಿ ಆಶ್ರಯ ಪಡೆದಿತ್ತು.

"ಬೊಂಬೈ ಗೆಜಟಿಯಾರ್" ಕೊಂಕಣ (ಕೆನರಾ)

ಕೃಷ್ಣ ದೇವರಾಯನ ಅಣ್ಣ ನರಸಿಂಹ ನಾಯಕನು ಕೃಷ್ಣದೇವರಾಯನ ಕಣ್ಣು ಕೀಳಿಸಲು ರಾಜಾದೇಶ ಮಾಡಿದಾಗ ಕೃಷ್ಣದೇವರಾಯನು ತಲೆತಪ್ಪಿಸಿಕೊಂಡು ಅಡಗಿಕೊಂಡಿದ್ದು ಗೋಕರ್ಣದಲ್ಲಿ ಮತ್ತು ಆಗ ಬೀರಣ್ಣ ನಾಯಕನನ್ನು ತನ್ನ ರಕ್ಷಣಾ ಸೇನಾಪತಿಯಾಗಿ ಮಾಡಿಕೊಂಡಿದ್ದನು.

1. Krishna s father who was long childless, promised the succession to his sister s son Arsappa Naik. Afterwards, when sons were born Krishna Made Arsappa ruler of Sonde.
2. The Sonda Chiefs as a branch of the Vijayanagar kings who settled at Sonda after the downfall of the Vijayanagar kings about 1580.

ಹೀಗಿದ್ದರಿಂದ ಹಿರೇಗುತ್ತಿಯ ಶ್ರೀ ಮಹಾಲಿಂಗೇಶ್ವರ ದೇವಾಲಯ ಸಮುಚ್ಚಯ ಸನ್ನಿಧಿಯಲ್ಲಿ ಭೋಜರ ಇತಿಹಾಸ ಕಾಲ, 4ನೇ ಶತಮಾನದಿಂದ ಸೋಂದೆ ನಾಯಕರ ಇತಿಹಾಸ ಕಾಲ ಮತ್ತು ಹರಿಹರ ಬುಕ್ ಸಹೋದರರು ವಿಜಯನಗರದ ರಾಜ್ಯ ಸ್ಥಾಪನೆ ಇತಿಹಾಸ ಕಾಲದವರೆಗೆ ತನ್ನದೆ ಆದ ಯೋಧ ಪರಂಪರೆ ಬೆಳೆದುಬಂದಿತ್ತೆಂದು ತಿಳಿಯ ಬಹುದಾಗಿದೆ. ಹಿರೇಗುತ್ತಿಯಲ್ಲಿ "ನಾಡಗುತ್ತಿ 12" ರಾಜ್ಯವು ಚಿಕ್ಕಗುತ್ತಿಯ ಹರಿಹರನಿಂದ ಕ್ರಿ.ಶ. 1335ರಲ್ಲಿ ಚಿಕ್ಕ ರಾಜ್ಯಸ್ಥಾಪನೆಯಾಯಿತು. ಇಲ್ಲಿರುವ ಶಿಲಾಶಾಸನದ ಸಾಮ್ರಾಟ ಪ್ರತಾಪದೇವರಾಯನ ತಾಯಿ ಗಂಗಾದೇವಿಯು ತನ್ನ "ಮಧುರಾ ವಿಜಯಂ" ಕಾವ್ಯದಲ್ಲಿ ವರ್ಣಿಸಿದಂತೆ "ಇಂಗಡಲ ಕಡಲ ದೊರೆಗಳಾಗಿ" ಅಂದರೆ ಗೋಕರ್ಣ ಕಡಲಿನಿಂದ ಮಧುರೈಯ ಕಡಲವರೆಗೆ ದಕ್ಷಿಣ ಭಾರತವನ್ನೆಲ್ಲಾ ಗೆದ್ದಿರುವ ಸಾಮ್ರಾಜ್ಯ ಸ್ಥಾಪನೆಮಾಡಿ ಹಿಂದು ದೇವಾಲಯ ಮತ್ತು ಹಿಂದು ಧರ್ಮದ ರಕ್ಷಣೆ ಮಾಡಿ ಕನ್ನಡ ನಾಡಿನ ವಿಜಯ ಫತಾಕೆ ನೆಟ್ಟಂತಹ ರಾಜ್ಯ "ನಾಡಗುತ್ತಿ 12" ಆಗಿದೆ.

ಗ್ರಂಥಸೂಚಿ

1. *Hireguti, pp-70-75, EI, XIII.*
2. ಡಾ. ಎಸ್. ಡಿ. ಶೆಟ್ಟಿ, ಹಿರೇಗುತ್ತಿ ಮಹಾಲಿಂಗೇಶ್ವರ ಮಠ/ಅರಮನೆ ಶಾಸನ ಪತ್ರ (ಕ್ರಿ.ಶ. 1333).
3. ಸಲ್ಲೇಖನ ಶಾಸನಗಳು–4
4. *Bhavikeri, ESI-XIII, 1986, pp 87-90*
5. *Chandawar Inscription of Biradev, IESRS, Vol. XI, M.D. Sampath, pp 88-91.*
6. *No. 27, Kuntkani Plate of Kadamba Ravivarma, EI, XXXII, pp. 217- 219.*
7. *Bombay Gazeteer, p. 120, Chapter VII.*
8. *Arga Copper Plate Inscription, EI.*
9. *Bombay Gazeteer Konkana, District Kanara, p. 98*
10. ಎಮ್. ಜಿ. ವಾರಿ, *ಸೋದೆ ಅರಸು ಮನೆತನ,* ಪು. 32–33.
11. ಸೂರ್ಯನಾಥ ಕಾಮತ, *ಕರ್ನಾಟಕ ಸಂಕ್ಷಿಪ್ತ ಇತಿಹಾಸ,* ಪು. 149.

35. ಹಾಸನ ತಾಲ್ಲೂಕಿನ ವಿಜಯನಗರ ಕಾಲದ ಶಾಸನಗಳು

ಕೆ.ಎಸ್. ಮಲ್ಲೇಶಪ್ಪ

ಹಾಸನ ತಾಲ್ಲೂಕು ಪ್ರದೇಶವು ಹಾಸನ ಜಿಲ್ಲೆಯ ಒಂದು ಪ್ರತ್ಯೇಕ ತಾಲ್ಲೂಕು ಆಗಿದ್ದು, ಐತಿಹಾಸಿಕವಾಗಿ ಮಹತ್ವ ಪಡೆದಿದೆ. ಹಾಸನ ಎಂಬ ಹೆಸರು ಹೇಗೆ ಬಂತು ಎಂಬುದಕ್ಕೆ ಪೌರಾಣಿಕ ಹಿನ್ನೆಲೆಯಿದೆ. ಪೌರಾಣಿಕವಾಗಿ ಈ ಸ್ಥಳಕ್ಕೆ ಕಾಮ್ಯವನವೆಂದೂ, "ಸಿಂಹಾಸನ ಪುರಿ" ಎಂದೂ ಎರಡನೇ ಹೆಸರಿನಲ್ಲಿ ಸಿಂಹ, ಪುರಿ (ಪುರ) ಎರಡು ಲೋಪವಾಗಿ ಹಾಸನ ಎಂದು ಉಳಿದುಕೊಂಡಿದೆ ಎಂದು ನಂಬಿದ್ದಾರೆ.[1] "ಹಾಸಿನ ಬಳ್ಳಿ" ಎಂಬ ಸಸ್ಯ ಸಂಬಂಧದಿಂದ ಈ ಊರಿಗೆ ಹಾಸನ ಎಂಬ ಹೆಸರು ಬಂದಿರಬಹುದೆಂದು ಹೇಳುತ್ತಾರೆ.[2] ಹಾಸನ ಎಂದರೆ 'ಹಸನ್ಮುಖಿ' ಎಂದರ್ಥ.

ಹಸನಬಿ ಎಂಬುವವಳ ಗೋರಿ ಇತ್ತು ಇದೇ ಹಸನಬೀ > ಹಾಸನಬ್ಬೆ > ಹಾಸನಾಂಬೆ ಎಂದು ಕಾಲಾನಂತರ ರೂಪಾಂತರವಾಯಿತೆಂದು ಕೆಲವು ಮುಸ್ಲೀಮರು ವಾದಿಸುತ್ತಾರೆ. ಮುಸ್ಲೀಂ ವಾದಗಳು ಪೂರಕವಾಗಿಲ್ಲ. ಹಾಸನಾಂಬೆ ಈ ಊರಿನ ಗ್ರಾಮದೇವತೆ ಹಾಗೂ ಗ್ರಾಮರಕ್ಷಕಳಾಗಿದ್ದಳು ಎಂಬುದು ಐತಿಹ್ಯ.[3] ಮತ್ತೊಂದು ಐತಿಹ್ಯದ ಪ್ರಕಾರ ಸಪ್ತಮಾತೃಕೆಯರು ಉತ್ತರದ ವಾರಣಾಸಿಯಿಂದ (ಕಾಶಿ) ದಕ್ಷಿಣದ ಕಡೆಗೆ ಬಂದು ಹಾಸನದಲ್ಲಿ ಈ ಸಪ್ತಮಾತೃಕೆಯರಲ್ಲಿ ವೈಷ್ಣವಿ, ಮಹೇಶ್ವರಿ, ಕೌಮಾರಿದೇವಿಯರು ಈ ಮೂವರು ಹಾಸನಾಂಬೆ ದೇವಾಲಯದಲ್ಲಿ ಹುತ್ತದ ರೂಪದಲ್ಲಿ ನೆಲಸಿದರು. ಬ್ರಾಹ್ಮಿದೇವಿಯು ಕೆಂಚಯ್ಯನ ಹೊಸಕೋಟೆಯಲ್ಲಿ ನೆಲಸಿ, ಉಳಿದ ಮೂವರು ದೇವತೆಗಳಾದ ಚಾಮುಂಡಿ, ವರಾಹಿ, ಇಂದ್ರಾಣಿ ದೇವಿಯರು ಈಗ ಹಾಸನ ನಗರದ ಮಧ್ಯಭಾಗದಲ್ಲಿರುವ ದೇವಿಗೆರೆಯಲ್ಲಿ ನೆಲೆಸಿದರೆಂಬ ಪ್ರತೀತಿ ಇದೆ. ಅದಕ್ಕಾಗಿ ಈ ಕೊಳಕ್ಕೆ ದೇವಿಕೊಳ ಅಥವಾ ದೇವಿಕೆರೆ ಎನ್ನುತ್ತಾರೆ. ಒಟ್ಟಿನಲ್ಲಿ ಹಾಸನ ನಗರದ ಹಾಸನಾಂಬೆ ಗ್ರಾಮದೇವತೆ ಎನ್ನುವುದಕ್ಕೆ ಸ್ಥಳೀಯ ಜಾನಪದ ಗೀತೆಗಳೇ ಆಧಾರ.[4]

ಚಾರಿತ್ರಿಕವಾಗಿ ಹಾಸನ ಜಿಲ್ಲೆಯಲ್ಲಿ ಶಾತವಾಹನರು, ಕದಂಬರು, ಗಂಗರು, ಚಾಲುಕ್ಯರು, ಹೊಯ್ಸಳರು, ವಿಜಯನಗರದ ಅರಸರು, ಮೈಸೂರಿನ ಒಡೆಯರು ಆಳಿದರು. ಹೊಯ್ಸಳ ಮತ್ತು ವಿಜಯನಗರ ಶಾಸನಗಳಲ್ಲಿ ಪಾಳೇಗಾರರು ಆಳ್ವಿಕೆ ನಡೆಸುತ್ತಿದ್ದರೆಂದು ಉಲ್ಲೇಖವಾಗಿವೆ. ವಿಜಯನಗರದ ಕಾಲಕ್ಕೆ ಕೃಷ್ಣಪ್ಪನಾಯಕನು ಹಾಸನ ಸೀಮೆಯ ಅಧಿಪತಿಯಾಗಿದ್ದನೆಂದು ಶಾಸನಗಳಲ್ಲಿ ಉಕ್ತವಾಗಿವೆ. ಹಾಸನದ ಚನ್ನಪಟ್ಟಣ ಅಥವಾ (ಚೆಲುವಪಟ್ಟಣ) ನಿರ್ಮಿಸಿ ಕೋಟೆಯನ್ನು ಕಟ್ಟಿಸಿ ಚನ್ನಪಟ್ಟಣ ಕೆರೆಯನ್ನು ನಿರ್ಮಿಸಿದನೆಂದು ಹೇಳಲಾಗಿದೆ.

ಹಾಸನ ತಾಲ್ಲೂಕಿನಲ್ಲಿ ವಿಜಯನಗರ ಕಾಲದ ಒಟ್ಟು ಹದಿನೆಂಟು ಶಾಸನಗಳು ಎಪಿಗ್ರಫಿಯ ಕರ್ನಾಟಕ ಸಂಪುಟ–8ರಲ್ಲಿ ದಾಖಲಾಗಿವೆ. ಇವುಗಳಲ್ಲಿ ಸಂಗಮ ಅರಸರ ಕಾಲಕ್ಕೆ ಸಂಬಂಧಿಸಿದ ಒಂದನೇ ಬುಕ್ಕರಾಯನ (ಹಾ–89) ಒಂದು ಶಾಸನ, ಎರಡನೇ ಹರಿಹರನ (ಹಾ–115) ಒಂದು ಶಾಸನ ಒಂದನೇ ದೇವರಾಯನ (ಹಾ–11) ಒಂದು ತಾಮ್ರ ಶಾಸನ, ಮೂರನೇ ಬುಕ್ಕರಾಯನ (ಹಾ–123) ಒಂದು ಶಾಸನ, ದೇವರಾಯ (ಹಾ–190) ಉಡುವರೆ ಶಾಸನಗಳು ಮುಖ್ಯವಾದವುಗಳು. ತುಳುವ ಮನೆತನದ ವಿಜಯನಗರದ ಸುಪ್ರಸಿದ್ಧ ಸಾಮ್ರಾಟ ಕೃಷ್ಣದೇವರಾಯನ ನಾಲ್ಕು ಶಾಸನಗಳು (ಹಾ–219, ಹಾ–83, ಹಾ–84, ಹಾ–8), ಅಚ್ಯುತರಾಯನ ಮೂರು ಶಾಸನಗಳು (ಹಾ–1, ಹಾ–166, ಹಾ–168), ಸದಾಶಿವರಾಯನ ಕಾಲದ ಐದು ಶಾಸನಗಳು (ಹಾ–2, ಹಾ–9, ಹಾ–44, ಹಾ–79, ಹಾ–122), ಅರವೀಡು ಸಂತತಿಯ ಶ್ರೀರಂಗನ ಕಾಲಕ್ಕೆ ಸೇರಿದ (ಹಾ–77) ಒಂದು ಶಾಸನವು ಲಭ್ಯವಿದ್ದು ಚಾರಿತ್ರಿಕ ಮಹತ್ವದ ದೃಷ್ಟಿಯಿಂದ ಪರಿಶೀಲಿಸಲಾಗಿದೆ. ಹಾಸನ ತಾಲ್ಲೂಕಿನ ವಿಜಯನಗರದ ಶಾಸನಗಳ ಸಾಂಸ್ಕೃತಿಕ ವಿಚಾರಗಳನ್ನು ತಿಳಿಸುವ ಪ್ರಯತ್ನಮಾಡಲಾಗಿದೆ. ಕೆಲವು ಶಾಸನಗಳಲ್ಲಿ ರಾಜಕೀಯ, ಆಡಳಿತ, ಧಾರ್ಮಿಕ, ದಾನದತ್ತಿಗಳ ವಿಚಾರ,

ಸಾಂಸ್ಕೃತಿಕ ವಿಚಾರಗಳನ್ನು ತಿಳಿಯಲು ವಿಜಯನಗರ ಕಾಲದ ಶಾಸನಗಳು ಉಪಯುಕ್ತವಾಗಿವೆ.

ಸಂಗಮ ಅರಸರ ಕಾಲದ ವೀರ ಬುಕ್ಕರಾಯನ ಕ್ರಿ.ಶ. 1377–1378ರ ಕಾಲಕ್ಕೆ ಸೇರಿದ (ಹಾಸನ–89) ಅನುಗವಳ್ಳಿ ಶಾಸನದಲ್ಲಿ ವೀರಬುಕ್ಕಣ್ಣ ಒಡೆಯರನ್ನು ಶ್ರೀಮನ್‌ಮಹಾಮಂಡಲೇಶ್ವರ, ಅರಿರಾಯವಿಭಾಡ, ಭಾಷೆಗೆ ತಪ್ಪುವ ರಾಯರ ಗಂಡ, ಚತುಸ್ಸಾಮುದ್ರಾಧಿಪತಿ ಎಂದು ಉಲ್ಲೇಖಿಸಲಾಗಿದೆ. ವೀರ ಬುಕ್ಕಣ್ಣನ ಕಾಲದಲ್ಲಿ ಶ್ರೀವತ್ಸ ಗೋತ್ರದ ಅನುಗಪಳ್ಳದ ಕಂಬ ರಾಮಾಯಣ ನಾರಯಣನ ಮಕ್ಕಳು ರಾಮಾಯಣದಲ್ಲಿ ಬರುವ ರಾಮಪ್ಪ ಮತ್ತು ಲಕ್ಷ್ಮಣರು ಅನುಗವಳ್ಳಿಯ ರಾಮಚಂದ್ರ ದೇವರ ಪಾದಕ್ಕೆ ನಮಸ್ಕಾರ ಮಾಡಿ ಹೋದರು ಎಂಬುದನ್ನು ತಿಳಿಸುತ್ತದೆ. ಈ ಶಾಸನ ಅನುಗವಳ್ಳಿ ಗ್ರಾಮದ ಕೇಶವ ದೇವಾಲಯದ ರಂಗ ಮಂಟಪದಲ್ಲಿದೆ.

ಎರಡನೇ ಹರಿಹರನ (ಹಾಸನ–115) ಚಿಕ್ಕಡಲೂರಿನಲ್ಲಿ ದೊರೆತ ಮೂರು ಶಾಸನಗಳಲ್ಲಿ ಎರಡು ತಾಮ್ರದ ಹಲಗೆಗಳ ಮೇಲೆ ಕಂಡರಿಸಿದವು. ಚಿಕ್ಕಡಲೂರಿನ ಪಟೇಲ್ ಲಿಂಗೇಗೌಡರ ವಶದಲ್ಲಿದ್ದ ತಾಮ್ರ ಶಾಸನದಲ್ಲಿ ಮೂರು ತಾಮ್ರ ಪಟಗಳಿದ್ದು ಸಂಸ್ಕೃತ, ಕನ್ನಡ ಭಾಷೆಯಲ್ಲಿ ಕೊರೆಯಲ್ಪಟ್ಟಿದೆ. ನಾಗರಿ ಶೈಲಿಯ ಲಕ್ಷಣಗಳನ್ನೊಳಗೊಂಡಿದೆ. ಹಾಸನದ ಸೀಗೆನಾಡುಗೆ ಸೇರಿದ ಕಡಲೂರು, ಹಿರೇಕಡಲೂರು, ಮೈದನಹಳ್ಳಿ (ಹರಿಹರ ಪುರ) ಇವುಗಳನ್ನು ಎರಡನೇ ಹರಿಹರ ಅಗ್ರಹಾರವಾಗಿ ಪರಿವರ್ತಿಸಿದರೆಂದು ಉಲ್ಲೇಖಿಸಲಾಗಿದೆ. 13 ಬ್ರಾಹ್ಮಣರಿಗೆ ದಾನನೀಡಿದ ವಿಷಯವನ್ನು ತಿಳಿಸುತ್ತದೆ. ದಾನಗಳನ್ನು ರಾಜಧಾನಿ ಪಂಪಾ ಕ್ಷೇತ್ರದ ವಿರುಪಾಕ್ಷದೇವರ ಸನ್ನಿದಿಯಲ್ಲಿ ನೀಡಲಾಯಿತು ಎಂದು ಹಾಗೂ ಈ ಶಾಸನವನ್ನು ಕೆತ್ತಿಸಿದವನು ಮುದ್ದಣ್ಣಚಾರ್ಯನೆಂದು ತಿಳಿಸುತ್ತದೆ.

ಒಂದನೇ ದೇವರಾಯನ (ಹಾಸನ–11) ಹಂದಿಗನಕೆರೆ (ವೀರಪ್ರತಾಪ ದೇವರಾಯಪುರ) ಈ ಶಾಸನ ಒಂದನೇ ದೇವರಾಯನು ಕ್ರಿ.ಶ. 1406ರಲ್ಲಿ ಪಟ್ಟಾಭಿಷಿಕ್ತನಾದ ಸಂದರ್ಭದಲ್ಲಿ ಹೊರಡಿಸಿದ ಶ್ರೀ ಮಹಾರಾಜಾದಿರಾಜ, ರಾಜಪರಮೇಶ್ವರ, ಶ್ರೀ ವೀರಪ್ರತಾಪ ದೇವರಾಯ ಮಹಾರಾಯ ಎಂಬ ಬಿರುದಾಂಕಿತನಾಗಿದ್ದನೆಂದು ಭಾಸ್ಕರಕ್ಷೇತ್ರ ತುಂಗಭದ್ರಾ ತೀರೆ, ಹೇಮ ಕೂಟ, ಶ್ರೀ ವಿರುಪಾಕ್ಷನ ಸನ್ನಿಧಿಯಲ್ಲಿ ಪಟ್ಟಾಧಿಕಾರವಾದಾಗ ಹಾಸನದ ಹಂದಿಗನಕೆರೆ ಗ್ರಾಮಕ್ಕೆ "ದೇವರಾಯಪುರ" ಎಂಬ ತನ್ನ ಹೆಸರನ್ನಿಡಿಸಿ ಅಗ್ರಹಾರವನ್ನಾಗಿ ಪರಿವರ್ತಿಸಿ 32 ವೃತ್ತಿಗಳಾನ್ನಾಗಿ ವಿಭಜಿಸಿ, ಅದರಲ್ಲಿ ಒಂದು ವೃತ್ತಿಯನ್ನು ಈ ಗ್ರಾಮದ ರಾಮಚಂದ್ರ ಮತ್ತು ಶಂಭುದೇವರುಗಳಗೆ, ಉಳಿದ 31 ವೃತ್ತಿಗಳನ್ನು ವಿವಿಧ ಗೊತ್ರದ ವಿಪ್ರರಿಗೆ ಪಂಪಾ ಕ್ಷೇತ್ರದ ವಿರುಪಾಕ್ಷನ ಸನ್ನಿಧಿಯಲ್ಲಿ ದಾನ ನೀಡಲಾಯಿತೆಂದು ಉಲ್ಲೇಖಿಸಲಾಗಿದೆ. ದೇವರಾಯ ಪಟ್ಟಕ್ಕೆ ಬಂದ ಕಾಲವನ್ನು ನಿಖರವಾಗಿ ತಿಳಿಸುತ್ತದೆ. ರಾಜಕೀಯವಾಗಿ ಈ ಶಾಸನ ಮಹತ್ವದಾಗಿದೆಯಲ್ಲದೆ ಬ್ರಾಹ್ಮಣರಿಗೆ ದಾನ ಧರ್ಮ ಮಾಡಿದ ಸಂಗತಿಯನ್ನು ತಿಳಿಸುತ್ತದೆ. ಧಾರಾಪೂರ್ವಕವಾಗಿ ಕೊಟ್ಟ ಈ ಧರ್ಮ ಶಾಸನದಲ್ಲಿ ಹದಿಮೂರು ಬ್ರಾಹ್ಮಣ ಗೋತ್ರಗಳನ್ನು ಉಲ್ಲೇಖಿಸಲಾಗಿದೆ.

1. ಹರಿತಗೋತ್ರ
2. ಜಮದಗ್ನಿವತ್ಸಗೋತ್ರ
3. ವಿಶ್ವಾಮಿತ್ರಗೋತ್ರ
4. ವೈಖಾನಸಗೋತ್ರ
5. ಅತ್ರೇಯಗೋತ್ರ
6. ಗೌತಮಗೋತ್ರ
7. ಭಾರದ್ವಾಜಗೋತ್ರ
8. ಕಶ್ಯಪ ಗೋತ್ರ
9. ವಸಿಷ್ಟಗೋತ್ರ
10. ಮೌನಭಾರ್ಗವಗೋತ್ರ
11. ಭಾರ್ಗವಗೋತ್ರ
12. ಕೌಂಡಿನ್ಯಗೋತ್ರ
13. ವಿಷ್ಣುವೃದ್ಧಸಗೋತ್ರ

ಇಷ್ಟೊಂದು ಬ್ರಾಹ್ಮಣಗೋತ್ರಗಳನ್ನು ಉಲ್ಲೇಖಿಸಿರುವುದರಿಂದ ಈ ಶಾಸನ ಚಾರಿತ್ರಿಕವಾಗಿ ಮಹತ್ವದ್ದಾಗಿದೆ

ಹೀಗೆ ಈ ಶಾಸನ ಒಂದನೇ ದೇವರಾಯ ಕ್ರಿ.ಶ. 1406ರಲ್ಲಿ ಪಟ್ಟಕ್ಕೆ ಬಂದನೆಂದು ತಿಳಿಸುತ್ತದೆ. ಆದರೆ ವಿಜಯನಗರ ಸಂಪುಟ 15ರಲ್ಲಿ ಡಾ॥ ಡಿ.ಎಂ. ನಾಗರಾಜ್ (ಪು. 19–24) ಒಂದನೇ ದೇವರಾಯನ ಧಾರ್ಮಿಕ ಶಾಸನಗಳು ಈ

ಲೇಖನದಲ್ಲಿ ಒಂದನೇ ದೇವರಾಯನ ಕಾಲವನ್ನು 1405ರಿಂದ 1426 ಎಂದು ತಿಳಿಸಿದ್ದಾರೆ.[5] ಹಾಸನದ ಈ ಹಂದಿಗನಕೆರೆ ಗ್ರಾಮಕ್ಕೆ "ದೇವರಾಯಪುರ" ಎಂಬ ಹೆಸರನ್ನಿಡಿಸಿ 32 ವೃತ್ತಿಗಳನ್ನಾಗಿ ವಿಭಜಿಸಿ ಇಷ್ಟೊಂದು ಬ್ರಾಹ್ಮಣರಿಗೆ ದಾನಧರ್ಮ ನೀಡಿದ ವಿಷಯವನ್ನು ಪಟ್ಟಾಧಿಕಾರವಾದಾಗ ಕ್ರಿ.ಶ. 1406 ಎಂದು ಉಲ್ಲೇಖಿಸಿರುವುದರಿಂದ ಇದೇ ನಿಖರವಾದ ಕಾಲ ಎಂದು ಏಕೆ ನಿರ್ಧರಿಸಬಾರದು ಎಂಬ ವಿಷಯ ವಿದ್ವಾಂಸರಿಂದ ವಿಮರ್ಶೆಯಾಗಬೇಕಾಗಿದೆ.

ಮೂರನೇ ಬುಕ್ಕರಾಯನ ಶಾಸನ (ಹಾಸನ-123) ಕನ್ನಡ ಮತ್ತು ನಾಗರಿ ಲಿಪಿಯಲ್ಲಿರುವ ಈ ಶಾಸನ ಹಾಳಾಗಿದ್ದು ಸತ್ಯ ಎಂಬ ಗ್ರಾಮವನ್ನು ಧಾರಾಪೂರ್ವಕವಾಗಿ ದಾನ ನೀಡಿದ ಬಗ್ಗೆ ತಿಳಿಸುತ್ತದೆ. ಬಹುಶಃ ರಾಜಕುಮಾರ ಮೂರನೇ ಬುಕ್ಕರಾಯನ ಶಾಸನವಿರಬಹುದು. ಈ ಗ್ರಾಮದಲ್ಲಿ ಸಂಗಮ ಅರಸರ ಮೂರನೇ ಬುಕ್ಕನ ಮಂಗಳ ಕಾರ್ಯಗಳು ನಡೆಯುತ್ತಿದ್ದರಿಂದ ಮುಂದೆ ಈ ಗ್ರಾಮ ಸತ್ಯಮಂಗಲವಾಗಿರಬಹುದು.

ಒಂದನೇ ದೇವರಾಯನ (ಹಾಸನ-190) ಉಡುವರೆ ಶಾಸನವು ವೀರಪ್ರತಾಪ ದೇವರಾಯ ಮಹಾರಾಯರು ಆಳುತ್ತಿದ್ದಾಗ ಆಡಳಿತಾಧಿಕಾರಿ ಪೆರ್ಗ್ಗಡೆ ಬ್ರಮಣ್ಣನಾಯಕರು ದೇವರ ಅಮೃತ ಪಡಿಗೆ ಹಳ್ಳಿಹಿರಿಯೂರು ಹಂದಲದೆರೆಯ ಮೂರು ಮದುವೆಯ ಹಣವನ್ನು ದಾನಕೊಟ್ಟನೆಂದು ಈ ಶಾಸನ ತಿಳಿಸುತ್ತದೆ. ವಿಜಯನಗರದ ಅರಸರು ದಾನಧರ್ಮಗಳಿಗೆ ಹೆಸರಾದವರೆಂದು ತಿಳಿಸುತ್ತದೆ. ಎರಡನೇ ಪ್ರೌಢದೇವರಾಯನ ಕಾಲ ಕ್ರಿ.ಶ. 1424ರಿಂದ ಕ್ರಿ.ಶ. 1446 ಆಗಿರುವುದರಿಂದ ಈ ಶಾಸನದ ಕಾಲವನ್ನು ನಿರ್ಧರಿಸಲಾಗಿಲ್ಲ.

ತುಳುವ ಸಂತತಿಯ ಪ್ರಸಿದ್ಧ ಸಾಮ್ರಾಟ ಕೃಷ್ಣದೇವರಾಯನ ಶಾಸನಗಳಲ್ಲಿ ಕ್ರಿ.ಶ. 1515ರ (ಹಾಸನ-8) ಕಿತ್ತಾನೆ ತಾಮ್ರಪಟಲೇಖ ಸ್ವಲ್ಪ ಕುತೂಹಲಕಾರಿಯಾಗಿದೆ. ನಾಗರಿ ಲಿಪಿ ಮತ್ತು ಸಂಸ್ಕೃತ ಭಾಷೆಯಲ್ಲಿರುವ ಈ ಶಾಸನದ ಕೊನೆಯ ಎರಡು ಸಾಲುಗಳಲ್ಲಿ ಅಗ್ರಹಾರದ ಸೀಮೆಗಳನ್ನು ಕನ್ನಡ ಭಾಷೆಯಲ್ಲಿ ತಿಳಿಸುವುದಾಗಿ ಹೇಳಿದೆ. ಆದರೆ ಈ ಶಾಸನ ಇಲ್ಲಿಗೆ ನಿಂತು ಹೋಗಿದ್ದು ಕನ್ನಡ ಭಾಗವನ್ನು ರಚಿಸಿಲ್ಲ. ಉದ್ದೇಶಪೂರ್ವಕವಾಗಿ ಅದನ್ನು ಬಿಡಲಾಯಿತು ಎಂದು ಹೇಳಲು ಸಾಧ್ಯವಿಲ್ಲ. ಹಾಸನ ಸೀಮೆಗೆ ಸೇರಿದ ಕಿತ್ತಾನೆ ಗ್ರಾಮವನ್ನು ಕೃಷ್ಣದೇವರಾಯನ ಅರಸಿಯಾದ ತಿರುಮಲಾಂಬಳ ಹೆಸರಿನಲ್ಲಿ "ತಿರುಮಲಾಪುರ"ವೆಂದು ಪ್ರತಿನಾಮದೇಯ ಮಾಡಿ ಅದನ್ನು 28 ವೃತ್ತಿಗಳಾಗಿ ವಿಂಗಡಿಸಿ 25 ಬ್ರಾಹ್ಮಣರಿಗೆ ರಾಜನು ದಾನನೀಡಿದ ವಿಷಯವನ್ನು ತಿಳಿಸುತ್ತದೆ. ಪ್ರತಿಗ್ರಹಿಗಳಲ್ಲಿ ಮೂವರು ತಲಾ 2 ವೃತ್ತಿಗಳನ್ನು ಪಡೆದರು. ಇವರಲ್ಲಿ ರಂಗನಾಥನ ಮಕ್ಕಳಾದ ಮಾಧವದೀಕ್ಷಿತ ಮತ್ತು ಯಜ್ಞನಾರಾಯಣ ಎಂಬಿಬ್ಬರು ಪ್ರಾಯಶಃ ಸೋದರರು. ಕೃಷ್ಣದೇವರಾಯ ಶ್ರೀಶೈಲದಲ್ಲಿದ್ದಾಗ ದಾನ ನೀಡಿದುದು ಈ ಶಾಸನದ ಮಹತ್ವದ ಅಂಶ.

ಕೃಷ್ಣದೇವರಾಯನ ಕ್ರಿ.ಶ. 1524ರ (ಹಾಸನ-83) ಕುದುರೆಗುಂಡಿ ಶಾಸನವು ಮೂರು ತಾಮ್ರ ಪಟಗಳಮೇಲೆ ಬರೆದ ತಾಮ್ರಶಾಸನವಾಗಿದ್ದು ಸಂಸ್ಕೃತ ಭಾಷೆ ಮತ್ತು ನಾಗರೀ ಲಿಪಿಯಲ್ಲದೆ. ಈ ಶಾಸನ ಹೊಯ್ಸಳನಾಡು ಬೇಲೂರು ಸೀಮೆಗೆ ಸೇರಿದ ಮುತ್ತತ್ತಿ ಗ್ರಾಮಕ್ಕೆ ಕೃಷ್ಣದೇವರಾಯನು "ಕೃಷ್ಣರಾಯಪುರ" ಎಂದು ಪ್ರತಿನಾಮಕರಣಮಾಡಿದ್ದಾಗಿ ತಿಳಿಸುತ್ತದೆ. ರಂಗನಾಥನ ಮೊಮ್ಮಗ ನಂಜಿನಾಥನ ಮಗ ಕೃಷ್ಣಾದೀಕ್ಷಿತನಾಳುತ್ತಿದ್ದಾಗ ತುಂಗಭದ್ರಾತೀರದ ಹೇಮಕೂಟದ ವಿರುಪಾಕ್ಷನ ಸನ್ನಿಧಿಯಲ್ಲಿ ಮುತ್ತತ್ತಿ ಗ್ರಾಮಕ್ಕೆ ತನ್ನ ಹೆಸರನಿಟ್ಟನೆಂದು, ಈ ಶಾಸನವನ್ನು ರಚಿಸಿದವನು ಸಭಾಪತಿ, ಕೆತ್ತಿಸಿದವನು ವಿರಣ್ಣಾಚಾರ್ಯನ ಮಗ ಅಪ್ಪಣ್ಣಾಚಾರ್ಯನೆಂದು ತಿಳಿಸುತ್ತದೆ.

ಕೃಷ್ಣದೇವರಾಯನ ಕಾಲದ (ಹಾಸನ-84) ಮುತ್ತತ್ತಿ ಶಾಸನದ ಕಾಲನಿರ್ಣಯದ ಬಗ್ಗೆ ಈಗಾಗಲೇ ರಾಬರ್ಟ್ ಸಿವೆಲ್ ಮತ್ತು ಎಸ್. ಕೃಷ್ಣಸ್ವಾಮಿ ಅಯ್ಯಂಗಾರ್ ಅವರು ತಮ್ಮ ಹಿಸ್ಟಾರಿಕಲ್ "ಇನ್‌ಸ್ಕ್ರಿಪ್ಷನ್ ಆಫ್ ಸದರನ್ ಇಂಡಿಯ"ದಲ್ಲಿ ಚರ್ಚಿಸಿದ್ದಾರೆ ಅದರಲ್ಲಿ ಕಾಲದ ವಿವರಗಳನ್ನು ಕ್ರಿ.ಶ. 1528ರ ಜುಲೈ 6 ಸೋಮವಾರಕ್ಕೆ ಸಮನಾಗಿದೆ. ಹಾಗೂ ಸಂಕ್ರಾತಿಯನ್ನು ಜೂನ್ 29ರಂದು ಸಂಭವಿಸಿದ ದಕ್ಷಿಣಾಯನ ಸಂಕ್ರಾಂತಿಯೆಂದು ಭಾವಿಸಿದೆ. ಆದರೆ ಕೊಟ್ಟಿರುವ ತಿಥಿ ಕ್ರಿ.ಶ. 1528 ಆಗಸ್ಟ 5 ಬುಧವಾರಕ್ಕೆ ಹೊಂದುತ್ತದೆ. ಇದಕ್ಕೆ ಅತೀ ಸಮೀಪದ ಸಂಕ್ರಾಂತಿ ಎಂದರೆ ಜುಲೈ 31ರಂದು

ಸಂಭವಿಸಿದ ಸಿಂಹ ಸಂಕ್ರಾಂತಿ ಶಾಸನೋಕ್ತ ದಾನಿ ಯಾರೋ ಒಬ್ಬ ನಾಯಕ. ಹೆಸರು ಸ್ಪಷ್ಟವಾಗಿಲ್ಲ. ಅರಸ ಕೃಷ್ಣರಾಯನ ಮೊಮ್ಮಗ ಹಾಗೂ ವೆಂಕಟಾದ್ರಿಯ ಮಗನೆನಿಸಿದ ಸಿಂಗಪ್ಪನಾಯಕನಿಗೆ ಬಂಧುವೆಂದು ಕಾಣುತ್ತದೆ. ಆದರೆ ಕೃಷ್ಣದೇವರಾಯನಿಗೆ ಅಂಥ ಹೆಸರಿನ ಮಗನಿದ್ದನೆ ಎಂಬುದು ತಿಳಿಯದು.

ಕೃಷ್ಣದೇವರಾಯನ ಕ್ರಿ.ಶ. 1516 ಜೂನ್ 29ರ ಕಾಲಕ್ಕೆ ಸೇರಿದ (ಹಾಸನ-219) ಬಿಟ್ಟುಗೊಂಡನಹಳ್ಳಿ ಶಾಸನದಲ್ಲಿ ಕೃಷ್ಣದೇವರಾಯನು ಒರಿಸ್ಸಾದ ಗಜಪತಿಯ ಮೇಲೆ ದಂಡಯಾತ್ರೆ ಮಾಡಿ ಅವನನ್ನು ಪರಾಭವಗೊಳಿಸಿ ಕೃಷ್ಣವೇಣಿ ತೀರದಲ್ಲಿ ಜಯಸ್ತಂಭವನ್ನು ಸ್ಥಾಪಿಸಿ ಹಿಂತಿರುಗುತ್ತಿರುವ ಸಮಯದಲ್ಲಿ ಧನಂಜಯರಾಯ ಒಡೆಯನು ಬಿಟ್ಟುಗೊಂಡನಹಳ್ಳಿಗೆ ಪ್ರತಿನಾಮದೇಯವಾದ "ಧನಂಜಯ ಗ್ರಾಮವನ್ನು" ದಾನ ನೀಡಿದನೆಂದು ತಿಳಿಸುತ್ತದೆ. ಆತ ದಾನವಿತ್ತ ಗ್ರಾಮಕ್ಕೆ ತನ್ನ ಹೆಸರನ್ನೇ ಇಟ್ಟು ಧನಂಜಯ ಗ್ರಾಮವೆಂದು ಕರೆದಿರುವಂತೆ ಕಾಣುತ್ತದೆ. ಹಾಸನದ ಸ್ಥಳ ಆತನಿಗೆ ಅಮರ ನಾಯಕತನಕ್ಕೆ ಪಾಲಿಸಲ್ಪಟ್ಟಿತ್ತೆಂದು ಹೇಳಿದೆ. ಒಟ್ಟಿನಲ್ಲಿ ಕೃಷ್ಣದೇವರಾಯನ ಒರಿಸ್ಸಾದ ದಿಗ್ವಿಜಯ ಯಾತ್ರೆ ಪೂರ್ಣಗೊಂಡಿತೆಂದು ಈ ಶಾಸನದ ಕಾಲಕ್ಕೆ ತಿಳಿದು ಬರುತ್ತದೆ.

ಅಚ್ಯುತರಾಯನ ಶಾಸನಗಳಲ್ಲಿ (ಹಾಸನ-1) ವಿರುಪಾಕ್ಷದೇವಸ್ಥಾನದ ಕರ್ತರಾದ ದೇವರು ಬಟ್ಟರು ಸೇರಿದಂತೆ 12 ಬ್ರಾಹ್ಮಣರಿಗೆ ಭೋಜನ ಹಾಕುವ ಸತ್ರ (ಛತ್ರ) ಒಂದರ ನಿರ್ವಹಣೆಗಾಗಿ ಚನ್ನಪ್ಪನ ಅಳಿಯ ಸಂತಾನ ಮತ್ತು ತಿಪ್ಪಭೂಪಾಲನ ಮಗನಾದ ಯಲ್ಲಪ್ಪನಾಯಕನು ಗ್ರಾಮ ದಾನವನ್ನು ನೀಡಿದ ವಿಷಯ ಈ ಶಾಸನದಲ್ಲಿ ನಿರೂಪಿತವಾಗಿದೆ. ಅಚ್ಯತರಾಯನು ಚನ್ನಪ್ಪಣ್ಣನಿಗೆ ಹಾಸನ ಸೀಮೆಯ ನಾಯಕತನವನ್ನು ನೀಡಿದ್ದನ್ನು ಕನ್ನಡದಲ್ಲಿರುವ ಈ ಶಾಸನ ಪಾಠದ ಮಧ್ಯೆ ತೆಲುಗಿನಲ್ಲಿ ರಚಿತವಾದ ಪದ್ಯವನ್ನು ಸೇರಿಸಲಾಗಿದೆ. ಈ ಪದ್ಯ ಹಾಗೂ ಇದನ್ನು ಅನುಸರಿಸಿ ಬರುವ ಕನ್ನಡ ಪದ್ಯ (12-15) ಸಾಲು ಯಲ್ಲಪ್ಪ ಮತ್ತು ಆತನ ತಂದೆ ತಿಪ್ಪನನ್ನು ಪ್ರಶಂಸಿಸುತ್ತದೆ. ಈ ನಾಡಿನಲ್ಲಿ ಎಲ್ಲೆಡೆ ಸುಖವಿಗಳಿಗೆ (ತಿಪ್ಪ ಮತ್ತ ಯಲ್ಲ ಮಹಿನಾಥರು ಆಳಿದ ದೇಶದಲ್ಲಿ) ದಾರಿದ್ರ್ಯವೇ ಇರಲಿಲ್ಲವೆಂದು ಕನ್ನಡ ಪದ್ಯ ಸಾರುತ್ತದೆ. ಈ ಶಾಸನದ ಕಾಲ ಶಖ ವರ್ಷ 1459 ಅಂದರೆ ಕ್ರಿ.ಶ. 1537ರ ಅಕ್ಟೋಬರ್ ಒಂದಕ್ಕೆ ಅಥವಾ ಕ್ರಿ.ಶ. 1538ರ ಅಕ್ಟೋಬರ್ 23ಕ್ಕೆ ಕಾಲ ಹೊಂದುತ್ತವೆ.

ಅಚ್ಯುತರಾಯನ ಶಾಂತಿಗ್ರಾಮದ ಧರ್ಮೇಶ್ವರ ದೇವಾಲಯದಲ್ಲಿರುವ (ಹಾಸನ-166) ಶಾಸನ, ಶಾಂತಿ ಗ್ರಾಮದ ಧರ್ಮೇಶ್ವರ ದೇವರಿಗೆ ಮತ್ತು ಉತ್ಸವಮೂರ್ತಿ ಚಂದ್ರಶೇಖರ ದೇವರ ನಿತ್ಯನೈವೇದ್ಯಕ್ಕೆ ಶಾಂತಿಗ್ರಾಮ ಸೀಮೆಯಲ್ಲಿನ ಗ್ರಾಮ ಒಂದನ್ನು ದಾನವಿತ್ತ ವಿಷಯವನ್ನು ತಿಳಿಸುತ್ತದೆ. ದಾನನೀಡಿದವನು ತಿಮ್ಮಭೂಪನ ತಮ್ಮ ದೇಮಭೂಪಾಲನ ಮಗನಾದ ತಿಮ್ಮಭೂಪ ಅಥವಾ ಕೆರೆಯ ತಿಮ್ಮರಸ. ಆತನಿಗೆ ಶಾಂತಿ ಗ್ರಾಮದ ಸೀಮೆಯೆ ಅಮರನಾಯಕತನ ನೀಡಲಾಗಿತ್ತು. ಇಲ್ಲಿ ಕೂಡ ಪ್ರತಿಗ್ರಹಿಯು ಧರ್ಮೇಶ್ವರ ದೇವಾಲಯದ ಕರ್ತೃವಾದ ದೇವರು ಭಟ್ಟ ಎಂಬ ಹೆಸರಿನವನು ಎಂದು ಹೇಳಿದೆ.

ಸದಾಶಿವರಾಯನ ಕ್ರಿ.ಶ. 1548ರ ಕಾಲಕ್ಕೆ ಸೇರಿದ (ಹಾಸನ-44) ಚಿಕ್ಕಗದ್ದವಳ್ಳಿ ಶಾಸನದಲ್ಲಿ ಅಭಿನವ ಕೊಲ್ಲಾಪುರ ಮಹಾಲಕ್ಷ್ಮಿ ದೇವರ ಬಗ್ಗೆ ತಿಳಿಸುತ್ತದೆ. ಈ ಶಾಸನದಲ್ಲಿ ಶ್ರೀ ಮನ್‌ಮಹಾರಾಜಾದಿರಾಜ ರಾಜಪರಮೇಶ್ವರ, ಶ್ರೀ ವೀರಪ್ರತಾಪ ವೀರಸದಾಶಿವದೇವಮಹಾರಾಯರು ಹಸ್ತಿನಾವತಿ ನೆಲೆವೀಡಿನಲಿ ರಾಜ್ಯವಾಳುತ್ತಿರಲು ಶ್ರೀ ಮನ್‌ಮಹಾರಾಜಾದಿರಾಜ ರಾಜಕುಲಾಧಿದೇವತೆಯ ಅಭಿನವಕೊ... ಮುಂದಿನ ಸಾಲು ಹಾಳಾಗಿದೆ. ಅಂದರೆ ಮಹಾರಾಷ್ಟ್ರದ ಕೊಲ್ಲಾಪುರದ ಅಧಿದೇವತೆ ಮಹಾಲಕ್ಷ್ಮಿ ದೇವತೆಗೆ ಈ ಚಿಕ್ಕಗದ್ದವಳ್ಳಿ ಅಧಿದೇವತೆಗೆ ಹೋಲಿಸಿರಬಹುದು. ಗದ್ದುವಳ್ಳಿಯಲ್ಲಿ ಹೊಯ್ಸಳರಕಾಲದಲ್ಲೆ ರಚಿತವಾದ ಪಂಚಕೂಟ ಮಾದರಿಯ ದೇವಾಲಯವಿದೆ. ವಿಜಯನಗರ ಕಾಲದಲ್ಲಿ ಇಲ್ಲಿಯ ಅಧಿದೇವತೆ ಪೂಜೆ ಪ್ರಾಮುಖ್ಯತೆ ಪಡೆದಿರಬಹುದು.

ಕ್ರಿ.ಶ. 1561ರ ಸದಾಶಿವರಾಯನ ಶಾಸನದಲ್ಲಿ (ಹಾಸನ-9) ಅಚ್ಯುತರಾಯನ ನಂತರ ಆತನ ಮಗ ವೆಂಕಟಾದ್ರಿಯು ಸ್ವಲ್ಪಕಾಲಮಾತ್ರ ರಾಜ್ಯವಾಳಿ ಮೃತನಾದನೆಂದು, ತದನಂತರ ರಂಗ ಹಾಗೂ ತಿಮ್ಮಾಂಬ ಇವರ ಪುತ್ರನಾದ ಸದಾಶಿವ ಮಹಾರಾಯನನ್ನು ಆತನ ಸೋದರಿಯ ಪತಿಯಾದ ರಾಮರಾಜನು ಸಿಂಹಾಸನಕ್ಕೇರಿಸಿ ಪಟ್ಟಾಭಿಷಕ್ತನನ್ನಾಗಿ ಮಾಡಿದ ವಿಷಯವನ್ನು ತಿಳಿಸುತ್ತದೆ. ಇಲ್ಲಿ ಉಲ್ಲೇಖಿಗೊಂಡ ಆತನ ಸೋದರಿ ಕೃಷ್ಣದೇವರಾಯನ ಮಗಳಾದ ತಿರುಮಲಾಂಬ ಎಂಬುದು ಸ್ಪಷ್ಟ. ಕೃಷ್ಣದೇವರಾಯನು ತನ್ನ ಪಟ್ಟದ ರಾಣಿ ತಿರುಮಲಾದೇವಿಯ ಮಗಳಾದ ತಿರುಮಲಾಂಬಳನ್ನು ತನ್ನ ಅಳಿಯ ರಾಮರಾಯನಿಗೆ ಕೊಟ್ಟು ವಿವಾಹಮಾಡಿದ್ದನು. ಈ ಶಾಸನದಲ್ಲಿ ರಾಮರಾಜನ ವಂಶಾವಳಿಯನ್ನು ಕೊಟ್ಟಿದೆ (ಕೃಷ್ಣದೇವರಾಯನ ಅಳಿಯ ರಾಮರಾಯನ ವಂಶಾವಳಿಯೇ ಎಂಬುದು ಸ್ಪಷ್ಟವಾಗಬೇಕಾಗಿದೆ). ಚಂದ್ರವಂಶದ ನಂದ, ಅದೇ ವಂಶದಲ್ಲಿ ಜನಿಸಿದ ಚಲಿಕ ಮತ್ತು ಬಿಜ್ಜೇಳೇಂದ್ರ ಇವರೆಲ್ಲರನ್ನು ಪ್ರಸ್ತುತ ಶಾಸನ ಉಲ್ಲೇಖಿಸಿದೆ. ಆದರೆ ಇವೆಲ್ಲ ಹೆಸರುಗಳು ಕಾಲ್ಪನಿಕವೇ ಹೊರತು ಸತ್ಯವಾದುದಲ್ಲ, ಅಲ್ಲದೆ ಮುಂದೆ ಇದರಲ್ಲಿ ಸೋಮಿದೇವ ಆತನ ಮೊಮ್ಮಗ ಪಿನ್ನಮ, ಆತನ ಮಗ ಬುಕ್ಕನ ಉಲ್ಲೇಖವಿದೆ. ಬುಕ್ಕನ ಪತ್ನಿಯ ಹೆಸರು ಬಳ್ಳಾಂಬಿಕ ಎಂದು ತಿಳಿಸಿದೆ. ಆ ದಂಪತಿಗಳಿಗೆ ರಾಮರಾಜನು ಜನಿಸಿದ. ಈತನ ಪತ್ನಿ ಲಕ್ಕಾಂಬಿಕ ಶ್ರೀ ರಂಗಾರಾಜ ಇವರ ಮಗ ತಿರುಮಲಾಂಬೆಯನ್ನು ಮದುವೆಯಾದ ಶ್ರೀ ರಂಗರಾಜನ ಮಗನೇ ರಾಮರಾಜ (ರಾಮರಾಯನಿರಬಹುದು). ಶಾಸನದಲ್ಲಿ ದಾಖಲಿಸಿರುವ ದಾನವನ್ನು ವಾಸ್ತವವಾಗಿ ನೀಡಿದಾತ ಅಡಪ್ಪ ಬಯ್ಯಪ್ಪನ ಮಗ ಕೃಷ್ಣಪ್ಪನಾಯಕನೆಂದು ಕಾಣುತ್ತದೆ. ಕೃಷ್ಣಪ್ಪನಾಯಕ ಬೇಲೂರ ಪ್ರಭುವಾಗಿದ್ದನೆಂದು ಗುರುತಿಸಬೇಕಾಗುತ್ತದೆ.

ಸದಾಶಿವರಾಯನ ಕಾಲಕ್ಕೆ ಸೇರಿದ ಕ್ರಿ.ಶ. 1562ರ (ಹಾಸನ-79) ಕುದುರೆಗುಂಡಿ ಶಾಸನ ವಿಜಯನಗರದ ಅರಸ ಸದಾಶಿವರಾಯನ ಕಾರ್ಯಕರ್ತನಾದ ರಾಮಚಯ್ಯಾ ಎಂದರೆ ಹಾಸನ ಸೀಮೆಯ ಅಮರ ಮಾಗಣಿಯನ್ನು ಕೃಷ್ಣಪ್ಪನಾಯಕನಿಗೆ ಪಾಲಿಸಿದನೆಂಬುದಾಗಿ ಈ ಶಾಸನ ಸಾರುತ್ತದೆ. ಕಾಚಪ್ಪನಾಯಕನ ಮಗ ಬುಕ್ಕಪ್ಪನಾಯಕನಿಗೆ ನೀರ್ಗುಂದ ನಾಡಿಗೆ ಸೇರಿದ ಕುದುರೆಗುಂಡಿಯ ಆಡಳಿತವನ್ನು ನೋಡಿಕೊಳ್ಳುವಂತೆ ವಹಿಸಿದ ಬಗ್ಗೆ ತಿಳಿಸುತ್ತದೆ. ಇಲ್ಲಿಂದ ಅರಮನೆಗೆ ಕೊಡಬೇಕಾದ ಆನೆಯ ಸುಂಕ, ತಳವಾರಿಕೆ ಮುಂತಾದ ಕೆಲವು ತೆರಿಗೆಗಳಿಂದ ಬರುವ ವರಮಾನವನ್ನು ಇದರಲ್ಲಿ ಉಲ್ಲೇಖಿಸಿದೆ. ಈ ಸ್ಥಳಕ್ಕೆ ಕುದುರೆಗುಂಡಿ ಎಂಬ ಹೆಸರಿರುವುದರಿಂದ ವಿಜಯನಗರದ ಅರಮನೆಗೆ ತರಬೇಕಾದ ಆನೆ ತೆರಿಗೆ ಜೊತೆಗೆ ಕುದುರೆ ತೆರಿಗೆಯ ಆದಾಯದ ವರಮಾನವಾಗಿರಬಹುದು ಎಂಬುದು ಸ್ಪಷ್ಟವಾಗುತ್ತದೆ. ನೀರ್ಗುಂದ ನಾಡಿನಲ್ಲಿ ಕುದುರೆಗಳನ್ನು ಸಾಕುತ್ತಿದ್ದಿರಬಹುದು. ಅರಸೀಕೆರೆ ತಾಲ್ಲೂಕಿನ ದೇಶಾಣಿ (ದೇಶವಣಿ) ನಾಡಪ್ರಭುಗಳು ಆಳುತ್ತಿದ್ದಾಗ ಹೊಯ್ಸಳರ ಆಳ್ವಿಕೆಯ ಕಾಲದಲ್ಲಿ ದೇಶಾಣಿ ಶಾಸನದಲ್ಲಿ ಆನೆಯ ಯೋಗ ಕ್ಷೇಮ ನೋಡಿಕೊಳ್ಳಲು ಕೇರಳದಿಂದ ವೈದ್ಯರನ್ನು ಕರೆಸಿದ್ದರೆಂದು ಮಲೆಯಾಳಿ ವೈದ್ಯರ ಬಗ್ಗೆ ಉಲ್ಲೇಖವಿದೆ. ಈ ಬಗ್ಗೆ ಹಾಸನ ತಾಲ್ಲೂಕಿನ ವಿಜಯನಗರ ಶಾಸನಗಳ ಮರು ಅವಲೋಕನದ ಅವಶ್ಯಕತೆಯಿದೆ. ನೀರ್ಗುಂದ ನಾಡಿನ ಕುದುರೆಗುಂಡಿ ಹಾಗೂ ಕುದುರೆಗುಂಡಿಯಿಂದ ಬರುವ ವರಮಾನವನ್ನು ಆ ಗ್ರಾಮದ ವೀರಭದ್ರ ದೇವಾಲಯದ ನೈವೇದ್ಯಾದಿ ಸೇವೆಗೆ ನೀಡಲಾಯಿತೆಂದು ಈ ಶಾಸನ ತಿಳಿಸುತ್ತದೆ. ವಿಜಯನಗರ ಕಾಲಕ್ಕೆ ಕುದುರೆಗುಂಡಿ ಒಂದು ಪ್ರಮುಖ ಆಡಳಿತ ಕೇಂದ್ರವಾಗಿತ್ತೆಂದು ಹೇಳಬಹುದು. ಏಕೆಂದರೆ ಈಗಲೂ ಹಾಸನ ತಾಲ್ಲೂಕಿನ ಕುದುರೆಗುಂಡಿ ಕೆರೆ ಒಂದು ದೊಡ್ಡ ಕೆರೆಯಾಗಿದ್ದು ಆ ಕಾಲದಲ್ಲಿ ಆನೆ, ಕುದುರೆಗಳನ್ನು ಸಾಕುವ ಕೇಂದ್ರವಾಗಿತ್ತೆಂದು ವರಮಾನ ಬರುತ್ತಿತ್ತೆಂದು ಸ್ಪಷ್ಟವಾಗುತ್ತದೆ.

ಸದಾಶಿವರಾಯನ ಕ್ರಿ.ಶ. 1562ರ ಕಾಲಕ್ಕೆ ಸೇರುವ (ಹಾಸನ-122) ಪುರದ ಶಾಸನವು ಬೇಲೂರ ಪ್ರಭುವಿನ ಸಾಮಂತರಾದ ಸ್ಥಳಿಯ ಕುಟುಂಬವನ್ನು ಉಲ್ಲೇಖಿಸಿದೆ. ಆದರೆ ಇದರಲ್ಲಿ ಬಸಪ್ಪನಾಯಕ ಹಾಗೂ ಆತನ ಇಬ್ಬರು ಮಕ್ಕಳು ತಿಮ್ಮಪ್ಪನಾಯಕ ಹಾಗೂ ವಿರುಪಾಕ್ಷನಾಯಕರು ಉಲ್ಲೇಖಿತರಾಗಿದ್ದಾರೆ. ಬೇಲೂರು ಪ್ರಭುವು ವೃತ್ತಿಗೆಯಾಗಿ ನೀಡಿದ್ದ ಹಾಸನ ಸೀಮೆಗೆ ಸೇರಿದ ಸಿಡಿಮಿಡಿ ಗ್ರಾಮದ ಆಡಳಿತವನ್ನು ನೋಡಿಕೊಳ್ಳುತ್ತಿದ್ದರು.

ಸದಾಶಿವರಾಯನ ಕ್ರಿ.ಶ. 1563ರ ಕಾಲಕ್ಕೆ ಸೇರಿದ್ದ (ಹಾಸನ-2) ಈ ಶಾಸನ ಹಾಸನದ ವಿರುಪಾಕ್ಷ ದೇವಸ್ಥಾನದ ದಕ್ಷಿಣ ಬಾಗಿಲಿನ ಪಶ್ಚಿಮಕ್ಕೆ ನೆಟ್ಟಿರುವ ಕಲ್ಲಿನ ಮೇಲಿದೆ. ಈ ಶಾಸನದಲ್ಲಿ ಅಚ್ಯುತರಾಯನ ಕುಮಾರ ಸದಾಶಿವಮಹಾರಾಯರು ಹಸ್ತಿನಾವತಿ ವಿದ್ಯಾನಗರಿಯಲ್ಲಿ ಸುಖಸಂತೋಷದಿಂದ ಆಳುತ್ತಿದ್ದಾಗ ರಾಮರಾಜಯ್ಯನವರಿಗೆ ಪಾಲಿಸಿದಂತ ಹಾಸನ ಸೀಮೆಯೊಳಗೊಣ ಸಟ್ಟಿಹಳ್ಳಿಯ ಗ್ರಾಮವನ್ನು ಹಾಸನ ಶ್ರೀ ವಿರುಪಾಕ್ಷ ದೇವರಿಗೆ ಬಯ್ಯಪ್ಪನಾಯಕರ ಮಕ್ಕಳು ಕೃಷ್ಣಪ್ಪನಾಯ್ಯನವರಿಗೆ ಅನೇಕ ರಾಜ್ಯೋಧಯ ಪುಣ್ಯವಾಗಬೇಕೆದು ಕಂದಾಚಾರದ ಕಾಚಪ್ಪನಾಯಕರ ಮಕ್ಕಳು, ತಂಮಪ್ಪನಾಯಕರ ತಮ್ಮಂದಿರು ಬುಕ್ಕಣ್ಣನಾಯಕರು ಸಟ್ಟಿಹಳ್ಳಿಯನ್ನು ಉಂಬಳಿಯಾಗಿ ಬಿಟ್ಟರೆಂದು ತಿಳಿಸುತ್ತದೆ.

ಅಲ್ಲದೆ ವಿರುಪಾಕ್ಷರ ದೇವರ ರಥೋತ್ಸವಕ್ಕೆ ಮತ್ತು ವಿರುಪಾಕ್ಷದೇವರ ದೇವಸ್ಥಾನಕ್ಕೆ 6 ಗ್ರಾಮಗಳಾದ ಬೀರನಳ್ಳಿ, ಆಡುವಳ್ಳಿ, ರಾಜಘಟ್ಟ, ಮಂಡೆಗನಹಳ್ಳಿ, ಗುಡ್ಡೆನಹಳ್ಳಿ, ಯಲೆಗಣಗಿಲು, ಹಳದ ರಾಮೇಶ್ವರ ದೇವರ ಅಮೃತಪಡಿಗೆ ಸಲ್ಲುವ ಹುಳೇನಳ್ಳಿ ವಿಘ್ನೇಶ್ವರ ದೇವರರಿಗೆ ಸಲ್ಲುವ ಹೊಂನೆನಹಳ್ಳಿ ಹಾಸನದ ಕೆರೆಗಳ ಕೆಳಗಣ ಗದ್ದೆಬೆದಲು, ತೋಟತುಡಿಕೆ, ಪೂರ್ವದ ಗ್ರಾಮಗಳ ಜೋಡಿ ಬೇಡಿಗೆ, ಕಾಣಿಕೆ, ಬಿರಾಡಹಿಟ್ಟು, ಹುಗ್ಗಿ, ಬೀಜವರಿ ಇವೆಲ್ಲವನ್ನು ವಿರುಪಾಕ್ಷದೇವರಿಗೆ, ಹಳದ ರಾಮೇಶ್ವರಿಗೆ, ವಿಘ್ನೇಶ್ವರ ದೇವರಿಗೆ ಸರ್ವಮಾನ್ಯವಾಗಿ ಶಾಸನವನ್ನು ಪ್ರತಿಷ್ಟೆಮಾಡಿದರೆಂದು ತಿಳಿಸುತ್ತದೆ. ಈ ಶಾಸನವನ್ನು ರಚಿಸಿದವರು ನಂಜಪ್ಪವುಪಾಧ್ಯ, ಕೆತ್ತಿದವರು ಲಕ್ಕಣ್ಣಾಚಾರ್ಯರ ಮಗ ಕಲ್ಲಯ್ಯ ಎಂದು ತಿಳಿಸುತ್ತದೆ.

16ನೇ ಶತಮಾನಕ್ಕೆ ಸೇರಿದ (ಹಾಸನ-77) ಶ್ರೀರಂಗರಾಯನ ಕೆಲ್ಲವತ್ತಿ ಶಾಸನವು ಜನಾರ್ದನ ದೇವಾಲಯದ ಹತ್ತಿರ ಇತ್ತೆಂದು, ಈಗಾಗಲೆ ಬಿ.ಎಲ್. ರೈಸ್‌ರವರು (ಹಾಸನ-77) ದಾಖಲಿಸಿದ್ದಾರೆ. ವಾಸ್ತವವಾಗಿ ಈ ಶಾಸನ ಹಾಗೂ ಕೆಲ್ಲವತ್ತಿಯಲ್ಲಿದ್ದ ಜನಾರ್ದನ ದೇವಾಲಯ ಎರಡೂ ಇಲ್ಲ ಹಾಳಾಗಿ ಹೋಗಿವೆ. ಇದರ ಅವಶೇಷಗಳು ಕಣ್ಮರೆಯಾಗಿವೆ. ಈ ಶಾಸನದಲ್ಲಿ ಶ್ರೀ ಮಹಾರಾಜಾಧಿರಾಜ ರಾಜಪರಮೇಶ್ವರ ಶ್ರೀ ವೀರಪ್ರತಾಪ ಶ್ರೀರಂಗ ಮಹಾರಾಯರು ರಾಜ್ಯಂಗೆಯ್ಯುತ್ತಿರಲು ಬೇಲೂರ ಮುಖ್ಯಸ್ಥ ಬಯ್ಯಪ್ಪನಾಯಕನ ಮಗ ಕೃಷ್ಣಪ್ಪನಾಯಕರಿಗೆ ಅಮರ ಮಾಗಣಿಯಾಗಿ (ಅಧಿಪತಿಯಾಗಿ) ಪಾಲಿಸಿದ ಸಾಲಿಗ್ರಾಮ (ಸಾಲಗಾಮೆ) ಸೀಮೆಯೊಳಗಣ ಕೆಲ್ಲವತ್ತಿ ಗ್ರಾಮವನು ನಾಉದಂಡಿಗೆ ಉಂಬಳಿಯಾಗಿ ಕೊಟ್ಟ ಹಿರಿಯ ಊರು ಒಳಗಣ ಗದ್ದೆಬೆದಲು, ತೋಟತುಡಿಕೆ, ಅಚ್ಚುಕಟ್ಟು ... ಇತ್ಯಾದಿ ಇವುಗಳನ್ನು ದಾನಕೊಟ್ಟರೆಂದು ತಿಳಿಸುತ್ತದೆ. ಅರವೀಡು ಸಂತತಿಯ ಶ್ರೀರಂಗರಾಯನೆಂಬುದು ಸ್ಪಷ್ಟವಾಗುತ್ತದೆ. ಈ ಶಾಸನದ ನಿಖರವಾದ ಕಾಲವನ್ನು ಗುರುತಿಸಲಾಗಿಲ್ಲ.

ಹಾಸನ ತಾಲ್ಲೂಕಿನ ವಿಜಯನಗರದ ಶಾಸನಗಳಲ್ಲಿ ರಾಜಕೀಯ, ಪಟ್ಟಾಭಿಷೇಕವಾದಾಗ ದಾನನೀಡಿದ ಶಾಸನಗಳು, ದೇವಾಲಯಗಳಿಗೆ ದಾನದತ್ತಿಗಳನ್ನು ನೀಡಿರುವುದು, ಆಡಳಿತಾತ್ಮಕವಾಗಿ ಹಾಸನ ತಾಲ್ಲೂಕಿಗೆ ಸೇರಿದ ಕುದುರೆಗುಂಡಿ ಗ್ರಾಮ ವಿಜಯನಗರ ಕಾಲದಲ್ಲಿ ಆಡಳಿತ ಕೇಂದ್ರವಾಗಿದ್ದು ಆನೆಯ ತೆರಿಗೆ, ತಳವಾರಿಕೆ ಇತ್ಯಾದಿ ವಿವಿಧ ತೆರಿಗೆಗಳಿಂದ ಬಂದ ವರಮಾನವನ್ನು ಆ ಊರಿನ ಪುಣ್ಯಕಾರ್ಯಕ್ಕೆ ವಿಜಯನಗರದ ಅರಸರು ಬಳಸುವಂತೆ ಆದೇಶ ನೀಡುತ್ತಿದ್ದುದು ಅವರಲ್ಲಿದ್ದ ಧಾರ್ಮಿಕ ಸಹಿಷ್ಣುತೆಯನ್ನು ತಿಳಿಸುತ್ತದೆ. ಬಿಟ್ಟುಗೊಂಡನಹಳ್ಳಿ ಶಾಸನ (ಹಾಸನ-219) ಕೃಷ್ಣದೇವರಾಯ ಒರಿಸ್ಸಾದ ಗಜಪತಿ ಅರಸನ ವಿರುದ್ಧ ದಂಡಯಾತ್ರೆ ಮಾಡಿದ ನಂತರ ಹೊರಡಿಸಿದ ಶಾಸನವೆಂದು ತಿಳಿಸುತ್ತದೆ. ರಾಜಕೀಯವಾಗಿ ಕೃಷ್ಣದೇವರಾಯ ಒರಿಸ್ಸಾ ದಿಗ್ವಿಜಯ ಯಾತ್ರೆ ಮುಗಿಸಿದ್ದು ಚಾರಿತ್ರಿಕ ಅಂಶವಾಗಿದೆಯೆಂದು ಈ ಶಾಸನ ಸ್ಪಷ್ಟೀಕರಿಸುತ್ತದೆ.

ಕಿತ್ತಾನೆ ಗ್ರಾಮಕ್ಕೆ ತನ್ನ ಪಟ್ಟದರಸಿಯ ಹೆಸರಿನಲ್ಲಿ ತಿರುಮಲಾಪುರ ಎಂದು ಹೆಸರಿಟ್ಟಿದ್ದು ಈ ಶಾಸನದಲ್ಲಿ ಕಂಡುಬರುವ ವಿಶೇಷ ಅಂಶವಾಗಿದೆ (ಹಾಸನ-8). ಸಂಗಮ ದೊರೆ ಒಂದನೇ ದೇವರಾಯ ಹೇಮಕೂಟದ ವಿರುಪಾಕ್ಷನ ಸನ್ನಿಧಿಯಲ್ಲಿ ಪಟ್ಟಾಭಿಷಕ್ತನಾದಾಗ ಹಾಸನ ತಾಲ್ಲೂಕಿಗೆ ಸೇರಿದ ಹಂದಿನಕೆರೆ ಗ್ರಾಮಕ್ಕೆ ತನ್ನ ಹೆಸರಿನ ದೇವರಾಯಪುರ ಎಂಬ ಹೆಸರನ್ನಿಡಿಸಿ 32 ವೃತ್ತಿಗಳನ್ನಾಗಿ ವಿಭಜಿಸಿ ದಾನನೀಡಿದ ವಿಷಯ ಅಲ್ಲದೆ ಬ್ರಾಹ್ಮಣ ಗೋತ್ರಗಳನ್ನು ಉಲ್ಲೇಖಿಸಿರುವುದು

ಮುಂದೆ ಸಂಶೋಧಕರಿಗೆ ವಿಜಯನಗರದ ಅರಸರ ಧಾರ್ಮಿಕ ಸಂಪ್ರದಾಯಗಳ ಬಗ್ಗೆ ಇತಿಹಾಸ ರಚಿಸಲು ಈ ಶಾಸನ ಅತ್ಯಂತ ಉಪಯುಕ್ತವಾಗಿದೆ. ಹೀಗೆ ಅಧ್ಯಯನ ದೃಷ್ಟಿಯಿಂದ ಹಾಸನ ತಾಲ್ಲೂಕಿನ ವಿಜಯನಗರದ ಶಾಸನಗಳು ಪ್ರಾಮುಖ್ಯತೆ ಪಡೆದಿವೆ.

ಆಕರ ಗ್ರಂಥಗಳು

1. *ಹಾಸನ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ*, ಪು. 111.
2. *ಕರ್ನಾಟಕ ರಾಜ್ಯ ಗೆಜೆಟಿಯರ್* 1986, ಭಾಗ–3, ಪು. 635.
3. *ಜಾನಪದ ಜಗತ್ತು ಸ್ಥಳನಾಮ ಅಧ್ಯಯನ* ವಿಶೇಷ ಸಂಚಿಕೆ, ಪು. 58
4. *ಹಾಸನ ಜಿಲ್ಲೆಯ ಐತಿಹ್ಯಗಳು*, ಪು. 571.
5. *ಎಪಿಗ್ರಫಿಯ ಕರ್ನಾಟಿಕ*, ಸಂಪುಟ–8.
6. ಅದೇ, ಅರಸೀಕೆರೆ ಮತ್ತು ಚನ್ನರಾಯ ಪಟ್ಟಣ ತಾಲ್ಲೂಕು ಸಂಪುಟ.
7. ಡಾ॥ ಡಿ.ಎಂ. ನಾಗರಾಜು, *ಒಂದನೇ ದೇವರಾಯನ ಧಾರ್ಮಿಕ ಶಾಸನಗಳು*, ವಿಜಯನಗರ ಅಧ್ಯಯನ, ಸಂ. 15, 19–24.

ಕರ್ನಾಟಕ ಸಾಮ್ರಾಜ್ಯದ ಬಗೆಗಿನ ಅಧ್ಯಯನ ಪ್ರಾರಂಭವಾಗಿ ಶತಮಾನವೇ ಕಳೆದಿದ್ದರೂ ಸಾಮ್ರಾಜ್ಯದ ಬಗೆಗಿನ ಅಧ್ಯಯನ, ಸಂಶೋಧನೆ, ಹೊಸ ಆವಿಷ್ಕಾರಗಳಿಗೆ ಆಸ್ಪದವಿಲ್ಲವೆಂದು ಹೇಳಲು ಸಾಧ್ಯವಿಲ್ಲದರ ಮಟ್ಟಿಗೆ ಇಂದಿಗೂ ಹಲವಾರು ನೂತನ ಶಾಸನಗಳು, ದೇವಾಲಯಗಳು, ಸ್ಮಾರಕಗಳು ಮತ್ತು ನಾಣ್ಯಗಳು ವರದಿಯಾಗುತ್ತಲೇ ಇವೆ. ಇವುಗಳ ಅಧ್ಯಯನ ಮತ್ತು ವಿಮರ್ಷೆ ಸಹ ಮುಂದುವರಿಯುತ್ತಿದೆ. ಇದು ಸಾಮ್ರಾಜ್ಯವೊಂದರ ವ್ಯಾಪ್ತಿ ಮತ್ತು ಅದು ಸಾಧಿಸಿದ್ದರ ಮಹತ್ವವನ್ನು ಅನಾವರಣಮಾಡುತ್ತದೆ. ಇದೇ ಹಿನ್ನೆಲೆಯಲ್ಲಿ ಪ್ರಸ್ತುತ ಸಂಪುಟದಲ್ಲಿ ಅಡಕವಾಗಿರುವ ಲೇಖನಗಳು ಹೊಸ ಶಾಸನಗಳು, ಪರಿಷ್ಕೃತ ಹೊಸ ಶಾಸನ ಪಾಠಗಳು, ಶಾಸನಾಧ್ಯಯನಗಳು, ಸಾಮ್ರಾಜ್ಯದ ಉದಯದ ಜಿಜ್ಞಾಸೆ, ದೇವಾಲಯಗಳು ಮತ್ತು ಅವುಗಳ ವಿಮರ್ಶೆ, ಸಾಮಾಜಿಕ ಮತ್ತು ಧಾರ್ಮಿಕ ವಿಷಯಗಳನ್ನು ಆಧರಿಸಿದ ಲೇಖನಗಳನ್ನೊಳಗೊಂಡು ಅತ್ಯುತ್ತಮ ಸಂಪುಟವಾಗಿ ರೂಪುಗೊಂಡಿದೆ. ಈ ಎಲ್ಲ ಲೇಖನಗಳು ಅತ್ಯಂತ ಮಹತ್ವದ ವಿಷಯಗಳನ್ನು ಒಳಗೊಂಡು ವಿಚಾರಪ್ರದವಾದ ಸಂಪುಟವಾಗಿ ಮೂಡಿಬರುಲು ಸಹಕಾರಿಯಾಗಿದೆ. ಹಾಗಾಗಿ ವಿಜಯನಗರ ಅಧ್ಯಯನ ಮಾಲಿಕೆಯ ಪ್ರಸ್ತುತ ಸಂಪುಟವು ಈ ಮೇಲೆ ಉಲ್ಲೇಖಿಸಿದ ವಿಷಯಗಳನ್ನು ಆಧರಿಸಿದ ಮೂವತ್ತಕ್ಕೂ ಹೆಚ್ಚು ಲೇಖನಗಳನ್ನು ಅಡಕಮಾಡಿಕೊಂಡು ಸಂಗ್ರಹಯೋಗ್ಯವಾಗಿ ಮೂಡಿಬಂದಿದೆ.



ಚಿತ್ರ : ಮಾತಂಗ ಪರ್ವತ

ಪ್ರಾಚ್ಯವಸ್ತು, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ
ಮೈಸೂರು